ಜಿಲ್ಲೆಯಲ್ಲಿ ಏನು ಧರಣಿಯನ್ನು ನಡೆಸುತ್ತಿದ್ದಾರೆ, ಉಪವಾಸ ಸತ್ಯಾಗ್ರಹ ನಡೆಸಿದ್ದಾರೆ, ಅವರಿಗೂ ಸಹ ಈ ಸರ್ಕಾರ ಮನವಿ ಮಾಡಿಕೊಳ್ಳುತ್ತದೆ. ದಯವಿಟ್ಟು ಸಹಕರಿಸಿ. ದಯವಿಟ್ಟು ನಮ್ಮೊಡನೆ ಸಹಕರಿಸಿ. ಆ ಕೊಲೆಗಾರರು ಯಾರೇ ಇರಲಿ. ಅವರನ್ನು ಏಕೆಂದರೆ ಇಲ್ಲಿ ನೀವು ಧರಣಿ ಮಾಡುತ್ತಿದ್ದರೆ, ಸರಿಯಾಗುವುದಿಲ್ಲ. ಯಾವುದೇ ಅಧಿಕಾರಿಗಳು ಬೇಕು ಅಂತಹವರನ್ನು ಆರಿಸಿ ಇವತ್ತು ಗೃಹಮಂತ್ರಿಗಳು ಅಲ್ಲಿಗೆ ಕಳುಹಿಸುತ್ತಿದ್ದಾರೆ. ದಯವಿಟ್ಟು ಸಹಕರಿಸಿ ಅಲ್ಲಿ ಯಾವುದೇ ರೀತಿಯ ಸತ್ಯಾಗ್ರಹವನ್ನು ನೀವು ಮಾಡುವುದನ್ನು ನಿಲ್ಲಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ವಿತ್ತೀಯ ಕಾರ್ಯಕಲಾಪ

(1996-97ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಚರ್ಚೆ)

+ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು) : ಸನ್ಮಾನ್ಯ ಉಪಾಧ್ಯಕ್ಷರೇ, 1996-97ರ ಆಯವ್ಯಯದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಕೆಲವು ಅನಿಸಿಕೆಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಕ್ರಮಸಂಖ್ಯೆ 58ರ ಪ್ರಕಾರ ವಾಣಿಜ್ಯ ಹಾಗೂ ಕೈಗಾರಿಕೆ ನೀತಿ ಬಗ್ಗೆ. ಸನ್ಮಾನ್ಯ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದರು. ಒಂದು ಕೈಗಾರಿಕಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಒಂದು ಮಾತನ್ನು ಹೇಳಿದ್ದರು. ದಕ್ಷಿಣ ಕನ್ನಡ ಜಿಲ್ಲೆಗೆ ಭಾಗ್ಯಲಕ್ಷ್ಮಿ ಬರುತ್ತಿದ್ದಾಳೆ, ಅವಳನ್ನು ಸ್ವಾಗತಿಸಿ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಆ ಸಂದರ್ಭದಲ್ಲಿ ನನಗೆ ಅನ್ನಿಸಿದ್ದನ್ನು ಅಲ್ಲಿ ಅವಕಾಶ ಇಲ್ಲದ್ದರಿಂದ ಅದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಬರೀ ಈ ಭಾಗ್ಯಲಕ್ಷ್ಮಿ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದರೆ ಅಥವಾ ಕರ್ನಾಟಕ ರಾಜ್ಯದ ಜನತೆಗಾದರೂ ಬಂದಿದ್ದರೆ ತುಂಬಾ ಸಂತೋಷ ಇತ್ತು. ಆದರೆ ಇವತ್ತು ಕೇವಲ ಕೆಲವು ಕೈಗಾರಿಕೋದ್ಯಮಿಗಳಿಗೆ ಮತ್ತು ಅವರನ್ನು ಬೆಂಬಲಿಸುವಂಥ ಕೆಲವರಿಗೆ ಮಾತ್ರ ಭಾಗ್ಯಲಕ್ಷ್ಮಿ ಸೇರುವುದಿದ್ದರೆ ಅದಕ್ಕೆ ನಮ್ಮೆಲ್ಲರ ವಿರೋಧ ಇದೆ, ಆಕ್ಷೇಪಣೆ ಇದೆ. ಈ ಬಗ್ಗೆ ನಿನ್ನೆ ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಕೈಗಾರಿಕಾ ನೀತಿಯನ್ನು ಇನ್ನೂ ನಾವು ಮಾಡಿಲ್ಲ, ಇದರ ಬಗ್ಗೆ ಯೋಚಿಸುತ್ತಿದ್ದೇವೆ ಎಂದು. ಈ ಸಂದರ್ಭದಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ತಿಳಿಸಲು ಇಚ್ಛಿಸುತ್ತೇನೆ. ಇತ್ತೀಚೆಗೆ ಡಿಸೆಂಬರ್‌ನಲ್ಲಿ, ಮಂಗಳೂರಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರೀ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ದಾಖಲಾಗುವಂಥ ರೀತಿಯಲ್ಲಿ ಒಂದು ಹೋರಾಟ ಮೀನುಗಾರಿಕೆ ಬಂದರಿನಲ್ಲಿ ನಡೆಯಿತು. ಅವರು ಅಲ್ಲಿ ತಮ್ಮ ಅಳಿವು, ಉಳಿವಿಗೋಸ್ಕರ ಈ ಹೋರಾಟವನ್ನು ಮಾಡಿದ್ದರು. ಸುಮಾರು ಮೂರು ಲಕ್ಷ ಮೀನುಗಾರರು ನಿರ್ಗತಿಕರಾಗುತ್ತಿದ್ದಾರೆ, ನಿರುದ್ಯೋಗಿಗಳಾಗುತ್ತಾರೆ. ಈ ಹಿನ್ನೆಲೆಯಲ್ಲಿ ಅವರು ಹೋರಾಟವನ್ನು ಮಾಡಿದ್ದರು. ಈ ಸಂದರ್ಭದಲ್ಲಿ ಮುಂದೆ ಏನಾಯ್ತು ಎಂಬುದು ತಮಗೆಲ್ಲಾ ಗೊತ್ತಿದೆ. ಅಂತಹ ಸಂದರ್ಭದಲ್ಲಿ ಕೂಡ ಕೆಲವು ಒಪ್ಪಂದಗಳಿಗೆ ಅಲ್ಲಿ ಸರ್ಕಾರದ ಕಡೆಯಿಂದ ಮೀನುಗಾರ ಬಂಧುಗಳಿಗೂ, ಜನಪ್ರತಿನಿಧಿಗಳಿಂದಲೂ ಆಗಿದ್ದ ಇತ್ತು. ಇಲ್ಲಿ ನಿರಕ್ಷರಕುಕ್ಷಿಗಳು ಯಾರಿದ್ದಾರೆ, ಅವರಿಗೆ ಉದ್ಯೋಗಾವಕಾಶವನ್ನು ಮಾಡ

...ಪ್ರಾಜೆಕ್ಟ್ ಮಾಡುವಾಗ, ಸ್ಥಳೀಯರಿಗೆ ಶೇಕಡಾ ... ಉದ್ಯೋಗವನ್ನು ಕೊಡಬೇಕು ಎಂದು ಆಗ ಕೂಡ ಆ ಸಂದರ್ಭದಲ್ಲಿ ಇತ್ತು. ಅದರ ಜೊತೆ ಇವತ್ತಿಗೂ ಕೂಡ ಅನುಷ್ಠಾನಕ್ಕೆ ಬಂದಿದ್ದಾರೆ ಅದೇ ಸಮಯದಲ್ಲಿ ಪರಿಗಣಿಸುತ್ತಿದ್ದೇವೆ. ಅದರ ಜೊತೆಯಲ್ಲಿ ಆ ಸಂದರ್ಭದಲ್ಲಿ ಕಬ್ಬು ಬೆಳೆಗಾರರು ಬಂದರು. ಮಾನ್ಯರು ಕೈಗಾರಿಕೆ ಸಚಿವರು ಬಂದಾಗ ಸರ್ಕಾರಕ್ಕೆ ಕಾನೂನು ಪ್ರಕಾರ ಮಾಡುವುದು ಬಾಕಿ ಇದೆ, ಆ ಬಗ್ಗೆ 18 ಕೋಟಿ 16 ಲಕ್ಷ ರೂಪಾಯಿ ಇತ್ತು, ಅದರಲ್ಲಿ 3 ಕೋಟಿ ಮಾತ್ರ ಬಂದಿದೆ. ಬಾಕಿ ಹಣ 15 ಕೋಟಿ 16 ಲಕ್ಷ ತಕ್ಷಣ ರೈತರಿಗೆ ಪಾವತಿ ಮಾಡುವುದು ಆಗಬೇಕು.ನಂತರ ಮಾನ್ಯರು ಕೈಗಾರಿಕೋದ್ಯಮಿಗಳು ಅಲ್ಲಿಗೆ ಬಂದಾಗ ಅವರ ಗ್ರೂಪ್ ಫ್ಯಾಕ್ಟರಿಯಲ್ಲಿ ಕನಿಷ್ಟ 2 ಪರ್ಸೆಂಟನ್ನು ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೆ ಕೊಡಬೇಕು. ಈ ಬಗ್ಗೆ ಕೂಡ ಆಗ್ರಹ ಮಾಡಲಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು, ಕೈಗಾರಿಕಾ ಮಂತ್ರಿಗಳೂ ಕೂಡ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು. ಗವರ್ನಮೆಂಟ್ ಆರ್ಡರ್ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಇವತ್ತು ಕೂಡ ಅದು ಆಗಿಲ್ಲ. ಬಹುಶಃ ಈ ರೀತಿ ಸನ್ನಿವೇಶಗಳಿಂದ ಪ್ರೊಡಕ್ಷನ್ ಸ್ಟಾರ್ಟ್ ಇರಬಹುದು, ಅಥವಾ ಬೇರೆ ಬೇರೆ ಕಾರಣದಿಂದ ಈ ತರಹ 2 ಪರ್ಸೆಂಟನ್ನು ಅವರ ಗ್ರೂಪ್ ಫ್ಯಾಕ್ಟರಿಯಿಂದ ಸಂಗ್ರಹ ಮಾಡುವುದಕ್ಕೆ ಸಾಧ್ಯವಾದರೆ, ಅಲ್ಲಿರುವಂಥ ಇನ್ಫ್ರಾಸ್ಟ್ರಕ್ಚರನ್ನು ಬಲಪಡಿಸ ಮಾಡುವುದಕ್ಕೆ ಸಾಧ್ಯವಾಗಬಹುದು. ವಿಶೇಷವಾಗಿ ಅಲ್ಲಿ ರಸ್ತೆ ಮತ್ತು ಕುಡಿಯುವ ನೀರಿನ ಯೋಜನೆ. ಸ್ಯಾನಿಟೇಷನ್‌ಗೆ ಸಂಬಂಧಪಟ್ಟಂತೆ. ಡ್ರೈನೇಜ್ ವ್ಯವಸ್ಥೆ ಮಾಡಲು ಅಥವಾ ಇನ್ನೂ ಇನ್ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ಇದರಿಂದ ಸಾಧ್ಯವಿದೆ. ಅದರ ಕೈಗಾರಿಕಾ ನೀತಿಯನ್ನು ಪಾಲಿಸುತ್ತಿರುವಾಗ ಉದ್ಯೋಗ ಕೊಡುವುದಕ್ಕೆ ಪ್ರಥಮ ಆದ್ಯತೆಯನ್ನು ಕೊಡಬೇಕು, ಇದಕ್ಕೆ ಅದ್ಯತೆ ಕೊಟ್ಟು ಮಾಡಬೇಕೆಂದು ನಾನು ಆಗ್ರಹ ಮಾಡುತ್ತೇನೆ. ಈ ಸಂದರ್ಭದಲ್ಲಿ ಕ್ರಮಸಂಖ್ಯೆ 58(5)ರಲ್ಲಿ ಉಲ್ಲೇಖಿಸಿರುವಂತೆ ಸುಮಾರು 23 ಸಾವಿರ ಕೋಟಿ ಬಂಡವಾಳ ಹಾಕಿ 34 ಸಾವಿರ ರೂಪಾಯಿ ಬಂಡವಾಳ ಹೂಡಿ ನೂರು ಜನರಿಗೆ ಕೆಲಸ ಸಿಗುತ್ತಿದೆ. ಸಣ್ಣ ಕೈಗಾರಿಕೆಯಲ್ಲಿ ಅದರ ಒಂದು ಕೋಟಿ ರೂಪಾಯಿ ಬಂಡವಾಳ ಹೂಡಿ ಸುಮಾರು ಸಣ್ಣ ಕೈಗಾರಿಕೆಯಲ್ಲಿ ಅದರ ಒಂದು ಕೋಟಿ ರೂಪಾಯಿ ಬಂಡವಾಳ ಹೂಡಿ ಸುಮಾರು 150 ಜನರಿಗೆ ಉದ್ಯೋಗಾವಕಾಶ ಸಿಗುತ್ತದೆ. ಇಷ್ಟು ಮಾತ್ರವಲ್ಲ, ಒಂದು ಎಕರೆ ಜಾಗದಲ್ಲಿ ಸುಮಾರು 100-150 ಜನರಿಗೆ ಉದ್ಯೋಗ ಸಿಗುತ್ತದೆ. ಈ ಎಂ.ಆರ್.ಪಿ.ಎಲ್.ನ ಒಂದು ಉದಾಹರಣೆ ಹೇಳುವುದಾದರೆ, 1800 ಎಕರೆ ಜಾಗವನ್ನು ಅವರು ಆವರಿಸಿಕೊಂಡಿದ್ದಾರೆ. ಇಷ್ಟು ಜಾಗದಲ್ಲಿ ಉದ್ಯೋಗಾವಕಾಶ ಕೊಟ್ಟಿದ್ದು 600 ಜನರಿಗೆ. ಅಂದರೆ ಮೂರು ಎಕರೆ ಜಾಗದಲ್ಲಿ ಒಬ್ಬರಿಗೆ ಉದ್ಯೋಗಾವಕಾಶ ಕೊಟ್ಟಿದ್ದು 600 ಜನರಿಗೆ. ಅಂದರೆ ಮೂರು ಎಕರೆ ಜಾಗದಲ್ಲಿ ಒಬ್ಬರಿಗೆ ಉದ್ಯೋಗಾವಕಾಶ ಕೊಟ್ಟಹಾಗೆ ಆಯಿತು. 4 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿ ಸುಮಾರು 600 ಜನರಿಗೆ ಮಾತ್ರ ಉದ್ಯೋಗ ಕೊಡಲಾಗಿದೆ ಎಂದರೆ ಇದನ್ನು ಕೂಡ ನಾವು ಯೋಚನೆ ಮಾಡಬಹುದು. 7 ಕೋಟಿ ರೂ.ಗಳಿಗೆ ಒಬ್ಬರಿಗೆ ಉದ್ಯೋಗ ಕೊಟ್ಟಹಾಗೆ ಆಯಿತು. ಈ ನಿಟ್ಟಿನಲ್ಲಿ ತೆಗೆದುಕೊಳ್ಳುವುದಾದರೆ, ಬಹುಶಃ ಕರ್ನಾಟಕದಲ್ಲಿ 25

ಲಕ್ಷಕ್ಕಿಂತ ಹೆಚ್ಚು ವಿದ್ಯಾವಂತ, ಅವಿದ್ಯಾವಂತ ನಿರುದ್ಯೋಗಿಗಳು ಇರಬಹುದು. ಈ ದಿಕ್ಕಿನಲ್ಲಿ ಅವರಿಗೆಲ್ಲಾ ಆಶ್ರಯ ಕೊಡುವ ನಿಟ್ಟಿನಲ್ಲಿ ಗುಡಿಕೈಗಾರಿಕೆ, ಸಣ್ಣಕೈಗಾರಿಕೆ ಇವಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟರೆ ಒಳ್ಳೆಯದು ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಉಲ್ಲೇಖ ಮಾಡುತ್ತೇನೆ.

ಅದೇ ರೀತಿ ಕುಡಿಯುವ ನೀರಿನ ಮೇಲೆ ಅವಲಂಬಿತವಾಗಿರತಕ್ಕ ಕೈಗಾರಿಕೆಗಳು ದಯವಿಟ್ಟು ಬೇಡ. ಅಥವಾ ಕುಡಿಯುವ ನೀರಿನ ವ್ಯವಸ್ಥೆಯನ್ನು, ಇನ್‌ಫ್ರಾಸ್ಟ್ರಕ್ಚರ್‌ನ್ನು ಬಿಲ್ಡಪ್ ಮಾಡಿಕೊಂಡು ಮಾಡಿ. ಉದಾಹರಣೆಗೆ ಹೇಳುವುದಿದ್ದರೆ, 18 ಎಂ.ಜಿ.ಡಿ.ಯಷ್ಟು ನೀರನ್ನು ಮಂಗಳೂರು ಮಹಾನಗರಪಾಲಿಕೆಯಲ್ಲಿ ತೆಗೆದುಕೊಳ್ಳುತ್ತಾ ಇದೆ. ಇಷ್ಟಿರುವಾಗ, ಇದರ ಹಿಂದೆ ಬರುವಂಥ 21 ಕೈಗಾರಿಕೆಗಳ, ಅವರಿಗೆ ಬೇಕಾದಂಥ ನೀರಿನ ಪ್ರಮಾಣವನ್ನು ಯೋಚನೆ ಮಾಡಿದರೆ, 100 ಎಂಜಿಡಿಯಷ್ಟು ನೀರು ಬೇಕಾಗಬಹುದು. ಈ ನಿಟ್ಟಿನಲ್ಲಿ ನಾನು ವಿನಂತಿ ಮಾಡುವಂಥಾದ್ದು, ನೀರಿನ ವ್ಯವಸ್ಥೆ ಮಾಡುವತನಕ, ಅವರಿಗೆ ಕೈಗಾರಿಕೆಗಳಿಗೆ ಅವಕಾಶವನ್ನು ಕೊಡಬೇಡಿ. ಇಲ್ಲದಿದ್ದರೆ, ಈಗಿನ ಪ್ರಸ್ತುತ ಸ್ಟೋರೇಜ್ ಕೆಪಾಸಿಟಿ ಆಧಾರದಲ್ಲಿ ನಮಗೆ ಕೇವಲ ಒಂದು ಒಂದೂವರೆ ತಿಂಗಳಿಗಿಂತ ಜಾಸ್ತಿ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಹುಶಃ ಮಂಗಳೂರು ಮಹಾನಗರ ಪಾಲಿಕೆಯಲ್ಲಿ, ಜಿಲ್ಲೆಯ ಅನೇಕ ಪುರಸಭೆಗಳು ನೀರಿನ ಕೊರತೆಯಿಂದ ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ ಕೂಡ ಬರಬಹುದು. ಕುಡಿಯುವ ನೀರಿನ ಮೇಲೆ ಅವಲಂಬಿತವಾಗುವಂಥ ಕೈಗಾರಿಕೆಗಳಿಗೆ ಅವಕಾಶ ಕೊಡಬಾರದೆಂದು ವಿನಂತಿ ಮಾಡುತ್ತಾ, ಈ ನಿಟ್ಟಿನಲ್ಲಿ ಪರಿಸರ ಮಾಲಿನ್ಯವಾಗದ ರೀತಿಯಲ್ಲಿ ಸಂಬಂಧಪಟ್ಟ ಉಪಕರಣಗಳನ್ನು ಕಡ್ಡಾಯವಾಗಿ ಬಳಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ನಾನು ಕೊಜೆಂಟ್ರಿಕ್ಸ್ ಬಗ್ಗೆ ಉಲ್ಲೇಖ ಮಾಡಿ ಹೇಳಿದಾಗ, scrubber system ಎಂದು desulphurisation unit ಯಾವುದಿದೆ, ಅಳವಡಿಸಲೇಬೇಕೆಂಬ ನಿಬಂಧನೆ ಇಲ್ಲದೇ ಇರುವುದರಿಂದ ಅಷ್ಟು ಮಾತ್ರವಲ್ಲ, ಒಂದು ರೀತಿಯಲ್ಲಿ ಅವರಿಗೆ ಗೊತ್ತಾಗಿ, ಇದನ್ನು ಕಡ್ಡಾಯ ಮಾಡುತ್ತಾರೆಂದು ಹೇಳಿ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮನವಿಯನ್ನು ಸಲ್ಲಿಸಿದ್ದಾರೆ. ನಮಗೆ ವಿನಾಯಿತಿ ಕೊಡಬೇಕೆಂದು ಕೇಳಿದ್ದಾರೆ. ಆಶ್ಚರ್ಯವೆಂದರೆ, ಮೊನ್ನೆ ನಾನು ಉಲ್ಲೇಖ ಕೂಡ ಮಾಡಿದ್ದೆ. ಈ ಕೊಜೆಂಟ್ರಿಕ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್‌ರವರು ನೇರವಾಗಿ ಪತ್ರವನ್ನು ಬರೆದು, ನಮ್ಮ ಇಲಾಖೆಗೆ ಕಳುಹಿಸುತ್ತಾರೆಂದು ಹೇಳಿದರೆ, ಆಶ್ಚರ್ಯವಾಗಬಹುದು. ಪರಿಸರದ ಮಾಲಿನ್ಯ ನಿಯಂತ್ರಣ ಮಂಡಳಿ ವ್ಯವಸ್ಥಿತವಾಗಿ ಕೆಲಸ ಮಾಡಬೇಕಾದರೆ, ಅಲ್ಲಿಗೆ ದಕ್ಷ ಅಧಿಕಾರಿಗಳ ನೇಮಕಾತಿ ತುಂಬಾ ಅನಿವಾರ್ಯತೆ ಇದೆ. ಅಲ್ಲಿ 85 ಪೋಸ್ಟ್‌ಗಳು, ತಾಂತ್ರಿಕ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇವೆಯೆಂದು ಗಮನಕ್ಕೆ ಬಂದಿದೆ. ಅದರ, ಜನರು ಮಾತನಾಡುತ್ತಿದ್ದಾರೆ, ಒಂದು ಹುದ್ದೆಗೆ ಮೂರೂವರೆಯಿಂದ ನಾಲ್ಕು ಲಕ್ಷ ಬೇಡಿಕೆ ಇದೆಯೆಂದು ದಯವಿಟ್ಟು ಇದನ್ನು ಗಮನದಲ್ಲಿಟ್ಟು, ಇದರ ಬಗ್ಗೆ ಹೆಚ್ಚಿನ ಎಚ್ಚರಿಕೆಯನ್ನು ಸರ್ಕಾರ ವಹಿಸಿಕೊಳ್ಳತಕ್ಕ ಒತ್ತಾಯವನ್ನು ಮಾಡಲಿಕ್ಕೆ ಬಯಸುತ್ತೇನೆ.

ಇನ್ನೊಂದು ವಿಷಯವೆಂದರೆ ಸ್ಥಳವನ್ನು, ಜಾಗವನ್ನು ಆವರಿಸುವ ನಿಟ್ಟಿನಲ್ಲಿ ಬಯಲ್: refinery million tonne 6 ಕೆಪ್ಯಾಸಿಟಿ ಇರುವಂಥ ಯುನಿಟ್‌ಗಳನ್ನು ಮಹಾರಾಷ್ಟ್ರ ರಾಜ್ಯದಲ್ಲಿ 25 ವರ್ಷಗಳ ಹಿಂದೆ, ಕೇವಲ 400 ಎಕರೆ ಜಾಗವನ್ನು ಮಾತ್ರ ಆವರಿಸಿದ್ದರೆ, ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 6 million tonne ಕೂಡ ಅಲ್ಲ, 3 million tonne ಕೆಪ್ಯಾಸಿಟಿ ಇರುವಂಥ ಎಂ.ಆರ್.ಪಿ.ಎಲ್. 1800 ಎಕರೆ ಜಾಗವನ್ನು ಆವರಿಸಿಕೊಂಡಿದೆ. ವೈಜ್ಞಾನಿಕ, ತಾಂತ್ರಿಕ ಅಭಿವೃದ್ಧಿಯ ದೃಷ್ಟಿಯಲ್ಲಿ 400 ಎಕರೆಯಿಂದ 300 ಎಕರೆಗೆ ಸೀಮಿತಗೊಳಿಸುವ ವಿಶೇಷ ಪರಿಸ್ಥಿತಿಯಲ್ಲಿ, ಇವತ್ತು 1800 ಎಕರೆ ಜಾಗವನ್ನು ಆವರಿಸಿದೆಯೆಂದು ಹೇಳಿದರೆ, ಬಯಲ್: ಇಲ್ಲಿರೂ ಗಂಭೀರವಾಗಿ ಚಿಂತನೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ಈ ನಿಟ್ಟಿನಲ್ಲಿ ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ, ಅಧ್ಯಯನ ಮಾಡಬೇಕೆಂದು ಅವರಿಗೆ ಕೊಡುವಂಥ ಸ್ಥಳವನ್ನು ಕೊಡಬೇಕು. ಯಾವುದೇ ಕೈಗಾರಿಕೆಗಳಿಗೆ ಜಾಗವನ್ನು ಅಲಾಟ್ ಮಾಡುವಾಗ, ಸ್ಥಳವನ್ನು ಈ ನಿಟ್ಟಿನಲ್ಲಿ ಕೊಡಬೇಕೆಂದು ವಿಶೇಷವಾದ ವಿನಂತಿಯನ್ನು ಮಾಡುತ್ತಿದ್ದೇನೆ. ಇನ್‌ಫ್ರಾಸ್ಟ್ರಕ್ಚರ್ ಬಿಲ್ಡಪ್ ಆಗದೇ, ಯಾವುದೇ ಕೈಗಾರಿಕೆಗಳಿಗೆ ಅವಕಾಶ ಕೊಡಬಾರದೆಂಬ ಒತ್ತಾಯ ಮಾಡುತ್ತೇನೆ. ಅವರ ಭಾಷಣದಲ್ಲಿ ಐಟಂ ನಂ.4 ಚುನಾವಣೆ ಬಗ್ಗೆ, ಅದರಲ್ಲಿ ಉಲ್ಲೇಖ ಮಾಡಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಮಂಗಳೂರು ಜಿಲ್ಲೆಯಲ್ಲಿ ಚುನಾವಣೆಯನ್ನು ಮಾಡಲಿಲ್ಲ. ಈ ಸಂದರ್ಭದಲ್ಲಿ ನನ್ನ ನೋವನ್ನು ಕೂಡ ಕ್ಷೇತ್ರ ವಿಂಗಡಣೆಗಳು ನಡೆಯಿತು, ಅದು ಸರಿಯಾಗಿ ಒಂದು ನ್ಯಾಯ ಪ್ರಕಾರ ಆಗಲಿಲ್ಲ, ಇದರಲ್ಲಿ ರಾಜಕೀಯ ಪ್ರೇರಿತ ದೃಷ್ಟಿ ಕೂಡ ಇತ್ತು ಎಂದು ಹೇಳುತ್ತೇನೆ. ಪುರುಷರು ಪ್ರಾತಿನಿಧ್ಯ ಇರುವ ಕಡೆ ಮಹಿಳೆಯರ ಘಾಲೋ ಮಾಡದ ರೀತಿಯಲ್ಲಿ, ಈ ರೀತಿ ಆಗಿದೆ. ಇದು ನಿಜವಾಗಿಯೂ ನಮ್ಮ ಜಿಲ್ಲೆಗೆ ಆದ ಅನ್ಯಾಯವೆಂದು ಹೇಳುತ್ತಾ, ಚುನಾವಣೆಯನ್ನು ತಕ್ಷಣ ಮಾಡಬೇಕು. ಮೊನ್ನೆ 351ರ ನಿಯಮದಡಿ ನಾನು ಕೇಳಿದಾಗ, ನಾವು ಆಯೋಗಕ್ಕೆ ಬರೆದಿದ್ದೇವೆಂಬ ಉತ್ತರ ಬಂದಿದೆ. ಇಂತಹ ತಾರೀಖಿನಲ್ಲಿ ನಾವು ಮಾಡುತ್ತೇವೆಂದು ಹೇಳುವಂಥ ಪರಿಸ್ಥಿತಿಯಲ್ಲಿ ಸರ್ಕಾರ ಇಲ್ಲದೇ, ನಾವು ಆಯೋಗಕ್ಕೆ ಕೇಳಿದ್ದೇವೆಂಬ ಒಂದು ರೀತಿಯಲ್ಲಿ ನಿಟ್ಟಿನಲ್ಲಿ ಮುಂದೆ ದಕ್ಷಿಣ ಕನ್ನಡ ಜಿಲ್ಲೆಗೆ ಚುನಾವಣೆ ಆಗಬೇಕು ಒತ್ತಾಯವನ್ನು ಮಾಡುತ್ತಿದ್ದೇನೆ. ವಿಶೇಷವಾಗಿ ರಫ್ತು ಉದ್ಯಮಕ್ಕೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿಗೊಳಿಸುವ ಕಡೆ ಸಹ ಚಟುವಟಿಕೆಗಳನ್ನು ಮಾಡಬೇಕಾಗಿದೆ. ಪುರಸಭೆಗಳಲ್ಲಿಯೂ ಕೊಡಬೇಕಾದಂಥ ಎಲ್ಲಾ ತರಹದ ಇನ್‌ಫ್ರಾಸ್ಟ್ರಕ್ಚರ್‌ಗಳನ್ನು ಒದಗಿಸಬೇಕು. ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸೌಲಭ್ಯಗಳನ್ನು ಕೊಡುವ ನಿಟ್ಟಿನಲ್ಲಿ ವಿಶೇಷ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಲಿಕ್ಕೆ ಇಚ್ಛಿಸುತ್ತೇನೆ. ಅದೇ ರೀತಿ ಐಟಂ ನಂ. 35ರಲ್ಲಿ ಜಿಲ್ಲಾ ಮಟ್ಟದ ಆಸ್ಪತ್ರೆಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಮಂಗಳೂರಿನಲ್ಲಿ ಇತ್ತೀಚೆಗೆ ವ್ಯಾಪಕವಾಗಿ ಹರಡುತ್ತಿರುವಂಥ ಮಲೇರಿಯಾ ರೋಗದ ಬಗ್ಗೆ ತಮ್ಮ ಗಮನಕ್ಕೆ ತರುವಂಥದು ನಾವೊಂದು ರಾ ರಾ ಚಿಕಿತ್ಸೆಯನ್ನ ಕೊಡಿ ಎಂದು ಹೇಳಿದಾಗ, ಇವತ್ತಿನವರೆಗೆ ಕೊಡಲಿಕ್ಕೆ ಸಾಧ್ಯವಾಗಿಲ್ಲ.

ಇನ್ನು ಅನೇಕ ಕಳಪೆ ಔಷಧಿಗಳನ್ನು ಖರೀದಿ ಮಾಡುತ್ತಿದ್ದು ಇದು ಆರಂಭವಾಗಿದೆ. ಒಂದು ಒಂದು ಉದಾಹರಣೆ ಕೊಡುತ್ತೇನೆ. ಒಂದೂವರೆ ಲಕ್ಷ ಬೆಲೆಬಾಳುವ auto-clave ಸಾಮಾನು ಬಂದಾಗಿನಿಂದ ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿರುವುದು ಕಂಡುಬಂದಿದೆ [illegible] ಒತ್ತಾಯ [illegible] ಆಸ್ಪತ್ರೆ [illegible] ಸರ್ಕಾರಕ್ಕೆ ಗಮನಕ್ಕೆ ತರಲು ಇಚ್ಛಿಸುತ್ತೇನೆ. [illegible] ಆ ಆಸ್ಪತ್ರೆ, [illegible] [illegible] ವಿಶೇಷವಾಗಿ [illegible] ಔಷಧಿಗಳನ್ನು [illegible], ಅಲ್ಲಿರುವಂಥ ಕಟ್ಟಡವನ್ನು [illegible] ಅಲ್ಲಿಗೆ ಬೇಕಾಗಿರುವಂಥ ಉಪಕರಣಗಳು [illegible] [illegible] ಹೆಚ್ಚು [illegible] [illegible] ಮತ್ತು [illegible] [illegible] ಮಾಡಬೇಕು. ಮತ್ತು ಒಂದು [illegible] [illegible]. ಒಂದೂವರೆ ವರ್ಷದಿಂದ [illegible] [illegible]. ಒಂದು [illegible] [illegible] Board of Visitors ಎಂದು [illegible] ಆಸ್ಪತ್ರೆಯಲ್ಲಿರತಕ್ಕ [illegible], [illegible] [illegible] ಏನು ಕಾರ್ಯ ಮಾಡಬೇಕೋ ಅದನ್ನು ಮಾಡಬೇಕು. [illegible] [illegible] ಇಲ್ಲ. ಒಂದೂವರೆ ವರ್ಷದಿಂದ ಇದನ್ನು ಮಾಡದೇ [illegible] [illegible]. ಇದನ್ನು ತಕ್ಷಣ ಮಾಡಿ ಎಂದು ಒತ್ತಾಯ ಮಾಡುತ್ತೇನೆ. ಅದೇ ರೀತಿ ಬಾಬು ನಂ. 90ರಲ್ಲಿ [illegible] [illegible] ಸಂಬಂಧಿಸಿದಂತೆ, [illegible] [illegible], [illegible] [illegible] [illegible] [illegible] [illegible] [illegible] [illegible], [illegible] [illegible] [illegible], [illegible] ಒಂದು [illegible]. ಬಾಬು [illegible]. ಈ ಬಿಷಯದಲ್ಲಿ [illegible] [illegible] [illegible] [illegible] ಮಾಡದೇ, ಅದನ್ನು [illegible] [illegible] ಮಾಡುವುದಕ್ಕೆ ವಿಶೇಷವಾದ [illegible] [illegible]. [illegible] ಮಾಡದಿದ್ದರೆ, [illegible] [illegible] [illegible] [illegible]. ಬಾಬು ನಂ.94ರಲ್ಲಿ ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ಉಲ್ಲೇಖವಾಗಿದೆ. ಬೆಂಗಳೂರು ಮಹಾನಗರಪಾಲಿಕೆ [illegible], [illegible] [illegible] [illegible] [illegible] [illegible] [illegible], ಆದ್ದರಿಂದ ಒತ್ತಾಯ ಮಾಡುತ್ತೇನೆ. ಬಾಬು. ನಂ. 97ರಲ್ಲಿ ನಗರಪ್ರದೇಶಗಳಿಗೆ [illegible] [illegible] ಉಲ್ಲೇಖ ಇದೆ. ವಿಶೇಷವಾಗಿ [illegible], ಮಹಾನಗರ [illegible], [illegible] [illegible] [illegible] [illegible] [illegible]. [illegible] [illegible]. [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]. ಈ ಬಿಷಯದಲ್ಲಿ [illegible] ಒತ್ತಾಯ ಮಾಡುತ್ತೇನೆ, [illegible] [illegible] [illegible] [illegible] [illegible] ಮಹಾನಗರಪಾಲಿಕೆಗಳು [illegible] [illegible] [illegible] [illegible], [illegible] [illegible] [illegible] [illegible] [illegible] [illegible] [illegible] [illegible]

[illegible]

11.50 ಪೂ.ಹ.

[illegible]

ಅದೇ ರೀತಿಯಾಗಿ ಅಸಂಘಟಿತವಾದ ಕಾರ್ಮಿಕರಿಗೆ ಯಾವುದೇ ರೀತಿಯಲ್ಲಿ ಜೀವನದಲ್ಲಿ ಸಮೃದ್ಧಿ ಬರುವಂತಹ ರೀತಿಯಲ್ಲಿ ಯೋಜನೆಗಳನ್ನು ತಾವು ಹಾಕಿಕೊಳ್ಳಿ ಎಂದು ವಿನಂತಿಯನ್ನು ಮಾಡುತ್ತೇನೆ, ಬೀಡಿ ಕಾರ್ಮಿಕರಿಗೆ ವಸತಿಸೌಲಭ್ಯಗಳನ್ನು ಮಾಡಿಸಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಈ ನಿಟ್ಟಿನಲ್ಲಿ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಇನ್ನಿತರೇ ಜಿಲ್ಲೆಗಳಲ್ಲಿ ಸಾಕಷ್ಟು ಜನ ಬೀಡಿ ಕಾರ್ಮಿಕರು ಇದ್ದಾರೆ. ಅವರ ಭಾವನೆಗಳನ್ನು ಕೂಡ ತಾವು ಅರ್ಥ ಮಾಡಿಕೊಳ್ಳಿ ಎಂದು ನಾನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತಾ, ಇನ್ನು ಐಟಂ ನಂಬರು 118ರಲ್ಲಿ ಸಹಕಾರಿ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು ಬಹುಶಃ ಸಹಕಾರಿ ರಂಗದಲ್ಲಿ ನಾನು ಒಂದೇ ಒಂದು ಅಂಶವನ್ನು ಒತ್ತಾಯ ಮಾಡುತ್ತೇನೆ. ಸರ್ಕಾರ ಈ ನಾಮನಿರ್ದೇಶನವನ್ನು ದಯವಿಟ್ಟು ರದ್ದುಗೊಳಿಸಬೇಕು. ನಾನು ಒಂದು ಉದಾಹರಣೆಯನ್ನು ಕೊಡಬೇಕಾಗಿದ್ದರೆ ಮಂಗಳೂರಿನಲ್ಲಿರುವಂತಹ ಜನಪ್ರಿಯ ಜನತಾ ಬಜಾರ್ ಯಾವುದು ಇದೆ ಅಲ್ಲಿ 11 ಜನರಲ್ಲಿ ಸೇವಾ ಸಹಕಾರ ಭಾರತಿ ಎಂಬ ಆಶ್ರಯದಲ್ಲಿ 9 ಜನರು ಆಯ್ಕೆಯಾಗಿದ್ದರು. ಆದರೆ ಅದರ ಆಳ್ವಿಕೆಯಿಂದ ಅವರು ವಂಚಿರಾಗಿದ್ದಾರೆ ಅದಕ್ಕೆ ಕಾರಣ ಏನು ಎಂದು ಹೇಳಿದರೆ ರಾಜ್ಯ ಸರ್ಕಾರ 9 ಜನ ಅಧಿಕಾರಿಗಳನ್ನು ನಾಮನಿರ್ದೇಶನ ಮಾಡಿದ್ದರಿಂದ ನಿಜವಾಗಿ ಆಳ್ವಿಕೆ ಯಾರುಮಾಡಬೇಕಾಗಿತ್ತು ಅವರು ಇದರಿಂದ ವಂಚಿತರಾಗಿದ್ದಾರೆ. ಈ ನಿಟ್ಟಿನಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡುವಂಥಾದ್ದು ಏನೆಂದರೆ ಇನ್ನು ಮುಂದಕ್ಕೆ ಆದರೂ ಸಹಕಾರಿ ರಂಗದಲ್ಲಿ ನಾಮನಿರ್ದೇಶನವನ್ನು ರದ್ದು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ. ಕಾನೂನು ಮತ್ತು ಸುವ್ಯವಸ್ಥೆಗಳ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಗಳು ಇಲ್ಲಿ ಆಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಕೊಲೆಗಳು ಹಾಗೂ ಸರಣಿ ದರೋಡೆಗಳು ನಿಜವಾಗಿಯೂ ಗಂಭೀರವಾಗಿದೆ. ರಾಜಾರಾಮ್ ಶಾರ್ವಗಾರ್ ಎನ್ನುವಂತಹ ಒಬ್ಬ ಪರಿಸರವಾದಿಯನ್ನು ಬ್ರಹ್ಮಾವರದಲ್ಲಿ ಅವರ ಅಂಗಡಿಯಲ್ಲಿ ಹಾಡು ಹಗಲ್ಲೇ ರಫೀಕ್ ಮುಲ್ಲ ಎನ್ನುವಂತಹ ಪೋಲೀಸ್ ಅಧಿಕಾರಿಯ ಸಮ್ಮುಖದಲ್ಲಿ ಅಥವಾ ಅವರ ಸಹಕಾರದಿಂದ ಎಂದು ಹೇಳುತ್ತಾರೆ, ನೇರವಾಗಿ ನಡೆದಂತಹ ಕೊಲೆಯನ್ನು ಸಹ ನಾನು ಈ ಸಂದರ್ಭದಲ್ಲಿ ಉಲ್ಲೇಖಮಾಡುತ್ತಾ ಈ ಕೊಲೆಯ ಹಿನ್ನಲೆ ಏನು ಎಂಬ ಬಗ್ಗೆ ವಿವರವಾಗಿ ವಿಷಯ ನಮಗೆ ಗೊತ್ತಾಗಬೇಕು. ಈ ನಿಟ್ಟಿನಲ್ಲಿ ಅಪರಾಧಿ ಸ್ಥಾನಗಳಲ್ಲಿ ಇವರನ್ನು ಸಹ ಸೇರಿಸಿ, ರಫೀಕಮುಲ್ಲ ಎನ್ನುವಂತಹ ಪೋಲೀಸ್ ಅಧಿಕಾರಿ ಇದರಲ್ಲಿ ಯಾರು ಇನವಾಲ್ವ್ ಆಗಿದ್ದಾರೆ ಅವರನ್ನೂ ಸಹ ಇದರಲ್ಲಿ ಸೇರಿಸಿ ಇದನ್ನು ಸಿ ಬಿ ಐ ತನಿಖೆಗೆ ಒಳಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈಗಾಗಲೇ ನಾನು ಇದರ ಬಗ್ಗೆ ಉಲ್ಲೇಖ ಮಾಡಿದ್ದೇನೆ. ಮಂಗಳೂರು ಮಹಾನಗರಪಾಲಿಕೆಯಲ್ಲಿ ಅಥವಾ ಇನ್ನಿತರೆ ಕ್ಷೇತ್ರಗಳಲ್ಲಿ ಕೋಟಿಗಟ್ಟಲೆ ಬೆಲೆಬಾಳುವಂತಹ ಭೂಮಿಗಳು ಇವತ್ತು ಖರೀದಿಗಳು ಆಗುತ್ತಿವೆ. ಇದರ ಹಿನ್ನಲೆ ಏನು? ಅನೇಕ ಪಾಶ್ಚಿಮಾತ್ಯರಾಷ್ಟ್ರಗಳಿಂದ ಹಣ ಬರುತ್ತಿದೆ. ಪರರಾಜ್ಯದವರು ವ್ಯವಸ್ಥಿತವಾಗಿ ಇಲ್ಲಿ ಬಂದು ಭೂಮಿಗಳನ್ನು ಖರೀದಿ ಮಾಡುತ್ತಿದ್ದಾರೆ. ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯನ್ನು ನಡೆಸಬೇಕು ಎಂದು ಹೇಳುತ್ತಾ, ನಡೆದಿರುವಂತಹ ಯಾವುದೇ ಕ್ರಿಮಿನಲ್ ವ್ಯವಹಾರಗಳು ಅಥವಾ ಅಂತರರಾಜ್ಯ ಮಟ್ಟದಲ್ಲಿ ನಡೆದಿರುವಂತಹ

ಯಾವುದೇ ಗುಂಪುಗಾರಿಕೆಯನ್ನು, ಖಂಡಿತವಾಗಿ ಇವರ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಆಗ್ರಹ ಮಾಡುತ್ತೇನೆ. ಈ ಸಂದರ್ಭದಲ್ಲಿ ತಾವು ಕೆಂಪಯ್ಯ ಎನ್ನತಕ್ಕಂಥ ಒಳ್ಳೆಯ ಪೋಲೀಸ್ ಅಧಿಕಾರಿಯನ್ನು ಮಂಗಳೂರು ಜಿಲ್ಲೆಗೆ ಕಳುಹಿಸಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸಿ ಮುಂದಿನ ದಿನಗಳಲ್ಲಿ ಅದರೂ ಶಾಂತಿಯ ಭರವಸೆ ನಮಗೆ ಸಿಗಬಹುದು ಎಂದು ತಿಳಿದುಕೊಂಡಿದ್ದೇನೆ. ಇನ್ನು ನಾನು ಕೃಷಿಗೆ ಸಂಬಂಧಪಟ್ಟ ಹಾಗೆ ತಾವು ಕೊಟ್ಟಿರುವ ಸೇವೆಗೆ ಕಳೆದ ವರ್ಷ 1995-96 ರಲ್ಲಿ 6.47 ಪರ್ಸೆಂಟಿನಿಂದ 96-97ಕ್ಕೆ 5.77ಕ್ಕೆ ತಾವು ಇಳಿಸಿದ್ದೀರಿ ಅದನ್ನು ತಾವು 7 ಪರ್ಸೆಂಟ್ ಏರಿಸಬೇಕೆನ್ನುವ ಬೇಡಿಕೆಯನ್ನು ನಾನು ಇಡುತ್ತಿದ್ದೇನೆ. ಅದೇ ರೀತಿ ಶಕ್ತಿ ಮೂಲಗಳು 18.33 ಪರ್ಸೆಂಟ್ ಇದ್ದದ್ದನ್ನು 13.53 ಪರ್ಸೆಂಟಿಗೆ ಇಳಿಸಿದ್ದೀರಿ. ಅದನ್ನು 19 ಪರ್ಸೆಂಟಿಗೆ ಏರಿಸ ಬೇಕೆಂದು ನಾನು ವಿನಂತಿ ಮಾಡುತ್ತೇನೆ. ಗ್ರಾಮೀಣ ಅಭಿವೃದ್ಧಿ ಮಲೆನಾಡು ಹಾಗೂ ಇನ್ನಿತರೇ ಅಭಿವೃದ್ಧಿ ಯೋಜನೆಗಳಿಗೆ 2.66 ಪರ್ಸೆಂಟಿನಿಂದ ಈ ವರ್ಷ 2.35 ಪರ್ಸೆಂಟಿಗೆ ಇಳಿಸಿದ್ದೀರಿ. ದಯವಿಟ್ಟು ಅದನ್ನು 5 ಪರ್ಸೆಂಟಿಗೆ ಏರಿಸಿ ಎಂದು ನಾನು ಒತ್ತಾಯ ಮಾಡುತ್ತೇನೆ. ಅದೇ ರೀತಿಯಲ್ಲಿ ಶಿಕ್ಷಣ ಮತ್ತು ಕ್ರೀಡೆಗಳು, ಕಲೆ ಹಾಗೂ ಸಂಸ್ಕೃತಿಗೆ 8.8 ಪರ್ಸೆಂಟಿನಿಂದ 8.51 ಪರ್ಸೆಂಟಿಗೆ ಇಳಿಸಿದ್ದೀರಿ, ದಯವಿಟ್ಟು ಅದನ್ನು 10 ಪರ್ಸೆಂಟ್‌ಗೆ ಏರಿಸಿ ಎಂದು ನಾನು ಒತ್ತಾಯವನ್ನು ಮಾಡುತ್ತೇನೆ. ಈಗಾಗಲೇ ತಾವು ಏನು ತೆರಿಗೆಯನ್ನು ಹಾಕಿದ್ದೀರಿ ಅದನ್ನು ಪುನರ್ ಪರಿಶೀಲನೆ ಮಾಡಲು ನಾನು ಒತ್ತಾಯ ಮಾಡುತ್ತೇನೆ. ವಿಶೇಷವಾಗಿ ಅಫೀಮು, ಗಾಂಜಾ 150 ಪರ್ಸೆಂಟ್ ಇದ್ದದ್ದನ್ನು 20 ಪರ್ಸೆಂಟ್‌ಗೆ ಇಳಿಸಿದ್ದೀರಿ. ಮಧ್ಯಕ್ಕೆ 25 ಪರ್ಸೆಂಟ್‌ನಿಂದ 20 ಪರ್ಸೆಂಟಿಗೆ ಇಳಿಸಿದ್ದೀರಿ. ಇಸ್ಪೀಟ್ ಕಾರ್ಡ್‌ಗೆ 18 ಪರ್ಸೆಂಟಿನಿಂದ 15 ಪರ್ಸೆಂಟಿಗೆ ಇಳಿಸಿದ್ದೀರಿ ಇವರ ಬಗ್ಗೆ ಎಲ್ಲರಿಗೂ ಸಂಶಯ ಮತ್ತು ಆಶ್ಚರ್ಯಕೂಡ ಆಗಿದೆ. ತಾವು ತಮ್ಮ ಉತ್ತರದಲ್ಲಿ ಅದರ ಬಗ್ಗೆ ಹೇಳುತ್ತೀರಿ ಎಂದು ನಾನು ಭಾವಿಸಿದ್ದೇನೆ. ಅದರೂ ಕೂಡ ನನ್ನ ಒತ್ತಾಯ ಇರುವಂಥದ್ದು ಸಾಬೂನು ಮೇಲೆ ಮತ್ತು ಎಣ್ಣೆಯ ಮೇಲೆ ಹಾಕಿರುವಂತಹ ತೆರಿಗೆಯನ್ನು 6 ರಿಂದ 8 ಪರ್ಸೆಂಟ್ ಮಾಡಿರುವ ತೆರಿಗೆಯನ್ನು 4 ಪರ್ಸೆಂಟಿಗೆ ಇಳಿಸಬೇಕೆನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಅದರ ಜೊತೆಗೆ ಮುದ್ರಣ ಯಾವುದು ಇದೆ ಅದು ಒಂದು ಕಾಂಟ್ರಾಕ್ಟ್ ಸಿಸ್ಟಂ. ಅದು ಒಂದು ಉತ್ತೇಜನ ಕೊಡುವಂತಹ ಉದ್ಯಮ ದಯವಿಟ್ಟು ಅದಕ್ಕೆ ತಾವು ವಿನಾಯಿತಿಯನ್ನು ಕೊಡಿ, ತಾವು 4 ಪರ್ಸೆಂಟ್ ಟ್ಯಾಕ್ಸ್ ಏನು ಹಾಕಿದ್ದೀರಿ, ಅದನ್ನು ವಿನಾಯಿತಿಗೊಳಿಸಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ಅದರೆ ನಾನು ತಮ್ಮನ್ನು ಒಂದು ದೃಷ್ಟಿಯಲ್ಲಿ ಶ್ಲಾಘಿಸಬೇಕು. ತೆರಿಗೆಯ ಸರಳೀಕರಣ ಇಡೀ ರಾಜ್ಯದಲ್ಲಿ ಮಾಡುವ ಒಂದು ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ, ಅದಕ್ಕೆ ನಾನು ನಿಜವಾಗಿಯೂ ಅಭಿನಂದಿಸುತ್ತೇನೆ. ಅದೇ ರೀತಿಯಲ್ಲಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟಹಾಗೆ ಅಡಿಕೆಗೆ 4 ಪರ್ಸೆಂಟ್ ತೆರಿಗೆಯನ್ನು ಇಳಿಸಿದ್ದಕ್ಕೆ ನಾನು ತಮ್ಮನ್ನು ವಂದಿಸುತ್ತೇನೆ ಅದರೆ ಪವರ್ ಟಿಲ್ಲರ ಮೇಲೆ 2 ಪರ್ಸೆಂಟ್ ಇದ್ದ ತೆರಿಗೆಯನ್ನು 4 ಪರ್ಸೆಂಟ್‌ಗೆ ಏರಿಸಿದ್ದೀರಿ. ಅಷ್ಟೇ ಅಲ್ಲ ಮೊದಲು ಎಂಟ್ರಿ ಟ್ಯಾಕ್ಸ್ ಇರಲಿಲ್ಲ, ಒಂದು ಪರ್ಸೆಂಟ್ ಎಂಟ್ರಿ ಟ್ಯಾಕ್ಸ್ ಹಾಕಿದ್ದೀರಿ, ಮ್ಯಾನುಫ್ಯಾಕ್ಚರ್ ಲೆವೆಲ್‌ನಲ್ಲಿ ಒಂದು

[illegible]

ನಮಗೆ ಕಾರಣ ಏನು ಎಂದು ಮಾರ್ಕೆಟ್ಟಿಗೆ ಹೋದಾಗ ಕೇಬಲ್ ಫಾಲ್ಟ್ ಬಂದಾಗ ಆ ಫಾಲ್ಟ್ ಅನ್ನು ಡಿಟೆಕ್ಟ್ ಮಾಡುವಂತಹ ಮಷಿನ್ ನಮ್ಮ ಹತ್ತಿರ ಇಲ್ಲ ಅದು ಬೆಂಗಳೂರಿನಿಂದ ಬರಬೇಕು ಎಂದು ಹೇಳುತ್ತಾರೆ ಬಹುಶಃ ಇಷ್ಟು ವರ್ಷಗಳು ಬರುವಂತಹ ಇತಿಹಾಸದಲ್ಲಿ ಖಂಡಿತವಾಗಿ ಫಾಲ್ಟ್ ಕಂಡುಹಿಡಿಯುವ ಒಂದು ಮಷಿನ್ ಕೊಡಲಿಕ್ಕೆ ನಮಗೆ ಸಾಧ್ಯವಾಗಲಿಲ್ಲ ಅಂದರೆ ನಿಜವಾಗಿಯೂ ಅವಮಾನಕರವಾದ ಸಂಗತಿ. ಇದನ್ನು ಮಾಡುವುದಕ್ಕೆ ಹೋಗಬೇಡಿ ತಕ್ಷಣ ಫಾಲ್ಟ್ ಫೈಂಡಿಂಗ್ ಮಷಿನ ಕೊಡಿ ಮತ್ತು ಈಗ ಇರುವಂತಹ ಎಕ್ವಿಪ್ಮೆಂಟ್ ಯಾವುದು ಇದೆ ಅದರ ಲೈಫ್ ಆಗಿದ್ದರೆ ಅದನ್ನು ರಿಪ್ಲೇಸ್ ಮಾಡುವಂತಹ ಪ್ರಯತ್ನವನ್ನು ಮಾಡಿ ಎಂದು ನಾನು ವಿನಂತಿಯನ್ನು ಮಾಡುತ್ತೇನೆ. ಇನ್ನೊಂದು ಮುಖ್ಯವಾದ ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ವಿಶೇಷವಾಗಿ ನಮ್ಮ ಅರ್ಬನ್ ಡೆವಲಪಮೆಂಟಗೆ ಸಂಬಂಧಪಟ್ಟ ಹಾಗೆ ಆ ಒಂದು ಸಮಿತಿಯಲ್ಲಿ ನಾನು ಇದ್ದೆ. ನಾನು ವಿಷಯಸಮಿತಿಯಲ್ಲಿದ್ದಾಗ ಸಂಬಂಧಪಟ್ಟ ಅಧಿಕಾರಿಗಳು ಒಂದು ಮಾತು ಹೇಳಿದರು. ಆ ಮಾತು ಹೀಗೆ ಬಂದಿತ್ತು. ಇದಕ್ಕೆ ವಿಶೇಷವಾಗಿ ವಿಧಾನಸೌಧದಲ್ಲಿ ಇರುವಂತಹ ಕಛೇರಿಗಳು ಇರಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗನಲ್ಲಿ ಇರುವಂತಹ ಕಛೇರಿಗಳು ಜನ ಪ್ರವಾಹ ಸಾಕಷ್ಟು ಬರುತ್ತಿದೆ. ನಮಗೆ ವಾರದಲ್ಲಿ ಒಂದು ದಿವಸ ಆದರೂ ಬಿಡುಗಡೆ ಮಾಡುವಂತಹ ಅವಕಾಶ ಕೊಡಿ, ನಾವು ಪೂರ್ತಿಯಾಗಿ ನಮ್ಮ ಫೈಲುಗಳನ್ನು ನೋಡುವಂತಹ ಅವಕಾಶ ಕೊಡಿ. ಎಂಬ ಮಾತು ಚರ್ಚೆಯ ಸಂದರ್ಭದಲ್ಲಿ ಬಂದಿತ್ತು. ಆ ಸಂದರ್ಭದಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಇಂತಹ ಜನತೆ ಏಕೆ ಅಲ್ಲಿ ಬರುತ್ತಾರೆ ಎಂದು. ಒಂದು ವಿಷಯವಂತೂ ಸ್ಪಷ್ಟ. ಅನೇಕ ಸಮಸ್ಯೆಗಳನ್ನು ಹಿಡಿದುಕೊಂಡು ಬರುತ್ತಾರೆ. ಅದರಲ್ಲಿ 50 ಪರ್ಸೆಂಟ್ ಜನ ವರ್ಗಾವಣೆಗೆ ಅರ್ಜಿಯನ್ನು ಹಿಡಿದುಕೊಂಡು ಬರುತ್ತಾರೆ. ಕೆಲವು ಅಧಿಕಾರಿಗಳು ಮತ್ತು ಇನ್ನು ಇತರೇ ಸಂಬಂಧಪಟ್ಟವರು ತಮ್ಮ ಬ್ಯಾಕ್ ಲಾಗ್ ಯಾವುದು ಇದೆ ಒಂದು ವರ್ಷದಿಂದ ಸಿಗುತ್ತಿಲ್ಲ. ಹೀಗೆ ಅನೇಕ ಕಾರಣಗಳನ್ನು ಹಿಡಿದುಕೊಂಡು ಬರುತ್ತಾರೆ. ನಾನೇ ಒಂದು ಕೇಸನ್ನು ನಿವೃತ್ತ ಪ್ರಿನ್ಸಿಪಾಲರಿಗೆ ಸಂಬಂಧಪಟ್ಟದ್ದು ಅಂದರೆ ಅವರ ಬ್ಯಾಕ್ ಅರಿಯರ್ಸ್‌ಗೆ ಸಂಬಂಧಪಟ್ಟಂತೆ ಸರ್ಕಾರದ ಗಮನಕ್ಕೆ ತರಲು ಸತತವಾಗಿ 6-7 ತಿಂಗಳುಗಳಿಂದ ಮಾಡುತ್ತಿದ್ದೇನೆ. ಯು.ಡಿ. ನಾಯಕ್ ಎನ್ನುವಂತಹ ಒಬ್ಬ ಪ್ರಿನ್ಸಿಪಾಲರು ಅವರು. ಅವರ ನನಗೆ ಆಶ್ಚರ್ಯವಾಗುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಒಬ್ಬ ಕ್ಲಾರ್ಕ್‌ನಿಂದ ಇನ್ನೊಬ್ಬ ಕ್ಲಾರ್ಕ್‌ಗೆ ಹೋಗಬೇಕಾದರೆ ಯಾವರೀತಿಯ ತೊಂದರೆಯನ್ನು ಕೊಡುತ್ತಿದ್ದಾರೆ ಎಂಬುದನ್ನು ನೋಡಿದರೆ ಜನರು ಮಾತನಾಡುವುದು ತಪ್ಪಲ್ಲ ಎಂದು ಅನಿಸುತ್ತದೆ. ಈ ರಾಜ್ಯವನ್ನು ಆಳುವವರು ಮುಖ್ಯಮಂತ್ರಿಗಳು ಅಲ್ಲ, ಸೆಕ್ರೆಟರಿಗಳು ಅಲ್ಲ ಈ ರಾಜ್ಯವನ್ನು ಆಳುವವರ ಕ್ಲಾರ್ಕಗಳು ಎಂದು ಹೇಳುವಂತಹ ಮಾತಿನಲ್ಲಿ ಸತ್ಯ ಇದೆ ಎಂದು ನನಗೆ ಕಾಣುತ್ತಿದೆ. ದಯವಿಟ್ಟು ಈ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಿ ಎನ್ನುವಂತಹದ ಮಾತನ್ನು ಹೇಳುತ್ತಾ ಬಹುಶಃ ಅಕೌಂಟಬಿಲಿಟಿಯನ್ನು ತರುವಂತಹ ನಿಟ್ಟಿನಲ್ಲಿ ನಾನು ಒಂದು ನಿರ್ಣಯವನ್ನು ಪ್ರಸ್ತಾಪ ಮಾಡಿದೆ. ಆ ನಿರ್ಣಯದ

ಮಾಡಿಕೆ ಹೋಗಿವೆ. ರಾಜ್ಯ ಸರ್ಕಾರದ ಇಲಾಖೆಗಳಿಂದ ನೇರವಾಗಿ ಅಥವಾ ಅವರ ಅನುದಾನವನ್ನು ಪಡೆದಿರುವಂತಹ ಇನ್ನಿತರೇ ಸಂಸ್ಥೆಗಳ ಮೂಲಕ ನಡೆಸುವಂತಹ ಎಲ್ಲಾ ಕಾಮಗಾರಿ ಚಟುವಟಿಕೆಗಳು ಯಾವುದು ಇದೆ ಅವುಗಳಿಗೆ ನಿಶ್ಚಿತವಾದ ಒಂದು ಅವಧಿಯನ್ನು ವಿಧಿಸತಕ್ಕದ್ದು. ಅದೇ ರೀತಿಯಲ್ಲಿ ಆ ಅವಧಿಯಲ್ಲಿ ಯಾವುದೇ ರೀತಿಯಾದ ಚಟುವಟಿಕೆಗಳು ಕಾಮಗಾರಿ ಕೆಲಸಗಳು ಹಾಳಾದಲ್ಲಿ ಅವನ್ನು ಸುಧಾರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ನೇರವಾಗಿ ಹೊಣೆಗಾರರು ಎನ್ನುವಂತಹ ಒಂದು ನಿರ್ಣಯವನ್ನು ಕೂಡ ನಾನು ಮಂಡಿಸಿದ್ದೆ. ಬಹುಶಃ ಮುಂದಿನ ದಿವಸಗಳಲ್ಲಿ ಅದರ ಬಗ್ಗೆ ಚರ್ಚೆಗೆ ಅವಕಾಶ ಸಿಗಬಹುದು. ನಾನು ಈ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ನಾನು ತಮ್ಮ ಮೂಲಕ ಹೇಳುವಂತಾದ್ದು ದಯವಿಟ್ಟು ಅಕೌಂಟೆಬಿಲಿಟಿಯನ್ನು ತರುವಂತಾದ್ದು ಮಾಡಿಕೊಳ್ಳಿ. ಜನರು ನಮ್ಮಿಂದ ಅನೇಕ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ ಅವರ ನಿರೀಕ್ಷೆಯನ್ನು ಪೂರೈಸುವ ನಿಟ್ಟಿನಲ್ಲಿ ಅಥವಾ ಜನತೆಯ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ನಾವೆಲ್ಲರೂ ಪ್ರಯತ್ನವನ್ನು ಮಾಡಲೇಬೇಕಾಗಿದೆ. ಆ ಒಂದು ಹೊಣೆಗಾರಿಕೆಯನ್ನು ಮಾಡುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಬೇಕಾಗಿದೆ. ಈ ಮಾತುಗಳನ್ನು ಹೇಳಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಿಶೇಷವಾಗಿ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು 1996-97ಕ್ಕೆ ಮಂಡಿಸಿದಂತಹ ಆಯವ್ಯಯ ಪತ್ರದ ವಿಚಾರದಲ್ಲಿ ಕೆಲವು ನನ್ನ ಅನಿಸಿಕೆಗಳನ್ನು ಹೇಳಬೇಕು ಎಂದು ನಾನು ಅಪೇಕ್ಷೆಪಟ್ಟಿದ್ದೇನೆ. ಮುಖ್ಯವಾಗಿ ಕೆಲವು ವಿಚಾರಗಳಲ್ಲಿ ಸ್ವಾಗತ ಮಾಡಬಹುದಾದಂತಹ ವಿಚಾರಗಳನ್ನು ತಮ್ಮ ಆಯವ್ಯಯ ಪಟ್ಟಿಯಲ್ಲಿ ಅಳವಡಿಸಲಾಗಿದೆ. ಮುಖ್ಯವಾಗಿ ತೆರಿಗೆಯ ಸರಳೀಕರಣ. ಆ ಪ್ರೋಸೆಸ್ ಅನ್ನು ನಾವು ಏನು 1993-94 ಮತ್ತು 95 ರಿಂದ ಪ್ರಾರಂಭ ಮಾಡಿದ್ದು ಅದನ್ನು ಒಂದು ತರ್ಕಬದ್ಧವಾದಂತಹ ಒಂದು ಹಂತಕ್ಕೆ ಮಾಡತಕ್ಕಂತಹ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿದ್ದೀರಿ. ಮತ್ತು ಇದು ಅಭಿವೃದ್ಧಿಗೆ ಪೂರಕ ಕೂಡ ಆಗಿದೆ. ಇನ್ನು ಕೆಲವು ಕೆಲ ವಿಚಾರಗಳನ್ನು ಹೇಳುವುದು. ಮುಖ್ಯವಾಗಿ ಅಡಿಕೆ ನಾವು 8 ಪರ್ಸೆಂಟ್ ಇದ್ದದ್ದನ್ನು 5 ಪರ್ಸೆಂಟಿಗೆ ಇಳಿಸಿದ ಮೇಲೆ ಆಗ ತಾವು ಏನು ಮಾಡಿದ್ದೀರಿ ಅಂದರೆ 5 ರಿಂದ 6 ಮಾಡಿದಿರಿ. ಆಗ ನಾವು ಹೇಳಿದ್ದು ದಯಮಾಡಿ ಮಾಡಬೇಡಿ ಏನೂ ಜಾಸ್ತಿ ಆಗುವುದಿಲ್ಲ ಎಂದು ಒಂದು ವರ್ಷ 8 ರಿಂದ 5 ಪರ್ಸೆಂಟ್ ಮಾಡಿ, ಒಂದು ಎಕ್ಸ್‌ಪರಿಮೆಂಟ್ ಮಾಡಿ ಒಂದು ವೇಳೆ ಅದರಿಂದ ಟ್ಯಾಕ್ಸ್ ಕಡಿಮೆ ಆದರೆ 8ಕ್ಕೆ ಹಾಕುವುದು ಇಲ್ಲದಿದ್ದರೆ ಮತ್ತೆ 4ಕ್ಕೆ ಮಾಡಬಹುದು ಎಂಬುದು ನಿಮ್ಮ ಉದ್ದೇಶ ಎಂದು ಒಂದು ಅಂದಾಜು ಮಾಡಿದ್ದೆವು. ತಾವು 6ಕ್ಕೆ ಮಾಡಿದ್ದೀರಿ. ಈಗ ಸರಿಯಾದಂತಹ ನಿರ್ಣಯ ತೆಗೆದುಕೊಂಡು 4ಕ್ಕೆ ಇಳಿಸಿದ್ದೀರಿ ಏಕೆಂದರೆ ಇದರಿಂದ ತೆರಿಗೆ ಕಡಿಮೆ ಆಗುವುದಿಲ್ಲ ತೆರಿಗೆ ಜಾಸ್ತಿ ಆಗುತ್ತದೆ. ಅದು ಮತ್ತೊಂದು ಸ್ವಾಗತಾರ್ಹವಾದಂತಹ ವಿಚಾರ. ಇನ್ನು ಮುಖ್ಯವಾಗಿ ಕಾಫಿ ಬೆಳೆಗಾರರಿಗೆ ನಾವು [illegible]

ಟ್ಯಾಕ್ಸ್‌ನ್ನು ತೆಗೆದಿದ್ದೆವು. ಏಕೆಂದರೆ ಆವಾಗ ಪ್ಲಾನ್ ಮಾಡುತ್ತಿರಲಿಲ್ಲ. ಸೇಲ್ಸ್ ಟ್ಯಾಕ್ಸ್ ಹಾಕುವುದು ಒಳ್ಳೆಯದು ಎಂದು ಹೇಳಿ. ತಾವು ಪುನಃ ಪರ್ಚೇಸ್ ಟ್ಯಾಕ್ಸು ಹಾಕಿದ್ದೀರಿ. ನಾವು ಆವಾಗ ತಮ್ಮ ಗಮನಕ್ಕೆ ತಂದಿದ್ದೆವು. ಕಳೆದ ಬಾರಿ ಏನು ಕೆಲವು ಸೂಚನೆಗಳನ್ನು ನಾವು ಈ ಸದನದಲ್ಲಿ ಅನೇಕರು ಕೊಟ್ಟಿದ್ದಾರ ಅದಕ್ಕೆ ತಾವು ಸ್ವಲ್ಪ ಸ್ಪಂದಿಸಿದ್ದೀರಿ. ಅದನ್ನು ಸಂತೋಷಗಿಸತಕ್ಕಂಥ ಅನಾಮಲೀಸ್ ಎಂದು ಹೇಳಿ ಏನು ನಾವು ಕಂಡಿದ್ದೇವೆಯೋ ಅದನ್ನು ಇವತ್ತು ಪರಿಹಾರ ಮಾಡಿ ತಾವು ಪ್ರಷ್ಟಿನ ಒಂದು ಸರಿಯಾದಂತಹ ಕ್ರಮದಲ್ಲಿ ತೆರಿಗೆಯನ್ನು ರೂಪಿಸುವುದಕ್ಕೆ ಕ್ರಮ ಕೈಗೊಂಡರೆ ಚುನಾವಣೆ ಬರುತ್ತಿದೆ ಅದಕ್ಕೂ ಕೂಡ ಅನುಕೂಲ ಆಗುತ್ತದೆ. ತಪ್ಪೇನೂ ಅಲ್ಲ. ರಾಜಕೀಯವಾಗಿ ಇರತಕ್ಕಂಥ ಪಕ್ಷಗಳು ಹಿಂದೆ 5 ವರ್ಷಕ್ಕೆ ಒಮ್ಮೆ ಚುನಾವಣೆಗಳನ್ನು ನೋಡುತ್ತಿದ್ದೆವು. ಈಗ ಪ್ರತಿ ವರ್ಷ ಚುನಾವಣೆಯನ್ನು ನೋಡತಕ್ಕಂಥ ಪರಿಸ್ಥಿತಿ. ಅದು ಲೋಕಸಭೆ ಇರಬಹುದು ಲೋಕಲ್ ಬೋರ್ಡ್ ಇರಬಹುದು ತಪ್ಪೇನೂ ಇಲ್ಲ ಗೌರ್ನಮೆಂಟ್ ಚುನಾವಣೆಗಾಗಿ ಬಜೆಟ್ ಮಾಡಿಲ್ಲ ಎಂದು ಹೇಳಿದರೆ ನೀವೇನು ಅಫೀಸರ್ಸ್, ನೀವೆಲ್ಲಾ ರಾಜಕೀಯವಾಗಿರತಕ್ಕಂಥವರು ನಿಮ್ಮ ರಾಜಕೀಯದಂತಹ ಇಚ್ಛಾಶಕ್ತಿ ಸೇರಿಸಬೇಕು ಅದರಲ್ಲಿ. ಆ ಬಗ್ಗೆ ಗಲ್ಲೆ ಏನೂ ಹೇಳಾಗಲ್ಲ ಆದರೆ ಅನೇಕ ಅಂಶಗಳು ಅದರಲ್ಲಿ ಇವೆ. ಇನ್ನು ಮುಖ್ಯವಾಗಿ ಸಿನಿಮಾಕ್ಕೆ ನಮ್ಮ ಯೋಗೀಶ್ ಭಟ್‌ರವರು ಹೇಳಿದಂತಹ ಸೂಚನೆಗಳನ್ನು ನಾನು ಒಪ್ಪುತ್ತೇನೆ. ಅವರ ಹಾದಕ್ಕೆ 50 ರೂಪಾಯಿಗಳವರಗೂ ವಿನಾಯಿತಿ ಇತ್ತು. ತಾವು ಏಕೆ ಪುನಃ ಹಾಕಿದ್ದೀರೋ ಗೊತ್ತಾಗುತ್ತಿಲ್ಲ. ವಿನಾಯಿತಿ ಮಾಡಿ. ಅದನ್ನು ನಿಜವಾಗಿಯೂ ಕೂಡ ರೂಪಾಯಿಗಳಿಗೆ ಏರಿಸಬೇಕಾಗಿತ್ತು. ತಾವು ಒಂದು ತರಹ ತೆರಿಗೆಸರಳೀಕರಣ ಮಾಡಿಕೊಂಡು ಅದು ಒಂದು ಸಲ್ಲ ಬಟಿನಲ್ಲಿ ಪುನಃ ಏಕೆ 4.8 ಪರ್ಸೆಂಟ್ ಏನು ಹಾಕಿದ್ದೀರಿ ಪುನಃ ಆಲೋಚನೆ ಮಾಡುವುದು ಒಳ್ಳೆಯದು. ಮತ್ತು ಸಿನಿಮಾಕ್ಕೆಯದ್ದು ಕೂಡ ಈಗಾಗಲೇ ಅವರು ಹೇಳಿದ್ದಾರೆ. ಇನ್ನು ಕೈಗಾರಿಕಾ ನೀತಿ ತಾವು ಬದಲಾವಣೆ ಮಾಡಿಲ್ಲ 1993ರಲ್ಲಿ ಏನು ನಾವು ಕೈಗಾರಿಕಾ ನೀತಿಯನ್ನು ಮಾಡಿದ್ದೇವೆ ಅದು ಇಂಪ್ಲಿಮೆಂಟ್ ಆಗಿದೆ. ಅದಕ್ಕೆ ತಾವು ಹೇಳಿದ್ದೀರಿ ಪುನಃ ನಾವು ಒಂದು ಕೈಗಾರಿಕಾ ನೀತಿಯನ್ನು ರೂಪಿಸುತ್ತೇವೆ ಹೊಸದಾಗಿ ಅಂತ ಹೇಳಿದ್ದೀರಿ. ಅದು ಸ್ವಾಗತ.

ಆ ಕೈಗಾರಿಕಾ ನೀತಿಯನ್ನು ಮಾಡುವಾಗ ತಾವು ಏನೊಂದು ಕೈಗಾರಿಕಾ ಲಿಬರೈಸೇಶನ್ ಪಾಲಿಸಿ ಇರಬಹುದು, ಅಥವಾ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳಿಗೆ ಒಳ್ಳೆಯ ಒಂದು ವೇದಿಕೆಯನ್ನು ತಯಾರು ಮಾಡತಕ್ಕಂಥದ್ದು ಇರಬಹುದು, ಈ ವಿಚಾರಗಳನ್ನು ತಾವು ಗಮನದಲ್ಲಿಟ್ಟುಕೊಂಡು ಮಾಡುತ್ತೀರಿ ಎಂದು ನಾವು ನಿರೀಕ್ಷೆ ಮಾಡುತ್ತೇವೆ. ಇಂಟರ್‌ನ್ಯಾಷನಲ್ ಎರ್‌ಪೋರ್ಟ್, ಕೊಜೆಂಟ್ರಿಕ್ಸ್, ಪವರ್ ಪ್ರಾಜೆಕ್ಟ್ ಮುಂತಾಗಿ ತಾವುಗಳು ಮುಂದುವರಿಸಿಕೊಂಡು ಹೋಗಿದ್ದೀರಿ. ಆದರೆ ಕೈಗಾರಿಕಾ ನೀತಿಯಲ್ಲಿ ಪರಿಸರದ ವಿಚಾರದಲ್ಲಿ, ಪಾಲಿಸಿಯನ್ನು ತೆಗೆದುಕೊಳ್ಳುವ ವಿಚಾರದಲ್ಲಿ, ಈಗಿನ ಅನುಭವದ ಮೇಲೆ ಹೆಚ್ಚು ಒತ್ತು ಕೊಡಬೇಕು. ಇಲ್ಲವಾದರೆ [illegible] ಕಡೆಗಳಲ್ಲಿ pseudo envioronmentalists ಹುಟ್ಟಿಕೊಂಡು ಬಿಡುತ್ತಾರೆ. ಅದು ಆಗದ [illegible] ಅದರಲ್ಲಿ ಸರಕಾರದವರೂ ಕೂಡ ಒಂದು ಕ್ರಿಯಾಶೀಲತೆಯನ್ನು ಎಸ್ಟಾಬ್ಲಿಷ್ ಮಾಡ [illegible]. ಒಂದು

ಯಾವುದೇ ಕೈಗಾರಿಕೆಯು ಪಿಸ್ಸದಲ್ಲಿ ಆಗುವುದಿಲ್ಲ. ಈ ಎಲ್ಲಾ ಕಡಗಳಲ್ಲಿ ಏನು ಹಾಗಯೇ ಯಾವುದೇ ಕೈಗಾರಿಕೆಯು ಪಿಸ್ಸದಲ್ಲಿ ಆಗುವುದಿಲ್ಲ. ಈ ಎಲ್ಲಾ ಕಪಗಳಲ್ಲಿ ಏನು ಮಾಡುತ್ತಾರೆ ಅಂದರೆ ಅದಷ್ಟು ಡ್ಯಾಮೇಜ್ ಕಡಿಮೆ ಮಾಡುವುದಕ್ಕೆ, ಅದಷ್ಟು ಪರಿಸರದ ಶುದ್ಧತೆಯನ್ನು ಉಳಿಸಿ ಕೊಳ್ಳುವುದಕ್ಕೆ ಮಾಡುತ್ತಾರೆಯೋ ಅದನ್ನು ನಾವೂ ಮಾಡುತ್ತಾ ಇದ್ದೇವೆ. ಮಾನ್ಯ ಮೊಯಿಲಿಯವರು ಒಂದು ಒಳ್ಳೆಯ ಮಾತನ್ನು ಹೇಳಿದರು. ಈ ಸೂಡೋ ಎನ್ವೈರನಮೆಂಟಲಿಸ್ಟ ಯಾರಿದ್ದಾರೆ ಅವರು ಇದಕ್ಕಿದ್ದ ಹಾಗೆ ಜಗತ್ತಿನ ಭಾರವನ್ನೆಲ್ಲಾ ತಮ್ಮ ತಲೆಯ ಮೇಲೆ ಇರುವ ಹಾಗೆ, ನಾವೇನೋ ಭಾರೀ ಅಪರಾಧವನ್ನು ಮಾಡುತ್ತಾ ಇದ್ದೇವೆ ಎನ್ನುವ ಹಾಗೆ ಮಾಡುತ್ತಾರೆ. ಅದನ್ನು ಮೊಯಿಲಿಯವರು ಬಹಳ ಚೆನ್ನಾಗಿ ಹೇಳಿದ್ದೀರಿ. ಈ ಜನರು ಸೂಡೋ ಎನ್ವೈರನಮೆಂಟಲಿಸ್ಟ ತಮ್ಮ ಪ್ರಗತಿಗೆ ಅಡ್ಡ ಬಾರದ ಹಾಗೆ ನಾವು ನೋಡಿಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಈಗ ಮುಖ್ಯವಾಗಿ ತಮ್ಮ ಆಯವ್ಯಯದ ವಿಚಾರದಲ್ಲಿ ಮಾತನಾಡ ಬಯಸುತ್ತೇನೆ. ಈ ವಿಚಾರಗಳನ್ನು ನಾನು ಪ್ರಸ್ತಾಪಿಕವಾಗಿ ಮಾತನಾಡಿದ್ದೇನೆ. ಸಮಯಾಭಾವ ಇರುವ ಕಾರಣ ಸಂಕ್ಷಿಪ್ತವಾಗಿ ವಿಷಯಗಳನ್ನು ಮಂಡಿಸಬೇಕೆಂದು ಅಪೇಕ್ಷೆ ಪಡುತ್ತಾ ಇದ್ದೇನೆ. ಇವೊತ್ತು ತಾವು ಬಜೆಟ್‌ನ್ನು ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ರಿಸೋರ್ಸಸ್ ಬಗೆ ಕಂಟಿನ್ಯೂಟಿಯನ್ನು ಇಟ್ಟುಕೊಂಡಿರುವ ಬಗ್ಗೆ ನಾನು ಒಪ್ಪಿಸುತ್ತೇನೆ. ಉದಾಹರಣೆಗೆ ಕಮರ್ಷಿಯಲ್ ಟ್ಯಾಕ್ಸ್ ಕಮೀಷನರ್ ಜಾಗಕ್ಕೆ ಪೋಸ್ಟ್ ಮಾಡುವಾಗ ಅಲ್ಲಿಗೆ ಬಹಳ ಒಳ್ಳೆಯ ಅಧಿಕಾರಿಯನ್ನು ತಾವು ಹಾಕಿದ್ದೀರಿ. ಇದೊಂದು ಒಳ್ಳೆಯ ಸಂಪ್ರದಾಯ. ಏತಕ್ಕೆಂದರೆ ರೆವಿನ್ಯೂ ಬಗ್ಗೆ ನೀವು ಯಾವುದೇ ಕಾಂಪ್ರಮೈಸ್ ಮಾಡಬಾರದು. ಒಳ್ಳೆಯ ಅಧಿಕಾರಿಗಳು ಬೇಕಾಗುತ್ತದೆ. ಅಧಿಕಾರಿಗಳು ಒಳ್ಳೆಯದು ಮಾಡದಿದ್ದರೂ ಕೆಡಿಸಬಾರದು. ಈ ರೀತಿಯ ಗಮನವನ್ನು ಇಟ್ಟುಕೊಂಡು ಕೆಲಸ ಮಾಡತಕ್ಕಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ. ಮಾಡಿಲ್ಲವೆಂದು ನಾನು ಖಂಡಿತವಾಗಿಯೂ ಇಲ್ಲಿ ಹೇಳಲು ಅಪೇಕ್ಷೆ ಪಡುವುದಿಲ್ಲ. ತಾವು ಇಲ್ಲಿ ಸ್ವಲ್ಪ ಗಮನ ಹರಿಸಬೇಕಾದುದು ಅಂದರೆ 1995-96ರಲ್ಲಿ ರೆವಿನ್ಯೂ ರಿಸೀಟ್ಸ್ ಮತ್ತು ಕ್ಯಾಪಿಟಲ್ ರಿಸೀಟ್ಸ್‌ನ್ ನಾವು ನೋಡಿದಾಗ ಅದರ ಟೋಟಲ್ ಎಸ್ಟಿಮೇಟ್ಸ್ ತಾವು ಎಷ್ಟು ಮಾಡಿದ್ದೀರಿ, 12 ಸಾವಿರ ಕೋಟಿ 69 ಲಕ್ಷ ರೂ.ಗಳ ಎಸ್ಟಿಮೇಟ್ ಮಾಡಿದರೆ ನೀವು ರಿವೈಸ್ಡ್ ಎಸ್ಟಿಮೇಟಿನಲ್ಲಿ 10 ಸಾವಿರದ 644 ಕೋಟಿ ರೂ.ಗಳನ್ನು ಮಾಡಿದ್ದೀರಿ. ಇದರಿಂದಾಗ 2 ಸಾವಿರ ರೂ.ಗಳು ನಿಮಗೆ ಶಾರ್ಟ್‌ಫಾಲ್ ಆಗಿದೆ. That has all been reflected in all various development works ನಲ್ಲಿ ಆಗಿದೆ. ನೀವು ನಿಮ್ಮ ಸುಮಾರು 700 ಕೋಟಿಗಳ ವರೆಗೆ ನಿಮ್ಮ ಪ್ಲಾನ್‌ನಲ್ಲಿ ಕಡಿತ ಮಾಡಬೇಕಾದಂಥ ಪ್ರಸಂಗ ಬಂದಿದೆ. I don't think it is a good financial management. I don't attribute to you. ತಾವು ಇದನ್ನು ದಯಮಾಡಿದ ನಿಮ್ಮ ಅಧಿಕಾರಿಗಳ ಜೊತೆಯಲ್ಲಿ ರಿವ್ಯೂವ್ ಮಾಡಬೇಕಾಗುತ್ತದೆ. ಇಷ್ಟು ಶಾರ್ಟ್‌ಫಾಲ್ ಬಂದರೆ ಏನು ಮಾಡಬೇಕೆಂಬ ಯೋಚನೆ ಮಾಡಬೇಕಾಗುತ್ತದೆ. ಅದರ ಬಗ್ಗ ಅಂಕಿಅಂಶಗಳನ್ನು, ವಿವರಗಳನ್ನು ನಾನು ಆಮೇಲೆ ಕೊಡುತ್ತೇನೆ. ಆದರೆ ಇಷ್ಟು ಶಾರ್ಟ್‌ಫಾಲ್ ಯಾವ ಕಾಲದಲ್ಲಿಯೂ

ಕೂಡ ಎಸ್ಟಿಮೇಟಿನಲ್ಲಿ ಆಗಿರಲಿಲ್ಲ. ಉದಾಹರಣೆಗೆ ಹೇಳುವಾದರೆ 1993-94ನಲ್ಲಿ ತಾವು ಏನು ಮಾಡಿದ್ದೀರಿ ಅಂದರೆ ಬಜೆಟ್ ಎಸ್ಟಿಮೇಟ್ಸ್ ಮಾಡಿದ್ದು ಬಿಟ್ಟು ನಿಮ್ಮ ವರದಲ್ಲಿ projected budget estimate of receipts 7,637 ಕೋಟಿ ಚಿಲ್ಲರೆ ಮಾಡಿದ್ದರ, as per accounts 9,044.36 ಕೋಟಿ ರೂ.ಗಳು ಆಗಿವೆ. 1993-94ನಲ್ಲಿ ಏಕೆಂದರೆ ಕೆಲವು ಸಾರಿ ಮಾತಿಗೆ ಹೇಳುತ್ತೀರಿ. ರಾಜಕೀಯವಾಗಿ ಕೂಡ ಹೇಳಬೇಕಾಗುತ್ತದೆ. ತಮ್ಮ ಪಕ್ಷ ಬೇರೆ ನಮ್ಮ ಪಕ್ಷ ಬೇರೆ. ಆ ಬಗ್ಗೆ ನನ್ನ ವಾದ ಇಲ್ಲ. ಆದರೆ This will show that there is as much as Rs. 15000 crores ಎಸ್ಟಿಮೇಟಿಗಿಂತ ಜಾಸ್ತಿ ಅಕೌಂಟ್ಸ್‌ನಲ್ಲಿ ನಮಗೆ ರೆವಿನ್ಯೂ ಬಂದಿದೆ. ಇದನ್ನು ತಾವು ಮರೆಯಬಾರದು. Whether you call 1993-94 as a better management of the finance or short- fall Rs. 2000 Crores. ಏನಾಗಿದೆ ಅದನ್ನು ಬೆಟರ್‌ಮ್ಯಾನೇಜ್‌ಮೆಂಟ್ ಎಂದು ಕರೆಯುತ್ತೀರೋ ಎಂಬುದನ್ನು ದಯಮಾಡಿ ನೀವು ಆಲೋಚನೆ ಮಾಡಬೇಕಾಗುತ್ತದೆ. ಆದ್ದರಿಂದ 1700 ಕೋಟಿಗಳ ವರೆಗೆ ಅಲ್ಲಿ ನಿಮಗ ಎಕ್ಸೆಸ್ ಬಂದಿದೆ. 1993-94ನಲ್ಲಿ ಈಗ 2000 ಕೋಟಿಗಳು ಬಜೆಟಎಸ್ಟಿಮೇಟನಲ್ಲಿ ಕಡಿಮೆ ಬಂದಿದೆ. How do you manage the State? ನಾನ್‌ಪ್ಲಾನ್‌ನಲ್ಲಿ ಡೆವಲಪ್‌ಮೆಂಟ್ ವರ್ಕ್ಸ್ ಇದೆ, ಪ್ಲಾನ್‌ನಲ್ಲಿ ಡೆವಲಪ್‌ಮೆಂಟ್ ವರ್ಕ್ಸ್ ಇದೆ. ಇದಕ್ಕೆಲ್ಲಾ ಆಘಾತ ಬರುತ್ತದೆ. ಎಲ್ಲಾ ಮಿನಿಸ್ಟರುಗಳು ಕಂಗಾಲಾಗಿ ನಿಮ್ಮ ಹತ್ತಿರ ಬರತಕ್ಕಂಥಾದ್ದು ನಡೆಯುತ್ತದೆ. ಎಲ್ಲಾ ಅಸ್ತವ್ಯಸ್ತವಾಗುತ್ತದೆ. That can lead to some anarchy in the whole financial management if you make Rs. 2000 Crores less. ಇದರ ಎಸ್ಟಿಮೇಟನ್ನು ಮಾಡುವಾಗ ಸರಿಯಾಗಿ ಮಾಡದಿದ್ದರೆ, ಅರ್ಥವ್ಯವಸ್ಥೆಯೂ ಸರಿಯಾಗಿ ಇರುವುದಿಲ್ಲ. ಅವ್ಯವಸ್ಥೆಯನ್ನು ಬರುತ್ತದೆ. Even in 1994-95 with all what we have said, the shortfall was Rs. 1000 crores not Rs.2000 Crores of Rs. 4000 Crores. ತಮ್ಮ ಲೆಕ್ಕದಲ್ಲಿ 1994-95ರಲ್ಲಿ ಅದು ಏನೋ ಮ್ಯಾನೇಜ್ ಆಗಿದೆ ಎಂದು ಹೇಳಿ ತಕ್ಕಂಥಾದ್ದು ಇದ್ದರೂ ಕೂಡ The shortfall was Rs.1000 Crores. ಅದರಲ್ಲಿಯೂ ಕೂಡ ಕಡಿಮೆ ಮಾಡಬಹುದಾಗಿತ್ತು. ತಮ್ಮನ್ನು ನಾನು ಹೇಳುತ್ತಾ ಇಲ್ಲ, ಅನೇಕ ಬಾರಿ ನಮ್ಮ ಗಮನಕ್ಕೂ ಬರುವುದಿಲ್ಲ. ಸುಮಾರು 15-20 ವರ್ಷಗಳಿಂದ ಏನಾಗಿದೆ ಎಂಬುದು ತಮಗೂ ಗೊತ್ತಿದೆ. ಎಲ್ಲಾ ಲೆಕ್ಕಗಳನ್ನು ನೋಡಿದರೂ ಕೂಡ ಎಕ್ಸ್‌ಪೆಂಡಿಚರ್ ಹೆಚ್ಚಾಗಿ ಜಾಸ್ತಿ ಬರುವುದು ಯಾವಾಗ? ನವೆಂಬರ್‌ನ ಅನಂತರ ಎಕ್ಸ್‌ಪೆಂಡಿಚರ್ ಎಲ್ಲಾ ಜಾಸ್ತಿ ಬರತಕ್ಕಂಥಾದ್ದು. ಅದಕ್ಕಿಂತ ಮೊದಲು ಕ್ಸಪೆಂಡೀಚರ್ ಜಾಸ್ತಿ ಬರುವುದಿಲ್ಲ. This is the major pattern of all the expenditure incurred every time. ಇದನ್ನು ತಾವು ನೋಡಿದರೂ ಕೂಡ ಹೆಚ್ಚು ಅಂದರೆ 40-50 ಪರಸೆಂಟನವರಗೆ ಮಾತ್ರ ಪ್ಲಾನನಲ್ಲಿ ಎಕ್ಸಪೆಂಡಿಚರ್ ಆಗುತ್ತದೆ ನವೆಂಬರ್ ವರೆಗೆ. ಆದ್ದರಿಂದ ನವೆಂಬರನಲ್ಲಿ, ಡಿಸೆಂಬರನಲ್ಲಿ ಅಧಿಕಾರಕ್ಕೆ ಬಂದಕೂಡಲೇ ಈ ವರ್ಷವೆಲ್ಲಾ ಮಿಸಮ್ಯಾನೇಜ್ ಮಾಡಿದ್ದಾರೆ ಎಂದು ಹೇಳುವುದು. For Example in November 1992 I took over as the Chief Minister. ಮೊದಲು ಕೂಡ ನನದೇ ಮಿನಿಸ್ಟ್ರೀ ಇತ್ತು. I was

also a Minister. The Plan performance was only Rs. 700 Crores. So, I had to manage with Rs. 1250 Crores, plan, we performed fully. I cannot claim 1250 ಕೋಟಿ ನಾವೇ ಮಾಡಿದ್ದೇವೆಂದು ಹೇಳುವ ದೃಷ್ಟಿಯಿಲ್ಲ. ಏನು ಮಾಡುತ್ತೇವೆ ಅಂದರೆ usually, particularly sales tax ಬಾಕಿಯದ್ದು ಕೆಲವು ಸಲ ನಾವು ಮಾಡುತ್ತೇವೆ ಮುಖ್ಯವಾಗಿ ಮೋಸಸ್ ಅವರು 17 ವರ್ಷದ ಹಿಂದೆ Sales tax commissioner ಇದ್ದರು. ಮೋಸಸ್‌ರವರು ಆರ್ಥಿಕ ಕಾರ್ಯದರ್ಶಿಯಾದಂದಿನಿಂದ more expenditure is incurred somewhere in March. ಏನು ಮಾಡುತ್ತಿದ್ದರು ಅಂದರೆ the tax due for the March is normally collected in April; ಆಗ ಏನು ಮಾಡುತ್ತಿದ್ದರು ಅಂದರೆ expenditure and plan requirement ಟಾರ್ಗೆಟ್ ಕೂಡ ಮೀಟ್ ಆಗಲಿಕ್ಕೆ what is due for March we used to collect from March since 16 years. ನಾನು ಅರ್ಥ ಸಚಿವನಾಗಿ ಪ್ರಾರಂಭ ಮಾಡಿದ ವ್ಯವಸ್ಥೆಯಲ್ಲ. We used to collect it. For example, 1994-95 ನಲ್ಲಿ ನೀವು ಕಲೆಕ್ಟ್ ಮಾಡುತ್ತಿದ್ದರೆ you would have got around Rs. 450 to 500 crores. Many states are doing this because the expenditure ಜಾಸ್ತಿ ಬರುತ್ತದೆ. It would not have come to your notice but this is managed by sales Tax Commissioner. Alright, I give credit to you. 16-17 ವರ್ಷದಿಂದ ನಡೆದುಕೊಂಡು ಬಂದಿದ್ದು ತಾವು 450 ಕ್ರೋರ್ಸ್ ಆ್ಯಡ್ ಮಾಡುತ್ತಿದ್ದರೆ. you would have fully performed the plan of 1994-95. There need not have been any shortfall. My suggestion is, alright 94-95 ರಲ್ಲಿ ವೀರಪ್ಪ ಮೊಯಿಲಿಯವರ ಮೇಲೆ ಬ್ಲೇಂ ಹಾಕಬೇಕಾಗಿತ್ತು, ನಾವು ಕಲೆಕ್ಟ್ ಮಾಡಲಿಲ್ಲವೆಂದು ಹೇಳಿ. Atleast this year try to see the plan requirement is met. You may get about Rs. 500 crores ಇದನ್ನು ತಾವು ದಯಮಾಡಿ ವಿಚಾರ ಮಾಡಬೇಕಾಗುತ್ತದೆ. Rs. 400+450 crores because no interest is charged. Without interest that money is coming to your exchequer. ಹೌದು during last year all sales tax officers were very happy with you. The question is you are going to get about Rs. 900 crores. Sales tax officers and merchants, they are all happy with you. This has been the practice ಸಿದ್ಧರಾಮಯ್ಯನವರೇ; ನೀವು ಇದನ್ನು ಯಾವ ರೀತಿ ತೆಗೆದುಕೊಳ್ಳುತ್ತೀರೋ it is left to you. ಇಲ್ಲಿ ನಾನು ಹೇಳುವುದು ಸರಿಯಿಲ್ಲವೆಂದರೆ ಸರಿಯಿಲ್ಲವೆಂದು ಹೇಳಿಬಿಡಿ. I donot mind. But this has been in the practice and hence the state was benefitted. ಏಕೆಂದರೆ ತಾವು ಒಂದು ಮರೆಯಬಾರದು. ಏನೆಂದರೆ you have a target of 8th Five year plan to be performed. ಇದನ್ನು ಮರೆಯಬೇಡಿ. ಏಕೆಂದರೆ during last leg of the five year paln, both 94-95 and 95-96 you will be short of

again Rs. 1000 and add crores to meet the plan taking into account the inflation. ಫಿಗರ್ಸ್‌ಗೆ ನಾನು ಆಮೇಲೆ ಬರುತ್ತೇನೆ. you could have performed it. ಈಗ again, whether you like it or not, 7th five year paln major portion ನಿಮ್ಮದು, ನಿಮ್ಮ ಜನತಾದಳದ ಸರ್ಕಾರ ಇತ್ತು there was a shortfall in Karnataka; again ಈ ವರ್ಷ end of the 8th Five year paln ತಾವೇ ಅಧಿಕಾರಕ್ಕೆ ಬರುತ್ತೀರಿ. The stability and development of the economy will be affected. ಇದು ಬಹಳ ಮುಖ್ಯ. It is not a prestige for Mr. Siddaramaih or for me or for J.H. Patel. But it is the total performance of the State. ಏಕೆಂದರೆ ಈ ಒಂದು ಕಂಟಿನ್ಯೂಟಿ ಈ ಒಂದು ರೀತಿಯಲ್ಲಿ ತಾವು ಬರುತ್ತಾ ಇದ್ದರೆ, We are in the 5th or 6th place earlier in the per capita plan expenditure. Today continuously second and third year you would have occupied No. 1 place in terms of the performance, per capita plan expenditure this year also. Is it not a credit? ಈ ಟ್ಯಾಕ್ಸ್ ಅನ್ನು ಕಲೆಕ್ಟ್ ಮಾಡಿದ್ದಿದ್ದರೆ No C&AG has commented against this. It is not an irregular thing. It is a regular thing. Only thing is, the money which will be with the merchants that will be with the merchants that will be in the Govt. coffer. This is the only difference. ಇದರಲ್ಲಿ ಯಾವ ಇಲ್ಲೀಗ್ಯಾಲಿಟಿ ಇಲ್ಲ ಯಾವುದೂ ಇಲ್ಲ But you have this money with you ಇದರ ಬಗ್ಗೆ ತಾವು ಗಮನ ಕೊಡಬೇಕು. you have to be receptive on this, it is o.k. If you are not receptive ತಾವು ಹೇಳಿದ್ದೇ ಸರಿ ಎಂದರೆ this is your management. This has been a management of so many finance ministers, so many experts in this field. ಇಲ್ಲ, ನಮ್ಮದೇ innovative expertise ಈ ವರ್ಷದ್ದು ಬರುವ ವರ್ಷ ಬರುತ್ತದ, ಬರುವ ವರ್ಷ ಬರುವ ವರ್ಷ ಎಂದು ತಾವು ತಿಳಿದುಕೊಂಡರೆ I donot have a commitment. I have functioned 5 years as a Finance Minister so I have some experience on this. I told you last year ಕೂಡ ಹೇಳಿದೆ the Govt. is not receptive about this. Alright ನಿಮಗ ಪೊಲಿಟಿಕಲ್ಲಾಗಿ ಅದು ಅಡ್ವಾಂಟೇಜಿಯಸ್ ಇತ್ತು; ಏಕೆಂದರೆ ವೀರಪ್ಪ ಮೊಯ್ಲಿಯವರ ಪ್ಲಾನ್ ಫೇಲ್ ಆಗಬೇಕಾಗಿತ್ತು. ತಮ್ಮ ಪ್ಲಾನ್ ನಡೆಯಬೇಕಾಗಿತ್ತು. It is alright. It has been happened. ಆದ್ದರಿಂದ ಈ ವರ್ಷ ಕೂಡ ಏನಾಗಿದ ನಿಮ್ಮ ರೆವಿನ್ಯೂ ಪ್ರೊಜೆಕ್ಷನ್ ಅಂದರ 12, 894.02 crores. ಈ ಪ್ರೊಜೆಕ್ಷನ್ same as 1995-96. For a performance of a plan on Rs. 300 crores ಈಗ ಜಾಸ್ತಿ ಅಮೌಂಟ್, 1000 ಕೋಟಿ ನೀವಿ ಪ್ಲಾನ್ ಮಾಡಿದ್ದೀರಿ the same Projection. Is it realistic? No. 1 ಈ Projectionಗೆ ನೀವು ಹಣ ಸಂಗ್ರಹ ಮಾಡುವುದಕ್ಕೆ ಸಾಧ್ಯವಿದೆಯೋ

ಇಲ್ಲವೋ ಎಂಬುವ ವಿಚಾರ ಒಂದು ಕಡೆಗಿದ್ದರೆ ಮತ್ತೊಂದು ವಿಚಾರವೆಂದರೆ ಇಷ್ಟು ದೊಡ್ಡ ಗಾತ್ರದ ಪ್ಲಾನ್ ಏನು ಹಾಕಿದ್ದೀರಿ ಅದನ್ನು ಮೀಟ್ ಮಾಡುವಂತಹ ಒಂದು realistic budget estimate ಇವಲ್ಲ ಎಂಬುದನ್ನು ತಾವು ಪುನಃ ಗಮನಿಸಬೇಕಾದಂತಹ ಅವಶ್ಯಕತೆ ಖಂಡಿತವಾಗಿಯೂ ಇದೆ ಎಂಬುದನ್ನು ವಿಶೇಷವಾಗಿ ಇಲ್ಲಿ ಸೂಚಿಸಲು ಅಪೇಕ್ಷಪಡುತ್ತಿದ್ದೇನೆ. ಈಗ ತಮ್ಮ ಪ್ಲಾನ್ 4360 ಕೋಟಿ 96-97 ದ್ದು, plan for 95-96, Rs.3758 crores i.e. about Rs. 800 crores. ಜಾಸ್ತಿ ಪ್ಲಾನಿಗೂ 95-96 ಮತ್ತು 96-97ರ ಪ್ರೊಜೆಕ್ಷನ್ ಏನಿದೆ, ಈ ಎರಡೂ ರೆವಿನ್ಯೂ ರಸೀಟ್ಸ್ ಏನಿದೆ, ಇದನ್ನೇ ತಾವು ಮುಂದಿಟ್ಟುಕೊಂಡು ಹೋಗುವುದಾದರೆ ಎಲ್ಲಿ ಸಾಧನೆ ಮಾಡಲಿಕ್ಕೆ ಬರುತ್ತದೆ. There is lot of credibility gap as far as this is concerned. ಆದ್ದರಿಂದ ಇವತ್ತು ಮುಖ್ಯವಾಗಿ ನಾನು ಪ್ಲಾನ್ ವಿಚಾರದಲ್ಲಿ ಹೇಳುವ ದೃಷ್ಟಿಯಲ್ಲಿ ಸ್ವಲ್ಪ ವಿಚಾರ ತಮ್ಮ ಗಮನಕ್ಕೆ ಬರಬೇಕಾದರೆ our target is Rs.12,300 crores for 8th plan ಆದರೆ ನಾವು ಸಾಧನೆ ಮಾಡಬೇಕಾದದ್ದು taking into account the inflation which is suggested by planning commission itself is Rs. 16,192.32 crores. ನೀರು ಕೊಟ್ಟ ಪ್ರೊಜಕ್ಷನ್ ಒಂದು ವೇಳೆ Rs. 4360 crores for 96-97 at the end of the last year of the plan ಇದ್ದರೂ ಕೂಡ shortfall will be 1091 crores ಪ್ಲಾನ್ ಕಡೆಗೆ ನಿಮ್ಮ ಬಜೆಟ್ ಡಾಕ್ಯುಮೆಂಟನ್ನು ಬಹಳ ಸಲ ತಿರುಗಿಸಿ ನೋಡಿದೆ. A Five Year Plan ಬಗ್ಗೆ ನಿಮಗೆ ಕಾಳಜಿ ಇಲ್ಲವೋ ಅದರಲ್ಲಿ ನಿಮಗೆ ಆಸಕ್ತಿ ಇಲ್ಲವೋ, It is as good as a plan holiday commitment ತಮ್ಮ ಆದ್ಯತೆ ಎಷ್ಟು ಮಟ್ಟಿಗೆ ಕೊಟ್ಟಿದ್ದೀರಿ ಅದು ಮೀಟಾಗಬೇಕೆಂಬ ಕನ್‌ಸರ್ನ್, ಏಕೆಂದರೆ any Finance Minister usually as a Finance Minister, I used to be very sensitive about this. ಇಲ್ಲಪ್ಪ ನಾನು ಪ್ಲಾನ್ ಪರಫಾರ್ಮ್ ಮಾಡಬೇಕು I must do it. ಏಕೆಂದರೆ ಇದು ರಾಜ್ಯದ ಅಭಿವೃದ್ಧಿ ಪ್ರಶ್ನೆ. ಇಡೀ ರಾಷ್ಟ್ರದಲ್ಲಿ ಒಂದು ರಾಜ್ಯ ತಲೆ ಎತ್ತಿ ನಿಲ್ಲತಕ್ಕಂತಹ ಪ್ರಶ್ನೆ. ಇದು ಬಿಹಾರ ಅಲ್ಲ ಅಥವಾ ಯು.ಪಿ. ಅಲ್ಲ, ಇದು ಕರ್ನಾಟಕ ರಾಜ್ಯ Financial management ನಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಸ್ಥಾನ ಗಳಿಸಿರುವ ಸಂದರ್ಭದಲ್ಲಿ we should always aim at becoming this plan with the Finance Commission ತಾವೂ ಕೂಡ ಅರ್ಥಸಚಿವರಾದ ಮೇಲೆ ಯೋಜನಾ ಆಯೋಗದ ಹತ್ತಿರ ಚರ್ಚೆ ಮಾಡುವಾಗ we are perform this plan ಎಂದು ಹೇಳಿದ್ದೀರಿ.

12.10 ಪಿ.ಎಂ.

ನಿಮ್ಮ ಅಧಿಕಾರಿಗಳೇ ಅಲ್ಲಿ ಪ್ಲಾನಿಂಗ್ ಕಮಿಷನಲ್ಲಿ ಡಿಸ್‌ಕಷನ್ ಮಾಡಿದ್ದಾರೆ. 8271.41 ಕೋಟಿ ರೂ. ಇದ್ದರೆ 95-96ನಲ್ಲಿ Rs. 3826.48 crores you should have spent. We are spending only Rs. 3,000 crores. There is a shortfall or Rs. 800 crores. ಅಲ್ಲೇ 800 ಕೋಟಿ ರೂ. ಷಾರ್ಟೇಜ್ ಆಗಿದೆ. 96-97ರಲ್ಲಿ ಕೋಟಿ ರೂ.ಗಳ ಈಗ ನೀವು

4300 ಕೋಟಿ ರೂ. ಎಂದು ಸ್ವಲ್ಪ ಜಾಸ್ತಿಮಾಡಿದ್ದೀರಿ. ಒಟ್ಟು it should constitute Rs. 16,192.32 crores ತಾವು ಖರ್ಚು ಮಾಡಬೇಕಾಗುವಂತಹ ಅವಶ್ಯಕತೆ ಇತ್ತು. ಆದರೆ ನೀವು ಇದರ ಕಡೆಗೆ ವಿಶೇಷವಾದ ಗಮನ ತೆಗೆದುಕೊಳ್ಳಬೇಕಾಗಿತ್ತು. I think the entire Cabinet should apply its mind. It is the last year of the plan. See that there is no shortfall. ತಮ್ಮ ಡಿಸ್‌ಕಷನ್ ಇವತ್ತು ಪೇಪರಿನಲ್ಲಿ ಇದೆ. ನಮ್ಮ ಕಾಲದಲ್ಲಿ ಅಲ್ಲ ನಿಮ್ಮ ಪೀರಿಯಡ್‌ನಲ್ಲೇ ಏನು ಹೇಳಿದ್ದಾರೆಂದರೆ, It is you own, I don't want to quote from my period, ಪ್ಲಾನಿಂಗ್ ಕಮಿಷನ್‌ನವರು ಏನು ಹೇಳಿದ್ದಾರೆಂದರೆ :

In other words, the State would be utilising about 67% of the 8th plan outlay in the first three years itself. The higher outlays during 1993-94 and 1994-95 are due to very good position of the State's own resources for funding the plan. Considering this trend increase in the size of the annual plans particularly with good financial position of the State's resources, it is quite abvious that the total 8th plan outlay....

``ಎಂಬ ಮಾತನ್ನು ಪ್ಲಾನಿಂಗ್ ಕಮಿಷನರ್‌ರವರ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. 95-96ರ ಪ್ಲಾನ್ ಬಗ್ಗೆ ಅವರ ಜೊತೆ ಮಾತುಕತೆಯಾದಾಗ ಈ ರಿಮಾರ್ಕ್ಸ್ ಕೊಟ್ಟಿದ್ದಾರೆ.

Of course you may give a different certificate to the previous Government but this is the certificate given by the Planning Commission. ಸಿಎಜಿ ಪೇಜ್ 12 ಆಫ್ ದಿ ಆಡಿಟರ್ ಜನರಲ್ ಆಫ್ ಇಂಡಿಯಾ 31.3.94ನೇ ಒಂದು ವರದಿ ಕೊಟ್ಟಿದ್ದಾರೆ. ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್ ಹಿಂದೆ ಹೀಗಾಗುತ್ತಿತ್ತು. The excess in slaes tax collection is attributed to the better administrative efforts. ಸೇಲ್ಸ್ ಟ್ಯಾಕ್ಸ್ ಬಗ್ಗೆ ಅವರು ವಿಶೇಷವಾದ ಮಾತುಗಳನ್ನು ಹೇಳಿದ್ದಾರೆ. ಇನ್ನು ಮುಖ್ಯವಾಗಿ ಎಕ್ಸ್‌ಪೆಂಡಿಚರ್ ಟ್ರೆಂಡ್ ಅನ್ನು ನಾನು ನವೆಂಬರ್ ಕೊನೆಗೆ expenditure trend ಏಕೆಂದರೆ ಯಾವಾಗಲೂ ಈ ಮಾತು ಬರುತ್ತಿರುತ್ತದೆ. 500 ಕೋಟಿ ನಮ್ಮ ತಲೆ ಮೇಲೆ ಹಾಕಿ ಹೋದರು, ನಮ್ಮ ಮೇಲೆ ಇಷ್ಟು ಬರ್ಡನ್ ನಮ್ಮ ಮೇಲಿತ್ತು ಎಂದು ಬಹಳ ವಿಚಾರ ಚರ್ಚೆಗೆ ಇಲ್ಲಿ ಬರುತ್ತದೆ. 88-89ರಲ್ಲಿ the percentage of expenditure on the plan incurred was only 36% during 1989-90 it was 48%, 90 to 93- 30% 93-94, 37% 94-95-38%, inspite of the election year. ಆದ್ದರಿಂದ ನವೆಂಬರಿನಲ್ಲಿ ಖರ್ಚು ಬರುತ್ತದೆ. the income, because of the policy of the particular year or earlier year, that will percolate ಅದು ಫ್ಲೋ ಆಗುತ್ತಲೇ ಇದೆ. 1993-94, as on that day, that year, according to the Planning Commission's Monthly review for monitoring the Indian

economy, ಬಾಂಬೆಯಲ್ಲಿರತಕ್ಕಂತಹ ಇನ್ಸ್ಟಿಟ್ಯೂಷನ್ ರಕಗ್ನೈಸಡ್ ಇನ್ಸ್ಟಿಟ್ಯೂಷನ್ 92-93ನಲ್ಲಿ ಪರ್ ಕ್ಯಾಪಿಟಾ ಪ್ಲಾನ್ ಎಕ್ಸ್‌ಪೆಂಡಿಚರ್‌ಗೆ ಕರ್ನಾಟಕ 6ನೇ ಪ್ಲೇಸ್‌ನಲ್ಲಿದ್ದರೆ 93-94ರಲ್ಲಿ ಫಸ್ಟ್ ಪ್ಲೇಸ್ 94-95ಗೆ suppose you have performed in a normal way, ಕಲೆಕ್ಷನ್ ಮಾಡಿಕೊಂಡು ತಾವು ಹೋಗುತ್ತಿದ್ದರೆ again the Karnataka would have occupied number one position in the per capita plan expenditure ಎಂಬುದನ್ನು ತಾವು ವಿಶೇಷವಾಗಿ ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಕರ್ನಾಟಕ share in ಆಲ್‌ಸ್ಟೇಟ್ ಪ್ಲಾನ್ ಔಟ್ ಲೇ ಕೂಡ, ಇದನ್ನೂ ಬಹಳ ಸೂಕ್ಷ್ಮತೆಯಿಂದ ನಾವು ಕಾದಿರಿಸಿಕೊಂಡು ಹೋಗಬೇಕಾಗುತ್ತದೆ. ಹಿಂದೆ ಒಂದು ಕಾಲದಲ್ಲಿ 5ನೇ ಪ್ಲಾನ್‌ನಲ್ಲಿ 5.5 ಪರ್ಸೆಂಟ್ ನಮ್ಮದು ಸ್ಥಾನ ಇದ್ದರೆ 7.5 ನಲ್ಲಿ ಬಹಳ ಕೆಳಗೆ ನಮ್ಮದು ಇಳಿಯಿತು. because that was the period which was covered by your Government earlier. 4.4 ಪರ್ಸೆಂಟ್ ಇತ್ತು. When we left it is 8.5% 93-94 ನಲ್ಲಿ 8.9 ಪರ್ಸೆಂಟ್, the highest share in all state plan outlay was occupied by Karnataka and my request is that you also continue the same efforts. ಎನ್ನುವುದನ್ನು ನಾನು ತಮಗೆ ವಿಶೇಷವಾಗಿ ಹೇಳಬೇಕೆಂದು ಅಪೇಕ್ಷಿಪಟ್ಟಿದ್ದೇನೆ. ಇನ್ನು ಮುಖ್ಯವಾಗಿ ಇರಿಗೇಷನ್ ಬಗ್ಗೆ ತಾವು ಬಹಳ ಪ್ರಾಮುಖ್ಯತೆ ಕೊಟ್ಟಿದ್ದೀರಿ. ಇನ್ನು ಅನೇಕ ಸದಸ್ಯರು ಮಾತನಾಡುವವರಿದ್ದಾರೆ ನಾನು ಅದನ್ನು ವಿಸ್ತರಿಸಲಿಕ್ಕೆ ಹೋಗುವುದಿಲ್ಲ. ಇರಿಗೇಷನ್‌ನಲ್ಲಿ ಮುಖ್ಯವಾಗಿ ಕೃಷ್ಣ ಜಲಭಾಗ್ಯ ನಿಗಮ. ಇದನ್ನು ನಾವು ಕಾನಸ್ಟಿಟ್ಯೂಟ್ ಮಾಡಿದ್ದೇವೆ. because of the liberalisation policy. ಹಿಂದೆ ಎಲ್ಲಾ ಯಾವುದೇ ನಮ್ಮ ಸರಕಾರದ ಬಾಡಿಗಳು ಕಾರ್ಪೋರೇಷನ್‌ಗಳು ನೇರವಾಗಿ ಮಾರ್ಕೆಟ್‌ಗೆ ಹೋಗಿ ನೇರವಾಗಿ ಮಾಡಲು ನಮಗೆ ಲಿಮಿಟೆಡ್ ಇತ್ತು. that used to come in the plan itself. ಏನಾದರೂ ಒಂದು ಬಾರೋ ಮಾಡುವುದಿದ್ದರೆ ಡಿಬೆಂಚರ್ ಬಾರೋ ಮಾಡುವುದು ಇದ್ದರೆ ನಮಗೆ ಎಷ್ಟು ಪ್ಲಾನ್ ಆಲೊಕೇಷನ್ ಇದೆ ಅಷ್ಟಕ್ಕೆ ಹೊರತು ಅದರ ಮೇಲೆ ಇರಲಿಲ್ಲ. ಡಾ|| ಮನಮೋಹನ್ ಸಿಂಗ್‌ರವರ ಲಿಬರಲೈಸೇಷನ್ ಪಾಲಿಸಿ ಬಂದ ಮೇಲೆ ರಾಜ್ಯ ಸರಕಾರದ ಆರ್ಗನೈಸೇಷನ್ could also enter into the market ಬಾರೋ ಮಾಡಬಹುದು, ಬಾಂಡ್ ಎತ್ತಬಹುದು. ಹಿಂದೆ ಅದು ಸಾಧ್ಯ ಇರುತ್ತಿರಲಿಲ್ಲ. ಅದು ಸಾಧ್ಯವಿದೆ ಎಂದು ಹೇಳಿದ ಮೇಲೆ we discussed with the Central Government. They said, we will permit. Even I deputed some officers to the world bank, they also said, yes, that will not be overlapping. This can be an additionality to the ideal loan or the additionality to the budgetary su. Krishna Jala Bhagya Nigama ಬಗ್ಗೆ ಒಂದು you should not lose sight. The idea is, the very approach is, the thrust whatever you rise, through the market, from Jala Bhagya Nigama, this should be an additionality to the mormal Budget. ಅದರ You have lost

sight of this particular aspect. When we formed this Jala Bhagya Nigam. ಇದು ಬಹಳ ಮುಖ್ಯವಾಗಿತ್ತು you should go on stepping yp your budgetary allocation. ಅದನ್ನು ಕಡಿಮೆ ಮಾಡಬಹುದು. 24 ಪರ್ಸೆಂಟ್ ಇದ್ದರೆ 30-32 ಪರ್ಸೆಂಟ್ ಇನ್‌ಕ್ರೀಸ್ ಮಾಡಬಹುದು. ಅದ್ದರಿಂದ ಜಲ ಭಾಗ್ಯ ನಿಗಮಗಳಲ್ಲಿ ಏನು ರೈಸ್ ಮಾಡುತ್ತಾರೆ. that will be the plus.

ಇದು ಬಹಳ ಸ್ಪಷ್ಟವಾದಂತಹ ನೀತಿ ನಮ್ಮ ಸಚಿವ ಸಂಪುಟದ ನಿರ್ಣಯ ನೋಡಿ ಜಲ ಭಾಗ್ಯ ನಿಗಮ ಮಾಡತಕ್ಕಂತಹ ಸಂದರ್ಭದಲ್ಲಿ ಏನು ನೀತಿ ಇತ್ತು ಆ ನೀತಿ ಇವತ್ತು distort ಆಗಿದೆ. ಶಿಥಿಲವಾಗಿದೆ. ದಯಮಾಡಿ ಮಾಡಬೇಡಿ. budgetary support should be there. ಇದನ್ನು ಡೀವಿಯೇಟ್ ಮಾಡುತ್ತಿದ್ದೀರಿ. ದಯಮಾಡಿ ಡೀವಿಯೇಟ್ ಮಾಡಬೇಡಿ, ಆದರೆ ಈಗ ಅದಂತಹ ಪರಿಸ್ಥಿತಿ. ಜಲ ಭಾಗ್ಯ ನಿಗಮ ಖಾಸಗಿ ಇನವೆಸ್ಟಮೆಂಟ್ ಇನ್ನೇನು ಕಷ್ಟ ಇದೆ? we have set everything in order. We have taken decision ಎಲ್ಲಾ ಇತ್ತು. ಬಹುಶಃ ನಾವೇನು ಇದ್ದಿದ್ದರೆ ಡಿಸೆಂಬರ್ ಜನವರಿಯಲ್ಲಿ ಅವರು ಅಂದರೆ ಪ್ರೈವೇಟ್ ಬ್ಯಾಂಕಿನವರಿಗೆ ಬರೆದಿರುತ್ತಿದ್ದರು. ಇನವೆಸ್ಟರ್ಸ್ ಬ್ಯಾಂಕಿನವರು ಮತ್ತು ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್‌ನವರು ಕಾಂಟ್ರಿಬ್ಯೂಟ್ ಮಾಡುತ್ತಾರೆ. 180 ಕೋಟಿ is not a big thing. What is important is the public investment ತಾವು ಹೇಳಿದ ಹಾಗೆ ಸೆಬಿ ಅಪ್ರೂವಲ್ ಮಾಡಬೇಕು. ಅದನ್ನೆಲ್ಲಾ ಮಾಡಬೇಕಾಗುತ್ತದೆ. You have to sort it out. But you took time up to September or so even private investment 180 ಕೋಟಿಯನ್ನು ಎತ್ತಲಿಕ್ಕೆ ಅಷ್ಟು ಸಮಯ ಏಕೆ ಬೇಕಾಯಿತು? ಇದರ ಪರಿಣಾಮವೇನಾಯಿತು. Since the money was available in the market. we should have rised it ಬಹುಶಃ ಒಂದು ಸಾವಿರ ಕೋಟಿ ಮಿರ್ಜ್ ಮಾಡಲಿಕ್ಕೇನೂ ಕಷ್ಟವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ 2 ಸಾವಿರ ಇಸವಿಯ ಒಳಗೆ ಹಣ ಪೂರೈಕೆ ಮಾಡುವುದಕ್ಕೆ ಏನು ತೊಂದರೆ ಇಲ್ಲವೆಂದು. because that much of money is available in the market. That is one figt from our Prime Minister and also from Dr. Manmohan Singh ಆ ಹಣವನ್ನು ಜೋಡಿಸತಕ್ಕಂತಹ ಪರಿಸರ, ಆ ವೇದಿಕೆ ತಯಾರು ಮಾಡಿಕೊಟ್ಟಾಗ, ಅವರು ವೇದಿಕ ಮಾಡಿಕೊಟ್ಟ ಕೂಡಲೇ ನೃತ್ಯ ಡ್ಯಾನ್ಸ ಮಾಡತಕ್ಕಂತಹ ಕೆಲಸ ಯಾವು ಮಾಡಬೇಕಾಗುತ್ತದೆ, ನಾವು ಮಾಡಬೇಕಾಗುತ್ತದೆಯೇ? ನಮಗೆ ಗೊತ್ತಿಲ್ಲ. ವೇದಿಕೆ ತಯಾರು ಮಾಡಿದ್ದರೂ ಕೂಡ ನಾವು ಅದರಲ್ಲಿ ನೃತ್ಯ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿದರೆ ನಮ್ಮ ವಿಫಲತೆ ತೋರಿಸುತ್ತದೆಯೇ ಹೊರತು ಬೇರೇನೂ ಅಲ್ಲ. ಇಡೀ ರಾಷ್ಟ್ರದ ಆರ್ಥಿಕ ಮಾರುಕಟ್ಟೆ ವ್ಯವಸ್ಥೆಗೆ ಅದು ರಿಫ್ಲೇಕ್ಷನ್ ಅಲ್ಲ. ಇದನ್ನು ಮಾಡಬೇಕಾಗಿತ್ತು. ತಾವು ಇದರಲ್ಲಿ ಹೇಳಿದ್ದೀರಿ. 430 ಕೋಟಿ ಮಿರ್ಜ್ ಮಾಡುತ್ತೇವೆಂದು ಅಂದರೆ ಇಲ್ಲಿ 200 ಕೋಟಿ ಬಡ್ಜೆಟ್‌ನಲ್ಲಿ ಕೊಟ್ಟಿದ್ದು ಇನಕ್ಲೂಡಿಂಗ್ ಈಕ್ವಿಟಿ

ಟು ದಿ ಕೃಷ್ಣ ಭಾಗ್ಯ ನಿಗಮ. ಇನ್ನು 180 ಕೋಟಿ ನಾವು ಮಾಡುತ್ತೇವೆಂದು ಹೇಳಿದ್ದೀರಿ. 430 ಕೋಟಿಯನ್ನು ಇವತ್ತು ನೀವು ಖರ್ಚು ಮಾಡಲಿಲ್ಲ. ನನಗೆ ಗೊತ್ತಿದ್ದ ಮಟ್ಟಿಗೆ as on today what you have spend is Rs. 370 crores ಅದರಲ್ಲಿ 60 ಕೋಟಿ ಆರ್ ಅಂಡ್ ಆರ್‌ಗೆ ಹೋಗಿದೆ. ವರ್ಕ್ಸ್‌ಗೆ ಹೋಗಲಿಲ್ಲ. 310 ಕೋಟಿ ಮಾತ್ರ ಅದರಲ್ಲಿ ಕ್ಲೈಮ್ಸ್ ಸೆಟಲ್ ಮಾಡಲಿಕ್ಕೆ ಎಷ್ಟು ಹೋಗಿದೆಯೋ ಅಥವಾ ರಿಯಲ್ ವರ್ಕ್ಸ್‌ಗೆ ಹೋಗಿದೆಯೋ ಇದು ಪ್ರಶ್ನೆ ಇದು ನಮ್ಮ ವಿಫಲತೆಯನ್ನು, ಸರ್ಕಾರದ ವಿಫಲತೆಯನ್ನು ಪ್ರತಿಬಿಂಬಿಸುತ್ತದೆಯೇ ಹೊರತು ಮತ್ತೇನೂ ಇಲ್ಲ. ತಮ್ಮಲ್ಲಿ ಆ ಇಚ್ಛಾಶಕ್ತಿ ಇರಬೇಕಾಗುತ್ತದೆ. ಆ ದಕ್ಷತೆಯನ್ನು ತಾವು ತೋರಿಸಬೇಕಾಗುತ್ತದೆ. You should have definitely come not less than 800 ಕೋಟಿ ರೂಪಾಯಿ ವರೆಗೆ, ಏನು ಮಾಡಿದಿರಿ, ಸುಮಾರು ಒಂದು ವರ್ಷದ ಮಾತುಕತೆ, ಅದು ಬೇಡ, ಪೀಸ್ ವರ್ಕ್ ಬಡೇ, ಕಾಂಟ್ರಾಕ್ಟ ಬೇಡ, ಪುನಃ ಯಾರಿಗೆ ಕೊಟ್ಟಿರಿ ಕಂಟ್ರಾಕ್ಟ್? ಪೀಸ್ ವರ್ಕ್‌ಗೆ ಕೊಟ್ಟಿರಿ. ಏನೂ ಸುಧಾರಣೆಯನ್ನು ಮಾಡಲಿಲ್ಲ. ಸುಧಾರಣೆ ಮಾಡಬಹುದಿತ್ತು. We welcome that. ನೀವು ಬೇಕಾದರೆ ಕಂಟ್ರಾಕ್ಟ್ ಮಾಡಿ, ಟೆಂಡರನ್ನು ಕರೆದು ಸರಿಯಾದ ರೀತಿಯಲ್ಲಿ ಬೇಕಾದರೆ ಮಾಡಿ. ಆದರೆ ಅಟಲೀಸ್ಟ್ ಅದನ್ನು ಸ್ವಲ್ಪ ಹಿಂದೆ ಆ ಕ್ರಮ ತೆಗೆದುಕೊಳ್ಳುತ್ತಿದ್ದರೆ ನೀವು ಸುಮಾರು 800 ಕೋಟಿ ರೂಪಾಯಿಗಳನ್ನು ಜೋಡಣೆ ಮಾಡಬಹುದಿತ್ತು. ಖರ್ಚು ಮಾಡಬಹುದಿತ್ತು. ಇವತ್ತು ಈ ಬಜೆಟ್‌ನಲ್ಲಿ ಬರೀ 250 ಕೋಟಿ ಖರ್ಚು ಮಾಡಿದರೆ ಇದು ಸಮರ್ಪಕವಾದ ಕೆಲಸವಾಗುವುದಿಲ್ಲ. ನಿಂತ ಹೆಜ್ಜೆಯಿಂದ ಮುಂದೆ ಹೋಗಲಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಶ್ರೀರಂಗದೇವರಾಯಲು : ಪೀಸ್ ವರ್ಕ್ ಕೊಟ್ಟಿರುವುದು ಅವರಿಗೆ ಬೇಕಾದಲ್ಲಿ ಕೊಟ್ಟಿದ್ದಾರೆ. ಉಳಿದ ಕಡೆ ಟೆಂಡರ್ ಕಾಲ್ ಮಾಡಿ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಈಗ ಕಾವೇರಿಯಲ್ಲಿ ಬೆಂಕಿ ಉರಿಯುತ್ತಿದೆ, ಸೂಕ್ಷ್ಮವಾದಂಥ ಪರಿಸ್ಥಿತಿ ಅಲ್ಲಿದೆ ಎಂದು ಹೇಳುತ್ತೇನೆ. ನಿಮ್ಮ ವರುಣಾ ಇರಬಹುದು. ಅಥವಾ ಹೇಮಾವತಿ ಇರಬಹುದು. ನಾನೊಮ್ಮೆ ಹೇಮಾವತಿಗೆ ಇನ್ಸ್‌ಪೆಕ್ಷನ್‌ಗೆ ಹೋಗಿ ಮಾರ್ಚಿ 1995ಕ್ಕೆ ನೀರು ಕುಡಿಯಲಿಕ್ಕೂ ಕೂಡ ತುಮಕೂರಿಗೆ ಬರಬೇಕು ಎಂದು ಹೇಳಿದೆ. 19 ಕೋಟಿ ರೂಪಾಯಿ ಒಂದು ತಿಂಗಳಿಗೆ ಆ ತುಮಕೂರು ಕೆನಾಲ್‌ಗೆ ಖರ್ಚು ಮಾಡಬೇಕು ಎಂದು ಹೇಳಿ ಕ್ಯಾಲೆಂಡರ್ ಹಾಕಿ I used to personally monitor it. ಅದು ಬರುತ್ತಾ ಇತ್ತು. ಅದು ಸ್ವಲ್ಪ ಹೇಳಿದ್ದೀರಿ. ಅದು ಪೀಸ್ ವರ್ಕ್ ಆಯಿತು, ಮತ್ತೊಂದು ಆಯಿತು ಎಂದು. ನಾನು ಹೇಳಿದೆ, ನೀವು ಎನ್‌ಕ್ವೈರಿ ಮಾಡಿ ಎಂದು. ಆ ಎನ್‌ಕ್ವೈರಿ ಏನಾಯಿತೋ ಗೊತ್ತಾಗುತ್ತಿಲ್ಲ. ಆದರೆ ಎನಕ್ವೈರಿಯನ್ನು ಯಾರ ಮೇಲೆ ಮಾಡುತ್ತಾರೋ ಗೊತ್ತಾಗುತ್ತಿಲ್ಲ. ಆ ಅಧಿಕಾರಿಗಳು ಹೋಗುವ ಕಡೆಗೆ ಹೋಗಿ ಆಯಿತು. ಆದರೆ ಯಾರ ಮೇಲೆ ನೀವು ಎನಕ್ವೈರಿ ಮಾಡುತ್ತೀರೋ ನೀವು ಮಾಡಿ. ನಮಗೇನೂ ಅಡ್ಡಿ ಇಲ್ಲ. ಯಾರಿಗೂ ಅಡ್ಡ ಬರುವುದಿಲ್ಲ. We will not suppress anybody. You must have an enquiry. Let there be transperancy in the administration.

ಆದರ ಇವತ್ತು ಕೆಲಸವೇ ಆಗಲಿಲ್ಲ, ಎನಕ್ವೈರಿ ಏನು ಮಾಡುತ್ತೀರೋ ನೀವು ಮಾಡಿ. ಆದರೆ ನಮಗೆ ಕೆಲಸವಾಗಿರಬೇಕು. ಏಕೆಂದರೆ ಇದು ಕಾದು ಕುಳಿತುಕೊಳ್ಳುವುದಲ್ಲ. Every minute you spend ನಮ್ಮ ನೀರಿನ ಹಕ್ಕಿನ ಒಂದು ರಕ್ಷಣೆಯ ಪ್ರಶ್ನೆ ಇದೆ ಇದರಲ್ಲಿ. ಇದನ್ನು ಮರೆಯಬಾರದು. ಅದನ್ನು ಬಹಳ ವಿವರವಾಗಿ ವಿಶ್ಲೇಷಣೆ ಮಾಡುವುದಕ್ಕೆ ಇವತ್ತು ನಾನು ಹೋಗುತ್ತಿಲ್ಲ. ತಮಗ ಗೊತ್ತಿದೆ, ಸುಮಾರು 20 ವರ್ಷಗಳ ಕಾಲ ಆ ಚಟ್ಟನಗೆರೆ ಕನಾಲ್ ಆ ಟನಲಿನ ಕೆಲಸ ನಿಂತುಹೋಯಿತು. We removed that bottleneck. ನೀರು ಹರಿದು ಬರುವ ಹಾಗೆ ಮಾಡಿದ್ದೇವೆ. ಬಾಗೂರು ನವಿಲೆ ಟನಲ್ ಸುಮಾರು ಇಪ್ಪತ್ತು ವರ್ಷಗಳ ಕಾಲ ಅದು ನೀರು ಮುಂದೆ ಹೋಗದೆ ನಿಂತಿತ್ತು. We opened up that. ಏಕೆಂದರೆ bottleneck ರಿಮೂವ್ ಮಾಡಿದರೆ ಮೂರುನಾಲ್ಕು ಲಕ್ಷ ಹೆಚ್ಚಿಗೆ ನೀರು ಬರುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ನಾವು ಬಿಟ್ಟು ಹೋಗಿದ್ದೇವೆ. ತಾವು ಮುಂದೆ ಮಾಡುವ ಕೆಲಸ ಅಷ್ಟು ಕಷ್ಟ ಇರಲಿಲ್ಲ. ತಾವು ಮಾಡಬೇಕಾಗಿತ್ತು. ಆದ್ದರಿಂದ ಅಲ್ಲಿ ತಾವೇನು ಮಾಡಿದಿರಿ, ಮೂರು ನೂರು ಕೋಟಿ ರೂಪಾಯಿ ಕೊಡುತ್ತೇನೆ ಎಂದು ಹೇಳಿ 95-96ರ ವರ್ಷದಲ್ಲಿ ನೀವು ಖರ್ಚು ಮಾಡಿರತಕ್ಕಂಥದ್ದು 170 ಕೋಟಿ ರೂಪಾಯಿ ಮಾತ್ರ. ಇದು ಎಷ್ಟು ದುರದೃಷ್ಟಕರ ನೋಡಿ. ಬರೀ 170 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿರತಕ್ಕಂಥದ್ದು. ನಮಗೂ ಸ್ವಲ್ಪ ಮಾಹಿತಿ ಇರುತ್ತದೆ. ಅದನ್ನು ನೀವು ಹೆಚ್ಚು ಮಾಡಿ. I wish that you spend more. I am not a pessimist. I hope you spend more 170 ಕೋಟಿ ರೂಪಾಯಿ ಖರ್ಚು ಮಾಡುವ ಪರಿಸ್ಥಿತಿಯಲ್ಲಿ ಮಾತ್ರ ಇದ್ದೇವೆ. action is now being taken to execute the work. 14-15 ತಿಂಗಳುಗಳ ಕಾಲ ಕೆಲಸ ಮಾಡುವ ಒಂದು ಕ್ರಿಯಾಶೀಲತೆಯನ್ನೇ ತೋರಿಸಲಿಲ್ಲ. ದಕ್ಷತೆ ಬಿಡಿ. ಇನ್‌ಷಿಯೇಟೀವ್‌ನ್ನೇ ತೆಗೆದುಕೊಳ್ಳಲಿಲ್ಲ ತಾವು. ಆದ್ದರಿಂದ ಇವತ್ತು ಇಂಥಹ ಬಹು ಮುಖ್ಯವಾದಂಥ ಕರ್ನಾಟಕ ಜನರ ಜೀವಾಳಗಿರುವ ಪ್ರಾಜೆಕ್ಟ್‌ನಲ್ಲಿ ಕಾವೇರಿ ಅಥವಾ ಕೃಷ್ಣಾ ನದಿ ನೀರಿನಲ್ಲಿ ತಾವು ಒಂದು ರೀತಿಯ ನಿರ್ಲಕ್ಷತೆಯನ್ನು, ಒಂದು ರೀತಿ. ಆ ದಕ್ಷತೆಯನ್ನು ಒಂದು ರೀತಿಯ non-sensitiveness ಒಂದು ಸೂಕ್ಷ್ಮತೆ ಇಲ್ಲದೇ ಇರತಕ್ಕಂಥ ಒಂದು ಮನೋಭೂಮಿಕೆಯನ್ನು ಸರ್ಕಾರದ ತೋರಿಸಿಕೊಟ್ಟರೆ ಮುಂದೆ ಏನಾಗಬೇಕು? ಬಾಕಿ ಪ್ರಾಜೆಕ್ಟ್‌ಗಳ ವಿಚಾರ ಎಲ್ಲವನ್ನೂ ನಾನು ವಿವರಣೆ ಮಾಡಲಿಕ್ಕೆ ಹೋಗುವುದಿಲ್ಲ. ಆ ಬೇಡಿಕೆ ಬಂದಾಗ ಅದನ್ನು ಪ್ರತ್ಯೇಕವಾಗಿ ಮಾತನಾಡಲಿಕ್ಕೆ ಸಾಧ್ಯವಿದೆ. ಇದನ್ನು ನಾನು ಅಷ್ಟಕ್ಕೆ ನಿಲ್ಲಿಸಲಿಕ್ಕೆ ಅಪೇಕ್ಷಪಡುತ್ತಿದ್ದೇನೆ. ಇನ್ನು ವಿದ್ಯುತ್ತಿನ ಪ್ರಶ್ನೆ. ವಿದ್ಯುತ್ತಿನ ಬಗ್ಗೆ ಈಗಾಗಲೇ ಒಂದು ರಿಮಾರ್ಕ್‌ನ್ನು ಕೊಟ್ಟಿದ್ದೇನೆ. ನನ್ನ ಅಂದಾಜು ಪ್ರಕಾರ 10 ರಿಂದ 12 ಪರ್ಸೆಂಟ್ ವಿದ್ಯುತ್ ಕಡಿತ ಸಾಕಾಗುತ್ತದೆ. 20 ಪರ್ಸೆಂಟ್, 40 ಪರ್ಸೆಂಟ್ ಲೋಡ್ ಷಡ್‌ಡೌನ್ ಮಾಡುವ ಅವಶ್ಯಕತೆ ಇಲ್ಲ. ಏಕೆ ಈ ರೀತಿಯ ವೈಪರೀತ್ಯ ಒಮ್ಮೆಲೆ ಸಡನ್ ಆಗಿ ಬಂತು ಎಂದು ಇದು it is a puzzle for me. ಈಗ ಮೊನ್ನೆ ತಾನೇ ತಮಗೆ ಗೊತ್ತಿದೆ. ಮಹಾರಾಷ್ಟ್ರದಿಂದ ಒಂದು ಮಿಲಿಯನ್ ಯೂನಿಟ್ ಬರುತ್ತಿತ್ತು. ಈಗ ಮೂರು ಮಿಲಿಯನ್ ಯೂನಿಟ್ ಬರುತ್ತಿದೆ. ಆದರ what is the improvement you

have shown? ರೂರಲ್ ಏರಿಯಾವಲ್ಲಿ ಇವತ್ತಿಗೂ ಕೂಡ ಆಲಟರ್‌ನೇಟಿವ್ ಡೇಸ್ ಬರುತ್ತಿವೆ ಅಥವಾ ಎಂಟು ಒಂಭತ್ತು ಗಂಟೆ ವಿದ್ಯುತ್ತೇ ಇಲ್ಲ. ಉಳಿದ ಸಮಯದಲ್ಲಿಯೂ ಕೂಡ ವಿದ್ಯುತ್ ಖಾತರಿ ಇಲ್ಲ. ಸೆಂಟ್ರಲ್ ಗ್ರಿಡ್‌ನಿಂದ ಸುಮಾರು 13 ಮಿಲಿಯನ್ ಯೂನಿಟ್ ದಿವಸಕ್ಕೆ ಬರುವುದು 14 ಮಿಲಿಯನ್ ಯೂನಿಟ್ as on today ಬರುತ್ತಿದೆ. ಅದರೂ ಕೂಡ ನಿಮ್ಮ ಸರ್ಕಾರದಲ್ಲಿ ಪ್ರಪೋಸಲ್ ಮತ್ತು ಮಾಡತಕ್ಕಂಥ ಕಾರ್ಯಕ್ರಮಗಳಿಗೂ ಕೂಡ ತಾಳಮೇಳ ಇಲ್ಲದೇ ಇರುವ ಒಂದು ವ್ಯವಸ್ಥೆ. ಏಕೆ ಹೀಗಾಯಿತು ಎಂದು ನನಗೂ ಕೂಡ ಅರ್ಥವಾಗುತ್ತಿಲ್ಲ. when we could manage without power cut for 2 years, ನಿಮಗೆ ಏಕೆ ಸಾಧ್ಯವಾಗುತ್ತಿಲ್ಲ? ತಮಗೆ ಗೊತ್ತಿದೆ, ಸಿಸ್ಟ್ ಇಂಪ್ರೂವ್‌ಮೆಂಟಿಗೆ ಸುಮಾರು ಒಂಭೈನೂರು ಕೋಟಿ ರೂಪಾಯಿ ಯೋಜನೆಯನ್ನು ನಾವು ಹಾಕಿ ಅದರಲ್ಲಿ ಸುಮಾರು 600-700 ಕೋಟಿ ರೂಪಾಯಿ ಖರ್ಚು ಮಾಡಿ ಅನೇಕ ಸಬ್‌ಸ್ಟೇಷನ್ ವರ್ಕ್ ಎಷ್ಟು ಸ್ಪೀಡಾಗಿ ಎಲ್ಲಾ ಕಡೆ ಆಗುತ್ತಿದೆ. ಹೊಸ ಲೈನ್‌ಗಳನ್ನು ಕೂಡ ಹಾಕಿದ್ದೇವೆ, ಗಂಗಾವತಿಯಿಂದ ದಾವಣಗೆರೆ, ಹೂಡಿಗ line was completed. ಅಂಥ ಹೊಸ ಲೈನ್‌ಗಳನ್ನು ಹಾಕಿದ್ದೇವೆ. ನಾನು ಭಾಷಣ ಮಾಡುವಂಥದ್ದಲ್ಲ. ಹೊಸಲೈನ್‌ಗಳನ್ನು, ಸಬ್‌ಸ್ಟೇಷನ್‌ಗಳನ್ನು ಹಾಕಿದ್ದೇವೆ. ಇವತ್ತು 950 ಮೆಗಾವ್ಯಾಟ್ ಪವರ್‌ನ್ನು ಇವತ್ತು ನಾವು ಗ್ರಿಡ್‌ಗೆ ಒದಗಿಸಿದ್ದೇವೆ. ಇದು ವಿವರ ಸಾಕಷ್ಟು ನನ್ನ ಹತ್ತಿರ ಇವತ್ತು ಇದೆ. ಈವತ್ತು ವರಾಹಿ ಇರಬಹುದು. ಅಥವಾ 3rd or 4th Unit of Raichur ಇರಬಹುದು. ಅಥವಾ ಯಲಹಂಕದಲ್ಲಿರುವ ಡೀಸಲ್ ಜನರೇಟರ್ ಸೆಟ್ ಇರಬಹುದು. ಇದೂ ಕೂಡ 22½ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಇದ್ದದ್ದು ಅದನ್ನು ಸುಮಾರು 18.40 ಪರ್ಸೆಂಟ್‌ಗೆ ಇಳಿಸಿದ್ದೇವೆ. ಏಕೆಂದರೆ ಸಾಕಷ್ಟು ಸಾಮಗ್ರಿಗಳನ್ನು ಒದಗಿಸುತ್ತಿದ್ದೇವೆ. ಏಕೆಂದರೆ ವರ್ಕ್‌ಗಳು ಬಹಳ ಇವೆ. ಆದರೆ 14-15 ತಿಂಗಳಿಂದ ನಿಮ್ಮ ಕ್ಷೇತ್ರದಲ್ಲಿ ತಾವು ನೋಡುತ್ತಿದ್ದೀರಿ ಯಾವ ರೀತಿ ಪ್ರಗತಿಯಾಗುತ್ತಿದೆ ಎಂದು. ಮೆಟೀರಿಯಲ್ಸ್ ಇಲ್ಲ. ಸಬ್‌ಸ್ಟೇಷನ್ ಕೆಲಸಗಳು ಅರ್ಧದಲ್ಲೇ ನಿಂತಿವೆ. ಅಥವಾ ನಿಧಾನವಾಗಿ ಆಗುತ್ತಿದೆ. ಹೊಸ ಲೈನ್ ಕೆಲಸ ಹೊಸದಾಗಿ ಯಾವುದೂ ಕೂಡ ಪ್ರಾರಂಭವಾಗಲಿಲ್ಲ. ನಾವು ಏನು ಮಾಡಿದ್ದೇವೋ ಅಷ್ಟೇ ಅದನ್ನು ಫಿನಿಷ್ ಮಾಡತಕ್ಕಂಥದ್ದು ಕೂಡ ಇವತ್ತು snail's speedನಲ್ಲಿ ಹೋಗುವ ಪರಿಸ್ಥಿತಿ ಇದೆ. ಕೊಜೆಂಟ್ರಿಕ್ draft tariff ಅದನ್ನು ಆಗಲೇ ಮಾಡಿದ್ದೇವೆ. ಮತ್ತೆ ಅತ್ಯಂತ ಕಾಂಪಿಟೀವ್ ಏಕೆಂದರೆ it was only upper ceiling. ಆ ಮೆಷಿನರಿಯ ಕಾಸ್ಟ್‌ಲೀಸ್ಟ್ ಎಲ್ಲಾ ಬಂದಮೇಲೆ ಅದು ಅತ್ಯಂತ ಕಡಿಮೆ ದಕ್ಕೆ ಬರುವುದು, 1.50 ಮತ್ತು 1.75 ಈ ರೀತಿ ಬರುವಂಥದ್ದು. there is no comparison for ENRON. ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿ ಪ್ರತಿ ಸಾರಿ ಕೂಡ ಪ್ರಧಾನಮಂತ್ರಿಯವರನ್ನು ನೋಡುತ್ತಿದ್ದಾರೆ. ಅವರು ರಾಜಕೀಯ ಮಾತನಾಡಿದರೂ ಒಳ್ಳೆಯದೇ ನಮ್ಮ ಕಾಂಗ್ರೆಸ್‌ಗೆ ಬೆನಿಫಿಟ್. ಆದರೆ ಡೆವಲಪ್ ಆಗಬೇಕು. ಅಲ್ಲಿಹೋಗಿ this has to be cleared. Somebody has to sit there. ಈಗ ಜೆ.ಹೆಚ್ ಪಟೇಲರು, ಡೆಪ್ಯೂಟಿ ಚೀಫ್ ಮಿನಿಸ್ಟರ್, alright. But atleast depute a minister. Let him go and see that

it is cleared. ಅಲ್ಲಿಗೆ ಹೋಗಿ ಕ್ಲಿಯರ್ ಮಾಡುವ ಒಂದು ಪ್ರಯತ್ನ ತಾವು ಮಾಡಬೇಕಾಗಿತ್ತು ಅದು ಆಗಲಿಲ್ಲ. ಮತ್ತು ಎರಡನೆಯದಾಗಿ ಏನು ಇವತ್ತು ಹೊಸದಾಗಿ ಸಿಡಿಲುಬಡಿದಹಾಗೆ ಆಯಿತು. ಏನೆಂದರೆ ಆ barge-mounted electricity ಎಂದು ಹೇಳಿದರೆ ನನಗೆ ಸಿಡಿಲ ಬಡಿದ ಹಾಗೆ ಆಗಿದೆ. ಏಕೆಂದರೆ ಈ ಪ್ರಪೋಸಲ್ ನಾನೂ ಕೂಡ ಫಾರಿನ್‌ಗೆ ಹೋದಾಗ ಕೆಲವರು ಬಂದರು, barge-mounted ಮಾಡುತ್ತೇವೆ, ನಾವು ನಿಮಗೆ ನಾಲ್ಕೇ ತಿಂಗಳಲ್ಲಿ ವಿದ್ಯುತ್ ಕೊಡುತ್ತೇವೆ ಎಂದು ಅನೇಕ ಜನರು ಬಂದರು. I discussed this matter with some experts of the foreign countries. ಇಲ್ಲಿಯೂ ಕೂಡ barge mounted ಮಾಡಿದಾಗ ನಮ್ಮ ದೇಶದಲ್ಲಿ ಈ ಸಾಹಸವನ್ನು ಯಾರೂ ಮಾಡಿಲ್ಲ. ಯಾವ ರಾಜ್ಯದವರೂ ಕೂಡ barge mounted ಮಾಡುವುದಕ್ಕೆ ಇವತ್ತಿಗೂ ಮನಸ್ಸು ಮಾಡದೇ ಇರುವಂಥದ್ದು ನಮ್ಮ ಮುಖ್ಯಮಂತ್ರಿಗಳು, ನಿಮ್ಮ ಸರ್ಕಾರ ಧೈರ್ಯ ಮಾಡಿದ್ದಾರೆ. ಇದಕ್ಕಿಂತ ದೊಡ್ಡದು ಏನು ಇದೆ? ಇಂಥಹ ಒಂದು ದೊಡ್ಡ ಸಾಹಸಕ್ಕೆ ಅವರಿಗೆ ಅಭಿನಂದನೆ. ಅವರ ಇಡೀ ರಾಷ್ಟ್ರದಲ್ಲೇ ಮಾಡದೇ ಇರುವ ಸಾಹಸ ನಮ್ಮ ಮುಖ್ಯಮಂತ್ರಿಗಳು, ನಮ್ಮ ಸರ್ಕಾರ ಈಗ ಮಾಡಿದ್ದಾರೆ ಏನು ಎಂದು ಹೇಳಿ ಸ್ವಲ್ಪ ಕುತೂಹಲ ಬಂದಿದೆ. ಏಕೆಂದರೆ ಈ barge mounted power; ಇದು ಅತ್ಯಂತ ಕಾಸ್ಟ್‌ಲಿಯೆಸ್ಟ್ ಪವರ್ ಬಹಳ ತಾತ್ಕಾಲಿಕವಾಗಿ ಆರು ತಿಂಗಳಲ್ಲಿ ವಿದ್ಯುತ್ ಬರುತ್ತದೆ ಎಂದು ನಾವು ಹೇಳಿದ್ದೀರಿ. ಕ್ಯಾಬಿನೆಟ್‌ನಲ್ಲಿ ನೀವೇನೂ ನಾಲ್ಕು ಕ್ಲಿಯರ್ ಮಾಡಿದ್ದೀರೋ, ಮೂರು ಕ್ಲಿಯರ್ ಮಾಡಿದ್ದೀರೋ, ಮೂರು ಸ್ಟೇಟಿನ ಪ್ರಾಜೆಕ್ಟ್ ಎಂದು ನಾನು ಕೇಳಿದ್ದೇನೆ. ಒಂದು ಡೆನ್ಮಾರ್ಕ್ ಪ್ರಾಜೆಕ್ಟ್‌ಗಳು ಎಂದು ಹೇಳಿ ನಾನು ಕೇಳಿದ್ದೇನೆ. ಇದರ ಡೀಟೈಲ್ ನಮಗೆ ಬೇಕು. ನಮಗೆ ಇವತ್ತಿಗೂ ಕೂಡ you have kept us in the dark. ನಮಗೆ ತಿಳಿದು ಬಂದಿರುವ ಕೆಲವು ಮಾಹಿತಿ ಪ್ರಕಾರ the cost of generation itself is Rs. 2.5 ಇನ್ನು ಕನ್‌ಸ್ಯೂಮರ್‌ಗೆ ಬಂದಾಗ ಎಷ್ಟು ಆಗುತ್ತದೆ? ಮೂರು ರೂಪಾಯಿ ಆಗುತ್ತದೆಯೇ ಮೂರುಕಾಲು ರೂಪಾಯಿ ಆಗುತ್ತದೆಯೋ ಎಂದು ನಮಗಂತೂ ಗೊತ್ತಿಲ್ಲ. ರಾಯಚೂರ್ 4ನೇ ಯೂನಿಟ್‌ಗೆ ಇದ್ದ ಕಾಸ್ಟೇ 2.30 ರೂ. ಕಾಸ್ಟ್ ಆಫ್ ದಿ ಪವರ್ ಅದ್ದರಿಂದ ತಮಗೆ ಗೊತ್ತಿದೆ, it is supposed to have been put up near mangalore Chemecals & Fertilisers. We are for development. ಆದರೆ ಯಾವ ರೀತಿ ಡೆವಲಪ್‌ಮೆಂಟ್ ಆಗುತ್ತಿದೆ ಎಂಬುದು ನಮಗೆ ಸ್ವಲ್ಪ ಅನುಮಾನ ಬಂದಿದೆ. ನಮಗೆ ತಿಳಿದಂತಹ ಮಾಹಿತಿ ಪ್ರಕಾರ Because number of people had approached me. Then I came to the conclusion that ಇಂತಹ ಪ್ರಾಜೆಕ್ಟ್ ನಮಗೆ ಬೇಡ ಎಂದು ಹೇಳಿ ನಾವು ನಿರ್ಣಯ ಮಾಡಿದ್ದೆವು. even at the cabinet levelಗೆ ನಾವು ತರಲಿಲ್ಲ. I was staggered ಇದೊಂದು ಭಯಾನಕವಾದಂತಹ ಪರಿಸ್ಥಿತಿ ಉತ್ಪತ್ತಿ ಆಗಬಹುದು ಎಂದು ಹೇಳಿ ಏಕೆಂದರೆ ನ್ಯಾಫ್ತಾವನ್ನು ಉಪಯೋಗ ಮಾಡುತ್ತಿದ್ದಾರೆ. ತಾವು ಹೇಳುತ್ತೀರಿ ಆರು ತಿಂಗಳೊಳಗೆ ವಿದ್ಯುತ್ ಬರುತ್ತದೆ ಎಂದು ಹೇಳಿ. ನಿಜವಾಗಿಯೂ ಇದನ್ನು ಮಾಡಿದರೂ ಕೂಡ admitting for argument's sake you must have sub-

marine cables. ಸಬ್ ಮೇರಿನ್ ಕೇಬಲ್ಸ್‌ನಲ್ಲಿ ಆ ರೀತಿ ತರಬೇಕು. I was told that; now that has been given up. ಏಕೆಂದರೆ submarine cable is costlier. ಅವರೊಳಗೆ ಡಿಸ್ಟೆನ್ಸ್ ಹಾಕುತ್ತೀರಿ. ಆದರೆ ಈಗ ಬರೀ ಲೈನ್‌ನ್ನು ಹಾಕತಕ್ಕಂಥದ್ದು. ಈ ಲೈನ್‌ಗಳು ಕೂಡ ಅರ್ಧ ಕಿಲೋ ಮೀಟರ್ from the sea-shore ಎಂ.ಆರ್.ಪಿ.ಎಲ್. ಎಂ.ಪಿ.ಎಫ್, ಮತ್ತು ಯಾವುದೂ ಪ್ರಾಜೆಕ್ಟ್ ಕೂಡ ಇವರೊಂದಿಗೆ ನಿಲ್ಲುವುದಿಲ್ಲ. ಅದೂ ಕೂಡ leaving not water to Gurpur river. Please check up. This is subject to correction. You cannot leave hot water to the Gurpur river. ಎಷ್ಟು ಅನಾಹುತ ಆಗುತ್ತದೆ? ಎನ್‌ವೈರನಮೆಂಟಲ್ ಪ್ರಾಬ್ಲಮ್ ಆಗುತ್ತದೆ. I would like for my sake to consult some more experts. ಆದರೆ ಇವತ್ತು half a kilometer from the sea-shore ನ್ಯಾಫ್ತಾ ಫ್ಯೂಯಲ್ ಉಪಯೋಗ ಮಾಡಿಕೊಂಡು ಹಾಟ್ ವಾಟರ್‌ನ್ನು ಇವತ್ತು ನೀವು ಗುರುಪುರ ರಿವರ್‌ಗೆ ಬಿಡಬೇಕೆಂದು ಇದ್ದೀರಿ. ತಾವು ಹೇಳುತ್ತೀರಿ, ಅವರೇನೋ ಅಶ್ಯೂರೆನ್ಸ್ ಕೊಟ್ಟಿದ್ದಾರೆಂದು Those enterpreneurs say, "We will look after the environment it". It is not their problem. It is our problem. Environmental problem ಸರ್ಕಾರ ನೋಡಬೇಕಾಗುತ್ತದೆ. ನಮ್ಮ ಜನ ನೋಡಬೇಕಾಗುತ್ತದೆ. ಎನ್‌ವಿರಾನ್‌ಮೆಂಟಲ್ ಪ್ರಾಬ್ಲಮ್ ಏನು ಇದೆ? ಯಾವ ರೀತಿ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯ ಇದೆ ಎಂಬುದನ್ನು ವಿಶೇಷವಾಗಿ ತಾವು ನೋಡಬೇಕಾಗುತ್ತದೆ. I may not know. You may know the matter better.

ಶ್ರೀ ಜೆ.ಹೆಚ್. ಪಟೇಲ್ : ಈ ಪ್ರಾಜೆಕ್ಟ್‌ಗೆ ಸರ್ಕಾರ ಒಪ್ಪಿಕೊಂಡಿದ್ದು ಒಂದೇ ಕಾರಣ ಏನೆಂದರೆ, ಮೊದಲನೆಯ ಕಾರಣ ಅತ್ಯಂತ ಶೀಘ್ರವಾಗಿ ವಿದ್ಯುತ್ತನ್ನು ಒದಗಿಸತಕ್ಕ ಟೆಕ್ನಾಲಜಿ ಬಗ್ಗೆ. ಅದರ ಡಿಸೈನ್‌ನ್ನು ನೋಡಿದ ಮೇಲೆ ಆ ಟೆಕ್ನಾಲಜಿ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ ಇದಕ್ಕೆ ಬೇಕಾಗಿಲ್ಲ. ಏಕೆಂದರೆ 400 ಕೋಟಿಗಿಂತ ಪ್ರಾಜೆಕ್ಟ್ ಕಾಸ್ಟ್ ಇದ್ದರೆ ರಾಜ್ಯ ಸರ್ಕಾರವೇ ತೀರ್ಮಾನ ಮಾಡಿಕೊಳ್ಳಬಹುದು ಎಂದು ಕೇಂದ್ರ ಸರ್ಕಾರ ಹೇಳಿದೆ. ನಾವು ಕೇಂದ್ರ ಸರ್ಕಾರಕ್ಕೆ ಹೋಗಿ ಅವರಿಗೆ ಕನ್ವಿನ್ಸ್ ಮಾಡುವುದಕ್ಕೆ ಟೈಮ್ ಹೋಗುತ್ತದೆ. The prime consideration is quick service. ಆದರೆ ಅದು ಮಾನ್ಯ ವೀರಪ್ಪ ಮೊಯಿಲಿ ಅವರು ಹೇಳಿದ ಹಾಗೆ, ಬಿಸಿ ನೀರಿನ ಉಪಯೋಗದ ವಿಚಾರ. ಆ ಪ್ರಾಜೆಕ್ಟ್ ಆಗುವವರೆಗೆ ನಮಗೂ ಹೊಸದು ಅದು. ಈಗ ಪ್ರಪಂಚದಲ್ಲಿ ನಾಲ್ಕಾರು ಕಡೆ ಸಕ್ಸಸ್‌ಫುಲ್ ಆಗಿ ಮಾಡಿರುವುದರಿಂದ ನಮ್ಮ ದೇಶದಲ್ಲಿ ಇದೇ ಮೊದಲು. ಪಕ್ಕದ ಇಂಡೋನೇಷ್ಯಾದಲ್ಲಿ ಮಾಡಿದ್ದಾರೆ. ಅವರು ಯಾವ್ಯಾವ ದೇಶದಲ್ಲಿ ಪ್ರಾಜೆಕ್ಟ್ ಮಾಡಿದ್ದಾರೆಂದರೆ ಆಫ್ರಿಕಾ ಖಂಡದಲ್ಲಿ ಮಾಡಿದ್ದಾರೆ. ಆಕಸ್ಮಿಯಲಿ ಕೆನಡಾದಲ್ಲಿ ಒಂದು ಎಕ್ಸ್‌ಪೆರಿಮೆಂಟಲ್ ಬೇಸಿಸ್ ಮೇಲೆ ಮಾಡಿದ್ದಾರೆ. ಅವರಿಗೇನೂ ಬೇಕಾಗಿರಲಿಲ್ಲ ವಿದ್ಯುತ್. ಕೆನಡಾದಲ್ಲಿ ಜಲ ವಿದ್ಯುತ್ತೇ ಬೇಕಾದಷ್ಟು ಇದೆ. ಆದರೆ ಇದನ್ನು ಮಾಡಿದ್ದಾರೆ, ಯಾವುದೋ ಒಂದು ದೊಡ್ಡ ಕೆರೆ ಹತ್ತಿರ ಮಾಡಿದ್ದಾರೆ. ಈಗ ಈ ಟೆಕ್ನಾಲಜಿ ಬಗ್ಗೆ ಹೇಳುವುದಾದರೆ

ಇದಕ್ಕೇನೋ heat recovery process ಎಂದು ಮಾಡಿ ಯಾವ ಅನಿಲ ಆಗಲಿ ಯಾವುದೇ ಇಂಧನದಿಂದ ಹೊರಗೆ ಹೋಗತಕ್ಕ, ಕಲುಷ ಆಗತಕ್ಕಂತಹ ಯಾವುದೇ ವಸ್ತು ಇಲ್ಲಿ ಇಲ್ಲ ಎನ್ನುವುದಕ್ಕೋಸ್ಕರ ಮಾಡಿದ್ದೇವೆ. ಆಕ್ಚುಯಲ್ ಇಂಪ್ಲಿಮೆಂಟ್ ಆಗಿ ಇದು ಆಗುತ್ತದೆಯೋ ಇಲ್ಲವೋ ಎಂದು ನೀವು ಅನುಮಾನ ಹೇಳುತ್ತೀರಿ, ಅನುಮಾನ ಇಲ್ಲ. ಆರು ತಿಂಗಳೊಳಗೆ ಆಗಬಹುದು. ನಾವು ಅವರಿಗೆ ಪರ್ಮಿಷನ್ ಕೊಟ್ಟು ಇತ್ಯಾದಿ ಕ್ರಮ ಮಾಡಲು ಒಂದು ವರ್ಷದೊಳಗೆ ಆಗಬಹುದು. ಏಕೆ ಒಂದು ವರ್ಷ ಒಂದು ಹೇಳಿದ್ದೇವೆ ಎಂದರೆ, ಎಲ್ಲಾ ಮೆಷಿನ್‌ಗಳನ್ನು ಜೋಡಿಸಿ ಕೊಂಡೇ ಬರುತ್ತಾರೆ. ಬಂದು ಸಮುದ್ರದ ಹತ್ತಿರ ನಿಲ್ಲಿಸಿ ಕಿಲೋ ಮೀಟರ್ ಅಲ್ಲ, ಹಾಫ್ ಕಿಲೋ ಮೀಟರ್ ಅಲ್ಲ, ಕೆಲವು ಸಲ ಸಮುದ್ರದ ಪಕ್ಕದಲ್ಲಿ ಒಂದು ಸಿಮೆಂಟ್ ಕಾಂಕ್ರೀಟ್ ಬೆಡ್ಡಿಂಗ್ ಹಾಕಿ ಅದರ ಮೇಲೆ ತೂರಿಸುತ್ತಾರೆ. ನಾನು ಮೂರ್ನಾಲ್ಕು ಡಿಸೈನ್ ನೋಡಿದ್ದೇನೆ. ಆದ್ದರಿಂದ ಇದು ಹೊಸದಾಗಿರುವುದರಿಂದ ನಮಗೂ ಇದರ ಬಗ್ಗೆ ಕುತೂಹಲ ಇದೆ. ಆದರೆ ಭಾರೀ ಕಾಸ್ಟಲಿ ಪವರ್ ಎಂದು ಅಲ್ಲ. ಮಾನ್ಯ ವೀರಪ್ಪ ಮೊಯಿಲಿಯವರಿಗೆ ಗೊತ್ತಿರಬಹುದು. ನಮ್ಮ ರಾಯಚೂರು ನಾಲ್ಕನೇ ಯೂನಿಟ್‌ನ ಕಾಸ್ಟ್ ಏನು ಇದೆ, ಆ ಕಾಸ್ಟ್‌ಗಿಂತ ಕಡಿಮೆ ಎಂದು ಅವರು ಹೇಳಿರುವುದು. ರಾಯಚೂರಿನಲ್ಲಿ ನಮ್ಮದೇ ಕೋಲ್ ಬೇಸ್ಡ್ ಪವರ್ ಪ್ಲಾಂಟ್ ಇದೆ. ಮೊದಲನೇ ಯೂನಿಟ್‌ನಲ್ಲಿ ಬರೀ 80 ಪೈಸೆಗೆ ಮಾಡಿದ್ದೆವು. ಎರಡನೆಯ ಯೂನಿಟ್‌ನಲ್ಲಿ ಮತ್ತೆ 40 ಪೈಸೆ ಜಾಸ್ತಿ ಆಯಿತು. ಮೂರನೆಯ ಯೂನಿಟ್‌ನಲ್ಲಿ ಅದರ ಮೂರರಷ್ಟು ಆಯಿತು. ಈಗ ನಾಲ್ಕನೇ ಯೂನಿಟ್ 2.59 ಪೈಸೆ ಆಗುತ್ತದೆ. ರಾಯಚೂರದ್ದು 2.59 ಕಾಸ್ಟ್ ಆಗುತ್ತದೆ. ಅದರಿಂದ ಇದು ಬಹಳ ಕಾಸ್ಟಲಿ ಎಂದು ಹೇಳುತ್ತೀರಿ, ಆದರೆ ಇದು ಮೂರು ರೂಪಾಯಿ ಆಗುವುದಿಲ್ಲ. ಅವರು ಒಪ್ಪಿಕೊಂಡಿರುವ ಪ್ರಕಾರ ನಮ್ಮ ಕಾಸ್ಟ್ ಆಫ್ ಜನರೇಷನ್ ಐದು ಅಥವಾ ಆರು ಪೈಸೆ ಜಾಸ್ತಿ ಆಗಬಹುದೇ ಹೊರತು ನೀವು ಹೇಳಿದ ಹಾಗೆ ಮೂರು ಮೂರುವರೆ ಆಗುವುದಿಲ್ಲ.

ಶ್ರೀ ವೀರಪ್ಪ ಮೊಯಿಲಿ : ಅದು ತಾವೇ ಹೇಳಿದ ಪ್ರಕಾರ ತಮಗೂ ಗೊತ್ತಿಲ್ಲ. ನಾವು ಇಂತಹ ಪ್ರಪೋಸಲ್ ಬಂದಾಗ ವಿಚಾರ ಮಾಡಿದಾಗ ನಮಗೆ ಕೂಡ ಇದು ಭಯಾನಕ ಇದೆ. ಬಹುಶಃ ನಮಗೆ ಇದು ಬೇಕಾಗಿಲ್ಲ ಎಂದು ಹೇಳಿ ತೀರ್ಮಾನ ಮಾಡಿದ್ದೆವು.

ಶ್ರೀ ಜೆ.ಹೆಚ್. ಪಟೇಲ್ : ಆಗ ತಾವು ಹೆದರಿದ್ದರಿಂದ ಈಗ ನಾನು ಉತ್ತರ ಕೊಡಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಯಾವುದಕ್ಕೆ ಹೆದರಬೇಕೋ ಅದಕ್ಕೆ ಹೆದರಬೇಕು. ಇಂತಹದನ್ನು ಹಾಟ್ ವಾಟರನ್ನು ಬಿಟ್ಟು ಅರ್ಧ ಕಿಲೋ ಮೀಟರ್ ಶೋರಸಿಂದ ನೀವು ಇದನ್ನೆಲ್ಲಾ ಹಾಕಿ ಈ ಬಾರ್ಜ್ ಮೌಂಟೆಡ್ ಮಾಡಿ, ಆ ಬಾರ್ಜ್ ಜನಗಳ ಮೇಲೆ ಮೌಂಟ್ ಆಗಬಾರದಲ್ಲಾ. ಅದು ನಮ್ಮ ಮೇಲೆಯೇ ಮೌಂಟ್ ಆಗಿಬಿಟ್ಟರೆ. ಎಂಬ ಹೆದರಿಕೆ ಆ ಜಿಲ್ಲೆಯಿಂದ ನಾನು ಬರುವುದರಿಂದ ನಾನು ಇದರ ಬಗ್ಗೆ ಮಾತನಾಡಬೇಕಾಗಿದೆ ಅದು ನಮ್ಮ ಮೇಲೆ ಮೌಂಟ್

ಆದರೆ ಏನು ಗತಿ? ಅದು ಬರೇಸಮುದ್ರದ ಮೇಲೆ ಹಡಗಿನ ಮೇಲೆ ಮೌಂಟ್ ಆದರೆ ಒಂದು ಸಂಗತಿ. ಆದರೆ ನಮ್ಮ ಮೇಲೆಯೇ ಮೌಂಟ್ ಆಗಿಬಿಟ್ಟರೆ ಅದರಿಂದ ದಯಮಾಡಿ ಸ್ವಲ್ಪ ವಿಚಾರಮಾಡಿ, ಇದು ಸರಿಯಲ್ಲ. ನಿಮ್ಮ ತಲೆಯಲ್ಲಿ ಮತ್ತೊಂದು ವಿಚಾರ ಏನು ಇದೆ ಎಂದರೆ ಜೂನ್ ಜುಲೈನಲ್ಲಿ ಮಳೆಯೇ ಬರುವುದಿಲ್ಲವೆಂದು ಆಲೋಚನೆ ಮಾಡಿ ಇದನ್ನೆಲ್ಲಾ ನೀವು ಮಾಡುತ್ತೀದ್ದೀರಿ. ಜೂನ್ ಜುಲೈನಲ್ಲಿ ಮಳೆ ಬಂದರೆ ಸಾಕಷ್ಟು ಪ್ರಮಾಣದಲ್ಲಿ, ವಿದ್ಯುತ್ತಿನ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ಸಾಧ್ಯ ಆಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ತಾವು ಈ ತರಹ ಆಲೋಚನೆ ಮಾಡಿ. ಎಲ್ಲಾ ಮಳೆ ಬರುತ್ತದೆ. ಮಳೆ ಬಂದರೂ our total generation will not exceed 38 million units per day. ಮ್ಯಾಕ್ಸಿಮಮ್ ಇದ್ದಾಗಲೂ. ನಾನು ಇದರ ಬಗ್ಗೆ ಅಧ್ಯಯನ ಮಾಡಿ ಹೇಳುತ್ತಿದ್ದೇನೆ. 1994-95ರಲ್ಲಿ ನಿಮ್ಮ ಕಾಲದಲ್ಲಿ ಮಾತ್ರ ಎಲ್ಲಾ ಡ್ಯಾಮ್ಸ್ ಫುಲ್ ಆಗಿತ್ತು. ಅದಕ್ಕೆ ಹಿಂದೆ ಅರ್ಧ ಅಥವಾ ಮುಕ್ಕಾಲು ಇದ್ದವು. ಆದರೂ ಸಹ ನಮ್ಮ maximum generation in hydel was 38 million units. ನಮ್ಮ ರಿಕ್ವೈರ್‌ಮೆಂಟ್ ಇವತ್ತು 70 ರಿಂದ 75 ಮಿಲಿಯನ್ ಯೂನಿಟ್. ಇವತ್ತು ನನಗೆ ಕೆಇಬಿಯವರು ನೋಟ್ ಕಳುಹಿಸಿದ್ದಾರೆ. 54.5 ಮಿಲಿಯನ್ ಯೂನಿಟ್ಸ್ ಕನ್ಸ್ಂಪಷನ್ ಇದೆ. ನಾವೇನು ಮಾಡಬೇಕು? ಇಷ್ಟೆಲ್ಲಾ ಪವರ್ ಕಟ್ ಹಾಕಿ. ಇವತ್ತು 54.5 ಮಿಲಿಯನ್ ಯೂನಿಟ್ ಇದೆ. ಅದಕ್ಕೆ ಇದರೊಳಗೆ ಎಲ್ಲಾ ವೈಜ್ಞಾನಿಕವಾಗಿ ವಿಚಾರ ಮಾಡಿದ್ದೇವೆ. ಇದರೊಳಗೆ ಸ್ವಲ್ಪ ರಿಸ್ಕ್ ಇರುತ್ತದೆ. For everything there is some risk. ಆ ತರಹ ರಿಸ್ಕ ಇಲ್ಲದೇ ಇರತಕ್ಕಂಥ ಯಾವುದೇ ಉದ್ಯಮ ಇಲ್ಲ. ವಿದ್ಯುತ್ ಇಲ್ಲದೇ ನಿಮ್ಮ ಪ್ರಗತಿ ಹೇಗೆ ಆಗುತ್ತದೆ? ಅದಕ್ಕೆ ನೀರು ಹೆದರಬಾರದು ಎಂದರೆ ನಾನು ನಿಮಗೆ ವೈಯಕ್ತಿಕವಾಗಿ ಹೇಳಲಿಲ್ಲ. ಆಗ ಸರ್ಕಾರ ನಡೆಸುತ್ತಿದ್ದಿರಿ, ಮುಂಚೂಣಿಯಲ್ಲಿ ನೀವೇ ಸರ್ಕಾರ ನಡೆಸುತ್ತಿದ್ದೀರಿ. ಆಗ ನೀವೇ ನೋಡೋಣ ಏನಾಗುತ್ತದೆ ಎಂದು ಧೈರ್ಯಮಾಡಬಹುದಾಗಿತ್ತು. ನಾವು ನಾಳೆ ಇದು ಬಹಳ ಅಪಾಯ ಎಂದು ಕಂಡರೆ ಹೇಳುತ್ತೇನೆ. ಇದು ಆಗುವುದಿಲ್ಲ ಎಂದು. ಜನರಿಗೆ ಅಪಾಯ ಆಗುವಂತಹದು ಆಗಿ ಜನರ ಆರೋಗ್ಯ ಕೆಡಿಸುವಂತಹದು ಆದರೆ ಇವತ್ತು ನಾವು ವಿದ್ಯುತ್ ಜನರೇಟ್ ಮಾಡಿಯೂ ಏನು ಪ್ರಯೋಜನ ಆಗುತ್ತದೆ? ಆದ್ದರಿಂದ ಈ ತರಹ ಭಯಗಳನ್ನು ಇಟ್ಟುಕೊಂಡು ನಾವು ಈಗಿರುವ ಅನ್ ಎಂಪ್ಲಾಯಮೆಂಟ್, ಈಗಿರುವ ಬಡತನ, ಈಗಿನ ನಿರುದ್ಯೋಗ, ಆ ತರಹ ಜನರನ್ನು ನಾವು ಸಾಯಿಸುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ತಾವು ಹೇಳುವಷ್ಟು ಸುಲಭವಾಗಿಲ್ಲ ಸರಳವಾಗಿಯೂ ಇಲ್ಲ. ಪರಿಸ್ಥಿತಿ ಭಯಾನಕತೆಯನ್ನು ತಾವು ಪರಿಹಾರ ಮಾಡುವುದಕ್ಕೆ ಕೂಡ ಎಷ್ಟು ಸಾಧ್ಯ ಆಗುತ್ತದ ಅದು ತಮಗೆ ಬಿಟ್ಟಿದ್ದುದು. ಈಗ ಮತ್ತೊಂದು mass-rapid system and megacity project. ತಮಗೆ ಗೊತ್ತಿದೆ, megacity project and mass-rapid go together. ಇವನ್ನು ರಾಜ್ಯ ಸರ್ಕಾರಗಳೇ ಮ್ಯಾನೇಜ್ ಮಾಡುತ್ತಿವೆ. ಕೇಂದ್ರ ಸರ್ಕಾರದ ಸಹಾಯದಿಂದ our project was also cleared. ಈಗ ಮಾಸ್ ರ್ಯಾಪಿಡ್ ಅನ್ನು ನೀವು

ಪ್ರೈವೇಟ್‌ಗೆ ಕೊಡಬೇಕು ಎಂದು ಹೇಳಿ ತಾವು ನಿರ್ಣಯ ಮಾಡಿದ್ದು ಆಗಿದೆ. ನಿನ್ನೆ ನಾನು ತಿಳಿದುಕೊಂಡ ಹಾಗೆ ಸುಮಾರು ನಿಮ್ಮ contribution as equity or anything initial contribution ಎಂದು ನಿಮ್ಮ ಬಜೆಟ್‌ನಲ್ಲಿ ಎಲ್ಲೂ ಕಾಣುತ್ತಿಲ್ಲ. ಅದರ Rs 1000 crores equity by means of land ಕೊಡುತ್ತೀರೋ ಅಥವಾ ಹಣ ಕೊಡುತ್ತೀರೋ ಎಂಬುದು ನನಗೆ ಗೊತ್ತಿಲ್ಲ. ಅದರ ಇದನ್ನು ಪ್ರೈವೇಟಿಗೆ ಕೊಡುವುದು ಇದ್ದರೆ ಅವರೇ ಮಾಡಲಿ. ನಿಮ್ಮ ಕಮಿಟ್‌ಮೆಂಟ್ ಈ ತರಹ ಒನ್ ಥೌಸಂಡ್ ಕ್ರೋರ್ಸ್ in terms of land or in terms of money ತಾವು ಕೊಡತಕ್ಕಂಥ, ಈ ಒಂದು ಇನಿಷಿಯೇಟಿವ್ ತೆಗೆದುಕೊಳ್ಳತಕ್ಕಂತಹ ಅವಶ್ಯಕತೆ ಇರಲಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

12.50 ಪಿ.ಎಂ.

It is there. You please check up. ಆದುದರಿಂದ ಇನ್ನೊಂದು ವಿಚಾರವೇನೆಂದರೆ, ಈ ಮೆಗಾಸಿಟಿ ಪ್ರಾಜೆಕ್ಟ್‌ನಲ್ಲಿ ತಾವು ಮಾಸ್ ರ್‍ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್‌ನಲ್ಲಿ ಮುಂದುವರೆಸಿಕೊಂಡು ಹೋಗುವುದಾಗಿದ್ದರೆ long term and short term perspectiveನಲ್ಲಿ ಮಾಡಬೇಕು. ಏನಾಗಬೇಕೆಂದರೆ, ಲೈಟ್ ಟ್ರೇನ್ ಎಂದರೆ ಸರ್ಫೇಸ್ ಮೇಲೆ ಆಗತಕ್ಕಂಥದ್ದು ಇವತ್ತಲ್ಲ, ನಾಳೆ ಶಾರ್ಟ್ ಟರ್ಮ್ ಮಾಡಲೇಬೇಕಾಗುತ್ತದೆ. ಅದನ್ನು ತಾವು ಕೈಬಿಟ್ಟಂತೆ ಕಾಣುತ್ತಿದೆ. ಮುಂಬಯಿಯಲ್ಲಿ ಅಂಡರಗ್ರೌಂಡ್ ಟ್ರೈನ್‌ಗೆ ಸಂಬಂಧಿಸಿದ ಒಂದು ಯೋಜನೆಯನ್ನು ಮೊನ್ನೆ ದಿವಸ ರೈಲ್ವೆ ಸಚಿವರು ಕ್ಲಿಯರ್ ಮಾಡಿದ್ದಾರೆ. ಮುಂಬಯಿಯಲ್ಲಿ ಅಂಡರ್‌ಗ್ರೌಂಡ್ ಟ್ರೇನ್ ಸಿಸ್ಟಮ್ ಮಾಡಲು ಅವರಿಗೆ ಸಾಧ್ಯವಾಗುವುದಿದ್ದರೆ Bangalore, compared to Bombay, is even more virgin. ಈ ವ್ಯವಸ್ಥೆಯನ್ನು ಇಲ್ಲಿ ಖಂಡಿತವಾಗಿಯೂ ಮಾಡಲು ಸಾಧ್ಯವಿದೆ, ಆದರೆ, ಅದನ್ನು ತಾವು ಕೈಬಿಟ್ಟಿದ್ದೀರಿ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಖಾಸಗಿ ವಲಯದವರಿಗೆ ಕೊಟ್ಟರೆ ಅವರು ಅದಕ್ಕೆ ಎಷ್ಟು ಭೂಮಿಯನ್ನು ಎಕ್ಸ್‌ಪ್ಲಾಯಿಟ್ ಮಾಡಬೇಕೋ ಮಾಡುತ್ತಾರೆ. ಇದನ್ನು ಮಾಡುವುದರಿಂದ ಸುಲಭವಾಗಿ ಹೆಚ್ಚು ಲಾಭ ಸಿಗುತ್ತದೆ. ಅತಿ ಅವಶ್ಯಕವಾಗಿ ಆಗಬೇಕಾದಂಥ ಪ್ರಾಜೆಕ್ಟ್‌ಗಳನ್ನು ಪೂರ್ತಿಯಾಗಿ ಇವೊತ್ತು ಕೈಬಿಡುವಂಥ ಕೆಲಸವನ್ನು ತಾವು ಏನು ಮಾಡಿದ್ದೀರಿ, ಇದು ಖಂಡಿತವಾಗಿಯೂ ಸರಿಯಾದುದಲ್ಲ. ಆದುದರಿಂದ, ತಾವು ಲಾಂಗಟರ್ಮ್ ಪರ್ಸ್ಪೆಕ್ಟಿವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅಲ್ಲದೆ, ಇವೊತ್ತು ಎಲ್ಲವನ್ನೂ ಖಾಸಗೀಕರಣಗೊಳಿಸುವಂಥ ಒಂದು ಪ್ರವೃತ್ತಿಯನ್ನು ಇಟ್ಟುಕೊಂಡಿದ್ದೀರಿ. ಈ ನೀತಿ ಎಷ್ಟು ಮಾತ್ರಕ್ಕೂ ಸರಿಯಲ್ಲ. ಈ ನೀತಿ ಪ್ರಕಟಿಸುವ ಬಗ್ಗೆ ಈ ಸದನವನ್ನು ತಾವು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ, i.e., about privatisation. ಎಲ್ಲದರಲ್ಲೂ ಕಡು ಖಾಸಗೀಕರಣ ಮೆಗಾಸಿಟಿ ಯೋಜನೆಯ ಖಾಸಗೀಕರಣ. Mass Rapid Transport System ಖಾಸಗೀಕರಣ ಅನಂತರ, ಬೆಂಗಳೂರು ನಗರದಲ್ಲಿರುವ ಒಂದು ಸಾವಿರ ಎಕರೆಗಳಷ್ಟು ಜಮೀನು ಏನಿದೆ, ತಾವು ಹೇಳಿದಂತ ಅದನ್ನೂ ಕೂಡ ಖಾಸಗೀಕರಣಗೊಳಿಸಲು ಹೊರಟಿದ್ದೀರಿ ಮತ್ತು ಕೊಳಚೆ

ಪ್ರದೇಶಗಳನ್ನೂ ಸಹ ಖಾಸಗೀಕರಣಗೊಳಿಸಿ ಅದನ್ನು ಅವರಿಗೆ ಕೊಡತಕ್ಕಂಥ ಪ್ರಯತ್ನ ಮಾಡುತ್ತಿದ್ದೀರಿ. ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಮೆಡಿಕಲ್ ಕಾಲೇಜುಗಳನ್ನು ನಡಸುವುದಕ್ಕಾಗುವುದಿಲ್ಲವೆಂದು, ಆದುದರಿಂದ ಶೇಕಡ 15 ರಷ್ಟು ಸೀಟುಗಳನ್ನು ಎನ್.ಆರ್.ಐ. ನವರಿಗೆ ನಾವು ಕೊಟ್ಟುಬಿಡುತ್ತೇವೆಂದು ಹೇಳಿದರು. ಆದರೆ, ಇದರಿಂದ ಪರಿಣಾಮವೇನಾಗುತ್ತದೆಂಬುದರ ಕಡೆ ನಾವು ಸ್ವಲ್ಪವಾದರೂ ಯೋಚಿಸಿದ್ದೀರೋ Why do you have this? ಏಕೆಂದರೆ, ಅಲ್ಲಿ ಮೀಸಲಾತಿ ಪ್ರಮಾಣ ಕಡಿಮೆಯಾಗುವುದಲ್ಲದೆ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಜಾತಿ: ಪಂಗಡವರಿಗೆ ಕೊಡತಕ್ಕಂಥ ಸೀಟುಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿರುವ ಸೀಟುಗಳ ಬಗ್ಗೆ ನಿಮ್ಮ ಜವಾಬ್ದಾರಿ. Education is the responsibility of the State Govt. You cannot shirk that responsibility ಖಾಸಗಿಯವರ ಬಂದರೆ ಏನಾಗುತ್ತಿದೆಂದು ನಿಮಗೆ ಗೊತ್ತಿದೆ. ಯಾರಾದರೂ ಎನ್.ಆರ್.ಐ.ರವರಿಗೆ ಪ್ರವೇಶ ಕೊಡಬೇಕಾದರೆ ಯಾವ ಮಾನದಂಡದ ಮೇಲೆ ಪ್ರವೇಶಾವಕಾಶ ಕಲ್ಪಿಸುತ್ತೀರಿ? ಡಿಸ್ಕ್ರೀಷನ್ ಬರುತ್ತದೆ. ಇದು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತದೆ. it is the question of a system. ಇವೊತ್ತು ಅಧಿಕಾರದಲ್ಲಿ ನೀವಿರಬಹುದು, ನಾಳೆ ಮತ್ತೊಬ್ಬರು ಅಧಿಕಾರಕ್ಕೆ ಬರಬಹುದು. ಆದರೆ, ಇವೊತ್ತು ಅಲ್ಲಿ ಏನಾಗುತ್ತದೆಂಯೆಂದರ Exposing these merited students. with those N.R.I. students. ಆ ಕಾಂಪಿಟೇಶನಗೆ, ಆ ಲಕ್ಸುರಿ ಬಂದು ಐಶ್ವರ್ಯ, ಅವರ ಬಂದು ಸ್ಪರ್ಧೆಯಲ್ಲಿ ನಿಲ್ಲುವ ಶಕ್ತಿ ಅವರಲ್ಲಿ ಇಲ್ಲ. They will be demoralised totally. ಖಾಸಗಿ ಕಾಲೇಜಾದವರೆ ಕ್ಯಾಪಿಟೇಶನ್ ಫೀ ತಗೆದುಕೊಂಡು ಬಂದು ಎನ್.ಆರ್.ಐ. ನವರು ಸೇರುತ್ತಾರೆ, ನಂತರ ಆ ಪ್ರವೃತ್ತಿಗಳು ಹಾಳಾಗುತ್ತದೆ, ಆ ಮನಸ್ಸಿನಲ್ಲಿ ಭ್ರಷ್ಟಾಚಾರ ಹುಟ್ಟುತ್ತದೆ, ಇನ್ನು ಏನೇನೋ ದುಷ್ಪರಿಣಾಮಗಳು ಮೆಡಿಕಲ್ ಕಾಲೇಜುಗಳಲ್ಲಿ ಬರುತ್ತವೆ. ದಯಮಾಡಿ ಆ ಕಾಲೇಜುಗಳನ್ನು ಮಲಿನಗೊಳಿಸಬೇಡಿ. ಮತ್ತು ಎನ್.ಆರ್.ಐ.ರವರನ್ನು ಅಲ್ಲಿ ಸೇರಿಸುವುದಕ್ಕೆ ದಯಮಾಡಿ ಪ್ರಯತ್ನಿಸಬೇಡಿ. ಬೇಕಾದರೆ ಎನ್.ಆರ್.ಐ.ನವರಿಗೆಂದೇ ಬೇರೆ ಕಾಲೇಜು ಮಾಡಿ. ಪ್ರೈವೈಟನವರು ಹೇಗೂ ತೆಗೆದು ಕೊಳ್ಳುತ್ತಿದ್ದಾರೆ, ಅದಕ್ಕೇನೂ ದರಿದ್ರವಿಲ್ಲ. ನೀವೇ ನಿಮ್ಮ ಕಾಲೇಜುಗಳನ್ನು ಖಾಸಗೀಕರಣಗೊಳಿಸಬೇಕೆಂದು ಮತ್ತ ಶೇಕಡ 15 ರಷ್ಟು ಸೀಟುಗಳನ್ನು ಎನ್.ಆರ್.ಐ ನವರಿಗೆ ಕೊಡುತ್ತೇವೆಂದು ಮೊನ್ನೆ ಘೋಷಣೆ ಮಾಡಿಬಿಟ್ಟಿರಿ. ಈ ನೀತಿ ಬಗ್ಗೆ ನಿಮ್ಮ ಸಚಿವ ಸಂಪುಟದಲ್ಲಿ ಯಾವ ರೀತಿ ಬೆಂಬಲ ಸಿಕ್ಕಿತೋ ನಮಗೆ ಗೊತ್ತಿಲ್ಲ ಅಥವಾ ಸದನದಲ್ಲೂ ಈ ವಿಷಯ ಪ್ರಸ್ತಾವಕ್ಕೆ ಬರಲಿಲ್ಲ. ಇನ್ನು ನ್ಯಾಶನಲೈಲ್ಡ್ ರೂಟ್ ಮತ್ತು ಕ್ವಾಸಿ ನ್ಯಾಶನಲೈಸ್ಡ್ ರೂಟುಗಳಲ್ಲಿ ಖಾಸಗಿಯವರಿಗೆ ಬಸ್ಸುಗಳನ್ನು ಓಡಿಸಲು ನಾವು ಕೊಡುತ್ತೇವೆಂದು ಹೇಳುತ್ತೀದ್ದೀರಿ. ಇವೊತ್ತು ಈ ತರಹ ಬೆನ್ನ ಹಿಂದೆ ಎಲ್ಲವನ್ನೂ ಖಾಸಗೀಕರಣಗೊಳಿಸುವಂಥ ಕೆಲಸ ನಡೆಯುತ್ತದೆ. ಹೌದು, ಸಾರ್ವಜನಿಕರಿಗೆ ತೊಂದರೆಯಾಗುತ್ತದೆ, ಅದಕ್ಕೋಸ್ಕರ there are other alternative methods to take care of this problem. ಬೇಕಾದರೆ ನ್ಯಾಶನಲೈಸ್ಡ್ ರೂಟಗೆ ಲಿಮಿಟ್ ಮಾಡಿಕೊಂಡು ಯಾವ

ಏರಿಯಾವನ್ನು ನೀವು ಬಿಟ್ಟುಕೊಡಬೇಕೋ, ಅಲ್ಲಿ ಮಾಡಿ which can be managed by KSRTC, ಅದನ್ನು ಕೆಎಸ್‌ಆರ್‌ಟಿಸಿಯವರು ನಿರ್ವಹಣೆ ಮಾಡತಕ್ಕಂಥ ಒಂದು ವ್ಯವಸ್ಥಿತವಾದ ರೂಪದಲ್ಲಿ ಮಾಡಬೇಕೆ ಹೊರತು ಪ್ಯಾರಲೆಲ್ ಆಗಿ ನೀವು ಖಾಸಗಿ ಬಸ್ಸುಗಳನ್ನು ಓಡಿಸಿ ಇವೊತ್ತು ಕೆಎಸ್‌ಆರ್‌ಟಿಸಿಯನ್ನು ಶಿಥಿಲಗೊಳಿಸುವ ಕೆಲಸವನ್ನು ದಯಮಾಡಿ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಸಿದ್ಧರಾಮಯ್ಯ (ಅರ್ಥ ಸಚಿವರು) : ಮೊನ್ನೆ ದಿವಸ ಈ ಸದನದಲ್ಲಿ ಆ ಕುರಿತ ಮಸೂದೆ ಅಂಗೀಕೃತವಾಗಿದೆ. ಮಸೂದೆ ಪ್ರಕಾರ ಯಾವ ಒಂಭತ್ತು ಜಿಲ್ಲೆಗಳಲ್ಲಿ ಈಗಾಗಲೇ ಸಂಪೂರ್ಣ ರಾಷ್ಟ್ರೀಕರಣವಾಗಿದೆ ಆ ಭಾಗಗಳಲ್ಲಿ ಇದನ್ನು ಮಾಡತಕ್ಕಂಥಾದ್ದಲ್ಲ. ರಾಷ್ಟ್ರೀಕರಣಗೊಳ್ಳದ ಭಾಗಗಳಲ್ಲಿ ಓಡಾಡಲು ಬಸ್ಸುಗಳ ಸೌಕರ್ಯವಿಲ್ಲದೆ ಬಹಳ ತೊಂದರೆ ಅನುಭವಿಸುತ್ತಿರುವ ಜನರಿಗೆ ಅಲ್ಲಿ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಹಾಕಿ ಎಂದು ಬಹಳ ಒತ್ತಡವಿದ್ದುದ್ದರಿಂದ ಕೆಲರು ಡಬ್ಬಲ್ ಡೋರ್ ಬಸ್ಸುಗಳನ್ನು ಹಾಕಲಾಗಿದೆ. ಕೆಎಸ್‌ಆರ್‌ಟಿಸಿ ಏಕೆ ಹೀಗಾಗಿದೆ ಎನ್ನುವುದು ನಿಮಗೆ ಗೊತ್ತಿದೆ. ಕೆಎಸಆರಟಿಸಿ ಸಂಸ್ಥೆ ಸುಮಾರು 150 ಕೋಟಿ ರೂಪಾಯಿಗಳ ನಷ್ಟಕ್ಕೆ ಬಂದು, ಮೆಟಡಾರ್‌ಗಳಿಗೆ ಪರವಾನಗಿ ಕೊಟ್ಟು ಸಂಸ್ಥೆ ಒಂದು ತರಹ ನರಳುವ ಸ್ಥಿತಿಗೆ ಬಂದಿತ್ತು. ಇವೊತ್ತು ನಷ್ಟವೆಲ್ಲಾ ಕಡಿಮೆಯಾಗಿದ್ದು, 60-70 ಕೋಟಿ ರೂಪಾಯಿಗಳವರೆಗೆ ನಾವು ತೆಗೆದುಕೊಂಡು ಬಂದಿದ್ದೇವೆ. ಆದುದರಿಂದ, ಯಾವ ಭಾಗದಲ್ಲಿ ರಾಷ್ಟ್ರೀಕರಣವಾಗಿಲ್ಲವೋ ಅಲ್ಲಿ ತಾತ್ಕಾಲಿಕವಾದ ವ್ಯವಸ್ಥೆ ಮಾಡಿದ್ದೇವೆ. ರಾಷ್ಟ್ರೀಕರಣಕ್ಕೆ ನಮ್ಮ ಬದ್ಧತೆ ಏನಿದೆಯೋ ಅದರಲ್ಲೂ ಏನೂ ಬದಲಾವಣೆಯಿಲ್ಲ.

SRI N. RAJANNA : Regarding mass Rapid Transport System is Bangalore, there is no question of acquiring the land. It will be above the ground level. It will not disturb.

ಶ್ರೀ ವೀರಪ್ಪ ಮೊಯಿಲಿ : ಮಾಸ್ ರ್‍ಯಾಪಿಡ್ ಸಿಸ್ಟಮ್ ಅನ್ನು ರೂಪಿಸಿದ್ದೇ ನಾನು. ರಾಜಣ್ಣನವರೇ, ನನಗೆ ಅದನ್ನೆಲ್ಲಾ ಹೇಳಿಕೊಡಬೇಡಿ. ಸುಮ್ಮನೆ ಯಾವುದಕ್ಕೆ ಯಾವುದನ್ನೋ ಹೇಳಬೇಡಿ.

SRI N. RAJANNA : I am thankful to you. There is no acquisiton of land for 95 Kms within Bangalore City.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಗಮನಕೊಟ್ಟು ನನ್ನ ಭಾಷಣ ಕೇಳುತ್ತಿದ್ದೀರಿ. ದಯಮಾಡಿ ನಾನು ಮಾಡಿದ ಭಾಷಣವನ್ನು ಪುನ ಆಲಿಸಿ ಏನು ಹೇಳಿದ್ದೇನೆಂದು ನಂತರ ತಿಳಿದುಕೊಂಡು ಹೇಳಿ. ನಾನು ಯಾವುದೋ ಹೇಳಿದರೆ ತಾವು ಇನ್ಯಾವುದೋ ಮಾತನಾಡಲು ಹೋಗುತ್ತಿದ್ದೀರಿ. ಆದುದರಿಂದ, ಇದಕ್ಕೆ ಅರ್ಥ ಸಚಿವರಾದ ಮಾನ್ಯ ಸಿದ್ಧರಾಮಯ್ಯನವರು

ಸ್ಪಷ್ಟೀಕರಣ ಕೊಟ್ಟಿರುವುದರಿಂದ ಅದನ್ನು ಸ್ವಾಗತಿಸಿದ್ದೇನೆ. ಆದರೆ, ಆ ಪ್ರಕಾರ ನಿಮ್ಮ ನೀತಿ ಇದ್ದರೆ ಸರಿ. ಪತ್ರಿಕೆಗಳಿಂದ ಮತ್ತು ಇತರ ಮೂಲಗಳಿಂದ ನಾನು ತಿಳಿದುಕೊಂಡ ಪ್ರಕಾರ ಅದು ಆಗಿಲ್ಲ. ನ್ಯಾಶನಲೈಸ್ಡ್ ರೂಟ್‌ನಲ್ಲಿ ಮತ್ತ ಕ್ವಾಸಿ ನ್ಯಾಶನಲೈಸ್ಡ್ ರೂಟ್‌ನಲ್ಲಿ ಇವೊತ್ತು ಖಾಸಗಿ ಬಸ್ಸುಗಳನ್ನು ಓಡಿಸುವ ಪ್ರವೃತ್ತಿ ಇದ್ದರೆ ಅದು ಸರಿಯಲ್ಲ.

(ಈ ಹಂತದಲ್ಲಿ ಅಧ್ಯಕ್ಷರ ಪೀಠವನ್ನು ಮಾನ್ಯ ಸದಸ್ಯರಾದ ಶ್ರೀ ಜಿ.ಬಿ. ಶಿವಕುಮಾರ್‌ರವರು ಅಲಂಕರಿಸಿದರು)

ಇನ್ನು ಬಹಳ ಮುಖ್ಯವಾದುದೆಂದರೆ, not exactly related to the budget, ಮುಖ್ಯಮಂತ್ರಿಯವರು ಸರ್ಕಾರದ ನೀತಿಯ ಬಗ್ಗೆ ಹಠಾತ್ತನೆ ಹೇಳಿಕೆ ಕೊಟ್ಟರು. ಏನೆಂದರೆ, 50 ಅಂಕಗಳನ್ನು ಕೊಡಬೇಕೆಂಬ ಬಗ್ಗೆ ತೀರ್ಮಾನ ಮಾಡಿದ್ದೇವೆಂದು. ಗ್ರಾಮೀಣ ಪ್ರದೇಶವೆಂದು ಹೇಳಿ ಇದನ್ನು ಮಾಡುವುದಕ್ಕಾಗುವುದಿಲ್ಲ. ನೇಮಕಾತಿಯಲ್ಲಿ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಶೇಕಡ 50ರಷ್ಟು ಅಂಕಗಳನ್ನು ಕೊಟ್ಟುಬಿಡುವುದು. ಅವರು ಗ್ರಾಮೀಣ ಪ್ರದೇಶದವರಿಗೂ ಕೊಡಬಹುದು, ನಗರ ಪ್ರದೇಶಕ್ಕೂ ಕೊಡಬಹುದು. restriction at all. But there is system of recruitment which we have evolved. ನಿರ್ದಿಷ್ಟವಾಗಿ ಶಿಕ್ಷಕರ, ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ನೇಮಕಾತಿ ಹಾಗೂ ಕೆಪಿಎಸ್‌ಸಿಯಲ್ಲಾಗುವ ನೇಮಕಾತಿ ಬಗ್ಗೆ ತಮಗೆ ಗೊತ್ತಿರುವಂತೆ ಸುಪ್ರೀಂ ಕೋರ್ಟಿನ ತೀರ್ಪಿದೆ. ಅದರ ಪ್ರಕಾರ ಶೇಕಡ ಹನ್ನೆರಡಕ್ಕಿಂತ ಜಾಸ್ತಿ ಡಿಸ್ಕ್ರೀಷನ್ mark ಕೊಡುವುದಕ್ಕಾಗುವುದಿಲ್ಲ. There is a prohibition from the Supreme Court. ಕಾನೂನು ಸಮಸ್ಯೆ ಒಂದು ಕಡೆಯಾದರೆ ಮತ್ತೆ ವಾಸ್ತವಿಕವಾಗಿ.....

ಶ್ರೀ ಸಿದ್ಧರಾಮಯ್ಯ : ಸುಪ್ರೀಂ ಕೋರ್ಟಿನವರು ಏನು ಹೇಳಿದ್ದಾರೆಂದರೆ, ಗ್ರಾಮಾಂತರ ಮತ್ತು ನಗರ ಪ್ರದೇಶಗಳೆಂದು ಡಿಸ್ಕ್ರಿಮಿನೇಟ್ ಮಾಡಬಾರದು. It goes against the Constitution ಎಂದು ಹೇಳಿದೆ: ಅದೊಂದು ಭಾಗ. ಈ ಹಿಂದೆ ಉತ್ತರ ಪ್ರದೇಶದಲ್ಲಾಗಲಿ, ಅಲಹಾಬಾದ್ ಹೈಕೋರ್ಟಿನಿಂದ ಸುಪ್ರೀಂ ಕೋರ್ಟಿನವರೆಗೆ ಹೋಗಿ ಆಗಿರತಕ್ಕ ಒಂದು ವಿಚಾರ. ಆದರೆ, ಇಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆಂದರೆ, ನೇಮಕಾತಿ ಮಾಡಿ ನಂತರ ನೇಮಕಾತಿ ಸಮಿತಿಯಲ್ಲಿ ಇಷ್ಟು ಅಂಕಗಳನ್ನು ಅವರಿಗೆ ಕೊಡಬೇಕೆಂದು ಹೇಳಿದ್ದಾರೆಯೋ ವಿನಹ ಶೇಕಡ 50 ರಷ್ಟು ಡಿಸ್ಕ್ರೀಷನ್ ಮಾರ್ಕ್ಸ್ ಕೊಡುತ್ತೇವೆಂದಲ್ಲ.

SRI M. VEERAPPA MOILY : We have framed the draft rules and send it to KPSC ಎಲ್ಲಾ ಆಗಿಬಿಟ್ಟಿದೆ. ಇನ್ನು ಫೈನಲೈಸ್ ಮಾಡುವುದು ಬಾಕಿ ಇದೆ. ಆದರೆ, ಫೈನಲೈಸ್ ಮಾಡುವಾಗ ಇದರ ವಿಚಾರ ಮಾಡಿ ಎಂದು ನಾನು ಹೇಳಿದೆ. ನೇಮಕಾತಿ ಸಮಿತಿಗೆ 50 ಅಂಕಗಳನ್ನು ಕೊಡತಕ್ಕಂಥ ಡಿಸ್ಕ್ರಿಷನರಿ ಪವರ್ ಅನ್ನು ತಾವು ಕೊಡಬೇಕೆಂದು we have framed the draft rules. It is yet to be finalised. ಫೈನಲೈಸ್ ಮಾಡುವಾಗ ನಾನು ಕೊಟ್ಟಂಥ ಕೆಲವು ಸೂಚನೆ ಗಳನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನಷ್ಟೆ.

ಇದರ ಬಗ್ಗೆ ವಿಚಾರ ಮಾಡಿ.

ಶ್ರೀ ಜೆ.ಹೆಚ್. ಪಟೇಲ್ : ಕರ್ನಾಟಕ ಲೋಕಸೇವಾ ಆಯೋಗದವರು ಏನು ಅಡ್ವೈಸ್ ಮಾಡಿದ್ದಾರೆಂದರೆ, ನೇಮಕಾತಿ ಸಮಿತಿ ಮಾಡಿ, 25ರವರೆಗೆ ಕೊಡಬೇಕೆಂದು ಇತ್ತಲ್ಲಾ, ಅದರಲ್ಲಿ 5-15 ಕೊಡಬಹುದು, 25 ರೊಳಗಡೆ ಕೊಡಬೇಕೆಂದು ತಾನೇ ಅದನ್ನೇ 50 ಮಾಡಿದ್ದೇವೆಂದು ಮುಖ್ಯಮಂತ್ರಿಯವರು ಹೇಳಿರುವುದು. ನೇಮಕಾತಿ ಸಮಿತಿ ಮಾರ್ಕ್ಸ್ ಕೊಡುವಾಗ 25ಕ್ಕೆ ಮಾತ್ರ ಸೀಮಿತವಲ್ಲ. ಸೀಮಿತ ಇಷ್ಟಕ್ಕೆ ಇರಬೇಕೆಂದು ಯಾವುದೇ ಕೋರ್ಟ್ ಆರ್ಡರ್ ಇಲ್ಲ. ಆದರೆ, ಪಬ್ಲಿಕ್ ಸರ್ವಿಸ್ ಕಮಿಷನಗೆ ಎಷ್ಟಿದ? ಪಬ್ಲಿಕ್ ಸರ್ವಿಸ್ ಕಮೀಷನಗೆ 100-150ರ ತನಕ ಹೋಗತಕ್ಕಂಥದ್ದು ಇದೆ. ಇದರ ಬಗ್ಗೆ ಸಂಪರ್ಕಸಿಯೇ ನಾನು ಹೇಳಿರುವುದು.

SRI M. VEERAPPA MOILY : It is a matter of record. There is a supreme court decision according to which you cannot provide more than 12%.

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು) : ಮಾನ್ಯ ಉಪಾಧ್ಯಕ್ಷರೆ, 5 ಪರ್ಸೆಂಟ್ ಅಥವಾ 15 ಅಂಕಗಳಲ್ಲಿ ಯಾವುದು ಹೆಚ್ಚು ಬರುತ್ತದೆ ಅದನ್ನು ತೆಗೆದುಕೊಳ್ಳಬೇಕೆಂದು ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಪದ್ಧತಿಯನ್ನು ತಂದಿದ್ದರು. ಪರೀಕ್ಷೆಯಲ್ಲಿ ತೆಗೆದುಕೊಂಡಿರತಕ್ಕ ಅಂಕಕ್ಕೆ ಅಥವಾ ಟೋಟಲ್ ಅಂಕಗಳಿಗೆ ಇಷ್ಟು ಅಂಕಗಳನ್ನು ಸೇರಿಸಬೇಕೆಂದು ಅವರು ಮಾಡಿದ್ದರು. ಅದು ಎರಡೂವರೆ ಅಥವಾ ಮೂರು ಪರ್ಸೆಂಟ್ ಬರುತ್ತಿತ್ತು. ತಾವು ಮುಖ್ಯಮಂತ್ರಿಗಳಾದ ಮೇಲೆ ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿದಿರಿ. ಇದರಲ್ಲಿ ಹೆಚ್ಚು ಮಾಡಬೇಕೆಂಬ ಉದ್ದೇಶ ನಮ್ಮದಲ್ಲ. ಕೆ.ಪಿ.ಎಸ್.ಸಿ.ನಲ್ಲಿ ನಿಗಧಿಯಾದಂಥ ಅಂಕವನ್ನು ಇಟ್ಟುಕೊಂಡಿರುತ್ತಾರೆ. ಅದು ನೂರೈವತ್ತರವರೆಗೆ ಇರುತ್ತದೆ. ಕ್ಲಾಸ್ ಮತ್ತು 2ರ ಹುದ್ದೆಗಳಲ್ಲಿ ನೂರೈವತ್ತು, ನೂರಾನಲವತ್ತು ಅಂಕಗಳವರೆಗೆ ಕೊಡುತ್ತಾರೆ. ಹಿಂದೆಯೂ ಸಹ ನೇಮಕಾತಿ ಸಮಿತಿಗಳು ಇದ್ದವು. ಅವುಗಳಿಗೆ ಇಂತಿಷ್ಟು ಅಂಕಗಳನ್ನು ಕೊಡುವ ಅವಕಾಶವಿತ್ತು. ಅವರವರ ಕೆಪ್ಯಾಸಿಟಿಯ ಅನ್ವಯ ಅಂಕಗಳನ್ನು ಕೊಡುತ್ತಿದ್ದರು. ಈ ನಿಟ್ಟಿನಲ್ಲಿ ಹಳ್ಳಿಗಾಡಿನ ಮಕ್ಕಳಿಗೆ ಹೆಚ್ಚು ಆದ್ಯತೆ ಕೊಡಬೇಕು ಎಂಬುವ ಉದ್ದೇಶದಿಂದ ಈ ರೀತಿ ಮಾಡುತ್ತೇವೆಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ಆ ಅರ್ಥದಲ್ಲಿ ಮುಖ್ಯಮಂತ್ರಿಯವರು ಹೇಳಿರತಕ್ಕದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಕಾನೂನಿಗೆ ವಿರುದ್ಧ ಅಲ್ಲದಿದ್ದರೂ ಆ ಡಿಸ್ಕ್ರಿಪ್ಷನ್‌ನನ್ನು ಉಪಯೋಗ ಮಾಡುವಾಗ ದುರುಪಯೋಗವಾಗುತ್ತದೆ. ನಮ್ಮಲ್ಲಿ ಈಗಾಗಲೇ ಕ್ಯಾಟಗರಿವೈಸ್ ಮೀಸಲಾತಿ ಇದೆ. ಆ ರೀತಿ ಎ.ಬಿ.ಸಿ. ಡಿ.ಎಫ್. ಎಸ್.ಸಿ. ಎಸ್.ಟಿ ಎಲ್ಲರಿಗೂ ಮೀಸಲಾತಿ ಇದ್ದಾಗ ಹೆಚ್ಚು ಹಳ್ಳಿಗಾಡಿನ ಮಕ್ಕಳಿಗೆ ಮಾರ್ಕ್‌ಕೊಟ್ಟರೆ ಉಪಯೋಗವಾಗುತ್ತದೆ ಎಂದು ಹೇಳುವುದು ಸರಿ. ಆದರೆ ತಾವು 25 ಇರತಕ್ಕದನ್ನು 50 ಮಾಡಿದ್ದೀರಿ. ಈ ಅಂಕಗಳನ್ನು

ದುರುಪಯೋಗ ಮಾಡಿ ಅರ್ಬನ್ ಏರಿಯಾದವರಿಗೂ ಅವರು ಅಂಕಗಳನ್ನು ಕೊಡಬಹುದು. ಏಕೆಂದರೆ ತಾವು ನೇರವಾಗಿ ಅಂಕಗಳನ್ನು ಕೊಡುವ ಬಗ್ಗೆ ಅವರಿಗೆ ಸೂಚನೆ ಕೊಡಲು ಸಾಧ್ಯವಾಗುವುದಿಲ್ಲ. ನೀವು ಹೇಳತಕ್ಕದ್ದು ಹತ್ತು ಪ್ರಕರಣಗಳು ಇರಬಹುದು. ಮುಖ್ಯಮಂತ್ರಿಗಳು ಫೋನ್ ಮಾಡಿ ಹೇಳಬಹುದು, ಮಂತ್ರಿಗಳು ಅಥವಾ ಪರಿಚಯವಿರತಕ್ಕ ಯಾರು ಬೇಕಾದರೂ ಅಂಕಗಳನ್ನು ಕೊಡಲು ಶಿಫಾರಸ್ಸು ಮಾಡಬಹುದು. ಆದರೆ ಇದರಿಂದ ಮೆರಿಟ್ ಹುಡುಗರಿಗೆ ಅನ್ಯಾಯವಾಗುತ್ತದೆ. ಪ್ರತಿಯೊಂದು ಕ್ಯಾಟಗರಿಯಲ್ಲೂ ಮೆರಿಟ್ ವಿದ್ಯಾರ್ಥಿಗಳಿರುತ್ತಾರೆ. ಆದ್ದರಿಂದ ಮೆರಿಟ್ ವಿದ್ಯಾರ್ಥಿಗಳಿಗೆ ಪ್ರತಿಯೊಂದು ಕ್ಯಾಟಗರಿಯಲ್ಲೂ ಅನ್ಯಾಯವಾಗುತ್ತದೆ. ತಾವು ಈ ರೀತಿ ಮಾಡುವ ಅವಶ್ಯಕತೆಯೇ ಇರಲಿಲ್ಲ. ನಾಳೆ ತಾವು 50 ಅಂಕಗಳನ್ನು ಡಿಸ್ಕ್ರಿಷನ್ ಕೊಟ್ಟಾಗ ಯಾರು ಮೆರಿಟ್ ವಿದ್ಯಾರ್ಥಿಗಳು ಇರುತ್ತಾರೆ ಅವರಲ್ಲಿ ದಡ್ಡನಾದವನಿಗೆ ಹೆಚ್ಚು ಅಂಕಗಳನ್ನು ಕೊಡತಕ್ಕ ಸಾಧ್ಯತೆಗಳು ಇವೆ.

ಶ್ರೀ ಜೆ.ಹೆಚ್. ಪಟೇಲ್ : ತಾವು ಹೇಳತಕ್ಕದ್ದು ತಾತ್ವಿಕವಾಗಿ ಆಗಲು ಸಾಧ್ಯತೆಗಳಿವೆ. ಆದರೆ ನೇಮಕಾತಿ ಸಮಿತಿಗೆ ನಾವು ಕಳುಹಿಸತಕ್ಕ ಸದಸ್ಯರುಗಳು ಅಂಥಹ ಜನರಲ್ಲ, ಬಹಳ ಒಳ್ಳೆಯ ಸದಸ್ಯರುಗಳನ್ನು ನಾವು ಕಳುಹಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಪಕ್ಷದವರೂ ಬಹಳ ಪರಸ್ಟ್ ಆಗಿದ್ದಾರೆ, ಅದು ನಿಮಗೆ ಗೊತ್ತಿಲ್ಲ. ತಾವು ಆ ಪಟ್ಟಿಯನ್ನು ತರಿಸಿ ನೋಡಿದರೆ ಯಾರ್‍ಯಾರು ಯಾರ್‍ಯಾರಿಗೆ ಸಪೋರ್ಟ್ ಮಾಡುತ್ತಾರೆ ಎಂಬುದು ಗೊತ್ತಾಗುತ್ತದೆ. ಇದರಿಂದ ನಿಜವಾಗಿಯೂ ಮೆರಿಟ್ ವಿದ್ಯಾರ್ಥಿಗಳಿಗೆ ಪ್ರತಿಯೊಂದು ಕ್ಯಾಟಗರಿಯಲ್ಲೂ ಅನ್ಯಾಯವಾಗುತ್ತದೆ. ಏಕೆಂದರೆ ಪ್ರತಿಯೊಂದು ಕ್ಯಾಟಗರಿಯಲ್ಲೂ ಮೀಸಲಾತಿ ಇದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಒಂದು ವರ್ಷದ ಹಿಂದೆ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡರು. ಆಗ ಯಾವ್ಯಾವ ಭಾಗದವರಿಗೆ ಹಾಗೂ ಯಾರ್‍ಯಾರಿಗೆ ಕೆಲಸ ಸಿಕ್ಕಿದೆ ಎಂಬುದು ಗೊತ್ತಾಗಿದೆ. ಆಗ ಉತ್ತರ ಕನ್ನಡದಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ಗಲಾಟೆಯಾಗಿತ್ತು. ಅದರ ಬಗ್ಗೆ ನಮಗೆ ಬಂದು ರೆಪ್ರಸೆಂಟೇಷನ್ ಕೊಟ್ಟಿದ್ದಾರೆ. ಹಳ್ಳಿಗಾಡಿನ ಹುಡುಗರಿಗೆ ಯಾವ ರೀತಿಯಲ್ಲಿ ಅನ್ಯಾಯವಾಗುತ್ತದೆ ಎನ್ನತಕ್ಕದ್ದು ಬಹಳ ಸ್ಪಷ್ಟವಾಗಿ ತಿಳಿದುಬಂದಿದೆ. ಎಸ್.ಎಸ್.ಎಲ್.ಸಿ. ಯವರೆಗೆ ಹಳ್ಳಿಯ ಶಾಲೆಗಳಲ್ಲಿ ಓದಿರತಕ್ಕ ವಿದ್ಯಾರ್ಥಿಗಳಿಗೆ, ಶಿಕ್ಷಕರಿಲ್ಲದೆ, ಕೊಠಡಿಗಳಿಲ್ಲದೆ, ಶಿಕ್ಷಣಕ್ಕೆ ಸರಿಯಾದ ವಾತಾವರಣವಿಲ್ಲದ ಹಳ್ಳಿಯ ಶಾಲೆಗಳಲ್ಲಿ ಓದಿದಂಥ ವಿದ್ಯಾರ್ಥಿಗಳಿಗೆ ವೆಟೇಜ್ ಕೊಡಬೇಕು ಎನ್ನತಕ್ಕ ಉದ್ದೇಶದಿಂದ ಇದನ್ನು ಮಾಡಿದ್ದೇವಷ್ಟೆ.

ಚೇರ್ಮನ್ : ಇದು ಹೊಸ ಪ್ರಯೋಗವಾಗಿರುವುದರಿಂದ ಅದು ನಡೆಯಲಿ, ಇನ್ನು ಮಾನ್ಯ ವೀರಪ್ಪಮೊಯ್ಲಿಯವರು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ಎಲ್ಲೂ ಗಲಾಟೆಯಾಗಿಲ್ಲ. ಅವರು ಯಾವ ಜಗತ್ತಿನಲ್ಲಿದ್ದುಕೊಂಡು ಮಾತನಾಡಿದರೋ ಗೊತ್ತಾಗಲಿಲ್ಲ. ಏಕೆಂದರೆ ಉತ್ತರಕನ್ನಡದ ಯಾವ ಭಾಗದಲ್ಲೂ ಶಿಕ್ಷಕರ ನೇಮಕಾತಿಯ ಬಗ್ಗೆ ಗಲಾಟೆಯಾಗಲಿಲ್ಲ. ಶಿಕ್ಷಕರ ನೇಮಕಾತಿಯ

ಬಗ್ಗೆ ಇಡೀ ರಾಜ್ಯದಲ್ಲಿ ಎಲ್ಲೂ ಗಲಾಟೆಯಾಗಿಲ್ಲ.

ಶ್ರೀ ಸಿದ್ದರಾಮಯ್ಯ : ಉತ್ತರ ಕನ್ನಡದಲ್ಲಿ ಗಲಾಟೆಯಾಯಿತು.

ಶ್ರೀ ಎಂ. ವೀರಪ್ಪಮೊಯಿಲಿ : ಎಲ್ಲೂ ಗಲಾಟೆಯಾಗಲಿಲ್ಲ. 1983ರಿಂದ 1989ರವರೆಗ ತಾವೇನು ನೇಮಕಾತಿಯ ಸಮಿತಿಯನ್ನು ಮಾಡಿದ್ದೀರೋ ಆಗ ದಕ್ಷಿಣ ಕನ್ನಡದಲ್ಲಿ ಗಲಾಟೆಯಾಯಿತು. ರಾಜ್ಯದ ಎಲ್ಲಾ ಭಾಗಗಳಲ್ಲೂ ಗಲಾಟೆಯಾಯಿತು. ನಾವು ಮಾಡಿದಂಥ ಶಿಕ್ಷಕರ ನೇಮಕಾತಿ ಪದ್ಧತಿಯಲ್ಲಿ ಒಂದು ಕಡೆ ಭ್ರಷ್ಟಾಚಾರದ ಪ್ರಕರಣ ಬರಲಿಲ್ಲ. ಅಷ್ಟೊಂದು ಸಿಸ್ಟಮ್ಯಾಟಿಕ್ ಆಗಿ ನಡೆಯಿತು. ಎಲ್ಲೂ ಸಹ ಭ್ರಷ್ಟಾಚಾರ ಬಗ್ಗೆ ವರದಿಯಾಗಲಿಲ್ಲ. ಆದರೆ ಈಗ ಪದ್ಧತಿಯಲ್ಲಿ 50 ಪರ್ಸೆಂಟ್ ಅಂಕ ಕೊಡುವುದಿದ್ದರೆ ಮೆರಿಟ್ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಹಿಂದೆ ಇದ್ದ ಪದ್ಧತಿಯಲ್ಲಿ ನಮಗ್ಯಾರಿಗೂ ಸಹಾಯ ಮಾಡಲು ಆಗುವುದಿಲ್ಲ, ಮಂತ್ರಿಗಳು, ಮುಖ್ಯಮಂತ್ರಿಗಳು ಸಹಾಯ ಮಾಡಲು ಆಗುವುದಿಲ್ಲ; ಈ ಪದ್ಧತಿಯನ್ನು ಬದಲಾವಣೆ ನೇಮಕ ಸಮಿತಿಯಯನ್ನು ಮಾಡಿ 50 ಪರ್ಸೆಂಟ್ ಅಂಕಗಳನ್ನು ಕೊಡುವ ಪದ್ಧತಿಯ ಬಗ್ಗೆ ಕ್ಯಾಬಿನೆಟ್‌ನಲ್ಲಿ ವಿಷಯವಿದೆ. ತಾವು ಈ ರೀತಿ ಮಾಡಿದ್ದೇ ಆದರೆ ಎಂಥಹ ಅವಾಂತರವಾಗುತ್ತದೆ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರ, ಮೀಸಲಾತಿಯನ್ನು ತಾವು 63 ಪರ್ಸೆಂಟ್‌ನಿಂದ 73ಕ್ಕೆ ಏರಿಸಿದಿರಿ. ಆ ರೀತಿ ಮಾಡುವಾಗ ತಮಗೆ ಸುಪ್ರೀಮ್ ಕೋರ್ಟಿನ ಆದೇಶದ ಬಗ್ಗೆ ಅಂದಾಜು ಇರಲಿಲ್ಲವೆ? ವೀರಪ್ಪಮೊಯ್ಲಿರವರೇನೂ ದಡ್ಡರಲ್ಲ, ಅವರು ಬುದ್ಧಿವಂತರಲ್ಲಿ ಅತ್ಯಂತ ಬುದ್ಧಿವಂತರರು. ಕಾನೂನು ಗೊತ್ತಿರುವವರು, ವಕೀಲರು. ಅವರು ಮುಖ್ಯಮಂತ್ರಿಗಳಾಗಿದ್ದಾಗ ಮೀಸಲಾತಿಯನ್ನು 63 ಪರ್ಸೆಂಟಿನಿಂದ 73 ಪರ್ಸೆಂಟಿಗೆ ಏರಿಸಿದ್ದು ಸುಪ್ರೀಮ್ ಕೋರ್ಟಿನ ಆದೇಶದ ಅಡಿಯಲ್ಲಿ ಬರುತ್ತದೆಂದೂ ಗೊತ್ತಿದ್ದು ಮಾಡಿದರೋ? ಗೊತ್ತಿಲ್ಲದೆ ಮಾಡಿದರೋ? ಒಟ್ಟಿನಲ್ಲಿ ಆ ರೀತಿ ಮಾಡಿದ್ದರಿಂದ ನಮ್ಮ ಹುಡುಗರಿಗೆ ಅನ್ಯಾಯವಾಗಲಿಲ್ಲವೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೇ, ತಮಗೆ ಇದೇನೂ ಹೊಸದಲ್ಲ, ತಾವು ಮೀಸಲಾತಿ ಮತ್ತು ಅದರ ಪಾಲಿಸಿಯ ಬಗ್ಗೆ ಅಧ್ಯಯನ ಮಾಡಿದ್ದೀರಿ. ಹಳೆಯ ಮೈಸೂರು ಕಾಲದಲ್ಲಿ ಮಿಲ್ಲರ್ ಕಮಿಟಿಯಿಂದ ಇದು ಪ್ರಾರಂಭವಾಗಿದೆ. ಆಗ ಮೀಸಲಾತಿಯು 78 ಪರ್ಸೆಂಟ್ ಇತ್ತು ಎಂಬುದು ತಮಗೂ ಗೊತ್ತಿದೆ. ಆಗ 75 ರಿಂದ 78 ಪರ್ಸೆಂಟ್ ಮೀಸಲಾತಿ ಇತ್ತು. ಆದ್ದರಿಂದ ಕರ್ನಾಟಕದಲ್ಲಿ ಮೀಸಲಾತಿ 68 ಪರ್ಸೆಂಟ್ ಏನಿತ್ತು ಅದು 70 ಅಥವಾ 75 ಪರ್ಸೆಂಟ್ ಆಗಬಹುದು. ಈಗ ಸಾಕಷ್ಟು ಕಮ್ಯೂನಿಟಿಗಳು ಸೇರಿವೆ. ಲಿಂಗಾಯಿತ ಕಮ್ಯುನಿಟಿಯಲ್ಲಿರುವ ಬಡವರು ಸೇರಿದ್ದಾರೆ. ಇತರೆ ಕಮ್ಯೂನಿಟಿಗಳಲ್ಲಿರುವ ಬಡವರೆಲ್ಲರೂ ಈಗ ಮೀಸಲಾತಿ ಪಟ್ಟಿಯಲ್ಲಿ ಸೇರಿದ್ದಾರೆ. We have given them the additional reservation for many communities, particularly the poorest of the poor. ಆದ್ದರಿಂದ ಅದರ ಫಿಲಾಸಫಿಯ ಬಗ್ಗೆ ಅನಂತರ ಮಾತನಾಡೋಣ. ಇವತ್ತು What social

engineering take place in terms of political reservation that is given, we are very proud that we have given. ಇವತ್ತು ಎಲ್ಲಾ ವರ್ಗದ ಜನರೂ ಐದು ವರ್ಷಗಳ ನಂತರ ಅವರುಗಳೇ ಎಂ.ಎಲ್.ಎ.ಗಳಾಗುತ್ತಾರೆ. ಆದರೆ ತಾವು ಮಾಡಿರತಕ್ಕದ್ದೇನು?

ಶ್ರೀ ಸಿದ್ದರಾಮಯ್ಯ : ಅದನ್ನು ಮಾಡಿದವರು ನಾವೇ?

ಶ್ರೀ ಎಂ. ವೀರಪ್ಪಮೊಯಿಲಿ : ನಾವು ಅದರ ಬಗ್ಗೆ ಆಕ್ಟ ಮಾಡಿ ಹಿಂದುಳಿದ ವರ್ಗದವರಿಗೆ ಅವಕಾಶಮಾಡಿದ್ದೇವೆ. Constitutional mandatory ಇರಲಿಲ್ಲ. I have provided the political reservation for backward classes. ಗ್ರಾಮಪಂಚಾಯಿತಿ ಚುನಾವಣೆಗೆ ಅವಕಾಶ ಮಾಡಿಕೊಟ್ಟಿದ್ದು ನೀವೆ? ಅದರ ಬಗ್ಗೆ ಆಕ್ಟ್ ಮಾಡಿದ್ದು ನೀವೇ? ನೀವು ಮಾಡಿದ್ದು ಏನೇನೂ ಇಲ್ಲ, ನಾವೇ ಎಲ್ಲವನ್ನೂ ಮಾಡಿದ್ದುದು.

(ಗೊಂದಲ)

ನೀವು ಎಲ್ಲದರ ಬಗ್ಗೆ ಕ್ಲೇಮ್ ಮಾಡಲು ಹೋಗಬೇಡಿ.

ಸಿದ್ಧರಾಮಯ್ಯ : ನಿಜವಾದಂಥ ಬಡವರಿಗೆ, ಹಿಂದುಳಿದವರಿಗೆ ಪ್ರತ್ಯೇಕವಾದದ ಕಾನ್ಸಿಟಿಟ್ಯೂಯೆನ್ಸಿಗಳನ್ನು ಮಾಡಿದವರು ನಾವು.

ಶ್ರೀ ಎಂ. ವೀರಪ್ಪಮೊಯಿಲಿ : ಅದನ್ನು ಮಾಡಿದ್ದು ಮೊದಲು ನಾವು. ತಾವು ನಾವು ಮಾಡಿರತಕ್ಕದ್ದನ್ನು ಸೇರಿಸಿಕೊಂಡಿದ್ದೀರಿ. ಅದಕ್ಕೆ ಅಭಿನಂದದಿಸುತ್ತೇವೆ. ಗ್ರಾಮಪಂಚಾಯಿತಿ ಚುನಾವಣೆಯನ್ನು ತಾವು ಮಾಡಿದ್ದೇ? ಅದರ ಚುನಾವಣಾ ಪ್ರಕ್ರಿಯೆ ಪ್ರಾರಂಭ ಮಾಡಿದ್ದು ತಾವೇ? ಸತ್ಯಕ್ಕೆ ದೂರವಾದ ಮಾತನ್ನು ದಯಮಾಡಿ ಹೇಳಬೇಡಿ. ಹೇಳತಕ್ಕದನ್ನು ಹೇಳಿ, ನೀವು ಮಾಡಿದ್ದು ಬಹಳ ಇದೆ. ಆದರ ಅದರ ಜೊತಗೆ ನಾವು ಮಾಡಿರತಕ್ಕದನ್ನು ಒಪ್ಪಿಕೊಳ್ಳಬೇಕು. ತಮಗೆ ಅಷ್ಟು ಸೌಜನ್ಯತೆ ಬೇಕು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ವಿ.ಪಿ. ಸಿಂಗ್‌ರವರೇನು ಮಾಡಿದರು ಗೊತ್ತೇ?

ಶ್ರೀ ಎಂ. ವೀರಪ್ಪಮೊಯಿಲಿ : ಅವರು ಮಾಡಿದ್ದರಿಂದ ಗೊಂದಲ ಉಂಟಾಯಿತು. ನಿಜವಾದ ಮೀಸಲಾತಿ ಪದ್ಧತಿಯನ್ನು ಜಾರಿಗೆ ತಂದವರು ಈಗಿನ ಪ್ರಧಾನ ಮಂತ್ರಿಗಳಾದ ಪಿ.ವಿ. ನರಸಿಂಹರಾಯರು ನೀವು ಮಾಡಿದ್ದೇನು?

ಶ್ರೀ ಸಿದ್ಧರಾಮಯ್ಯ : ಇದನ್ನೆಲ್ಲಾ ಮಾಡಿದ್ದು ನಾವೇ,

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ತಾವು 1986ರಲ್ಲಿ ಯಾವ ಮೀಸಲಾತಿಯನ್ನು ಜಾರಿಗೆ ತಂದಿರಿ? ಇದು ಎಲ್ಲರಿಗೂ ಗೊತ್ತಿದೆ. ಅದು ಮೀಸಲಾತಿಯೇ ಖಂಡಿತಾ ಅಲ್ಲ. Is it a

reservation? It is a total negation of reservation policy?

(ಗೊಂದಲ)

ನಾವು ಚಿನ್ನಪ್ಪರೆಡ್ಡಿ ಕಮೀಷನನ್ನು ಜಾರಿಗೆ ಮಾಡಿದ್ದೇವೆ. ಆ ಪಾಲಿಸಿಯನ್ನು ಬದಲಾವಣೆ ಮಾಡುವ ಮಟ್ಟಕ್ಕೆ ಹೋಗದಿರುವುದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಹಿಂದುಳಿದ ವರ್ಗಗಳ ಪರವಾಗಿ ತಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಆ ರೀತಿ ನಾವು ಮಾಡಿದ್ದೆಲ್ಲವನ್ನು ತಾವು ಮಾಡಿದ್ದು ಎಂದು ಹೇಳುತ್ತಿರುವುದು ನಿಮ್ಮ ನೀತಿಯೇನು?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾನು ಮಾತನಾಡುವುದನ್ನು ತಮ್ಮಿಂದ ಕಲಿಯಬೇಕಾಗಿಲ್ಲ. ಯಾವ ರೀತಿ ಮಾತನಾಡಬೇಕೆಂದು ನನಗೆ ಚೆನ್ನಾಗಿ ಗೊತ್ತಿದೆ. ನಾವು ಮಾಡಿರತಕ್ಕ ಕೆಲಸಗಳ ಬಗ್ಗೆ ಹೇಳಿದ್ದೇನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬುದು ಚೆನ್ನಾಗಿ ಗೊತ್ತಿದೆ. ನೀವೊಬ್ಬರೇ ಮಹಾ ಬುದ್ಧಿವಂತರೆಂದು ತಿಳಿದುಕೊಳ್ಳಬೇಡಿ. ನಾವು ಮಾತನಾಡುವುದೇ ಹಾಗೆ.

(ಗೊಂದಲ)

ಚೇರ್ಮನ್ : ದಯವಿಟ್ಟು ಮಾನ್ಯ ವೀರಪ್ಪಮೊಯಿಲಿರವರು ಬಜೆಟ್‌ಮೇಲೆ ಚರ್ಚೆಯನ್ನು ಮುಂದುವರೆಸಬೇಕು. ದಿಕ್ಕು ಬದಲಾದರೆ ಇಲ್ಲಿ ನಿಯಂತ್ರಣ ಮಾಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಉತ್ತರವನ್ನು ಕೊಡಲು ಸಾಕಷ್ಟು ಸಮಯವಿದೆ. ಆಗ ಎಲ್ಲಾ ಅಂಶಗಳ ಬಗ್ಗೆ ಒಂದೇ ಉತ್ತರವನ್ನು ಕೊಡಲಿ. ಆ ರೀತಿ ಮಧ್ಯೆ ಮಧ್ಯೆ ಏಕೆ ಮಾತನಾಡುತ್ತಾರೆ?

ಚೇರ್ಮನ್ : ಮಾನ್ಯ ವೀರಪ್ಪಮೊಯಿಲಿಯವರು ದಯವಿಟ್ಟು ಬಜೆಟ್ ಮೇಲೆ ಚರ್ಚೆಯನ್ನು ಮುಂದುವರೆಸಿ.

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಬಜೆಟ್ ಬಗ್ಗೆ ಮಾತನಾಡದೆ ಇನ್ನಾರ ವಿಚಾರದ ಬಗ್ಗೆ ಮಾತನಾಡುತ್ತಿದ್ದೆ? ನಾನು ಮಾತನಾಡುವುದಿಲ್ಲ. ಬಜೆಟ್ ಮೇಲೆ ಮಾತನಾಡತಕ್ಕ ಜವಾಬ್ದಾರಿ ನನಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ನನ್ನದು ಇಷ್ಟೇ ಭಾಷಣ. I will stop. I do not want to be under the mercy of anybody here.

MR. CHAIRMAN : With due respect to you, it is not mercy...

SRI M. VEERAPPA MOILY : If that is the courtesy shown here, I will not speak.

ಛೇರ್ಮನ್ : ತಾವು ಯಾವುದೋ ಮಾತಿನಿಂದ ತಮ್ಮ ವಿಚಾರ ಲಹರಿಯನ್ನು ಬಿಟ್ಟು ಹೋಗುವುದು ಬೇಡ, ತಾವು ಚರ್ಚೆಯನ್ನು ಯಾವ ರೀತಿ ಮುಂದುವರೆಸುತ್ತಿದ್ದೀರಿ ಆ ರೀತಿ ಮಾಡಿ ಎಂದು ಹೇಳಿದನೇ ಹೊರತು ತಮ್ಮಿಂದ ಸದನಕ್ಕೆ ಸಾಕಷ್ಟು ತಿಳುವಳಿಕೆ ಆಗಬೇಕಾಗಿದೆ.

ಶ್ರೀ ಜೆ.ಹೆಚ್. ಪಟೇಲ್ : ಪಾರ್ಲಿಮೆಂಟರಿ ಪ್ರಾಕ್ಟೀಸ್‌ನಲ್ಲಿ ಅವರಿಗೂ ಚೆನ್ನಾಗಿ ಅನುಭವ ಇದೆ, ನಮಗೂ ಗೊತ್ತಿದೆ. ಒಂದೊಂದು ಸಾರಿ ಈ ರೀತಿ ಸ್ವಲ್ಪ ಅತಿರೇಕಕ್ಕೆ ಆವೇಶಕ್ಕೆ ಹೋಗುತ್ತದೆ. ಹಾಗೆ ಎಂದು ತಾವು ಮಾನ್ಯ ಮುಖ್ಯಮಂತ್ರಿಯಾಗಿದ್ದವರು ಮುನಿಸಿಕೊಂಡು ಹೆಂಗಸರ ತರಹ ಹೋಗುವುದು ಸರಿಯಾಗುವುದಿಲ್ಲ. ನೀವು ಏನು ಕೇಳಿದರೂ ಉತ್ತರ ಕೊಡುವುದಕ್ಕೆ ನಾವು ತಯಾರಿದ್ದೇವೆ.

ಛೇರ್ಮನ್ : ನಿಮ್ಮಿಂದ ಹಲವಾರು ಜನ ಸದಸ್ಯರು ತಿಳಿಯಬೇಕಾದುದು ಬಹಳ ಇದೆ. ಹಲವಾರು ಜನ ಸದಸ್ಯರಿಗೆ ತಮ್ಮ ತಿಳುವಳಿಕೆಯನ್ನು ಹಂಚಿಕೊಳ್ಳಬೇಕಾದುದು ತಮ್ಮ ಧರ್ಮ. ಆದ್ದರಿಂದ ತಾವು ಬಹಳಷ್ಟು ವಿಷಯಗಳ ಬಗ್ಗೆ ಬೆಳಕು ಚೆಲ್ಲಬೇಕು. ಇಲ್ಲಿ ಬಹಳಷ್ಟು ಜನ ಕಿರಿಯ ಸದಸ್ಯರಿದ್ದಾರೆ. ತಮ್ಮ ಅನುಭವವನ್ನು ತಾವು ಅವರೊಂದಿಗೆ ಹಂಚಿಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪ ಮುಖ್ಯಮಂತ್ರಿಗಳು ನೀವು ಹೆಂಗಸರ ತರಹ ಮುನಿಸಿಕೊಳ್ಳಬಾರದು ಎಂದು ಹೇಳುತ್ತಾರೆ. ಈಗ ಸದನದಲ್ಲಿ ಮಾನ್ಯ ಸದಸ್ಯರಾದ ಪ್ರಮೀಳ ನೇಸರ್ಗಿಯವರು ಇಲ್ಲ. ಆದ್ದರಿಂದಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಈ ತರಹ ಖಂಡಿಸುತ್ತಿದ್ದಾರೆ.

ಛೇರ್ಮನ್ : ಮಾನ್ಯ ಮೊಯಿಲಿಯವರು ದಯವಿಟ್ಟು ಭಾಷಣ ಮುಂದುವರೆಸಲು ಅವಕಾಶ ಕಲ್ಪಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿ ಚರ್ಚೆ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಹಿಂದುಳಿದ ಆಯೋಗ ನಾವು ಮಾಡಿದೆವು, ನೀವು ಮಾಡಿದೆವು ಎಂದು ಚರ್ಚೆ ಮಾಡತಕ್ಕ ರೂಪದಲ್ಲಿ ರಾಜಕೀಯ ಮಾಡಿಕೊಂಡು ಹೋಗುತ್ತಿರತಕ್ಕಂಥ ವ್ಯವಸ್ಥೆಯಲ್ಲೇ ತಪ್ಪಿದೆ. ಲೋಕಸಭಾ ಚುನಾವಣೆಗಳು ಬರುತ್ತಿವೆ. ನಾವೇನು ಮಾಡಿದ್ದೇವೆ, ಅವರೇನು ಮಾಡಿದ್ದೇವೆ ಎಂಬುದನ್ನು ಇಬ್ಬರೂ ಹೇಳಲಿ.

ಛೇರ್ಮನ್ : ಯಾರೇ ಮಾಡಿದ್ದರೂ ಕೂಡ, ಯಾವ ಸರ್ಕಾರಗಳು ಬಂದರೂ ಕೂಡ ಅತೀ ಹಚ್ಚಿನ ರೀತಿಯಲ್ಲಿ ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡಬೇಕಾಗುತ್ತದೆ. ಮಾನ್ಯ ಮೊಯ್ಲಿಯವರೇ, ತಮ್ಮ ಭಾಷಣ ಮುಂದುವರೆಸಿ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೇ, ಯಾರಿಗಾದರೂ ಬೇಜಾರಾದಾಗ, ಏನಾದರೂ ಹೇಳಬೇಕೆಂದಾಗ ದಯವಿಟ್ಟು ಹೆಂಗಸರ ಬಗ್ಗೆ ಆ ರೀತಿಯ ಪದಗಳನ್ನು ಬಳಸಬಾರದು ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಗಂಡಸರಿಗೆ ಸಿಟ್ಟು ಬಂದಾಗ

ಹೆಂಗಸರ ತರಹ ಸಿಟ್ಟು ಎನ್ನುವುದು ಸರಿಯಲ್ಲ.

ಛೇರ್ಮನ್ : ಹೆಂಗಸರ ಸುದ್ದಿ ಬಂದ ತಕ್ಷಣ ಚರ್ಚೆ ಬೇರೆಡೆಗೆ ತಿರುಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ವಿನಾಕಾರಣ ಯಾರೂ ನಾನು ಆಡಿದ ಮಾತನ್ನು ಅಪಾರ್ಥ ಮಾಡಿಕೊಳ್ಳಬಾರದು. ನಾನೇನು ಹೇಳಿದೆ, ಸಾಮಾನ್ಯವಾಗಿ ಏನಾದರೂ ಬಹಳ ಕೋಪ ಬೇಗ ಬಂದಿದೆ ಹೆಂಗಸರು ಮುನಿಸಿಕೊಂಡಂತೆ ಮುನಿಸಿಕೊಳ್ಳುತ್ತಾರೆ ಎನ್ನುತ್ತಾರೆ. ಅದು ಗಾದೆ ಮಾತು.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಬೇಕಾದರೆ ದೂರ್ವಾಸ ಮುನಿಯ ತರಹದ ಸಿಟ್ಟು ಎಂದು ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ನಿಮ್ಮ ಮನೆಯವರು ಮುನಿಸಿಕೊಳ್ಳುವುದಿಲ್ಲವೇ? ಆ ತರಹ. 'ಹೆಂಗಸರ ಸಿಟ್ಟು' ಎಂದು ನಾನು ಹೇಳಿದ್ದರಿಂದ ಮಾನ್ಯ ಖರ್ಗೆಯವರು ಆ ಬಗ್ಗೆ ಆಕ್ಷೇಪಣೆ ಎತ್ತಿದರು. ನಾನು ಆ ರೀತಿ ಹೇಳಿದ ತಕ್ಷಣ ಅದು ಹೆಂಗಸರಿಗೆ ಅವಮಾನ ಮಾಡಿದಂತಾಗಲಿಲ್ಲ. ನಾನು ಹೆಂಗಸರ ಗುಣದ ಬಗ್ಗೆ ಹೇಳಿದ್ದುದು.

ಛೇರ್ಮನ್ : ಮಾನ್ಯ ಮೊಯಿಲಿಯವರೇ, ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಛೇರ್ಮನ್‌ರವರೇ, ನಾನೇನು ಹೇಳುತ್ತಿದ್ದ ಎಂದರೆ, ಈಗ ಮೀಸಲಾತಿ ಶೇಕಡ 50 ಎಂದು ಹೇಳಿದರ ಏನಾಗುತ್ತದೆ ಎಂದರ ಇದರಿಂದ ಟೀಚರ್ಸ್ ರಿಕ್ರೂಟಮೆಂಟ್ ಬರಬಹುದು, ಸಬ್‌ಇನ್ಸ್‌ಪೆಕ್ಟರ್ ಪೋಲಿಸ್ ರೆಕ್ರೂಟಮೆಂಟಿಗೆ ಬರಬಹುದು, ಇವೆಲ್ಲಾ ಬಂದಾಗ, ನಾನು ಹೇಳಿದೆ as a system ನೀವು ಹೇಳಬಹುದು, ನಾವು ಒಳ್ಳೆಯವರನ್ನು ಹಾಕುತ್ತೇವೆ ಎಂದು. ನೀವು ಒಳ್ಳೆಯವರನ್ನೇ ಹಾಕಿ, ನಾವು ಸ್ವಾಗತ ಮಾಡುತ್ತೇವೆ. ಆದರ the system will lead to lot of corruption and lot of nepotism. ನನಗೆ ಗೊತ್ತಿದೆ. ರಾಗ, ದ್ವೇಷ ಇವೆಲ್ಲಾ ಮನುಷ್ಯನಿಗೆ ಇದ್ದೇ ಇರುತ್ತದೆ. ಜಾತಿ ಇದೆ. ಒಳಜಾತಿ ಇದೆ, ಸಣ್ಣ ಜಾತಿ ಇದೆ, ದೊಡ್ಡ ಜಾತಿ ಇದೆ, ಜಾತಿಯೊಳಗೆ ಪುನಃ ಗುಂಪಿದೆ. ಈ ರೀತಿಯ ಸಮಾಜದ ಒಂದು ವ್ಯವಸ್ಥೆಯಲ್ಲಿ ನೀವು ಈ ರೀತಿಯಲ್ಲಿ ನೀವು ಶೇಕಡ 50ರಷ್ಟು ಡಿಸ್ಕ್ರಿಂಗ್‌ಷನ್ ಕೊಟ್ಟಾಗ ಪೂರ್ತಿ ಇದರಿಂದ ಸಾಕಷ್ಟು ಸಂಪೂರ್ಣ ಅನಾಹುತ ರಿಕ್ರೂಟ್‌ಮೆಂಟಿನಲ್ಲಿ ಆಗಬಹುದು ಎಂದು ನಾನು ಹೇಳುತ್ತೇನೆ. ಇದರಿಂದ ನ್ಯಾಯ ಸಿಗುವುದಿಲ್ಲ. ಯಾವ ರೀತಿಯಾದ ಸಾಮಾಜಿಕ ನ್ಯಾಯ ಕೂಡ ಸಿಗುವುದಿಲ್ಲ. ಇನ್ನೊಂದು ಮುಖ್ಯವಾಗಿ, ಈ ಪರ್ಮನೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಮಾಡಬೇಕು. ಅದನ್ನು ನಾವು ಮಾಡಿದ್ದೆವು. ಅದನ್ನು ಟರ್ಮಿನೇಟ್ ಮಾಡಿದ್ದೀರಿ ತಾವು. ಇವತ್ತಿನವರೆಗೂ ಕೂಡ ತಾವು ಅದನ್ನು ರೀ-ಕಾನ್ಸಟಿಟ್ಯೂಟ್ ಮಾಡಿಲ್ಲ. ಆ ರೀ-ಕಾನ್ಸಟಿಟ್ಯೂಷನ್ ಮಾಡದೇ ಇರುವುದರಿಂದ ತಮಗೆ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಆಸಕ್ತಿ ಇದೆ ಎಂದು ನಾನು ನಿಮಗೆ ಸರ್ಟಿಫಿಕೇಟ್ ಕೊಡಲೇ ಅಥವಾ ನಿಮಗೆ ನಿರಾಸಕ್ತಿ ಇದೆ ಎಂದು ಹೇಳಬೇಕಾಗುತ್ತದೆ. ಇದನ್ನು ಟೀಕೆ ಮಾಡಬಾರದೇ? ತಮಗೆ ಗೊತ್ತಿದೆ, ಇದನ್ನು ಟೀಕೆ ಮಾಡಿದರೆ ಏನಾಗುತ್ತದೆ

ಎಂದು ಟೀಕೆ ಮಾಡಬಾರದು ಎಂಬುದು ತಮ್ಮ ನಿಲುವು.

(ಅಧ್ಯಕ್ಷರು ಪೀಠವನ್ನು ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲರವರು ಅಲಂಕರಿಸಿದರು)

ಒಂದು ಪ್ರವರ್ತನೆಯನ್ನು ಇಲ್ಲಿ ಕಂಡಿದ್ದೇನೆ ಎಂದರೆ, ನಿಮ್ಮನ್ನೆಲ್ಲಾ ಹೊಗಳಬೇಕು ಟೀಕೆ ಮಾಡಬಾರದು ಎಂಬುದು.

ಶ್ರೀ ಕೆ.ಎಸ್. ಈಶ್ವರಪ್ಪ : ಈ ವಿಷಯ ಬಹಳ ಮಹತ್ವಪೂರ್ಣವಾದುದು. ಇಡೀ ರಾಜ್ಯದಲ್ಲಿ ಬ್ಯಾಕವರ್ಡ ಕ್ಲಾಸ್ ಕಮಿಷನ್ ಬಗ್ಗೆ ತಾವೇನು ಮಾಡುತ್ತೀರಿ, ಎಂಬುದನ್ನು ನಾವೇ ಬ್ಯಾಕವರ್ಡ ಕ್ಲಾಸ್ ಕಮ್ಯುನಿಟೀಸ್ ಚಾಂಪಿಯನ್ ಎಂದು ನೀವು ಹೇಳಿಕೊಳ್ಳುತ್ತಿದ್ದೀರಲ್ಲಾ, ಮಾನ್ಯ ಅರ್ಥ ಮಂತ್ರಿಗಳು ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಶಾಶ್ವತ ಆಯೋಗ ಮಾಡಿರತಕ್ಕಾಂಥದ್ದು, ಅದಕ್ಕೆ ಇರತಕ್ಕಂತಹ ವ್ಯಾಪ್ತಿ ಬ್ಯಾಕ್‌ವರ್ಡ್ ಕ್ಲಾಸ್ ಲಿಸ್ಟ್ ಇದೆಯಲ್ಲಾ, ಇದರಲ್ಲಿ ಜಾತಿಗಳನ್ನು ಅಡಿಷನ್ ಮಾಡತಕ್ಕಂಥದ್ದು ಡಿಲೀಷನ್ ಮಾಡತಕ್ಕಂಥದ್ದು ಆಯೋಗದ ಮುಖ್ಯವಾದ ಕಾರ್ಯವ್ಯಾಪ್ತಿ. ಬ್ಯಾಕ್‌ವರ್ಡ್ ಕ್ಲಾಸಗಳ ಬಗ್ಗೆ ಅಷ್ಟು ಮಾಡಿ, ಇಷ್ಟು ಮಾಡಿ, ಅದನ್ನು ಮಾಡಿ, ಇದನ್ನು ಮಾಡಿ ಎಂದು ರಿಪೋರ್ಟ್ ಕೊಡತಕ್ಕಂಥ ಕಮಿಷನ್ ಇದಲ್ಲ. ಮಂಡಲ ಕಮಿಷನ್ ವರದಿ ಸುಪ್ರೀಂ ಕೋರ್ಟಿನಲ್ಲಿ ಚರ್ಚೆಯಾದಾಗ ಪ್ರತಿ ರಾಜ್ಯದಲ್ಲಿ ಒಂದು ಶಾಶ್ವತ ಹಿಂದುಳಿದ ಆಯೋಗ ಇರಬೇಕು. ಇದು ಆಗ್ಗಿಂದಾಗ್ಗೆ ರಾಜ್ಯದಲ್ಲಿ ಬರತಕ್ಕಂತಹ ಬ್ಯಾಕ್‌ವರ್ಡ್ ಕ್ಲಾಸ್‌ಗಳ ಪಟ್ಟಿಯಿಂದ ಯಾರನ್ನು ತೆಗೆಯಬೇಕು, ಯಾರನ್ನು ಹೊಸದಾಗಿ ಸೇರಿಸಬೇಕು, ಯಾರಿಗೆ ಅನ್ಯಾಯ ಆಗಿದೆ ಅಥವಾ ಅರ್ಹರಲ್ಲದ ಯಾರು ಕೆಲವರು ಬ್ಯಾಕ್‌ವರ್ಡ್ ಕ್ಲಾಸ್ ಲಿಸ್ಟ್‌ನಲ್ಲಿ ಸೇರಿಕೊಂಡು ಬ್ಯಾಕ್‌ವರ್ಡ್ ಕ್ಲಾಸ್ ಬೆನಿಫಿಟ್ ತೆಗೆದುಕೊಳ್ಳುತ್ತಿದ್ದಾರೆ ಇಂತಹ ಒಂದು ಪಟ್ಟಿಯನ್ನು ನೋಡಿಕೊಳ್ಳಲಿಕ್ಕೋಸ್ಕರ ರಚಿತವಾಗಿರತಕ್ಕಂತಹ ಒಂದು ಆಯೋಗ. ಇದನ್ನು ತಿದ್ದುಪಡಿ ಮಾಡಬೇಕಾಗಿತ್ತು. ಕಳೆದ ಸದನದಲ್ಲಿ ನಾವು ಕಾನೂನನ್ನು ತಿದ್ದುಪಡಿ ಮಾಡಿದ್ದೇವೆ. ತಿದ್ದುಪಡಿ ಮಾಡಿದ ಮೇಲೆ ಅದಕ್ಕೆ ಅಧ್ಯಕ್ಷರನ್ನು ಕೂಡಲೇ ನೇಮಕ ಮಾಡುತ್ತೇವೆ ಎನ್ನತಕ್ಕ ಮಾತನ್ನು ನಾನು ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನನ್ನ ಪ್ರಶ್ನೆ ಇಷ್ಟೆ. ಅದು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಮೇಲೆ ನಿಮಗೆ ವಿಶ್ವಾಸ ಇಲ್ಲದಿದ್ದರೆ ಆ ಪ್ರಶ್ನೆ ಬೇರೆ. ನಿಮಗೆ ಯಾವುದರ ಮೇಲೆ ವಿಶ್ವಾಸ ಇದೆಯೋ, ಅದು ನಿಮಗೆ ಬಿಟ್ಟಿದ್ದು. ಆದರೆ ಪ್ರಶ್ನೆ ಏನೆಂದರೆ, 14-15 ತಿಂಗಳುಗಳ ಕಾಲ ಒಂದು ಖಾಯಂ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಅನ್ನೇ ನೇಮಕ ಮಾಡದೇ ಇರತಕ್ಕ ಒಂದು ವಿಚಾರವನ್ನು ಗ್ರಹಿಸಿದಾಗ, ಇದರ ಅರ್ಥ ಏನು? Minimum things which the government should have done to the backward classes, have not been done. ಇನ್ನು ಮೈನಾರಿಟೀಸ್ ಬಗ್ಗೆ ಹೇಳುವುದಾದರೆ, ಅವರಿಗೆ ಶೇಕಡ 4ರಷ್ಟು ಮೀಸಲಾತಿಯನ್ನು ನಮ್ಮ ಸರ್ಕಾರ ಇದ್ದಾಗ ಕೊಟ್ಟಿದ್ದೇವೆ. ಪೊಲಿಟಿಕಲ್ ರಿಸರ್ವೇಷನ್ ಹಾಗೂ ಎಂಪ್ಲಾಯ್‌ಮೆಂಟ್

ರಿಸರ್ವೇಷನ್ ಎರಡೂ ಕೊಟ್ಟಿದ್ದೇವೆ. ಇದೂ ಕೂಡ ಅವರೇ ಮಾಡಿದ್ದು ಎಂದು ಕ್ರೆಡಿಟ್ ತೆಗೆದುಕೊಳ್ಳುವುದಿದ್ದರೆ, ಅದು ಅವರಿಗೆ ಬಿಟ್ಟಿದ್ದುದು. They have continued it. That credit they should get it. ನಾನು ಮೈನಾರಿಟೀಸ್ ಶೇಕಡ 6 ಮೀಸಲಾತಿ ಮಾಡಿದಾಗ ಶೇಕಡ 12 ರಷ್ಟು ಮೀಸಲಾತಿ ಮಾಡಬೇಕಾಗಿತ್ತು. ಬಹಳ ತಪ್ಪಾಯಿತು, ದ್ರೋಹ ಆಯಿತು ಎಂದು ಹೇಳಿದ್ದರು. ಈಗ ಶೇಕಡ 6ರ ಮೀಸಲಾತಿಯಿಂದ ಶೇಕಡ 4ಕ್ಕೆ ಇಳಿಸಿದ್ದೀರಿ. ಶೇಕಡ 4 ರಿಂದ ಶೇಕಡ 6ರಷ್ಟನ್ನಾದರೂ ಮಾಡಬೇಕಾಗಿತ್ತಲ್ಲಾ! ಶೇಕಡ 12ರಷ್ಟು ಮೀಸಲಾತಿಯನ್ನು ನೀವು ಅವರಿಗೆ ಮಾಡಿ ನ್ಯಾಯ ಕೊಡಬೇಕಾಗಿತ್ತು. ಈ ನ್ಯಾಯ, ದ್ರೋಹ ಈ ಶಬ್ದ ಭಂಡಾರ ಅಧಿಕಾರಕ್ಕೆ ಬಂದ ಕೂಡಲೇ ನೀವು ತೆಗೆದು ಬಿಟ್ಟಿರಿ. ನ್ಯಾಯ ಅನ್ಯಾಯದ ವ್ಯಾಖ್ಯಾನ ನಿಮ್ಮಶಬ್ದ ಭಂಡಾರದಿಂದಲೇ ಹೊರಟು ಹೋಯಿತು.

ಶ್ರೀ ಜೆ.ಹೆಚ್. ಪಟೇಲ್ : ಕಾನಸೆಪ್ಟ್ ಆಫ್ ರಿಸರ್ವೇಷನ್ನೇ ಬೇರೆ. ಮೀಸಲಾತಿಯನ್ನು ಶೇಕಡವಾರು ಏರಿಸಿಕೊಂಡು ಹೋಗಬೇಕೆಂದಲ್ಲ. ಕೆಲವು ಕಾಲದ ನಂತರ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ನಿಂದ ಬಿಟ್ಟು ಬೇರೆಯವರಿಗೆ ಹೆಚ್ಚು ಬೆನಿಫಿಟ್ ಆಗುವ ಹಾಗೆ ನೋಡಿಕೊಳ್ಳುತ್ತಾ ಹೋಗಬೇಕು ಎಂದು. ಅದು ಬಿಟ್ಟು ನಾವು ಪರ್ಸೆಂಟೇಜ್ ಜಾಸ್ತಿ ಮಾಡಿಕೊಂಡು ಹೋದರೆ, how logical it is? please tell me.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಪರ್ಸೆಂಟೇಜ್ 50 ಕ್ಕಿಂತ ಮೇಲೆ ಬರಬೇಕೇ ಬೇಡವೇ ಎಂಬ ವಾದವಿವಾದ ಈಗಲೂ ಇದೆ.

ಪ್ರಕಟಣೆ

ಉಪಾಧ್ಯಕ್ಷರು : ಮಾನ್ಯ ಮೊಯಿಲಿಯವರೆ, ಒಂದು ನಿಮಿಷ. I welcome the Hon'able speaker of Arunachal Pradesh who is witnessing the proceedings of this House from the Speaker's Gallery.

(ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಹೇಳುವುದು ಇಷ್ಟೆ. ಶೇಕಡ 12ರಷ್ಟು ಮಾಡಿದರೆ ದ್ರೋಹ ಆಗುತ್ತದೆ ಎಂದು ನಿಮ್ಮ ಪಕ್ಷದ ಈಗಿನ ಅಧ್ಯಕ್ಷರು ಆಗ ಹೇಳಿದ್ದರು. ಈಗ ಶೇಕಡ 4ರಷ್ಟು ಮೀಸಲಾತಿ ಇದೆ. ಅದಕ್ಕೆ ಈಗ ನೀವು ನ್ಯಾಯ ಮಾಡಿ ಎಂದು ನಾನು ಹೇಳುತ್ತೇನೆ. ಹೆಚ್ಚು ಮಾಡತಕ್ಕಂಥದ್ದು, ಕಡಿಮೆ ಮಾಡತಕ್ಕಂಥದ್ದು ಎಂಬ ವಾದ ಇನ್ನೂ ಇದೆ. ನಾನು ಇವತ್ತೂ ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಶೇಕಡ 68ಕ್ಕಿಂತ ಹೆಚ್ಚು ಬ್ಯಾಕವರ್ಡ ಕ್ಲಾಸ್‌ಗಳ This 50% is not an adequate provision for the backward classes. I hold that veiw today, whatever view you may hold. ಆದ್ದರಿಂದ ಇವತ್ತು ಅದನ್ನು ಮಾಡಲಿಕ್ಕೂ ಕೂಡ ಈವನ್ ಸುಪ್ರೀಂ ಕೋರ್ಟ ಡಿಸಿಷನನಲ್ಲೂ ಕೂಡ ಎಲ್ಲಿ ಇದು ಅದಿಕ್ಷೆಸಿ

ಇಲ್ಲ; If it is more than 50% exception is provided even in the judgment of the supreme court. It is there. ಅವರು ಅದಕ್ಕೆ ಆಕ್ಷೇಪಣೆ ಮಾಡಲಿಲ್ಲ. May be some judges must have held this. ಮಾನ್ಯ ದೇವರಾಜ್ ಅರಸರವರು ಇರುವಾಗ ಶೇಕಡಾ 50ಕ್ಕಿಂತ ಹೆಚ್ಚಿಗೆ ಮೀಸಲಾತಿಯು ಇರಲಿಲ್ಲವೇ? ಅದ್ದರಿಂದ ಈ ಪ್ರಕ್ರಿಯೆ ಏನಿದೆ, ಇದು ಹೊಸ ಪ್ರಕ್ರಿಯೆ ಏನೂ ಇಲ್ಲ. ಯಾರೋ ಬುದ್ಧಿವಂತಿಕೆಯಿಂದ ಮಾಡಿದರು, ಹೆಡ್ಡತನದಿಂದ ಮಾಡಿದರು ಎಂಬ ಪ್ರಶ್ನೆ ಇಲ್ಲಿಲ್ಲ. ನಿಜವಾದಂತಹ ಮತ್ತು ನ್ಯಾಯವಾದಂತಹ ಒಂದು ಸವಲತ್ತನ್ನು ಈವತ್ತು ಹಿಂದುಳಿದ ವರ್ಗದವರಿಗೆ ಕೊಡಬೇಕೆಂಬ ದೃಷ್ಟಿಯಿಂದ ಅದು ನ್ಯಾಯ ಇದೆ. ಇನ್ನು ಮುಖ್ಯವಾಗಿ ಮೈನಾರಿಟಿ ಬಗ್ಗೆ ನಾನು ಹೇಳುತ್ತಾ, ನಾವೊಂದು ಸೋಷಿಯೋ ಎಕಾನಾಮಿಕ್ ಸರ್ವೆ ಮಾಡಿದ್ದೇವೆ. 45 ಲಕ್ಷ ರೂ.ಗಳನ್ನು ಬಿಡುಗಡೆಮಾಡಿ ಸ್ಟೇಟ್ ಮೈನಾರಿಟಿ ಕಮಿಷನ್ ಮೂಲಕ ಒಂದು ಸರ್ವೆ ಮಾಡಿದ್ದೇವೆ. ಎಂಟು ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳಿಗೆ ಈ ರಿಪೋರ್ಟ್, ಸಬ್‌ಮಿಟ್ ಮಾಡಿದ್ದಾರೆ. ನಾನೂ ತೂ ಅಲ್ಲಿ ಹಾಜರಿದ್ದೆ ಇವತ್ತಿಗೂ ಕೂಡ ನಿಮ್ಮ ಬಡ್ಜೆಟ್‌ನಲ್ಲಿ ನಾನು ಬಹಳ ಪುಟ ತಿರುಗಿಸಿ ತಿರುಗಿಸಿ ನೋಡಿದೆ, ಏನಾದರೂ ಅಂತಹ ಒಂದು ಪ್ರಾಮುಖ್ಯವಾದ ವಿಷಯ ಇದೆಯೇ ಎಂದು. For the first time in the country such a survey was done. ಅವರ ಶಿಫಾರಸ್ಸಿನಲ್ಲಿ ಏನಾದರೂ ಸ್ವಲ್ಪ ಇಂಪ್ರೂವಮೆಂಟ್ಸ್ ಮೈನಾರಿಟೀಸ್ ಬಗ್ಗೆ ಇದೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆ ನಿರೀಕ್ಷೆ ಇವತ್ತು ಸುಳ್ಳು ಆಗಿದೆ. ಆ ವಿಷಯ ಬಿಡಿ. ಒಂದೂವರೆ ಲಕ್ಷ ರೂ.ಗಳನ್ನು ಖರ್ಚು ಮಾಡಿ ಆ ಮೈನಾರಿಟೀಸ್ ಕಮಿಷನಗಳು ಏನು ರಿಪೋರ್ಟ್ ಕೊಟ್ಟಿವೆ, ಅವುಗಳನ್ನು ಪ್ರಿಂಟ್ ಮಾಡಿಸತಕ್ಕ ಸೌಜನ್ಯ ಕೂಡ ನೀವು ತೋರಿಸದಿದ್ದರೆ, to what extent you are supporting minorities? ತಾವು ತಮಗೆ ಈ ಪ್ರಶ್ನೆಯನ್ನು ಹಾಕಿಕೊಳ್ಳಿ. ನಾವು ಪ್ರಶ್ನೆಯನ್ನು ಹಾಕಿದರೆ ತಮಗೆ ಸಿಟ್ಟು ಬರುತ್ತದೆ. ನಾವು ಅದರ ಬಗ್ಗೆ ಕಟುವಾಗಿ ಮಾತನಾಡಿದರೆ ನಿಮಗೆ ಸರಿ ಬರುವುದಿಲ್ಲ. ಆದ್ದರಿಂದ ಅವನ್ನು ಉಪಯೋಗ ಮಾಡಲಿಕ್ಕೆ ಹೋಗುವುದಿಲ್ಲ.

1.20 ಪಿ.ಎಂ.

ಮೈನಾರಿಟೀಸ್ ಬಗ್ಗೆ ಒಂದೂವರೆ ಲಕ್ಷ ಕೂಡ ಖರ್ಚು ಮಾಡತಕ್ಕಂತಹ ಹಣ ನಿಮ್ಮ ಖಜಾನೆಯಲ್ಲಿ ಇಲ್ಲ ಅಂದರೆ ಅದರ ಬಗ್ಗೆ ನಾನು ಹೇಳಬೇಕೆಂದು ಇದ್ದೆ, ಅದು ತಮಗೆ ಬಿಟ್ಟಿದ್ದುದು. ಇನ್ನು ಅಬಕಾರಿ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ತಾವು ಹೇಳುತ್ತೀರಿ ಪ್ರೊಹಿಬಿಷನ್ ಲಾ ಬಂದಿದೆ. ಒಂದನೇ ತಾರೀಖು ಜೂನ್ 1997ರಿಂದ ನಾವು ಶರಾಬು ಮಾರಾಟವನ್ನು ನಿಲ್ಲಿಸುತ್ತೇವೆ ಎಂದು ಬಹಳ ಕ್ಯಾಟಗಾರಿಕಲ್ಲಾಗಿ ರಿಪ್ಲೈಯನ್ನು ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಕೊಟ್ಟಿದ್ದಾರೆ. 860 ಕೋಟಿ ರೂಪಾಯಿ ಈ ಬಗ್ಗೆ ತಾವು ನಿರೀಕ್ಷೆ ಮಾಡುತ್ತಿದ್ದೀರಿ. ಈಗ ಅಲ್ಲಿ ಪ್ರಾಹಿಬಿಷನ್ ಆಧಾರದ ಮೇಲೆ ಬಡ್ಜೆಟ್ ಮಂಡನೆ ಆಗಿದೆ. ಒಂದು ಆದರೂ ನೀವು ಹೇಳಬೇಕಿತ್ತು ಅದರಲ್ಲಿ. It you have a commitment, ನಿಜವಾದ ಒಂದು ಆಸಕ್ತಿ

ಇದ್ದಿದ್ದರೆ, if you are true to your principle. ಆದರೆ ಪ್ರಿಸೆಪ್ಟ ಮತ್ತು ಪ್ರಾಕ್ಟಿಸಗೂ ವ್ಯತ್ಯಾಸ ಇಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಇಲ್ಲಿ ಏನೂ ಅದರ ಬಗ್ಗೆ ಪ್ರಸ್ತಾಪ ಇಲ್ಲ, 860 ಕೋಟಿ ರೂಪಾಯಿ ಬರತಕ್ಕಂತಹ ಒಂದು ಬಾಬ್ತು the whole foundation of your budget would have been destroyed. Excise also as revenue equally contributes. Rs. 860 crores. ಬಡ್ಜೆಟ್‌ನಲ್ಲಿ ಇವತ್ತು ಅದಕ್ಕೆ ಪರ್ಯಾಯವಾಗಿ ಒಂದು ವೇಳೆ ಇದನ್ನು ಮಾಡದೇ ಇದ್ದರೆ ಅದನ್ನು ಮಾಡುತ್ತಿದ್ದೇವೆ ಆದ್ದರಿಂದ 860 ಕೋಟಿ ರೂಪಾಯಿಗೆ ಪರ್ಯಾಯವಾದ ಒಂದು ವ್ಯವಸ್ಥೆ ಮಾಡುತ್ತೇವೆಂದು ಹೇಳದೇ ಇದ್ದರೆ ಈ ಒಂದು ಆಯವ್ಯಯಕ್ಕೆ ಏನು ಮಹತ್ವ ಬರುತ್ತದೆ? ಏನು ಪ್ರಾವಿತ್ರ್ಯತೆ ಬರುತ್ತದೆ? 860 ಕೋಟಿ ರೂಪಾಯಿ ಹೋಗಿ ಬಿಟ್ಟರೆ ಇವತ್ತು ಅದರಿಂದ ಎಷ್ಟು ಶಾರ್ಟೇಜ್ ಪ್ಲಾನ್ ಬರುತ್ತದೆ ಎನ್ನತಕ್ಕಂಥದ್ದನ್ನು ತಾವು ವಿಶೇಷವಾಗಿ ಇಲ್ಲಿ ಆಲೋಚನೆ ಮಾಡತಕ್ಕಂಥದ್ದು ಬಹಳ ಒಳ್ಳೆಯದು. ಈಗ ಪ್ಲಾನನಲ್ಲಿ ತಾವು ಎಲ್ಲಿಯೂ ಕೂಡ ಹೇಳಿಲ್ಲ. ನಿಮ್ಮದೇ ಡಾಕ್ಯುಮೆಂಟ್ ನಮ್ಮದು ಏನೂ ಅಲ್ಲ, ವೀರಪ್ಪ ಮೊಯಿಲಿ ಇಂಟ್ರಪ್ರಿಟ್ ಮಾಡತಕ್ಕಂತಹ ಡಾಕ್ಯುಮೆಂಟ್ ಅಲ್ಲ. ನಿಮ್ಮದೇ ಡಾಕ್ಯುಮೆಂಟ್‌ಗಳು. ಡೆವಲಪ್‌ಮೆಂಟ್ ಬಗ್ಗೆ ನಾವು ಏನಾದರೂ ಇಂಟ್ರಪ್ರಿಟ್ ಮಾಡಿದರೆ ಬಹಳ ಸಿಟ್ಟು ಬರುತ್ತದೆ. ಮೂಗಿನ ನೇರಕ್ಕೆ ನಿಮಗೆ ಸಿಟ್ಟು ಬರುತ್ತದೆ. ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ಹೇಳಿಕೆಯನ್ನು ಇಲ್ಲಿ ಹೇಳಿದ್ದೇನೆ. ನಿಮ್ಮ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ನೀರಾವರಿಗೆ 882.62ಕೋಟಿ ರೂಪಾಯಿ ನಿಮ್ಮ ರಿವೈಸ್ಡ್ ಎಸ್ಟಿಮೇಟ್‌ನಲ್ಲಿ 1995-96ರಲ್ಲಿ ಇಟ್ಟಿದ್ದರೆ you have reduced it to Rs.701.41 crores ನಿಮ್ಮ ಪ್ರೈಯಾರಿಟಿ ಎಲ್ಲಿದೆ? ಸುಮಾರು 180 ಕೋಟಿ ರೂಪಾಯಿ ನೀವು ಕಡಿಮೆ ಮಾಡಿದ್ದೀರಿ. ಬರಿ ನೀರಾವರಿಯಲ್ಲಿ. ಆಮೇಲೆ ಪವರ್‌ನಲ್ಲಿ ಕೂಡ ಏನು ಆದ್ಯತೆ ಕೊಡುತ್ತೀರಿ, ಏಕೆಂದರೆ 1994-95ರಲ್ಲಿ ಪವರಗೆ 711.76 ಕೋಟಿ ರೂಪಾಯಿ ಖರ್ಚಾಗಿದೆ. ನೀವು ಪ್ರೊವೈಡ್ ಮಾಡಿದ್ದುದು 689 ಕೋಟಿ ರೂಪಾಯಿ. ನೀವು 515 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ತೋರಿಸಿದ್ದೀರಿ. ಅಂದರೆ ಸುಮಾರು 200 ಕೋಟಿ ರೂಪಾಯಿ 1994-95ಕ್ಕೂ 1995-96ಕ್ಕೆ ಕಡಿಮೆ ಇದೆ. ಈಗ 590 ಕೋಟಿ ರೂಪಾಯಿ ಈ ವರ್ಷ ಕೊಡುತ್ತಿದ್ದೀರಿ. ಈ ವರ್ಷ 1996-97ಕ್ಕೆ ಪವರಗೆ ಕೊಡುತ್ತಿದ್ದೀರಿ. ಏಕೆಂದರೆ ಇವತ್ತು ವಿಶೇಷವಾಗಿ ಇನ್‌ಫ್ರಾಸ್ಟ್ರಕ್ಚರ್ ನೀವು ಕ್ರಿಯೇಟ್ ಮಾಡಬೇಕಾಗಿದೆ ಎಲ್ಲಾ ಪ್ರೈವೇಟ್ ಸೆಕ್ಟಾರ್‌ನಲ್ಲಿ ಆಗುವುದಿಲ್ಲ. ಸಾಕಷ್ಟು ನೀವು ಸಿಸ್ಟಮ್ ಇಂಪ್ರೂವ್ ಮಾಡಬೇಕಾಗುತ್ತದೆ. ಸರ್ಕಾರ ಈ ಕೆಲಸ ಮಾಡಬೇಕಾಗುತ್ತದೆ. ಆದರೆ ಇವತ್ತು ಈ ರೀತಿಯ ನಿರ್ಲಕ್ಷ್ಯತನವನ್ನು ತಾವು ಪವರ್ ಸೆಕ್ಟಾರ್‌ಗೆ ತೋರಿಸಿದರೆ ಈಗಿನ ಪರಿಸ್ಥಿತಿ ಸುಧಾರಿಸಲು ಸಾಧ್ಯವಾಗುತ್ತದೆಯೇ? ಕೈಗಾರಿಕೆಯಲ್ಲಿಯೂ ಕೂಡ ಇನಫ್ರಾಸ್ಟ್ರಕ್ಚರಿಗಾಗಿ ನೀವು ಹಣ ಖರ್ಚು ಮಾಡಬೇಕಾಗುತ್ತದೆ. ಕೈಗಾರಿಕೆಗೆ ಯಾರಾದರೂ ಬರಬಹುದು ಆದರೆ ಮೂಲಭೂತವಾಗಿ ಸವಲತ್ತುಗಳನ್ನು ಕೊಡುವುದಕ್ಕೆ 1994-95 ರಲ್ಲಿ 179 ಕೋಟಿ ರೂಪಾಯಿ ಖರ್ಚಾಗಿತ್ತು. ನೀವು ಪ್ರೊವೈಡ್ ಮಾಡಿದ್ದುದು 224 ಕೋಟಿ 1995-96ರಲ್ಲಿ ಖರ್ಚು ಮಾಡಿದ್ದು 136 ಕೋಟಿ ರೂಪಾಯಿ. ಅದೇ ಪ್ರಕಾರ ಯಾವ ಐಟಂಗಳನ್ನು ತಾವು

ನೋಡಿ. ರಸ್ತೆಗಳು ಸೇತುವೆಗಳಿಗೆ 123 ಕೋಟಿ ರೂಪಾಯಿ 1994-95ರಲ್ಲಿ ಖರ್ಚಾದರೆ 1995-96ರಲ್ಲಿ ಬರೀ 116 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. 1996-97ಕ್ಕೆ 102 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಬಹಳ ಸ್ಟೇಟ್‌ಮೆಂಟ್‌ಗಳನ್ನು ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಮಾಡುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ನಾವು ಇಷ್ಟು ಕಿ.ಮೀ. ರಸ್ತೆ ಮಾಡುತ್ತೇವೆ, ಇಷ್ಟು ಡಾಂಬರ್ ಹಾಕುತ್ತೇವೆ, ಇಷ್ಟು ಸೇತುವೆ ಮಾಡುತ್ತೇವೆ, ಎಂದು ದಿನವೂ ಬೆಳಿಗ್ಗೆ ಎಷ್ಟು ಹೇಳಿಕೆಗಳು ಇವತ್ತು ಬರುತ್ತಿವೆ. ಹಣ ಇವತ್ತು ವರ್ಷ ವರ್ಷ ಕಡಿಮೆ ಖರ್ಚಾಗುತ್ತಿದೆ. 1994-95ರಲ್ಲಿ 91 ಕೋಟಿ ರೂಪಾಯಿ ಖರ್ಚಾಗಿದ್ದರೆ ನೀವು 124 ಕೋಟಿ ರೂಪಾಯಿ 1995ರಲ್ಲಿ ಒದಗಿಸುತ್ತಿದ್ದೀರಿ. 89 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಅದೇ ಪ್ರಕಾರ ಇವತ್ತು ಗೃಹ ನಿರ್ಮಾಣದ ಒಂದು ಐಟಂ ತೆಗೆದುಕೊಳ್ಳಿ, ಏಕೆಂದರೆ ಮೂರು ಲಕ್ಷ ಮನೆ ಮಾಡುತ್ತೇವೆ, ಮೂರು ಲಕ್ಷ ಮಾಡುತ್ತೇವೆ, ನಾವು ಎರಡೂವರೆ ಲಕ್ಷ ಮನೆ ಮಾಡುತ್ತೇವೆ ಎಂದು ಹೇಳುತ್ತೀರಿ ನೀವು ಬರೀ 80,000 ಮನೆ ಮಾಡಿದ್ದೀರಿ ಎಂದು ಹೇಳುತ್ತೀರಿ ಹೌದು 80,000 ಸುಮಾರು ಒಂದು ಲಕ್ಷ ಮನೆಗಳನ್ನು ನಾವು ಒಂದು ವರ್ಷದಲ್ಲಿ ಕಂಪ್ಲೀಟ್ ಮಾಡಿದ್ದೇವೆ, ಉಳಿದ ಮನೆಗಳು ಸುಮಾರು ಎರಡೂವರೆ ಲಕ್ಷ ಮನೆಗಳು ಬೇರೆ ಬೇರೆ ಹಂತದಲ್ಲಿವೆ. ಫೌಂಡೇಷನ್ ಹಾಕಿ ಅಥವಾ ಬೇರೆ ಬೇರೆ ಹಂತದಲ್ಲಿರತಕ್ಕಂತಹ ಮನೆಗಳಿಗೆ ಇವತ್ತು ನಾವು ಹಣ ಇಷ್ಟು ಕೊಟ್ಟರೆ 143 ಕೋಟಿ ಗೃಹ ನಿರ್ಮಾಣಕ್ಕೆ 1994-95ರಲ್ಲಿ ಖರ್ಚಾಗಿದ್ದರೆ 150 ಕೋಟಿ ರೂಪಾಯಿ ಎಂದು ಪ್ರೊವೈಡ್ ಮಾಡಿ 1995-96ಕ್ಕೆ ಬರೀ 99 ಕೋಟಿ ರೂಪಾಯಿ ನೀವು ಖರ್ಚು ಮಾಡುತ್ತಿದ್ದೀರಿ. ಅದು ಆಶ್ರಯ ಮನೆ ಇರಬಹುದು, ಇನ್ನಿತರ ಮನೆ ಇರಬಹುದು. 99 ಬರುವ ವರ್ಷಕ್ಕೆ 137 ಕೋಟಿ ರೂಪಾಯಿ ಅಂದರೆ 1994-95ರಲ್ಲಿ ಏನು ಖರ್ಚು ಮಾಡಿದ್ದೀರಿ ಆ ಹಣ ಕೂಡ 1996-97ರಲ್ಲಿ ನೀವು ಕೊಡುತ್ತಿಲ್ಲ. ಇದರಲ್ಲಿ ಶಾರ್ಟೇಜ್ ಸುಮಾರು 80 ಕೋಟಿ ರೂಪಾಯಿ ಶಾರ್ಟೇಜ್ 1995-96ರಲ್ಲಿ ಮನೆ ಕೊಡುವುದಕ್ಕೆ ಕೂಡ ಕಡಿಮೆ ಮಾಡಿದ್ದೀರಿ. ಆ ಫಿಗರ್ ಕೊಡುವುದಕ್ಕೆ ಬಹಳ ಆನಂದವಾಗಿ ಕೊಟ್ಟಿದ್ದೀರಿ. ಹಣ ನೀವು ಕೊಡದೇ ಇದ್ದರೆ, ಏನು ಕಟ್ಟುತ್ತೀರಿ, ಇದು ನಿಮ್ಮ ರೆಕಾರ್ಡ್ ದಯಮಾಡಿ ಏನು ಉತ್ತರ ಕೊಡುತ್ತೀರಿ, ಇದಕ್ಕೆ. You answer my point on this. ನೀವು ಮನೆಗೆ 100 ಲಕ್ಷ ಎಂದು ಹೇಳಬಹುದು 10 ಲಕ್ಷ ಕೊಡಬಹುದು, 15 ಲಕ್ಷ ಕೊಡಬಹುದು. ರೈಲು ಬಿಡುವುದಕ್ಕೆ ಪಟ್ಟಿ ಏನೂಬೇಕಾಗಿಲ್ಲ. ಆದರೆ ಇದರಲ್ಲಿ ನೀವು ಎಷ್ಟು ಹಣ ಕೊಟ್ಟಿದ್ದೀರಿ ಅದು ಮುಖ್ಯ. ಖರ್ಚು ಮಾಡತಕ್ಕಂಥ ಹಣ ನೀರು ಎಷ್ಟು ಕೊಟ್ಟಿದ್ದೀರಿ ಅದು ಬಹಳ ಮುಖ್ಯ ಇವತ್ತು ಆ ಹಣ ಕೂಡ ಇಲ್ಲಿ ನಮಗೆ ಯಾವುದೇ ರೀತಿಯಲ್ಲಿ ದೊರಕುತ್ತಿಲ್ಲ. ಯಾವುದೇ ಐಟಂ ತೆಗೆದುಕೊಳ್ಳಿ, ಉದಾಹರಣೆಗೆ ರಾಜ್ಯದ ಆಯವ್ಯಯದಿಂದ ಹೊರತು ಪಡಿಸಿ ರಾಜ್ಯದ ಉದ್ಯಮಗಳ ಮತ್ತು ಇತರ ಸಂಸ್ಥೆಗಳು ತಮ್ಮ ಸ್ವಂತ ಮೂಲಗಳಿಂದ ಭರಿಸುವ ಯೋಜನಾ ಕಾರ್ಯಕ್ರಮದ ಪಟ್ಟಿ. ನಿಮ್ಮದೇ ಪಟ್ಟಿ, ನಮ್ಮದು ಅಲ್ಲ. ನಿಮ್ಮ ರೆಕಾರ್ಡ್‌ನಲ್ಲಿರುವ ಪಟ್ಟಿ, ನಾವು 1994-95 ರಲ್ಲಿ. ಕರ್ನಾಟಕ ವಿದ್ಯುಚ್ಛಕ್ತಿ ನಿಗಮ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕರ್ನಾಟಕ ರಾಜ್ಯ ಔದ್ಯಮಿಕ ಜಲ ವಿನಿಯೋಗ ಅಭಿವೃದ್ಧಿ

ನಿಗಮ, ಬೆಂಗಳೂರು ರಾಜ್ಯ ರಸ್ತೆ ಸಾರಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇದೆಲ್ಲಾ ಒಟ್ಟು ಲೆಕ್ಕ ನಾನು ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಪಿಯರ್‌ಲೆಸ್ ಸಾಲ ಏಕೆ ಕೊಟ್ಟಿಲ್ಲ ಎಂದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಪಿಯರ್‌ಲೆಸ್ ಸಾಲ ನಾವು ಆಗಲೇ ನಮ್ಮ ಅವಧಿಯಲ್ಲಿ ಹಿಂದೆ ಕೊಟ್ಟಿದ್ದೇವೆ. 130 ಕೋಟಿ ರೂಪಾಯಿ ವಾಪಸ್ಸು ಕೊಟ್ಟಿದ್ದೇವೆ. ದಯಮಾಡಿ ಸ್ವಲ್ಪ ಲೆಕ್ಕ ನೋಡಿ. ಅದು ಮಾಡಿದ್ದರಿಂದ ಇಷ್ಟು ಅದರೂ ವಿದ್ಯುಚ್ಛಕ್ತಿ ಬರುತ್ತದೆ. ಇಲ್ಲದೇ ಇದ್ದರೆ ನಿಮಗೆ ಗೊತ್ತಿದೆ. ಐ.ಡಿ.ಎ. ಲೋನ್ ಕೆ.ಇ.ಬಿ.ಗೆ ಮತ್ತು ಕೆ.ಪಿ.ಸಿ.ಗೆ ಸಸ್ಪೆಂಡ್ ಮಾಡಿದಾಗ ಇದ್ದಂತಹ ಪ್ರಾಜೆಕ್ಟ್‌ಗಳನ್ನು ಮುಂದುವರೆಸಿಕೊಂಡು ಹೋಗಲಿಕ್ಕೆ ಪಿಯರ್‌ಲೆಸ್‌ನಿಂದ ಹಣ ತೆಗೆದುಕೊಂಡಿದ್ದೇವೆ. ಇದರಲ್ಲಿ 130 ಕೋಟಿ ರೂಪಾಯಿ ನಾನು ಇದ್ದಾಗ ಹಿಂದೆ ಕೊಟ್ಟಿದ್ದೇವೆ. ಉಳಿದ ಹಣ ನೀವು ಕೊಟ್ಟಿರಬಹುದು, ಇಲ್ಲದೆ ಇದ್ದರೆ ಐ.ಡಿ.ಎ. ತೆಗೆದುಕೊಳ್ಳುವುದಕ್ಕೆ ಬದಲಾಗಿ ಪಿಯರಲೆಸ್‌ನಿಂದ ತೆಗೆದುಕೊಂಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಪಿಯರ್‌ಲೆಸ್ 48 ಕೋಟಿ ರೂಪಾಯಿ ಬಾಕಿ ಇದೆ ಎಂದು ಹೇಳಿದೆ. 158 ಕೋಟಿ ರೂಪಾಯಿ ನಾವು ತೀರಿಸಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : 130 ಕೋಟಿ ರೂಪಾಯಿ ಅನ್‌ರೆಕಾರ್ಡ ನಾವು ಕೊಟ್ಟಿದ್ದೇವೆ. ಉಳಿದ ಹಣ ಪಿಯರ್‌ಲೆಸ್‌ನಿಂದ ತೆಗೆದುಕೊಳ್ಳದೆ ಇದ್ದಿದ್ದರೆ ಐ.ಡಿ.ಎ.ಯಿಂದ ತೆಗೆದುಕೊಳ್ಳುತ್ತಿದ್ದೀರಿ ಅಥವಾ ಬ್ಯಾಂಕುಗಳಿಂದ ತೆಗೆದುಕೊಳ್ಳುತ್ತಿದ್ದೀರಿ. ಕೆನರಾ ಬ್ಯಾಂಕ್, ಅಥವಾ ಬೇರೆ ಬ್ಯಾಂಕುಗಳಿಂದ ನೀವು ತೆಗೆದುಕೊಳ್ಳುವುದಕ್ಕೆ ಹೋದರೆ 8 ತಿಂಗಳು ಬೇಕು, to clear that amount. ಆಗ ನಮಗೆ ನಮ್ಮ ಸಬ್‌ಸ್ಟೇಷನ್ ನಿಲ್ಲಿಸುವ ಹಾಗಿಲ್ಲ. ಗಂಗಾವತಿಯಿಂದ ದಾವಣಗೆರೆ ಹೂಡಿಗೆ ಬರತಕ್ಕಂತಹ ಲೈನು ಕೆಲಸಗಳನ್ನು ನಾವು ನಿಲ್ಲಿಸುವ ಹಾಗಿಲ್ಲ. Yes, we required money. We invested that money. But this is you record. ನಿಮ್ಮ ದಕ್ಷತೆಗೆ ನೀವು ಮಾಡತಕ್ಕಂತಹ ಆಸಕ್ತಿಗಳಿಗೆ, ನೀವು ಕೊಡತಕ್ಕಂತಹ ಆದ್ಯತೆಗಳಿಗೆ ಇದು ಕನ್ನಡಿ. ನಮ್ಮ ಕಾಲದಲ್ಲಿ 503 ಕೋಟಿ ರೂಪಾಯಿಗಳನ್ನು ನಾವು ಪ್ರೊವೈಡ್ ಮಾಡಿದ್ದೇವೆ. ನೀವು ಎಷ್ಟು ಪ್ರೊವೈಡ್ ಮಾಡಿದ್ದೀರಿ. 1995-96ರಲ್ಲಿ 854 ಕೋಟಿ ರೂಪಾಯಿ ನಾವು ಈ ಕಂಪನಿಗಳಿಂದ ಪ್ರೊವೈಡ್ ಮಾಡುತ್ತೇವೆಂದು ಹೇಳಿದ್ದೀರಿ. But what you have provided is not even 50%. There is 50% shortfall. ಎಲ್ಲದರಲ್ಲಿಯೂ ಕೂಡ ಶಾರ್ಟೇಜ್ ಬಂದಿದೆ. ಒಂದು ವಿದ್ಯುಚ್ಛಕ್ತಿ ನಿಗಮ ನಿಮ್ಮ ಕಾಲದಲ್ಲಿ 1994-95ರಲ್ಲಿ 268. 29 ಕೋಟಿ ಕೊಟ್ಟಿದ್ದರೆ, ನೀವು ಬರೀ 100 ಕೋಟಿ ಆ ಯೋಜನೆಗೆ ಪ್ರೊವೈಡ್ ಮಾಡಿದ್ದೀರಿ. ಅದಕ್ಕೆ ನಿಮ್ಮ ಎಲ್ಲಾ ಕೆಲಸಗಳು ಸ್ಥಗಿತವಾಗಿದೆ. ಅದೇ ಪ್ರಕಾರ ವಿದ್ಯುಚ್ಛಕ್ತಿ ಮಂಡಳಿಯಲ್ಲಿ 184.20 ಕೋಟಿ ನಾವು ಇನ್‌ವೆಸ್ಟ್ ಮಾಡುತ್ತಿದ್ದರೆ ಆ ಕೆ.ಇ.ಬಿ. ಯ ಕಾರ್ಯಕ್ರಮಗಳಲ್ಲಿ you could invest only 77 crores.

This shortfall will reflect on the works. ನಾನು ಮೊದಲು ಏನು ಹೇಳಿದೆ ಈ ಸಬ್ ಸ್ಟೇಷನ್ ವರ್ಕಗಳು ಹೌಸ್ ಲೈನ್ ವರ್ಕಗಳು ಅಥವಾ ಮೆಟೀರಿಯಲ್ ಸಪ್ಲೇ ಮಾಡತಕ್ಕಂಥದ್ದು ಎಲ್ಲಿ ಬರಬೇಕು, ಹಣ ಇಲ್ಲದೇ ಇದ್ದರೆ ಎಲ್ಲಿ ಕೊಡುವುದಕ್ಕೆ ಸಾಧ್ಯ ಇದೆ.

ಶ್ರೀ ಜೆ.ಹೆಚ್. ಪಟೇಲ್ : ಅದು ಲೇಟೆಸ್ಟ್ ಪೊಸಿಷನ್ ತೋರಿಸುವುದಿಲ್ಲ. ಈಗಲಾದರೂ ನೀವು ವೆರಿಫೈ ಮಾಡಿಕೊಳ್ಳಿ. ನಿಮ್ಮ ಕಾಲದಲ್ಲಿ ಒಂದು ವರ್ಷಕ್ಕೆ ಸಿಸ್ಟಮ್ ಇಂಪ್ರೂವ್‌ಮೆಂಟಿಗೆ 211 ಕೋಟಿ ರೂಪಾಯ ಖರ್ಚು ಮಾಡಿದ್ದೀರಿ. ಇದನ್ನು ಬೇಕಾದರೆ ನೀವು ಲೆಕ್ಕ ತರಿಸಿಕೊಳ್ಳಿ. ಇಲ್ಲಿಯವರೆಗೆ ಮಾರ್ಚ್ 31ರವರೆಗೆ 425 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ನಿಮ್ಮ ಕಾಲದಲ್ಲಿ 211 ಕೋಟಿ ನಮ್ಮ ಕಾಲದಲ್ಲಿ 425 ಕೋಟಿ ರೂ.ಗಳು ನಮ್ಮ ಕಾಲದಲ್ಲಿ ಇದನ್ನು ಲೆಕ್ಕ ತರಿಸಿಕೊಂಡು ನೋಡಿ. ತಪ್ಪಾಗಿದ್ದರೆ ನಾನು ಆಗ ಹೇಳುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಮಾಡಿದ್ದ 500 ಕೋಟಿ ರೂಪಾಯಿ ಸಾಲದಲ್ಲಿ 350 ಕೋಟಿ ರೂಪಾಯಿ ಸಾಲ ತೀರಿಸಿದ್ದೇವೆ ಎಂದು ಬರೆಯುವುದಕ್ಕೆ ಆಗುತ್ತದೆಯೇ ಆ ಪುಸ್ತಕದಲ್ಲಿ? ಅದರಲ್ಲಿ ಬರೆಯುವುದು ಯಾವಉದು? ಅವರು ಬಹಳ ಚೆನ್ನಾಗಿ ಎಲ್ಲಾ ಅಭ್ಯಾಸ ಮಾಡಿಕೊಂಡು ಬಂದವರು. ಪಿಯರ್‌ಲೆಸ್ ಎಷ್ಟು ಉಪಯೋಗಿಸಿದ್ದಾರೆ? ನಾನು ಕೆ.ಇ.ಬಿ. ಮಿನಿಸ್ಟರ್ ಆಗಿ ನನಗೆ ಗೊತ್ತಿದೆ. 200 ಕೋಟಿ ರೂಪಾಯಿಯಲ್ಲಿ ಬರೀ 30 ಕೋಟಿ ರೂಪಾಯಿ ಕೆ.ಇ.ಬಿ.ಗೆ ಕೊಟ್ಟಿದ್ದಾರೆ. ಉಳಿದುದನ್ನು ಸಂಬಳ ಕೊಡುವುದಕ್ಕೆ ಉಪಯೋಗಿಸಿಕೊಂಡರು. ನಾವು ಅದನ್ನು ಹೇಳಿ ಬಿಟ್ಟರೆ ಸಿಟ್ಟು ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಹೇಳುತ್ತೇನೆ ಯಾರು ಸಾಲ ಹೆಚ್ಚು ಮಾಡಿದರು ಎಂದು. ನನ್ನ ಹತ್ತಿರ ಲೆಕ್ಕ ಇದೆ. ದಯಮಾಡಿ ಬೇಕೇ ನಿಮಗೆ? ನೀವು ಎಷ್ಟು ಸಾಲವನ್ನು ಕೊಟ್ಟಿದ್ದೀರಿ 1988-89ರಲ್ಲಿ, I have got the accounts. Don't think that I cannot beat you own argument from your own performance. During the year 1988-1989, liability at the end of the year was Rs. 4,340 crores, development and non-development expenditure at the end of the year was Rs. 3378.23 crores. The liability of percentage of expenditure is 128% . Do you know my contribution? During the year 1993-94 the liabilities at the end of the year was Rs. 9124 crores and the expenditure on development and non-development was Rs. 1098 crores. The liability percentage has come down to 98% from 128%. What more you require? I could reduce the liability to 98% from128%. ಆದ್ದರಿಂದ ತಾವು ಪಿಯರ್‌ಲೆಸ್ ಮತ್ತೊಂದು ಹೇಳುತ್ತಿದ್ದೀರಿ ಇದು ಯಾವ ಲೆಸ್? ನೀವು ಎಲ್ಲಾ ಲೆಸ್ ಮಾಡಿದಿರಿ. 128 liability you have left and I have reduced it to 98%. What more you require? I can speak about it. ನಿಮ್ಮ ಬಡ್ಜೆಟ್ ಸ್ಪೀಚ್‌ನಲ್ಲೇ ಮಾನ್ಯ ಸಿದ್ಧರಾಮಯ್ಯನವರು

ಹೇಳಿದ್ದಾರೆ. He has commended the efforts made during the year 1994-1995. 1994-95ನಲ್ಲಿ ಯಾವ ರೀತಿಯಲ್ಲಿ ಇಂಟರನಲ್ ರಿಸೋರ್ಸ್‌ನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ ಎಂಬುದನ್ನು ಲಯಬಿಲಿಟಿ ಮತ್ತು ಈ ಸಾಲದ ಬಗ್ಗೆ ಯಾವ ರೀತಿ ನಾವು ಮಾಡಿದ್ದೇವೆ ಎಂಬುದನ್ನು ಅವರ ಬಡ್ಜೆಟ್ ಸ್ಪೀಚ್‌ನಲ್ಲಿ ಹೇಳಿದ್ದಾರೆ. It you want me to read out the speech, I can read out.

ಶ್ರೀ ಸಿದ್ಧರಾಮಯ್ಯ : ನಾವು ಒಳ್ಳೆಯದನ್ನು ಒಪ್ಪಿಕೊಂಡಿದ್ದೇವೆ. ಆದರೆ ನೀವು ಒಪ್ಪಿಕೊಳ್ಳುವುದಿಲ್ಲವಲ್ಲಾ, 527 ಕೋಟಿ ರೂಪಾಯಿ ಸಾಲ ಮಾಡಿರುವುದನ್ನು ನೀವು ಒಪ್ಪಿಕೊಳ್ಳುವುದಿಲ್ಲವಲ್ಲಾ.

ಶ್ರೀ ಎಂ. ವೀರಪ್ಪಮೊಯಿಲಿ : ಹೌದು ಹೌದು, 520 ಅಲ್ಲ ಸಾವಿರಾರು ಕೋಟಿ ರೂಪಾಯಿ ಸಾಲ ಬಿಟ್ಟು ಹೋಗಿದ್ದೇವೆ. ಅದು ಬಿಡಿ. ಅಂದಹಾಗೆ ನಿಮ್ಮ ಹಾಗೆ ಕೈಕಟ್ಟಿ ಕುಳಿತುಕೊಳ್ಳುವಂತಹ ಸರ್ಕಾರ ನಮ್ಮದು ಇರಲಿಲ್ಲ. ಅಭಿವ್ಯಕ್ತಿಪರವಾದಂಥ ಸರ್ಕಾರ ಇತ್ತು.

ಶ್ರೀ ಸಿದ್ಧರಾಮಯ್ಯ : ಅದಕ್ಕೆ ಜನ ಹೇಳಿದರು ಯಾರು ಕುಳಿತಿದ್ದರು, ಯಾರು ನಿಂತಿದ್ದರು ಎಂದು ಜನ ತೀರ್ಮಾನ ಮಾಡಿದ್ದಾರೆ. ಎಷ್ಟೋ ಪರೀಕ್ಷೆಗಳು ಆಗಿವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ಯಾವ ರೀತಿ ಬಂದಿದ್ದೀರಿ ಎಂದು ನಮಗೆ ಗೊತ್ತಿದೆ ದಯಮಾಡಿ ಹೇಳಬೇಡಿ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ನಾನು ಕೈ ಕಟ್ಟಿ ಕುಳಿತುಕೊಂಡಿದ್ದೇವೆ ಆದರೆ ನೀವು ಕೈ ಚಾಚಿಕೊಂಡೇ ಹೋದಿರಿ ಎಲ್ಲಾ ಕಡೆ. ಸ್ವಾಮಿ ಕಡೆಯುವರು ಯಾರಾದರೂ ಇದ್ದರೆ ಕೊಡಿಯಪ್ಪ ಎಂದು. ಎಲ್ಲಾ ಕಡೆ ಕೈ ಚಾಚಿಕೊಂಡೇ ಹೋದಿರಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಮೊಯಿಲಿಯವರು ಹೇಳಿದ್ದುದು ನಿಜ. ಕೈಕಟ್ಟಿಕೊಂಡು ಕುಳಿತಿರಲಿಲ್ಲ. ಆದರೆ ಕೈ ಕೈ ಮಿಲಾಯಿಸ್ತಾ ಇದ್ದರು. ಪಕ್ಷದ ಸಭೆಯಲ್ಲಿ ಕೈ ಕೈ ಮಿಲಾಯಿಸ್ತಾ ಇದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ : ನನ್ನ ಹತ್ತಿರ ಬಡ್ಜೆಟ್ ಡಿಟೇಲ್ಸ್ 31.3.1994ರಲ್ಲಿ further details I will give the assests and liabilities Rs. 9955 crores. and the liabilities Rs.9124 crores. The percentage excess over liabilities was only 9%. It is only 9%. ನಿಮ್ಮದು ನೋಡಿ, 31.3.1995 ನಿಮ್ಮ ಮ್ಯಾನೇಜ್‌ಮೆಂಟ್‌ದಿಂದ we have reduced to 4% ಶೇಕಡಾ 4 ಬರಗಾಲ.

ಶ್ರೀ ಸಿದ್ಧರಾಮಯ್ಯ : ಆಗ ಬರಗಾಲ ಇತ್ತು.

(INTERRUPTIONS)

ಶ್ರೀ ಎಂ. ವೀರಪ್ಪ ಮೊಯಿಲಿ : ಯಾರಿಗೆ ಯಾರ ಮೇಲೆ ಹೆಚ್ಚು ಋಣ ಹಾಕಿ ಹೋಗಿದ್ದಾರೆ, ಎಷ್ಟು ಸಾಲ ಹೊತ್ತು ಹೋಗಿದ್ದೇವೆ ಅವರ ಬಗ್ಗೆ ಸ್ಪಷ್ಟವಾದಂಥ ದಾಖಲೆಗಳು ಇವೆ.

ಶ್ರೀ ಆರ್.ಎಲ್. ಜಾಲಪ್ಪ : ಆಗ ಬರಗಾಲ ಇತ್ತು ಅದನ್ನು ಸುಧಾರಿಸಲಿಕ್ಕೆ ಈ ಹಣವನ್ನು ಖರ್ಚು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದೇ ಜನ ಎಲ್ಲಾ ಮಾತನಾಡುತ್ತಾರೆ ನೀವೆಲ್ಲಾ ಬಂದಾಗ ಬರಗಾಲ ಬರುತ್ತದೆ ಎಂದು ಏತಕ್ಕೆ ಸುಮ್ಮನೆ ಮಾತನಾಡುತ್ತೀರಿ .

ಶ್ರೀ ಆರ್.ಎಲ್. ಜಾಲಪ್ಪ : ನೀವು ಮಾಡಿದ್ದು ಪಾಪ ನಾವು ಇಲ್ಲಿ ತೊಳೆಯಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಕರ್ನಾಟಕ ಗೃಹ ನಿರ್ಮಾಣ ಮಂಡಲಿ the contribution for the scheme is Rs.31.90 crores. ನಿಮ್ಮ ಕಾಂಟ್ರಿಬ್ಯೂಷನ್ ಪ್ಲಾನ್ 7.85 ಕೋಟಿ. ನಮ್ಮದು 31 ಕೋಟಿ ಆದರೆ ನಿಮ್ಮದು. 7.85 ಕೋಟಿ. Is it an achievement? ಇದಕ್ಕೆ ಏನು ಉತ್ತರ ಇದೂ ನಿಮ್ಮದೇ ಡಾಕ್ಯೂಮೆಂಟ್.

ಶ್ರೀ ಸಿದ್ಧರಾಮಯ್ಯ : ನಾನು ಉತ್ತರ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೊಡಿ ನಿಮಗೆ ಯಾರು ಬೇಡ ಎಂದು ಹೇಳುತ್ತಾರೆ. ಉತ್ತರ ಕೊಡುವುದಕ್ಕೆ ನೀವು ಇರುವುದು. ಅದಕ್ಕಾಗಿ ನಾವು ಪ್ರಶ್ನೆಯನ್ನು ಇವೊತ್ತು ನಿಮ್ಮ ಮುಂದೆ ಇಟ್ಟಿದ್ದೇವೆ. ಇವೊತ್ತು ನಾವು ಉತ್ತರವನ್ನೇ ನಿರೀಕ್ಷೆ ಮಾಡುತ್ತಿದ್ದೇವೆ. ನಿಮಮ ರೆಕಾರ್ಡ್ಸ್‌ಗಳನ್ನೇ ಇವೊತ್ತು ನಾವು ನಿಮ್ಮ ಮುಂದೆ ಇಡುತ್ತಿದ್ದೇವೆ. ಇದಕ್ಕಿಂತ ಬೇರೆ ಕನ್ನಡಿ ಮತ್ತೆ ಬೇಕೆ ? ಆದ್ದರಿಂದ ಇವೊತ್ತು ಯಾವುದೇ ಇರಬಹುದು, ಮಾನ್ಯ ಖರ್ಗೆಯವರು ಈಗಾಗಲೇ ಹೇಳಿದ್ದಾರೆ ಮಲೆನಾಡು ಅಭಿವೃದ್ಧಿ ಬಗ್ಗೆ.....

ಶ್ರೀ ಜೆ.ಹೆಚ್. ಪಟೇಲ್ : ಯಾವುದನ್ನು ಓದುತ್ತಿದ್ದೀರಿ ?

SRI M. VEERAPPA MOILY : 1996-97 details of provisions for plan schemes. ಅದನ್ನು ನಾವು ಇವೊತ್ತು ಮುಂದೆ ಇಟ್ಟಿದ್ದೇವೆ. ಈಗ ಕೈಗಾರಿಕೆಯಲ್ಲೂ ಕೂಡ ಅಷ್ಟೆ. ನೀವು 23 ಸಾವಿರ ಕಟೋ ಮಾಡಿದ್ದೀರಿ ಎಂದು ಹೇಳಿದ್ದೀರಿ. ಒಂದು ಹೊಸ ಕೈಗಾರಿಕೆಯ ಸಿವಿಲ್ ವರ್ಕ ನಿಮ್ಮ ಕಾಲದಲ್ಲಿ ಪ್ರಾರಂಭವಾಗಿದೆಯೇ ? ವಿಜಯನಗರ ಸ್ಟೀಲ್ ಪ್ಲಾಂಟ್ ನಮ್ಮ ಕಾಲದಲ್ಲಿ ಪ್ರಾರಂಭವಾಯಿತು. ಜಿಂದಾಲ್ ಮತ್ತು ಬಾಕಿ ಪ್ರಾಜೆಕ್ಟಗಳು all those projects have been cleared by the Screening committee. ವಿಜಯನಗರ ಸ್ಟೀಲ್ ಪ್ಲಾಂಟ್, ಜಿಂದಾಲ್ ನಮ್ಮ ಕಾಲದಲ್ಲೇ ಕೆಲಸ ಆಗಿತ್ತು. ಎಂ.ಆರ್.ಪಿ.ಎಲ್., 60 ಪರ್ಸೆಂಟ್‌ಗಿಂತ ಹೆಚ್ಚು

ಕೆಲಸ ನಮ್ಮ ಕಾಲದಲ್ಲೇ ಆಗಿತ್ತು. ಇನ್ನು ಇಂಟರನ್ಯಾಷನಲ್ ಏರ್‌ಪೋರ್ಟ್ ಕ್ಲಿಯರ್ ಮಾಡಿದ್ದು. We have taken all the steps, but you continued it. We commend for it. ನಿಮ್ಮ ಏಕಾನಾಮಿಕ್ ಸರ್ವೆ ರಿಪೋರ್ಟ್‌ಗಳನ್ನೇ......

ಶ್ರೀ ಸಿದ್ಧರಾಮಯ್ಯ : ಎಕ್ಸ್‌ಪ್ರೆಸ್ ಹೈವೇ.....

ಶ್ರೀ ಎಂ. ವೀರಪ್ಪ ಮೊಯಿಲಿ : ಎಕ್ಸಪ್ರೆಸ್ ಹೈವೇ ಎಲ್ಲಿಯಾಗಿದೆ? ಬರಲಿ ಬರಲಿ ನೋಡೋಣ. ಎಕ್ಸಪ್ರೆಸ್ ಮಾಡಿ. ಸೂಪರ್ ಹೈವೇ ಮಾಡಿ ಎಲ್ಲಾದಕ್ಕೆ ಸ್ವಾಗತ ನಮ್ಮದು. ಇವೊತ್ತು ತಾವು Industrial foreign collaboration approvals. ಇದು ದಯಮಾಡಿ ಪಟ್ಟಿ ನೋಡಿ. ನಿಮ್ಮ ಸರ್ವೆ ರಿಪೋರ್ಟ್‌ನಲ್ಲಿ ಟೇಬಲ್ 3.6.7 ನಲ್ಲಿದೆ ಮತ್ತೆ ಪೇಜ್ 71ರಲ್ಲಿದೆ. ನಮ್ಮ ಕಾಲದಲ್ಲಿ ಆದಷ್ಟು ನಿಮ್ಮ ಕಾಲದಲ್ಲಿ ಆಗಲಿಲ್ಲ. Labour absenteesm has increased today, not because of the power shortage but because of the labour unrest due to labour disputes. ಆದರೆ ಇವೊತ್ತು ಇಂಡಸ್ಟ್ರಿಯಲ್ ಕ್ಲೈಮೇಟ್ ಇಲ್ಲಿದೆ ಎಂದು ಹೇಳಿದರೆ ಲೇಬಲ್ ಆಬ್‌ಸೆಂಟಿಸಮ್ ಇವೊತ್ತು ಕಡಿಮೆ ಆಗಬೇಕಾಗುತ್ತದೆ. Industrial relationship is very important. ನಿಮ್ಮ ರಿಪೋರ್ಟ್‌ನಲ್ಲಿ ಇದು ಬಹಳ ಸ್ಪಷ್ಟವಾಗಿದೆ. ಇದರಲ್ಲಿ the increase in the labour unrest is attribute to increase in the demands of workmen. ಲೇಬರ್ ಅನ್‌ರೆಸ್ಟ್ ಆಗಿದೆ ಎಂದು ನಿಮ್ಮ ರಿಪೋರ್ಟಿನಲ್ಲಿದೆ ಇವೊತ್ತು. ಆದ್ದರಿಂದ ಲೇಬಲ್ ಅನರೆಸ್ಟ ಸಾಕಷ್ಟು ಜಾಸ್ತಿ ಆಗಿದೆ. ಅದೇ ಪ್ರಕಾರ ಇವೊತ್ತು ನಿಮ್ಮದೂ ಕೂಡ ಅಷ್ಟೇ. ಇವೊತ್ತು ಐಡಿಎ ಲೋನ್ ಸಸ್ಪೆಂಡ್ ಆಗಿದೆ. ಪಂಪಸೆಟ್ ಎನರಜೈಷನ್ ಪಟ್ಟಿ ನೋಡಿದರೂ ಕೂಡ ಖಂಡಿತವಾಗಿ ಕೂಡ ನಮ್ಮ ರೆಕಾರ್ಡ್ it is for better than your record as for as energisation is concerned, ನಿಮ್ಮ ಹತ್ತಿರ ಎಲೆಕ್ಟ್ರಿಸಿಟಿ ಇಲ್ಲ. ಆದ್ದರಿಂದ ಇವೊತ್ತು ಡೆವಲಪ್‌ಮೆಂಟ್ ಔಟಲೇ ನೋಡಿದರೂ ಕೂಡ when compared to non-development outlay, ಅದು ಕೂಡ ಇವೊತ್ತು ಜಾಸ್ತಿಯಾಗಿದೆ. Co-operative lending ಶಾರ್ಟ್ ಟರ್ಮ್ ಲೋನಿನಲ್ಲಿ ಸ್ವಲ್ಪ ಜಾಸ್ತಿ ಇರಬಹುದು. ಆದರೆ ಯಾವುದು ಇವೊತ್ತು very disturbing element is, ನಿಮ್ಮ ಲಾಂಗ್ ಟರ್ಮ್ ಮಿಡಿಯಂ ಟರ್ಮ್ ಲೆಂಡಿಂಗ್ ಏನಿದೆ ಅದರಲ್ಲಿ ಬಹಳ ಇಳಿತ ಆಗಿದೆ. It is more than 80 to 90% ಇವೊತ್ತು ಕಡಿಮೆಯಾಗಿದೆ. ಲಾಂಗ್ ಟರ್ಮ್ ಲೆಂಡಿಂಗ್‌ನಲ್ಲಿ. ಏಕೆಂದರೆ ಇದು ಗ್ರಾಮಾಂತರ ಪ್ರದೇಶಕ್ಕೆ ಸಂಬಂಧಪಟ್ಟಂಥ ವಿಶೇಷವಾದಂಥ ಒಂದು ಪರಿಸ್ಥಿತಿ ಅದನ್ನು ಕೂಡ ನೀವು ವಿಶೇಷವಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಸರಿಪಡಿಸತಕ್ಕಂಥ ಅವಶ್ಯಕತೆ ಕೂಡ ಇಲ್ಲಿ ಖಂಡಿತವಾಗಿ ಇದೆ. ಆದ್ದರಿಂದ ಈ ದೃಷ್ಟಿಯಲ್ಲಿ ನೋಡಿದರೆ, ನೀವು ಹೆಚ್ಚು ಜಾಗ್ರತೆಯಾದ ಮುನ್ನಡೆಯಬೇಕಾಗಂಥ ಅವಶ್ಯಕತೆ ಇದೆ. ಇಲ್ಲ ನಾವು ಮಾಡಿದ್ದೇ ಸರಿ ಎಂದು ನೀವು ತಮ್ಮನ್ನೇ ಬೆನ್ನುಚಪ್ಪರಿಸಿಕೊಂಡರೆ ನಾವು ಅದಕ್ಕೆ ಏನೂ ಹೇಳಲಿಕ್ಕಾಗುವುದಿಲ್ಲ. ನಾವು

ಯಾವ ಒಳ್ಳೆಯ ಸಲಹೆ ಕೂಡ ನಾವು ನಿಮಗೆ ಕೊಟ್ಟಿಲ್ಲ. ಏಕೆಂದರೆ ನಾವು ನಿಮ್ಮ ದೃಷ್ಟಿಯಲ್ಲಿ ಯಾವ ಒಳ್ಳೆಯ ಸಲಹೆ ಕೂಡ ಕೊಟ್ಟಿಲ್ಲ. ಬರೀ ಟೀಕೆಯನ್ನೇ ಮಾಡಿಕೊಂಡು ಹೋಗಿದ್ದೇವೆ. ನಾವು ಇಡೀ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ, ಹಣಕಾಸಿನ ವ್ಯವಸ್ಥೆಯನ್ನು ಪುನಃ ಶ್ವೇತಗೊಳಿಸುವಂಥ ರೀತಿಯಲ್ಲಿ ಕೆಲವು ಸಲಹೆಗಳನ್ನು ಖಂಡಿತವಾಗಿ ಕೊಟ್ಟಿದ್ದೇವೆ. ಇಲ್ಲಿ ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ನಾನು ವಂದನೆಗಳನ್ನು ಸರ್ಮಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸಿದ್ಧರಾಮಯ್ಯನವರು ಮಂಡಿಸಿರತಕ್ಕಂಥ ಎರಡನೇ ಆಯವ್ಯಯ ಈಗ ಸಭೆಯನ್ನು ಮುಂದಕ್ಕೆ ಹಾಕುತ್ತೀರೋ ಹೇಗೆ?

ಶ್ರೀ ಸಿದ್ಧರಾಮಯ್ಯ : ಇವತ್ತೇ ಉತ್ತರ ಕೊಡಬೇಕು ನಾನು.

ಶ್ರೀ ವಾಟಾಳಾ ನಾಗರಾಜ್ : ಇಲ್ಲ ಇಲ್ಲ. ಉತ್ತರ ನಾಳೆಗೆ.

ಶ್ರೀ ಸಿದ್ಧರಾಮಯ್ಯ : ಇಲ್ಲ ಇವತ್ತೇ ಉತ್ತರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಇಲ್ಲ ಉತ್ತರ ನಾಳೆಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬಿಸನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾಳೆ ಉತ್ತರ ಎಂದು ಆಗಿದೆ.

ಉಪಾಧ್ಯಕ್ಷರು : ಈಗ ಸಭೆಯನ್ನು ಒಂದು ಗಂಟೆ ಮುಂದೆ ಹಾಕಿ ಮತ್ತೇ 2-40 ನಿಮಿಷಕ್ಕೆ ಸೇರುತ್ತದೆ.

(ಸಭೆಯು ಮಧ್ಯಾಹ್ನ 3.00 ಗಂಟೆಗೆ ಪ್ರಾರಂಭವಾಯಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಎಂ.ಎಸ್. ಪಾಟೀಲ್)ರವರು ವಹಿಸಿದ್ದರು)

ಉಪಾಧ್ಯಕ್ಷರು : ನಾವು ಕಾರ್ಯಕಲಾಪಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಒಂದು ವಿಚಾರ ಎಂದರೆ, ವಿವಿಧ ಪಕ್ಷಗಳಿಗೆ ಅಲಾಟ್ ಮಾಡಿರುವಂಥ ಅವಧಿಯ ಬಗ್ಗೆ ಗಮನ ಹರಿಸಬೇಕಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಮೊದಲು 180 ನಿಮಿಷ ಕೊಟ್ಟಿದ್ದುದು 220 ನಿಮಿಷ ಆಗಿತ್ತು. ಈಗ ಇನ್ನೂ 25 ನಿಮಿಷ ಹೆಚ್ಚಾಗಿ ಕೊಟ್ಟಿದೆ. ಇನ್ನೂ ಬೇರೆ ಬೇರೆ ಪಕ್ಷದವರಿಗೂ ಅವಕಾಶವನ್ನು ಮಾಡಕೊಡಬೇಕಾಗಿದೆ. ಕಾಂಗ್ರೆಸ್‌ನವರಿಗೆ ಮೊದಲು ಕೊಟ್ಟಂಥ ಸಮಯ 180+40 ನಿಮಿಷ. ಈಗ 245 ನಿಮಿಷ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರಲ್ಲಿ ಇಂಟರಪೆಷನ್ ಕೂಡ ಸೇರಿದೆ. ನಮ್ಮ ಕಡೆಯಿಂದ ಮಾನ್ಯ ರಾಮಸ್ವಾಮಿಯವರು ಮತ್ತು ಮಾನ್ಯ ಸಗೀರ್ ಅಹ್ಮದ್‌ರವರು ಮಾತನಾಡಬೇಕಾಗಿದೆ. ಅವರಿಬ್ಬರೂ ಮಾತನಾಡಿದ ಮೇಲೆ ಉಳಿದ ಸಮಯವನ್ನು ನಮಗೆ

ಕೊಡಿ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಈ ಆಯವ್ಯಯ ಪತ್ರವನ್ನು ಮಂಡಿಸಿ ಸಾಮಾನ್ಯ ಚರ್ಚೆಗೆ ನಾವು ಸೇರಿದ್ದೇವೆ. ಈಗಗಾಗೇ ಮಾನ್ಯ ರಾಜ್ಯಪಾಲರ ಭಾಷಣವೂ ಮುಗಿದುಹೋಯಿತು, ಸ್ವಲ್ಪ ಹೆಚ್ಚೂ ಕಡಿಮೆ ಮಾನ್ಯ ರಾಜ್ಯಪಾಲರ ಭಾಷಣ, ಚರ್ಚೆ, ಅದಕ್ಕೆ ಮುಖ್ಯಮಂತ್ರಿಗಳ ಉತ್ತರ, ಆಯವ್ಯಯ ಮಂಡನೆ, ಅದರ ಮೇಲೆ ಚರ್ಚೆ ನಾಳೆ ಉತ್ತರ. ಈ ದೇಶದ ಇತಿಹಾಸವಲ್ಲಿ ಇಂಥಹ ಶಾಸನ ಸಭೆಯನ್ನು ನಾನು ಎಲ್ಲೂ ನೋಡಿಲ್ಲವೆಂದು ನನಗಿಸುತ್ತದೆ. ಬಹುಶಃ ನಮ್ಮ ರಾಜ್ಯವೇ ಮಾದರಿ ಎಂದು ಕಾಣಿಸುತ್ತದೆ. ಇಂಥರ ಮಾದರಿ ವಿಧಾನ ಸಭೆ ಎಂದರೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ಮಂಡಿಸಿ, ಅದರ ಬಗ್ಗೆ ಚರ್ಚೆಯಾಗಿ, ಮಾನ್ಯ ಮುಖ್ಯಮಂತ್ರಿಗಳ ಭಾಷಣವೂ ಮುಗಿದು, ಅನಂತರ ಆಯವ್ಯಯದ ಮಂಡನೆಯೂ ಆಗಿ ಇವತ್ತು ಉತ್ತರ ಕೊಡುವುದಕ್ಕೆ ತಾವು ತರಾತುರಿ ಆಗಿ ನಿಂತಿದ್ದೀರಿ. ಇವತ್ತೇ ಉತ್ತರ ಕೊಡುತ್ತೀರೋ, ನಾಳೆ ಕೊಡುತ್ತೀರೋ ಆ ಪ್ರಶ್ನೆ ಬೇರೆ. ನಾಳೆ ಬೆಳಿಗ್ಗೆ ಉತ್ತರವನ್ನು ಕೊಡಬಹುದು. ನಮ್ಮ ಸಲಹಾ ಸಮಿತಿಯ ಸಭೆಯಲ್ಲಿ ನಿರ್ಣಯ ಮಾಡಿ ಈ ಸದನ 7ನೇ ತಾರೀಖಿನವರೆಗೂ ಹೋಗಬೇಕೆಂದು ಮಾಡಿದ್ದೇವೆ. ನಾವೆಲ್ಲರೂ ಪಕ್ಷಗಳ ವಿಚಾರವನ್ನು ಮರೆಯೋಣ, ಯಾರು ಅಧಿಕಾರದಲ್ಲಿದ್ದಾರೆ ಎಂಬುದನ್ನೂ ಮರೆತು ಪ್ರಾಮಾಣಿಕವಾಗಿ ವಿಚಾರ ಮಾಡೋಣ. ಈ ಪ್ರಜಾ ಪ್ರಭುತ್ವದಲ್ಲಿ, ಶಾಸಕಾಂಗ ಬಹಳ ಹೆಚ್ಚಿನ ಮಹತ್ವವನ್ನು ಪಡೆದಿರತಕ್ಕ ಒಂದು ವ್ಯವಸ್ಥೆ. ಈ ವ್ಯವಸ್ಥೆಯ ಬುಡಮೇಲಾದರೆ ಈವ್ಯವಸ್ಥೆಯ ಶಕ್ತಿ ಕುಂದಿದರೆ, ನಾಳೆ ಈ ದೇಶದ ಪರಿಸ್ಥಿತಿ ಏನು? ನಾವು ಯಾವುದೇ ಪಕ್ಷದವರಾಗಲಿ ಈ ಶಾಸನ ಶಕ್ತಿಯನ್ನು ಕುಂದಿಸುವಂಥ ಮಟ್ಟಕ್ಕೆ ಹೋಗಬಾರದು. ನಾನು ಇದೇ ಸದನದಲ್ಲಿ ಅನೇಕ ಸಾರಿ ಈ ಸದನದ ಗಮನಕ್ಕೆ ಮತ್ತು ತಮ್ಮ ಗಮನಕ್ಕೋ ಅನೇಕ ವಿಚಾರಗಳನ್ನು ತಂದಿದ್ದೇನೆ. ಈ ಸಭೆಯಲ್ಲಿ ಆಯವ್ಯಯ ಮಂಡನೆ ಆದಾಗ, ಮಾನ್ಯ ರಾಜ್ಯಪಾಲರ ಭಾಷಣ ಇದ್ದಾಗ ಈ ಸದನದಲ್ಲಿ ಒಂದು ಕುರ್ಚಿ ಕೂಡ ಖಾಲಿ ಇರುತ್ತಿರಲಿಲ್ಲ. ಆ ಕಾಲವನ್ನು ನೋಡಿದಂಥ ಮಾನ್ಯ ವೈ. ರಾಮಕೃಷ್ಣರವರೂ, ಮಾನ್ಯ ಜಾಲಪ್ಪನವರೂ ಇದ್ದಾರೆ, ನಮ್ಮ ಮಾನ್ಯ ಖರ್ಗೆಯವರೂ ಇದ್ದಾರೆ, ಮಾನ್ಯ ಸಿದ್ಧರಾಮಯ್ಯನವರು ಆ ಸಂದರ್ಭದಲ್ಲಿ ಒಳಕ್ಕೆ ಬಂದಿಲ್ಲದಿದ್ದರೂ ಹೊರಗಡೆಯೇ ಇದ್ದು ನೋಡಿದ್ದಾರೆ. ಮೇಲುಗಡೆ ಪ್ರೇಕ್ಷಕರು ಕೂತುಕೊಳ್ಳತಕ್ಕ ಸ್ಥಳದಲ್ಲಿ ಒಳಗಡೆ ಬರುವುದಕ್ಕೆ ಪಾಸುಗಳೂ ಕೂಡ ಸಿಕ್ಕುತ್ತಿರಲಿಲ್ಲ, ಇಲ್ಲಿ ನಾವು ಕುಳಿತುಕೊಳ್ಳುವ ಪೀಠಗಳಲ್ಲಿ ಎಂಥೆಂಥವರು ಕೂತು ಹೋಗಿದ್ದಾರೆಂದರೆ, ಅವರು ಬಹಳ ಒಳ್ಳೆಯ ಇತಿಹಾಸವನ್ನೇ ನಿರ್ಮಾಣ ಮಾಡಿದವರು, ಅವರ ಹೆಸರನ್ನು ಸುವರ್ಣ ಅಕ್ಷರಗಳಲ್ಲಿ ಬರೆಯಬೇಕು. ಅಂಥವರೆಲ್ಲಾ ಕೂತು ಹೋಗಿದ್ದಾರೆ. ಇಲ್ಲಿ ಯಾವ ಮಟ್ಟದಲ್ಲಿ ಚರ್ಚೆ ಆಗುತ್ತಿತ್ತು ಎಂಬುದಕ್ಕೆ ನಾನು ಕೇವಲ ಎರಡು ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ. ಮುನಿಯಮ್ಮನ ಪ್ರಕರಣ. ವೈಯಾಲಿಕಾವಲನಲ್ಲಿ ಒಬ್ಬ ಮಹಿಳೆ ಲಾಕಪನಲ್ಲಿ ಸತ್ತಿದ್ದು. ಈ ವಿಚಾರ ಈ ಸಭೆಯಲ್ಲಿ ಒಂದು ವಾರಕಾಲ ಚರ್ಚೆ ನಡೆಯಿತು. ಮಧುಗಿರಿಯ ಪ್ರಕರಣ ಒಂದು ವಾರ ಕಾಲ ಚರ್ಚೆ ನಡೆಯಿತು. ಇದು ತಮಗೂ ಗೊತ್ತಿದೆ. ಕೊನೆಯ

ಚರ್ಚೆಯಲ್ಲಿ ಭಾಗವಹಿಸಿದವರು ಎಂದರೆ ಶ್ರೀಮಾನ್ ಗೋಪಾಲಗೌಡರು. ಆಗ ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು, ಮಾನ್ಯ ಎಂ. ವಿ. ರಾಮರಾಯರು ಗೃಹ ಮಂತ್ರಿಗಳಾಗಿದ್ದರು. ಮಾನ್ಯ ಗೋಪಾಲ ಗೌಡರು ಎಲ್ಲಾ ವಿಚಾರಗಳನ್ನು ಮಾತನಾಡಿ ಕೊನೆಯಲ್ಲಿ ಎಂಥಹ ಒಂದು ಮಾತನ್ನು ಹೇಳಿದರೆಂದರೆ, ಮಧುಗಿರಿಯಲ್ಲಿ ನಡೆದಿರತಕ್ಕ ಪ್ರಕರಣ ಏನಿದೆ, ಮಹಿಳೆಯ ಮೇಲೆ ನಡೆದಿರತಕ್ಕ ಮಾನಭಂಗ ಪ್ರಕರಣ ಏನಿದೆ ಅದು ನಿಮ್ಮ ಮನೆಯ ಹೆಂಗಸರ ಮೇಲೆ ನಡೆದಿದ್ದರೆ ನೀವು ಏನು ಮಾಡುತ್ತಿದ್ದೀರಿ ಎಂದು ಒಂದೇ ಒಂದು ಪ್ರಶ್ನೆಯನ್ನು ಹಾಕಿದರು. ಬೇರೆ ಮಾತೇ ಇಲ್ಲ. ಅವರು ಹೇಳಿದಂಥ ಪ್ರತಿಯೊಂದು ವಾಕ್ಯವನ್ನೂ ಒಪ್ಪಿ ನನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿ ಒಬ್ಬ ಮಂತ್ರಿ ತನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಇತಿಹಾಸವನ್ನು ನಿರ್ಮಾಣ ಮಾಡಿದಂಥ ಮಂತ್ರಿಗಳನ್ನೂ ನಾವು ನೋಡಿದ್ದೇವೆ. ಈ ಶಾಸನಸಭೆಯಲ್ಲಿ 224 ಜನ ಶಾಸಕರಿದ್ದಾರೆ. ಶಾಸನ ಸಭೆಯಲ್ಲಿ ಆಯವ್ಯಯ ಮಂಡನೆಯಾಗಿ ಚರ್ಚೆ ಆಗುವಾಗ ಸಚಿವ ಸಂಪುಟದ ಬಹಳಷ್ಟು ಸಚಿವರು ಹಾಜರಿರಬೇಕು, ವಿಧಾನ ಪರಿಷತ್ತು ನಡೆಯುತ್ತಿದ್ದರೆ ಅಲ್ಲೂ ಕೂಡ ಕೆಲವು ಸಚಿವರು ಇರಲಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಇವತ್ತು ಇಲ್ಲಿ ಶಾಸಕರು ಇಲ್ಲ, ಮಂತ್ರಿಗಳೂ ಇಲ್ಲ; ಅಂದರೆ ಎಲ್ಲರೂ ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಇದರಲ್ಲಿ ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಅರ್ಥಮಂತ್ರಿಗಳಾಗಿ ಈ ರಾಜ್ಯದ ಕಲ್ಯಾಣದ ಬಗ್ಗೆ ಒಂದು ವರ್ಷದ ಸಮಗ್ರ ಚಿಂತನೆಯನ್ನು ಮಾಡಿದ ಆಯವ್ಯಯವನ್ನು ಮಂಡಿಸಿದ್ದೀರಿ. ಅಂತಿಮವಾಗಿ ನಿಮಗೆ ಒಂದು ಕಡೆ ಸ್ಫೂರ್ತಿ, ಇನ್ನೊಂದುಕಡೆ ನೀವು ಮಂಡಿಸಿದ ವಿಚಾರಧಾರೆಯನ್ನು ಕೇಳುವಂಥ ನಿಮ್ಮ ಪಕ್ಷದವರು ಇರಬಹುದು, ಕೇಳುವವರು ಇರಬೇಕು. ಆದರೆ ಕರ್ನಾಟಕದ ಈ ಶಾಸನಸಭೆಗೆ ಎಲ್ಲೋ ಒಂದು ಕಡೆ ಮೋಡ ಮುಚ್ಚಿದೆ. ಆ ಮೋಡ ಇದೇ ರೀತಿ ಮುಚ್ಚಿಕೊಂಡೇ ಹೋದರೆ ಈ ಶಾಸನ ಸಭೆ ಪುರಸಭೆಗಳಿಗಿಂತ ಕಡೆ ಆಗುತ್ತದೆಂಬ ನೋವು ನನಗಿದೆ. ಇದರಲ್ಲಿ ನಾನು ಯಾವುದೇ ರಾಜಕೀಯವನ್ನೂ ಬೆರೆಸುತ್ತಿಲ್ಲ. ಈ ಶಾಸನಸಭೆಯ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ಈ ಶಾಸನ ಸಭೆ 100 ದಿನ ನಡೆಯಬೇಕೆಂಬುದು ಒಂದು ಕಡೆ ಒತ್ತಾಯ. ಮಾನ್ಯ ಮುಖ್ಯಮಂತ್ರಿಗಳು ಸಲಹಾ ಸಮತಿಯ ಸಭೆಯಲ್ಲಿ ಏನು ಹೇಳುತ್ತಾರೆಂದರೆ, ನಾನು ಈ ಸಭೆಯನ್ನು 100 ದಿವಸ ನಡೆಸುತ್ತೇನೆ, ಆದರೆ ನಿಮ್ಮ ವಿಷಯ ಸಮಿತಿಗಳು ಬೇಡ ಎಂದು ಹೇಳುತ್ತಾರೆ. ಇದು ವಸ್ತುಸ್ಥಿತಿಗಿಂತ ಹೆಚ್ಚಾಗಿ ಪೂರ್ವಗ್ರಹ ಪೀಡಿತವಾದುದು. ವಸ್ತು ಸ್ಥಿತಿಯೇ ಬೇರೆ. ಈ ವಿಷಯ ಸಮಿತಿಗಳ ಬಗ್ಗೆ ಯಾವುದೋ ಒಂದು ಭಾವನೆ ಅವರಿದೆ ಎಂದು ನನ್ನ ಭಾವನೆ. ಈ ಶಾಸನಸಭೆ 100 ದಿನಗಳವರೆಗೆ ನಡೆಯಬೇಕೆಂಬುದು ನನ್ನ ವಾದ. 100 ದಿನಗಳವರೆಗೆ ಚರ್ಚೆ ನಡೆದರೆ ಇದಕ್ಕೆ ಒಂದು ಶೋಭೆ, ಶಕ್ತಿ, ಗೌರವ ಬರುತ್ತದೆ. ಈ ಆಯವ್ಯಯ ಮತ್ತು ರಾಜ್ಯಪಾಲರ ಭಾಷಣವನ್ನು ನಮ್ಮ ಶಾಸಕರು, ಮಂತ್ರಿಗಳು ಗಣನೆಗೇ ತೆಗೆದುಕೊಂಡಿಲ್ಲವೇನೋ ಎನ್ನುವಂಥ ನೋವು ನನ್ನನ್ನು ಕಾಡುತ್ತಿದೆ. ನಾವು ಪ್ರಾಮಾಣಿಕವಾಗಿ ಬೆಳಿಗ್ಗೆ ಪ್ರತಿದಿನ ಬರುತ್ತೇವೆ, ನಾವು ಇಲ್ಲಿ ಧರಣಿ ಮಾಡಬಹುದು, ಬೇರೆ ಮಾಡಬಹುದು. ಆ ಪ್ರಶ್ನೆ ಬೇರೆ, ಆದರೆ ಈ ಸಭೆ ಪ್ರಜಾಪ್ರಭುತ್ವ ದೇಗುಲ. ಇದಕ್ಕಿಂತ ಶಕ್ತಿಯುತವಾದ ಸಭೆ ಬೇರೆ ಇಲ್ಲ. ಈ ಸಭೆಯನ್ನು ಯಾರೋ

ಕಡೆಗಣಿಸುತ್ತಾರೆಂಬುದು ಮುಖ್ಯವಲ್ಲ. ಮುಖ್ಯಮಂತ್ರಿಯಾದವರು ಈ ಸಭೆಯಲ್ಲಿ ಮಂಡಿಸಿದ ಆಯವ್ಯಯ ಸಂಪೂರ್ಣ ಚರ್ಚೆ ಆಗುವವರೆಗೂ ಹಾಜರಿದ್ದು ಸದಸ್ಯರಿಂದ ಸಲಹೆ, ಸಹಕಾರವನ್ನು ತೆಗೆದುಕೊಳ್ಳಬೇಕು; ಇದು ಕಾನೂನು ಅಲ್ಲದಿದ್ದರೂ ಇದಕ್ಕೆ ಒಂದು ಗೌರವವನ್ನು ಕೊಡಬೇಕೆಂಬ ಚಿಂತನೆಯಿಂದ ಈ ವ್ಯವಸ್ಥೆ ಆಗಬೇಕಾದುದು ಒಂದು ಕರ್ತವ್ಯ.

ನಾನು ಸುಮಾರು ಹತ್ತು ದಿನಗಳಿಂದಲೂ ನೋಡುತ್ತಿದ್ದೇನೆ. ವಿರೋಧ ಪಕ್ಷ, ಆಡಳಿತ ಪಕ್ಷ ಎಂದು ನಾನು ಭೇದಭಾವ ಮಾಡುತ್ತಿಲ್ಲ. ನಮ್ಮಲ್ಲೂ ವಿರೋಧ ಪಕ್ಷ ಇತ್ತೀಚಿನ ದಿನಗಳಲ್ಲಿ ಬಹಳ ಭದ್ರವಾಗಿದೆ. ನಮ್ಮಲ್ಲಿ ಸಂಖ್ಯೆಗೇನೂ ಕಡಿಮೆ ಇಲ್ಲ. ಅತ್ಯಂತ ಎತ್ತರವಾದ ಸಂಖ್ಯೆ ಇದೆ. ನಮ್ಮ ಸಂಖ್ಯಾಬಲದ ಧಾಟಿಯಿಂದ ಸರ್ಕಾರದ ಮೇಲೆ ನಾವು ನಿಂತರೆ ನನಗನ್ನಿಸುತ್ತದೆ, ನಿಜವಾಗಲೂ ಈ ರೀತಿ ಖಾಲಿ ಖರ್ಚೆ ಸರ್ಕಾರ ನಮ್ಮ ಕಣ್ಣಿಗೆ ಕಾಣುತ್ತಿಲ್ಲವೆಂದು ಮನಸ್ಸಿನಲ್ಲಿ ನನಗೆ ವೇದನೆಯಾಗುತ್ತಿದೆ. ಆದರೂ ಅಧ್ಯಕ್ಷರೆ, ಯಾರು ಬಂದರೆ ಎಷ್ಟು ಯಾರು ಬಿಟ್ಟರೆ ಎಷ್ಟು, ನಮ್ಮ ಪಾಡಿಗೆ ಹೋಗೋಣ, ಕಾಲಕ್ಕೆ ತಕ್ಕಂತೆ ಕುಳಿತುಕೊಳ್ಳೋಣ, ಹೋಗೋಣ ಅಂಥ ಅನ್ನುವುದಾದರೆ ಅದು ಒಳ್ಳೆಯ ದೃಷ್ಟಿ ಅಲ್ಲ. ಈ ದೇಶದಲ್ಲಿ ಇವತ್ತು ಒಂದು ಕಡೆ ನ್ಯಾಯಾಂಗ ಮತ್ತೊಂದು ಕಡೆ ಶಾಸಕಾಂಗ. ಒಂದು ರೀತಿ ಹೋರಾಟಕ್ಕೆ ಸಿದ್ಧವಾಗಿದ್ದೇವೆಂಬ ರೀತಿಯಲ್ಲಿ ಬರುತ್ತಿದ್ದೇವೆ. ನಾವು ಈ ಹೋರಾಟದಲ್ಲಿ ಯಾರು ಮುಂದು ಏನು ಮುಂದು ಎಂಬ ಪ್ರಶ್ನೆ ಅಲ್ಲ. ಈ ಹೋರಾಟದಲ್ಲಿ ಆಗಬಾರದು. ಅವರಿವರು ಅವರವರ ಲೆಕ್ಕದಲ್ಲಿ ಶಕ್ತಿಯುತರಾಗಿರುತ್ತಾರೆ. ಒಂದು ಕಡೆ ಶಾಸಕಾಂಗ, ಮತ್ತೊಂದು ಕಡೆ ನ್ಯಾಯಾಂಗ. ಈ ವ್ಯವಸ್ಥೆ ಸರಿಸಾಟಿಯಾದರೆ ಇವರಿವರೇ ಒಂದು ರೀತಿಯ ಯುದ್ಧಕ್ಕೆ ಹೋರಾಡತಕ್ಕ ಪರಿಸ್ಥಿತಿ ನಿರ್ಮಾಣವಾದರೆ ಇವರಿವರೇ ಒಂದು ರೀತಿಯ ಯುದ್ಧಕ್ಕೆ ಹೋರಾಡತಕ್ಕ ಪರಿಸ್ಥಿತಿ ನಿರ್ಮಾಣವಾದರೆ ನನಗನ್ನಿಸುತ್ತದೆ ಇದು ಒಳ್ಳೆಯ ಸಂಪ್ರದಾಯವಲ್ಲ. ಇದು ದೇಶದ ಇತಿಹಾಸದಲ್ಲಿ ಪ್ರಜಾಪ್ರಭುತ್ವದ ಉಳಿವಿಗೆ ಒಳ್ಳೆಯ ಸಂಪ್ರದಾಯವಲ್ಲ. ಕರ್ನಾಟಕ ಸರ್ಕಾರ ಈ ಅಯವ್ಯಯದ ಚರ್ಚೆಗೆ ಸದನವನ್ನು ಕನಿಷ್ಠ 40 ದಿನಗಳಾದರೂ ನಡೆಸಬೇಕು. ನಾವು ವಿಷಯ ಸಮಿತಿಗಳನ್ನು ತೋರಿಸಿ ಅದರಿಂದ ದಿಕ್ಕು ತಪ್ಪಿಸತಕ್ಕದ್ದಲ್ಲ. ವಿಷಯ ಸಮಿತಿಗಳ ಬಗ್ಗೆ ಇದೇ ಸದನದಲ್ಲಿ ಮಂಡಿಸಿ ವಿಷಯ ಸಮಿತಿಗಳ ವ್ಯವಸ್ಥೆಯನ್ನು ಎರಡು ವರ್ಷಗಳ ಹಿಂದೆ ತಂದಿದ್ದು ಆಯಿತು. ಈ ವಿಷಯ ಸಮಿತಿಗಳು ಒಂದು ರೀತಿ ವಿಧಾನಸಭೆಯೇ, ಇವತ್ತು ಅದರಲ್ಲಿ ಕೆಲವು ಕಾನೂನುಗಳಿಗೆ ತಿದ್ದುಪಡಿ ತಂದಿದ್ದೀರಿ. ನನಗನ್ನಿಸುತ್ತದೆ, ನಾವೇ ಏನೋ ಅಂದರೆ ಇಡೀ ಶಾಸಕರೇ ಆ ವಿಷಯ ಸಮಿತಿಯಲ್ಲಿರತಕ್ಕ ಶಾಸಕರೇ ಏನೋ ಅಪರಾಧ ಮಾಡಿಬಿಟ್ಟಿದ್ದಾರೆ. ಭಾರಿ ಅನ್ಯಾಯ ಮಾಡಿ ಬಿಟ್ಟಿದ್ದಾರೆ, ಬರೀ ಪ್ರವಾಸ ಹೊರಟು ಬಿಟ್ಟಿದ್ದಾರೆ. ಇವರು ಪ್ರವಾಸ ಹೋಗಬಾರದು, ತಿಂಗಳಿಗೆ ಒಂದು ಸಭೆ ಮಾಡಬೇಕು, ಈ ರೀತಿ ಸರ್ವಾಧಿಕಾರದ ಮುದ್ರೆಯನ್ನು ಆ ವಿಷಯ ಸಮಿತಿಗಳಿಗೆ ಒತ್ತುವುದಾದರೆ ಅದು ಸರಿಯಾಗುವುದಿಲ್ಲ. ಒಂದು ಕಡೆ ಶಾಸನಸಭೆ ಹತ್ತು ದಿನಗಳಲ್ಲಿ ರಾಜ್ಯಪಾಲರ ಭಾಷಣ. ಆಯವ್ಯಯ ಮಂಡನೆ, ಚರ್ಚೆ ಎಲ್ಲಾ ಮುಗಿಸಿ ಬಿಡುವುದು. ಆದರೆ ಮತ್ತೊಂದು ಕಡೆ ವಿಷಯ ಸಮಿತಿಗಳಿಗೆ ನೀವು ಸ್ವಾತಂತ್ರ್ಯ ಕೊಡದೇ ಹೋದರೆ ಅದು ತಪ್ಪಾಗುತ್ತದೆ.

ಒಂದು ಕಡೆ ವಿಷಯ ಸಮಿತಿಗಳಲ್ಲಿ ಸಮಗ್ರವಾಗಿ ಚರ್ಚೆ ಆಗಬೇಕು, ಇಲ್ಲ ವಿಷಯ ಸಮಿತಿಗಳು ಬೇಡ ಎಂದು ನಿಮಗೆ ಅನ್ನಿಸಿದರೆ ಅದನ್ನು ರದ್ದು ಮಾಡಿ, ನಾವು ಸ್ವಾಗತ ಮಾಡುತ್ತೇವೆ. ನಮಗೆ ವಿಷಯ ಸಮಿತಿಗಳಿಂದ ಏನೂ ಆಕಾಶ ಭೂಮಿಗೆ ಇಳಿಯುವುದಿಲ್ಲ. ವಿಷಯ ಸಮಿತಿಗಳು ಇರಬೇಕೇ ಬೇಡವೇ ಬೇಡವೆಂದರೆ ತೀರ್ಮಾನ ಮಾಡಿ; ಬೇಡವೇ ಬೇಡ. ಅದರ ಬಗ್ಗೆ ನನ್ನ ತಕರಾರು ಇಲ್ಲ. ಒಂದು ಕಡೆ ವಿಷಯ ಸಮಿತಿಗಳ ಕತ್ತನ್ನು ಹಿಸುಕತಕ್ಕದ್ದು, ಮತ್ತೊಂದು ಕಡೆ ಶಾಸನಸಭೆಯ ಕತ್ತನ್ನು ಹಿಸುಕತಕ್ಕದ್ದು; ಇವೆರಡು ಪ್ರಜಾಪ್ರಭುತ್ವದ ಒಳ್ಳೆಯ ಸೂಚನೆಗಳು ಅಲ್ಲ. ಈ ಶಾಸನಸಭೆ ಸಮಗ್ರವಾಗಿ ನೂರು ದಿನಗಳ ಕಾಲ ನಡೆಯಬೇಕು. ಆಯಾಯ ಕಾಲದಲ್ಲಿ ಅಂದರೆ ಆಯವ್ಯಯವನ್ನು ಯಾವತ್ತು ಮಂಡಿಸಬೇಕು, ರಾಜ್ಯಪಾಲರ ಭಾಷಣವನ್ನು ಯಾವತ್ತು ಮಂಡಿಸಬೇಕು, ಚಳಿಗಾಲದ ಅಧಿವೇಶನ ಯಾವುದು, ಹೀಗೆ ದಿನಗಳನ್ನೆಲ್ಲಾ ನಿರ್ಧಾರ ಮಾಡಿ ಒಂದು ವರ್ಷದಲ್ಲಿ ಇಂಥಿಂಥ ಕಾಲದಲ್ಲಿ ಇಂಥಿಂಥ ತಾರೀಖು ಇಂಥಿಂಥದ್ದು, ಯಾವುದೇ ಕಾರಣಕ್ಕೂ ಬದಲಾವಣೆ ಇಲ್ಲದೆ ಶಾಸನಸಭೆಯನ್ನು ನಡೆಸುತ್ತೇವೆಂದರೆ ಅದು ಒಂದು ರೀತಿ. ಅದು ಯಾವುದೂ ಇಲ್ಲದೆ ಒಂದು ಕಡೆ ಶಾಸನಸಭೆಯ ಶಕ್ತಿಯನ್ನು ಕುಂದಿಸತಕ್ಕ ವ್ಯವಸ್ಥೆ, ಮತ್ತೊಂದು ಕಡೆ ವಿಷಯ ಸಮಿತಿಗಳು ಅದರಲ್ಲಿ ಏನು ಅಧಿಕಾರಿಗಳು, ಪ್ರತಿ ದಿನ ಪ್ರತಿ ವಾರ ನಮ್ಮನ್ನು ಕರೆಯುತ್ತಾರೆ ಸ್ವಾಮಿ ಅನ್ನುವುದು. ಅಧಿಕಾರಿಗಳನ್ನು ಕರೆದರೆ ಏನಾಗುತ್ತದೆಂಬುದು ನನಗೆ ಅರ್ಥವಾಗಲಿಲ್ಲ. ವಿಷಯ ಸಮಿತಿಯಲ್ಲಿ ಕರೆದು ಚರ್ಚೆ ಮಾಡಿ ಪ್ರತಿಯೊಂದು ವಿಚಾರಗಳನ್ನು ನೋಡಬೇಕು. ಅಧಿಕಾರಿಗಳನ್ನು ಕರೆಯುತ್ತಾರೆ, ನಮಗೆ ಬಹಳ ತೊಂದರೆಯಾಗುತ್ತದೆಂದು ಒಂದು ಕಡೆ ಮುಖ್ಯಮಂತ್ರಿಗಳಿಗೆ ಧಾಳಿ, ಅವರಿಗೆ ಹೋಗಿ ನಮಗೆ ಅನ್ಯಾಯವಾಗಿ ಸ್ವಾಮಿ ಅನ್ನುವುದು. ಸ್ಪೀಕರ್ ಹತ್ತಿರ ಹೋಗಿ ಹೇಳಿ ಎಲ್ಲವನ್ನೂ ಮಾಡಿ ಈ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡತಕ್ಕ ಕೆಲವು ಅಧಿಕಾರಿಗಳ ವರ್ಗ ಇದೆಯಲ್ಲಾ ಇದು ಸರಿಯಲ್ಲ. ಅಧ್ಯಕ್ಷರೆ, ತಮಗೆ ನೇರವಾಗಿ ಹೇಳುತ್ತಿದ್ದೇನೆ, ವಿಷಯ ಸಮಿತಿಗಳಿಗೂ ಹೆಚ್ಚಿನ ಮಹತ್ವ, ಹೆಚ್ಚಿನ ಶಕ್ತಿ ಕೊಡಬೇಕೇ ಹೊರತು ನೀವು ಅಲ್ಲ ಕಾನೂನು ಮಾಡಿ ಪ್ರವಾಸ ಹೋಗಬೇಡಿ, ತಿಂಗಳಿಗೆ ಒಂದು ಸಭೆ ಕರೆಯಿರಿ ಎಂದು ಕಟ್ಟಾಜ್ಞೆ ಮಾಡುತ್ತೀರಿ. ಇದು ಸರಿಯಾದ ದಾರಿಯಲ್ಲ ಮತ್ತು ನೀತಿಯಲ್ಲ ಎಂಬ ಮಾತನ್ನು ತಮಗೆ ಹೇಳುತ್ತೇನೆ. ವಿಷಯ ಸಮಿತಿಗಳಲ್ಲಿ ಏನೋ ಬಹಳ ಭತ್ಯ ತೆಗೆದುಕೊಂಡಿದ್ದೇವೆ. ನನಗನ್ನಿಸುತ್ತದೆ, ಭತ್ಯಕೋಸ್ಕರ ವಿಷಯ ಸಮಿತಿಗೆ ಬರುತ್ತೇವೆಯೆ? ಶಾಸನಸಭೆಯಲ್ಲಿ ನಾವು ಕುಳಿತುಕೊಳ್ಳುವುದು, ಶಾಸನ ಸಭೆಗೆ ಬರುವುದು ನಾವು ಬರೀ ಭತ್ಯೆಕ್ಕೋಸ್ಕರ ಬರುತ್ತೇವೆಯೇ? ಬೆಳಿಗ್ಗೆ 11 ರಿಂದ ಸಂಜೆ 6ರವರೆಗೆ ನಾವು ಕಾರ್ಯ ಮಾಡುತ್ತೇವೆ. ಭತ್ಯಕೋಸ್ಕರ ಮಾಡುತ್ತೇವೆಯೆ? ಆ ಪ್ರಶ್ನೆ ಇಲ್ಲ. ಆದುದರಿಂದ ಅದರ ಬಗ್ಗೆ ಸ್ವಲ್ಪ ಚಿಂತನೆ ಮಾಡಿ, ಮತ್ತೊಮ್ಮೆ ಮರ ಪರಿಶೀಲನೆ ಮಾಡಿ, ಶಾಸಕರನ್ನು ಅವಹೇಳನ ಮಾಡತಕ್ಕ ರೂಲ್ಸ್ ಏನು ಮಾಡಿದ್ದೀರಿ ಇದು ಆಗಬಾರದು. ನಿಜವಾಗಿ ನನಗನ್ನಿಸುತ್ತದೆ, ಅವಹೇಳನಕರ ತಿದ್ದುಪಡಿ ಸರಿಯಾದುದಲ್ಲ ಎಂಬ ಮಾತನ್ನು ತಮಗೆ ಹೇಳುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ಆಯವ್ಯಯವನ್ನು ಮಂಡಿಸುವಾಗ ಎಲ್ಲಿಯೂ

ಶಾಸಕರ ಬಗ್ಗೆ ಉಲ್ಲೇಖ ಮಾಡಲಿಲ್ಲ. ಒಬ್ಬ ಶಾಸಕ ಕನಿಷ್ಠ ತನ್ನ ಕ್ಷೇತ್ರವಲ್ಲಿ ಏನು ಕೆಲಸ ಮಾಡಬೇಕು ಎಂಬುದು ಇಲ್ಲ. ತಮ್ಮ ಮೂಲಕ ಮುಖ್ಯಮಂತ್ರಿಗಳಿಗೂ ಮನವಿ ಮಾಡುತ್ತೇನೆ, ಅರ್ಥ ಸಚಿವರಿಗೂ ಮನವಿ ಮಾಡುತ್ತೇನೆ, ಈ ಸದನದ ಎರಡೂ ಕಡೆ ಶಾಸಕರನ್ನು, ಶಾಸಕರುಗಳ ಮಹತ್ವವನ್ನು ಆ ಕ್ಷೇತ್ರದಲ್ಲಿ ಸಂಪೂರ್ಣವಾಗಿ ಕಡೆಗಾಣಿಸಲಾಗಿದೆ. ಶಾಸಕರ ಮಹತ್ವದ ಬಗ್ಗೆ ನಾನು ಈ ಸದನದಲ್ಲಿ ಅನೇಕ ಬಾರಿ ತಮ್ಮ ಮೂಲಕ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ ಮತ್ತು ಅರ್ಥ ಸಚಿವರ ಗಮನಕ್ಕೂ ತಂದಿದ್ದೇನೆ. ಶಾಸಕರು ಅಂದರೆ ಏನು? ಅವರಿಗೆ ಏನೂ ಕೆಲಸ ಇಲ್ಲ. ಅವರ ಕ್ಷೇತ್ರದಲ್ಲಿ, ಶಾಸಕರು ಅಂದರೆ ಅವರಿಗೆ ಏನೂ ಕೆಲಸ ಇಲ್ಲ. ಒಂದು ಸಣ್ಣ ಕೆಲಸವೂ ಅವರಿಗೆ ಇಲ್ಲ. ಶಾಸನಸಭೆಯಲ್ಲಿಯೂ ಕೆಲಸ ಇಲ್ಲ. 11-12 ದಿವಸ ಶಾಸನಸಭೆ ನಡೆಸಿ ಹೋದಮೇಲೆ ಶಾಸಕರು ಏನು ಮಾಡಬೇಕು?

ಶ್ರೀ ಸಿ. ಬೈರೇಗೌಡ : ಊರು ತಿರುಗಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಊರು ತಿರುಗಾಡುವುದು? ಇವರಾದರೂ ಕೃಷಿ ಸಚಿವರು. 25 ಜನ ಉನ್ನತಾಧಿಕಾರಿಗಳು ಇದ್ದಾರೆ, 2-3 ಸಾವಿರ ಜನ ಎರಡನೇ ದರ್ಜೆ ನೌಕರರು ಇರುತ್ತಾರೆ, ಕೊನೆಗೆ 50 ಸಾವಿರ ಜನ ಅಧಿಕಾರಿಗಳು ಇರುತ್ತಾರೆ. ಇವರ ಹಿಂದೆ 25 ಜೀಪುಗಳು ಬರುತ್ತವೆ. ಇವರು ನಿಂತರೆ ಕುಳಿತರೆ ಶಭಾಶ್‌ಗಿರಿ, ಚೌಳ ಬೀಸತಕ್ಕ ಜನರು ಇರುತ್ತಾರೆ. ನಾವು ಊರು ತಿರುಗಿದರೆ ಯಾರು ಕೇಳುತ್ತಾರೆ ಸ್ವಾಮಿ? ಕಸ ಗುಡಿಸುವುದಕ್ಕೆ ಶಾಸಕರ ಕೈಯಲ್ಲಿ ಒಂದು ಕಸಪೊರಕೆ ಕೊಟ್ಟಿಲ್ಲ. ನಾವು ಕ್ಷೇತ್ರದ ಶಾಸಕರಾಗಿದ್ದರೂ ಆ ಕ್ಷೇತ್ರ ಗುಡಿಸುವುದಕ್ಕಾದರೂ ಹಳ್ಳಿಹಳ್ಳಿ ಗುಡಿಸಿ, ಮೋರಿಗಳನ್ನು ಗುಡಿಸಿ ಎಂದು ಅದಕ್ಕಾದರೂ ಒಂದು ಕಸಪೊರಕೆ ಕೊಡಿ ಸ್ವಾಮಿ. ಬೈರೇಗೌಡರೇ, ನಿಮ್ಮ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡು ಹೇಳುತ್ತಿದ್ದೇನೆ. ತಾವು ಇಲ್ಲಿ ಕುಳಿತಿದ್ದಾಗ ಹೆಚ್ಚು ಕಡಿಮೆ ಒಂದೂವರೆ ಸಾವಿರ ಸಾರಿ ಏಳುವುದು ಕುಳಿತುಕೊಳ್ಳುವುದು ಮಾಡುತ್ತಿದ್ದೀರಿ. ಆಗ ನಾವು ಕೇಳುತ್ತಿದ್ದೆವು ತಮಗೆ ಅಲ್ಲಿ ಸ್ಪ್ರಿಂಗ್ ಇದೆಯೋ ಎಂದು. ನೀವು ಆಗ ಬಿಡುತ್ತಿದ್ದಿರಾ? ಈಗ ಎಷ್ಟು ಸೌಮ್ಯವಾಗಿದ್ದೀರಿ. ನಾನು ನಿಮ್ಮನ್ನು ಒಪ್ಪುತ್ತೇನೆ, ನಿಮ್ಮ ಬಗ್ಗೆ ಗೌರವ ಇದೆ. ನಿಮ್ಮ ಇಲಾಖೆಯ ಬಗ್ಗೆ ನಾನು ಬಹಳ ಮೆಚ್ಚುತ್ತೇನೆ. ನಾನು ಸಾರ್ವಜನಿಕವಾಗಿ ಅನೇಕ ಸಾರಿ ಹೇಳಿದ್ದೇನೆ. ಶಾಸಕರ ಪರಿಸ್ಥಿತಿ ಏನು? ಅವರಿಗೆ ಏನು ಕೊಡದೆ ಇದ್ದರೂ ಮತದಾರರ ಮುಂದೆ ಅವರಿಗೆ ಮತ ಕೊಟ್ಟಿರತಕ್ಕ ಮತದಾರರ ಮುಂದೆ, ಆ ಹಳ್ಳಿಯಲ್ಲಿ ಮಾರಿಗುಡಿ ಮುಂದೆ, ಗಣಪತಿ ಗುಡಿ ಮುಂದೆ, ಪರಿಶಿಷ್ಟ ವರ್ಗದವರ ಬೀದಿಯಲ್ಲಿ, ಒಕ್ಕಲಿಗರ ಬೀದಿಯಲ್ಲಿ, ಗಾಣಿಗರ ಬೀದಿಯಲ್ಲಿ ಕಸ ಹೊಡೆಯುತ್ತೇವೆ, ಇದು ಶಾಸಕರಿಗೆ ಕೊಟ್ಟಿರತಕ್ಕ ಪೊರಕೆ ಎಂದು ಹೇಳುತ್ತೇವೆ. ನಾವು ಊರಿಗೆ ಹೋದ ತಕ್ಷಣ ಅಲ್ಲೇ ಇಳಿದು ಶಾಸಕ ಒಂದು ಪೊರಕೆ ತೆಗೆದುಕೊಂಡು ಕಸ ಗುಡಿಸುವುದಕ್ಕೆ ಒಂದು ಕೆಲಸ ಇದೆ ಎಂದು ಹೇಳುತ್ತೇನೆ. ಆ ಪೊರಕೆಯಲ್ಲಿ ಗುಡಿಸತಕ್ಕ ಕೆಲಸ ಕೂಡ ನೀವು ಕೊಟ್ಟಿಲ್ಲ. ಅದಕ್ಕೆ ಮಾನ್ಯ ಸಿದ್ಧರಾಮಯ್ಯನವರು ತಾವು ಸಮಾಜವಾದಿ ಸಿದ್ಧಾಂತವಲ್ಲಿ ನಂಬಿಕೆ ಇಟ್ಟುಕೊಂಡು ಬಂದಿರತಕ್ಕವರು, ಅಪಾರವಾಗಿ ವಿಚಾರ ತಿಳಿದಿರತಕ್ಕವರು.

ನಿಮಗೆ ಕರುಣೆ ಇಲ್ಲವೇ ಶಾಸಕರುಗಳ ಬಗ್ಗೆ ನೀವೆಲ್ಲಾ ಮಂತ್ರಿಗಳಾಗಿ ಬಿಟ್ಟು ಗೂಟದ ಕಾರಿನಲ್ಲಿ ಹಿಂದೆ ಮುಂದೆ ಜೀಪಿಟ್ಟುಕೊಂಡು ಓಡಾಡಿಬಿಡುತ್ತೀರಿ. ನಿಮ್ಮ ಹಿಂದೆ ನಾವು ಸೇವಕರಾದ ಶಾಸಕರುಗಳು? ನೀವು ಜಿಲ್ಲಾ ಮಂತ್ರಿಗಳು ಮತ್ತು ರಾಜ್ಯದ ಮಂತ್ರಿಗಳು ಬರುತ್ತೀರಿ. ಬಂದತಕ್ಷಣ ಎಲ್ಲಾ ಪಕ್ಷದ ಶಾಸಕರು ಟಿ.ಬಿ.ಗೆ ಬಂದು ಬಿಡಿ ಎಂದು ಹೇಳಿದರೆ ಕೈಮುಗಿಮಕೊಂಡು ನಿಂತಿರಬೇಕಾ ನಿಮ್ಮ ಮುಂದ? ಇದಾ ನಮ್ಮ ಕೆಲಸ ಶಾಸಕರಿಗೆ ಕೊಟ್ಟಿರುವುದು? ಆಮೇಲೆ ಆಹ್ವಾನಪತ್ರಿಕೆ ಸ್ವಾಮಿ. ಆಹ್ವಾನಪತ್ರಿಕೆಯಲ್ಲಿ ಎಲ್ಲಾ ಶಾಸಕರು ವೇದಿಕೆಯ ಮೇಲೆ ಕುಳಿತುಕೊಳ್ಳುವುದು. ನಮ್ಮ ಗ್ರಹಚಾರಕ್ಕೆ ಹಾರ ಸಿಕ್ಕಿದರೂ ಸಿಕ್ಕಬಹುದು, ಇಲ್ಲದೇ ಇದ್ದರೆ ಇಲ್ಲ. ಎಲ್ಲಾ ಮಂತ್ರಿಗಳು ಹಿಂದೆ. ಜನ ಮಂತ್ರಿಗಳ ಹಿಂದೆ. ಅಧಿಕಾರಿಗಳು ಮಂತ್ರಿಗಳ ಹಿಂದೆ. ಆ ಕಾಟದಲ್ಲಿ ಗುದ್ದಾಟದಲ್ಲಿ ಸದ್ಯ ಭದ್ರವಾಗಿರುವ ಶಾಸಕರು ಉಳಿದುಕೊಳ್ಳುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆ ಆದರೆ? ತಾವು ಮಂತ್ರಿಗಳಾಗಿದ್ದು ಶಾಸಕರಾಗಿ ಅನುಭವ ಪಡೆದಿದ್ದೀರಿ. ನಿಮ್ಮ ಆಯವ್ಯಯದಲ್ಲಿ ಕನಿಷ್ಟ ಪ್ರತಿ ಶಾಸಕರಿಗೆ ಅವರ ಕ್ಷೇತ್ರದಲ್ಲಿ ಅವರದೇ ಆದ ರಸ್ತೆ. ಮುಂತಾದ ಕೆಲಸಗಳಿಗೆ ನಿರ್ಧಿಷ್ಟವಾದ ಹಣ ಇಡಿ. ಈಗ ಲೋಕಸಭೆಯಲ್ಲಿ ಮಾಡಿದ್ದಾರೆ. ತಮಗೆ ಗೊತ್ತಿದೆ ಲೋಕಸಭಾ ಸದಸ್ಯರಿಗೆ ಒಂದು ಕೋಟಿ ರೂಪಾಯಿ, ರಾಜ್ಯಸಭಾ ಸದಸ್ಯರಿಗೆ ಒಂದು ಕೋಟಿ ರೂಪಾಯಿ ಎಂದು ಮಾಡಿದ್ದಾರ. ಈಗ ನಮ್ಮ ಕ್ಷೇತ್ರಕ್ಕೆ ಎಲ್ಲಾ ಲೋಕಸಭಾ ಸದಸ್ಯರು ಬರುತ್ತಿದ್ದಾರೆ. ಬಂದು ಅವರೇ ಸಮಾರಂಭಕ್ಕೆ ಬಂದತಕ್ಷಣ ಸಮುದಾಯಭವನಕ್ಕೆ 10 ಲಕ್ಷ ಅಂಬೇಡ್ಕರ ಭವನಕ್ಕೆ 10 ಲಕ್ಷ ಎಂದು ಕೊಡುತ್ತಿದ್ದಾರೆ. ನಾವು ಒಂದು ಬಿಲ್ವಪತ್ರೆ ಕೊಡುವುದಕ್ಕಾಗುವುದಿಲ್ಲ; ಬೇವಿನ ಸೊಪ್ಪು ಕೊಡುವುದಕ್ಕಾಗುವುದಿಲ್ಲ. ಒಂದು ಗಂಧದ ಕಡ್ಡಿ ಕೊಡುವುದಕ್ಕಾಗುವುದಿಲ್ಲ ನಮ್ಮ ಹಣೆಬರಹ. ಏನು ಹೇಳಿ. ಈ ತರಹ ಶಾಸಕರಿಗೆ ನಾವು ಮಾಡಿದ್ದೇವೆ ಎಂದು ಹೇಳಿದರೆ ನಾನು ಇಲ್ಲೇ ದೀರ್ಘದಂಡ ಸಾಷ್ಟಾಂಗ ನಮಸ್ಕಾರ ನಿಮಗೆ ಹಾಕುತ್ತೇನೆ. ನಾನು ಅರ್ಥ ಇಲ್ಲದೆ ಹೇಳುತ್ತಿದ್ದೇನೆ ಎಂದು ತಿಳಿದುಕೊಳ್ಳಬೇಡಿ, ವಸ್ತುಸ್ಥಿತಿಯನ್ನು ಇಡುತ್ತಿದ್ದೇನೆ. ಶಾಸಕರನ್ನು ಎಷ್ಟು ಅವಹೇಳನ ಮಾಡಿದ್ದೀರಿ. ತಾಲ್ಲೂಕು ಪಂಚಾಯಿತಿಯಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಅಧ್ಯಕ್ಷತೆ ವಹಿಸುವುದು, ಅಲ್ಲಿ ಶಾಸಕರನ್ನು ಸದಸ್ಯರನ್ನಾಗಿ ಮಾಡಿದ್ದೀರಿ. ಸ್ವಾಮಿ, ಒಂದು ಹೇಳುತ್ತೇನೆ, ನೀರು ಮಾಡದೇ ಇದ್ದರೂ ಚಿಂತೆಯಿಲ್ಲ. ಏಕೆಂದರೆ ಅಲ್ಲಿ ಹೋಗಿ ಕುಳಿತುಕೊಂಡು ಶಾಸಕ ಏನು ಮಾಡಬೇಕು? ಸ್ವಲ್ಪ ಹೇಳಿ. ಶಾಸಕ ಅಲ್ಲಿ ಹೋಗಿ ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ಪ್ರತಿ ಸಾರಿ ಆ ಪ್ರಧಾನರ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಚರ್ಚೆ ಮಾಡುತ್ತಿದ್ದಂಥ ಶಾಸಕ ಅಲ್ಲಿ ಹೋಗಿ ಕುಳಿತುಕೊಳ್ಳತಕ್ಕ ವ್ಯವಸ್ಥೆ ಏನು? ಅದು ಖಂಡಿತವಾಗಿ ಇಲ್ಲ. ಆ ವ್ಯವಸ್ಥೆ ಏನೂ ಇಲ್ಲ. ಮತ್ತು ಟಿ.ಬಿ.ಗಳಿಗೆ ಹೋದೆವು. ಯಾವುದು? ಪ್ರವಾಸಿಮಂದಿರದಲ್ಲಿರುವುದಕ್ಕೆ ಯಾರು ರೂಮಿನಲ್ಲಿ? ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿದ್ದಾರೆ ಆಯಿತು. ಪಕ್ಕದ ರೂಮು? ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿದ್ದಾರೆ. ಅದರ ಪಕ್ಕದ ರೂಮು? ಉಪಾಧ್ಯಕ್ಷರು ನಾವು? ಅಲ್ಲೆಲ್ಲೂ ಸ್ಥಳ ಇಲ್ಲ. ಆದ್ದರಿಂದ ಕಸಪರಕೆಯಾದರೂ ಕೊಡಿ. ಒಟ್ಟು 224 ಕ್ಷೇತ್ರ. ಅದರಲ್ಲಿ ಒಂದು ವರ್ಷಕ್ಕೆ ಕನಿಷ್ಠ 100 ಹಳ್ಳಿ ಎಂದು ನಾವು ಲೆಕ್ಕಹಾಕಿಕೊಂಡು

ಎರಡೆರಡು ಪೌರಕೆ ಅಂದರೂ ಒಂದು ಕ್ಷೇತ್ರಕ್ಕೆ 200 ಪೌರಕೆಯಂತೆ 224 ಕ್ಷೇತ್ರಕ್ಕೆ ಅದನ್ನಾದರೂ ಭಾಷಣ ಮಾಡುವಾಗ ತಾವು ದಯಪಾಲಿಸಿಬಿಟ್ಟರೆ ಇಲ್ಲಿಂದಲೇ ನೀವು ಕೊಟ್ಟ ಅನುದಾನವಲ್ಲಿ ಪೌರಕೆ ವ್ಯವಸ್ಥೆ ಮಾಡಿಕೊಂಡು ಅದನ್ನಾದರೂ ಮಾಡತಕ್ಕ ವ್ಯವಸ್ಥೆಯನ್ನು ಕೊಟ್ಟರೆ ನಾವು ಧಾರಾಳವಾಗಿ ಆ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ. ನನಗೇನೂ ನಮ್ಮ ಮುಖ್ಯಮಂತ್ರಿಗಳಿಗೆ ಎಲ್ಲೋ ಯಾರೋ ಶಾಸಕರಿಗೂ ಅವರಿಗೂ ಯುದ್ಧ ಆಗಿಬಿಟ್ಟಿರಬೇಕು ಎಂದು ಕಾಣುತ್ತೆ. ಅವರ ಕ್ಷೇತ್ರವೋ, ಅವರ ಜಿಲ್ಲೆಯೋ ಅವರ ತಾಲ್ಲೂಕಿನಲ್ಲೋ. ಆದ್ದರಿಂದ ಎಲ್ಲಾ ಶಾಸಕರೂ ಹಾಗೆ ಎಂದು ತಿಳಿದುಕೊಂಡು ಬಿಟ್ಟಿರಬೇಕು ಅವರು. ಅದಲ್ಲ. ಅವರ ಕ್ಷೇತ್ರದಲ್ಲಿ ಒಬ್ಬರಿಗೊಬ್ಬರು ಆಗದೇ ಇರಬಹುದು. ಆ ಪ್ರಶ್ನೆ ಆಗುವುದಿಲ್ಲ. ಆದರೆ ಎಲ್ಲಾ ಶಾಸಕರಿಗೂ ಇದೇ ಪರಿಸ್ಥಿತಿಯಲ್ಲಿದ್ದಾರೆ ಎಂದು ಈ ಮಟ್ಟಕ್ಕೆ ತರುವುದಾದರೆ ಪರಿಸ್ಥಿತಿ ಕಷ್ಟ. ಆದ್ದರಿಂದ ಮಾನ್ಯ ಸಿದ್ದರಾಮಯ್ಯನವರೇ, ನಾನು ಇದನ್ನು ಯಾವುದೇ ಪಕ್ಷ ಪಂಗಡ ಇಟ್ಟುಕೊಂಡು ಹೇಳುತ್ತಿಲ್ಲ. ಇದು ಧ್ವನಿಯಿಂದ ನಾನು ಹೇಳುತ್ತಾ ಇದ್ದೇನೆ. ಇದು ನನ್ನ ಧ್ವನಿ ಇದೆ ಎಂದು ಹೇಳುತ್ತಿದ್ದೇನೆ. ನಿಮ್ಮಲ್ಲಿ ಪಾಪ ಹೃದಯ ಇದೆ. ಮನಸ್ಸಿದೆ. ಜನತಾದಳದ ಸಂಪೂರ್ಣ ಶಾಸಕರೆಲ್ಲರಿಗೂ ಇದರ ಬಗ್ಗೆ ಅಭಿಮಾನ ಇದೆ. ಆದರೆ ಧ್ವನಿ ಇಲ್ಲ. ಅವರನ್ನೂ ತುಳಿದು ಇಟ್ಟಿದ್ದೀರಿ. ಅವರನ್ನು ಮುಚ್ಚಿಟ್ಟಿದ್ದೀರಿ. ಅವರ ಧ್ವನಿಯನ್ನು.....

ಶ್ರೀ ಎಸ್. ಆರ್. ಲಕ್ಷ್ಮಯ್ಯ : ನಿಮ್ಮ ಕಲ್ಪನೆ ಅದು.

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತು. ಅವರು ನಿಜವಾಗಿಯೂ ಹೃದಯ ಬಿಚ್ಚಿ ಹೇಳುತ್ತಿಲ್ಲ. ಏಕೆಂದರೆ ನನಗೆ ಲಕ್ಷ್ಮಯ್ಯನವರು ಗೊತ್ತು. ಬೇಕಾದರೆ ಸಭೆ ಬಿಟ್ಟು ನಾವು ನೀವು ಹೋಗೋಣ. ಅರ್ಥಸಚಿವರು ನಾವು ಅವರು ಮೂರು ಜನ ಹೋಗೋಣ. ಅವರು ಏನು ಹೇಳುತ್ತಾರೆ ಕೇಳಿ. ನಾಳೆ ಅವರೂ ಗೆಲ್ಲಬೇಕಲ್ಲಾ. ಅವರು ಚುನಾವಣೆಗೆ ಹೋಗಬೇಕು. ಏನಂತ ಹೋಗುತ್ತೀರಿ ಸ್ವಾಮಿ ಚುನಾವಣೆಗೆ? ಒಂದು ಬೀದಿಗೆ ನಾವು ನಲ್ಲಿ ಹಾಕಿಸಿಲ್ಲ. ರಸ್ತೆ ಮಾಡಿಸಿಲ್ಲ. ಟಾರ್ ಹಾಕಿಸಿಲ್ಲ. ಮನೆ ಕೊಡಿಸಿಲ್ಲ. ಸೈಟ್ ಕೊಡಿಸಿಲ್ಲ. ನಿಮ್ಮನ್ನು ಯಾರು ಕೇಳುತ್ತಾರೆ? ಶೇವಣೆ ಕಳೆಯತಕ್ಕ ವ್ಯವಸ್ಥೆ ಮಾಡಿದ್ದೀರಿ ನೀವೆಲ್ಲರಿಗೂ ಏನು ಮಾಡಬೇಕು ಎಂದು ಮಾಡಿದ್ದೀರಿ? ನನಗೆ ಅರ್ಥವಾಗಲಿಲ್ಲ. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಸ್ವಾಮಿ ಒಂದು ಸೈಟು ಕೊಡುವುದಕ್ಕೆ ನಮಗೆ ಅಧಿಕಾರ ಇಲ್ಲ. ಯಾರಾದರೂ ಬಂದರೆ ನಾವು ಏನು ಮಾಡುತ್ತೇವೆ ಗೊತ್ತೇನು? ಒಂದು ತರಹ ನಮ್ಮದೂ ನಡೆಯುತ್ತದೆ ಎಂದು ಹೇಳಿಬಿಟ್ಟು ನಲ್ಲಿ ಏನ್ರಿ? ಬನ್ನಿ ನಾಳೆ ಮಾಡಿಸಿಬಿಡುತ್ತೇನೆ. ರಸ್ತೆ? ನಾವು ಮಾಡಿಸುತ್ತೇವೆ ಬನ್ನಿ. ರಸ್ತೆ ಆಯಿತಲ್ಲಾ. ಯಾವ ರಸ್ತೆಯಲ್ಲಿ ನಾವು ಹೋಗುವುದು? ಈ ತರಹ ನಮ್ಮನ್ನು ಈ ಪ್ರಪಂಚಕ್ಕೆ ಇಳಿಸಿದ್ದೀರಿ. ನಮ್ಮನ್ನು, ಈ ಶಾಸಕರನ್ನು ಈ ಮಟ್ಟಕ್ಕೆ ತಾವು ಇಳಿಸಿದ್ದೀರಿ. ಇದು ಆಗಬಾರದು.

ಶ್ರೀ ಸಿ. ಚೆನ್ನಿಗಪ್ಪ : 190 ಜನ ಇದ್ದವರು ಅವರು ಈಗ 36 ಜನಕ್ಕೆ ಬಂದಿದ್ದಾರೆ. ಎಲ್ಲಾ ಅಧಿಕಾರ ಕೊಟ್ಟಿದ್ದರು ಅವರು. ಅಧಿಕಾರ ಕೊಟ್ಟು ಕೂಡ 190 ಜನ ಇದ್ದವರು ಇವತ್ತು 36 ಜನಕ್ಕೆ

ಬಂದಿದ್ದಾರೆ. ನಾವೇನೂ ಹೆದರಿಕೊಳ್ಳುತ್ತಿಲ್ಲ. ಶಾಸಕರಿಗೆ ಹಿಂದ ಎಲ್ಲಾ ಅಧಿಕಾರವನ್ನು ಕೊಟ್ಟಿದ್ದರೂ ಕೂಡ 190 ಜನ ಇದ್ದವರು ಬರೀ 36 ಜನಕ್ಕೆ ಬಂದರು. ಅವನ್ನು ಅರ್ಥ ಮಾಡಿಕೊಂಡು ಮಾತನಾಡಿ. ನಮ್ಮನ್ನು ಏತಕ್ಕೆ ಸೇರಿಸಿಕೊಳ್ಳುತ್ತೀರಿ? ನಾವು ಸಂತೋಷದಿಂದ ಇದ್ದೇವೆ. ನಮ್ಮ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದ್ದೇವೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ : ನಾವು ಕೆಲಸ ಮಾಡುತ್ತಿರುವುದಕ್ಕೆ ಜನ ನಮ್ಮನ್ನು ಕಂಡು ಆರತಿ ಎತ್ತುತ್ತಾರೆ.

ಶ್ರೀವಾಟಾಳ್ ನಾಗರಾಜ್ : ಈಗ ನನ್ನ ಪ್ರಶ್ನೆ ಬೇರೆ. ನಾನು ಅಧಿಕಾರದಲ್ಲಿ ಇಲ್ಲದೆ ಹೋದರೂ 30 ವರ್ಷ ಹೋರಾಟ ಮಾಡಿದ್ದೇನೆ ಎಂದು ಹೇಳಿ ಯಾರೇ ಅಧಿಕಾರಿಗಳು ಜೀಪ್ ನಿಲ್ಲಿಸಿ ಕಾರು ನಿಲ್ಲಿಸಿ ನನ್ನನ್ನು ಕರೆದುಕೊಂಡು ಹೋಗುತ್ತಾರೆ. ಅದರ ಬಗ್ಗೆ ನಾನು ಚಿಂತೆಪಡುತ್ತಿಲ್ಲ. ನಮ್ಮ ಹಕ್ಕಿನ ಬಗ್ಗೆ ನಾನು ಚಿಂತೆ ಪಡುತ್ತಿದ್ದೇನೆ. ನಾನು ಏನೋ ನನಗೊಬ್ಬನಿಗೇ ಮಾಡಿ ಎಂದು ಹೇಳುತ್ತಿಲ್ಲ. ನನ್ನ ಕ್ಷೇತ್ರದ ಬಗ್ಗೆ ಸಿದ್ಧರಾಮಯ್ಯನವರಿಗೂ ಗೊತ್ತಿದೆ; ನಾವು ಅವರನ್ನು ನೋಡಿದ್ದೇವೆ. ನನ್ನ ಕ್ಷೇತ್ರದಲ್ಲಿ ನಾನು ಕೆಲಸಾನೂ ಮಾಡುತ್ತಿದ್ದೇನೆ. ಯಾವುದೇ ಪಕ್ಷದವರಿದ್ದರೂ ಸ್ನೇಹಿತವಾಗಿ ನಾವು ಕೆಲಸ ಮಾಡುತ್ತಿದ್ದೇವೆ. ನಮ್ಮ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿದ್ದಾರೆ. ನಮಗೂ ಅವರಿಗೂ ಬೇಧಭಾವ ಇಲ್ಲ. ಅವರು ಜನತಾದಳದವರಿರಬಹುದು. ನಾವು ಓಡಾಡಿಕೊಂಡಿದ್ದೇವೆ. ಜೊತೆಯಲ್ಲೇ ಸಮಾರಂಭ ಮಾಡುತ್ತಿದ್ದೇವೆ. ನಾನು ಅದರ ಬಗ್ಗೆ ಚಿಂತೆಪಡುತ್ತಿಲ್ಲ ಲಕ್ಷ್ಮಯ್ಯನವರೇ ನೀವು ಪ್ರಾಮಾಣಿಕವಾಗಿ ಹೇಳಿ. ಏತಕ್ಕೆ ನೀವು ಈ ಆಶಾಡಭೂತಿತನದಿಂದ ಮಾತನಾಡುವುದು? ಪ್ರಾಮಾಣಿಕವಾಗಿ ಹೇಳಿ ಸ್ವಾಮಿ ಸುಮ್ಮನೆ ಏನಾಗಿದೆ ಅಂತ.

ಶ್ರೀ ಎಸ್. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, 190 ಜನ ಇರುವಂಥ ಸಂದರ್ಭದಲ್ಲಿ ನಾವು ಏನು ಮಾಡಿದೆವೋ ಅದಕ್ಕೆ ಜನ ನಮಗೆ ಕೊಟ್ಟಿರುವ ತೀರ್ಪನ್ನು ಒಪ್ಪಿಕೊಂಡು ಇಲ್ಲಿ ಕೂತಿದ್ದೇವೆ. ಅವರಿಗೂ ಅದೇರೀತಿ ಆಗಬೇಕು ಎಂಬ ಆಸೆ ಇದೆಯೋ ಎಂಬ ಅನುಮಾನ ನನಗೆ ಆಗುತ್ತಿದೆ. ಎರಡನೆಯದು, ವಾಟಾಳ್ ನಾಗರಾಜ್‌ರವರು ಮಾತನಾಡುವ ವಿಚಾರಕ್ಕೆ ಬಹಳ ಗಂಭೀರವಾಗಿ ತೆಗೆದುಕೊಳ್ಳುವಂಥ ನಮ್ಮ ಮಿತ್ರರು ನಿನ್ನೆ ಅವರ ಪರವಾಗಿ ಮಾತನಾಡುವಂಥ ಶಾಸಕರು ಅವರ ಅನಿಸಿಕೆಗಳನ್ನು ಸರ್ಕಾರದ ವಿರುದ್ಧವಾಗಿ ಹೇಳಿದರು ಎನ್ನುವ ಬಗ್ಗೆ ಆಸಕ್ತಿ ಇಲ್ಲ ಅವರಿಗೆ ಡಾಕ್ಟರ್ ನಾಯಕ್ ಅವರು ನಮಗೇ ಬುದ್ಧಿವಾದ ಹೇಳುವುದಕ್ಕೆ ಬರುತ್ತಾರೆ. ಅನುಮಾನ ನನಗೆ ಆಗುತ್ತಿದೆ. ಎರಡನೆಯದು, ವಾಟಾಳ್ ನಾಗರಾಜ್‌ರವರು ಮಾತನಾಡುವ ವಿಚಾರಕ್ಕೆ ಬಹಳ ಗಂಭೀರವಾಗಿ ತೆಗೆದುಕೊಳ್ಳುವಂಥ ನಮ್ಮ ಮಿತ್ರರು ನಿನ್ನೆ ಅವರ ಪರವಾಗಿ ಮಾತನಾಡುವಂಥ ಶಾಸಕರು ಅವರ ಅನಿಸಿಕೆಗಳನ್ನು ಸರ್ಕಾರದ ವಿರುದ್ಧವಾಗಿ ಹೇಳಿದರು ಎನ್ನುವ ಬಗ್ಗೆ ಆಸಕ್ತಿ ಇಲ್ಲ ಅವರಿಗೆ ಡಾಕ್ಟರ್ ನಾಯಕ್ ಅವರು ನಮಗೇ ಬುದ್ಧಿರಾದ ಹೇಳುವುದಕ್ಕೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಶಾಸಕರಿಗೆ ಅಲ್ಲೇನೂ ವಾಹನ ಕೊಟ್ಟಿಲ್ಲ. ಸುಮಾರು ಒಂದೊಂದು ಕ್ಷೇತ್ರದಲ್ಲಿ 300 ಹಳ್ಳಿಗಳಿರುವುದುಂಟು. 200 ಹಳ್ಳಿಗಳು, 150 ದೊಡ್ಡ ದೊಡ್ಡ ಹಳ್ಳಿಗಳಿರುವುದುಂಟು. ಅದು ಸುತ್ತಬೇಕಾದರೆ ಮೊದಲು ಏನಿತ್ತು? ವಸ್ತುಸ್ಥಿತಿ ಮಾತನಾಡೋಣ. ಕ್ಷೇತ್ರಾಭಿವೃದ್ಧಿ ಅಧಿಕಾರಿ ಇರುತ್ತಿದ್ದ. ಅವನನ್ನು ಗ್ರಾಮಸಂದರ್ಶನಕ್ಕೆ ಹೋಗೋಣ ಬಾ ಅಂದರ ಆ ಜೀಪಿನಲ್ಲಿ ಕರದುಕೊಂಡುಹೋಗುತ್ತಿದ್ದ. ಈಗ ಜೀಪ್ ಕೇಳಿದರ ಏನು ಹೇಳುತ್ತಾನೆ ಗೊತ್ತೇನು? ಇಲ್ಲಾ ಸಾರ್, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರರು ಹೋಗಬೇಕಾಗಿದೆ ಅಂತರಾ. ನೇರವಾಗಿ ಹೇಳದೇ ಹೋದರೂ ದಯವಿಟ್ಟು ಕ್ಷಮಿಸಬೇಕು ಸಾರ್. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಬರುತ್ತಾರೆ ಎಂದು ಹೇಳುತ್ತಾರೆ. ನಾವೇನು ಮಾಡಬೇಕು? ಅವರ ಪಕ್ಕದ್ಲಲಿ ಕುಳಿತುಕೊಳ್ಳಲೇ ಎಂದರೆ ಪಕ್ಕದಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಸಾರ್, ಇನ್ನೊಬ್ಬರು ಜೂನಿಯರ್ ಇಂಜಿನಿಯರ್ ಬರುತ್ತಾರೆ ಎಂದು ಹೇಳುತ್ತಾರೆ. ಏನು ಮಾಡಬೇಕು ನಾವು? ಇದು ಪರಿಸ್ಥಿತಿ, ವ್ಯವಸ್ಥೆ. ಆಯಿತು ಸ್ವಾಮಿ, ಹೋಗಲಿ. ತಾವು ಇದನ್ನು ಅರ್ಥ ಮಾಡಿಕೊಂಡು ಕನಿಷ್ಠ ಪ್ರತಿ ಕ್ಷೇತ್ರಕ್ಕೂ ಶಾಸಕರುಗಳು ಹೇಳಿದಂಥ ರಸ್ತೆಗಳು ಹಾಗೂ ಇತರ ಕೆಲಸಗಳನ್ನಾದರೂ ಮಾಡಿಕೊಡಿ. ನಾನೇನೂ ತಾಲ್ಲೂಕು ಪಂಚಾಯಿತಿ ಅಧಿಕಾರ ಕಡಿಮೆ ಮಾಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಜಿಲ್ಲಾ ಪಂಚಾಯಿತಿ ಅಧಿಕಾರ ಕಡಿಮೆ ಮಾಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಶಾಸಕರುಗಳಿಗೆ ಕೆಲಸ ಕೊಡುವುದಕ್ಕೆ ನನಗನ್ನಿಸುತ್ತದೆ ಒಂದೊಂದು ಕೋಟಿ ರೂಪಾಯಿ ಕೊಡಿ ಅಂತ ಅಂದರೆ ಬಹಳ ಆಶ್ಚರ್ಯ ಆಗುತ್ತದೆ. ಒಂದೊಂದು ಕೋಟಿ ರೂಪಾಯಿ ಒಂದೊಂದು ಕ್ಷೇತ್ರಕ್ಕೆ ಕೊಟ್ಟು ಬೇಕಾದರೆ ಎರಡು ವರ್ಷ ಎಂದು ನಿಗದಿಮಾಡಿ. ಎರಡು ವರ್ಷದ ಕ್ರಿಯಾಯೋಜನೆಯನ್ನು ಶಾಸಕರು ತಯಾರು ಮಾಡಿ ಯಾವ ಯಾವ ಕ್ಷೇತ್ರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಅಂಗನವಾಡಿ ಕಟ್ಟಡಗಳು ಮತ್ತು ರಸ್ತೆಗಳು ಏನೇನು ಮಾಡಬೇಕು ಎಂದು ಶಾಸಕರು ಕೊಡತಕ್ಕ ಒಂದು ವ್ಯವಸ್ಥೆ ಏನಾದರೂ ಈ ವರ್ಷದಿಂದ ಇದಕ್ಕಾಗಿ ಒಂದು ವಿಶೇಷವಾದಂಥ ಹಣವನ್ನು ತಾವು ಇರುವುದಕ್ಕೆ ಒಂದು ವ್ಯವಸ್ಥೆಯನ್ನು ತಾವು ಮಾಡಿ. ಮತ್ತು ನಿಮ್ಮ ಪಂಚಾಯತ್ ರಾಜ್ ಸಚಿವರು ಹೇಳುತ್ತಾರೆ ಇನ್ನೂ ಸಮಿತಿಯ ವರದಿ ಬಂದಿಲ್ಲ. ವರದಿ ಬಂದನಂತರ ಶಾಸಕರು ಸ್ಥಾನ ಮಾನ ಏನೇನಿದೆ ಎಂಬುದನ್ನು ಹೇಳುತ್ತೇವೆ ಎಂದು ಹೇಳಿದ್ದಾರೆ. ಈಗೆಲ್ಲಾ ಸ್ಥಾನವೂ ಹೋಯಿತು.

ಶ್ರೀ ಸಿದ್ದರಾಮಯ್ಯ ; ಶಾಸಕರ ಬಗ್ಗೆ ಇಲ್ಲ ಅದರಲ್ಲಿ.

ಶ್ರೀ ವಾಟಾಳ್ ನಾಗರಾಜ್ : ಇಲ್ಲವೇ? ಅವರು ಅನೇಕ ಸಾರಿ ಹೇಳುತ್ತಾರೆ ಅದು ಬರಲಿ, ಎಂದು ಸರಿ ಅದೂ ಇಲ್ಲ. ಶಾಸಕರಿಗೆ ಸ್ಥಾನವೂ ಇಲ್ಲ ಅದರಲ್ಲಿ. ಈ ಪರಿಸ್ಥಿತಿ ಇದೆ. ನಾನು ತಮಗೆ ಹೇಳುತ್ತಿದ್ದೇನೆ. ತಾವು ಇದನ್ನು ಬಹಳ ದೀರ್ಘವಾಗಿ ಯೋಚನೆ ಮಾಡಿ ಈ ಬಗ್ಗೆ ತಾವು ಒಂದು ಪ್ರಾಮಾಣಿಕ ಚಿಂತನೆ ಮಾಡತಕ್ಕದ್ದು ನನಗೆ ಬಹಳ ಸಂತೋಷ. ಮಾನ್ಯ ಅಧ್ಯಕ್ಷರೇ,

3.30 ಪಿ.ಎಂ.

ಮಾನ್ಯ ಸಿದ್ಧರಾಮಯ್ಯನವರು ಅರ್ಥಮಂತ್ರಿಗಳಾಗಿ ಆಯುವ್ಯಯವನ್ನು ಮಂಡಿಸಿದ್ದಾರೆ. ನಾನು ತಕ್ಷಣ ಈ ಆಯುವ್ಯಯ ಎಲ್ಲಾ ಸರಿಯಿಲ್ಲವೆಂದು ಹೇಳಿ, ಸಾರಾಸಗಟಾಗಿ ತಳ್ಳಿಹಾಕತಕ್ಕ ನಿಟ್ಟಿಗೆ ಹೋಗುವುದಿಲ್ಲ. ಹೋದಸಲ ಆಯುವ್ಯಯಕ್ಕಿಂತ ಈ ಸಲ ಪ್ರಯತ್ನ ಮಾಡಿದ್ದೀರಿ. ಬಹಳ ಕಷ್ಟಪಟ್ಟು ಮಾಡಿದ್ದೀರಿ. ಹಳ್ಳಿಗಳ ಕಡೆ ಹೇಳುತ್ತಾರೆ, ಸಂತೆಯಲ್ಲಿ ಮೂರು ಮಳ ಎಂದು. ತಕ್ಷಣ ಚುನಾವಣೆ ಬರುತ್ತಾ ಇದೆ. ಅದಕ್ಕೆ ತಕ್ಕಂತೆ ಸಿದ್ಧತೆಯನ್ನು ಮಾಡಿಬಿಟ್ಟು ಚುನಾವಣೆಯ ಆಯುವ್ಯಯವನ್ನು 61 ಪುಟಗಳನ್ನು ಮುದ್ರಿಸಿ ಅದನ್ನು 90 ನಿಮಿಷಗಳ ಕಾಲ ಸುದೀರ್ಘವಾಗಿ ಓದಿ ಮಂಡಿಸಿದ್ದೀರಿ. ಇದರಲ್ಲಿ ಬಹಳ ವಿಚಾರಗಳನ್ನು ಹೇಳಿದ್ದೀರಿ. ಇವೆಲ್ಲಾ ಏನು ಕಾರ್ಯಕ್ರಮ ತರುತ್ತೀರಿ? ಬಹಳ ಹೇಳಿದ್ದೀರಿ. ಯಾವುದನ್ನು ಬಿಟ್ಟಿಲ್ಲ ಎಲ್ಲವನ್ನೂ ಹೇಳಿದ್ದೀರಿ. ಎರಡು ಮೂರು ವಿಷಯಗಳ ಬಗ್ಗೆ ಸುಮ್ಮನೆ ಪ್ರಸ್ತಾಪ ಮಾಡುತ್ತೇನೆ. ಅಗರಬತ್ತಿಗೆ ಟ್ಯಾಕ್ಸ್ ಕಡಿಮೆ ಮಾಡಿದ್ದೀರಿ. ಮಾನ್ಯ ಈಶ್ವರಪ್ಪನವರೇ, ನಾವು ನಿಮ್ಮ ಆಡಳಿತ ನೋಡಿ ಅಗರಬತ್ತಿ ಹಚ್ಚಿಕೊಂಡು ನಿಮ್ಮ ಮುಖಕ್ಕೆ ಮಂಗಳಾರತಿ ಮಾಡಬಹುದಾಗಿತ್ತು. ನೀವು ಕರ್ಪೂರಕ್ಕೆ ತೆರಿಗೆಯನ್ನು ತೆಗೆದಿದ್ದರೆ, ನಿಮ್ಮ ಮುಖ ಅಂದರೆ ತಾವು ತಪ್ಪು ತಿಳಿದುಕೊಳ್ಳಬೇಡಿ, ಸರ್ಕಾರ ಎಂದು ನಾನು ಹೇಳುತ್ತೇನೆ. ಮಂಗಳಾರತಿ ಮಾಡಬೇಕಾದರೆ ಕರ್ಪೂರಕ್ಕೆ ತೆರಿಗೆ ತೆಗೆಯಲಿಲ್ಲ. ಅಗರಬತ್ತಿಗೆ ತೆಗೆದಿದ್ದೀರಿ. ಆಮೇಲೆ ಕಟ್ಟಿಗೆ ಸ್ವಾಮಿ, ಸೌದೆಗೆ ತೆರಿಗೆ ತೆಗೆಯಲೇಬೇಕು. ನಿಮ್ಮ ಆಡಳಿತ ನೋಡಿ ನೋಡಿ ಬೇಸತ್ತು ಸಾಕಾಗಿ ಬೆಲೆ ಏರಿಕೆ ತಡೆಯಲಾರದೆ ಸೊಂಟ ಮುರಿದು, ಅನಾರೋಗ್ಯವಾಗಿ, ಸುಣ್ಣವಾಗಿ ಕೊನೆಗೆ ಹೋದಾಗ ಕಟ್ಟಿಗೆ ಬೇಕಲ್ಲಾ, ಈ ಕಟ್ಟಿಗೆ ಹತ್ತಬೇಕಲ್ಲಾ ಸೀಮೆಎಣ್ಣೆ ಅದಕ್ಕೆ ತೆಗೆದಿದ್ದೀರಿ ಇದರಲ್ಲಿ ನೀವು ಒಂದಕ್ಕೆ ತೆಗೆದಿಲ್ಲ. ಬೆಂಕಿಪೊಟ್ಟಣ ಅದಕ್ಕೆ ಹೋದಸಾರಿ ತೆರಿಗೆ ತೆಗೆದಿದ್ದೀರಿ ಎಂದು ಕಾಣುತ್ತದೆ. ಹೋದಸಾರಿ ಆಯುವ್ಯಯದಲ್ಲಿ ಇದನ್ನು ನಾನು ಹೇಳಿದ್ದೆ. ಬೆಂಕಿಪೊಟ್ಟಣಕ್ಕೆ ತೆರಿಗೆ ತೆಗೆದಿದ್ದೀರಿ. ಆಮೇಲೆ ಕನ್ನಡ ನಿಮ್ಮ ದುರಾಡಳಿತ ನೋಡಿ ನೋಡಿ ಕಣ್ಣೆಲ್ಲಾ ಕೆಟ್ಟು ಹೋಗಿಬಿಟ್ಟು ಕಣ್ಣು ಪೊರೆ ಬಂದು ಕನ್ನಡಕ ಹಾಕಿಕೊಳ್ಳಿಯೆಂದು ಇದಕ್ಕೆ ತೆರಿಗೆ ವಿನಾಯಿತಿ ಕೊಟ್ಟಿರಬೇಕೆಂದು ಕಾಣುತ್ತದೆ. ನನಗನಿಸುತ್ತದೆ ವಸ್ತುಸ್ಥಿತಿ, ನಾನು ಮೊದಲೇ ತಮಗೆ ಹೇಳಿದಹಾಗೆ ಸಾರಾಸಗಟಾಗಿ ತಳ್ಳಿಹಾಕುತ್ತೇನೆ ಎನ್ನುವ ಪ್ರಶ್ನೆಯಿಲ್ಲ.

ಮಹಿಳೆಯರ ಬಗ್ಗೆ ತಾವು ಒಂದು ರೀತಿಯಲ್ಲಿ ಹೇಳಿದ್ದೀರಿ. ಬಡತನದಲ್ಲಿರತಕ್ಕ ಮಹಿಳೆಯರ ಬಗ್ಗೆ ಹೇಳಿದ್ದೀರಿ ನಿಜವಾಗಲೂ ಸಂತೋಷಪಡತಕ್ಕದ್ದು ಇದೆ. ಆದರೆ ಮಹಿಳೆಯರ ಶೋಷಣೆಯನ್ನು ತಡೆಯುವ ಬಗ್ಗೆ, ಮಹಿಳೆಯರ ಶೋಷಣೆಯನ್ನು ತಪ್ಪಿಸುವ ಬಗ್ಗೆ ನಿಮ್ಮಲ್ಲಿ ಕಾರ್ಯಕ್ರಮವೇನು? ಇದಕ್ಕೆ ಒಂದು ಪರಿಣಾಮಕಾರಿಯಾದ ಕಾರ್ಯಕ್ರಮ ಬೇಕು. ಇವತ್ತು ಸಮಾಜದಲ್ಲಿ ತಾವು ಹೇಳುತ್ತಾ ಇದ್ದಿರಿ. ಮಹಿಳೆಯರಿಗೆ ಶೇಕಡ 30 ಭಾಗ ಶಾಸಕಾಂಗದಲ್ಲಿ ಕೊಡಬೇಕು. ಪ್ರತಿಯೊಂದರಲ್ಲೂ ಕೊಡಬೇಕು ಎನ್ನತಕ್ಕದ್ದು. ಹಾಗೂ ಉದ್ಯೋಗದಲ್ಲಿ ಕೊಡಬೇಕೆಂದು ಹೇಳತಕ್ಕದ್ದು. ನಿಜ ನಾನು ಒಪ್ಪಿಕೊಳ್ಳುತ್ತೇನೆ ಸಂತೋಷ. ಈ ಮಹಿಳೆಯರ ಮೇಲೆ ನಡೆಯತಕ್ಕ ದೌರ್ಜನ್ಯಗಳು ಹಾಗೂ ಮಹಿಳೆಯರ ಮೇಲೆ ನಡೆಯತಕ್ಕ ಶೋಷಣೆ ಮತ್ತು ಸಾಮಾಜಿಕ ಅನಿಷ್ಟಗಳು, ಇವುಗಳನ್ನು ವರ್ಣಿಸಲು ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೇ, ಒಬ್ಬ ವಿಧವೆಯಾದ

ಮಹಿಳೆಯ ಪರಿಸ್ಥಿತಿಯನ್ನು ವರ್ಣನೆ ಮಾಡುವುದಕ್ಕೆ ಹೋದರೆ ಬಹಳ ನೋವಾಗುತ್ತದೆ. ನಮ್ಮ ಸಮಾಜದಲ್ಲಿ ನಾವು ಎಲ್ಲಿದ್ದೇವೆ? ವಿಧವೆಯಾಗುವುದಕ್ಕೆ ಮುಂಚೆ ಆ ಮಹಿಳೆಯನ್ನು ನೋಡತಕ್ಕ ವ್ಯವಸ್ಥೆ ಏನಿದೆ ವಿಧವೆಯಾದ ಮೇಲೆ ನೋಡತಕ್ಕ ವ್ಯವಸ್ಥೆ ಹೇಗಿದೆ ಎಂಬುದನ್ನು ಗಮನಿಸಿದರೆ ಮನಸ್ಸಿಗೆ ಬಹಳ ದುಃಖವಾಗುತ್ತದೆ. ಇದು ಸಾಮಾಜಿಕ ನ್ಯಾಯ, ನಮ್ಮ ಸಂಸ್ಕೃತಿ, ನಮ್ಮ ವಿಚಾರವೆಂದು ಹೇಳಬಹುದು, ಆದರೆ ಬರುಬರುತ್ತಾ ನಮ್ಮ ಸಂಸ್ಕೃತಿ ಬದಲಾವಣೆಯಾಗಬೇಕು. ತಮಗೆ ಗೊತ್ತಿರುವಹಾಗೆ ಇವತ್ತು ವಿಧವೆಯಾದರೆ ಒಂದೊಂದು ಸಮಾಜದಲ್ಲಿ ಒಂದೊಂದು ರೀತಿ. ಕೆಲವು ಸಮಾಜದಲ್ಲಿ ವಿಧವೆಯಾದ ತಕ್ಷಣ ಆಕೆಯ ತಲೆಯ ಕೂದಲನ್ನೆಲ್ಲಾ ತೆಗೆಸಿ ಒಂದು ಮೂಲೆಯಲ್ಲಿ ಕೂಡಿಸಿ ಈ ಸಮಾಜಕ್ಕೆ ಈ ಮಹಿಳೆ ಬೇಡವೇನೋ ಎನ್ನುವ ರೀತಿಯಲ್ಲಿ ಒಂದು ಕಡೆ. ಮತ್ತೊಂದು ಕಡೆ ತಾವು ನೋಡಬೇಕು, ವಿಧವೆಯ ಆ ರೋಧನ ಆ ನರಕಯಾತನೆ ವಿಧವೆಯಾದ 12 ದಿನಕ್ಕೆ ಆಕೆಯ ಕೈಯಲ್ಲಿರತಕ್ಕ ಬಳೆಗಳನ್ನು ಒಡೆಯತಕ್ಕದ್ದು. ತಲೆಯಲ್ಲಿ ಮೂಡಿದ ಹೂವನ್ನು ಕೀಳತಕ್ಕದ್ದು. ಇಂದೂ ಸಹ ಸಮಾಜದಲ್ಲಿ ಮಹಿಳೆಯರ ಮೇಲೆ ನಾನಾ ರೀತಿಯ ದೌರ್ಜನ್ಯಗಳು ನಡೆಯುತ್ತವೆ ಎಂಬುದನ್ನು ಇದು ತೋರಿಸುತ್ತದೆ. ಈ ರೀತಿ ನಡೆಯತಕ್ಕ ದೌರ್ಜನ್ಯಗಳನ್ನು ಬದಲಾವಣೆ ಮಾಡತಕ್ಕ ಒಂದು ಹೊಸ ದಿಕ್ಕಿಗೆ ನಾವು ಇವತ್ತು ಹೋಗಬೇಕಾಗಿದೆ. ಅದಕ್ಕೆ ಹೋಗಲಿಲ್ಲವೆಂದರೆ, ಕಷ್ಟವಾಗುತ್ತದೆ. ಇದಕ್ಕೆ ಏನಾದರೂ ಒಂದು ಕಾನೂನು ಮೂಲಕ ಅಲ್ಲದಿದ್ದರೂ ಸಮಾಜದ ಜನತೆ ಬದಲಾವಣೆಯಾಗತಕ್ಕ ಕಾರ್ಯಕ್ರಮವನ್ನು ರೂಪಿಸಬೇಕು ಗಂಡ ಸತ್ತಾಗ ಆ ವಿಧವೆಯ ಪರಿಸ್ಥಿತಿಯನ್ನು ವರ್ಣಿಸಲು ಆಗುವುದೇ ಇಲ್ಲ. ವಿಧವೆ ಎನ್ನುವ ಹೆಸರೇ ಒಂದು ಅಪರಾಧ. ಅಪರಾಧದ ಸುಳಿಯಲ್ಲಿ ನಾವು ಮಹಿಳೆಯರ ಮೇಲೆ ದೌರ್ಜನ್ಯವನ್ನು ಮಾಡುತ್ತಿದ್ದೇವೆ. ಇದಕ್ಕೊಂದು ಹೊಸ ಆಯಾಮವನ್ನು ಕೊಡತಕ್ಕ ಚಿಂತನೆ ಇವತ್ತು ಆಗಬೇಕು. ಗಂಡ ಸತ್ತ 11ನೇ ದಿವಸಕ್ಕೆ ಆಕೆಯನ್ನು ಮುತ್ತೈದೆಯೆಂದು ಮಾಡುತ್ತಾರೆ. ಅದಾದ ಮೇಲೆ ನಡೆಯತಕ್ಕ ಕ್ರೌರ್ಯ ಇದೆಯಲ್ಲಾ ಆ ಬಳೆಯನ್ನು ಒಡೆಯತಕ್ಕದ್ದು, ತಲೆಯಲ್ಲಿ ಮುಡಿಸಿದ ದೊಡ್ಡ ಹೂವನ್ನು ಕೀಳತಕ್ಕದ್ದು ಕುಂಕುಮವನ್ನು ಅಳಿಸತಕ್ಕದ್ದು, ಅವಳಿಗೆ ನಿಜವಾಗಲೂ ಅಲ್ಲೇ ಅವಮಾನವಾಗುವುದು. ಸಾಯುವುದಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವ ಆ ಪರಿಸ್ಥಿತಿ ನಿರ್ಮಾಣ ನಮ್ಮ ಸಮಾಜದಲ್ಲಿ ಆಗಿದೆ. ಈ ಮಹಿಳೆಯರ ಶೋಷಣೆ ಈ ಕಾಲದಲ್ಲೂ ಬದಲಾವಣೆಯಾಗಲಿಲ್ಲವೆಂದರೆ ನಾವು ನಿಜವಾಗಲೂ ತಲೆಯನ್ನು ತಗ್ಗಿಸಬೇಕು. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಗಿದೆ, ಧರ್ಮಗಳಲ್ಲಿ ಬದಲಾವಣೆಗಳು ಆಗುತ್ತಿವೆ. ಬಹಳ ಜನ ಮಠಾಧಿಪತಿಗಳು, ಬ್ರಹ್ಮವಿಷ್ಣು ಮಹೇಶ್ವರ ರೀತಿ ಮಠಾಧಿಪತಿಗಳೆಲ್ಲಾ ಇದ್ದಾರೆ. ಅವರೆಲ್ಲರನ್ನೂ ನಾನು ಕೈಮುಗಿದು ಈ ಸಭೆಯ ಮೂಲಕ ಕೇಳಿಕೊಳ್ಳುತ್ತೇನೆ, ಮಠಾಧಿಪತಿಗಳು ಬೇರೆ ಭಾಷಣಗಳನ್ನು ಬಿಟ್ಟುಬಿಟ್ಟು ಇದರ ಬಗ್ಗೆ ಮಾತನಾಡಿಯೆಂದು ನಾನು ಹೇಳುತ್ತೇನೆ. ನೇರವಾಗಿ ಎಲ್ಲರನ್ನೂ ಅತ್ಯಂತ ಕಳಕಳಿಯಿಂದ ಕೈಮುಗಿದು ಈ ಸಭೆಯ ಮೂಲಕ ಇಡೀ ಮಠಾಧಿಪತಿಗಳಿಗೆಲ್ಲಾ ಈ ಶೋಷಣೆಯನ್ನು ತಪ್ಪಿಸತಕ್ಕ ವಿಚಾರಧಾರೆಗೆ ನೀವೆಲ್ಲರೂ ಸಿದ್ಧವಾಗಿ ಹೊಸ ಒಂದು ದಿಕ್ಕನ್ನು ತೋರಿಸಿ, ಮಹಿಳೆ ವಿಧವೆಯಾದ ತಕ್ಷಣ ಅವಳ ಸ್ಥಾನಮಾನ ಉಳಿಯಬೇಕು. ಮಹಿಳೆಗೆ ಹೊಸ

ದಿಕ್ಕನ್ನು ಕೊಡತಕ್ಕ ದೃಷ್ಟಿಯನ್ನು ನಾವು ಸಮಾಜ ಧರ್ಮಗುರುಗಳು ಪೀಠಾಧಿಪತಿಗಳಿಗೆ ಅತ್ಯಂತ ಕಳಕಳಿಯಿಂದ ಪ್ರೀತಿ ವಿಶ್ವಾಸದಿಂದ ಈ ಸಭೆಯ ಮೂಲಕ

(ಸಭಾಧ್ಯಕ್ಷರು ಪೀಠದಲ್ಲಿದ್ದರು)

ಕಳಕಳಿಯ ಮನವಿಯನ್ನು ಮಾಡುತ್ತಿದ್ದೇನೆ. ಈ ಬದಲಾವಣೆಯಾಗಬೇಕು. ಇದಕ್ಕೆ ಧರ್ಮ ಅಡ್ಡಿ ಬರುತ್ತದೆಂದು ನಿಲ್ಲಬಾರದು. ಶಾಸ್ತ್ರ ಅಡ್ಡಿಬರುತ್ತದೆ ಎಂದು ನಿಲ್ಲಬಾರದು. ಜಾತಿ ಅಡ್ಡಿ ಬರುತ್ತದೆ ಎಂದು ನಿಲ್ಲಬಾರದು. ಇವು ಎಲ್ಲವನ್ನು ಮೂಲೆಗುಂಪು ಮಾಡಿ ಮಹಿಳೆ ಪುರುಷರಷ್ಟೇ ಒಂದೇ ಸಮಾನತೆ ಎನ್ನತಕ್ಕ ಒಂದು ವ್ಯವಸ್ಥೆಯನ್ನು ತರತಕ್ಕ ಒಂದು ದಿಕ್ಕು ನಮ್ಮಲ್ಲಿ ಬದಲಾವಣೆಯಾಗಬೇಕು. ಪಟ್ಟಣಗಳಲ್ಲಿ ನಮಗೆಲ್ಲರಿಗೂ ಮನೆಯಲ್ಲಿ ಶೌಚಾಲಯ ಬಹಳ ಚೆನ್ನಾಗಿದೆ. ಬಹಳ ಸುಂದರವಾಗಿದೆ ಸಣ್ಣ ಮನೆಯಿರಲಿ ದೊಡ್ಡ ಮನೆಯಿರಲಿ. ಎಲ್ಲಾ ಕಡೆಯೂ ಶೌಚಾಲಯವಿದೆ. ಹಳ್ಳಿಗಾಡಿನಲ್ಲಿ ಇವತ್ತೂ ನೂರಾರು ಯೋಜನೆಗಳನ್ನು ತಿಂದಿದ್ದೀರಿ, ಯಾವ ಯೋಜನೆಯನ್ನು ತಂದರೂ ಬೇಲಿ ಪಕ್ಕದಲ್ಲಿ ಕುಳಿತು ಮಲಮೂತ್ರ ಮಾಡತಕ್ಕ ಮಹಿಳೆಯರ ರಕ್ಷಣೆಗೆ ಯಾವ ಸರ್ಕಾರವೂ ಬರಲಿಲ್ಲ. ಇವತ್ತು ನೀವು ಯಾವ ಹಳ್ಳಿಗಾದರೂ ಹೋಗಿ, ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ. ನಾವು ಇಲ್ಲಿ ಸುಮ್ಮನೆ ಭಾಷಣ ಮಾಡುತ್ತಿದ್ದೇವೆ, ವೇದಾಂತ ಹೇಳುತ್ತಿದ್ದೇವೆ ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ. ಸಂಪೂರ್ಣವಾಗಿ ಮಹಿಳೆಯರು ಸೂರ್ಯ ಮುಳುಗಬೇಕು ಆಗಲೇ ಅವರಿಗೆ ಸ್ವಾತಂತ್ರ್ಯ. ಸೂರ್ಯನ ಬೆಳಕಿರುವಾಗ ಅವರಿಗೆ ಸ್ವಾತಂತ್ರ್ಯವಿಲ್ಲ. ಅವರಿಗೆ ಬೇಲಿಯ ಪಕ್ಕವೇ ಶೌಚಾಲಯ. ಈ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಒಂದು ಹೊಸ ಯೋಜನೆಯನ್ನು ಪ್ರಾಮಾಣಿಕ ಚಿಂತನೆಯನ್ನು ತಾವು ಮಾಡಬೇಕೆಂದು ಹೇಳಿ ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಾವು ಮಂಡಿಸಿರತಕ್ಕ ಆಯವ್ಯಯದಲ್ಲಿ ನೋಡಿದೆ; ಮಾನ್ಯ ರಾಜ್ಯಪಾಲರ ಭಾಷಣದಲ್ಲಿಯೂ ನೋಡಿದೆ, ಕನ್ನಡ ಆಡಳಿತ ಭಾಷೆಯ ಬಗ್ಗೆ ನೀವು ಚಿಂತನೆಯನ್ನೇ ಮಾಡಲಿಲ್ಲವಲ್ಲಾ? ಇದರ ಬಗ್ಗೆ ನೀವು ಏನೂ ಗಮನವನ್ನೇ ಹರಿಸಿಲ್ಲ. ತಾವು ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಆಗಿದ್ದಿರಿ. ಕನ್ನಡದ ಬಗ್ಗೆ ಸುಮ್ಮನೆ ತಾವು ಇಲ್ಲಿ ಏನು ಹೇಳಿದ್ದೀರಿ? ಕನ್ನಡ ಚಲನಚಿತ್ರಗಳಿಗೆ ಸಂಪೂರ್ಣ ಮನರಂಜನೆ ತೆರಿಗೆಯನ್ನು ತೆಗೆದಿದ್ದೇವೆಂದು ಹೇಳಿದ್ದೀರಿ. ಚಲನಚಿತ್ರಗಳಿಗೆ ಮನರಂಜನೆ ತೆಗೆದ ತಕ್ಷಣವೇ ಕನ್ನಡದ ಬೆಳವಣಿಗೆ ಆಗಲಿಲ್ಲ. ಕನ್ನಡದ ಬೆಳವಣಿಗೆಗೆ ನಾನಾ ದಿಕ್ಕುಗಳು. ತಾವು ತಮ್ಮ ಆಯವ್ಯಯ ಭಾಷಣದಲ್ಲಿ ಹೇಳಿದ್ದೀರಿ.

ಇಲ್ಲಿ ಕನ್ನಡ ಭವನವನ್ನು ರವೀಂದ್ರ ಕಲಾಕ್ಷೇತ್ರ ಪಕ್ಕದಲ್ಲಿ ಕಟ್ಟುತ್ತೇವೆ ಎಂದು ಹೇಳಿಬಿಟ್ಟರು. ಈ ಆಯವ್ಯದಲ್ಲೂ ಹೇಳುತ್ತಿದ್ದಾರೆ; 'ರವೀಂದ್ರ ಕಲಾಕ್ಷೇತ್ರದ ಪಕ್ಕದಲ್ಲಿ ಕನ್ನಡ ಭವನವನ್ನು ಕಟ್ಟುತ್ತೇವೆ' ಎಂದು. ಶ್ರೀಮಾನ್ ಬಂಗಾರಪ್ಪನವರು ಶಂಕುಸ್ಥಾಪನೆ ಮಾಡಿದರು. ಇದಾದ ನಂತರ ಶ್ರೀಮಾನ್ ಮೊಯಿಲಿಯವರು ಶಂಕುಸ್ಥಾಪನೆ ಮಾಡಿದರು. ಅದೂ ಆಯಿತು. ಈಗ ಮತ್ತೆ ಶ್ರೀಮಾನ್ ದೇವೇಗೌಡರು ಅಲ್ಲಿ ಕನ್ನಡ ಭವನವನ್ನು ಕಟ್ಟುತ್ತೇವೆ ಎಂದು ಹೇಳಿದ್ದಾರೆ. ಕನ್ನಡ ಭವನವನ್ನು ಕಟ್ಟುವುದಕ್ಕೆ ಹೋದಸಾರಿ 6 ಕೋಟಿ ರೂಪಾಯಿ ಇಡುತ್ತೇವೆ ಎಂದರು. ಈ

ಸಾರಿಯೂ ಆರು ಕೋಟಿ ಮೊದಲು ಕೊಡುತ್ತೇವೆ ಎಂದು ಹೇಳುತ್ತಾರೆ. ಹೀಗಾದರೆ ನೂರು ವರ್ಷವಾದರೂ ಅಲ್ಲಿ ಕನ್ನಡ ಭವನ ಆಗುವುದಿಲ್ಲ. ಆ ದೃಷ್ಟಿಯಿಂದ ನಾನು ತಮಗೆ ಹೇಳುತ್ತಿದ್ದೇನೆ, ಮಾನ್ಯ ಸಿದ್ಧರಾಮಯ್ಯನವರೇ, ನೀವು ಕನ್ನಡ ಅಭಿವೃದ್ಧಿ ಪ್ರಾಧಿಕಾರದಲ್ಲಿದ್ದಿರಿ. ಇದು ಕನ್ನಡದ ಬಗ್ಗೆ ಏನು ತೋರಿಸುತ್ತದೆ ಎಂದರೆ, ಗಡಿನಾಡ ಬಗ್ಗೆ ಏನೂ ಹೇಳಿಲ್ಲ, ಕನ್ನಡ ಆಡಳಿತ ಭಾಷೆ ಬಗ್ಗೆ ಏನೂ ಹೇಳಿಲ್ಲ, ಭಾಷೆ ಬೆಳವಣಿಗೆ ಬಗ್ಗೆ ಹೇಳಿಲ್ಲ, ರಂಗಭೂಮಿ ಬಗ್ಗೆ ಇಲ್ಲ, ಸರ್ವಸಂಪೂರ್ಣವಾಗಿ ಕನ್ನಡವನ್ನು ಕಡೆಗಾಣಿಸಿದ್ದೀರಿ. ಕನ್ನಡಗರಿಗೆ ಉದ್ಯೋಗ ಬಗ್ಗೆ ಹೇಳಬೇಕೆಂದರೆ, ಸರೋಜಿನಿ ಮಹಿಷಿ ವರದಿ ಏನಾಯಿತು? ಮೂಲೆಗುಂಪಾಯಿತು. ಸರೋಜಿನಿ ಮಹಿಷಿ ವರದಿಯನ್ನು ನೀವು ಜಾರಿಗೆ ತಂದಿಲ್ಲ. ಅದಕ್ಕೆ ಏನೇನೋ ಬೇಕೋ ಅದನ್ನು ಮಾಡಿ, ಆ ವರದಿಯನ್ನು ಅಂಗವಿಕಲನನ್ನಾಗಿ ಮಾಡಿದ್ದೀರಿ. ಕೈ ತೆಗೆದಿದ್ದೀರಿ, ಕಾಲು ತೆಗೆದಿದ್ದೀರಿ. ಒಂದು ರೀತಿಯಲ್ಲಿ ಹೆಳವನನ್ನಾಗಿ ಮಾಡಿದ್ದೀರಿ. ಆ ವರದಿಗೆ ಶಕ್ತಿ ಇಲ್ಲ, ಗೌರವ ಇಲ್ಲ. ಗಡಿನಾಡು ಅಭಿವೃದ್ಧಿ ಬಗ್ಗೆ ಪ್ರತಿಸಾರಿಯೂ ನಾನು ಹೇಳುತ್ತಿದ್ದೇನೆ. ನಮ್ಮಲ್ಲಿ ಸುಮಾರು 56 ಗಡಿ ಪ್ರದೇಶಗಳು ಬರುತ್ತವೆ. ಈ ಗಡಿನಾಡು ಅಭಿವೃದ್ಧಿ ಬಗ್ಗೆ ಹೇಳುವಾಗ, ತಾವು ಈ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದೀರಿ. ನಿಮಗೆ ಅದರ ಬಗ್ಗೆ ಚಿಂತನೆ ಇದೆ. ತಾವು ಏಕೆ ಮರೆತಿರಿ? ಪ್ರತಿವರ್ಷ ಕೊಡುವ ರೀತಿಯಲ್ಲಿ ಕೊಡುವುದಿಲ್ಲ; ಅದಕ್ಕಾಗಿ ವಿಶೇಷವಾಗಿ ಕೊಡತಕ್ಕಂಥ ವ್ಯವಸ್ಥೆ ತಮ್ಮಲ್ಲಿ ಏಕೆ ಬರಲಿಲ್ಲ ಎಂಬ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಾ, ಮಾನ್ಯ ಅಧ್ಯಕ್ಷರೇ, ತಾವು ಇದನ್ನು ಓದಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಕನ್ನಡ ಬೆಳವಣಿಗೆ ಬಗ್ಗೆ ಈ ಸರ್ಕಾರ ಅಸಡ್ಡೆಯಿಂದ ಕಂಡಿದೆ. ಕನ್ನಡವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದೀರಿ. ಅಕಾಡೆಮಿಗಳ ಬಗ್ಗೆ ಕಡೆಗಣಿಸಿದ್ದೀರಿ, ಕನ್ನಡ ಸಾಹಿತ್ಯ ಪರಿಷತ್ತನ್ನು ಕಡೆಗಣಿಸಿದ್ದೀರಿ, ಕನ್ನಡ ಜಾನಪದ ಲೋಕವನ್ನು ಕಡೆಗಣಿಸಿದ್ದೀರಿ, ಕನ್ನಡ ಭಾಷೆ ಬೆಳವಣಿಗೆ ಬಗ್ಗೆ ನಿಮ್ಮಲ್ಲಿ ಯೋಚನೆಯಿಲ್ಲ. ಒಂದು ಏನಾದರೂ ಸ್ಪಷ್ಟವಾದ ನೀತಿ ನಿಮ್ಮ ಸರ್ಕಾರಕ್ಕೆ ಕನ್ನಡದ ಬೆಳವಣಿಗೆ ಬಗ್ಗೆ ಒಂದು ಚೂರೂ ಇಲ್ಲ. ಹೊರನಾಡು ಕನ್ನಡಿಗರ ಬಗ್ಗೆ ಹೇಳಿದ್ದೀರೋ ಏನೂ ಹೇಳಿಲ್ಲ. ಕನ್ನಡ ನಾಡು, ಕನ್ನಡಿಗರ ಸಮಸ್ಯೆ, ಇದರ ಬಗ್ಗೆ ಮಾತನಾಡಿಲ್ಲ. ಈ ರೀತಿ ಮಾನ್ಯ ಅಧ್ಯಕ್ಷರೇ, ಅತ್ಯಂತ ನೋವಿನ ಪ್ರಸಂಗ ಎಂದರೆ ದಿವಂಗತ ಬಾದ್ರಿಶಾಮಣ್ಣನವರ ಒಂದು ಸ್ಮಾರಕ ಟ್ರಸ್ಟ್ ಎಂದು ಮಾಡಿದ್ದಾರೆ. ಬಾದ್ರಿಶಾಮಣ್ಣನವರು ಎಷ್ಟು ಕೆಲಸಮಾಡಿದ್ದಾರೆ, ಎಷ್ಟು ತ್ಯಾಗ ಮಾಡಿದ್ದಾರೆ. ನಿಮ್ಮ ಸರ್ಕಾರ ಒಂದು ರೀತಿಯಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಅವರದ್ದೂ ಸ್ವಲ್ಪ ಪಾಲಿದೆ. ಮೇಲುಕೋಟೆಯಲ್ಲಿ ಅವರ ಒಂದು ಸ್ಮಾರಕ ಸಂಸ್ಥೆ ಇದ್ದು, ಅದು ಒಳ್ಳೆಯ ಕೆಲಸ ಮಾಡುತ್ತಿದೆ. ಎರಡು ವರ್ಷಗಳಿಂದ ಈ ಸಂಸ್ಥೆಗೆ ಎರಡು ಲಕ್ಷ ರೂಪಾಯಿ ಕೊಡಿ ಎಂದು ಕಾಡಿಬೇಡುತ್ತಿದ್ದೇವೆ. ಈ ಕ್ಷಣದವರೆಗೂ ಈ ಸರ್ಕಾರ ಆ ಸಂಸ್ಥೆಗೆ ಒಂದು ನಯಾಪೈಸೆಯನ್ನೂ ಕೊಟ್ಟಿಲ್ಲ. ಹೀಗೆ ಹೇಳಿದರೆ ಮುಂದೆ ಏನು ಮಾಡಬೇಕು? ಮುಂದೆ ಪರಿಸ್ಥಿತಿ ಏನು? ಮಾನ್ಯ ಉಪಮುಖ್ಯಮಂತ್ರಿಗಳು ಒಂದು ಸಮಾರಂಭಕ್ಕೆ ಬಂದರು. ತಾವು ಒಂದು ಸಾರಿ ಅಲ್ಲಿ ಸಿಕ್ಕಿದಿರಿ, ಮೈಸೂರಿನಿಂದ ಬರುತ್ತಿದ್ದೀರಿ, ನಾನು ಮತ್ತು ರಘುಪತಿಯವರು ಇದೇ ಸಮಾರಂಭಕ್ಕೆ ಬಂದಾಗ ಮಾನ್ಯ

ಉಪಮುಖ್ಯಮಂತ್ರಿಯವರು ಬಂದಿದ್ದರು. ಆಗ ಅವರು ನಮ್ಮ ಸರ್ಕಾರ ಇರುವವರೆಗೆ ನಾವು ಎರಡು ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಸ್ವಾಮಿ, ಈಗ ಹೊಸ ಆಯವ್ಯಯ ಮಂಡನೆಯಾಗಿದೆ. ಈ ಒಂದು ಮೇಲುಕೋಟೆಯ ಟ್ರಸ್ಟ್‌ಗೆ ಒಂದು ನಯಾಪೈಸೆ ಇವತ್ತಿಗೂ ಬಿಡುಗಡೆಯಾಗಿಲ್ಲ. ಇದು ಏನು ಅನ್ನಿಸುತ್ತದೆ, ತಾವು ಎಲ್ಲಿಗೆ ತಲುಪುತ್ತಿದ್ದೀರಿ? ಇದು ಅತ್ಯಂತ ಶೋಚನೀಯ. ಆದ್ದರಿಂದ ಶ್ರೀಮಾನ್ ನಿಜಲಿಂಗಪ್ಪನವರ ಬಗ್ಗೆ ನಾವು ಇಲ್ಲಿ ಅವರ ಪ್ರತಿಮೆ ಮಾಡುವ ಬಗ್ಗೆ ಅನೇಕ ಸಾರಿ ಒತ್ತಾಯ ಮಾಡಿದ್ದೇವೆ, ಹೇಳಿದ್ದೇವೆ. ಸರ್ಕಾರ ಇದರ ಬಗ್ಗೆ ಏನು ನಿರ್ಧಾರ ತೆಗೆದುಕೊಂಡಿದೆ? ಒಂದು ಹೇಳಿಕೆಯನ್ನು ಕೊಟ್ಟರು. ಎಲ್ಲಿ ಮಾಡುತ್ತೀರಿ, ಏನು ಮಾಡುತ್ತೀರಿ, ಯಾವ ನಿರ್ಧಾರ, ಯಾವ ಕಾರ್ಯಕ್ರಮವೂ ಕಾಣಲಿಲ್ಲ. ಈ ದೃಷ್ಟಿಯಿಂದ ನನಗನ್ನಿಸುತ್ತದೆ ಏನೆಂದರೆ, ತಾವು ಕೈಗೆತ್ತಿಕೊಳ್ಳುವ ಕಾರ್ಯವೇನಿದೆ, ಇದರಲ್ಲಿ ಒಂದು ಪ್ರಾಮಾಣಿಕ ಚಿಂತನೆ ಇಲ್ಲ. ಅಧ್ಯಕ್ಷರೇ, ಮತ್ತೊಂದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನೇಕ ತನಿಖಾ ಆಯೋಗಗಳು ಆದವು. ಅದಕ್ಕೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ನೀವು. ಒಂದು ತನಿಖಾ ಆಯೋಗ ಆಗಬೇಕಾದರೆ ಅನೇಕ ಸಾರಿ ಇದರ ಬಗ್ಗೆ ಚಿಂತನೆ ಮಾಡಿದ್ದೀರಿ; ನೋವು ಪಟ್ಟಿದ್ದೀರಿ. ನನಗನ್ನಿಸುತ್ತದೆ, ಗಂಗಾರಾಂ ಕಟ್ಟಡ ದುರಂತದ ವರದಿ ಏನಾಯಿತು ಸ್ವಾಮಿ? ಗಂಗಾರಾಂ ಕಟ್ಟಡ ಕುಸಿದುಬಿದ್ದು ಪ್ರಾಣಹತ್ಯೆಯಾಗಿ, ಅನೇಕ ಜನರು ಸತ್ತುಹೋದರು. ಆ ಕಟ್ಟಡವನ್ನು ಕಟ್ಟುವುದಕ್ಕೆ ಯಾರು ಅಧಿಕಾರಿ ಅವಕಾಶ ಮಾಡಿಕೊಟ್ಟರು? ಅದರ ಹಿನ್ನೆಲೆಯೇನು, ಆ ಅಧಿಕಾರಿಯಾರು? ಏನು ನಡೆದಿದೆ ಅಲ್ಲಿ? ಆ ವರದಿ ಏನಾಯಿತು? ಆ ಮೇಲೆ ಸರ್ಕಸ್ ದುರಂತ ನಡೆಯಿತು. ಮಕ್ಕಳು, ಹಸುಗೂಸುಗಳು ಅನೇಕ ಜನರು ಆ ದುರಂತದಲ್ಲಿ ಸತ್ತರು. ಆ ಸರ್ಕಸ್ ದುರಂತದ ಬಗ್ಗೆ ನೇಮಿಸಲಾಗಿದ ಆಯೋಗದ ವವದಿ ಏನಾಯಿತು ಸ್ವಾಮಿ? ಕಳ್ಳಭಟ್ಟಿ ದುರಂತದಲ್ಲಿ ಅನೇಕ ಜನರು ಸತ್ತರು; ನನಗನ್ನಿಸುತ್ತದೆ, ನೀವು ಆಯೋಗಗಳನ್ನು ರಚನೆ ಮಾಡುವುದಾದರೆ, ಸಮಿತಿಗಳನ್ನು ರಚನೆ ಮಾಡುವುದಾದರೆ ಮತ್ತು ಇಂತಹ ಮಂಡಳಿಗಳನ್ನು ರಚನೆ ಮಾಡುವುದಾದರೆ, ಪ್ರಾಮಾಣಿಕವಾಗಿ ಹೇಳುತ್ತೇನೆ, ಇನ್ನು ಇಂತಹ ಮಂಡಳಿಯನ್ನು ಮಾಡಿ ವರದಿಯನ್ನು ಕೊಡಿ ಎಂದು ಯಾವುದಾದರೂ ಒಂದು ಆಯೋಗವನ್ನು ರಚನೆ ಮಾಡಿದರೆ, ನಾನು ಅವರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಅವರು ಯಾರೇ ನ್ಯಾಯಾಧೀಶರಿರಲಿ, ದಯವಿಟ್ಟು ತಾವು ಈ ಆಯೋಗಕ್ಕೆ ಅಧ್ಯಕ್ಷರಾಗಿ ಬರಬೇಡಿ ಎಂದು ಹೇಳುತ್ತೇನೆ. ಕೊಟ್ಟಂಥ ಆಯೋಗಗಳ ವರದಿಗಳು ಏನಾಯಿತು? ವರದಿಗಳು ಜಾರಿಯಾಗಿದ್ದರೆ, ಯಾರಿಗಾದರೂ ಶಿಕ್ಷೆಯಾಗಿದ್ದರೆ, ಪರವಾಗಿಲಿಲ್ಲ. ಶಿಕ್ಷೆಯಾಗುವ ಬದಲು ಅವರಿಗೆ ಬಡ್ತಿ ಕೊಟ್ಟಿದ್ದಾರೆ, ಕೆಲವರು ನಿವೃತ್ತರಾಗಿದ್ದಾರೆ. ಪದ್ಮಶ್ರೀ, ಪದ್ಮಭೂಷಣ ಬಿಟ್ಟು ಎಲ್ಲಾ ಸೌಕರ್ಯಗಳೂ ಅವರಿಗೆ ಇದೆ. ಇದ್ದವರೆಲ್ಲಾ ಹೋದರು. ಇದರ ಬಗ್ಗೆ ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅವತ್ತಿನ ದಿವಸ ಸರ್ಕಸ್ ದುರಂತ ಆದಾಗ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಜನರ ರೋಧನವನ್ನು ನಾನು ಕಣ್ಣಾರೆ ನೋಡಿದೆ. ಕಳ್ಳಭಟ್ಟಿ ದುರಂತದಲ್ಲಿ ಒಬ್ಬರು ಅಧಿಕಾರಿ, ಅವರು ಈಗ ಹಣಕಾಸು ಇಲಾಖೆಯ ಕಾರ್ಯದರ್ಶಿಯಾಗಿದ್ದಾರ. ಶ್ರೀ ಭಟ್ಟಾಚಾರ್ಯ ಅವರು ಅಲ್ಲಿ ಕುಳಿತು ಕಣ್ಣೀರಿಟ್ಟರು. ಆಗ ಅವರು ಅಬ್ಕಾರಿ ಇಲಾಖೆಯ ಕಾರ್ಯದರ್ಶಿಯಾಗಿದ್ದರು ಎಂದು ಕಾಣುತ್ತದೆ. ಅದರ ವರದಿ

ಏನಾಯಿತು? ಇವತ್ತಿನವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅದಕ್ಕಾಗಿ ಒಂದು ಆಯೋಗದ ರಚನೆಯಾಗಿ ಅದಕ್ಕಾಗಿ ಮಾಡಿದ ಖರ್ಚೆಷ್ಟು, ವ್ಯವಸ್ಥೆ ಎಷ್ಟು? ಇದು ಒಂದಲ್ಲ, ಇಂತಹ ಅನೇಕ ಆಯೋಗಗಳ ರಚನೆ ಬಗ್ಗೆ ಮಾಹಿತಿ ನನ್ನಲ್ಲಿ ಇದೆ. ಇನ್ನು, ಪಾನನಿರೋಧ ಬಗ್ಗೆ ನಾವು ಎಲ್ಲರೂ ಮಾತನಾಡುತ್ತೇವೆ, ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತೇವೆ. ಒಂದು ಪರಿಣಾಮಕಾರಿಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು.

ದಿಟ್ಟ ನಿರ್ಧಾರವನ್ನು ತೆಗೆದುಕೊಂಡು, ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತಂದಿದ್ದೇವೆ ಎಂದು ಹೇಳಬೇಕು. ಪ್ರತಿದಿನ ಅಬ್ಕಾರಿ ಇಲಾಖೆಯಿಂದ ನಿಮಗೆ ಬರತಕ್ಕಂಥ ಹಣ ಎಷ್ಟು? ಅದರ ಹತ್ತು ಪಟ್ಟು ಹಣ ಸೆಕೆಂಡ್ಸ್ ದಾರಿಯಲ್ಲಿ ಸೋರಿಹೋಗುತ್ತಿದೆ. ನಿಮಗೆ ಅದು ಉಳಿತಾಯ ಇಲ್ಲ. ನಿಮಗೆ ಅದೇನು ಯಾರನ್ನೋ ಉಳಿಸುವುದಕ್ಕೆ, ಯಾರನ್ನೋ ಉದ್ಧಾರ ಮಾಡುವುದಕ್ಕೆ, ಯಾರನ್ನೋ ಶ್ರೀಮಂತರನ್ನಾಗಿ ಮಾಡುವುದಕ್ಕೋ, ಆ ಹಣವನ್ನು ಯಾರಿಗೋ ಖರ್ಚು ಮಾಡುವುದಕ್ಕೆ ಅದು ಬೇಕು. ಇವತ್ತು ನಾವು ಪಾನನಿರೋಧದಂಥ ಪ್ರಾಮಾಣಿಕ ಚಿಂತನೆ ಬಗ್ಗೆ ತಲೆ ಹಾಕುತ್ತಿಲ್ಲ. ಹಳ್ಳಿಗಾಡಿನ ಜನ ಬೆಳೆಯಬೇಕೆಂದು ಹೇಳುತ್ತೇನೆ, ಬಡವರ ಉದ್ಧಾರವಾಗಬೇಕೆಂದು ಹೇಳುತ್ತೇವೆ. ಎಲ್ಲಿಯವರೆಗೆ ನೀವು ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರುವುದಿಲ್ಲ, ಅಲ್ಲಿಯವರೆಗೆ ನೀವು ಬಡವರಿಗಾಗಿ ಮಾಡತಕ್ಕಂಥ ಕಲ್ಯಾಣ ಕಾರ್ಯಕ್ರಮಗಳೆಲ್ಲವೂ ವ್ಯಯ. ಸಂಪೂರ್ಣವಾಗಿ ಅವರ ಅನುಕೂಲವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಿಮಗೆ ಏಕೆ ಸಂಪೂರ್ಣವಾಗಿ, ಸಮಗ್ರವಾಗಿ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿಲ್ಲ. ಒಂದು ಮಾತನ್ನು ನಾನು ನೇರವಾಗಿ ನಿಮಗೆ ಹೇಳುತ್ತೇನೆ. ಹೆಜ್ಜೆ ಹೆಜ್ಜೆಗೆ ಮಿತವಾಗಿ, ಹಂತಹಂತವಾಗಿ ತರುತ್ತೇವೆ ಎಂದು ಹೇಳುತ್ತಿದ್ದೀರಲ್ಲಾ, ಅದು ಒಳ್ಳೆಯದಲ್ಲ. ಅದಕ್ಕಾಗಿ ಈಗಾಗಲೇ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಹೇಳಿ ಕೆಲವು ಮಠಾಧಿಪತಿಗಳು ಹೊರಟಿದ್ದಾರೆ. ಇದು ಒಬ್ಬರು ಹೊರಡುವುದಲ್ಲ. ಇಡೀ ರಾಜ್ಯದ ಎಲ್ಲಾ ಮಠಾಧಿಪತಿಗಳು ಎಲ್ಲರೂ ಪಾನನಿರೋಧವನ್ನು ಸಮಗ್ರವಾಗಿ ಜಾರಿಗೆ ತರಬೇಕೆಂದು ಹೇಳಿ ಬೀದಿ ಬೀದಿ, ರಸ್ತೆ ರಸ್ತೆಗೆ ನಿಂತು ದೊಡ್ಡ ಒಂದು ಹೋರಾಟವನ್ನು ಆರಂಭ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಅವರಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಅದಕ್ಕೆ ಎಷ್ಟು ಜನರು ಬರುತ್ತಾರೋ, ಇಲ್ಲವೋ ಗೊತ್ತಿಲ್ಲ. ನಾನಂತೂ ಸಿದ್ಧನಿದ್ದೇನೆ. ತಮಗೆ ಗೊತ್ತಿದೆ, ನನಗೆ ಇಂತಹ ಯಾವ ಹವ್ಯಾಸವೂ ಇಲ್ಲ; ಆದ್ದರಿಂದ ಮೊದಲು ಎಲ್ಲಿಂದ ಪ್ರಾರಂಭವಾಗಬೇಕು? ನಿಮಗೆ ನಿಮ್ಮ ಅಭಿವೃದ್ಧಿ ಕಾರ್ಯಕ್ರಮಗಳು ಸಮಗ್ರವಾಗಿ ತಲುಪಬೇಕಾದರೆ ನೀವು ಆಷಾಡಭೂತಿತನ ಹಾಕುವುದು ಬೇಡ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ನಿಮಗೆ ಗೊತ್ತಿಲ್ಲವೇನು? ಈ ಸೆಕೆಂಡ್ಸ್ ಹಾವಳಿ ಬಗ್ಗೆ ನಿಮಗೆಲ್ಲಾ ಗೊತ್ತಿದೆ. ಇದನ್ನು ಯಾರೂ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಇಲಾಖೆಯ ಅಧಿಕಾರಿಯನ್ನು ಹೊರಗೆ ಇಟ್ಟಿದ್ದಾರೆ, ಎಷ್ಟು ಹೋಗುತ್ತದೆ, ಎಷ್ಟು ಬರುತ್ತದೆ ನೋಡಿಕೋ ಎಂದು. ಅವರು

ಹೋಗುವುದನ್ನು ನೋಡುವುದಿಲ್ಲ. ಬರುವುದನ್ನು ನೋಡಿಕೊಂಡು ಆರಾಮವಾಗಿ ಕುಳಿತುಕೊಂಡಿದ್ದಾನೆ ಅಷ್ಟೆ. ಹೋಗುವುದನ್ನು ನೋಡದೆ, ಗಂಭೀರವಾಗಿ ಬೇರೆಯದನ್ನು ನೋಡುತ್ತಾರೆ. ಇದು ಒಳ್ಳೆಯ ಸೂಚನೆಯಲ್ಲ. ವರ್ಷಕ್ಕೆ 12 ಡಿಸ್ಟಿಲರಿಗಳಿಗೆ ಲೈಸೆನ್ಸ್ ಕೊಡುವುದು, 25 ಡಿಸ್ಟಿಲರಿಗಳಿಗೆ ಲೈಸೆನ್ಸ್ ಕೊಡುವುದು, ಕಳ್ಳಭಟ್ಟಿ ತಯಾರು ಮಾಡುವುದು, ಶೀಷೆಗೆ ತುಂಬುವುದು, ಜನಕ್ಕೆ ಕೊಡುವುದು, ಕರುಳೆಲ್ಲಾ ಸುಟ್ಟು ಸುಣ್ಣವಾಗಿ ರಾಜ್ಯದ ಜನ ನಾಶವಾಗತಕ್ಕಂಥ, ಇವೆಲ್ಲಾ ಹತ್ಯಾರಗಳು. ಇದರ ಪರಿಸ್ಥಿತಿ ಪರಿಣಾಮದ ಬಗ್ಗೆ, ಯಾರೂ ಚಿಂತನೆಯನ್ನೇ ಮಾಡಿಲ್ಲವೇ ? ಚಿಂತನೆ ಮಾಡಬೇಕು. ನಿಮಗೆ ಸಾಮಾಜಿಕ ನ್ಯಾಯದ ಬಗ್ಗೆ ಪ್ರಾಮಾಣಿಕ ಚಿಂತನೆ ಇದ್ದರೆ, ಇದರ ಬಗ್ಗೆ ಚಿಂತನೆ ಮಾಡಬೇಕೆಂದು ನನ್ನ ಕಳಕಳಿಯ ಮನವಿ. ಈ ವರ್ಗಾವರ್ಗಿ ಬಗ್ಗೆ ಸರ್ಕಾರಕ್ಕೆ ಒಂದು ನೀತಿ ಬೇಕು. ನೀವೇನಾದರೂ ಮಾಡಿ, ಒಂದು ನೀತಿ, ವರ್ಗಾವರ್ಗಿ ವಿಚಾರದಲ್ಲಿ ಸರ್ಕಾರನೀತಿ ಬೇಕು. ಆದರೆ, ಇದುವರೆಗೆ ಸರ್ಕಾರದಲ್ಲಿ ಯಾವುದೇ ನೀತಿಯಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಸರ್ಕಾರದ ನೀತಿ ಇದುವರೆಗೆ ಇಲ್ಲ. ಸರ್ಕಾರದ ನೀತಿ ಎಂದರೆ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ಜಾತ್ರೆ, ಸಾರ್ವತ್ರಿಕ ವರ್ಗಾವರ್ಗಿ ಮೂರು ತಿಂಗಳು, ಅದು ಜಾತ್ರೆ, ಸಾರ್ವತ್ರಿಕ ವರ್ಗಾವರ್ಗಿ ಎಂದು ಹೇಳಿದರೆ, ಮಾರ್ಚಿ, ಎಪ್ರಿಲ್, ಮೇ ಈ ಮೂರು ತಿಂಗಳು ಸಾರೋದ್ಧಾರವಾಗಿ, ಅವರು, ಅವರವರ ಕ್ಷೇತ್ರದಲ್ಲಿ, ಅವರವರ ಕಾರ್ಯಾಲಯದಲ್ಲಿ ಕೆಲಸ ಮಾಡುವುದಿಲ್ಲ. ಅವರದೆಲ್ಲಾ ಏನು ? ಶಾಸಕರನ್ನು ಹಿಡಿಯಬೇಕು, ಯಾರಿಗೆ ಯಾರು ಪರಿಚಯ, ಅವರನ್ನು ಹಿಡಿದುಕೊಳ್ಳಬೇಕು; ಯಾರು ಯಾರನ್ನು ಹಿಡಿಯಬೇಕು, ಇದರಲ್ಲಿಯೇ ಅವರ ವ್ಯವಸ್ಥೆ. ಮತ್ತು ಶಾಸಕರ ಭವನದಲ್ಲಿ, ಶಾಸಕರಿಗೆ ನಿದ್ದೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿಯೇ, ಅವರ ಹಾಸಿಗೆಯಲ್ಲಿಯೇ ಕುಳಿತಿರುತ್ತಾರೆ. ಅಲ್ಲಿಯೇ ನಿಂತಿರುತ್ತಾರೆ. ಅವರು ಮಲಗುವುದಕ್ಕೂ ಸ್ಥಳ ಇಲ್ಲ. ಇನ್ನೂ 12 ಹಾಸಿಗೆಗಳನ್ನು ಹಾಕಿದರೂ ಬಿಡುವುದಿಲ್ಲ. ಸ್ವಾಮಿ, ನನ್ನನ್ನು ಇಲ್ಲಿಗೆ ಹಾಕಿಸಬೇಕು, ನನ್ನನ್ನು ಅಲ್ಲಿಗೆ ಹಾಕಿಸಬೇಕು, ನನ್ನನ್ನು ಈ ಸ್ಥಳಕ್ಕೆ ಹಾಕಿಸಬೇಕು. ಇದೊಂದು ತರಹ ರೇಟು. ನನಗನ್ನಿಸುತ್ತದೆ, ಈ ಅವ್ಯವಸ್ಥೆ ಇದೆಯಲ್ಲಾ ಈ ವ್ಯವಸ್ಥೆ ನನಗಂತೂ ಬಹಳ ಅಗೌರವ ಮತ್ತು ಅಪಮಾನ. ಯಾವುದೇ ಪಕ್ಷದವರಾಗಿರಲಿ ಅವರು ರೀತಿ ಬಂದು, ಶಾಸಕರ ಕೊಠಡಿಗಳಿಗೆ ಧಾಳಿ ಮಾಡಿ, ಹಿಂಸೆ ಮಾಡಿ, ವಿಧಿ ಇಲ್ಲದೇ, ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ನಮ್ಮ ಪ್ರಭಾವ ಬೇಡ. ನಾವು ಹೇಳಿದರೆ, ನೀವು ಮಾಡುವುದಕ್ಕೆ ಹೋಗಬೇಡಿ. ಶಾಸಕರು ಹೇಳಿದರೆ, ಮಾಡಲೇಬೇಡಿ. ನೀವು ವಿಕೇಂದ್ರಿಕರಣ ಮಾಡಿ. ಪ್ರತಿಯೊಂದನ್ನೂ ಮಂತ್ರಿಗಲು ಮೂರು ತಿಂಗಳ ಕಾಲ ಇಟ್ಟುಕೊಳ್ಳಬೇಕು. ಈ ಮೂರು ತಿಂಗಳಾದ ಮೇಲೆ, ಇದಕ್ಕೊಂದು ಮಾಡಿಫಿಕೇಷನ್, ಇದಕ್ಕೊಂದು ಹೊಸ ರೂಪ ಕೊಟ್ಟು, ಅದಕ್ಕೆರೆಕ್ಕೆಪುಕ್ಕ ಬರುತ್ತದೆ. ಅದು ಯಾರಪ್ಪ ಎಂದರೆ, ಸೀದಾ ಎಲ್ಲಾ ವರ್ಗಾವರ್ಗೀಯು ಸಂಪೂರ್ಣವಾಗಿ, ನೇರವಾಗಿ ಮುಖ್ಯಮಂತ್ರಿಗಳಿಗೆ ಹೊರಟುಹೋಗುತ್ತದೆ. ಇದು ಸ್ವಾಮಿ ನನಗನಿಸುತ್ತದೆ, ನಾವು ಗೌರವಸ್ಥರಾಗಿ ಸಮಾಜದಲ್ಲಿ ಬಾಳಬೇಕಾದರೆ, ಈ ವರ್ಗಾವರ್ಗಿಯಿಂದ ನಮಗೆ ಬರತಕ್ಕ ಅಪವಾದ ಇದೆಯಲ್ಲಾ, ಇದು ನಿಲ್ಲಬೇಕೆಂದು ಹೇಳಿದರೆ, ಪ್ರಾಮಾಣಿಕವಾಗಿ

ಸರ್ಕಾರ ಒಂದು ಚಿಂತನೆ ಮಾಡಬೇಕು. ಇದಕ್ಕೊಂದು ನೀತಿ ಮಾಡಬೇಕು. ಆಯಾ ಇಲಾಖೆಯ ಅಧಿಕಾರಿಗಳು ಇದ್ದಾರೆ, ಅವರ ಮೇಲೆ ನಂಬಿಕೆ ಇಟ್ಟುಕೊಳ್ಳೋಣ. ಜಿಲ್ಲಾಮಟ್ಟದಲ್ಲಿ ಬಿಟ್ಟುಬಿಡೋಣ, ತಾಲ್ಲೂಕು ಮಟ್ಟದಲ್ಲಿ ಬಿಡೋಣ. ಒಬ್ಬ ಪಂಚಾಯಿತಿ ಕಾರ್ಯದರ್ಶಿ ಅಥವಾ ಜವಾನರ ವರ್ಗಾವರ್ಗಿಯನ್ನೂ ಮುಖ್ಯಮಂತ್ರಿಗಳಾದವರೇ ಇಟ್ಟುಕೊಳ್ಳುತ್ತಾರೆಂದು ಹೊರಟರೆ, ನಮ್ಮ ಪರಿಸ್ಥಿತಿ ಏನು? ಸ್ವಾಮಿ, ನಾನು ತಮಗೆ ಬಹಳ ದುಃಖದಿಂದ ಹೇಳುತ್ತೇನೆ. ನಾನು ನನ್ನ ಕ್ಷೇತ್ರ ಬಿಟ್ಟು ಇನ್ನೆಲ್ಲೂ ಕೈಹಾಕಿಲ್ಲ. ಒಂದು ವರ್ಷ ಅಲೆದಿದ್ದೇನೆ. ಒಂದು ಕಡೆಯಿಂದ ನಾನು ಹಾಕಿಸುವುದು, ಇನ್ನೊಂದು ಕಡೆಯಿಂದ ತೆಗೆಯುವುದು. ಮುಂದುವರೆಸಿ, ಮುಂದುವರಿಸಬೇಡಿ. ಇತ್ತೀಚಿನ ನಡವಳಿಕೆಯ ಪ್ರಕಾರ ನನಗನಿಸುತ್ತದೆ. ಇದು ಯಾರಿಗೂ ಒಳ್ಳೆಯದಲ್ಲ. ನಾನು ಹೇಳುತ್ತೇನೆ, ಈ ಸದನದಲ್ಲಿ ಇವತ್ತು ಗುಂಡೂರಾಯರನ್ನು ನೆನೆದುಕೊಳ್ಳಬೇಕು. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಇವತ್ತು ಅವರು ನಮ್ಮೆದುರಿಗೆ ಇಲ್ಲ. ಅವರ ತಂದೆ ಹೇಳಿದರೂ, ಮಾಡದೇ ಹೋದರು. ಇಂತಹ ಕಡೆ ಮಾಡಿ ಎಂದು ಅವರ ತಂದೆ ಒಂದು ಮಾತು ಹೇಳಿದರು, ಆದರೆ, ಅವರು ಮಾಡಲಿಲ್ಲ. ಇವತ್ತೂ ನನಗೆ ಅವರ ಬಗ್ಗೆ ಅಪಾರವಾದ ಗೌರವ ಇದೆ. ಈ ಎಲ್ಲಾ ಕಾಟದಿಂದ, ಈ ಹಿಡಿತದಿಂದ, ಆ ನೋವಿನಿಂದ, ಆ ನರಕದ ಒಂದು ಪಾಶದಿಂದ ಇಡೀ ಶಾಸಕರನ್ನು ಬಿಡಿಸುವುದಕ್ಕೆ ಸರ್ಕಾರ ಸಮಗ್ರ ನೀತಿಯನ್ನು ಮಾಡಲಿಲ್ಲವೆಂದು ಹೇಳಿದರೆ, ಕಷ್ಟವಾಗುತ್ತದೆ. ಒಬ್ಬ ಅಧಿಕಾರಿ ನನ್ನ ವಿರುದ್ಧ ಹೋಗುತ್ತಾನೆ, ಇವರೇನು ವರ್ಗ ಮಾಡಿಸುವುದು, ನಾನು ಹಾಕಿಸಿಕೊಂಡು ಬರುತ್ತೇನೆ ಎಂದು ಹೇಳಿ, ನಾಳೆ ಬೆಳಿಗ್ಗೆ ಹಾಕಿಸಿಕೊಂಡು ಬರುತ್ತಾನೆ, ನನ್ನ ಮುಂದೆ ಓಡಾಡುತ್ತಾನೆ, ಮೀಸೆ ತಿರುವುತ್ತಾನೆ. ಈ ಶಾಸಕರ ಕೈಲಿ ಏನಾಯಿತು? ನಾನು ನೋಡಿಕೊಂಡೇ ಇರುತ್ತೇನೆ. ಈ ರೀತಿಯಾಗಿ, ನಮ್ಮ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಆದ್ದರಿಂದ ಮಾನ್ಯ ಹಣಕಾಸಿನ ಸಚಿವರಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ದಯಮಾಡಿ, ಸರ್ಕಾರದಲ್ಲಿ ಸಚಿವ ಸಂಪುಟದ ನೀವೆಲ್ಲರೂ ಕುಳಿತುಕೊಳ್ಳಿ. ಮಾನ್ಯ ಭೈರೇಗೌಡರಿಗೂ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಈ ವರ್ಗಾವರ್ಗಿಯಿಂದ ಏನಾದರೊಂದು ಮುಕ್ತ ಮಾಡಿ. ಇಡೀ ವರ್ಷವೆಲ್ಲಾ ವರ್ಗಾವರ್ಗಿ ಮಾಡುತ್ತಾ ಕುಳಿತುಕೊಳ್ಳಬೇಡಿ. ಒಂದುಸಾರಿ ಮಾಡಿಬಿಡಿ, ವರ್ಷವರ್ಷವೂ ಮಾಡುವುದು ಬೇಡ. ಈ ವರ್ಗಾವರ್ಗಿ ಬಗ್ಗೆ ಒಂದು ನಿರ್ಧಾರ ಮಾಡಿ. ಅವರು ಎರಡು ವರ್ಷವಾದರೂ ಸುಖವಾಗಿ ಕುಳಿತು, ಗಂಭೀರವಾಗಿ ಕೆಲಸ ಮಾಡತಕ್ಕ ವ್ಯವಸ್ಥೆ ಮಾಡಿ. ಈ ವರ್ಗಾವರ್ಗಿ ಎಂದರೆ, ಮೂರು ತಿಂಗಳು ಅವರ ತಲೆಯ ಮೇಲೆ ಕತ್ತಿ ಆಡುತ್ತಾ ಇರುತ್ತದೆ. ಅವರು ಪ್ರತಿನಿತ್ಯ ಅರ್ಜಿ ಹಿಡಿದುಕೊಂಡು ಶಾಸಕರ ಮನೆಗೆ ಓಡಾಡಬೇಕು, ಶಾಸಕರ ಸಂಬಂಧಿಗಳ ಮನೆಗೆ ಓಡಾಡಬೇಕು, ನನಗೆ ಹಾಕಿಸಿಕೊಡಿ ಎಂದು ಕೇಳಬೇಕು. ಶಾಸಕರಿಗೆ ಬೇರೆ ಕೆಲಸವಿಲ್ಲವೇ? ಆದ್ದರಿಂದ, ತಮಗೆ ಹೇಳುತ್ತಿದ್ದೇನೆ, ಈ ವರ್ಗಾವರ್ಗಿ ಬಗ್ಗೆ ತಾವು ಕಟುವಾದ ನಿರ್ಧಾರವನ್ನು ಕೈಗೊಂಡರೆ, ತಮ್ಮ ಸರ್ಕಾರಕ್ಕೆ ಗೌರವ ಬರುತ್ತದೆ, ಸಮಾಜಕ್ಕೂ ಗೌರರ ಬರುತ್ತದೆ ಎಂಬ ಮಾತನ್ನು ತಮಗೆ ಪ್ರಾಮಾಣಿಕವಾಗಿ ಹೇಳುತ್ತೇನೆ. ಇದರ ಮೇಲೆ ನಿಮಗೆ ಬಿಟ್ಟಿದ್ದು, ನಾವು ಮಾಡಿಯೇ ಮಾಡುತ್ತೇವೆಂದು ಹೇಳಿದರೆ, ನಿಮ್ಮ ಹಣೆಬರಹ.

ನಾನೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಭೈರೇಗೌಡ : ನನಗೇನೂ ಈ ವರ್ಗಾವರ್ಗಿ ಮಾಡುವುದಕ್ಕೆ ಖುಷಿ ಇಲ್ಲ. ವೈಯಕ್ತಿವಾಗಿ, ನನಗೆ ಈ ವರ್ಗಾವರ್ಗಿ ಎಂದು ಹೇಳಿದರೆ ಬಹಳ ದೂರ. ಏನು ಮಾಡುವುದು ಬೆಳಿಗ್ಗ 6 ಗಂಟೆಗೆ ಎದ್ದರೆ, ರಾತ್ರಿ 12 ಗಂಟೆಯುವರೆಗೂ ಈ ವರ್ಗಾವರ್ಗಿ ಬಿಟ್ಟರೆ ಬೇರೆ ಕೆಲಸವೇ ಇಲ್ಲವೆಂದಾಗುತ್ತಿದೆ. ನಾವು ಇರುವುದೇ ಮೂರು ಮತ್ತೊಂದು ಜನ, ನಾವು ಜನಗಳಿಗೋಸ್ಕರ ಇಲ್ಲವೆಂದು ನನಗೂ ಕೂಡ ದೃಢವಾದ ಭಾವನೆ ಬಂದುಬಿಟ್ಟದೆ. ಒಂದೊಂದು ಸಾರಿ ಕೇಳಿದರೆ ಮೈಯೆಲ್ಲಾ ನಡುಕ ಬಂದುಬಿಡುತ್ತದೆ. ಇದು ಆಗುವುದಿಲ್ಲ, ಆಗುವುದಿಲ್ಲ ಎಂದು ಹೇಳಿ, ಹೇಳಿ ಸಾಕಾಗುತ್ತದೆ, ಆದರೂ ಕೂಡ ಬಿಡುವುದಿಲ್ಲ. ಇದಕ್ಕೆ ಸರ್ಕಾರದಲ್ಲಿರತಕ್ಕ ಮಂತ್ರಿಗಳೇ ಅಲ್ಲ, ಈ ಸದನದಲ್ಲಿರತಕ್ಕ ನಾವೆಲ್ಲರೂ ಸೇರಿ, ಆ ತೀರ್ಮಾನಕ್ಕೆ ಬರುವುದಾದರೆ ಬಹಳ ಸಂತೋಷವಾಗುತ್ತದೆ. ಮತ್ತು ಜನರಿಗೆ ಏನಾದರೂ ಕೆಲಸ ಮಾಡಬಹುದು. ಇಲ್ಲದೇಹೋದರೆ, ಮೂರು ಮತ್ತೊಂದು ಜನ ಈ ಜನರ ಕೆಲಸ ಮಾಡುವುದಕ್ಕೆ ಇದ್ದೇವೆಂದು ನನ್ನ ಭಾವನೆ.

ಶ್ರೀ ವಾಟಾಳ್ ನಾಗರಾಜ್ : ನೀವು, ನಮ್ಮನ್ನು ಕರೆಯಿರಿ, ನಾವೂ ಹೇಳುತ್ತೇವೆ. ಈ ವರ್ಗಾವರ್ಗಿ ಬಗ್ಗೆ ನಾವೇನೂ ಬರುವುದಿಲ್ಲ. ಇವತ್ತು ವಿಧಿ ಇಲ್ಲದೇ ನಾನೇ ಒಪ್ಪಿದೆ. ನನ್ನ ಕ್ಷೇತ್ರದ ಅಗೌರವ ಆಗುತ್ತಾ ಇದೆ, ವರ್ಗ ಮಾಡಿಕೊಡಿ, ಇವರನ್ನು ಅಲ್ಲಿಯೇ ಉಳಿಸಿ. ನಮಗೆ ಆ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಅದನ್ನು ಮುಚ್ಚಿಟ್ಟು ಮುಂದಕ್ಕೆ ಹೋಗುತ್ತಾ ಇಲ್ಲ. ಈ ಪರಿಸ್ಥಿತಿಯಿಂದ ನಮ್ಮನ್ನು ಮುಕ್ತ ಮಾಡಿ, ನೀವು ಮುಕ್ತರಾಗಿ. ಇದಕ್ಕೊಂದು ಹೊಸ ಚಿಂತನೆ ಮಾಡಿ, ಆ ಚಿಂತನೆಯಿಂದ ತಮಗೆ ಹೆಚ್ಚಿನ ಬೆಲೆ ಬರುತ್ತದೆ. ತಮಗೆಲ್ಲರಿಗೂ ಅದರ ಅನುಭವ ಇದೆ, ಇಲ್ಲಿ ಕುಳಿತಿರತಕ್ಕ ಎಲ್ಲರಿಗೂ ಅನುಭವ ಇದೆ. ದಯಮಾಡಿ, ಇಂಥದ್ದನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಮತ್ತೊಂದು ದುರಂತ ಕತೆ, ಈ ನಾಮಕರಣ. ಯಾರಿಗೆ ಬೇಕು ಸ್ವಾಮಿ ಈ ನಾಮಕರಣ? ನಾಮಕರಣ ಪದ್ಧತಿ ಇದೆಯಲ್ಲಾ ಇದರಂಥ ಘೋರ ಕರ್ಮಕಾಂಡ. ವಿರೋಧ ಪಕ್ಷದ ನಾವ್ಯಾರೂ ನಾಮಕರಣಕ್ಕೆ ಯೋಗ್ಯರಲ್ಲವೇ? ನಾವು ಕೊಟ್ಟ ಸದಸ್ಯರು ಯಾರೂ ಯೋಗ್ಯರಲ್ಲವೇ? ಮೂರರಲ್ಲಿಯೂ ನೀವೇ. ನನ್ನ ಕ್ಷೇತ್ರ ಬಿಡಿ, ಮಿಕ್ಕ ಕ್ಷೇತ್ರದಲ್ಲಿ ನಿಮಗೇನಾಗಿದೆ? ನನ್ನ ಕ್ಷೇತ್ರದಲ್ಲಿ, ನಾನು ಹೇಳಿದವರು ಒಬ್ಬರನ್ನೂ ಹಾಕಿಲ್ಲ. ನಾನು ಕೇಳುವುದಕ್ಕೂ ಹೋಗಲಿಲ್ಲ. ಒಂದುಸಾರಿ ಕೇಳಿದೆ, ಯಾವಾಗ ಅವರು ಹಾಕಲಿಲ್ಲ, ಅಲ್ಲಿಗೇ ಸುಮ್ಮನಾದೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ಯಾವುದೇ ಪಕ್ಷದವರು ಸರ್ಕಾರ ನಡೆಸುತ್ತಿರಲಿ, ಯಾರು ರೂಲಿಂಗನಲ್ಲಿರುತ್ತಾರೋ, ಇದು ಸಂಪ್ರದಾಯ ಅದು ತಪ್ಪಿರಬಹುದು, ಅಥವಾ ಒಪ್ಪಿರಬಹುದು, ನನ್ನ ಅಭಿಪ್ರಾಯ ಎಂದಲ್ಲ. ನಾನು ಪ್ರಪೋಸ್ ಮಾಡಿದರೂ ಕೂಡ ಒಬ್ಬ ಕ್ಯಾಂಡಿಡೇಟ್ ಕೊಡಲಿಲ್ಲ. ಸಂಪ್ರದಾಯದ ಪ್ರಕಾರ ಕಾಮೆಂಟ್ ಮಾಡುವುದಕ್ಕಾಗುವುದಿಲ್ಲವೆಂದು ತಮಗೂ ಗೊತ್ತಿದೆ. ತಾವು ಹಿರಿಯರಿದ್ದೀರಿ, ಮತ್ತು ತಮಗೆ ಅನುಭವವಿದೆ. ಸಂಪ್ರದಾಯ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು, ನಮ್ಮನ್ನು ಕರೆಯಿರಿ, ನಾವೂ ಹೇಳುತ್ತೇವೆ. ಈ ವರ್ಗಾವರ್ಗಿ ಬಗ್ಗೆ ನಾವೇನೂ ಬರುವುದಿಲ್ಲ. ಇವತ್ತು ವಿಧಿ ಇಲ್ಲದೇ ನಾನೇ ಒಪ್ಪಿದೆ. ನನ್ನ ಕ್ಷೇತ್ರದ ಅಗೌರವ ಆಗುತ್ತಾ ಇದೆ, ವರ್ಗ ಮಾಡಿಕೊಡಿ, ಇವರನ್ನು ಅಲ್ಲಿಯೇ ಉಳಿಸಿ. ನಮಗೆ ಆ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಅದನ್ನು ಮುಚ್ಚಿಟ್ಟು ಮುಂದಕ್ಕೆ ಹೋಗುತ್ತಾ ಇಲ್ಲ. ಈ ಪರಿಸ್ಥಿತಿಯಿಂದ ನಮ್ಮನ್ನು ಮುಕ್ತ ಮಾಡಿ, ನೀವು ಮುಕ್ತರಾಗಿ. ಇದಕ್ಕೊಂದು ಹೊಸ ಚಿಂತನೆ ಮಾಡಿ, ಆ ಚಿಂತನೆಯಿಂದ ತಮಗೆ ಹೆಚ್ಚಿನ ಬೆಲೆ ಬರುತ್ತದೆ. ತಮಗೆಲ್ಲರಿಗೂ ಅದರ ಅನುಭವ ಇದೆ, ಇಲ್ಲಿ ಕುಳಿತಿರತಕ್ಕ ಎಲ್ಲರಿಗೂ ಅನುಭವ ಇದೆ. ದಯಮಾಡಿ, ಇಂಥದ್ದನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಮತ್ತೊಂದು ದುರಂತ ಕತೆ, ಈ ನಾಮಕರಣ. ಯಾರಿಗೆ ಬೇಕು ಸ್ವಾಮಿ ಈ ನಾಮಕರಣ? ನಾಮಕರಣ ಪದ್ಧತಿ ಇದೆಯಲ್ಲಾ ಇದರಂಥ ಘೋರ ಕರ್ಮಕಾಂಡ. ವಿರೋಧ ಪಕ್ಷದ ನಾವ್ಯಾರೂ ನಾಮಕರಣಕ್ಕೆ ಯೋಗ್ಯರಲ್ಲವೇ? ನಾವು ಕೊಟ್ಟ ಸದಸ್ಯರು ಯಾರೂ ಯೋಗ್ಯರಲ್ಲವೇ? ಮೂರರಲ್ಲಿಯೂ ನೀವೇ. ನನ್ನ ಕ್ಷೇತ್ರ ಬಿಡಿ, ಮಿಕ್ಕ ಕ್ಷೇತ್ರದಲ್ಲಿ ನಿಮಗೇನಾಗಿದೆ? ನನ್ನ ಕ್ಷೇತ್ರದಲ್ಲಿ, ನಾನು ಹೇಳಿದವರು ಒಬ್ಬರನ್ನೂ ಹಾಕಿಲ್ಲ. ನಾನು ಕೇಳುವುದಕ್ಕೂ ಹೋಗಲಿಲ್ಲ. ಒಂದುಸಾರಿ ಕೇಳಿದೆ, ಯಾವಾಗ ಅವರು ಹಾಕಲಿಲ್ಲ, ಅಲ್ಲಿಗೇ ಸುಮ್ಮನಾದೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ಯಾವುದೇ ಪಕ್ಷದವರು ಸರ್ಕಾರ ನಡೆಸುತ್ತಿರಲಿ, ಯಾರು ರೂಲಿಂಗನಲ್ಲಿರುತ್ತಾರೋ, ಇದು ಸಂಪ್ರದಾಯ ಅದು ತಪ್ಪಿರಬಹುದು, ಅಥವಾ ಒಪ್ಪಿರಬಹುದು, ನನ್ನ ಅಭಿಪ್ರಾಯ ಎಂದಲ್ಲ. ನಾನು ಪ್ರಪೋಸ್ ಮಾಡಿದರೂ ಕೂಡ ಒಬ್ಬ ಕ್ಯಾಂಡಿಡೇಟ್ ಕೊಡಲಿಲ್ಲ. ಸಂಪ್ರದಾಯದ ಪ್ರಕಾರ ಕಾಮೆಂಟ್ ಮಾಡುವುದಕ್ಕಾಗುವುದಿಲ್ಲವೆಂದು ತಮಗೂ ಗೊತ್ತಿದೆ. ತಾವು ಹಿರಿಯರಿದ್ದೀರಿ, ಮತ್ತು ತಮಗೆ ಅನುಭವವಿದೆ. ಸಂಪ್ರದಾಯ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಇಂತಹ ವಿಷಯದಲ್ಲಿ ನಾಳೆ ಇತ್ತ ಕಡೆಯವರು ಅಧಿಕಾರಕ್ಕೆ ಬಂದಾಗ, ಹೇಗೆ ನಡೆದುಕೊಳ್ಳಬೇಕೆಂದು ತೋರಿಸಿಕೊಡುತ್ತಿದ್ದಾರೆ.

ಶ್ರೀ ಎಂ. ನಾರಾಯಣಸ್ವಾಮಿ : ನೀವು ಬಂದರೂ ಅಷ್ಟೇ, ನಾವು ಬಂದರೂ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರ್ಕಾರ ಮಾಡುತ್ತದೆಯೇ ಎಂದು ಇವರು ಕೇಳುತ್ತಾರೆ. ಇವರು, ಇಲ್ಲಿ ಕುಳಿತಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇವರಾಗಲೀ, ಬಂಗಾರಪ್ಪನವರಾಗಲೀ, ವೀರೇಂದ್ರ ಪಾಟೀಲರಾಗಲೀ, ಇವರ ಸರ್ಕಾರದಲ್ಲಿ ನಾವು ಕೇಳಿದವರನ್ನು, ಕೆಲವರನ್ನು ನಾಮಕರಣ ಮಾಡಿದ್ದಾರೆ.

ಶ್ರೀ ಹೆಚ್. ಶಿವಪ್ಪ : ವೈಯಕ್ತಿಕ ಕನಸಿಡರೇಷನ್ನೇ ಬೇರೆ, ಅನ್ ಪ್ರಿನ್ಸಿಪಲ್ ಅದೇ ಬೇರೆ. ವಾಟಾಳ್ ನಾಗರಾಜರಾಗಿ ನಿಮ್ಮನ್ನು ಬೇರೆ ರೀತಿಯಲ್ಲಿ ನೋಡಿರಬಹುದು.

ಶ್ರೀ ವಾಟಾಳ್ ನಾಗರಾಜ್ : ಯಾವ ರೀತಿ ಎಂಬುದನ್ನು ಹೇಳಿಬಿಡಿ.

ಶ್ರೀ ಹೆಚ್. ಶಿವಪ್ಪ : ಯಾವರೀತಿ ಎಂದು ತಮಗೆ ಗೊತ್ತಿದೆ. It is underdstood.

4.00 ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಕುಮಾರರವರಿಗೆ ಗೊತ್ತಿರಬಹುದು ಮಾರ್ಕೇಟಿಂಗ್ ಫೆಡರೇಷನ್ ಮತ್ತು ಅಪೆಕ್ಸ ಬ್ಯಾಂಕಗೆ ನಾಮಕರಣ ಮಾಡುವಾಗ ಗುರುಪಾದಪ್ಪ ನಾಗಮಾರಪಲ್ಲಿಯವರು ಮತ್ತು ದೇಶಪಾಂಡೆಯವರು ನನ್ನ ಹತ್ತಿರ ಬಂದು ಹೇಳಿದರು ತಾವು ನಾಮಕರಣ ಮಾಡಬೇಡಿ ಚುನಾವಣೆಗೆ ಬಿಡಿ ಅವರು ಎಲೆಕ್ಟ್ ಮಾಡಿಕೊಳ್ಳಲಿ; ಯಾರು ಚುನಾವಣೆಯಲ್ಲಿ ಗೆದ್ದು ಬರುತ್ತಾರೋ ಬರಲಿ ಎಂದು ಹೇಳಿದ ಮೇಲೆ ನಾವು ನಾಮಕರಣ ಮಾಡಲಿಲ್ಲ. ಆಗ ಅವರು ಗೆದ್ದು ಬಂದು ಅಧಿಕಾರ ವಹಿಸಿಕೊಂಡರು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿತ್ತ ಸಚಿವರು ಬಜೆಟ್ ಭಾಷಣ ಕೇಳುತ್ತಿದ್ದಾರೆಯೇ? ಅವರು ಮಲಗಿದ್ದಾರೆ ಎಬ್ಬಿಸಿ.

ಅಧ್ಯಕ್ಷರು : ಅವರು ಬೆಳಿಗ್ಗೆಯಿಂದಲೇ ಇಲ್ಲೇ ಕುಳಿತಿದ್ದಾರೆ. ಅದನ್ನು ಗಂಭೀರವಾಗಿ ತೆಗೆದುಕೊಳ್ಳುವುದು ಬೇಡ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನು ಹೇಳಲಿಲ್ಲ. ನಾನು ಹೇಳಬಾರದು ಎಂದು ಇತ್ತು. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾಮಕರಣ ಪದ್ಧತಿ ಬಗ್ಗೆ ಬಹಿರಂಗವಾಗಿ ನಾನು ಇಲ್ಲಿ ಚರ್ಚೆಗೆ ಎಳೆಯುವುದಿಲ್ಲ. ನಿಮ್ಮ ವಾದವನ್ನು ನಾನು ಪತ್ರಿಕೆಗಳ ಮೂಲಕ ಓದಿದ್ದೇನೆ. ಮೈಸೂರು ಸಹಕಾರಿ ಸಂಘದಲ್ಲಿ ಸಮ್ಮೇಳನದಲ್ಲಿ ಸಂಬಂಧಪಟ್ಟ ಸಚಿವರು ವೈಯಕ್ತಿಕವಾದ ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ನೀವು ಆ ಮಸೂದೆಯಲ್ಲಿ ಜನತಾ ದಳವನ್ನು ನಾಮಕರಣ ಮಾಡಿಕೊಳ್ಳುವುದಕ್ಕೆ ಮಾಡುತ್ತಿದ್ದೇವೆಂದು ಹೇಳಿ. ಆ ರೀತಿ ಹೇಳಿದರೆ ಅಭ್ಯಂತರವೇನೂ ಇಲ್ಲ. ಸಂತೋಷ, ನಾವು ನಾಮಕರಣ ಮಾಡುತ್ತೇವೆ ಎನ್ನತಕ್ಕಂಥ ಒಂದು ಕೊಡೆಯರಕ್ಷಣೆಯನ್ನು ತೆಗೆದುಕೊಂಡು ಅಲ್ಲಿ ಸೋತಿರುವವರೆನ್ನೆಲ್ಲಾ ನೀವು ನಾಮಕರಣ ಮಾಡಿಕೊಂಡು ಅಲ್ಲಿ ಮೂರು ಇದ್ದರೆ ವಿರೋಧಪಕ್ಷಗಳಿಗೆ ಒಂದು ಕೊಡತಕ್ಕಂಥ ಸೌಜನ್ಯವನ್ನು ಇಟ್ಟುಕೊಳ್ಳಿ. ನಾವೇನೂ ಜಾಸ್ತಿ ಕೊಡಿ ಎಂದು ಕೇಳುವುದಿಲ್ಲ ಒಂದು. ಅದು ಬೇಡಿ, ಸ್ವಾಮಿ ನಾವು ಇದನ್ನೆಲ್ಲಾ ಹೇಳಿಕೊಳ್ಳಬಾರದು, ನನ್ನ ಕ್ಷೇತ್ರಕ್ಕೆ ಬೇರೆ ಕ್ಷೇತ್ರದವರನ್ನು ತಂದು ನಾಮಕರಣ ಮಾಡುತ್ತಾರೆ. ನನ್ನ ಕ್ಷೇತ್ರದವರನ್ನು ಬೇಕಾದರೆ ಜನತಾದಳದವರನ್ನು ಹಾಕಿಕೊಂಡು ಹೋಗಲಿ, ಆದರೆ ಬೇರೆ ಕ್ಷೇತ್ರದವರನ್ನು ತಂದು ನನ್ನ ಕ್ಷೇತ್ರದ ಸಹಕಾರಿ ಸಂಸ್ಥೆಗಳಲ್ಲಿ ನಾಮಕರಣ ಮಾಡುವುದು. ನನಗನಿಸುತ್ತದೆ ಈ ವ್ಯವಸ್ಥೆ ಇದೆಯಲ್ಲಾ ಇದು ಸರಿಯಲ್ಲ. ಇದನ್ನು ನೀವು ತಿಳಿದುಕೊಂಡಿರಬಹುದು, ನಾವು ಅಧಿಕಾರದಲ್ಲಿದ್ದೇವೆ ನಾವು ಮಾಡಿದ್ದೇ ಸರಿ ಎನ್ನುವಂತಹ ಭಾವನೆ ನಿಮಗೆ ಇರಬಹುದು. ಮಾನ್ಯ ಬೈರೇಗೌಡರು, ಇಲ್ಲಿ ಇದ್ದೀರಿ. ಮಾನ್ಯ ಅಧ್ಯಕ್ಷರೇ, ಇಂತಹ ವಿಚಾರಗಳು ಬಂದಾಗ ನಮ್ಮ ಸರ್ಕಾರ ಮಾಡಿರತಕ್ಕಂಥಾದ್ದು ಸರ್ವಥಾ ತಪ್ಪು ಎಂದು ಅವರು ಹೇಳಲಿ, ಅಂದರೆ ನಿಮಗೆ ಪೂರ್ತಿ ಕಿವಿ ಮುಚ್ಚಿ ಹೋಗಿದೆ. ಕಣ್ಣು ಕಾಣುವುದಿಲ್ಲ. ಬಾಯಿಯಲ್ಲಿ ಮಾತನಾಡತಕ್ಕಂಥ

ವ್ಯವಸ್ಥೆ ನಿಂತು ಹೋಗಿಬಿಟ್ಟಿದೆಯೇ? ಕಾರಣ ಏನು ಎಂದು ಹೇಳಿ ನೀವು. ನಿಮ್ಮ ಅನುಭವವನ್ನು ಹೇಳಿದರೆ ಸಂತೋಷಪಡುತ್ತೇನೆ ನಾನು. ಈ ನಾಮಕರಣ ಎನ್ನುವ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ತಪ್ಪಿಸಿ ಒಂದು ಹೊಸ ಆದರ್ಶ ತೆಗೆದುಕೊಳ್ಳಿ ಎನ್ನುವಂತಹ ಮಾತನ್ನು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

ಇಲ್ಲ ಎಂದು ಹೇಳಿದರೆ ಇದು ನಮ್ಮಲ್ಲಿ ಒಂದು ರೀತಿಯ ಘರ್ಷಣೆಗೆ ಅವಕಾಶ ಆಗುತ್ತದೆ. ಹಳ್ಳಿ ಹಳ್ಳಿಯಲ್ಲಿ ತಾಲ್ಲೂಕ್, ಬ್ಲಾಕ್ ಕೆಟ್ಟ ರಾಜಕೀಯ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿಯವರೆಗೂ ನೀವು ಕೊಡಬೇಡಿ ಎನ್ನತಕ್ಕಂಥ ಮಾತನ್ನು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ. ಮತ್ತೊಂದು ಮಾನ್ಯ ಅಧ್ಯಕ್ಷರೇ, ಸಣ್ಣ ಸಣ್ಣ ಹೋಟೇಲಗಳ ಮೇಲೆ ತೆರಿಗೆ ಹಾಕಿದ್ದೀರಿ. ತಾವು ಬೇಕಾದರೆ ಪಂಚತಾರಾ ಹೋಟೇಲಗಳ ಮೇಲೆ ಎಷ್ಟು ಬೇಕಾದರೂ ಹಾಕಿ. ಅದರ ಬಗ್ಗೆ ತಮ್ಮಲ್ಲಿ ಯಾರೂ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಸಾಮಾನ್ಯ ಹೋಟೇಲಗಳು ಲಕ್ಷಾಂತರ ಹೋಟೇಲಗಳು ರಾಜ್ಯದಲ್ಲಿ ಇವೆ. ಒಂದು ಕಡೆ ಹೋಟೇಲಗಳನ್ನು ಕೈಗಾರಿಕೆ ಎಂದು ನಾವು ಮಾಡಿದ್ದೇವೆ. ಸಾಮಾನ್ಯ ಹೋಟೇಲಗಳನ್ನು ಬಿಟ್ಟು ಬಿಡಿ. ಪಂಚತಾರ ದೊಡ್ಡ ಹೋಟೇಲಗಳ ಮೇಲೆ ತಾವು ಏನು ಬೇಕಾದರೂ ಮಾಡಿ. ಈ ರಸ್ತೆ ರಸ್ತೆಗಳಲ್ಲಿ ಸಣ್ಣ ಸಣ್ಣ ಹೋಟೇಲಗಳು ಇರುತ್ತವೆ ನೋಡಿ ದೋಸೆ ಕಾಫಿ ತಕ್ಷಣ ಕೊಡತಕ್ಕಂಥ ಆ ಹೋಟೇಲಗಳನ್ನು ನಾವು ಕಡೆಗಾಣಿಸಬಾರದು. ಆ ಹೋಟೇಲಗಳು ಒಂದು ರೀತಿ ಎಲ್ಲಾ ಸಾರ್ವಜನಿಕ ಸೇವೆಗಿಂತಲ ಉತ್ತಮವಾದ ಸೇವೆಯನ್ನು ಮಾಡತಕ್ಕಂಥ ಸ್ಥಳಗಳು ಅವು. ಒಂದು ಕೆಲಸಕ್ಕೆ ಎಂದು ಯಾರಾದರೂ ನಮ್ಮ ಹಳ್ಳಿಯಿಂದ ಬಂದವರೆ ಅವರಿಗೆ ಓದುವುದಕ್ಕೆ ಬರುವುದಿಲ್ಲ, ಬರೆಯುವುದಕ್ಕೆ ಬರುವುದಿಲ್ಲ; ಏನೂ ಗೊತ್ತಿಲ್ಲ. ತಕ್ಷಣ ಬೆಂಗಳೂರಿಗೆ ಬಂದ ಮೈಸೂರಿಗೆ ಬಂದ ಅವನಿಗೆ ಕೆಲಸ ಸಿಗುವುದು ಎಲ್ಲಿ ಗೊತ್ತಾ ಹೋಟೇಲ್‌ಗಳಲ್ಲಿ. ಅವರು ಏನೂ ಕೇಳುವುದಿಲ್ಲ ಅವರಿಗೆ ಊಟ ಕೊಡುತ್ತಾರೆ ತಿಂಡಿ ಕೊಡುತ್ತಾರೆ ಮಲಗುವುದಕ್ಕೆ ಜಾಗ ಕೊಡುತ್ತಾರೆ. ಇಂತಹ ಒಂದು ರೀತಿಯಲ್ಲಿ ತೆರೆಯಮರೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥವರು ಕರ್ನಾಟಕ ರಾಜ್ಯದಲ್ಲಿ ಇಂತಹ ಸಣ್ಣ ಸಣ್ಣ ಹೋಟೇಲ್‌ಗಳು. ಸಾವಿರಾರು ಇವೆ. ಈ ಸಣ್ಣ ಹೋಟೇಲ್‌ಗಳ ಮೇಲೆ ತಾವು ಗದಾಪ್ರಹಾರ ಮಾಡುವುದು ಬೇಡ. 4 ಪರ್ಸೆಂಟ್ ಮಾರಾಟ ತೆರಿಗೆಯನ್ನು ತಾವು ಹಾಕಿದ್ದೀರಿ. ಅದನ್ನು ಕನಿಷ್ಟ 2 ಪರ್ಸೆಂಟಿಗಾದರೂ ತಾವು ಇಳಿಸಿ. ಆ ಹೋಟೇಲ್‌ಗಳು ನಿಜವಾಗಿಯೂ ನನಗನಿಸುತ್ತದೆ ಎಲ್ಲಾ ದೃಷ್ಟಿಯಿಂದಲೂ ಅವು ಒಂದು ಸೇವಾ ಸ್ಥಳಗಳು. ತಾವು ಅಶೋಕ ಹೋಟೆಲ್‌ಗಳ ಮೇಲೆ ಹಾಕಿ. ಅದರ ಬಗ್ಗೆ ನಾವು ಚಕಾರ ಎತ್ತುವುದಿಲ್ಲ. ಅದು ಬಿಟ್ಟು ರಸ್ತೆ ರಸ್ತೆಗಳಲ್ಲಿ ಸರ್ಕಲ್‌ಗಳಲ್ಲಿ ಹಳ್ಳಿಗಳಲ್ಲಿ ಇಂತಹ ಸಾವಿರಾರು ಹೋಟೇಲಗಳು ಬರುತ್ತವೆ. ಈ ಹೋಟೇಲಗಳ ಮೇಲೆ ಹಾಕಿರತಕ್ಕಂಥ ಶೇಕಡ 4 ಮಾರಾಟ ತೆರಿಗೆಯನ್ನು 2 ಪರ್ಸೆಂಟಿಗೆ ತಾವು ಇಳಿಸಿದರೆ ನಿಜವಾಗಿಯೂ ಹೋಟೇಲ್‌ಗಳ ಉದ್ಯಮ ಬೆಳೆಯುವುದಕ್ಕೆ ಮತ್ತು ಒಂದು ರೀತಿ ನಿಮ್ಮ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅದು ಒಂದು ಸಾಧನ. ಆದ್ದರಿಂದ ತಾವು ಆ ಬಗ್ಗೆ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿ, ಇನ್ನು ನಮ್ಮ ಸುತ್ತ ಪೋಲಿಸ್ ಇಲಾಖೆ ಇದೆ. ನಮಗೆಲ್ಲಾ ವಿಧಾನಸೌಧ ಸುತ್ತಮುತ್ತ ರಕ್ಷಣೆ ಹೊರಗಡೆ ಎಲ್ಲಾ ಕಡೆ ಇವರಿಗೆ

ನಾವು ವಿಶೇಷವಾದಂತಹ ಯಾವ ಸವಲತ್ತುಗಳನ್ನೂ ನಾವು ಕೊಡುತ್ತಿಲ್ಲ. ರೇಷನ್ ಕೊಟ್ಟಿದ್ದೀರಿ ಸಮವಸ್ತ್ರಗಳು, ಎಷ್ಟು ವರ್ಷಕ್ಕೆ ಒಂದು ಸಾರಿ ಕೊಡುವುದು ಇವೆಲ್ಲಾ, ಅನೇಕ ಬದಲಾವಣೆಗಳು ಆಗಬೇಕಾಗಿದೆ. ಒಂದು ಅವರು ಒಂದು ಕೆಲಸಕ್ಕೆ ಬಂದರು ಎಂದು ಹೇಳಿದರೆ ಬೆಳಗ್ಗೆಯಿಂದ ರಾತ್ರಿವರೆಗೂ ದುಡಿದರೆ ಕೊಡತಕ್ಕಂಥ ವ್ಯವಸ್ಥೆ, ಅದೆಲ್ಲಾ ಸ್ವಲ್ಪ ಬದಲಾವಣೆ ಆಗಬೇಕು. ಅವರಿಗೆ ಕೊಡತಕ್ಕಂಥ ಭತ್ಯೆ ಬದಲಾವಣೆ ಆಗಬೇಕು. ಇವೆಲ್ಲಾ ಆದರೆ ನನಗನಿಸುತ್ತದೆ ಆಗ ಒಂದು ಸಾಮಾಜಿಕ ನ್ಯಾಯ ಸಿಕ್ಕಿದ ಹಾಗೆ ಎಂದು. ಹೋಗುತ್ತಾರೆ ಹಳ್ಳಿಗಳಿಗೆ ಹೋದಾಗ ಈ ಊಟದ ಭತ್ಯೆ, ಅಲ್ಲಿ ಎಲ್ಲರಿಗೂ ಒಂದೇ ಊಟ. ಕಾನ್‌ಸ್ಟೇಬಲ್‌ಗೂ ಒಂದೇ ದೊಡ್ಡವರಿಗೂ ಒಂದೇ ಊಟದ ಭತ್ಯೆ. ಅಂತರದಲ್ಲಿ ಒಂದೇ ಅಂತರ ಇರಬೇಕು. ಇನ್ನು ಅವರಿಗೆ ಕೊಡತಕ್ಕಂಥ ಬೂಟ್ಸ್‌ಗಳು ಯಾವುದೋ ಕಾಲದ್ದು. ಅವರು ಯಾವುದಾದರೂ ಒಂದು ಚಳುವಳಿಯಲ್ಲಿ ಓಡಿದರೆ ಹೊಸ ಬೂಟ್ಸ್‌ಗಳೇ ಕಿತ್ತುಹೋಗಿಬಿಡುತ್ತವೆ. ಇಲ್ಲಾ ದಾರ ಕಿತ್ತು ಹೋಗುತ್ತದೆ. ನಮ್ಮ ರಕ್ಷಣೆಯನ್ನು ಶಾಂತಿ ಪಾಲನೆ ಮಾಡತಕ್ಕಂಥ ವ್ಯವಸ್ಥೆ ಏನು ಇದೆ ಅದರ ಬಗ್ಗೆ ಧರ್ಮವೀರ ಸಮಿತಿ ಒಂದು ವರದಿಯನ್ನು ಕೊಟ್ಟಿದ್ದಾರೆ. ತಾವು ನೋಡಿರಬೇಕು ನೀವು ನೋಡಿರಬೇಕು ಧರ್ಮವೀರ ವರದಿ ಬಹಳ ಚೆನ್ನಾಗಿದೆ. ಮತ್ತೊಂದು ಆಯೋಗವನ್ನು ಮಾಡಿದ್ದೀರಿ ಅದಕ್ಕೆ ಒಬ್ಬ ನಿವೃತ್ತ ಅಧಿಕಾರಿಯನ್ನು ಹಾಕಿದ್ದೀರಿ ಎಂದು ಕಾಣುತ್ತದೆ. ಅವರ ಭತ್ಯೆದ ವ್ಯವಸ್ಥೆ ಮತ್ತು ಸಮವಸ್ತ್ರ ಇವೆರಡನ್ನೂ ತಾವು ಸರಿಪಡಿಸಬೇಕು. ಏಕೆಂದರೆ ನನಗೆ ತಿಳಿದಿರುವ ಮಟ್ಟಿಗೆ ಆ ವ್ಯವಸ್ಥೆಯಲ್ಲಿ ಬಹಳ ವ್ಯತ್ಯಾಸ ಇದೆ. ಅದರಲ್ಲಿ ಬಹಳ ತಾರತಮ್ಯ ಇದೆ ಎನ್ನತಕ್ಕಂಥಾದ್ದು ಮೊದಲಿನಿಂದಲೂ ಬಂದಿರತಕ್ಕಂಥ ವಿಚಾರ. ಅದನ್ನು ಸರಿಪಡಿಸುವಂತಹ ವ್ಯವಸ್ಥೆ ಆಗಬೇಕು. ಪೋಲೀಸನವರು ಬೇರೆಯವರಂತೆ ಸಂಘಗಳನ್ನು ಮಾಡಿಕೊಳ್ಳುವಂತೆ ಇಲ್ಲ. ಬೇರೆಯವರ ರೀತಿಯಲ್ಲಿ ಗದ್ದಲಗಳನ್ನು ಮಾಡುವಂತೆ ಇಲ್ಲ, ಬೇರೆಯವರ ರೀತಿ ಮೆರವಣಿಗೆಗಳನ್ನು ಮಾಡುವಂತಿಲ್ಲ. ಉನ್ನತವಾದ ಅಧಿಕಾರಿಗಳ ಹತ್ತಿರ ಹೋದರೆ, ಅವರನ್ನು ಮನೆಗೆ ಕಳುಹಿಸುತ್ತಾರೆ. ಉನ್ನತವಾದ ಅಧಿಕಾರಿಗಳ ಮನೆಗಳ ಹತ್ತಿರ ಅವರು ಪೋಲಿಸ್ ಕೆಲಸ ಬಿಟ್ಟು ಪಾತ್ರೆ ತೊಳೆಯುವುದು, ಕಸ ಗುಡಿಸುವುದು, ಬಟ್ಟೆ ತೊಳೆಯುವುದು ಈ ಕೆಲಸದಲ್ಲಿದ್ದಾರೆ. ಆ ಪೋಲಿಸರ ಹಣೆಬರಹವನ್ನು ನಾನು ನೋಡಿದ್ದೇನೆ. ಅದಕ್ಕಾಗಿ ಪೋಲಿಸ್ ಕಾನಸ್ಟೇಬಲ್ ವರ್ಗದ ಮತ್ತು ಎ.ಎಸ್.ಐ. ವರ್ಗದ ಪೋಲೀಸರ ಕಲ್ಯಾಣದ ಬಗ್ಗೆ ಚಿಂತನೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಈ ಸರ್ಕಾರ ಬಂದು ಒಂದು ವರ್ಷ 4 ತಿಂಗಳಾಗುತ್ತಾ ಬರುತ್ತಿದೆ; ನಮ್ಮ ಆಡಳಿತ ಸುಭದ್ರವಾಗಿದೆಯೆಂದು ಸರ್ಕಾರದವರು ಹೇಳಿಕೊಳ್ಳುತ್ತಿದ್ದಾರೆ ಮತ್ತು ಎರಡನೆ ಆಯವ್ಯಯವನ್ನೂ ಮಂಡಿಸಲಾಗುತ್ತಿದೆ. ನಾನು ಕೇಳುತ್ತೇನೆ, ಇದುವರೆಗೂ ಮಂಡಳಿ ಮತ್ತು ನಿಗಮಗಳಿಗೆ ಅಧ್ಯಕ್ಷರುಗಳನ್ನು ಏಕೆ ನೇಮಕ ಮಾಡಿಲ್ಲ? ಸರ್ಕಾರದಲ್ಲಿರುವ ಒಡಕಿನಿಂದಲೋ ಅಥವಾ ಭಯ ಭೀತಿಯಿಂದಲೂ ಇನ್ನೂ ಮಾಡಿಲ್ಲ. ಮಂಡಳಿಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡಿದರೆ ಆಗತಕ್ಕಂಥ ಅನಾಹುತವೇನು? ಒಂದು ಕಡೆ ವಿಕೇಂದ್ರೀಕರಣ ಮಾಡುತ್ತೇವೆಂದು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ವ್ಯವಸ್ಥೆ ಮಾಡಿ ಇನ್ನೊಂದು ಕಡೆ ಮಂಡಳಿ ಮತ್ತು ನಿಗಮಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡದೇ ಇರುವುದಕ್ಕೆ ಕಾರಣ ಏನು? ನಾನು ಹೇಳುತ್ತೇನೆ, ಮಂಡಳಿಗಳಿಗೆ ಅಧ್ಯಕ್ಷರುಗಳನ್ನೇನಾದರೂ ನೇಮಕ ಮಾಡಿದರೆ ಅವರ ಪಾರ್ಟಿಯಲ್ಲಿ ನೀರ ಬಿರುಕು ಬಿಡುತ್ತದೆ, ಅಧಿಕಾರಕ್ಕೆ ತೊಂದರೆಗಳಾಗುತ್ತ[illegible]ಂದ ನಾಳೆ

ಅಧಿಕಾರ ಉಳಿಯುವುದಿಲ್ಲ ಎನ್ನುವ ಸ್ವಾರ್ಥಕ್ಕಾಗಿ ಅವರು ಮಂಡಳಿಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡುತ್ತಿಲ್ಲ. ಮಂಡಳಿ ನಿಗಮಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡುವಂಥ ಬಾಕ್ಸ್ ತೆಗೆದ ತಕ್ಷಣ ಅನೇಕ ಪ್ರಾಣಿಗಳು ಹೊರ ಬರುತ್ತವೆ. ಪಾರ್ಟಿಯ ಹಿಡಿತದಲ್ಲಿ ಶಾಸಕರುಗಳು ಇಲ್ಲವೆನ್ನುವುದಕ್ಕೆ ಇದೊಂದೇ ನಿದರ್ಶನ ಸಾಕು. ಸರ್ಕಾರದವರು ಯಾವತ್ತು ಮಂಡಳಿ ಅಧ್ಯಕ್ಷರುಗಳನ್ನು ಮಾಡುವುದಕ್ಕೆ ಕೈ ಹಾಕುತ್ತವೆಯೋ ಅಂದೇ ಸರ್ಕಾರ ಕೆಳಗೆ ಇಳಿಯುತಕ್ಕಂಥ ಪರಿಸ್ಥಿತಿಗೆ ಹೋಗುತ್ತದೆ ಎನ್ನುವ ಎಚ್ಚರಿಕೆಯನ್ನು ನಾನು ಕೊಡುತ್ತಿದ್ದೇನೆ. ನಾಳೆ ಮಾಡುತ್ತೇವೆ, ನಾಡಿದ್ದು ಮಾಡುತ್ತೇವೆಂದು ಪಕ್ಷದ ಕಾರ್ಯಕರ್ತರುಗಳು ಮೂಗಿಗೆ ತುಪ್ಪ ಹಚ್ಚುತ್ತಾ ಮಂಡಳಿ ನಿಗಮಗಳ ಅಧ್ಯಕ್ಷರುಗಳನ್ನು ನೇಮಕ ಮಾಡುವಂಥ ವ್ಯವಸ್ಥೆಗೆ ಸರ್ಕಾರದವರು ಹೋಗಿಲ್ಲವೆಂದು ಹೇಳಿ, ಇನ್ನು ಮಾನ್ಯ ಅರ್ಥ ಸಚಿವರಾದ ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿರತಕ್ಕಂಥ ಬಜೆಟನ್ನು ನಾನು ಸಾರಾಸಗಟಾಗಿ ಸರಿಯಿಲ್ಲವೆಂದು ಹೇಳುವುದಕ್ಕೆ ಹೋಗದಿದ್ದರೂ ಇದಕ್ಕಿಂಥ ಪ್ರಗತಿದಾಯಕವಾದ ಆಯವ್ಯಯವನ್ನು ಮಂಡಿಸಬಹುದಾಗಿತ್ತೆಂದು ಹೇಳಿ, ಇದುವರೆಗೆ ನಾನು ಹೇಳಿದ ಕೆಲವು ವಿಚಾರಗಳಿಗೆ ಅನುಕೂಲಕರವಾಗಿ ಪ್ರತಿಕ್ರಿಯೆ ಕೊಡುತ್ತೀರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಮುಂದಿನ ಸಾರಿ ಇನ್ನೂ ಉತ್ತಮ ಬಜೆಟ್‌ನ್ನು ಮಂಡಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮುಂದಿನ ವರ್ಷ ನೀವು ಇರುತ್ತೀರೆಂದು ತಿಳಿದುಕೊಂಡಿದ್ದರೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಬೈರೇಗೌಡರು ಈ ಕಡೆ ಇದ್ದಾಗ ನಿಮ್ಮ ಪಕ್ಕದಲ್ಲೇ ಕುಳಿತುಕೊಳ್ಳುತ್ತಿದ್ದರು, ಆದ್ದರಿಂದ, ಮಾನ್ಯ ವಾಟಾಳ್ ನಾಗರಾಜ್‌ರವರ ಸಲಹೆ ಪಡೆದು ಈ ಬಜೆಟ್‌ನ್ನು ಮಂಡಿಸಿರಬಹುದೆಂದು ನಾವು ತಿಳಿದುಕೊಂಡಿದ್ದೆವು.

ಶ್ರೀ ವಾಟಾಳ್ ನಾಗರಾಜ್ : ನನಗಿಂತ ಉತ್ತಮ ಸಂಬಂಧವನ್ನು ತಾವು ಹೊಂದಿದ್ದೀರಿ. ಕಾವೇರಿ ನೀರು ಬಿಡುವಂಥ ಸಂದರ್ಭದಲ್ಲಿ ನೀವೆಲ್ಲರೂ ಒಟ್ಟಿಗೆ ಸೇರಿಕೊಳ್ಳಲಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ನೇರವಾದ ಸಂಬಂಧವಿಲ್ಲ; ಪ್ರೈಮಿನಿಸ್ಟರ್ ಮುಖಾಂತರ ಸಂಬಂಧ ಇದೆ ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಖರ್ಗೆಯವರು ಸತ್ಯವನ್ನೇ ಹೇಳಿದ್ದಾರೆ. ನೇರವಾದ ಸಂಬಂಧವಿಲ್ಲ ಪ್ರಧಾನ ಮಂತ್ರಿಗಳಿಂದ ಸಂಬಂಧ ಇದೆ. ಇದನ್ನು ನಾನು ಒಪ್ಪುತ್ತೇನೆ. ಪ್ರಧಾನ ಮಂತ್ರಿಗಳು ಇವರಿಗಿಂತ ಅವರ ಹತ್ತಿರವೇ ಚೆನ್ನಾಗಿದ್ದಾರೆ.

ಶ್ರೀ ಸಿದ್ಧರಾಮಯ್ಯ : ನಮ್ಮ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಜೊತೆ ಚೆನ್ನಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಶ್ರೀಮಾನ್ ದೇವೇಗೌಡರ ಕೃಪಾ ಪೋಷಿತ ನಾಟಕ ಮಂಡಳಿಗೆ ಮಹಾಪೋಷಕರೇ ಮಾನ್ಯ ನರಸಿಂಹರಾಯರು, ಅದರಲ್ಲಿ ಏನೂ ಅನುಮಾನವಿಲ್ಲ. ಅದು ಇದು

ಜಗಜ್ಜಾಹೀರವಾಗಿದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ಸ್ವಾಮಿ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪೋಲಿಸ್ ಠಾಣೆಗಳಿಗೆ ಸರಿಯಾದ ರೀತಿಯಲ್ಲಿ ವಾಹನ ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ನಗರ ಪ್ರದೇಶಗಳಿಗೆ ಮಾತ್ರ ಎಲ್ಲಾ ರೀತಿಯಲ್ಲೂ ವಾಹನ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ನಮ್ಮ ಕ್ಷೇತ್ರದ ಗ್ರಾಮಾಂತರ ಪೋಲಿಸ್ ಠಾಣೆಗೆ ವಾಹನವನ್ನು ಒದಗಿಸಬೇಕೆಂದು ಹತ್ತಾರು ವರ್ಷಗಳಿಂದ ಕೇಳುತ್ತಾ ಬಂದಿದ್ದೇನೆ, ಇನ್ನೂವರೆಗೆ ವಾಹನ ಸೌಕರ್ಯ ಒದಗಿಸಿಕೊಟ್ಟಿಲ್ಲ. ಆಮೇಲೆ, ನಗರಗಳಲ್ಲಿ ಟ್ರಾಫಿಕ್ ಕಂಟ್ರೋಲ್ ಮಾಡತಕ್ಕಂಥ ಪೋಲಿಸರುಗಳಿಗೆ ಪಲ್ಯೂಷನ್ ಅವಾಯ್ಡ್ ಮಾಸ್ಕ್‌ಗಳನ್ನು ಒದಗಿಸುವ ಬಗ್ಗೆ ಸರ್ಕಾರ ಗಮನಹರಿಸಬೇಕು. ರಸ್ತೆಗಳ ಪಕ್ಕದಲ್ಲಿರುವ ಕಂಬಗಳ ಮೇಲೆಲ್ಲಾ ವಾಹನಗಳಿಂದ ಹೊರ ಹೊಮ್ಮುವ ಹೊಗೆ ಶೇಖರಣೆಯಾಗಿರುತ್ತದೆ, ಅದರಿಂದ ಟ್ರಾಫಿಕ್ ಪೋಲಿಸರ ಆರೋಗ್ಯ ಬಹುಬೇಗ ಹಾಳಾಗಬಹುದು ಆದ್ದರಿಂದ, ಕೂಡಲೇ ಇದೇ ಬಜೆಟ್ಟಿನಲ್ಲಿ ಅವಕಾಶ ಮಾಡಿ ಅವರೆಲ್ಲರಿಗೂ ಮಾಸ್ಕ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಕಾನೂನು ಮತ್ತು ಶಿಸ್ತು ಪಾಲನೆ ಮಾಡುವುದಕ್ಕೆ ಬಹು ದೊಡ್ಡ ಸಹಕಾರ ನೀಡುತ್ತಿರುವ ಹೋಂ ಗಾರ್ಡ್ಸ್‌ಗಳಿಗೆ 25,124 ಸಮವಸ್ತ್ರಗಳನ್ನು ನೀಡಬೇಕೆಂದು ಬೇಡಿಕೆ ಇಡಲಾಗಿದೆ. ಈಗ ಅವರು ಹಾಕಿಕೊಳ್ಳುವ ಬಟ್ಟೆಯನ್ನು ನೋಡಿದರೆ ನಮಗೆ ಬಹಳ ಬೇಜಾರಾಗುತ್ತದೆ. ವರ್ಷಕ್ಕೆ ಒಂದು ಜೊತೆ ಸಮವಸ್ತ್ರ ಕೊಡಬೇಕೆಂಬ ನಿಯಮವಿದ್ದರೂ ಕಳೆದ ವರ್ಷ ಕೇವಲ 7 ಸಾವಿರ ಜೊತ ಮಾತ್ರ ಕೊಟ್ಟಿದ್ದಾರೆ. ಆದ್ದರಿಂದ, ಇನ್ನು ಮುಂದೆ ಪ್ರತಿ ವರ್ಷವೂ ಒಂದೊಂದು ಜೊತೆ ಟೆರಿಕಾಟ್ ಸಮವಸ್ತ್ರವನ್ನು ಹೋಂ ಗಾರ್ಡ್ಸ್‌ಗೆ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, 4ನೇ ತಾರೀಖು ಮಾರ್ಚ್ ತಿಂಗಳಲ್ಲಿ ಸನ್ಮಾನ್ಯ ಹಣಕಾಸಿನ ಮಂತ್ರಿಗಳು ರಾಜ್ಯದ ಆಯವ್ಯಯವನ್ನು ಮಂಡಿಸಿ 174ನೇ ಪ್ಯಾರಾದಲ್ಲಿ ಒಂದು ವಿಷಯವನ್ನು ಹೇಳಿದ್ದಾರೆ. ನಾನೂ ಕೂಡ ಅದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. "ನನ್ನ ಈ ಭಾಷಣವನ್ನು ಮುಕ್ತಾಯಗೊಳಿಸುವ ಮುನ್ನ ನಾನು ಹೇಳಬಯಸುವುದೇನೆಂದರೆ, ಬಜೆಟ್ ಕೇವಲ ಯೋಜನೆಗಳ ಪಟ್ಟಿಯಲ್ಲ, ಜೀವ ರಹಿತ ಅಂಕಿ ಅಂಶಗಳ ಹೊತ್ತಿಗೆಯೂ ಅಲ್ಲ, ಜನತೆಯ ಸಂಕಷ್ಟಗಳ, ಆಕಾಂಕ್ಷೆಗಳ, ಆಶೋತ್ತರಗಳ ಬಗ್ಗೆ ಸರ್ಕಾರದ ಪ್ರತಿಕ್ರಿಯೆಯನ್ನು ಬಜೆಟ್ ಸ್ಪಂದಿಸಬೇಕು. ಕೃಷಿ ಮತ್ತು ಉದ್ದಿಮೆಗಳ ಸಮಾನ ಅಭಿವೃದ್ಧಿ ಮೂಲಕ ಅಧಿಕ ಉದ್ಯೋಗಾವಕಾಶಕ್ಕೆ ಹಾಗೂ ದಾರಿದ್ರ್ಯ ನಿರ್ಮೂಲನಕ್ಕೆ ಪ್ರಾಶಸ್ತ್ಯ ನೀಡಿ ಗ್ರಾಮೀಣಾಭಿವೃದ್ಧಿಯನ್ನು ಇನ್ನಷ್ಟು ತ್ವರಿತಗೊಳಿಸುವ ಗುರಿಯನ್ನು ಹೊಂದಿದ್ದು ಈ ದಿಸೆಯಲ್ಲಿ ಈ ಬಜೆಟ್ ಒಂದು ದಿಟ್ಟ ಹೆಜ್ಜೆಯಾಗಿದೆ" ಎಂದು ಹೇಳಿದ್ದಾರೆ. ಬಹುಶಃ ಇದು ಸರಿಯಾದಂಥ ವಿಶ್ಲೇಷಣೆಯಾಗಿದೆ. ಈ ರೀತಿಯ ವಿಶ್ಲೇಷಣೆಯನ್ನು ಇದುವರೆಗಿನ ಯಾವ ಬಜೆಟ್ಟಿನಲ್ಲೂ ನಾನು ನೋಡಿರಲಿಲ್ಲ. ಕೆಲವು ವಿಷಯಗಳೂ ಆ ರೀತಿ ಬಂದಿವೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಹಲವಾರು ಸಂದರ್ಭಗಳಲ್ಲಿ ವಿತ್ತ ಮಂತ್ರಿಗಳು ಸ್ವಯಂ ವಿರೋಧಾಭಾಸಕ್ಕೆ

ಒಳಗಾಗಿದ್ದಾರೆ. ಅವರು ಮೇಲಿನದರಲ್ಲಿ ಹೇಳಿದ್ದಾರೆ, ಹೇಳಿದ್ದನ್ನು ಮರೆತು ಹೋದರೋ ಅಥವಾ ಅಧಿಕಾರಿಗಳು ಬರೆದುಕೊಳ್ಳಲಿಲ್ಲವೋ ನನಗಂತೂ ಗೊತ್ತಿಲ್ಲ. ಅಂಕಿ ಅಂಶಗಳ ಜಂಜಾಟವೂ ಅಲ್ಲ ಜೀವ ರಹಿತ ಅಂಕಿ ಅಂಶಗಳ ಹೊತ್ತಿಗೆಯೂ ಅಲ್ಲವೆಂದು ಹೇಳಿದ್ದಾರೆ. 114ನೇ ಪೇಜಿನಲ್ಲಿ ಸುಮಾರು ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ. ಆ ಅಂಕಿ-ಅಂಶಗಳನ್ನು ಕೊಟ್ಟಿರುವುದಕ್ಕೂ ಇದರಲ್ಲಿ ಅವರು ನಿರೂಪಣೆ ಮಾಡಿರುವ ಆದಾಯ-ವೆಚ್ಚ, ಯಾವ್ಯಾವುದಕ್ಕೆ ಏನೇನು ಉಪಯೋಗಿಸಿದ್ದೀರಿ, ಯಾವ್ಯಾವುದಕ್ಕೆ ಯಾವ ಯಾವ ಮೂಲದಿಂದ ಏನೇನು ಬರುತ್ತದೆ, ಯಾವ್ಯಾವುದಕ್ಕೆ ಎಷ್ಟನ್ನು ಕೊಡುತ್ತೇವೆ ಎಂದು ಹೇಳಿರತಕ್ಕಂಥ ಸಂದರ್ಭದಲ್ಲಿ ಆ ಅಂಕಿ-ಅಂಶಗಳನ್ನು ಜೋಡಿಸಿದ್ದಾರೆ. ಹೆಚ್ಚು ಕಡಿಮೆ ಜೋಡಿಸುತ್ತಾ ಬಂದಿದ್ದಾರೆ. ಉದಾಹರಣೆಗೆ ಹೋದ ಸಲ ಎರಡು ಕೋಟಿ ಕೊಟ್ಟಿದ್ದರೆ ಈ ಸಾರಿ ಎರಡೂವರೆ ಕೋಟಿ. ಅಂದರೆ ಹೋದ ಸಾರಿಯ ರೂಪಾಯಿಯ ಮೌಲ್ಯ ಎಷ್ಟು? ಈ ವರ್ಷದಲ್ಲಿ ರೂಪಾಯಿ ಮೌಲ್ಯ ಎಷ್ಟು ಎಂದು ಹೇಳಿದಾಗ ಹೋದ ವರ್ಷಕ್ಕಿಂತ ಇದು ಕಡಿಮೆಯೇ ಆಗುತ್ತದೆ. ರೂಪಾಯಿಯ ಅಪಮೌಲ್ಯ ಕಳೆದ ಒಂದು ವರ್ಷದಲ್ಲಿ ಆಗಿರುವಷ್ಟು ನಮ್ಮ ದೇಶದ ಇತಿಹಾಸದಲ್ಲಿಯೇ ಎಂದೂ ಆಗಲಿಲ್ಲ. ಅದು ದಾಖಲೆಯ ರೀತಿಯಲ್ಲಿ ಅಪಮೌಲ್ಯವಾಗಿದೆ. ಈ ರೀತಿಯಲ್ಲಿ ಅಪಮೌಲ್ಯವಾಗಿರತಕ್ಕಂಥ ಹಣವನ್ನು ಹೋದ ವರ್ಷ ಎರಡು ಕೋಟಿ ಇದ್ದುದ್ದನ್ನು ಎರಡೂವರೆ ಕೋಟಿ ಮಾಡಿದ್ದೇವೆ, ಎಂಬಿತ್ಯಾದಿ ಅಂಕಿಅಂಶಗಳನ್ನು ಒಂದು ಪಟ್ಟಿಯನ್ನು ಪೇಜ್ 52ರಲ್ಲಿ ಕೊಟ್ಟಿದ್ದಾರೆ. ಬಜೆಟ್ ಎಂದು ಹೇಳತಕ್ಕಂಥಾದ್ದು ಒಂದು ರಾಜ್ಯದ ನಿಜವಾದ ಪ್ರಗತಿಯನ್ನು ಅದೇ ರೀತಿಯಲ್ಲಿ ರಾಜ್ಯದ ಆರ್ಥಿಕ ಪ್ರಗತಿಯನ್ನು ತೋರಿಸುವುದಕ್ಕೆ ಬೇಕಾದಂಥ ಎಲ್ಲಾ ಸ್ಪಷ್ಟವಾದಂಥ ವಿವರಗಳನ್ನು ಕೊಡುವಂಥಾದ್ದು. ರಾಜ್ಯಪಾಲರ ಭಾಷಣವು ಸರಕಾರದ ಕಾರ್ಯಕ್ರಮಗಳ ನಿರೂಪಣೆಯಾದರೆ, ಅದರಲ್ಲಿ ನಿರೂಪಿಸಿದಂಥ ಎಲ್ಲಾ ವಿಚಾರಗಳನ್ನು ತಾತ್ವಿಕವಾಗಿ ಬಲಪಡಿಸುವುದಕ್ಕೆ ನಿರೂಪಣೆಯಲ್ಲಿನ ವಿಚಾರಗಳಿಗೆ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸುವುದೇ ಬಜೆಟ್ ಆಗಿರುತ್ತದೆ. ಅದರ ಜೊತೆಗೆ ಒಂದು ರಾಜ್ಯದ ಆಯವ್ಯಯವನ್ನು ಸಂಪೂರ್ಣವಾಗಿ ಸರಕಾರದ ಹಿಡಿತದಲ್ಲಿಟ್ಟುಕೊಂಡು ಯಾವ ಯಾವ ಬಾಬಿಗೆ ಎಷ್ಟೆಷ್ಟನ್ನು ಖರ್ಚು ಮಾಡಬೇಕೆಂಬ ಬಗ್ಗೆ ನಿರ್ದಿಷ್ಟವಾಗಿ ಸೂಚಿಸಿ ಅದನ್ನು ಜಾರಿಗೊಳಿಸುವುದಕ್ಕೆ ಬೇಕಾದಂಥ ಆರ್ಥಿಕ ಅಡಿಪಾಯವನ್ನು ಹಾಕಬೇಕಾದಂಥಾದ್ದು ಬಜೆಟ್‌ನ ಮೂಲ ಉದ್ದೇಶ. ಅದನ್ನು ಹೇಳತಕ್ಕಂಥ ಸಂದರ್ಭದಲ್ಲಿ ಸರಕಾರಕ್ಕೆ ಆದ್ಯತೆಯು ಬೇಕಾಗುತ್ತದೆ. ಎಲ್ಲಾ ಕಾರ್ಯಕ್ರಮಗಳನ್ನು ಯಾವ ಸರಕಾರದವರೂ ಒಂದೇ ವರ್ಷದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದಾಗಿ ಯಾವುದೇ ಸರಕಾರ ತಮ್ಮ ಆದ್ಯತೆಯನ್ನು ಕಾರ್ಯಕ್ರಮಗಳ ವಿಚಾರದಲ್ಲಿ ನಿಗಧಿ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಈ ಸರಕಾರವು ತನ್ನ ಆದ್ಯತೆಯನ್ನು ಬಜೆಟ್‌ನ 10ನೇ ಪುಟದಲ್ಲಿ ಹೇಳಿದ್ದಾರೆ. "ಸಾಮಾಜಿಕ ಕ್ಷೇತ್ರದಲ್ಲಿ ರಾಜ್ಯ ಸರ್ಕಾರವು ಗ್ರಾಮೀಣಾಭಿವೃದ್ಧಿ ಕುಡಿಯುವ ನೀರಿನ ಸರಬರಾಜು, ಶಿಕ್ಷಣ, ಆರೋಗ್ಯ ವಸತಿ ಮತ್ತು ಗ್ರಾಮೀಣಾಭಿವೃದ್ಧಿ ಕುಡಿಯುವ ನೀರಿನ ಸರಬರಾಜು, ಶಿಕ್ಷಣ, ಆರೋಗ್ಯ ವಸತಿ ಮತ್ತು ಗ್ರಾಮೀಣ ಉದ್ಯೋಗಕ್ಕಾಗಿ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ" ಎಂದು ಹೇಳಿದ್ದಾರೆ. ಆದರೆ ಈ ಆಯ್ಕೆಯಾದ ಆದ್ಯತೆಗಳನ್ನು ಸರಕಾರವು ಪೂರೈಸುವುದಕ್ಕೆ ಬೇಕಾದಂಥ ಆರ್ಥಿಕ ಸೌಕರ್ಯಗಳನ್ನು ಮತ್ತು ಮೂಲಭೂತವಾಗಿ ಬೇಕಾಗಿರತಕ್ಕಂಥ ಆರ್ಥಿಕ ಅಡಿಪಾಯವನ್ನು ಹಾಕಲಿಕ್ಕೆ

ಈ ಆದ್ಯತೆಗಳಿಗೆ ಕೊಟ್ಟಿರತಕ್ಕಂಥ ಹಣವನ್ನು ಈ ಬಜೆಟ್ಟಿನಲ್ಲಿ ಅವಲೋಕಿಸಿದಾಗ ಅದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಇದು ಎರಡನೆಯ ಸ್ವಯಂ ವಿರೋಧಾಭಾಸವಾಗಿದೆ. ನನಗೆ ಏನು ಅನ್ನಿಸುತ್ತದೆ ಎಂದರೆ ಸರಕಾರಕ್ಕೆ ಒಂದು ಸ್ಪಷ್ಟವಾದಂಥ ಧೋರಣೆ ಇರಬೇಕು. ಅದು ಯಾವುದೇ ಧೋರಣೆಯಾಗಿರಬಹುದು. ಅವರು ಒಪ್ಪಿರತಕ್ಕಂಥ ಧೋರಣೆಗಳಲ್ಲಿ ಅದು ಗಾಂಧಿತತ್ವದ ಧೋರಣೆಯಾಗಿರಬಹುದು, ಲೋಹಿಯಾತತ್ವದ ಧೋರಣೆಯಾಗಿರಬಹುದು. ಹೀಗೆ ಯಾವುದೇ ಒಂದು ತತ್ವದ ಧೋರಣೆ ಇರಬೇಕು. ಈ ಬಜೆಟ್‌ಗಾಗಲೀ ಅಥವಾ ರಾಜ್ಯಪಾಲರ ಭಾಷಣಕ್ಕಾಗಲೀ, ಬಜೆಟ್‌ಗಾಗಲೀ ಒಂದು ಗೊತ್ತುಗುರಿ, ಒಂದು ಧೋರಣೆ ಎನ್ನುವುದು ಏನಾದರೂ ಇದೆಯೇ ಅಂದರೆ ಖಂಡಿತವಾಗಿಯೂ ಇಲ್ಲ ಎಂದು ಹೇಳಬೇಕಾಗುತ್ತದೆ. ಸಂಪೂರ್ಣವಾಗಿ ಸ್ವಯಂ ವಿರೋಧಾಭಾಸ ಮತ್ತು ಸಂಪೂರ್ಣವಾದಂಥ ಗೊಂದಲಗಳು ಇಲ್ಲಿವೆ. ಆದ್ಯತೆಗಳು ಇವೆ ಎಂದು ಹೇಳಿ ಅವುಗಳಿಗೆ ಕೊಟ್ಟಿರತಕ್ಕಂಥಾದ್ದಾದರೂ ಏನು? ನಾನು ಒಂದು ಉದಾಹರಣೆಗಳನ್ನು ಹೇಳುತ್ತೇನೆ. ಇವರು ಶಿಕ್ಷಣಕ್ಕೆ ಪ್ರಥಮ ಆದ್ಯತೆ ಎಂದು ಬಜೆಟನಲ್ಲಿ ಹೇಳಿದ್ದಾರೆ. ಆದರೆ ಹಣ ತೆಗೆದಿರಿಸಿರತಕ್ಕಂಥಾದ್ದು 7.88 ಪರ್ಸೆಂಟ್. ಆರೋಗ್ಯಕ್ಕೆ ಆದ್ಯತೆ ಎಂದು ಹೇಳುತ್ತಾರೆ. ಇದಕ್ಕೆ ತಗೆದಿರಿಸಿರುವ ಹಣ 4.02 ಪರ್ಸೆಂಟ್. ಗ್ರಾಮೀಣಾಭಿವೃದ್ಧಿಗೆ ಆದ್ಯತ ಎಂದು ಹೇಳಿದ್ದಾರೆ. ಅದಕ್ಕೆ ಹಣ ಒದಗಿಸಿರುವುದು 8.02 ಪರ್ಸೆಂಟ್. ಇಂಧನಕ್ಕೆ ಆದ್ಯತೆ ಎಂದು ಹೇಳಿ ಅದಕ್ಕೆ ಎಷ್ಟು ಹಣವನ್ನು ತಗೆದಿರಿಸಿದ್ದಾರ? 12.04 ಪರ್ಸೆಂಟ್. ಗ್ರಾಮೀಣ ಉದ್ಯೋಗಾವಕಾಶಗಳಿಗೆ ಆದ್ಯತೆ ಎಂದು ಹೇಳಿದ್ದಾರೆ. ಅದಕ್ಕಾಗಿ ಹಣ ಇಟ್ಟಿರುವ ವಿವರಗಳು ಎಲ್ಲಿಯೂ ಇಲ್ಲವೇ ಇಲ್ಲ. ಗ್ರಾಮೀಣ ಉದ್ಯೋಗಾವಕಾಶಗಳಿಗೆ ಹಣ ತೆಗೆದಿರಿಸ ತಕ್ಕಂಥಾದ್ದಕ್ಕೆ ಯಾವುದೇ ರೀತಿಯಾದಂಥ ಅವಕಾಶ ಬಜೆಟನಲ್ಲಿ ಇಲ್ಲ. ಇದು ಸರಕಾರದ ಆದ್ಯತೆ. ಇದು ಮೂರನೇ ಸ್ವಯಂ ಪಿರೋಧಾಭಾಸ.

ಸನ್ಮಾನ್ಯ ಸಭಾಧ್ಯಕ್ಷರೇ, ಇದೇ ಬಜೆಟಿನಲ್ಲಿ ಇವೊತ್ತು ಉದ್ಯೋಗಗಳನ್ನು ಸೃಷ್ಟಿ ಮಾಡಿ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ಈ ಸರಕಾರಿ ಬಜೆಟ್ಟಿನಲ್ಲಿ ನಿರ್ದಿಷ್ಟವಾಗಿ ರೂಪಿಸಿದೆ ಎಂದು ಹೇಳಿ ನೋಡಿದರೆ ಖಂಡಿತವಾಗಿಯೂ ಇದರಲ್ಲಿ ಇಲ್ಲ. ಆ ಉದ್ಯೋಗದ ಬಗ್ಗೆ ಇವರು ಕನಿಷ್ಟವಾದ ಆಲೋಚನೆಯನ್ನು ಕೂಡ ಮಾಡಿಲ್ಲ ಎನ್ನುವುದು ಇಲ್ಲಿ ಸ್ಪಷ್ಟವಾಗುತ್ತದೆ. ಅವರು ಕೊಟ್ಟಿರತಕ್ಕಂಥ ವಿವರಗಳನ್ನು ನೋಡಿ ಹೇಳುವುದಾದರೆ ಕೈಗಾರಿಕಾ ಬೆಳವಣಿಗೆ, ವಾಣಿಜ್ಯ ಮತ್ತು ಕೈಗಾರಿಕೆಗಳು. ಉದ್ಯೋಗಾವಕಾಶವನ್ನು ಹೆಚ್ಚಿಸಲು ಅವಕಾಶ ಇರತಕ್ಕಂಥಾದ್ದು ಕೈಗಾರಿಕೆಗಳಲ್ಲಿ, ಕೈಗಾರಿಕೆಗಳ ಬಗ್ಗೆ ಇವರು ಹೇಳುತ್ತಾ, 22ನೇ ಪೇಜಿನಲ್ಲಿ ಏನು ಹೇಳುತ್ತಾರೆ ಎಂದರೆ, ರಾಜ್ಯದಲ್ಲಿ ತ್ವರಿತಗತಿಯ ಕೈಗಾರಿಕೀರಣವಾಗಲು ನಾವು ಮಾಡಿದ ಪ್ರಯತ್ನಗಳು ಫಲಕೊಟ್ಟಿವೆ. ಸರಿಸುಮಾರು 23 ಸಾವಿರ ಕೋಟಿ ರೂ.ಗಳ ಬಂಡವಾಳ ಹೂಡಿಕೆ, ಸುಮಾರು 34 ಸಾವಿರ ಜನರಿಗೆ ಉದ್ಯೋಗ ಒದಗಿಸುವಂಥ 21 ಬೃಹತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು 1995ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಅನುಮೋದನೆ ನೀಡಲಾಗಿದೆ. ಎಲ್ಲಿದೆ ಸನ್ಮಾನ್ಯ ಮುಖ್ಯಮಂತ್ರಿಯವರೇ? ಎಲ್ಲಿ 23 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಕರ್ನಾಟಕವಲ್ಲಿ ಹಾಕಿದ್ದಾರೆ? ಆದ್ದರಿಂದ ದಯಮಾಡಿ ಅಂಕಿಅಂಶಗಳನ್ನು ಸರಕಾರದವರು ಸದನಕ್ಕೆ

ಕೊಡಬೇಕು. ಎಲ್ಲಿ 23 ಸಾವಿರ ರೂ.ಗಳ ಬಂಡವಾಳವನ್ನು ಹಾಕಿದ್ದೀರಿ? ಎಲ್ಲಿ 34 ಸಾವಿರ ಜನರಿಗೆ ಉದ್ಯೋಗವನ್ನು ಸೃಷ್ಟಿ ಮಾಡಿದ್ದೀರಿ? ಇನ್ನೊಂದು ಕಡೆ ಕೈಗಾರಿಕೆಗಳ ಬಗ್ಗೆ ಒಂದು ಧೋರಣೆ ಎಂದು ಹೇಳಿದ್ದಾರೆ. ಕೈಗಾರಿಕಾ ಧೋರಣೆಯನ್ನು ಇನ್ನೂ ನಾವು ರೂಪಿಸಿಲ್ಲವೆಂದು ಅವರೇ ಒಪ್ಪಿಕೊಂಡಿದ್ದಾರೆ. ಕೈಗಾರಿಕಾ ಧೋರಣೆಯಯನ್ನು ರೂಪಿಸದೇ ಇರತಕ್ಕಂಥ ಒಂದು ಸರಕಾರ ಯಾವುದೇ ಸಂದರ್ಭದಲ್ಲಿ ಬಂಡವಾಳ ಹೂಡಿಕೆಯನ್ನು ಎಲ್ಲಿ ಹಾಕಬೇಕು? ಉದ್ಯೋಗಗಳನ್ನು ಎಲ್ಲಿ ಸೃಷ್ಟಿ ಮಾಡಬೇಕು? ಹೇಗೆ ಸೃಷ್ಟಿ ಮಾಡಬೇಕೆಂದು ಹೇಳುವುದಕ್ಕೆ ಏನಾದರೂ ಸಾಧ್ಯತೆ ಇದೆ ಎಂದು ಹೇಳುವುದಕ್ಕೆ ನಾನಂತೂ ಒಪ್ಪುವುದಿಲ್ಲ. ಇಲ್ಲಿ ಏನು ಹೇಳುತ್ತದೆ ಅಂದರೆ ಆರ್ಥಿಕ ವ್ಯವಸ್ಥೆಯ ಮೂಲ ತಂತ್ರವಾಗಿರತಕ್ಕಂಥ ಎಂಪ್ಲಾಮೆಂಟ್ ಜನರೇಷನ್, ಉದ್ಯೋಗಾವಕಾಶಗಳ ಸೃಷ್ಟಿ ಅದು ಒಂದು ರಾಜ್ಯದ ಒಂದು ದೇಶದ ನಿಜವಾದಂಥ ಬಂಡವಾಳ. ಕೋಟ್ಯಾಂತರ ಜನ ದುಡಿಯುವ ಕೈಗಳಿಗೆ ಕೆಲಸವನ್ನು ಕೊಡದೇ ಹೋದರೆ, ಆ ಕೈಗಳು ಉತ್ಪಾದನೆಯನ್ನು ಮಾಡದೇ ಹೋದರೇ ಈ ದೇಶ ಮತ್ತು ರಾಜ್ಯಗಳು ಯಾವುದೇ ಒಂದು ಅಭಿವೃದ್ಧಿಯನ್ನು ಮಾಡಲು ಸಾಧ್ಯವೇ ಇಲ್ಲ. ನೀವು ಉದ್ಯೋಗಾವಕಾಶಗಳನ್ನು ಜಾಸ್ತಿ ಮಾಡಿ ದುಡಿಯತಕ್ಕಂಥ ಜನರಿಗೆ ಕೆಲಸವನ್ನು ಕೊಡದೇ ಹೋದರೆ, ಉತ್ಪಾದನೆಯಾಗದೇ ಹೋದರೆ ನೀವು ಮಾಡತಕ್ಕಂಥ ಪ್ರಯತ್ನ, ನೀವು ಹಾಕತಕ್ಕಂಥ ಬಂಡವಾಳ ಏನಿದೆ, ಅದನ್ನು ನೀವು ವಿದೇಶದಿಂದ ತರುತ್ತೀರೋ ಅಥವಾ ಇನ್ನಾವುದೇ ರೀತಿಯಲ್ಲಿ ಬಂಡವಾಳವನ್ನು ಹಾಕಿ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದರೆ ಅದು ಸಾಧ್ಯವಾಗಲಾರದು. ಉತ್ಪಾದನೆ ಒಂದು ರಾಜ್ಯದ ಮತ್ತು ದೇಶದ ಬೆಳವಣಿಗೆ ಆಗತಕ್ಕಂಥಾದ್ದು ಅಭಿವೃದ್ಧಿಯಾಗತಕ್ಕಂಥಾದ್ದು ಮೂಲತಃ ಉತ್ಪಾದನೆಯ ಆಧಾರದ ಮೇಲೆಯೇ? ಒಂದು ದೇಶ ಮತ್ತು ರಾಜ್ಯ ಎಷ್ಟು ಉತ್ಪಾದನೆ ಮಾಡುತ್ತದೆ ಅದರ ಮೇಲೆ ದೇಶದ ಅಭಿವೃದ್ಧಿಯಾಗುತ್ತದೆ ಹೊರತು ವರ್ಲ್ಡ್ ಬ್ಯಾಂಕಿನಿಂದ ಸಾಲವನ್ನು ತರುತ್ತೇವೆ, ಐ.ಎಂ.ಎಫ್ ನಿಂದ ಸಾಲವನ್ನು ತರುತ್ತೇವೆ ಪ್ರೈವೇಟ್ ಎಂಟರ್‌ಪ್ರೈಸಸ್‌ನ ಬಂಡವಾಳವನ್ನು ಹಾಕುತ್ತೇವೆ ಎಂದರೆ, ಇನ್ನಾವುದೇ ಬಂಡವಾಳವನ್ನು ನೀವು ಹಾಕಿದರೂ ಕೂಡ ಉತ್ಪಾದನಾ ಶಕ್ತಿಗಳನ್ನು ಬೆಳೆಸದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ದುಡಿಯುವ ಕೈಗಳಿಗೆ ಕೆಲಸ ಕೊಡದೇ ಒಂದು ದೇಶ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ.

4.30 ಪಿ.ಎಂ.

ದುಡಿಯುವ ಕೈಗಳಿಗೆ ಕೆಲಸ ಕೊಡದೆ ಯಂತ್ರಗಳಿಂದ ವಿದೇಶಿ ಬಂಡವಾಳದಿಂದ ಉತ್ಪಾದನೆ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಇದು ಒಂದು ಕಡೆ ಇನ್ನೊಂದು ಕಡೆ ಗ್ರಾಮೀಣಪ್ರದೇಶದಲ್ಲಿರುವ ನಿರುದ್ಯೋಗಿಗಳು ಅನರಕ್ಷಸ್ಥರು ಅದರಲ್ಲಿ ಶೇಕಡ 90 ರಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪಂಗಡದವರು. ಅವರಿಗೆ ದುಡಿಯಲಿಕ್ಕೆ ಯಾವರೀತಿಯಾದ ಅವಕಾಶ ಕೊಟ್ಟಿದ್ದೇವೆಂದು ನಿಮ್ಮ ಬಜೆಟ್ಟಿನಲ್ಲಿಲ್ಲ. ಹೇಗೆ ಅಭಿವೃದ್ಧಿಯಾಗುತ್ತದೆ. ಅವರಿಗೆ ದುಡಿಯಲು ಅವಕಾಶ ಇರುವುದು ಒಂದೇ ಒಂದು ಕಡೆ. ಭೂಮಿಯಲ್ಲಿ ಕೆಲಸ ಮಾಡುವುದು. ಅನಕ್ಷರಸ್ಥ ನಿರುದ್ಯೋಗಿಗಳಿಗೆ ಕೆಲಸ ಕೊಡಬೇಕಾದರೆ ಅವರಿಗಿರುವ ಒಂದೇ ಮಾರ್ಗ ಉಳುವವರಿಗೆ ಭೂಮಿ ಕೊಡುವುದು ಅದು ಬಿಟ್ಟು ಬೇರೆ ಏನು ಕೆಲಸ

ಕೊಡಲಿಕ್ಕೆ ಸಾಧ್ಯವಿಲ್ಲ. ನೀವು ಜೆಆರ್‌ವೈ, ಐಆರ್‌ಡಿಪಿ ಈ ಹೆಸರುಗಳಲ್ಲಿ ಕೋಟ್ಯಾಂತರ ರೂಪಾಯಿ ಸಾಲ ಕೊಡುತ್ತೇವೆ ಸ್ವಯಂ ಉದ್ಯೋಗಕ್ಕೆ ಎಂದರೂ ಅಧ್ಯಕ್ಷರೇ ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ ನೂರಕ್ಕೆ ಅದರಲ್ಲಿ 90 ಭಾಗ ದುರುಪಯೋಗವಾಗುವುದಲ್ಲದೆ ಅದರಲ್ಲಿ ಯಾವುದೇ ಅಭಿವೃದ್ಧಿ ಸಾಧನೆ ಮಾಡಲು ಸಾಧ್ಯವಿಲ್ಲ. ಅದಕ್ಕೊಂದೇ ಉದಾಹರಣೆ ಹೇಳುತ್ತೇನೆ, ಎರಡು ಮೂರು ವರ್ಷದ ಹಿಂದೆ ಜವಾಹರ್ ರೋಜಗಾರ್ ಯೋಜನೆ ಯಡಿಯಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಸಾಲ ಕೊಡುವ ವ್ಯವಸ್ಥೆ ಮಾಡಿದರು, ಅದಕ್ಕೆ ಜಮೀನಿಲ್ಲ. ಆ ಪ್ರಕಾರ ಸಾವಿರಾರು ವಿದ್ಯಾವಂತ ಯುವಕ ಯುವತಿಯರಿಗೆ ದುಡ್ಡು ಕೊಟ್ಟಿದ್ದಾರೆ. ಅದರ ಲಾಭ ಏನಾಗಿದೆ? ನಾವು ಕೊಟ್ಟ ಸಾಲ ಎಷ್ಟು ಸಾವಿರ ಕೋಟಿ ಅದಕ್ಕೆ ಮರುಪಾವತಿಯಾಗಿ ಬಂದಿರುವ ಹಣವೆಷ್ಟು, ಉತ್ಪಾದನೆ ಯಾಗಿರುವುದೆಷ್ಟು ಎಂದು ಯಾರಾದರೂ ಸ್ಪಷ್ಟವಾಗಿ ಲೆಕ್ಕಹಾಕಿದರೆ ಗೊತ್ತಾಗುತ್ತದೆ. ಆ ಸಾಲದಿಂದ ಯಾವುದೇ ರೀತಿಯ ಮರುಉತ್ಪಾದನೆಯಿಲ್ಲ. No reproduction at all. ಒಂದು ಕಡೆ ಬಂಡವಾಳ ಹಾಕಿ ಉತ್ಪಾದನೆ ಇಲ್ಲದೆ ಒಂದು ದೇಶ ಆರ್ಥಿಕವಾಗಿ ಅಭಿವೃದ್ಧಿಯಾಗಲು ಖಂಡಿತ ಸಾಧ್ಯವಿಲ್ಲ. ಆದ್ದರಿಂದ ಅಧ್ಯಕ್ಷರೇ ಹಳ್ಳಿಗಾಡಿನ ಪ್ರದೇಶದ ಅನಕ್ಷರಸ್ಥ ನಿರುದ್ಯೋಗಿಗಳಿಗೆ ಕೆಲಸ ಕೊಡಬೇಕೆಂದರೆ ಅವರಿಗೆ ಪ್ರಥಮತಃ ಕೃಷಿಗ ಯೋಗ್ಯವಾಗಿರುವ ಭೂಮಿಯನ್ನು ಹಂಚಬೇಕು. ಅವರಿಗೆ ಉತ್ಪಾದನೆ ಮಾಡಲು ಬೇಕಾಗಿರುವಂತಹ ವ್ಯವಸ್ಥೆ ಮಾಡಬೇಕು, ಬರೀ ಭೂಮಿ ಕೊಟ್ಟರೆ ಸಾಲದು. ಆಗ ಮಾತ್ರ ಹಳ್ಳಿಗಾಡಿನ ಕೋಟ್ಯಾಂತರ ಅನಕ್ಷರಸ್ಥ ನಿರುದ್ಯೋಗಿಗಳಿಗೆ ಉದ್ಯೋಗ ಕೊಟ್ಟಂತಾಗುತ್ತದೆ. ಆದ್ದರಿಂದ ಹಳ್ಳಿಗಾಡಿನ ಅನಕ್ಷರಸ್ಥ ನಿರುದ್ಯೋಗಿಗಳಿಗಾಗಲಿ ಇನ್ನೊಂದು ಕಡೆ ಕೋಟ್ಯಾಂತರ ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಕಾರ್ಯಕ್ರಮವಾಗಲು ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆ ಕಾರ್ಯಕ್ರಮಗಳು ಇಲ್ಲಿಲ್ಲ. ಇನ್ನು ಇದಕ್ಕೆ ಹೊಂದಿಕೊಂಡಿರುವುದು ಶಿಕ್ಷಣ. ಅಧ್ಯಕ್ಷರೇ, ಶಿಕ್ಷಣಕ್ಕೆ ಕೊಟ್ಟಿರುವುದು 7.88 ಪರ್ಸೆಂಟ್. ಇದು ಒಂದು ರಾಜ್ಯದ ಅಭಿವೃದ್ಧಿಗೆ ಮೂಲಭೂತ ಅವಶ್ಯಕತೆಯಾಗಿರುವುದು ಶಿಕ್ಷಣ. ಅದಕ್ಕೇ ನಾವು ಕೊಡುತ್ತಿರುವ ಆದ್ಯತೆಯೇನು? ಶಿಕ್ಷಣಾಭಿವೃದ್ಧಿಯಾಗದೆ ರಾಜ್ಯ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿಲ್ಲ. ಆದರೆ ಇಲ್ಲೇನಾಗಿದೆ ಎಂದರೆ ಇದೊಂದು ಸಾಮಾಜಿಕ ಜವಾಬ್ದಾರಿಯಾಗಿರಬೇಕಾದ ವಿಭಾಗ ಇದರಲ್ಲೂ ಕೂಡ ಲಾಭನಷ್ಟಗಳ ಲೆಕ್ಕಾಚಾರದಲ್ಲಿ ತೊಡಗಿದ್ದೇವೆ. ಅಂದರೆ ಶಿಕ್ಷಣ ಮೇಲೆ ಹಣ ಖರ್ಚು ಮಾಡಿದರೆ ನಮಗೆ ಲಾಭವೆಷ್ಟು? ನಷ್ಟವೆಷ್ಟು ಎಂದು ಲೆಕ್ಕಹಾಕುವುದು. ಅನುತ್ಪಾದಕಕ್ಷೇತ್ರವೆನ್ನುವುದು. ಆದರೆ ಸರ್ಕಾರ ಒಂದು ಕಡೆ ಹೇಳುತ್ತದೆ, ನಮಗೆ ಲಭ್ಯವಿರುವ ಅತ್ಯುನ್ನತ ತಂತ್ರಜ್ಞಾನ ವಿಜ್ಞಾನ ಇವುಗಳನ್ನು ಉಪಯೋಗಿಸಿ ರಾಜ್ಯದ ಅಭಿವೃದ್ಧಿ ಮಾಡಬೇಕೆಂದು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಈ ಅತ್ಯುನ್ನತ ತಂತ್ರಜ್ಞಾನ ಕದಲೆಕಾಯಿಯಂತೆ ಭೂಮಿಯಲ್ಲಿ ಬೆಳೆಯುವುದಿಲ್ಲ. It is a scientific research, it is a social research; it is an econmic research which ultimately produces the intellectural capacity of the country and the ultimate result is high quality of technology and science; ಅದನ್ನು ಉಪಯೋಗಿಸಿಕೊಂಡು ಸಾವಿರಾರು ಕೋಟಿ ರೂ. ಉತ್ಪಾದನ ಮಾಡಲು ನೀವು ತಯಾರಿದ್ದೀರಿ. ಆದರ ಆ ಅತ್ಯುನ್ನತ ಮಿದುಳನ್ನು ತಯಾರು ಮಾಡುವ

ಶಿಕ್ಷಣಕ್ಕೆ ಮಾತ್ರ ಲಾಭನಷ್ಟ ಲೆಕ್ಕಹಾಕುತ್ತೀರಿ. ಇದು ಯಾವ ಸಾಮಾಜಿಕ ನ್ಯಾಯ? ಇದ್ಯಾವ ನೀತಿ ನಿರೂಪಣೆ? ಶಿಕ್ಷಣ ಒಂದು ದೇಶದ ಮೆದುಳು. ಅದು ಸಮರ್ಪಕವಾಗಿ ಕೆಲಸ ಮಾಡುವುದನ್ನು ನಿಲ್ಲಿಸಿದರೆ ಇಡೀ ದೇಶ ನಾಶವಾಗುತ್ತದೆ. ಶರೀರದಲ್ಲಿ ಒಂದು ಕೈ ಹೋದರೆ ಕಾಲು ಹೋದರೆ ಆಪರೇಟ್ ಮಾಡಿ ಬೇರೆ ಹಾಕಬಹುದು. ಬದಲಿ ಹೃದಯ ಜೋಡಿಸುವ ವಿಜ್ಞಾನ ಇದೆ if any part of the body becomes infructuous, it can be replaced, but if brain becomes infructuous, it cannot be replaced and the whole body becomes infructuous.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಪರಿಸ್ಥಿತಿ ಸರ್ಕಾರದ್ದಾಗಿದೆ ಎನ್ನುತ್ತೀರೋ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಒಂದೇ ಸರ್ಕಾರ ಶಿಕ್ಷಣ ಧೋರಣೆ ರೂಪಿಸಲು ಸಾಧ್ಯವಿಲ್ಲ.

MR. SPEAKER : Mr. Reddy has been raising a very important subject. This is only a State Budget. All the issues you have raised now come under a wider jurisdiction. Karnataka is under the Federal system. Now under the federal system of Government, they don't permit industrial policy of this country or the economic policy of this country.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ತಪ್ಪು ತಿಳಿಯಬೇಡಿ. ನನಗೆ ರಾಜ್ಯಸರ್ಕಾರದ ಇತಿಮಿತಿಗಳು ಸ್ಪಷ್ಟವಾಗಿ ಗೊತ್ತಿದೆ. The State Government are glorious Municipalities. Now-a-days the whole economic power lies in the Central Government. The economic policy is framed by the Central Government. I know the limitations of the State Governments but inspite of that, within their limitations, the State Government if it tries honestly to evolove a programme it can doing that. There are so many examples of the State Governments ಇದು ಸ್ಟೇಟ್ ಲಿಸ್ಟಲ್ಲೂ ಇದೆ. ಸೆಂಟ್ರಲ್ ಲಿಸ್ಟಲ್ಲೂ ಇದೆ, ಕನಕರೆಂಟ್ ಲಿಸ್ಟಲ್ಲೂ ಇದೆ. ಇದಕ್ಕೆ ಮನಾಪಲಿ ಇಲ್ಲ. The Government is basic responsibility is there. ಆದ್ದರಿಂದ ರಾಜ್ಯ ಸರ್ಕಾರವೊಂದು ತನ್ನ ಇತಿಮಿತಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಖಂಡಿತವಾಗಿ ಸಂಪೂರ್ಣವಾಗಿ ಒಂದು ವ್ಯವಸ್ಥೆಯನ್ನು ಬದಲಾಯಿಸುವ ಶಕ್ತಿ ಯಾವುದೇ ಒಂದು ರಾಜ್ಯ ಸರ್ಕಾರಕ್ಕೆ ಇರುತ್ತದೆಂದು ನಾನು ಹೇಳುತ್ತಿಲ್ಲ, ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ they can loosen the damage atleast. ಆ ದಿಕ್ಕಿನಲ್ಲಿ ಪ್ರಯತ್ನ ಮಾಡಲಿ. ಅದರ ಜೊತೆಗೆ ಇಲ್ಲೂ ಕೂಡ ಲಾಭನಷ್ಟಗಳ ವ್ಯಾಪಾರ. ಅಧ್ಯಕ್ಷರೇ, ತಾವು ತಪ್ಪು ತಿಳಿದುಕೊಳ್ಳದಿದ್ದರೆ ಒಂದು ಮಾತು ಹೇಳುತ್ತೇನೆ. ಹೆಂಡತಿ ಮಕ್ಕಳನ್ನು ಕಟ್ಟಿಕೊಂಡರೆ ಖರ್ಚು ಬರುತ್ತದೆ ಎಂದು ಈ ದೇಶದಲ್ಲಿ ಯಾರಾದರೂ ಮದುವೆ ಮಾಡಿಕೊಳ್ಳದೇ ಇದ್ದಾರೆಯೇ?

ಶ್ರೀ ಸಿ. ಬೈರೇಗೌಡ : ನೀವೇ ಇದ್ದೀರಲ್ಲ!

ಅಧ್ಯಕ್ಷರು : ನನಗೆ ಗೊತ್ತಿರುವಂತೆ ಅದೆಲ್ಲಾ ಅವರು ಮಾಡಿಕೊಂಡಿಲ್ಲ. He is a committed Communist Party worker. He has dedicated himself for the services ಬೈರೇಗೌಡರ ಮಾತಿನ ಅರ್ಥ ಏನೆಂದರೆ ನಮಗೆ ಪ್ಲಾನ್ ಮಾಡುತ್ತಾರಲ್ಲಾ ಅವರೆಲ್ಲಾ ಯಾವ ಥರದವರೆಂದರೆ ಬಸ್ಸನಲ್ಲೇ ಓಡಾಡದಿರುವವರು ಬಸ್ ಬಗ್ಗೆ ಮಾತನಾಡುವುದು, ಅಂಗಡಿಗೆ ಹೋಗಿ ತರಕಾರೀನೇ ತರದೇ ಇರುವರು ತರಕಾರಿ ಬಗ್ಗೆ ಮಾತನಾಡುವುದು, ಹಸುವನ್ನೇ ನೋಡದೆ ಹಾಲಿಗೆ ರೇಟ್ ಕೊಡಬೇಕೆನ್ನುವವರು ಈ ತರಹದವರ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನೂ ಕೂಡ ಅದನ್ನು ಸ್ಪಷ್ಟವಾಗಿ ನಿಜವಾಗಿ ಒಪ್ಪುತ್ತೇನೆ. ರಾಜ್ಯಶಾಸ್ತ್ರದ ಎಬಿಸಿಡಿ ಗೊತ್ತಿಲ್ಲದೇ ಇರುವವರು ಇವತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಾ ಇರುತ್ತಾರೆ.

ಶ್ರೀ ಸಿದ್ಧರಾಮಯ್ಯ : ಪ್ರಜಾಪ್ರಭುತ್ವ ಒಪ್ಪಿಕೊಂಡ ಮೇಲೆ ಇವೆಲ್ಲಾ ಅನಿವಾರ್ಯವೆಂದು ತಿಳಿಯಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಅದನ್ನೇ ಹೇಳುತ್ತಿರುವುದು ಅದನ್ನು ನಾನು ಒಪ್ಪುತ್ತಿದ್ದೇನೆ. ನೀವು ಇಲ್ಲವೆಂದು ಹೇಳುತ್ತಿರುವುದು. ಬಸ್ಸಿನಲ್ಲಿ ಓಡಾಡುವವನಿಗೆ ಮಾತ್ರ ಬಸ್‌ನ ವಿಷಯ ಗೊತ್ತಾಗಬೇಕು ಎಂದು ನಾನಲ್ಲ ಹೇಳುತ್ತಿರುವುದು.

MR. SPEAKER : Certificates gathered by few individuals in Universities have lead to confer a status on them as intellectuals which is a very unfortunate thing. Kamaraj Nadar was the greatest of the intellectuals. He did not possess any certificates. He had that earnestness....... ಅವರಿಗೆ ಈ ದೇಶದ ಬಗ್ಗೆ ಜನರ ಬಗ್ಗೆ ಪ್ರೀತಿ ಇತ್ತು. ಇವತ್ತು ಡಾಕ್ಟರೇಟಗಳನ್ನು ಇಟ್ಟುಕೊಂಡವರು ಅವರ ಬಗ್ಗೆ ಲೇವಡಿ ಮಾಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಬಗ್ಗೆ ಎರಡನೇ ಮಾತೇ ಇಲ್ಲ. ಯೂನಿವರ್ಸಿಟೀಸ್ ಸರ್ಟಿಫಿಕೇಟ್ ಕೊಟ್ಟರೆ ಅವರು ಭಾರಿ ಬುದ್ಧಿವಂತರು. ಯೂನಿವರ್ಸಿಟೀಸ್ ಸರ್ಟಿಫಿಕೇಟ್ ಪಡೆಯದೇ ಇರುವವರೆಲ್ಲಾ ದಡ್ಡರೆಂದು ಹೇಳತಕ್ಕಂಥಾದ್ದನ್ನು ನಾನು ಒಪ್ಪತಕ್ಕಂತಹ ಮನುಷ್ಯ ಅಲ್ಲ.

ಅಧ್ಯಕ್ಷರು : ಮಾನ್ಯ ಮೊಯಿಲಿಯವರು ಹೇಳಬೇಕು he should come to our rescue. He was the Finance Minister and the Chief Minister, ನಮ್ಮ ಪ್ಲಾನರ್ಸ್ ಎಲ್ಲಾ ಅವರೇ ಅಲ್ಲವೇ, ಅವರೇ ತಾನೇ ನಮ್ಮ ಪ್ಲಾನರ್ಸ್ ? ಎಲ್ಲಾ ಫಾರ್ಮುಲೇಟ್ ಮಾಡುವುದು ಅವರೇ ತಾನೇ? ಸೂಡೋ ಇಂಟಲೆಕ್ಚುಯಲ್.......

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಲ್ಲರೂ ಕೂಡ ಇಂಟಲೆಕ್ಚುಯಲ್ಸ್ ಎಂದು ಹೇಳುವುದಕ್ಕಾಗುವುದಿಲ್ಲ. ಅಥವಾ ಎಲ್ಲರೂ ರಿಯಲ್ ಇಂಟಲೆಕ್ಚುಯಲ್ಸ್ ಎಂದು...

ಅಧ್ಯಕ್ಷರು : ಅವರು ಗಡ್ಡ ಬಿಟ್ಟು ಅದರ ಜೊತೆಯಲ್ಲಿ ಒಂದು ಬ್ಯಾಗ್ ಒಂದು ಹಾಕಿ ಬಿಟ್ಟರಂತೂ

ಆಮೇಲೆ ಅವರ ಕ್ವೊಶ್ಚನ್ನೇ ಇಲ್ಲ he is the biggest intellectual.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೃಷಿ ಮತ್ತು ಕೈಗಾರಿಕೆ ಒಂದು ದೇಶದ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತವೆ. ಕೃಷಿ ರಂಗದ ಪ್ರಮುಖವಾದ ಅಂಶಗಳು ಮೂರು. ಒಂದು ಭೂಮಿಯ ಪ್ರಶ್ನೆ ಇನ್ನೊಂದು ಬೆಳೆಯ ಪ್ರಶ್ನೆ ಮತ್ತೊಂದು ಕೂಲಿಯವ ಪ್ರಶ್ನೆ. ಈ ಮೂರು ಕೂಡ ಕೃಷಿಯಲ್ಲಿ ಪ್ರಧಾನ ಪಾತ್ರವನ್ನು ವಹಿಸತಕ್ಕಂತಹ ಅಂಶಗಳು. ಅವರ ಬಗ್ಗೆ ಯಾವುದೇ ಯೋಜನೆ ಬಡ್ಜೆಟ್ಟಿನಲ್ಲಿ ಇಲ್ಲ. ಯಾವುದೇ ರೀತಿಯಾದಂತಹ ನಿರ್ದಿಷ್ಟವಾದ ಕಾರ್ಯಕ್ರಮ ಇಲ್ಲ. ಇವತ್ತು ಬಗರ್ ಹುಕುಂ ಸಾಗುವಳಿ ಭೂಮಿಯನ್ನು ಹಂಚಿಕೆ ಮಾಡಲಿಕ್ಕೆ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ಮಾಡಿದ್ದಾರೆ.ತೀರ್ಮಾನವಾಗಿ 12 ತಿಂಗಳಾಗಿವೆ. ನನಗೆ ಗೊತ್ತಿರತಕ್ಕಂತಹ ಮಾಹಿತಿ ಪ್ರಕಾರ ಸುಮಾರು ಅರ್ಧ ತಾಲ್ಲೂಕುಗಳಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವವರನ್ನು ಸಕ್ರಮಗೊಳಿಸಲು ಸಮಿತಿಗಳನ್ನು ನೇಮಕ ಮಾಡಿಲ್ಲ. ಇದೇನೂ ದೊಡ್ಡ ಪಾಲಿಸಿ ಪ್ರೋಗ್ರಾಂ ಅಲ್ಲ. ಇದು ಅಡ್ಮಿನಿಸ್ಟ್ರೇಟಿವ್ ಮ್ಯಾಟರ್. ಇದನ್ನು ಪೂರೈಸಲಿಕ್ಕೆ 12 ತಿಂಗಳು ಬೇಕಾ? ನೀವು ಯಾರನ್ನಾದರೂ ಆ ಸಮಿತಿಗೆ ಹಾಕಿ, ಅದು ನಿಮಗೆ ಬಿಟ್ಟದ್ದು, ನಿಮಗೆ ಅಧಿಕಾರ ಕೊಟ್ಟಿದ್ದಾರೆ. ನಿಮಗ ಬೇಕಾದವರನ್ನು ಹಾಕಿ. ನೇಮಕ ಮಾಡಿಕೊಳ್ಳಿ. ಅದನ್ನು ಮಾಡಲಿಕ್ಕೆ ಕೂಡ 12 ತಿಂಗಳು ನಿಮಗ ಸಾಕಾಗಲಿಲ್ಲವೆಂದು ಇದು ಖಂಡಿತವಾಗಿಯೂ ಕೃಷಿಗೆ ಮೂಲ ಆಧಾರವಾಗಿರತಕ್ಕಂಥವರ ಬಗ್ಗೆ ನಿಮಗೆ ಇರತಕ್ಕಂತಹ ನಿರ್ಲಕ್ಷ್ಯ ಭಾವನೆಯನ್ನು ತೋರಿಸುತ್ತದೆ. ಕೃಷಿ ಬಗ್ಗೆ ಮಾನ್ಯ ಬೈರೇಗೌಡರು ಪ್ರಾಮಾಣಿಕವಾದ ಚಿಂತನೆ ಮಾಡಿದ್ದಾರೆ. ಏನಾದರೂ ಇದರಲ್ಲಿ ಬದಲಾವಣೆ ತರಬೇಕೆಂದೂ, ಕೃಷಿಯಲ್ಲಿರತಕ್ಕಂತಹ ಜನರನ್ನ ರಕ್ಷಣೆ ಮಾಡಬೇಕೆಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಅವರ ಪ್ರಾಮಾಣಿಕತೆ ಬಗ್ಗೆ ಎರಡು ಮಾತು ಇಲ್ಲವೇ ಇಲ್ಲ. ಅವರು ಇಲ್ಲಿಯೇ ಕುಳಿತಿದ್ದಾರೆ. ಅವರು ಈಗ ನಮ್ಮ ಪಾರ್ಟಿಯಲ್ಲಿ ಇಲ್ಲ. ಜನತಾ ದಳದಲ್ಲಿ ಇದ್ದಾರೆ. ಹೋದವರ ಬಗ್ಗೆ ಇಲ್ಲಿ ಪ್ರಶ್ನೆ ಇಲ್ಲ. ಇದ್ದವರ ಬಗ್ಗೆ ಪ್ರಶ್ನೆ ಇಲ್ಲಿ ಇರುವುದು. ರೈತ ಬೆಳೆಯತಕ್ಕಂತಹ ಬೆಳೆಗಳಿಗೆ ಕನಿಷ್ಟ ಲಾಭದಾಯಕ ಬೆಲೆ ಕೊಡಿ ಎನ್ನುವುದು ದುಬಾರಿಯಾಗುತ್ತದೆಯೋ ಏನೋ, ಅವರೆ ಕನಿಷ್ಟ ಅವನ ಬೆಳೆಗೆ ನಷ್ಟವಾದ ರೀತಿಯಲ್ಲಿ ಒಂದು ವ್ಯವಸ್ಥೆಯಾಗಬೇಕು. ಅದಕ್ಕೆ ಬಡ್ಜೆಟಿನಲ್ಲಿ ಏನೂ ವ್ಯವಸ್ಥೆ ಇಲ್ಲ. ಮಾನ್ಯ ಬೈರೇಗೌಡರು ಅಧಿಕಾರಿಗಳನ್ನು ನಿಯಂತ್ರಣ ಮಾಡುವುದರಿಂದ ರೈತರಿಗೇನಾದರೂ ಪ್ರಯೋಜನವಾಗುತ್ತದೆಂದು ಹೇಳಿದರೆ ಖಂಡಿತ ನಾನು ಅದನ್ನು ನಂಬುವುದಿಲ್ಲ. ಏಕೆಂದರೆ ಇಟ್ ನೀಡ್ಸ್ ಡೆಫಿನೆಟ್ ಪಾಲಿಸಿ. ರೈತರು ಬೆಳೆಯತಕ್ಕಂತಹ ಬೆಳೆಗಳಿಗೆ ನಷ್ಟವಾಗದ ರೀತಿಯಲ್ಲಿ ನೋಡಬೇಕಾದರೆ ಒಂದು ಡೆಫನೆಟ್ ಆದ ಪಾಲಿಸಿ ಬೇಕು. ಅದರಲ್ಲಿ ಮುಖ್ಯವಾದ ಅಂಶ ಯಾವುದು. the imbalance which now exists between the industrial products and the agrarian products. This is the most crucial point where agrarian sector is thrashed every day in and out. ಏಕೆಂದರೆ ರೈತನು ಕೊಂಡುಕೊಳ್ಳತಕ್ಕಂಥಾದ್ದೆಲ್ಲವು ರೇಟ್ ಜಾಸ್ತಿ. ಅವನು ಮಾರಾಟ ಮಾಡುವುದೆಲ್ಲಾ ರೇಟ್ ಕಡಿಮೆ.

ಅಧ್ಯಕ್ಷರು : ಬೆವರಿಗೆ ಬೆಲೆ ನಿಗದಿ ಮಾಡಿಲ್ಲ. ಬೆವರನ್ನು ನಿವಾರಣೆ ಮಾಡುವ ಸೆಂಟಿಗ ಬೆಲೆ ನಿಗಧಿಮಾಡಿದ್ದಾರೆ.

ಶ್ರೀ ಜೆ.ಪಿ. ಶ್ರೀರಾಮರೆಡ್ಡಿ : ಹೌದು ಅಧ್ಯಕ್ಷರೆ; ಕೈಗಾರಿಕಾ ವಸ್ತುಗಳ ಬೆಲೆಗಳ ಮತ್ತು ಕೃಷಿ ವಲಯಗಳಲ್ಲಿರತಕ್ಕಂತಹ ಬೆಲೆಗಳ ಮಧ್ಯೆ ಇರತಕ್ಕಂತಹ ಇಂಬ್ಯಾಲೆನ್ಸ್ ಅನ್ನು ಕಡಿಮೆ ಮಾಡಲಿಕ್ಕೆ ಯೋಜನೆ ಇಲ್ಲ. ಇದೂ ಕೂಡ ಸ್ವಲ್ಪ ಮಟ್ಟಿಗೆ ಕೇಂದ್ರ ಸರಕಾರದ ವ್ಯಾಪ್ತಿಗೆ ಬರತಕ್ಕಂತಹ ವಿಷಯವೇ. ಸಂಪೂರ್ಣವಾಗಿ ರಾಜ್ಯ ಸರಕಾರದ್ದಲ್ಲ. ಆದರೆ ರಾಜ್ಯ ಸರಕಾರವೂ ಕೂಡ ತನ್ನ ಸ್ವಯಂ ಶಕ್ತಿಯಿಂದ ವೈಯಕ್ತಿಕ ವಿಚಾರದಲ್ಲಿ ಪ್ರಯತ್ನ ಮಾಡಬೇಕು. ಇವತ್ತು ಏನಾಗಿದೆ ಎಂದರೆ ಈ ಇಂಬ್ಯಾಲೆನ್ಸ್‌ನಿಂದಾಗಿ ರೈತ ದಿನೇ ದಿನೇ ಪಾಪರ್ ಆಗುತ್ತಿದ್ದಾರೆ. ಇದು ಮೂಲವಾಗಿರತಕ್ಕಂತಹ ಅಂಶ. ಇದನ್ನು ಸರಿಪಡಿಸದೆ ಕೃಷಿ ರಂಗದಲ್ಲಿ ಮೂಲಭೂತವಾದ ಬದಲಾವಣೆಯನ್ನು ಖಂಡಿತವಾಗಿ ತರಲಿಕ್ಕೆ ಸಾಧ್ಯವಿಲ್ಲ. ರೈತರನ್ನು ರಕ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ. ನಮ್ಮ ರೈತರಾಗಿ ಬೆಳೆದ ಮೂಟೆಗೆ ನಿಗದಿ ಮಾಡುವವರು ವ್ಯಾಪಾರ ಮಾಡುವವರು. ಅದೇ ಒಬ್ಬ ವ್ಯಾಪಾರಿ ಬೆಂಕಿ ಪೊಟ್ಟಣ ಅಂಗಡಿಯಲ್ಲಿ ಮಾರಿದರೆ ಅದಕ್ಕೆ ಇದು 40-60 ಪೈಸೆ ಎಂದು ಮುದ್ರೆ ಹಾಕುತ್ತಾರೆ. ಆ ವ್ಯಾಪಾರಸ್ಥನಿಗೆ ಮಾತ್ರ ನೀವು ಆ ಹಕ್ಕನ್ನು ಅಂದರೆ ಮುದ್ರೆ ಹಾಕುವ ಹಕ್ಕನ್ನು ಕೊಟ್ಟಿದ್ದೀರಿ. ಅದೇ ರೈತರಿಗೆ ಮಾತ್ರ ಈ ಹಕ್ಕು ಇಲ್ಲ. ಅವನು ಕಡಲೆಕಾಯಿ ಬೆಳೆಯಲಿ ತರಕಾರಿ ಬೆಳೆಯಲಿ ಟಮೋಟೋ ಬೆಳೆಯಲಿ ರಾಗಿ ಬೆಳೆಯಲಿ ಅದರ ಬೆಲೆ ನಿರ್ಧಾರ ಮಾಡುವುದು ಎಲ್ಲೋ ಮೂಲೆಯಲ್ಲಿ ಕೂತಿರತಕ್ಕಂತಹ ಜನ. ಅವರು ಆ ಬೆಲೆ ನಿರ್ಧಾರ ಮಾಡುತ್ತಾರೆ. ರೈತನು ಕೊಂಡುಕೊಳ್ಳತಕ್ಕಂತಹ ಎಲ್ಲಾ ವಸ್ತುಗಳ ಉತ್ಪಾದನಾ ಬೆಲೆಯನ್ನು ನಿಗದಿ ಮಾಡುವ ಹಕ್ಕು ಅವರಿಗೇ ಕೊಟ್ಟಿದ್ದಾರೆ. ಈ ವ್ಯವಸ್ಥೆ ಇರುವವರಿಗೆ ಕೃಷಿ ರಂಗದಲ್ಲಿ ಮೂಲಭೂತವಾದ ಬದಲಾವಣೆ ತರಲಿಕ್ಕೆ ಸಾಧ್ಯವಿಲ್ಲ. ರೈತರನ್ನು ಉಳಿಸಲಿಕ್ಕೆ ಸಾಧ್ಯವಿಲ್ಲ. ಆ ದಿಕ್ಕಿನಲ್ಲಿ ಸ್ವಲ್ಪ ಪ್ರಾಮಾಣಿಕ ಪ್ರಯತ್ನವಾದರೂ ಮಾಡಲಿಕ್ಕೆ ಸಾಧ್ಯತೆ ಇತ್ತು. ಅದು ಆಗಲಿಲ್ಲ. ಇವತ್ತು ಕೃಷಿ ಕಾರ್ಮಿಕರು ಹಳ್ಳಿ ಬಡವರ ಬಗ್ಗೆ ಗ್ರಾಮೀಣ ಅಭಿವೃದ್ಧಿ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ನಾನು ತಮಗೆ ಹೇಳುತ್ತೇನೆ. ಹಸಿರು ಕಾರ್ಡುಗಳನ್ನು ಹಂಚತಕ್ಕಂತಹ ವ್ಯವಸ್ಥೆ ಹಸಿರು ಕಾರ್ಡುಗಳನ್ನು ಹಂಚುತ್ತೇವೆಂದು ಹೋದ ವರ್ಷ ಅಕ್ಟೋಬರ್ 2ನೇ ತಾರೀಖು ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಈಗ ಮಾರ್ಚ್ ತಿಂಗಳಲ್ಲಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಇದುವರೆಗೆ ಕೇವಲ 10 ಪರ್ಸೆಂಟ್ ಹಸಿರು ಕಾರ್ಡುಗಳು ವಿತರಣೆಯಾಗಿಲ್ಲ. ಹಳ್ಳಿಗಾಡಿನಲ್ಲಿ ಇರತಕ್ಕಂತಹ ಬಡತನವನ್ನು ನಿರ್ಮೂಲ ಮಾಡುತ್ತೇವೆಂದು ಬಡ್ಜೆಟ್ಟಿನಲ್ಲಿ ಹೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ? ನಿರ್ದಿಷ್ಟವಾದ ಧೋರಣೆ, ಗುರಿ ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ ಅದು ಹೇಗೆ ಸಾಧ್ಯವಾಗುತ್ತದೆ? ಕೈಗಾರಿಕಾ ರಂಗದಲ್ಲಿ ಪ್ರಮುಖವಾಗಿರತಕ್ಕಂತಹ ಇನ್ನೊಂದು ಅಂಶ ಕಾರ್ಮಿಕರು. ಈ ಸರಕಾರಕ್ಕೆ ಕಾರ್ಮಿಕರ ಬಗ್ಗೆ ಒಂದು ಧೋರಣೆ ಇಲ್ಲ ಒಂದು ನೀತಿ ಇಲ್ಲ. ಈ ಸರಕಾರ ಬಂದು 14 ತಿಂಗಳಾಗಿದೆ. ಅಸಂಘಟಿತ ಕಾರ್ಮಿಕ ವಲಯದಲ್ಲಿರತಕ್ಕಂತಹ ಲಕ್ಷಾಂತರ ಜನ ಕಾರ್ಮಿಕರು ಯಾರಿದ್ದಾರೆ ಅವರಿಗೆ ಕನಿಷ್ಠ ವೇತನ ನಿಗದಿ ಮಾಡಿ ಇದುವರೆಗೂ ನೋಟಿಫೈ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಕಾರ್ಮಿಕ ಮಂತ್ರಿಗಳು ಹೆಚ್ಚು ಇಲ್ಲಿ ಇರುವುದೇ ಇಲ್ಲ. ಈ ಸದನದಲ್ಲಿ ನಾನು ನೋಡುತ್ತಿದ್ದೇನೆ ಹೆಚ್ಚು ಅಂದರೆ ಅವರು ಅರ್ಧಗಂಟೆ ಇಲ್ಲಿ ಕೂತಿರಬಹುದು ಅಷ್ಟೆ. ಈ ಸರಕಾರಕ್ಕೆ ಕಾರ್ಮಿಕರ ಬಗ್ಗೆ ಏನು ಧೋರಣೆ ಇದೆ? ಕಾರ್ಮಿಕರ

ವಿರುದ್ಧವಾದ ಧೋರಣೆ ಇರಬೇಕು ಅಥವಾ ಕಾರ್ಮಿಕರ ಪರವಾದ ಧೋರಣೆಯಾದರೂ ಇರಬೇಕು ಏನೂ ಇಲ್ಲ. ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಸಾವಿರಾರು ಜನ ನೇಕಾರರು ಬೆಂಗಳೂರು ನಗರದಲ್ಲೇ ಇದ್ದಾರೆ ಅವರು ಒಂದು ವರ್ಷದಿಂದ ಹೋರಾಟ ಮಾಡುತ್ತಿದ್ದಾರೆ. ಕನಿಷ್ಠ ಅವರನ್ನು ಕರೆದು ನಿಮ್ಮ ಸಮಸ್ಯೆ ಏನು ನಿಮ್ಮ ಸಮಸ್ಯೆಗೆ ನಮ್ಮ ಸರಕಾರವೇನು ಪರಿಹಾರ ಕೊಡಲಿಕ್ಕೆ ಸಾಧ್ಯವಿದೆ ಎಂದು ಕೂರಿಸಿ ಸೌಜನ್ಯದಿಂದ ಮಾತನಾಡಿ ಅವರ ಸಮಸ್ಯೆಗೆ ಸ್ಪಂದಿಸತಕ್ಕಂತಹ ಮನಸ್ಸು ಇಲ್ಲ. ಅದೇ ರೀತಿಯಲ್ಲಿ ಸಾವಿರಾರು ಜನ ಮಹಿಳೆಯರು ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಒಂದೇ ಒಂದು ಉದಾಹರಣೆಯನ್ನು ತಮ್ಮ ಮುಂದಿಡಲಿಕ್ಕೆ ಪ್ರಯತ್ನಿಸುತ್ತೇನೆ. ಇಲ್ಲಿನ ನಮ್ಮ ಶಾಸಕ ಮಿತ್ರರಿಗೆಲ್ಲಾ ಅವರೊಂದು ಮನವಿ ಕೊಟ್ಟಿದ್ದಾರೆ. ಅಶೋಕ ಸಾಮ್ರಾಟ್‌ದಲ್ಲಿ ಕೆಲಸ ಮಾಡತಕ್ಕಂತಹ 7 ಸಾವಿರ ಮಹಿಳಾ ಕಾರ್ಮಿಕರು ಒಂದು ಮನವಿ ಕೊಟ್ಟಿದ್ದಾರೆ. 7 ಸಾವಿರ ಜನ ಮಹಿಳೆಯರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಮಹಿಳೆಯರಿಗೆ ಎಂತಹ ಮಾನಸಿಕವಾದ ಹಿಂಸೆ ಕೊಡುತ್ತಿದ್ದಾರೆಂದರೆ ಆತನ ಫ್ಯಾಕ್ಟರಿ 4-5 ಕಡೆ ಇವೆ. ಅವನು ಮಾಡತಕ್ಕಂತಹ ದಬ್ಬಾಳಿಕೆ ಆತನು ಮಾಡತಕ್ಕಂತಹ ಶೋಷಣೆ ದೌರ್ಜನ್ಯದ ವಿರುದ್ಧ ಯಾರಾದರೂ ಮಾತನಾಡಿದರೆ ಅವರನ್ನು ಈ ಫ್ಯಾಕ್ಟರಿಯಿಂದ ಆ ಫ್ಯಾಕ್ಟರಿಗೆ, ಆ ಫ್ಯಾಕ್ಟರಿಯಿಂದ ಈ ಫ್ಯಾಕ್ಟರಿಗೆ ಶಿಫ್ಟ್ ಮಾಡುವುದು. ಅವರಿಗೆ ಕಾವಲನ್ನು ಇಡುವುದು ನಡೆಯುತ್ತಿದೆ. ನೀವು ಪೋಲೀಸ್ ಸ್ಟೇಷನಗಳಲ್ಲಿ ಮಹಿಳಾ ಅಪರಾಧಿಗಳಿಗೆಂದು ಮಹಿಳೆಯರನ್ನು ಇಡುತ್ತಿದ್ದೀರಿ. ಮಹಿಳಾ ಅಪರಾಧಿಗಳನ್ನು ರಕ್ಷಣೆಮಾಡಲಿಕ್ಕೆ ಮಹಿಳಾ ಪೋಲೀಸರನ್ನು ಠಾಣೆಗಳಲ್ಲಿ ನೀವು ಇಡುತ್ತೀದ್ದೀರಿ. ಆ ಫ್ಯಾಕ್ಟರಿ ಮಾಲಿಕ ಗೂಂಡಾಗಳನ್ನು ಇಟ್ಟಿದ್ದಾರೆ. ಸರಕಾರಕ್ಕೆ ಸುಮಾರು ಸಲ ಮನವಿಗಳನ್ನು ಕೊಟ್ಟಿದ್ದಾರೆ. ಗೃಹ ಮಂತ್ರಿಗಳ ಜೊತೆ ವ್ಯಯಕ್ತಿಕವಾಗಿ ಚರ್ಚೆ ಮಾಡಿ ಹೇಳಿದ್ದೇನೆ. ಆದರೂ ಸಹ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಲೇಬರ್ ಕೋರ್ಟಿನಲ್ಲಿ ಆತನ ಮೇಲೆ ಹಲವಾರು ಮೊಕದ್ದಮೆಗಳನ್ನು ಹೂಡಿ ನೀವು ತಪ್ಪು ಮಾಡಿದ್ದೀಯಾ ಎಂದು ಆತನಿಗೆ ಜುಲ್ಮಾನೆ ಹಾಕಿದ್ದಾರೆ. ಕೇಸ್ ನಂ 25, 80,99-ಸೊನ್ನೆ ಬಾರ್ 95 ಒಂದು ಕೇಸಲ್ಲಿ 1640 ರೂಪಾಯಿ ದಂಡವನ್ನು ಸಾಮ್ರಾಟ್ ಅಶೋಕ ಅವರಿಗೆ ಹಾಕಿದ್ದಾರೆ. ಇನ್ನೊಂದು ಕೇಸನಲ್ಲಿ 26.312/95-ನಲ್ಲಿ 4,500 ರೂ.ಗಳನ್ನು ದಂಡ ಹಾಕಿದ್ದಾರೆ. ಮತ್ತೊಂದು ಕೇಸ ನಂ. 26054/95ನಲ್ಲಿ 2250 ರೂ.ಗಳನ್ನು ದಂಡ ವಿಧಿಸಿದ್ದಾರೆ. ಇನ್ನೊಂದು ಕೇಸಿನಲ್ಲಿ ಕೇಸ್ ನಂ. 26/31-2-95 ಆ ಕೇಸನಲ್ಲಿ 4500 ರೂಪಾಯಿ ಜುಲ್ಮಾನೆ ಹಾಕಿದ್ದಾರೆ. ಕಾರ್ಮಿಕರ ಕಾನೂನುಗಳನ್ನು ಉಲ್ಲಂಘನೆ ಮಾಡುತ್ತಿದ್ದೀಯಾ, ಒಪ್ಪಂದಗಳನ್ನು ಮುರಿಯುತ್ತಿದ್ದೀಯಾ ಎಂದು ಹೇಳಿ. 26054:95ರ ಕೇಸನಲ್ಲಿ 2250 ರೂಪಾಯಿ ದಂಡ ಹಾಕಿದ್ದಾರೆ ಕಾರ್ಮಿಕ ಇಲಾಖೆಯವರು. ಅಲ್ಲಿ ಕೆಲಸ ಮಾಡುತ್ತಿರುವ ಪ್ರಾಮಾಣಿಕ ಕಾರ್ಮಿಕ ಅಧ್ಯಕ್ಷರನ್ನೂ ಕೂಡ ಅವನು ತನ್ನ ರಾಜಕೀಯ ಪ್ರಭಾವದಿಂದ ತನ್ನ ಹಣದ ಪ್ರಭಾವದಿಂದ ಇವತ್ತು ಸಾವಿರಾರು ಜನಕಾರ್ಮಿಕರಿಗೆ ಅವರು ಹಿಂಸೆ ಕೊಡುತ್ತಿದ್ದರೂ ಕೂಡ ಸರ್ಕಾರ ಗಮನಹರಿಸುತ್ತಿಲ್ಲ. ನಾನು ಒಂದು ವಿಷಯವನ್ನು ಇಲ್ಲಿ ಬಹಳ ಬೇಸರದಿಂದ ಹೇಳಬೇಕಾಗುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ನಿನ್ನೆ ದಿವಸ ಮಾತನಾಡುವಾಗ ಅಸಂಘಟಿತ ಕಾರ್ಮಿಕರು ಮತ್ತು ನೇಕಾರರ ಬಗ್ಗೆ ಮಾತನಾಡುತ್ತಿದ್ದರು. ಅವರು ಯಾವಕಾರಣಕ್ಕೆ ಪತ್ರ ಬರೆದಿದ್ದಾರೋ

ನನಗ ಗೊತ್ತಿಲ್ಲ. ವಿರೋಧಪಕ್ಷದನಾಯಕರು ಮುಖ್ಯಮಂತ್ರಿಗಳಿಗೆ ಕಾಗದವನ್ನು ಬರೆದಿದ್ದಾರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಯಾವ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡತಕ್ಕಂಥವರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಿರಿ. ಆ ಸಂಬಂಧಪಟ್ಟ ಕೆಲವು ಜನರು ನನ್ನ ಹತ್ತಿರವೂ ಬಂದಿದ್ದರು. ಕಾರ್ಮಿಕ ಇಲಾಖೆಯ ಅಧಿಕಾರಿಗಳು ದುರುದ್ದೇಶದಿಂದ, ಉದ್ದೇಶ ಪೂರ್ವಕವಾಗಿ ನೂರಾರು ಕೇಸುಗಳನ್ನು ಹಾಕುತ್ತಿದ್ದಾರೆ. ಅಲ್ಲಿರುವ ಕಾರ್ಮಿಕರಿಗೆ ಬೇಕಾದಂಥ ಎಲ್ಲಾ ಸವಲತ್ತುಗಳನ್ನು ನಾವು ಕೊಡುತ್ತಿದ್ದೇವೆ, ತಾವು ಗಮನಹರಿಸಿ ಬಂದರೆ ಇನ್ನೇನು ಅವರಿಗ ಅವಶ್ಯಕತೆ ಇದೆ, ಆ ಸವಲತ್ತುಗಳನ್ನು ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಆದರೆ ಈ ಕಾರ್ಖಾನೆಯೇ ಬಾಗಿಲು ಹಾಕುವ ಸ್ಥಿತಿಗೆ ಬಂದು ಆ ಕಾರ್ಮಿಕರು ಬೀದಿಪಾಲಾಗಬಾರದು ಎನ್ನುವ ಒಂದು ಪರಿಸ್ಥಿತಿ ಇದೆ ಎಂದು ನನಗೆ ತಿಳಿಸಿದರು. ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಆ ಕಾರ್ಮಿಕ ಇಲಾಖೆಯ ಅಧಿಕಾರಿ ಯಾವುದೋ ಬೇರೆ ಕಾರಣಕ್ಕೋಸ್ಕರ ಉದ್ದೇಶ ಪೂರ್ವಕವಾಗಿ ಅವರ ಮೇಲೆ ಪದೇ ಪದೇ ಕೇಸುಗಳನ್ನು ಏನು ಹಾಕುತ್ತಿದ್ದಾರೆ, ಇದರ ಬಗ್ಗೆ ಗಮನ-ಹರಿಸಬೇಕು ಎಂದು ಆ ರೀತಿಯ ಒಂದು ಪತ್ರವನ್ನು ಬರೆದಿದ್ದೇನೆ. ನಾನು ಒಂದು ಮಾತನ್ನು ತಮಗೆ ಸ್ಪಷ್ಟಮಾಡುವುದಕ್ಕೆ ಇಚ್ಛೆಮಾಡುತ್ತೇನೆ. ಕಳೆದ 83ರಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಕೃಷಿ ಕಾರ್ಮಿಕರು, ನೇಕಾರರು, ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಡವರ ಬಗ್ಗೆ ಸುಮಾರು 15-20 ವರ್ಷದಿಂದ ಹೋರಾಟ ಮಾಡಿಕೊಂಡು ಬಂದವನು. ನನ್ನ ಜೀವನದಲ್ಲಿ ಯಾವುದೇ ಮಾಲೀಕನ ಪರವಾಗಿ ಒಂದು ಶಬ್ದವನ್ನು ಈ ಸಭೆಯಲ್ಲಿ ನಾನು ಮಾತನಾಡಿಲ್ಲ. ಆ ಪ್ರವೃತ್ತಿ ನನ್ನಲ್ಲಿ ಇಲ್ಲ. ಆ ಪತ್ರದ ಉದ್ದೇಶ ಆ ಕಾರ್ಖಾನೆ ಬಾಗಿಲು ಹಾಕಿ ಆ ಕಾರ್ಮಿಕರು ಬೀದಿಪಾಲಾಗಬಾರದು. ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳಬಾರದು. ಏಕೆಂದರೆ ನಾವು ಹಾಲನ್ನು ಕರೆಯಬೇಕು. ಕೆಚ್ಚಲನ್ನು ಕೊಯ್ಯಬಾರದು. ನನ್ನ ಉದ್ದೇಶ ಇವತ್ತು ಕಾರ್ಖಾನೆಗಳು ಕಾರ್ಮಿಕರು ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸಲೇಬೇಕು ಎನ್ನುವಂಥ ವ್ಯಕ್ತಿ ನಾನು. ಆದರೆ ಆ ಕಾರಣಕ್ಕೋಸ್ಕರ ಅನೇಕ ಕಾರ್ಖಾನೆಗಳು ಮುಚ್ಚುವ ಸ್ಥಿತಿ ಇದು ಆಗಬಾರದು ಎನ್ನುವ ದೃಷ್ಟಿಯಿಂದ ನಾನು ಪತ್ರ ಬರೆದಿದ್ದೇನೆ. ಮುಖ್ಯಮಂತ್ರಿಗಳು ಅದನ್ನು ಪರಾಂಭರಿಸಿ ಅದರ ಬಗ್ಗೆ ಕಾನೂನಿನಂತೆ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ ಹೊರತು ಬೇರೆ ಏನೂ ಅಭಿಪ್ರಾಯ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಅದನ್ನೇ ಹೇಳಿದ್ದುದು. ಅವರು ಯಾವ ಉದ್ದೇಶದಿಂದ ಬರೆದಿದ್ದಾರೋ ನನಗೆ ಗೊತ್ತಿಲ್ಲ. ಅವರೊಂದು ಪತ್ರ ಬರೆದಿದ್ದಾರೆ. ಆ ಪತ್ರದ ಒಕ್ಕಣೆ ಹೀಗಿದೆ. "ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಕಾರ್ಮಿಕ ಇಲಾಖೆಯ ಕೆಲವು ಅಧಿಕಾರಿಗಳು ಕೆಲವು ಕಾರ್ಖಾನೆಗಳ ವಿರುದ್ಧ ದ್ವೇಷದಿಂದ ಮೊಕದ್ದಮೆಗಳನ್ನು ಹೂಡುತ್ತಿದ್ದು ಬೆಂಗಳೂರಿನ ಅಶೋಕಾ ಎಕ್ಸ್‌ಪೋರ್ಟ್ ಗಾರ್ಮೆಂಟ್ ಹಾಗೂ ಇದಕ್ಕೆ ಸಂಬಂಧಿಸಿದ ಕೆಲವು ಸಂಸ್ಥೆಗಳ ಮೇಲೆ ಕಳೆದ ಒಂದು ತಿಂಗಳಿಂದ ಪದೇ ಪದೇ ಮೊಕದ್ದಮೆಗಳನ್ನು ದಾಖಲು ಮಾಡಿ ಆಡಳಿತವರ್ಗದವರಿಗೆ ತೊಂದರೆ ಕೊಡುತ್ತಿದ್ದಾರೆಂದು ಈ ಸಮಸ್ಯೆಯ ಬಗ್ಗೆ ಆಡಳಿತ ವರ್ಗದವರು ದೂರಿರುತ್ತಾರೆ. ಆದುದರಿಂದ ಈ ಸಂಸ್ಥೆಯ ವಿರುದ್ಧ ಹೂಡಿರುವ ಮೊಕದ್ದಮೆಗಳ ವಿವರಗಳನ್ನು ತರಿಸಿಕೊಂಡು ಇದೇ

ರೀತಿಯ ಇತರ ಸಂಸ್ಥೆಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂದು ಪರಿಶೀಲಿಸಿ ಅಧಿಕಾರಿಗಳು ಅಶೋಕಾ ಎಕ್ಸ್‌ಪೋರ್ಟ್ ಸಂಸ್ಥೆಯ ವಿರುದ್ಧ ವೃಥಾ ಮೊಕದ್ದಮೆಗಳನ್ನು ದಾಖಲಿಸಿಕೊಂಡು ತೊಂದರೆ ಕೊಡುತ್ತಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟವರಲ್ಲಿ ಆದೇಶ ನೀಡಲು ತಮ್ಮಲ್ಲಿ ಕೋರಿದೆ. ಅವರು ಯಾವ ಉದ್ದೇಶದಿಂದ ಬರೆದಿದ್ದಾರೋ ನನಗ ಗೊತ್ತಿಲ್ಲ.

ಅಧ್ಯಕ್ಷರು : ಅವರು ಹೇಳಿದರಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಇದರ ಪರಿಣಾಮ ಏನಾಗಿದೆ ಎಂದರೆ ಕಾರ್ಮಿಕ ಅಧಿಕಾರಿಗಳು ಆ ಮ್ಯಾನೇಜ್‌ಮೆಂಟಿನ ಮೇಲೆ, ಮಾಲೀಕರ ಮೇಲೆ ಕೆಲವು ಕನಿಷ್ಠ ಕಾನೂನು ಕ್ರಮಗಳನ್ನಾದರೂ ತಗೆದುಕೊಳ್ಳುತ್ತಿದ್ದರು. ಏಳು ಸಾವಿರ ಕಾರ್ಮಿಕರಿಗ ತೊಂದರೆ ಕೊಡುತ್ತಿದ್ದಾರೆ. ಅವರಲ್ಲಾ ಮಹಿಳೆಯರು. ಅವರಿಗೆ ಕೊಡುತ್ತಿರುವ ಮಾನಸಿಕ ಹಿಂಸೆ, ಗೂಂಡಾಗಳನ್ನು ಅವರಿಗೆ ಕಾವಲು ಇಡುವುದಕ್ಕೆ, ಅವರು ಕೆಲಸ ಮಾಡುವ ಜಾಗದಲ್ಲಿ ಗೂಂಡಾಗಳನ್ನು ಕಾವಲು ಇಡುವುದು. ಅಂಥವ ಮಾನಸಿಕ ಹಿಂಸೆಯನ್ನು ಕೊಡುತ್ತಿರುವ ಬಿಟ್ಟ ಮಾಲೀಕನ ಮೇಲೆ ಕಾರ್ಮಿಕ ಇಲಾಖೆ ಕ್ರಮ ತಗೆದುಕೊಳ್ಳುವ ಸಂದರ್ಭದಲ್ಲಿ.....

ಅಧ್ಯಕ್ಷರು : ನೀವು ಈ ಫ್ಯಾಕ್ಟ್ಸ್ ಎಲ್ಲಾ ಎಕ್ಸ್‌ಪ್ಲೈನ್ ಮಾಡಿ ಒಂದು ಪತ್ರವನ್ನು ಬರೆಯಿರಿ. ಮತ್ತೆ ಅವರಿಗೂ ತಿಳಿಸಿ. ಹೀಗಾಗಿದೆ ಎಂದು ಹೇಳಿದರ ಆಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನಾನು ಯಾವುದೇ ದುರುದ್ದೇಶದಿಂದ ಹೇಳುತ್ತಿಲ್ಲ. ಯಾವ ಉದ್ದೇಶದಿಂದ ಪತ್ರ ಬರೆದರೋ ನನಗೆ ಗೊತ್ತಿಲ್ಲ. ಪತ್ರದ ಪರಿಣಾಮ ಏನಾಗಿದೆ ಎಂದರೆ ಆ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಅವನ ವಿರುದ್ಧ ಮಾತನಾಡುವುದನ್ನೇ ನಿಲ್ಲಿಸಿಬಿಡುತ್ತಾರೆ. ಅದರಿಂದಾಗಿ ಮೊನ್ನೆ ಮೂರು ದಿವಸಗಳ ಹಿಂದೆ ಎರಡು ಬಸ್ಸುಗಳಲ್ಲಿ ಮಹಿಳಾ ಕಾರ್ಮಿಕರನ್ನು ತುಂಬಿಕೊಂಡು ಹೋಗಿ ಒಂದು ಕಾಡಿನಲ್ಲಿ ಬಿಟ್ಟು ಬಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೊಂದು ಸಲಹೆ ಕೊಡುತ್ತೇನೆ. ತಾವು, ನಾನು ಬೇಕಾದರೆ ಹೋಗೋಣ. ಯಾವ ಕಾರಣಕ್ಕಾದರೂ ಅಲ್ಲಿರುವಂಥ ಆ ಕಾರ್ಖಾನೆಯ ಮಾಲೀಕ ಅಲ್ಲಿರುವ ನೌಕರ ವರ್ಗದವರಿಗೆ ಕಿರುಕುಳ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಹೋಗುವುದಾದರೆ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮ ಸರಿ ಇದ್ದರೆ ನಾನು ನಿಮ್ಮ ಪರವಾಗಿ ಸತ್ಯಾಗ್ರಹ ಮಾಡುವುದಕ್ಕೆ ರೆಡಿ ಇದ್ದೇನೆ ಚಳುವಳಿ ಮಾಡುವುದಕ್ಕೆ ರೆಡಿ ಇದ್ದೇನೆ. ಆದರೆ ಆ ಕಾರ್ಖಾನೆಯ ಮಾಲೀಕರ ದುರುದ್ದೇಶ ಯಾವುದೋ ಒಂದು ಆಸೆಗೋಸ್ಕರ ಯಾವುದೋ ಒಂದು ಲಾಭಕೋಸ್ಕರ ಅಧಿಕಾರಿಗಳು ಏನು ಏನೇ ಇದ್ದರೂ ಸರಿ ಮಾಡೋಣ. ಕಾರ್ಮಿಕ ಇಲಾಖೆಯ ಅಧಿಕಾರಿಗಳು ನನಗೆ ಬಂದಿರುವ ದೂರು ಪ್ರಕಾರ ಬೇರೆ ಏನೋ ಆಸೆ ಆಮಿಷಗಳಿಗೆ ಬಲಿಯಾಗಿ ಕಿರುಕುಳ ಕೊಟ್ಟು ಕಾರ್ಖಾನೆ ಬಾಗಿಲು ಹಾಕಿಸಿ ಆ ಕಾರ್ಖಾನೆ ಬೀದಿಪಾಲಾಗಬಾರದು ಎಂದು ಮಾತ್ರ ನನ್ನ ಕಳಕಳಿ. ನಾವು ನೀವು ಒಟ್ಟಿಗೆ ಹೋಗೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಖಂಡಿತಾ ಅದನ್ನು ಸ್ವಾಗತ ಮಾಡುತ್ತೇನೆ. ಅದರ ಬಗ್ಗೆ ನಾವು

ಎಲ್ಲಾ ಕುಳಿತುಕೊಂಡು ಬೇಕಾದರೆ ಚರ್ಚೆ ಮಾಡೋಣ. ಸಮಸ್ಯೆ ಪರಿಹಾರ ಮಾಡೋಣ. ಅವರಲ್ಲೇನೂ ನನಗೆ ಬೇರೆ ಅಭಿಪ್ರಾಯ ಇಲ್ಲ. ಇದರಿಂದಾಗಿ ಕಾರ್ಮಿಕರು ಮಹಿಳಾ ಕಾರ್ಮಿಕರು ಅವರಲ್ಲೂ ಮುಖ್ಯವಾಗಿ ತೀವ್ರರೀತಿಯಾದಂಥ ಈ ಮಾನಸಿಕವಾದ ಹಿಂಸೆ ಮತ್ತು ಶಾರೀರಿಕವಾದಂಥ ಹಿಂಸೆಯನ್ನು ಅನುಭವಿಸುವಂಥ ಸಂದರ್ಭದಲ್ಲಿ ಈ ಸರ್ಕಾರ ಮಧ್ಯೆ ಪ್ರವೇಶಮಾಡಿ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಇವರಿಗೆ ಇವತ್ತಿಗೂ ಕೂಡ ಸಾಧ್ಯವಾಗಿಲ್ಲ. ಮಾನ್ಯ ಕಾರ್ಮಿಕ ಮಂತ್ರಿಗಳು ಅವರ ಬಗ್ಗೆ ಕನಿಷ್ಠವಾದ ಆಲೋಚನೆ ಮಾಡಲಿ. ಇವರ ಮೇಲೆ ಹಲವಾರು ಆರೋಪಗಳನ್ನು ಮಾಡುತ್ತಿದ್ದಾರೆ ಕಾರ್ಮಿಕರು, ಕಾರ್ಮಿಕ ಮಂತ್ರಿಗಳ ಮೇಲೆ, ಕಾರ್ಮಿಕ ಇಲಾಖೆಯಮೇಲೆ. ಕನಿಷ್ಠ ಅವರ ಬಗ್ಗೆ ಯಾವುದೇ ರೀತಿಯಾದಂಥ ಕಾಳಜಿಯನ್ನು ವಹಿಸಲಿಕ್ಕೆ ಕಾರ್ಮಿಕ ಮಂತ್ರಿಗಳಿಗೆ ಸಾಧ್ಯವಾಗಲಿಲ್ಲ ಎಂದರೆ ಕಾರ್ಮಿಕ ಇಲಾಖೆಯ ಮಂತ್ರಿ ಎಂದು ಇರಬೇಕಾಗಿಲ್ಲ. ಮಾಲೀಕರ ಇಲಾಖೆಯ ಮಂತ್ರಿ ಎಂದು ಹೇಳಿ ದಯವಿಟ್ಟು ಅವರನ್ನು ಬದಲಾಯಿಸಿಬಿಡಿ. ಕಾರ್ಮಿಕ ಇಲಾಖೆಯ ಮಂತ್ರಿ ಎಂದು ಬೇಡ. ಮಾಲೀಕರ ಇಲಾಖೆಯ ಮಂತ್ರಿ ಎಂದು ದಯವಿಟ್ಟು ಬದಲಾಯಿಸಿಬಿಟ್ಟರೆ ಚೆನ್ನಾಗಿರುತ್ತದೆ. ಬಹಳ ಸೂಕ್ತವಾಗಿರುತ್ತದೆ ಎಂಬುದು ನನ್ನ ಅಭಿಪ್ರಾಯ. ತಮ್ಮ ಮುಖಾಂತರ ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇವತ್ತು ಮಾನ್ಯ ಸಿದ್ಧರಾಮಯ್ಯನವರು ಹಾಕಿರುವ ಬಜೆಟನಲ್ಲಿ ಬೀಡಿ ಕಾರ್ಮಿಕರ ಬಗ್ಗೆ ಒಂದೇ ಒಂದು ಮಾತು ಇಲ್ಲ. ಬೀಡಿ ಮೇಲೆ ಇರುವ ಟ್ಯಾಕ್ಸನ್ನು ಕಡಿಮೆ ಮಾಡಿದ್ದಾರೆ. ಅದರಿಂದ ಯಾರಿಗೆ ಉಪಯೋಗವಾಗುತ್ತದೆ ಎಂದರೆ ಬೀಡಿ ಮಾಲೀಕರಿಗೆ ಆಗುತ್ತದೆ. ಲಕ್ಷಾಂತರ ಜನ ಬೀಡಿ ಕಾರ್ಮಿಕರು ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡಜಿಲ್ಲೆ ಅಂಥಹ ಜಿಲ್ಲೆಯಲ್ಲಿ ಹೆಚ್ಚು ಬೀಡಿ ಕಾರ್ಮಿಕರು ಇರುವ ಪ್ರದೇಶದಲ್ಲಿ ಅವರ ಬವಣೆಯನ್ನು ಇವತ್ತು ಹೇಳಲಿಕ್ಕೆ ಸಾಧ್ಯವಿಲ್ಲ. ನೂರರಲ್ಲಿ ತೊಂಭತ್ತು ಭಾಗ ಮಹಿಳೆಯರು ಬೀಡಿ ಸುತ್ತುವ ಕೆಲಸ ಮಾಡುವವರು. ಅವರಿಗೆ ಯಾವುದೇ ರಕ್ಷಣೆ ಇಲ್ಲ. ಕನಿಷ್ಠ ವೇತನ ನಿಗದಿ ಮಾಡಿ ನೋಟೀಫಿಕೇಷನ್ ಮಾಡಿಲ್ಲ. ಅವರಿಗೆ ಜೀವನದ ಭದ್ರತೆ ಇಲ್ಲ. ಅವರಿಗೆ ಕೆಲಸ ಭದ್ರತೆ ಇಲ್ಲ. ಇಂಥಹ ಪರಿಸ್ಥಿತಿಯಲ್ಲಿ ಬೀಡಿ ಕಾರ್ಮಿಕರಿಗೆ ಸಹಾಯ ಮಾಡುವುದರ ಬದಲು ಬೀಡಿ ಮೇಲೆ ಹಾಕಿರುವ ತೆರಿಗೆಯನ್ನು ಸುಧಾರಿಸುವುದರಿಂದ ಬೀಡಿ ಮಾಲೀಕರಿಗೆ ಪ್ರಯೋಜನವಾಗುತ್ತದೆಯೇ ಹೊರತು ಬೇರ ಯಾರಿಗೂ ಪ್ರಯೋಜನವಾಗುವುದಿಲ್ಲ. 135 ಕೋಟಿ ರೂಪಾಯಿ ಕೊರತೆ ಆಯವ್ಯಯವನ್ನು ಮತ್ತು ಮಂತ್ರಿಗಳು ಮಂಡಿಸಿದ್ದಾರೆ. ನಾನು ಇದರಲ್ಲಿ ಮೂಲಭೂತವಾದ ಪ್ರಶ್ನೆಯನ್ನು ಅವರ ಗಮನ ಸೆಳೆಯಲಿಕ್ಕೆ ಹೇಳುತ್ತಿದ್ದೇನೆ. deficit always leads to further taxation or you are not going to implement teh programmes which you have promised in the budget. This is the only logic behind the deficit financing. ಇದು ನನ್ನ ಅಭಿಪ್ರಾಯ ನಂ. 2 ಡೆಫಿಸಿಟ್ ಫೈನಾನ್ಸ್‌ನಲ್ಲಿರುವುದು ಎಂದರೆ ರಾಜ್ಯಸರ್ಕಾರಗಳು ಸರ್ವಸಾಮಾನ್ಯವಾಗಿ ಕೊರತೆ ಬಜೆಟನ್ನು ಹಾಕತಕ್ಕಂಥ ಪ್ರವೃತ್ತಿ ಬರುವುದಿಲ್ಲ. ಏತಕ್ಕೆ ಕೊರತೆಯ ಬಜೆಟ್ಟಿನ ಪರಿಸ್ಥಿತಿ ಬರುತ್ತದೆ ಎಂದರೆ ನಾವು ಕೊಡತಕ್ಕಂಥ ಕಾರ್ಯಕ್ರಮಗಳು, ಕ್ರೋಢೀಕರಿಸುವ ಸಂಪನ್ಮೂಲಗಳು ಇವೆರೆಡರ ಮಧ್ಯೆ ಇರುವ ವ್ಯತ್ಯಾಸಗಳು. It is the basic philosophy of the Budget. ಹಾಗಾಗಿ ಇವತ್ತು ಡಫಿಸಿಟ್

ಫೈನಾನ್ಸ್‌ನಿಂದ ಆಗತಕ್ಕಂಥದ್ದು ಏನು? ಅದರ ಜೊತೆಗೆ ಎಲ್ಲಾ ತೆರಿಗೆಗಳನ್ನು ವಿನಾಯಿತಿ ಮಾಡಿದ್ದೇವೆ ಎಂದು ಒಂದುಕಡೆ ಹೇಳುತ್ತಾರೆ. ತೆರಿಗೆಗಳನ್ನು ವಿನಾಯಿತಿ ಮಾಡಿದ್ದೇವೆ ಎಂದು ಒಂದು ಕಡೆ ಹೇಳುತ್ತಾರೆ. ತೆರಿಗೆಗಳನ್ನು ವಿನಾಯಿತಿ ಮಾಡುವುದು ಒಂದು ಕಡೆ, 135 ಕೋಟಿ ಕೊರತೆ ಬಜೆಟ್‌ನ್ನು ಕೊಡುವುದು ಇನ್ನೊಂದು ಕಡೆ. ಬಹುಶಃ ಪಾರ್ಲಿಮೆಂಟ್ ಎಲೆಕ್ಷನ್ ಆದಮೇಲೆ ಈ ರಾಜ್ಯದ ಜನರಿಗೆ ಗ್ರಹಚಾರ ಪಕ್ಕರಿಸಿದೆ. ಅದಕ್ಕೆ ಟ್ಯಾಕ್ಸ್ ಹಾಕಲೇಬೇಕು. ಬೇರೆ ಏನೂ ದಾರಿ ಇಲ್ಲ.

5.00 ಪಿ.ಎಂ.

ನಿಮ್ಮದು ಡಿಫಿಸಿಟ್ ಫೈನಾನ್ಸ್ ಕೊರತೆ ಬಜೆಟನ್ನು ನೀಗಿಸತಕ್ಕದ್ದಕ್ಕೆ ನಿರ್ದಿಷ್ಟವಾದಂತಹ ಯೋಜನೆ ಈ ಬಜೆಟಿನಲ್ಲಿಯಂತೂ ಇಲ್ಲ. ಕೊರತೆ ಬಜೆಟನ್ನು ನೀವು ಹೇಗೆ ತುಂಬಿಸುತ್ತೀರಿ ಎನ್ನತಕ್ಕದ್ದು. ಮುಂದೆ ಏನು ಹೇಳುತ್ತೀರಿ? ಕೇಂದ್ರದಿಂದ ಬರತಕ್ಕ ಬಾಬತ್ತು; ಸೆಂಟ್ರಲ್ ಲೋನ್. ಅದರಲ್ಲಿ ಏನಾಗಿದೆ ಎಂದರೆ ಮಾನ್ಯ ಪಿ.ವಿ. ನರಸಿಂಹರಾಯರು ಕೊಡತಕ್ಕ ಕೇಂದ್ರ ಸರ್ಕಾರದ ಅಲೋಕೇಷನ್‌ನಲ್ಲಿ ಕೂಡ ಕಡಿಮೆ ಆಗಿದೆ. ಇದಕ್ಕೆ ಕಾರಣ ಏನು ಅಂದರೆ ನಮ್ಮ ಫೈನಾನ್ಷಿಯಲ್ ಸ್ಟ್ರಕ್ಚರ್ ಇದೆಯಲ್ಲಾ, ಸೆಂಟರ್ ಸ್ಟೇಟ್ ರಿಲೇಷನ್‌ಶಿಫ್‌ನಲ್ಲಿ ಬರತಕ್ಕ ಪ್ರಶ್ನೆ ಇದು. ಕೇಂದ್ರ ಮತ್ತು ರಾಜ್ಯಗಳಿಗೆ ಮಧ್ಯೆ ಇರತಕ್ಕ ಹಣಕಾಸಿನ ಪ್ರಶ್ನೆ. ಇವತ್ತು ಏನಾಗಿದೆ? ಈ ದೇಶದಲ್ಲಿನ ಎಲ್ಲಾ ರಾಜ್ಯಗಳಲ್ಲಿ ಆಗತಕ್ಕ ಉತ್ಪನ್ನಗಳಲ್ಲಿ ಹೆಚ್ಚಿನ ಭಾಗ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಹಣಕಾಸಿನದು. ಅವರು ಕೊಟ್ಟಿದ್ದನ್ನು ಸ್ವಾಮಿ ಎಂದು ಹೇಳಿ ತಗೆದುಕೊಳ್ಳಬೇಕು. We have no right. That's why the State Governments have become glorious Municipalities. ಫೈನಾನ್ಷಿಯಲ್ ಅಟಾನಮಿ ಇಲ್ಲ. ಹೆಚ್ಚಿನ ತೆರಿಗೆಯನ್ನು ಅವರು ಕಿತ್ತುಕೊಳ್ಳುತ್ತಾರೆ. ಮತ್ತೆ ನಾವು ಹೋಗಿ ಕೈಮುಗಿದು ಏನಾದರೂ ಕೊಡಿ ಸ್ವಾಮಿ ಎಂದು ಕೇಳಬೇಕು. ಅವರು ಕೊಟ್ಟಿದ್ದನ್ನು ತೆಗೆದುಕೊಳ್ಳಬೇಕು. ಇದರಿಂದ ಏನಾಗುತ್ತಿದೆ ಎಂದರೆ ಒಂದು ಕಡೆ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ರಾಜ್ಯ ಸರ್ಕಾರಗಳ ಬಗ್ಗೆ. ಅದು ಯಾವುದೇ ಸರ್ಕಾರ ಇರಬಹುದು. ಅದು ಯಾವ ಸರ್ಕಾರ ಇದ್ದರೂ ಅದೇ ಪರಿಸ್ಥಿತಿ ಬರುತ್ತದೆ. ಬಹುಶಃ ಒಂದೇ ಒಂದು ಸಂದರ್ಭದಲ್ಲಿ ಹೇಗೆ ಆಗಬಹುದು ಎಂದರೆ ಕೇಂದ್ರ ಸರ್ಕಾರದಲ್ಲಿ ಒಂದೇ ಪಕ್ಷ, ರಾಜ್ಯ ಸರ್ಕಾರದಲ್ಲೂ ಒಂದೇ ಪಕ್ಷ ಇದ್ದಂತಹ ಸಂದರ್ಭದಲ್ಲಿ ಪರಿಸ್ಥಿತಿ ಏನಾದರೂ ಸ್ವಲ್ಪ ಸುಧಾರಿಸಬಹುದೇ ಹೊರತು ಸರ್ವೇ ಸಾಮಾನ್ಯವಾಗಿ ಈ ಪರಿಸ್ಥಿತಿ ಎಲ್ಲಾ ಸಂದರ್ಭದಲ್ಲೂ ಒಂದೇ ಇರುತ್ತದೆ. ಹೀಗಾಗಿ ಕೊರತೆ ಬಜೆಟನ್ನು ನೀಗಿಸತಕ್ಕಂಥ, ಪ್ರಾಮಾಣಿಕವಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸತಕ್ಕಂಥ ಒಂದು ನಿರ್ದಿಷ್ಟವಾದಂತಹ ಯೋಜನೆ ಇಲ್ಲದೇ ಹೋದರೆ ಅದಕ್ಕೆ ನಿಮಗೆ ಆಲ್ಟರನೇಟಿವ್ ಇರತಕ್ಕದ್ದು ಏನು ಅಂದರೆ ಕ್ರೋಢೀಕರಿಸದೇ ಇರತಕ್ಕಂಥಹ ಸಂದರ್ಭದಲ್ಲಿ ನಿಮಗೆ ಇರತಕ್ಕ ಪರ್ಯಾಯ ಏನು ಎಂದು ಹೇಳಿದರೆ You have to go for taxation. Excess taxes ಇಲ್ಲ ಎಂದರೆ ನೀವು ಬಜೆಟನಲ್ಲಿ ಏನು ಹೇಳಿದ್ದೀರಿ ಅದರಲ್ಲಿ ಕೆಲವನ್ನಾದರೂ ನಿಲ್ಲಿಸಬೇಕಾಗುತ್ತದೆ. ಬೇರೆ ದಾರಿ ಇಲ್ಲ. ಅದು ಬೇಕಾದರೆ ನಮ್ಮ ಅನುಭವದಲ್ಲಿ ಹೇಳಬಹುದು. ಮತ್ತೆ ಇನ್ನೊಂದು ಪ್ರಶ್ನೆ ಏನೆಂದರೆ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಲಿಕ್ಕೆ ನೀವು ಮಾಡಿರತಕ್ಕ ಸೂಚಿಸಿರತಕ್ಕ ಕ್ರಮಗಳು

ಏನು ಇವೆ, ಕೆಲವು ಬಾಬ್ತುಗಳಿಗೆ ಪ್ರೈವೇಟ್ ಫೈನಾನ್ಸ್ ಫಾರೀನ್ ಕ್ಯಾಪಿಟಲ್. ಯಾವುದೇ ಒಂದು ಸರ್ಕಾರ ಪ್ರೈವೇಟ್ ಕ್ಯಾಪಿಟಲ್ ಮೇಲೆ ಅಥವಾ ಫಾರೀನ್ ಕ್ಯಾಪಿಟಲ್ ಮೇಲೆ ನಮ್ಮ ಸಂಪನ್ಮೂಲಗಳ ಕ್ರೋಢೀಕರಿಸಲು ಆಧಾರವಾಗಿದ್ದರೆ ನಮ್ಮ ಸರ್ಕಾರದ ಹಿಡಿತ ಹೋಗುತ್ತದೆ. ಅಷ್ಟೇ ಅಲ್ಲ. ನಮ್ಮ ಜನತೆಯ ಹಿಡಿತ ಅದರ ಮೇಲೆ ಇರುವುದಿಲ್ಲ. ಆವಾಗ ಯಾವುದೇ ಒಂದು ಸಂದರ್ಭದಲ್ಲಿ ವಿದೇಶಿ ಬಂಡವಾಳದ ಮುಲಾಜಿಗೆ ಒಳಗಾಗಬೇಕಾಗುತ್ತದೆ ಅಥವಾ ಖಾಸಗಿ ಬಂಡವಾಳದ ಮುಲಾಜಿಗೆ ಒಳಗಾಗಲೇಬೇಕಾಗುತ್ತದೆ. ಅದು ಬಿಟ್ಟು ಬೇರೆ ದಾರಿಯೇ ಇಲ್ಲ. ಅದ್ದರಿಂದ ನಮ್ಮ ದೇಶದ, ನಮ್ಮ ಜನತೆಯ ಸಾರ್ವಭೌಮತ್ವವನ್ನು, ನಮ್ಮ ಜನತೆಯ ಸ್ವಾಯತ್ತತೆಯನ್ನು ಉಳಿಸಬೇಕು ಎಂದಾದರೆ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ನಾವು ಖಾಸಗಿ ಬಂಡವಾಳದ ಮೇಲಾಗಲಿ ಅಥವಾ ವಿದೇಶಿ ಬಂಡವಾಳದ ಮೇಲೆ ಆಧಾರವಾಗಿದ್ದರೆ ಅಪಾಯ ಇದೆ. ಎರಡನೆಯ ವಿಚಾರ ಎಂದರೆ, ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ಕೊಜೆಂಟ್ರಿಕ್ಸ್ ಇಂಧನ ವಲಯದಲ್ಲಿ. ನಾವು ವಿದೇಶಿ ಬಂಡವಾಳವನ್ನು ರಾಜ್ಯಕ್ಕೆ ತರುವುದಕ್ಕೆ ಖಂಡಿತ ವಿರೋಧ ಇಲ್ಲ. ಆದರೆ ಯಾವ ಸಂದರ್ಭದಲ್ಲಿ ಯಾವ ಷರತ್ತಿನ ಆಧಾರದ ಮೇಲೆ ನೀವು ತರುತ್ತೀರಿ ಎನ್ನತಕ್ಕದ್ದು, ಒಂದು ಅಂಶ ಮುಖ್ಯ. ಯಾವ ವಲಯಕ್ಕೆ ಅದನ್ನು ಸೀಮಿತ ಮಾಡುತ್ತೀರಿ ಎನ್ನುವುದು ಇನ್ನೊಂದು ಪ್ರಮುಖವಾದ ಅಂಶ. ಕೊಜೆಂಟ್ರಿಕ್ಸ್ ಉದಾಹರಣೆಯನ್ನು ತೆಗೆದುಕೊಂಡರೆ, ನೀವು ಕೊಜೆಂಟ್ರಿಕ್ಸ್‌ಗೆ ಕೊಡಿ. ನೀವು ಓಪನ್ ಬಿಡ್ಡಿಂಗ್ ಏಕೆ ಮಾಡಲಿಲ್ಲ? Why you have not allowed open bidding? ಓಪನ್ ಬಿಡ್ಡಿಂಗ್ ಆಗಲಿಲ್ಲ. ಅವರ ಜೊತೆ ನೀವು ಒಪ್ಪಂದ ಮಾಡಿಕೊಂಡಿದ್ದೀರಿಯೋ ಹೊರತು ನೀವು ಟೆಂಡರ್ಸ್ ಕಾಲ್‌ಫರ್ ಮಾಡಲಿಲ್ಲ. ಟೆಂಡರ್ಸ್ ಕಾಲ್‌ಫರ್ ಮಾಡಿ ಯಾವ ಕಂಪನಿ, ಅದು ಕೊಜೆಂಟ್ರಿಕ್ಸ್ ಆಗಬಹುದು ಅಥವಾ ಎನರಾನ್ ಆಗಬಹುದು, ಇನ್ನೊಂದು ಪ್ರೈವೇಟ್ ಕಂಪನಿ ಆಗಬಹುದು; ಯಾರೇ ಆಗಬಹುದು, ಓಪನ್ ಟೆಂಡರ್ ಹಾಕಿದರೆ, ಯಾರು ಅರ್ಹತೆ ಇದ್ದರೆ ಯಾರಾದರೂ ಅದನ್ನು ಒಪ್ಪಿಕೊಳ್ಳುವುದಿದ್ದರೆ ನಿಮ್ಮ ಶರತ್ತುಗಳಿಗೆ, ಅದನ್ನು ಮಾಡಬಹುದಿತ್ತು. ಅದನ್ನು ಕೂಡ ಮಾಡಲಿಲ್ಲ. ನಾನು ಉದಾಹರಣೆಯನ್ನು ಹೇಳುತ್ತಿದ್ದೇನೆ. ನೀವು ಒಪ್ಪಂದ ಮಾಡಿಕೊಂಡಿರತಕ್ಕ ಪ್ರಶ್ನೆ ಬೇರೆ. ನಾನು ಉದಾಹರಣೆಯಷ್ಟೇ ಕೊಡುತ್ತಿರುವುದು, ಏಕೆಂದರೆ ಕೊಜೆಂಟ್ರಿಕ್ಸ್ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ಆಗಿದೆ. ಅದರ ಬಗ್ಗೆ ಪುನರಾವರ್ತನೆ ಮಾಡತಕ್ಕದ್ದು ಬೇಕಾಗಿಲ್ಲ. ಆದರೆ ಉದಾಹರಣೆ ಹೇಳತಕ್ಕಂಥದ್ದು ನೀವು ವಿದೇಶಿ ಬಂಡವಾಳದ ಮೇಲೆ ಹೆಚ್ಚು ಕಾಲ ಆಧಾರ ಬಿದ್ದಾಗ ನಮ್ಮ ಸರ್ಕಾರದ ಹಿಡಿತ ಮತ್ತು ನಮ್ಮ ರಾಜ್ಯದ ಹಿಡಿತ ತಪ್ಪಿ ಹೋಗುತ್ತದೆ. ಆಗ ನಮ್ಮ ಸ್ವಾಯತ್ತತೆ ಪ್ರಶ್ನೆ ಕೂಡ ಅದರಲ್ಲಿ ಅಡಕವಾಗಿದೆ. ಅದರ ಅಪಾಯವನ್ನು ಮನಗಾಣಬೇಕಾಗುತ್ತದೆ. ಅದು ಯಾವುದೇ ರಂಗದಲ್ಲಿ ಆಗಬಹುದು. ಕೈಗಾರಿಕಾ ರಂಗ ಅಷ್ಟೇ ಅಲ್ಲ, ವಿದ್ಯುಚ್ಛಕ್ತಿ ರಂಗ ಅಷ್ಟೇ ಅಲ್ಲ; ಕೃಷಿ ರಂಗದಲ್ಲೂ ಅಷ್ಟೇ. ನಾವು ನಮ್ಮ ಇತಿಮಿತಿಗಳಲ್ಲಿ, ನಮ್ಮ ಹಿಡಿತದಲ್ಲಿ ಇರಬೇಕು. ನಮ್ಮ ಹಿಡಿತದೊಳಗೆ ಇಲ್ಲದೇ ಹೋದರೆ ಅವರ ಕೈಕೆಳಗೆ ನಾವು ಇರುತ್ತೇವೆ. ಒಟ್ಟು ನಮ್ಮ ಸರ್ಕಾರದ ಇವತ್ತಿನ ಒಟ್ಟು ಆದಾಯ 12,286 ಕೋಟಿ ರೂಪಾಯಿ ಆಗುತ್ತದೆ. ಖರ್ಚು 12,339 ಕೋಟಿ ರೂಪಾಯಿ....

ಅಧ್ಯಕ್ಷರು : ನಿಮಗೆ ಇನ್ನೂ ಎಷ್ಟು ಸಮಯ ಬೇಕು? ಇನ್ನೂ ಮಾತನಾಡುವವರ ಬಹಳ ಜನ

ಇದ್ದಾರೆ. ಗವರ್ನರ್ ಅಡ್ರೆಸ್ ಮೇಲೂ ಮಾತನಾಡಿಲ್ಲ. ಮಾನ್ಯ ಪುಟ್ಟಣ್ಣಯ್ಯನವರು ಇದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಕಡೆಯ ಹಂತಕ್ಕೆ ಬಂದಿದ್ದೇನೆ. 12.286 ಕೋಟಿ ರೂಪಾಯಿ ಈ ರಾಜ್ಯದ ಒಟ್ಟು ಆದಾಯ. ಇದರಲ್ಲಿ ಸರಿ ಸುಮಾರು 3 ಸಾವಿರದ ಕೋಟಿ ರೂಪಾಯಿ ಈ ದೇಶದ, ಈ ರಾಜ್ಯದಲ್ಲಿರತಕ್ಕಂತಹ ಅಧಿಕಾರಿಗಳಿಗೆ ಕೊಡತಕ್ಕಂಥ ಸಂಬಳ. ಆ ಸಂಬಳ ತೆಗೆದುಕೊಳ್ಳುತ್ತಿರತಕ್ಕ ಅಧಿಕಾರಿ ವರ್ಗ ಆಡಳಿತ ಯಂತ್ರ ಯಾವ ಸ್ಥಿತಿಗೆ ಬಂದಿದೆ? ಇದನ್ನು ಸ್ಟ್ರೀಮ್‌ಲೈನ್ ಮಾಡಲಿಕ್ಕೆ, ಇದನ್ನು ಕಂಟ್ರೋಲ್ ಮಾಡಲಿಕ್ಕೆ, ಆಡಳಿತ ಯಂತ್ರವನ್ನು ಚುರುಕುಗೊಳಿಸಲಿಕ್ಕೆ ಈ ಸರ್ಕಾರ ಇದುವರೆಗೂ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿಲ್ಲ. ಇವತ್ತು ಆಡಳಿತ ಯಂತ್ರ ಯಾವ ರೀತಿ ಕೆಲಸ ಮಾಡುತ್ತಿದೆ ಎಂದರೆ ಮುಖ್ಯಮಂತ್ರಿಯವರ ಕಛೇರಿಯಲ್ಲಿರತಕ್ಕ ಒಂದು ಪತ್ರ ಇನ್ನೊಂದು ಕಛೇರಿಗೆ ಹೋಗಬೇಕಾದರೆ ಕನಿಷ್ಠ ಮೂರು ತಿಂಗಳು ತೆಗೆದುಕೊಳ್ಳುತ್ತಿದೆ. ಒಬ್ಬ ಶಾಸಕ ಕಿಟಕಿ, ಬಾಗಿಲು ಗೋಡೆಗಳ ಹತ್ತಿರ ತಿರುಗಾಡಿದರೂ ಕೂಡ ಪೇಪರ್ ಮುಂದೆ ಹೋಗುತ್ತಿಲ್ಲ. ನನ್ನ ವೈಯಕ್ತಿಕವಾದಂತಹ ಅನುಭವವನ್ನು ನಾನು ಹೇಳುತ್ತಿದ್ದೇನೆ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ನಾನು ಪತ್ರ ಕೊಟ್ಟು ಮೂರು ತಿಂಗಳಾಗಿದೆ. ಯಾವುದೋ ಒಂದು ಕಾಮಗಾರಿಗೆ ಬದಲಾಯಿಸಿ ಕೊಡಿ ಒಂದು ಪತ್ರ ಕೊಟ್ಟೆ. ಇದುವರೆಗೂ ಅದು ಸಾಧ್ಯವಾಗಲಿಲ್ಲ. This is how the bureaucracy is functioning today. ಇದರ ಬಗ್ಗೆ ಏನು ಹಿಡಿತ ಇದೆ? ದೇವೇಗೌಡರು ಅಧಿಕಾರಕ್ಕೆ ಬಂದಾಗ ಕರ್ನಾಟಕ ರಾಜ್ಯದ ಜನತೆ ನಿರೀಕ್ಷೆ ಮಾಡಿದ್ದರು. ಅಧಿಕಾರಿಗಳನ್ನು, ಆಡಳಿತ ಯಂತ್ರದ ಮೇಲೆ ದೇವೇಗೌಡರು ಹಿಡಿತ ಇಡುತ್ತಾರೆ, ಮಾನ್ಯ ದೇವೇಗೌಡರಿಗೆ ಅಪಾರವಾದಂತಹ ಅನುಭವ ಇದೆ, ಅವರ ಮೇಲೆ ಹಿಡಿತ ಇಡುತ್ತಾರೆಂದು ಅಪಾರವಾದಂತಹ ಆಸೆಯನ್ನು ಇಟ್ಟುಕೊಂಡಿದ್ದರು. ಆದರೆ ದುರಾದೃಷ್ಟವಶಾತ್ ಏನಾಗಿದೆ ಎಂದರೆ ಇವತ್ತು ಇಡೀ ಅಧಿಕಾರಿ ವರ್ಗ ಮುಖ್ಯಮಂತ್ರಿಗಳ ಮೇಲೆ ಹಿಡಿತ ಸಾಧಿಸಿದೆ. This is a practical and personal experience of mine. ಯಾವ ಅಧಿಕಾರಿಗೂ ಇವತ್ತು ನಾವು ಸಾರ್ವಜನಿಕರ ಸೇವಕರು ಎನ್ನತಕ್ಕ ಮನೋಭಾವ ಉಳಿದಿಲ್ಲ. ಈ ರಾಜ್ಯದ ಒಟ್ಟು ಆದಾಯದ ಶೇಕಡಾ 60 ಭಾಗವನ್ನು ಉಪಯೋಗಿಸುತ್ತಿರತಕ್ಕ ಜನ, ಈ ರಾಜ್ಯದ ಜನರು ಬೆವರು ಸುರಿಸಿ ಉತ್ಪಾದನೆ ಮಾಡಿದಂಥ ಹಣದಿಂದ ಸಂಬಳ ತೆಗೆದುಕೊಳ್ಳುತ್ತಿದ್ದೇನೆ ಎನ್ನತಕ್ಕ ಕನಿಷ್ಟ ಪ್ರಜ್ಞೆ ಕೂಡ ಅವರಲ್ಲಿಲ್ಲ. ಬಹುಶಃ ಶಾಸಕರ ಪರಿಸ್ಥಿತಿಯೇ ಹೀಗಾದರೆ, ಒಬ್ಬ ಶಾಸಕ ಒಂದು ಕಛೇರಿಗೆ ಹತ್ತು ಸಾರಿ ತಿರುಗಾಡಿ ಕೆಲಸ ಮಾಡಿಕೊಳ್ಳತಕ್ಕ ಪರಿಸ್ಥಿತಿ ಬಂದರೆ, ಈ ರಾಜ್ಯದ ಸಾಮಾನ್ಯ ಮನುಷ್ಯನೊಬ್ಬನು ಈ ಆಡಳಿತ ಯಂತ್ರದಿಂದ ಏನಾದರೂ ನಿರೀಕ್ಷೆ ಮಾಡಲು ಸಾಧ್ಯತೆ ಇದೆಯೇ ಎಂಬುದನ್ನು ನೀವು ನೋಡಬೇಕು. ಸಾಮಾನ್ಯ ಮನುಷ್ಯ ಒಬ್ಬ ತಾಲ್ಲೂಕು ಕಛೇರಿಗೆ ಹೋದರೆ ಒಬ್ಬ ಗುಮಾಸ್ತನ ಮುಂದೆ ಕೈಕಟ್ಟಿಕೊಂಡು ನಿಂತುಕೊಳ್ಳಬೇಕು. ಏಯ್, ನಾಳೆ ಬಾ ಹೋಗಯ್ಯ, ನಮಗೇನು ಕೆಲಸ ಇಲ್ಲವಾ? ನಿನ್ನೊಬ್ಬನದೇ ಕೆಲಸವಾ ಇಲ್ಲಿ ಎನ್ನುತ್ತಾನೆ. ಒಬ್ಬ ಸಾಮಾನ್ಯ ಮನುಷ್ಯ ಪೋಲೀಸ್ ಸ್ಟೇಷನ್‌ಗೆ ಹೋಗುವ ಹಾಗೆ ಇಲ್ಲ. ಆ ಪೋಲೀಸ್ ಸ್ಟೇಷನ್‌ಗೆ ಹೋದರೆ ಕ್ಷೇಮವಾಗಿ ವಾಪಸ್ ಬರುತ್ತಾನೆ ಎನ್ನತಕ್ಕ ಗ್ಯಾರಂಟಿ ಇಲ್ಲ. ಕ್ಷೇಮವಾಗಿ ವಾಪಸ್ ಬರುವುದು. ಇಲ್ಲದೇ ಇದ್ದರೂ ಒಬ್ಬ ಸಾಮಾನ್ಯ ಮನುಷ್ಯನಿಗೆ ರಕ್ಷಣೆ ಇಲ್ಲ; ಪೋಲೀಸ್ ಸ್ಟೇಷನ್‌ನಲ್ಲಿ ತಾಲ್ಲೂಕು ಕಛೇರಿಗೆ ಒಬ್ಬ ಸಾಮಾನ್ಯ

ಮನುಷ್ಯ ಹೋದರೆ ಕೈಕಟ್ಟಿಕೊಂಡು ಫ್ಯಾನ್ ಹತ್ತಿರ ನಿಂತುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಜನತೆಯ ಕೈಗೆ ಆಡಳಿತ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಆಡಳಿತ ಯಂತ್ರ ಅಲ್ಲ. ಅವರು ಬಹಿರಂಗವಾಗಿ ಮಾತನಾಡುತ್ತಿದ್ದಾರೆ, ಅಧಿಕಾರಿಗಳು, ಸರ್ಕಾರಿ ನೌಕರರು, ಏಯ್ ಹೋಗಯ್ಯ, ಈ ಸರ್ಕಾರ ಐದು ವರ್ಷ ಇರುತ್ತದೆ, ನಾವು 30 ವರ್ಷ ಇರತಕ್ಕವರು. ನಾವು ಇಂತಹ ಮಂತ್ರಿಗಳನ್ನು ಎಷ್ಟು ಜನರನ್ನು ನೋಡಿಲ್ಲ? ಇಂತಹ ಶಾಸಕರನ್ನು ಎಷ್ಟು ಜನರನ್ನು ನೋಡಿಲ್ಲ ಎಷ್ಟು ಜನ ಮುಖ್ಯಮಂತ್ರಿಗಳು ಹೋಗಿ ಬಿಟ್ಟರು? ಎಷ್ಟು ಜನ ಮಂತ್ರಿಗಳು ಹೋಗಿ ಮಾತನಾಡುತ್ತಿದ್ದಾರೆ. ಆದ್ದರಿಂದ ಕಾರ್ಮಿಕ ಮಂತ್ರಿಗಳು ಪಾಪ ಅವರ ಇಲಾಖೆಯ ಬಗ್ಗೆ ಮಾತನಾಡುವಾಗ ಅವರು ಯಾವತ್ತೂ ಇಲ್ಲಿ ಕುಳಿತಿರುವುದಿಲ್ಲ, ಅದು ಅವರ ಅಭ್ಯಾಸ ಪಾಪ. ನಾನು ಅದಕ್ಕೇ ಹೇಳಿದ್ದು. ಕಾರ್ಮಿಕ ಇಲಾಖೆಯ ಮಂತ್ರಿ ಎಂದು ತೆಗೆದು ಮಾಲೀಕರ ಇಲಾಖೆಯ ಮಂತ್ರಿ ಎಂದು ಮಾಡಿ ಬಿಟ್ಟರೆ ಒಳ್ಳೆಯದು. ಅವರು ಇಲ್ಲಿಗೆ ಬಂದಾಗ ನೋಡಿಯೇ ಹೇಳುತ್ತಿದ್ದೇನೆ. ಆದ್ದರಿಂದ ಯಂತ್ರ ಸಂಪೂರ್ಣವಾಗಿ ಕುಸಿದಿದೆ. ಇದು ಕೆಲಸ ಮಾಡುತ್ತಿಲ್ಲ. ಇದಕ್ಕೆ ಕ್ಯಾನ್ಸರ್ ಹಿಡಿದಿದೆ. ಇದರಿಂದ ನೀವು ಏನಾದರೂ ಪ್ರಗತಿಯನ್ನು ನಿರೀಕ್ಷೆ ಮಾಡಿದರೆ ಅಂಕಿ ಅಂಶಗಳನ್ನು ಕೂಡ ಸುಳ್ಳು ಕೊಡುತ್ತಾರೆ. ಇದರಿಂದ ಅಂಕಿಅಂಶಗಳ ಜಂಜಾಟ. ನಿಜವಾದ ಪ್ರಗತಿ ಇಲ್ಲ. ಆದ್ದರಿಂದ ಇವತ್ತು ಕಟ್ಟಕಡೆಯದಾಗಿ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ, ಮಹಿಳೆಯರ ಬಗ್ಗೆ. 30 ಪರ್ಸೆಂಟ್ ರಿಸರ್ವೇಷನ್. ಮಹಿಳಾ ಅಭಿವೃದ್ಧಿ ಆಯೋಗ. ಅದಕ್ಕೆ ಇವರು ಕೊಟ್ಟಿರತಕ್ಕ ಹಣಕಾಸು ಮೂರು ಕೋಟಿ ರೂಪಾಯಿಗಳು. ಮೂರು ಕೋಟಿ ರೂಪಾಯಿಯಲ್ಲಿ ಆ ಅಭಿವೃದ್ಧಿ ಮಂಡಲಿಗೆ 50-60 ಲಕ್ಷ ರೂಪಾಯಿ ವೆಚ್ಚ ಹೋಗಿ ಬಿಡುತ್ತದೆ. ಮೂರು ಕೋಟಿ ರೂಪಾಯಿ ತೆಗೆದುಕೊಂಡು ಅವರು ಮೂರು ನಾಮ ಹಾಕಿಕೊಳ್ಳಬೇಕು. 30 ಪರ್ಸೆಂಟ್ ರಿಸರ್ವೇಷನ್ ಅವರಿಗೆ. ಇದು ಮಹಿಳಾ ಅಭಿವೃದ್ಧಿ ಆಯೋಗ. ಮಹಿಳೆಯರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಅವರು ಸಾಕಷ್ಟು ಮಾತನಾಡಿದ್ದಾರೆ. ಅವರ ಒಂದು ವಿಚಾರ ಸ್ಪಷ್ಟವಾಗಿ ಗೊತ್ತಿರಬೇಕು. ನಿಮಗೆ ನಿಜವಾಗಿಯೂ ಮಹಿಳೆಯರನ್ನು ಅಭಿವೃದ್ಧಿಪಡಿಸಬೇಕು, ಅವರಿಗೆ ಸಾಮಾಜಿಕವಾಗಿ ಆರ್ಥಿಕವಾಗಿ, ರಾಜಕೀಯವಾಗಿ ಸಮಾನ ಸ್ಥಾನಮಾನಗಳನ್ನು ಕಲ್ಪಿಸಿಕೊಡಬೇಕು ಎಂದ ಏನಾದರೂ ಪ್ರಾಮಾಣಿಕ ಕಾಳಜಿ ಇದ್ದರೆ ನಿಮ್ಮ 30 ಪರ್ಸೆಂಟ್ ರಿಸರ್ವೇಷನ್‌ನಿಂದ ಆಗುವುದಿಲ್ಲ. ಆರ್ಥಿಕ ಸಮಾನತೆ ಅವರಿಗೆ ಆಗಬೇಕು. ಅವರು ಸ್ವಂತ ಕಾಲಮೇಲೆ ಅವರು ಜೀವನ ಮಾಡತಕ್ಕ ಪರಿಸ್ಥಿತಿ ಈ ದೇಶದಲ್ಲಿ ಮಹಿಳೆಯರಿಗೆ ಎಲ್ಲಿಯವರೆಗೆ ಬರುವುದಿಲ್ಲವೋ ಅಲ್ಲಿಯವರೆಗೆ ನೀವು ಯಾವುದೇ ಸಮಾನತೆಯನ್ನು ನಿರೀಕ್ಷೆ ಮಾಡಲಿಕ್ಕೆ ಸಾಧ್ಯವಿಲ್ಲ. ಆಸ್ತಿಯಲ್ಲಿ ಮಹಿಳೆಯರಿಗೆ ಸಮಾನವಾದ ಹಕ್ಕು ಎಂದು ಹೇಳಿ ಸರ್ಕಾರ ಕಾನೂನನ್ನು ಮಾಡಿದೆ. ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಮಾತ್ರ ಏಕೆ ಸಮಾನವಾದ ಹಕ್ಕಿರಬೇಕು? ಹೆಣ್ಣುಮಕ್ಕಳಿಗ ಅವರ ಅಪ್ಪನ ಆಸ್ತಿಯಲ್ಲಿ ಏಕೆ ಹಕ್ಕಿರಬಾರದು? ನಾನು ಉದಾಹರಣೆಯನ್ನಷ್ಟೇ ಹೇಳುವುದು. ಅದೇ ರೀತಿಯಲ್ಲಿ ಮಹಿಳೆಯರಿಗೆ ಮೀಸಲಾತಿಯಿಟ್ಟು ಅವರ ಸ್ಥಾನ-ಮಾನಗಳನ್ನು ಉನ್ನತ ಮಟ್ಟಕ್ಕೆ ತರುತ್ತೇವೆಂದು ಹೇಳಿದ್ದೀರಿ. ವಿದೇಶದಿಂದ ಬಂದಂಥ ನನ್ನ ಸ್ನೇಹಿತರು ನಿನ್ನೆ ಹೇಳಿದರು...

SRI G.V. SRIRAMA REDDY : Emancipation not in feminist point of view. ಆದುದರಿಂದ, ನಿನ್ನೆ ನನ್ನ ಸ್ನೇಹಿತರು ನನ್ನ ಜೊತೆ ಮಾತನಾಡುತ್ತಾ, 'ನಮ್ಮ ದೇಶದಲ್ಲಿ ಮಹಿಳೆಯರಿಗೆ ಮೀಸಲಾತಿ ಇಲ್ಲ, ನಮ್ಮಲ್ಲಿ ಎಲ್ಲರೂ ಸಮಾನರಾಗಿದ್ದೇವೆ, ನಮಗೆ ಮೀಸಲಾತಿಯ ಸಮಸ್ಯೆಯೇ ಇಲ್ಲ' ಎಂದರು. ಮೊನ್ನೆ ದಿವಸ ನಾನು ಮೀಸಲಾತಿ ಬಗ್ಗೆ ಮಾತನಾಡುತ್ತಾ 'ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿದರೆ ಅವರು ಅಧ್ಯಕ್ಷರಾಗಿ ಆಯ್ಕೆಯಾದಾಗ ಅಧ್ಯಕ್ಷ ಪೀಠದಲ್ಲಿ ಆಕೆಯ ಗಂಡ ಬಂದು ಕುಳಿತುಕೊಳ್ಳುತ್ತಾನೆ' ಎಂದು ಹೇಳಿದೆ. ನಾನು ಮೀಸಲಾತಿಗೆ ವಿರೋಧವಿಲ್ಲ. ಆದರೆ, ಮೀಸಲಾತಿಯನ್ನು ನೀವೇನಾದರೂ ಪ್ರಗತಿ ಸಾಧಿಸುತ್ತೇವೆಂದು ಹೊರಟರೆ ಒಂದಷ್ಟೇ ನೋಡಿದ್ದೇವೆ. ಆದರೆ, ಅದು ಮೂಲಭೂತವಾದ ಪರಿಹಾರವಲ್ಲ. ಮೂಲಭೂತವಾದ ಪರಿಹಾರ ಹುಡುವುದಕ್ಕೆ ನಿಮ್ಮ ಕಾಲದಲ್ಲಾದರೂ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಖಂಡಿತವಾಗಿ ಏನಾದರೊಂದು ಪ್ರಯೋಜನವಾಗುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ ಕೊನೆಯದಾಗಿ, ಆಹಾರೋತ್ಪಾದನೆ ಪ್ರಗತಿ ಬಗ್ಗೆ ಒಂದು ಅಂಶವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಹೋದ ವರ್ಷದ ಆಯ-ವ್ಯಯದಲ್ಲಿ ಆಹಾರೋತ್ಪಾದನೆಯಲ್ಲಿ 85 ಲಕ್ಷ ಟನ್ ಗುರಿ ಇಟ್ಟಿದ್ದು,ಪ್ರಸಕ್ತ ವರ್ಷ ಅದು 83.4 ಲಕ್ಷ ಟನ್ನಿಗೆ ಇಳಿದಿದೆ. ಆಹಾರೋತ್ಪಾದನೆಗಳನ್ನು ಹೆಚ್ಚಿಸಲು ಕೃಷಿರಂಗದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಇಲ್ಲದಿದ್ದರೆ ಸಂಪೂರ್ಣವಾಗಿ ಆಹಾರದ ಮುಗ್ಗಟ್ಟು ಬರುತ್ತದೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಾ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಅರ್ಥ ಸಚಿವರು ಜನ ಸಾಮಾನ್ಯರಿಗೆ ಸ್ಪಂದಿಸುವ ರೀತಿಯಲ್ಲಿ 1996-97ನೇ ಸಾಲಿನ ಆಯ-ವ್ಯಯ ಪತ್ರವನ್ನು ಮಂಡಿಸಿದ್ದಾರೆ. ಆಯ-ವ್ಯಯ ಪತ್ರದಲ್ಲಿ ಸಾಮಾನ್ಯ ಮನುಷ್ಯನಿಗೆ ಈ ಸರ್ಕಾರ ಹೇಗೆ ಸ್ಪಂದಿಸಬೇಕೆಂಬುದನ್ನು ಬಹಳ ಚೆನ್ನಾಗಿ ತೋರಿಸಿಕೊಟ್ಟಿದ್ದಾರೆ. ಕಳೆದ ವರ್ಷದ ಆಯ-ವ್ಯಯದಲ್ಲಿ ಸರ್ಕಾರಿ ರಂಗದ ಬಡ್ಡಿ ಹಾಗೂ ಸುಸ್ತಿ ಬಡ್ಡಿ ಮನ್ನಾ ಮಾಡಲು 136 ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. ಆದರೆ, ಪ್ರಸಕ್ತ ವರ್ಷ ಸಹಕಾರಿ ಇಲಾಖೆಯನ್ನು ಪೂರ್ತಿ ಮರೆತುಬಿಟ್ಟಿದ್ದಾರೇನೋ ಎಂದೆನಿಸುತ್ತದೆ. ಸಹಕಾರಿ ಸಂಸ್ಥೆ ಅಸ್ತಿತ್ವಕ್ಕೆ ಬಂದಾಗಿನಿಂದ ಈ ದೇಶದಲ್ಲಿ ಮೊದಲು ನಮ್ಮ ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಸಹಕಾರ ಸಂಘದ ಹುಟ್ಟುವಳಿಯಾಯಿತು. ಇವೊತ್ತು ಇಂತಹ ಒಂದು ವ್ಯವಸ್ಥೆಯನ್ನು ಕಡೆಗಣಿಸಿದ್ದೀರೆಂದರೆ ತಪ್ಪಾಗಲಾರದು. ಸರ್ಕಾರದಲ್ಲಿ ಸಹಕಾರಿ ರಂಗಕ್ಕೆ ಏನು ಆದ್ಯತೆ ಕೊಟ್ಟಿದ್ದೀರೆಂಬುದನ್ನು ಮಾನ್ಯ ಅರ್ಥ ಸಚಿವರು ಇದರ ಕಡೆ ಗಮನಹರಿಸಬೇಕು. ಇವೊತ್ತು 'ಸಹಕಾರಿ' ಎಂದರೆ ಕೆಲವರಿಗೆ ಒಂದು ರೀತಿಯ ಅಸ್ಪೃಶ್ಯತಾ ಭಾವನೆಯಿದೆ. ಇದರಲ್ಲಿ ದೊಡ್ಡ ರಾದ್ಧಾಂತಗಳಾಗಿವೆ. ನಿಜ, ದೇಶದಲ್ಲಿ ಕೇವಲ ಶೇಕಡ ಮೂರರಷ್ಟು ಮಿಸ್-ಅಪ್ಲಿಕೇಷನ್ ಮಿಸ್-ರೆಪ್ರಸೆಂಟೇಷನ್ ಹಾಗೂ ಅವ್ಯವಹಾರ ನಡೆಯುತ್ತಿರುವುದು ಸಹಕಾರಿ ರಂಗದಲ್ಲಿ. ಆದರೆ, ಬೇರೆ ವ್ಯವಸ್ಥೆಯಲ್ಲಿ ನೋಡಿದರೆ ಬೇಕಾದಷ್ಟು ಅವ್ಯವಹಾರಗಳಾಗಿವೆ. ಇವೊತ್ತು, ರೈತನಿಗೆ, ಶ್ರೀಸಾಮಾನ್ಯನಿಗೆ ಸ್ಪಂದಿಸುವಂಥ ಈ ಸಹಕಾರ ಸಂಘಗಳಿಗೆ ನೀವು ಗಮನಕೊಟ್ಟಿಲ್ಲ. ಸಹಕಾರ ಸಂಘಗಳಿಗೆ ಏನು ಷೇರ್ ಕ್ಯಾಪಿಟಲ್ ಕೊಡಬೇಕೋ ಅದಕ್ಕೆ ಆದ್ಯತೆ ನೀಡಬೇಕು.

ಮುಖ್ಯವಾಗಿ ಪ್ರತಿ ವರ್ಷವೂ ರಾಜ್ಯದಲ್ಲಿರುವ ಸಹಕಾರಿ ಮಾರಾಟ ಮಹಾಮಂಡಳಿಯಲ್ಲಿ ಸಾಫ್ಟ ಲೋನ್ ಎಂದು ಸುಮಾರು 10 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರು. ಆದರೆ, ಕಳೆದೆರಡು ವರ್ಷಗಳಿಂದ ಸಾಫ್ಟ ಲೋನ್ ಅನ್ನು ನಿಲ್ಲಿಸಿದ್ದೀರಿ. ಇದನ್ನು ಮುಂದುವರೆಸಿಕೊಂಡು ಹೋಗಬೇಕು. ಕಾರಣವೇನೆಂದರೆ, ಮುಂದಿನ ಜೂನ್ ತಿಂಗಳಿನಿಂದ ನಮಗೆ ಸೀಜನ್ ಶುರುವಾಗುತ್ತದೆ, ನಾವು ನಾಲ್ಕು ತಿಂಗಳುಗಳ ಕಾಲ ಗೊಬ್ಬರವನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಕೂಡ ಸಂಗ್ರಹಿಸಬೇಕಾಗುತ್ತದೆ. ಅದಕ್ಕೆ ಬಡ್ಡಿ ದರವನ್ನು ಹೆಚ್ಚು ಮಾಡಿ ಕೊಟ್ಟರೆ ಕಷ್ಟವಾಗುತ್ತದಾದ್ದರಿಂದ ಹತ್ತುಕೋಟಿ ರೂಪಾಯಿಗಳನ್ನು ತಾವು ರಾಜ್ಯ ಸಹಕಾರ ಸಂಘಕ್ಕೆ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ವ್ಯವಸಾಯ ಇಲಾಖೆ ಬಗ್ಗೆ ಹೇಳುವುದಾದರೆ, ಈ ಇಲಾಖೆ ಇತ್ತೀಚೆಗೆ ಸ್ವಲ್ಪ ಚೇತರಿಸಿಕೊಂಡಿದೆ. ಸದರಿ ಇಲಾಖೆಯನ್ನು ಮೊದಲು 'ಬಿಳಿಯಾನೆ' ಎಂದು ಹೇಳುತ್ತಿದ್ದರು, ಇತ್ತೀಚೆಗೆ ಮಾನ್ಯ ಕೃಷಿ ಸಚಿವರಾದ ಬೈರೇಗೌಡರು ಇಲಾಖೆಗೆ ಚಾಲನೆ ಕೊಟ್ಟಿದ್ದು, ಈಗ ಇಲಾಖೆ ಸಂಪೂರ್ಣವಾಗಿ ಸರಿಯಾಗಿದೆಯೆಂಬುದು ನನ್ನ ಮನಸ್ಸಿನಲ್ಲಿಲ್ಲ. ಆದರೂ ಕೂಡ ಇನ್ನು ಬಹಳಷ್ಟು ಆಗುವುದಿದೆ. ವ್ಯವಸಾಯ ಇಲಾಖೆಯಲ್ಲಿ ಹಿಂದೆ ಭ್ರಷ್ಟಾಚಾರ ಬಹಳ ಇತ್ತು, ಇವೊತ್ತು ಅದಕ್ಕೆ ಸ್ವಲ್ಪ ಕಡಿವಾಣವಾಗಿದೆ. ಇದರ ಜೊತೆಗೆ ಇವೊತ್ತು ರಾಜ್ಯದಲ್ಲಿ ಬಹಳಷ್ಟು ಹತ್ತಿ ಬೆಳೆಯುವಂಥ ಜಿಲ್ಲೆಗಳಿವೆ. ಇವೊತ್ತಿಗೂ ಕೂಡ ನಮ್ಮ ರಾಜ್ಯದಲ್ಲಿ ಒಂದು ಸೊಫಿಸ್ಟಿಕೇಟೆಡ್ ಕಾಟನ್ ಟೆಸ್ಟಿಂಗ್ ಲ್ಯಾಬೋರೇಟರಿ ಇಲ್ಲ. ನಮ್ಮ ರಾಜ್ಯದ ಬೆಳೆದಂಥ ಹತ್ತಿ 80 ಕೌಂಟ್ ಬರುತ್ತದೋ, 30 ಕೌಂಟ್ ಬರುತ್ತದೋ, 60 ಕೌಂಟ್ ಬರುತ್ತದೋ ಎಂಬುದಕ್ಕೆ ಹತ್ತಿಯನ್ನು ಮುಂಬಯಿಗೆ ಕಳುಹಿಸಿ ಅಲ್ಲಿಂದ ಪರೀಕ್ಷೆ ಮಾಡಿಕೊಳ್ಳುವಂಥ ಪರಿಸ್ಥಿತಿ ನಮಗೆ ಉದ್ಭವಿಸಿದೆ. ಆದುದರಿಂದ ಅರ್ಥ ಸಚಿವರು ಇದರ ಬಗ್ಗೆ ಗಮನಹರಿಸಿ ಹುಬ್ಬಳ್ಳಿಯಲ್ಲಿ ಒಂದು ಸೊಫಿಸ್ಟಿಕೇಟೆಡ್ ಕಾಟನ್ ಟೆಸ್ಟಿಂಗ್ ಲ್ಯಾಬೋರೇಟರಿಯನ್ನು ಪ್ರಾರಂಭಿಸಬೇಕು. ಏಕೆಂದರೆ, ಹತ್ತಿ ಬೆಳೆಗಾರರಿಗೆ ಹುಬ್ಬಳ್ಳಿ ಕೇಂದ್ರಭಾಗವಾಗಿರುವುದಲ್ಲದೆ ಮಧ್ಯಭಾಗವಾಗಿರುವುದರಿಂದ ಅಲ್ಲೊಂದು ಕಾಟನ್ ಟೆಸ್ಟಿಂಗ್ ಲ್ಯಾಬೋರೇಟರಿಯನ್ನು ಸ್ಥಾಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನೀರಿನ ಸಮಸ್ಯೆ ಕುರಿತು ಹೇಳುವುದಾದರೆ, ಹದಿನೈದು ವರ್ಷಗಳ ಹಿಂದೆ 120 ಅಡಿಗಳಷ್ಟು ಆಳದಲ್ಲಿ ಸಿಗುತ್ತಿದ್ದ ನೀರು ಇಂದು ದಿನೇ ದಿನೇ ಕೆಳಗಡೆ ಹೋಗುತ್ತಿದೆ. ಅಂದರೆ, ನಮ್ಮ ಜಿಲ್ಲೆಯಲ್ಲಿ ಸುಮಾರು 500-600 ಅಡಿಗಳಷ್ಟು ಕೆಳಗಡೆ ಹೋಗಿದೆ. ಇವೊತ್ತು ಸಣ್ಣ ನೀರಾವರಿಗೆಂದು 80 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ, ಇದು ಏನೇನೂ ಸಾಲದು. ಆದುದರಿಂದ, ಇದಕ್ಕಾಗಿ ಕನಿಷ್ಠ 100 ಕೋಟಿ ರೂಪಾಯಿಗಳನ್ನಾದರೂ ಇಡಬೇಕು. ಅಲ್ಲದೆ, ಡಿ-ಸಿಲ್ಟಿಂಗ್ ಟ್ಯಾಂಕ್‌ಗೆ ಮತ್ತು ಅಫಾಲೆಸ್ಟೇಷನ್‌ಗೆ ದುಡ್ಡು ಕೊಡಬೇಕಾಗುತ್ತದೆ. ಒಂದು ವೇಳೆ ಇದನ್ನು ಮಾಡದೇ ಇದ್ದರೆ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಪರ್ಕ್ಯುಲೇಷನ್ ಟ್ಯಾಂಕ್ ನಿರ್ಮಿಸಿದ್ದು, ನೀರು ಬಂದ ನಂತರ ಟ್ಯಾಂಕ್‌ನಲ್ಲಿ ನೀರನ್ನು ನಿಲ್ಲಿಸಿಕೊಂಡು ನಂತರ ಅವರ ಭತ್ತದ ಬೆಳೆಗೆ ನೀರನ್ನು ಬಿಡುವುದಿಲ್ಲ, ಟ್ಯಾಂಕಿನ ಕೆಳಗಡೆ ಬಾವಿಗಳ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಆ ತರಹ ನೀರು ನಿಲ್ಲಿಸಿದರೆ ನಮ್ಮ ಬೋರ್‌ವೆಲ್‌ಗಳಲ್ಲೂ ಕೂಡ ಸಾಕಷ್ಟು ನೀರು ಬರುತ್ತದೆಂಬುದು ಅನುಭವವೇದ್ಯಸಂಗತಿ. ಇತ್ತೀಚೆಗೆ ನಮ್ಮ ತಾಲ್ಲೂಕಿನ ಭತ್ರಕೋಟೆ ಎಂಬ ಗ್ರಾಮದಲ್ಲಿ ಡಿ-ಸಿಲ್ಟಿಂಗ್ ಆದ ನಂತರ ಕೆರೆಯ ಕೆಳಗಡೆ

ಪ್ರದೇಶದಲ್ಲಿ ಮೂರೂ ತರಹದ ಬೆಳೆ ಬೆಳೆದಿದ್ದಾರೆ. ಕೆರೆಗಳ ಅಂಗಳ ಪ್ರದೇಶವನ್ನು ಅತಿಕ್ರಮ ಸಾಗುವಳಿ ಮಾಡಿಕೊಳ್ಳುತ್ತಿದ್ದು, ಇವತ್ತು ಇದನ್ನೆಲ್ಲಾ ತಡೆಗಟ್ಟಬೇಕಾಗುತ್ತದೆ. ಅಫಾರೆಸ್ಟೇಷನ್ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಪಶುಸಂಗೋಪನೆ ಕುರಿತು ಹೇಳುವುದಾದರೆ, ಇವತ್ತು ಬೇರೆ ದೇಶಗಳಲ್ಲಿ ವರ್ಷಕ್ಕೆ ಹತ್ತು ಸಾವಿರದಿಂದ ಹನ್ನೊಂದು ಸಾವಿರ ಲೀಟರ್‌ಗಳವರೆಗೆ ಹಾಲು ಕೊಡುವಂಥ ಹಸುಗಳಿದ್ದು, ನಮ್ಮ ದೇಶದಲ್ಲಿರುವ ಹಸುಗಳು ವರ್ಷಕ್ಕೆ ಆರರಿಂದ ಏಳು ಸಾವಿರ ಲೀಟರ್‌ಗಳವರೆಗೆ ಹಾಲು ಕೊಟ್ಟರೆ ಸಾಕಾಗಿದೆ. ವಿದೇಶಗಳಲ್ಲಿರುವ ಇಂತಹ ತಳಿಯ ಹಸುಗಳನ್ನು ನಮ್ಮ ರಾಜ್ಯಕ್ಕೆ ತರಿಸಿಕೊಳ್ಳಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ಕೋಳಿ ಸಾಕಣೆಗೆ ಹೆಚ್ಚು ಪ್ರೋತ್ಸಾಹ ಇಲ್ಲದಿರುವುದರಿಂದ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಂದ ಕೋಳಿಮೊಟ್ಟೆಗಳು ಹೆಚ್ಚು ಪ್ರಮಾಣದಲ್ಲಿ ಇಲ್ಲಿಗೆ ಬರುತ್ತಿದ್ದು ಇದನ್ನು ತಡೆಗಟ್ಟಬೇಕು. ಇನ್ನು ಇವತ್ತು ಸಹಕಾರ ಸಂಘಗಳ ಮೂಲಕ ಪಡೆದುಕೊಂಡಂಥ ಸಾಲದ ಬಡ್ಡಿ ಹಾಗೂ ಸುಸ್ತಿ ಬಡ್ಡಿಯನ್ನು ಮನ್ನಾಗೊಳಿಸುವುದು ಬಹಳ ತಪ್ಪು. ಇದರಿಂದ ಸಹಕಾರ ಸಂಘಗಳಲ್ಲಿನ ಕ್ರೆಡಿಟ್ ಸಿಸ್ಟಮ್ ಬಹಳ ಹಾಳಾಗಿದೆ. ಇತ್ತೀಚೆಗೆ ಸಹಕಾರ ಸಂಘದಿಂದ ಸಾಲ ಪಡೆದುಕೊಂಡಿದ್ದ ಒಬ್ಬ ಕ್ಲಾಸಿಕಲ್ ಡಿಫಾಲ್ಟರ್ ಇದ್ದ. ಅತ ನನ್ನ ಮನೆಗೆ ಬಂದು 'ನನ್ನ ಮನೆಯನ್ನು ಹರಾಜು ಹಾಕಿದ್ದಾರೆ, ಸರ್ಕಾರಕ್ಕೆ ತಿಳಿಸಿ ನನ್ನ ಸಾಲ ಮನ್ನಾ ಮಾಡಿಸಿ' ಎಂದ. ಆಗ ನಾನು 'ಹಾಗೆ ಮಾಡುವುದಕ್ಕಾಗುವುದಿಲ್ಲ, ನೀವು ದುಡ್ಡು ಕೊಡಲೇಬೇಕು' ಎಂದಾಗ 'ಪಾರ್ಲಿಮೆಂಟ್ ಚುನಾವಣೆ ಬರುತ್ತಿದ್ದು ಆಗ ಎಲ್ಲಾ ಸಾಲವನ್ನು ಮನ್ನಾ ಮಾಡುತ್ತಾರೆ. ಅದಕ್ಕೋಸ್ಕರ, ಇದೊಂದು ಭಾರಿ ಸಾಲ ಮನ್ನಾ ಮಾಡಿಸಬೇಕೆಂದು ಹೇಳಿ, ಇನ್ನೊಂದು ತಿಂಗಳು ಕಳೆದರೆ ಮನ್ನಾ ಮಾಡುತ್ತಾರೆ' ಎಂದ. ಈ ರೀತಿಯ ಭಾವನೆ ಇವತ್ತು ರೈತರಲ್ಲಿ ಬಂದಿದೆ.

(ಈ ಹಂತದಲ್ಲಿ ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ್‌ರವರು ಪೀಠವನ್ನಲಂಕರಿಸಿದರು.)

ತಪ್ಪು ಯಾರದೇ ಇರಬಹುದು, ಸಾಲ ಮನ್ನಾ, ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದರೆ ಈ ರಾಜ್ಯದಲ್ಲಿನ ಕ್ರೆಡಿಟ್ ಸ್ಟ್ರಕ್ಚರ್ ಹಾಳಾಗುತ್ತದೆ. ಆದುದರಿಂದ, ಸಾಲ ಕೊಡಬೇಕಾದರೆ ಶೇಕಡ 7ರಂತೆ ಬಡ್ಡಿ ದರ ವಿಧಿಸಿ ಕೊಡಿ. ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಶೇಕಡ 7ರಂತೆ ಬಡ್ಡಿ ದರ ವಿಧಿಸಿ ಸಾಲ ಕೊಡುತ್ತಿದ್ದರು. ಈ ತರಹ ಬಡ್ಡಿ ದರ ವಿಧಿಸಿ ಸಾಲ ಸೌಲಭ್ಯ ಕೊಡಬಹುದೇ ಹೊರತು ಸಾಲ ಮನ್ನಾ ಮಾಡುವುದಾಗಲಿ, ಬಡ್ಡಿ ಮನ್ನಾ ಮಾಡುವುದಾಗಲಿ, ಸುಸ್ತಿ ಬಡ್ಡಿ ಮನ್ನಾ ಮಾಡುವುದಾಗಲಿ ಮಾಡಿದರೆ ಕ್ರೆಡಿಟ್ ಸ್ಟ್ರಕ್ಚರ್‌ಗೆ ತೊಂದರೆಯುಂಟಾಗುತ್ತದೆ. ಏಕೆಂದರೆ, ಮನುಷ್ಯನಿಗೆ ಹಣವೆಂದರೆ ಸಹಜವಾಗಿ ಆಸೆ ಜಾಸ್ತಿ.

ಪಾರ್ಲಿಮೆಂಟ್ ಚುನಾವಣೆ ಬಂತೆಂದು ಮನ್ನಾ ಮಾಡುವುದಾದರೆ ಕ್ಲಾಸಿಕಲ್ ಡಿಫಾಲ್ಟರ್ ಯಾರಿರುತ್ತಾರೋ ಅವರಿಗೆ ನೀವು ಸಹಾಯ ಮಾಡಿದಂತಾಗುತ್ತದೆಯೇ ವಿನಹ ನಿಜವಾಗಿಯೂ ಯಾವ ರೈತ ಸಕಾಲದಲ್ಲಿ ಹಣವನ್ನು ಪಾವತಿಸುತ್ತಿರುತ್ತಾನೋ ಆತನಿಗೆ ತೊಂದರೆಯುಂಟು ಮಾಡಿದಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಾವು ಬಯಲುಸೀಮೆಯ ಅಭಿವೃದ್ಧಿಗೆ ಕೇವಲ ಐದು ಕೋಟಿ ರೂಪಾಯಿಗಳನ್ನಿಟ್ಟಿದ್ದೀರಿ. ಇದು ಮೂಗಿಗೆ ತುಪ್ಪಸವರಿದಂತಾಗುತ್ತದೆ.

ಅರ್ಥಸಚಿವರು ಇದರ ಬಗ್ಗೆ ಗಮನಹರಿಸಬೇಕು. ಮಲೆನಾಡು ಅಭಿವೃದ್ಧಿ ಮಂಡಳಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಮತ್ತು ಇತರೇ ಅಭಿವೃದ್ಧಿ ಮಂಡಳಿಗೇನು ಕೇವಲ ಐದು ಕೋಟಿ ಇಟ್ಟಿದ್ದೀರಿ ಇದು ಸಾಕಾಗುವುದಿಲ್ಲ, ಇವಕ್ಕೆ ಕೊನೆಯ ಪಕ್ಷ ಐವತ್ತು ಕೋಟಿ ರೂಪಾಯಿಗಳನ್ನಾದರೂ ಇಡಬೇಕಾಗುತ್ತದೆ. ನಮ್ಮ ಬಯಲು ಸೀಮೆಯಲ್ಲಿ ನೀರಿಲ್ಲ, ಆರುನೂರು ಅಡಿಗಳವರೆಗೆ ತೋಡಿದರೂ ನೀರು ಸಿಗುತ್ತಿಲ್ಲ, ವಿದ್ಯುತ್ ವಿಚಾರದಲ್ಲಿ ಹೇಳಲುಸಾಧ್ಯವಾದ ಪರಿಸ್ಥಿತಿ ಇದೆ. ವಿದ್ಯುತ್ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಯವರು ಒಂದು ವರ್ಷದಲ್ಲಿ ಎಲ್ಲಾ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳುತ್ತಾರೆ. ಆದರೆ ಕೆ.ಇ.ಬಿ.ಯ ಅಧ್ಯಕ್ಷರು ವಿದ್ಯುತ್ ಸಮಸ್ಯೆಯನ್ನು ಸರಿಪಡಿಸಲು ಎರಡು ವರ್ಷಗಳು ಬೇಕಾಗುತ್ತದೆಂದು ಹೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ಜನರಲ್ಲಿ ಗೊಂದಲ ಉಂಟಾಗುತ್ತದೆ. ತಾವು ಹೇಳುವುದು ಸರಿಯೋ ಅಥವಾ ಕೆ.ಇ.ಬಿ.ಯ ಅಧ್ಯಕ್ಷರು ಹೇಳುವುದು ಸರಿಯೋ ಎಂಬ ಬಗ್ಗೆ ಇರತಕ್ಕ ಗೊಂದಲವನ್ನು ಸರಿಪಡಿಸಬೇಕು. ಇಲ್ಲದಿದ್ದರೆ ಕೆ.ಇ.ಬಿ.ಯ ಅಧ್ಯಕ್ಷರ ಮೂಲಕ ಒಂದು ವರ್ಷದಲ್ಲಿ ಈ ಸಮಸ್ಯೆಯನ್ನು ಸರಿಮಾಡುತ್ತೇವೆಂದಾದರು ಹೇಳಿಸಬೇಕು. ಇಲ್ಲದಿದ್ದರೆ ತಾವು ಹೇಳಿರುವುದು ತಪ್ಪಾಗಿದೆಯೆಂದಾದರೂ ಹೇಳಬೇಕು. ಸರ್ಕಾರ ಒಂದು ರೀತಿ ಹೇಳುವುದು, ಅಧಿಕಾರಿಗಳು ಮತ್ತೊಂದು ರೀತಿ ಹೇಳುವುದು ತಪ್ಪಾಗುತ್ತದೆ. ಇದರ ಬಗ್ಗೆ ಸಹ ಸರ್ಕಾರ ಗಮನಿಸಬೇಕೆಂದು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಇಂದು ಎರಡೇ ಎರಡು ರಾಜ್ಯಗಳಲ್ಲಿ, ಪವರ್ ಟೇಲ್ಲರ್, ಕಾರ್ಖಾನೆಗಳಿವೆ. ಒಂದು ಬೆಂಗಳೂರು ಮತ್ತೊಂದು ಕೇರಳದಲ್ಲಿ. ಕೇರಳದಲ್ಲಿ ಒಂದು ಪವರ್ ಟೇಲ್ಲರ್‌ನ್ನು ಕೊಳ್ಳಬೇಕಾದರೆ ಐವತ್ತು ಪರ್‌ಸೆಂಟ್ ಸಬ್ಸಿಡಿಯನ್ನು ಕೊಡುತ್ತಾರೆ. ಇವತ್ತು ಪವರ್ ಟೇಲ್ಲರ್‌ವನ್ನು ಕೊಂಡುಕೊಳ್ಳಬೇಕಾದರೆ ಸುಮಾರು ಒಂದು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಕೇರಳದಲ್ಲಿ ಐವತ್ತು ಪರ್‌ಸೆಂಟ್ ಸಬ್ಸಿಡಿಯನ್ನು ಕೊಡುತ್ತಿರಬೇಕಾದರೆ ತಾವು ನಮ್ಮಲ್ಲಿ ಹೋದ ವರ್ಷ ಪವರ್ ಟಿಲರ್ ಮೇಲೆ ಎರಡು ಪರ್‌ಸೆಂಟ್‌ಗೆ ಏರಿಸಿದ್ದೀರಿ. ಕೇರಳಾದಲ್ಲಾದ ಪವರ್ ಟಿಲ್ಲರ್‌ಗಳು ನಮ್ಮ ರಾಜ್ಯದಲ್ಲಿ ಮಾರಾಟವಾಗಲ್ಪಟ್ಟು ಅವರು ಆದಾಯವನ್ನು ಮಾಡುತ್ತಿದ್ದಾರೆಯೇ ವಿನಹ ನಮ್ಮ ರಾಜ್ಯದಲ್ಲಿ ಉತ್ಪಾದನೆ ಮಾಡಿದಂಥ ಪವರ್ ಟಿಲ್ಲರ್ ಮಾರಾಟವಾಗದೆ ನಮಗೆ ಆಗತಕ್ಕ ಆದಾಯ ತಪ್ಪುತ್ತಿದೆ. ಪವರ್ ಟಿಲ್ಲರ್‌ನ್ನು ಸಾಮಾನ್ಯವಾಗಿ ಬಳಸುವವರು ಸಣ್ಣ, ಮಧ್ಯಮ ರೈತರುಗಳು. ಆದ್ದರಿಂದ ತಾವೇನು ಅದರ ಮೇಲೆ ನಾಲ್ಕು ಪರ್‌ಸೆಂಟ್ ತೆರಿಗನೆಯನ್ನು ಹಾಕಿದ್ದೀರಿ ಅದನ್ನು ಮನ್ನಾ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ ಗೌಡರೇನು ಹೇಳುತ್ತಿದ್ದಾರೆ, ಬಹುಶಃ ಎಲ್ಲಾ ಶಾಸಕರುಗಳು ಅಭಿಪ್ರಾಯವೂ ಅದೇ ಆಗಿದೆ. ಅವರು ಹೇಳಿರುವಂತೆ ಪವಲ್ ಟೇಲ್ಲರ್ ಮೇಲೆ ಮಾರಾಟ ತೆರಿಗೆಯನ್ನು ಆ ರೀತಿ ಮಾಡಿದರೆ ರೈತ ಬದುಕಿಕೊಳ್ಳುತ್ತಾನೆ. ಇದರ ಬಗ್ಗೆಯೇ ಶ್ರೀನಿವಾಸಗೌಡರು ಹೇಳುತ್ತಿದ್ದಾರೆ. ಅವರ ಅಭಿಪ್ರಾಯಕ್ಕೆ ನಾನೂ ಸಮ್ಮತಿಸುತ್ತೇನೆ. ಈ ಸದನದ ಅಭಿಪ್ರಾಯವೂ ಅದೇ ಆಗಿದೆ. ಇವತ್ತು ಸಣ್ಣ ಮತ್ತು ಮಧ್ಯಮ ರೈತರುಗಳು ಟ್ರಾಕ್ಟರ್‌ಗಳನ್ನು ಕೊಂಡುಕೊಳ್ಳಲು ಆಗುವುದಿಲ್ಲ. ಆದ್ದರಿಂದ ಅವರುಗಳು ಪವರ್‌ಟಿಲ್ಲರ್ ಇಟ್ಟುಕೊಳ್ಳುತ್ತಿದ್ದಾರೆ. ಆದ್ದರಿಂದ ತಾವು ಉತ್ತರವನ್ನು ಕೊಡತಕ್ಕ ಸಮಯದಲ್ಲಿ ಇದರ ಮೇಲಿರುವ

ಎಲ್ಲಾ ತರಿಗೆಯನ್ನು ರದ್ದುಮಾಡಿದ್ದೇನೆ ಎಂದು ಹೇಳಬೇಕು. ತಾವು ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ಇನ್ನು ರೇಷ್ಮೆಯ ಬಗ್ಗೆ ಹೇಳುವುದಾದರೆ, ಇವತ್ತು ಒಳ್ಳೆಯ ರೇಷ್ಮೆಯ ತಳಿಗಳಿಲ್ಲ. ಇವತ್ತು ಜಪಾನ್, ಚೈನಾಗಳಲ್ಲಿ ಒಂದು ಗೂಡಿಗೆ 1400 ರಿಂದ 1800 ಮೀಟರ್‌ವರೆಗೆ ದಾರವನ್ನು ತೆಗೆಯತಕ್ಕಂಥ ತಳಿಗಳಿವೆ. ಅಂತಹ ತಳಿಗಳನ್ನು ಉತ್ಪಾದನೆ ಮಾಡಲು ಅಲ್ಲಿ ಮೊಟ್ಟೆಗಳಿವೆ. ನಮ್ಮಲ್ಲಿ ಹೆಚ್ಚೆಂದರೆ 700-800 ಮೀಟರ್‌ವರೆಗೆ ದಾರವನ್ನು ತೆಗೆಯುವಂಥ ಪರಿಸ್ಥಿತಿಯಲ್ಲಿದ್ದೇವೆ. ಆದ್ದರಿಂದ ನಾವು ರೇಷ್ಮೆಗೆ ಒತ್ತುಕೊಡದಿದ್ದರೆ ಕಷ್ಟವಾಗುತ್ತದೆ. ಕೇಂದ್ರ ಸರ್ಕಾರದ ಧೋರಣೆಯಿಂದಾಗಿ, ಚೈನಾ ದೇಶದಿಂದ ರೇಷ್ಮೆಯನ್ನು ಆಮದು ಮಾಡಿಕೊಂಡಿರುವ ಫಲವಾಗಿ ನಮ್ಮಲ್ಲಿ ರೇಷ್ಮೆಯ ಬೆಲೆ ಬಹಳ ಕಡಿಮೆಯಾಗಿದೆ. ಆದ್ದರಿಂದ ನಾವು ರೇಷ್ಮೆ ಬಿತ್ತನೆಯ ಕಡೆಗೆ ಹೆಚ್ಚು ಆದ್ಯತೆಯನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ತಾವು ಮುನಿಸಿಪಾಲಿಟಿ ಮತ್ತು ನಗರ ಸಭೆಗಳಿಗೆ ಚುನಾವಣೆಯನ್ನು ನಡೆಸಿದ್ದೀರಿ. ನಮ್ಮ ಕೋಲಾರ ಜಿಲ್ಲೆಯಲ್ಲೇ ಉದಾಹರಣೆಗೆ ತೆಗೆದುಕೊಂಡರೆ ಮೂವತ್ತು ವರ್ಷಗಳ ಹಿಂದೆ ಕೋಲಾರ ನಗರದಲ್ಲೇನು ಒಳಚರಂಡಿ ವ್ಯವಸ್ಥೆಯನ್ನು ಮಾಡಲಾಗಿತ್ತೋ ಅದನ್ನು ಬಿಟ್ಟರೆ ಮತ್ತೆ ಅಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮಾಡಲು ಹೋಗಿಲ್ಲ. ಕನಿಷ್ಠ ಜಿಲ್ಲಾ ಕೇಂದ್ರಗಳಲ್ಲಾದರೂ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಬೇಕು. ಕೋಲಾರದಲ್ಲಿ ಆಗ ಒಳಚರಂಡಿ ವ್ಯವಸ್ಥೆಯನ್ನು ಮಾಡಿದ ಮಾನ್ಯ ಚನ್ನಯ್ಯನವರನ್ನು ನಾವು ಇಂದು ನೆನಸಿಕೊಳ್ಳಬೇಕಾಗಿದೆ. ಆಗ ಕೋಲಾರ ಬಹಳ ಸಣ್ಣದಾದ ಊರಾಗಿತ್ತು. ಅಲ್ಲು ಅವರು ಒಳಚರಂಡಿ ವ್ಯವಸ್ಥೆಯನ್ನು ಮಾಡಿದ್ದರು. ಇವತ್ತು ಕೋಲಾರ ನಗರವು ಬೃಹದಾಕಾರವಾಗಿ ಬೆಳೆದಿದೆ. ಕೊನೆಯ ಪಕ್ಷ ಜಿಲ್ಲಾ ಕೇಂದ್ರಗಳಲ್ಲಾದರೂ ಒಳಚರಂಡಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ಮಾನ್ಯ ಅರ್ಥಸಚಿವರು ಗಮನಹರಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಎ.ಪಿ.ಎಂ.ಸಿ. ವತಿಯಿಂದ ಒಂದೊಂದು ತಾಲ್ಲೂಕಿನಲ್ಲಿ ಐವತ್ತು ಕಿಲೋಮೀಟರ್ ರಸ್ತೆಯನ್ನು ಮಾಡುವುದಾಗಿ ಸರ್ಕಾರ ತೀರ್ಮಾನ ತಾಲ್ಲೂಕಿನಲ್ಲಿ ಐವತ್ತು ಕಿಲೋಮೀಟರ್ ರಸ್ತೆಯನ್ನು ಮಾಡುವುದಾಗಿ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಇದು ಬಹಳ ಸಂತೋಷದ ಸಂಗತಿಯಾಗಿದೆ. ಸರ್ಕಾರವನ್ನು ನಾವು ಪ್ರಶಂಸಿಸುತ್ತೇವೆ. ರೈತರಿಂದ ಹಣವನ್ನು ವಸೂಲಿ ಮಾಡಿ ಅದನ್ನು ಯಾವ್ಯಾವುದಕ್ಕೆ ಉಪಯೋಗ ಮಾಡುತ್ತಿದ್ದರು ಎಂಬುದು ನಮಗೆ ಗೊತ್ತೇ ಆಗುತ್ತಿರಲಿಲ್ಲ. ಆದರೆ ಇಂದು ರೈತರ ಆ ಹಣವು ರೈತರಿಗೇ ಸೇರುವ ದಿಸೆಯಲ್ಲಿ ರಸ್ತೆಗಳನ್ನು ಮಾಡಿಕೊಂಡು ಅವಕಾಶ ಮಾಡಿಕೊಟ್ಟಿದ್ದೀರಿ. ತಾವು ಇದನ್ನು ಐವತ್ತು ಕಿಲೋಮೀಟರ್ ನಿಂದ ನೂರು ಕಿಲೋಮೀಟರ್ ವರೆಗೆ ಹೆಚ್ಚು ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಹೋದ ಸಲ ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆಗಳನ್ನು ಮಾಡಿಸಲು 90 ಕೋಟಿ ರೂಪಾಯಿಗಳನ್ನಿಟ್ಟಿದ್ದಿರಿ. ಆದರೆ ಈ ಬಾರಿ ಅದನ್ನು 60 ಕೋಟಿ ರೂಪಾಯಿಗಳಿಗೆ ಇಳಿಸಿದ್ದೀರಿ. ಅಂದರೆ ಪಿ.ಡಬ್ಲ್ಯೂ.ಡಿ. ರಸ್ತೆಗಳಿಗೆ ಕಡಿಮೆ ಹಣವನ್ನಿಟ್ಟಿದ್ದೀರಿ. ಇದು ಸರಿಯಲ್ಲ. ಏಕೆಂದರೆ, ಮೊನ್ನೆ ಕೋಲಾರ ಜಿಲ್ಲೆಯಲ್ಲಿ ಒಂದು ಅಪಘಾತವಾಯಿತು. ಆ ಪಿ.ಡಬ್ಲ್ಯೂ.ಡಿ ರಸ್ತೆಯ ಪಕ್ಕದಲ್ಲಿ ಮುಕ್ಕಾಲು ಅಡಿ ಹಳ್ಳ ಇದೆ. ಮತ್ತೊಂದು ದಿಕ್ಕಿನಿಂದ ಟೆಂಪೂ ಬರುತ್ತಿತ್ತು. ಆಗ ಅಪಘಾತವಾಯಿತು; ಸುಮಾರು ಹತ್ತು ಜನರು

ಸ್ಥಳದಲ್ಲೇ ಮೃತಪಟ್ಟರು. ಇವತ್ತು ಪಿ.ಡಬ್ಲ್ಯೂ.ಡಿ. ರಸ್ತೆಯ ಬಹಳ ಅವ್ಯವಸ್ಥೆಯಾಗಿದೆ. ಆದ್ದರಿಂದ ತಾವೇನು ಇಂದು 90 ಕೋಟಿ ರೂ.ಗಳಿಗೆ ಬದಲಾಗಿ ಏನು 60 ಕೋಟಿಯನ್ನಿಟ್ಟಿದ್ದೀರಿ ಅದನ್ನು ಕೊನೆಯ ಪಕ್ಷ ನೂರು ಕೋಟಿ ರೂಪಾಯಿಗಳಿಗೆ ಏರಿಸಬೇಕಾಗುತ್ತದೆ. ತಾವು ನೂರು ಕೋಟಿ ರೂಪಾಯಿಗಳನ್ನು ಪಿ.ಡಬ್ಲ್ಯೂ.ಡಿ. ರಸ್ತೆಗಳಿಗೆ ಇಡದಿದ್ದರೆ ಬಹಳ ಕಷ್ಟವಾಗುತ್ತದೆ. ಇದರ ಜೊತೆಗೆ, ಕೋಲಾರದಿಂದ ಎನ್.ಹೆಚ್. 7 ರಮೂಲಕ ಎನ್.ಹೆಚ್ 4ಕ್ಕೆ ಸೇರತಕ್ಕ ಮತ್ತೊಂದು ರಸ್ತ ಇದೆ. ವೇಮಗಲ್ ದಾಬಸ್ ಪೇಟೆಗೆ ಸೇರತಕ್ಕ ಆ ರಸ್ತೆಗೆ ತಾವು ಆದ್ಯತೆಯನ್ನು ಕೊಡಬೇಕು. ಹೊಸೂರು, ಮಾಲೂರು, ಕೋಲಾರ, ಬಂಗಾರಪೇಟೆ, ಕುಪ್ಪಗಳಿಂದ ಬಂದು ವೇಮಗಲ್ ಮೂಲಕ ಲಿಂಕ್ ರೋಡ್ ಮಾಡಬೇಕೆಂದು ಹೇಳಬಯಸುತ್ತೇನೆ. ಇವತ್ತು ಅರಣ್ಯ ಇಲಾಖೆಯ ಕಾರ್ಯವೈಖರಿಯು ಅರಣ್ಯರೋದನದಂತೆಯೇ ಆಗಿದೆ. ಅರಣ್ಯ ಇಲಾಖೆಯಿಂದ ಎಷ್ಟು ಹಣ ಖರ್ಚಾಗುತ್ತಿದೆ, ಎಷ್ಟು ಸಸಿಗಳನ್ನು ಬೆಳೆಸುತ್ತಿದ್ದಾರೆ ಎಂಬುದು ಯಾರಿಗೂ ಇಂದು ಅರ್ಥವಾಗುತ್ತಿಲ್ಲ. ಇವತ್ತು ಅರಣ್ಯದಲ್ಲಿ ಎಷ್ಟು ಸಸಿಗಳನ್ನು ಬೆಳೆಸಬೇಕಾಗಿತ್ತೋ ಅಷ್ಟು ಸಸಿಗಳನ್ನು ಬೆಳೆಸುತ್ತಿಲ್ಲ, ಕೋಟ್ಯಾಂತರ ರೂಪಾಯಿಗಳನ್ನು ಇದಕ್ಕಾಗಿ ಕೊಡುತ್ತಿದ್ದರೂ ರಸ್ತೆಗಳ ಪಕ್ಕದಲ್ಲಿ ಮರಗಳನ್ನು ಬೆಳೆಸುತ್ತಿರುವುದನ್ನು ಬಿಟ್ಟರೆ ಬೇರೆ ಏನೂ ಕೆಲಸ ಅರಣ್ಯ ಇಲಾಖೆಯಿಂದ ಕಂಡುಬರುತ್ತಿಲ್ಲ. ಈಗ ಇರತಕ್ಕ ಅರಣ್ಯವನ್ನಾದರೂ ಉಳಿಸತಕ್ಕ ಅಗತ್ಯವಿದೆ. ಮೊನ್ನೆ ನಾಗರಹೊಳೆಯ ಅರಣ್ಯದಲ್ಲಿ ಬೆಂಕಿ ಬಿದ್ದಿದ್ದ ಬಗ್ಗೆ ಕೇಳಿದೆ. ಆಗ ಅಲ್ಲಿನ ಅಧಿಕಾರಿಗಳು ಬೆಂಕಿಯನ್ನು ಆರಿಸಲು ಸರಿಯಾದ ಕ್ರಮ ತೆಗೆದುಕೊಳ್ಳಲಿಲ್ಲ ಅವರೇನಾದರೂ ಶ್ರಮವಹಿಸಿ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದರೆ ಅಲ್ಲಿ ಬಿದ್ದಿದ್ದ ಬೆಂಕಿಯನ್ನು ಇನ್ನೂ ಬೇಗನೆ ಆರಿಸಬಹುದಾಗಿತ್ತು. ತಾವುಗಳು ಅರಣ್ಯದ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ ಮಾನ್ಯ ಉಪಮುಖ್ಯಮಂತ್ರಿಯವರು ಇದಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕಾಗುತ್ತದೆ. ಕೋಲಾರದಲ್ಲಿ ಕೋಲಾರಬೆಟ್ಟವೆಂದು ಇದೆ. ಅದಕ್ಕೆ ಋಷ್ಯಶೃಂಗ ಪರ್ವತ ಎಂದು ಕರೆಯುತ್ತಾರೆ. ಆ ಬೆಟ್ಟದ ಸುತ್ತಮುತ್ತ ಏಳು ಗ್ರಾಮಗಳಿವೆ. ಸಾವಿರಾರು ಜನರು ಅಲ್ಲಿ ಜೀವನ ಮಾಡುತ್ತಿದ್ದಾರೆ. ಆದರೆ ಇದುವರೆಗೂ ಅಲ್ಲಿಗೆ ರಸ್ತೆಗಳಿಲ್ಲ. ಅಲ್ಲಿನ ಗರ್ಭಿಣಿ ಸ್ತ್ರೀಯರೇನಾದರೂ ಆಸ್ಪತ್ರೆಗೆ ಬರಬೇಕಾದರೆ ಸುಮಾರು ನಾಲ್ಕೈದು ಕಿಲೋಮಿಟರ್ ಬೆಟ್ಟದಿಂದ ಇಳಿದು ಬರಬೇಕಾಗುತ್ತದೆ. ಅಲ್ಲಿ ಒಳ್ಳೆಯ ಪ್ರೇಕ್ಷಣೆಯಸ್ಥಳಗಳಿವೆ. ಆದ್ದರಿಂದ ಇಲ್ಲಿಗೆ ರಸ್ತೆಗಳನ್ನು ಮಾಡಿ ಇದನ್ನು ಪ್ರೇಕ್ಷಣೆಯ ಸ್ಥಳವನ್ನಾಗಿ ಗುರುತಿಸಬೇಕೆಂದು ಈ ಸಮಯದಲ್ಲಿ ಹೇಳಬಯುಸುತ್ತೇನೆ, ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಕೋಲಾರ, ಕೆ.ಜಿ.ಎಫ್, ಮಾಲೂರು, ಬಂಗಾರಪೇಟೆ, ಶ್ರೀನಿವಾಸಪುರ ಇಷ್ಟು ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ. ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಮಾತನಾಡುತ್ತಾ ಮುನ್ನೂರು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿ ಕಾವೇರಿಯಿಂದ ನೀರನ್ನು ಇಲ್ಲಿಗೆ ಒದಗಿಸುವುದಾಗಿ ಹೇಳಿದ್ದಾರೆ. ತಾವು ವಿಶ್ವಬ್ಯಾಂಕಿನಿಂದ ಸಾಲ ಮಾಡಿಯಾದರೂ ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಹೇಳಬಯಸುತ್ತೇನೆ. ನಮ್ಮ ಸರ್ಕಾರ 3 ರೂ. 20 ಪೈಸೆ ದರದಲ್ಲಿ ಆಹಾರ ಸಬ್ಸಿಡಿಯನ್ನು ಕೊಟ್ಟು ಒಂದು ದೊಡ್ಡ ಸಾಧನೆಯನ್ನು ಮಾಡಿದೆ. ಈ ಯೋಜನೆಯನ್ನು ಪಟ್ಟಣಗಳಿಗೂ ವಿಸ್ತರಣೆ ಮಾಡುವುದಾಗಿ ಹೇಳಿದ್ದಾರೆ. ಇದನ್ನು ಇನ್ನು

ಮುಂದೆ ಜಾರಿಮಾಡುವುದಾಗಿ ಹೇಳಿದ್ದೀರಿ. ತಾವು ಪಟ್ಟಣಗಳಿಗೂ ಸಹ ಆಹಾರ ಸಬ್ಸಿಡಿಯನ್ನು ವಿಸ್ತರಿಸಬೇಕೆಂದು ಹೇಳಬಯಸುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಾನೂನು ಸುವ್ಯವಸ್ಥೆಯು ಬಹಳ ಚೆನ್ನಾಗಿದೆ. ಒಂದೆರಡು ಪ್ರಸಂಗಗಳನ್ನು ಬಿಟ್ಟರೆ ಒಟ್ಟಾರೆ ನಮ್ಮ ಸರ್ಕಾರದ ಕಾನೂನು ಸುವ್ಯವಸ್ಥೆ ಬಹಳ ಚೆನ್ನಾಗಿದೆ.

5.30 ಪಿ.ಎಂ.

ಹುಬ್ಬಳ್ಳಿಯಲ್ಲಿ ಸುಮಾರು 25 ವರ್ಷಗಳಿಂದ ಈದ್ಗಾ ಮೈದಾನದ ಸಮಸ್ಯೆಯನ್ನು ಪರಿಹರಿಸದೇ ಇಟ್ಟುಕೊಂಡಿದ್ದರು. ಈ ದೇವಸ್ಥಾನದ ಪಕ್ಷದವರು ಅದಕ್ಕೆ ಬೆಂಕಿ ಹಚ್ಚುತ್ತಿದ್ದರು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೇವಲ ಎರಡು ತಿಂಗಳಲ್ಲಿ ಹುಬ್ಬಳ್ಳಿಯ ವಿವಾದವನ್ನು ಬಗೆಹರಿಸಿದ್ದಾರೆ. ಅದರ ಶ್ರೇಯಸ್ಸು ನಮ್ಮ ಸರ್ಕಾರಕ್ಕೆ ಬರಬೇಕು. ಇವತ್ತು ಏನು ನೀವು ಈ ಆಯವ್ಯಯ ಪತ್ರವನ್ನು ನೀಡಿದ್ದೀರಿ, ಇದು ಬಹಳ ಶ್ರೀಸಾಮಾನ್ಯರಿಗೆ ಹೊಂದುವಂತಹ ಆಯವ್ಯಯ ಪತ್ರವಾಗಿದೆ ಎಂದು ಹೇಳುತ್ತೇನೆ. ಇವತ್ತು ಬಿಜಾಪುರದಲ್ಲಿ ಅತಿ ಹೆಚ್ಚು ದ್ರಾಕ್ಷಿಯನ್ನು ಬೆಳೆಯಲಾಗುತ್ತಿದೆ. ನಮ್ಮ ದೇಶದಲ್ಲೇ ಒಳ್ಳೆಯ ದ್ರಾಕ್ಷಿ ಬೆಳೆಯುವ ಸ್ಥಳವೆಂದರೆ ಬಿಜಾಪುರ ಜಿಲ್ಲೆ. ಇದಕ್ಕೆ ನೇರವಾಗಿ ರಫ್ತು ಮಾಡಲಿಕ್ಕೆ ಅವಕಾಶ ಕಡಿಮೆ ಇದೆ. ಇದಕ್ಕೆ ಎನ್.ಸಿ.ಡಿ.ಸಿ.ಯಿಂದ ಒಂದು ದೊಡ್ಡ ಪ್ರಾಜೆಕ್ಟ್, ಇಲ್ಲಿ ಬೆಳೆದಂತಹ ದ್ರಾಕ್ಷಿಯನ್ನು ನೇರವಾಗಿ ಹೊರ ದೇಶಗಳಿಗೆ ನಾವು ಯಾವ ತರಹ ಹಣ್ಣನ್ನು ತೆಗೆಯುತ್ತೇವೆಯೋ, ಅದೇ ತರಹ ಬೇರೆ ದೇಶಗಳಿಗೆ ರಫ್ತು ಮಾಡಲಿಕ್ಕೆ ಫ್ರೀ-ಕೂಲಿಂಗ್ ಯೂನಿಟ್ ಒಂದನ್ನು ಮಾಡಿಸಿಕೊಡಬೇಕೆಂದು ಈ ಸಮಯದಲ್ಲಿ ಹೇಳಿ, ಮತ್ತೊಮ್ಮೆ ಬಯಲುಸೀಮೆಗೆ ನೀವು ಆದ್ಯತೆ ಕೊಡಬೇಕು ಹಾಗೂ, ಕನಿಷ್ಟ 50 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಒತ್ತಾಯಿಸಿ, ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೇ, ಇವತ್ತು ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲ ಮಂಡಿಸಿದ ಎರಡನೇ ಆಯವ್ಯಯ ಪತ್ರದ ಮೇಲೆ ಬಹಳ ಗಂಭೀರವಾದ ಚರ್ಚೆ ನಡೆಯಿತು. ಆದರೆ ಪೂರ್ಣ ಆಯವ್ಯಯದ ಮಂಡನೆಯನ್ನು ನೋಡಿದಾಗ, ಇದರಲ್ಲಿ ಬೇರೆ ಮಾತೇ ಇಲ್ಲ. 'ಹಾವೂ ಸಾಯಬಾರದು, ಕೋಲೂ ಮುರಿಯಬಾರದು', ಎಂಬಂತಿದೆ. ಅಂದರೆ ಮುಂದಿನ ಚುನಾವಣೆಗೆ ಸಂಬಂಧಪಟ್ಟಂಥ ಬಜೆಟ್ ಇದು. ಆದರೆ ಅತ್ಯಂತ ಜವಾಬ್ದಾರಿಯುತವಾದ ಚಿಂತನೆ ಮಾಡಬೇಕಾಗಿತ್ತು. ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನುವುದಕ್ಕಿಂತ, ಆರ್ಥಿಕ ಚಿಂತನೆ ರಾಜ್ಯದ ಪರವಾಗಿ ನಾವು ಮಾಡಬೇಕು. ಬಹಳ ಗಂಭೀರವಾದಂತಹದ್ದಕ್ಕೆ ಹೋಗುವಂತಹ ಪರಿಸ್ಥಿತಿ ಬಂದಿದೆ. ಒಂದು ಸಲ ಕನಸಿನಿಂದ ನನ್ನ ತಂಗಿ ಬಂದಿದ್ದಳು. ಅವಳನ್ನು ನಾನು ಒಂದು ಪ್ರಶ್ನೆ ಮಾಡಿದೆ. ನೀನು ಸಂಬಳ ತೆಗೆದುಕೊಳ್ಳುತ್ತಿದ್ದೀಯ; ಸಂಬಳ ಬಂದ ತಕ್ಷಣ ನಿನ್ನ ಜವಾಬ್ದಾರಿ ಏನು ಎಂದು. ಅವಳು ಹೇಳಿದರು, ಮೊದಲು ಸರ್ಕಾರಕ್ಕೆ ಕೊಡಬೇಕಾದಂತಹ ತೆರಿಗೆಯನ್ನು ನಾನು ಕಟ್ಟುತ್ತೇನೆ ಎಂದು. ಅದು ನನ್ನ ಮೊದಲ ಜವಾಬ್ದಾರಿ ಎಂದಳು. ಸರ್ಕಾರದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ತೆರಿಗೆ ಹಣವನ್ನು ಹೆಚ್ಚು ಪ್ರಗತಿದಾಯಕವಾಗಿ ಉಪಯೋಗಿಸಿದರೆ, ಭ್ರಷ್ಟಾಚಾರ ಇಲ್ಲದೇ ಆ ಹಣ ನೇರವಾಗಿ

ಜನರಿಗೆ ಕಾರ್ಯಕ್ರಮಗಳ ಮೂಲಕ ತಲುಪಿದಾಗ ಆ ರಾಜ್ಯ ಸರಿಯಾದ ರೀತಿಯಲ್ಲಿ ಬೆಳೆಯಲು ಸಾಧ್ಯ. ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ಅದು ಸಾಧ್ಯವಿಲ್ಲ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ನಾನು ಹೊಸ ಸದಸ್ಯನಾಗಿ ವೀಕ್ಷಿಸಿದಾಗ, ಮಾನ್ಯ ಮುಖ್ಯಮಂತ್ರಿಗಳು, ಗ್ರಾಮೀಣ ಜೀವನ, ಕೃಷಿ ಕ್ಷೇತ್ರದ ಬಗ್ಗೆ ಬಹಳ ದುಃಖದಿಂದ, ಆಳುವ ರೀತಿಯಲ್ಲಿ ಮಾತನಾಡುತ್ತಿದ್ದರು. ನನಗೆ ಅನಿಸಿತು, ಗ್ರಾಮೀಣ ಪ್ರದೇಶಕ್ಕೆ, ಕೃಷಿ ಕ್ಷೇತ್ರಕ್ಕೆ ಏನೋ ಒಂದು ಹೊಸ ಕ್ರಾಂತಿ ಆಗಬಹುದೋ ಏನೋ ಎಂದು ನಾನು ಆಸೆ ಇಟ್ಟುಕೊಂಡಿದ್ದೆ. ಆದರ ಈಗಾಗಲೇ 14 ತಿಂಗಳು ಆಯಿತು. ಸರ್ಕಾರದ ಕಾರ್ಯವೈಖರಿಯನ್ನು ನೋಡುತ್ತಿದ್ದೇನೆ. ಮೊದಲನೇ ಸಾರಿ ಅಧಿಕಾರ ಬಂದ ಕೂಡಲೇ ಸಹಕಾರ ಸಂಘಗಳ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದಿರಿ. ಏಕೆ ಮನ್ನಾ ಮಾಡಿದ್ದೀರಿ ಎಂದು ಹೇಳಿದರೆ, ಬಹಳ ಅದ್ಭುತವಾದ ಸುಳ್ಳನ್ನು ಈ ಬಗ್ಗೆ ಹೇಳಿದ್ದೀರಿ. ಒಂದು ಸಾಲಕ್ಕೆ ಬಡ್ಡಿ ಮನ್ನಾ ಮಾಡಬೇಕಾದರೆ, ಒಂದು ಸಾಲವನ್ನು ಮನ್ನಾ ಮಾಡಬೇಕಾದರೆ ಸರ್ಕಾರ, ಅದಕ್ಕೆ ತನ್ನದೇ ಆದಂತಹ ವೈಜ್ಞಾನಿಕ ಆಲೋಚನೆ ಇರಬೇಕು. ಕೃಷಿ ಕ್ಷೇತ್ರದ ಅರಿವು ಪೂರ್ಣ ಇರಬೇಕಾಗುತ್ತದೆ. ಸಾಲ ಬಡ್ಡಿ ಮನ್ನಾ ಬಗ್ಗೆ ತಾವು ಏನು ಹೇಳಿದ್ದೀರಿ ಎಂದರೆ, ರೈತರು ಕೆಲವೊಂದು ಸಹಕಾರ ಸಂಘಗಳಿಂದ ಪಡೆದಂತಹ ಸಾಲವನ್ನು, ಪ್ರಕೃತಿ ವಿಕೋಪದಿಂದ ಸಾಲ ಮರುಪಾವತಿ ಮಾಡಲಾಗದೇ, ಪ್ರಕೃತಿ ವಿಕೋಪ ಬರೀ ಬಡ್ಡಿವೊಂದಕ್ಕೆ ಆಗುತ್ತದೆಯೇ? ಪ್ರಕೃತಿ ವಿಕೋಪ ಒಂದು ಸಾರಿ ಬೆಳೆಯ ಮೇಲೆ ಆದರೆ ಪೂರ್ಣ ಬೆಳೆ ನಾಶವಾಗುತ್ತದೆ. ಇಲ್ಲ, ನಷ್ಟ ಆದರೆ ಪೂರ್ಣ ನಷ್ಟ ಆಗುತ್ತದೆ. ಅದರ ಮೇಲಿನ ಬಡ್ಡಿ, ಆದರೆ ನಷ್ಟ ಬಡ್ಡಿ ಮಾತ್ರ ಆಗಿತ್ತಾ, ಅಸಲು ಆಗಿತ್ತಾ ಎಂದು ತಾವು ತಿಳಿಯಬೇಕು. ಯಾವುದೇ ಸರ್ಕಾರ ವೈಜ್ಞಾನಿಕ ಬೆಲೆ ನೀತಿ ಕೃಷಿ ಕ್ಷೇತ್ರದಲ್ಲಿ ಯಾವುದೇ ಕಾರಣಕ್ಕೆ, ರೂಪಿಸದೇ ಇದ್ದರೆ ಅದರಿಂದ ಪರಿಣಾಮ ಏನು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಅದು ಕೇಂದ್ರ ಸರ್ಕಾರದ ಮೇಲೆ ತಾವು ಹೇಳಬಹುದು, ರಾಜ್ಯ ಸರ್ಕಾರ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಬಹುದು. ಆದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಹೋರಾಟ ಮಾಡಬೇಡಿ ಎಂದು ಯಾರೂ ಹೇಳಲಿಲ್ಲ. ಹತ್ತಿ ಬೆಳೆ ನಾಶವಾಗಿದೆ. 3,800 ರೂಪಾಯಿಗಳು ಇದ್ದಂತಹ ಕಡೆ 1,400 ರೂ.ಗಳು ಮಾತ್ರ ಇದೆ. ಏಕೆ ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಸರ್ಕಾರ ಹೋರಾಟ ಘೋಷಣೆ ಮಾಡಲಿಲ್ಲ? ಮಾಡಬಹುದು, ಅದೇನು ದೊಡ್ಡ ಸುದ್ದಿ ಎನ್ನುತ್ತೀರಿ ನೀವು. ಇವತ್ತು ಕಬ್ಬಿನ ವಿಚಾರದಲ್ಲಿ, ಕೇಂದ್ರ ಸರ್ಕಾರದ ವಿರುದ್ಧ ಏಕೆ ನೀವು ಹೋರಾಟ ಮಾಡಲಿಕ್ಕೆ ಆಗಲಿಲ್ಲ? ಕಬ್ಬಿನ ಸಮಸ್ಯೆ ಬಗ್ಗೆ ನೀವು ಹೋರಾಟ ಮಾಡಲಿಕ್ಕಾಗುವುದಿಲ್ಲವೆ? ಕರ್ನಾಟಕದಲ್ಲಿ ಎರಡೂ ಕಾಲು ಕೋಟಿ ಟನ್ ಕಬ್ಬಿದೆ, ಒಂದು ಕಾಲೂ ಕೋಟಿ ಟನ್ ಮಾತ್ರ ಕಾರ್ಖಾನೆ ಅರೆಯುವ ಸಾರ್ಮಥ್ಯ ಇದೆ ಎಂದು ನಾವೆಲ್ಲಾ ಮಾತನಾಡಿಕೊಳ್ಳುತ್ತೇವೆ. ಇನ್ನೂ ಒಂದು ಟನ್ ಕೋಟಿ ಕಬ್ಬಿದೆ, ನಾವು ರಾಜ್ಯ ಸರ್ಕಾರದವರು ಇರತಕ್ಕಂತಹ ಕಾರ್ಖಾನೆಗಳಿಂದ ಹೆಚ್ಚಿನ ಕಬ್ಬನ್ನು ಅರೆಯತಕ್ಕ ಸಾಮರ್ಥ್ಯ ಇಲ್ಲ ಎಂದು ಹೇಳುತ್ತೇವೆ. ಇದಕ್ಕೆ ಕಾರಣ ಏನು? ಆ ಕಬ್ಬು ಹಾಗೆಯೇ ಉಳಿದುಕೊಳ್ಳಬೇಕೇ? ಉದಾಹರಣೆಗೆ ನಮ್ಮ ರಾಜ್ಯದಲ್ಲಿ 8-10 ಸಾವಿರ ಗಾಣ ಇದೆ. 10,000 ಸಾವಿರ ಗಾಣ ಒಂದು ದಿವಸಕ್ಕೆ 1 ಲಕ್ಷ ಟನ್ ಕಬ್ಬು ಅರೆಯತಕ್ಕಂತಹ ಸಾಮರ್ಥ್ಯ ಇದೆ. ನಮ್ಮ ಹೆಚ್ಚುವರಿ ಕಬ್ಬು, ನಾಲ್ಕು ತಿಂಗಳಲ್ಲಿ ಒಂದೂ ಸ್ವಲ್ಪ ಕಬ್ಬೂ ಉಳಿದುಕೊಳ್ಳುವುದಿಲ್ಲ ನಮ್ಮ ರಾಜ್ಯದಲ್ಲಿ, ಖಂಡಸಾರಿಗಳು ಮತ್ತು

ಆ ಗಾಣಗಳು ಮನಸ್ಸು ಮಾಡಿದರೆ. ಓಪನ್ ಮಾರ್ಕೆಟನಲ್ಲಿ 11½-12 ರೂ. ಸಕ್ಕರೆ ಬೆಲೆ ಇದೆ. ಲೆವಿ ಬೆಲೆ 9 ರೂ. ಇದೆ. ಬೆಲ್ಲದ ಬೆಲೆ 350-400 ರೂ.ಗಳು. ಆ 9 ರೂ. 11 ರೂ.ಗೆ ಕನಿಷ್ಟ ಬೆಲೆ ಬೆಲ್ಲಕ್ಕೆ ಧಾರಣೆ ನಿಗಧಿ ಮಾಡಿದರೆ, ಕಬ್ಬಿನ ಸಮಸ್ಯೆ ಸ್ವಲ್ಪವೂ ಇರುವುದಿಲ್ಲ. ಫಸ್ಟ ಗ್ರೇಡೆಡ್ ಬೆಲ್ಲ 850 ರೂ. ಸೆಕೆಂಡ್ ಗ್ರೇಡೆಡ್ ಬೆಲ್ಲ 800 ರೂ.ಗಿಂತ ಹರಾಜಿನಲ್ಲಿ ಕಡಿಮೆ ಕೂಗಕೂಡದು ಅನ್ನತಕ್ಕಂಥ ಕೇಂದ್ರ, ಸರ್ಕಾರ, ರಾಜ್ಯ ಸರ್ಕಾರಗಳು ಒಂದು ಕಾನೂನು ಮಾಡಿದರೆ ರಾಜ್ಯದಲ್ಲಿ ಕಬ್ಬಿನ ಸಮಸ್ಯೆ ಯಾವುದೇ ಕಾರಣಕ್ಕೆ ಉಳಿದುಕೊಳ್ಳುವುದಿಲ್ಲ. ಉದಾಹರಣೆಗೆ ಒಂದು ವಿಷಯ ಹೇಳುತ್ತೇನೆ. ಮೊದಲು 50 ಸಾವಿರ ಲಾರಿ ಉತ್ಪಾದನೆ ಮಾಡುತ್ತಿದ್ದುದು ಈಗ 5 ಲಕ್ಷ ಲಾರಿ ಉತ್ಪಾದನೆ ಮಾಡಬಹುದು. ಯಾರಾದರೂ ಎರಡೂವರೆ ಲಕ್ಷ ರೂ.ಗಳಿಗೆ ಮಾರುತ್ತಿದ್ದುದನ್ನು ಎರಡು ಲಕ್ಷಕ್ಕೆ ಮಾರಿದ ಉದಾಹರಣೆ ಇದೆಯೇ? ಅಂತಹ ಉದಾಹರಣೆ ಇಲ್ಲ. ಮೊದಲು ಬೆಲ್ಲದ ರೇಟ್ 1100-1150 ರೂ.ಗಳು ಇತ್ತು. ಆಗ ಹೇಗೆ ಕೊಂಡುಕೊಳ್ಳುತ್ತಿದ್ದಿರಿ. ಹೆಚ್ಚು ಉತ್ಪಾದನೆಯಾಗಿ ಬೆಲ್ಲ ಎಲ್ಲಾ ಕಡೆಗೆ ಹೋಗುತ್ತಿತ್ತು. 1150 ರೂ. ಬೆಲ್ಲದ ರೇಟು ಇತ್ತು. ಆಗ ಹೇಗೆ ತೆಗೆದುಕೊಳ್ಳುತ್ತಿದ್ದರು. ಯಾವಾಗ ಹೆಚ್ಚು ಕಬ್ಬು ಉತ್ಪಾದನೆಯಾಗಿದೆ ಎಂದು ವರ್ತಕರಿಗೆ ಗೊತ್ತಾಯಿತೋ, ಹೆಚ್ಚು ಬೆಲ್ಲ ಸಿಗುತ್ತದೆ ಎಂದು ಗೊತ್ತಾಯಿತೋ, ಇಡೀ ಮಾರುಕಟ್ಟೆ ನಿಯಂತ್ರಣ ಅವರ ಕೈಯಲ್ಲಿರುವುದರಿಂದ, ಮಾರುಕಟ್ಟೆ ಪೂರ್ತಿ ಅವರ ಅಸ್ತಿತ್ವಕೆ ಬಂದಿರುವುದರಿಂದ ಮಾರುಕಟ್ಟೆಯ ಹಿಡಿತ ಅವರು ಸಾಧಿಸಿದ್ದರಿಂದ, ಈ ಪರಿಸ್ಥಿತಿ ಸೃಷ್ಟಿ ಆಯಿತು. ಸನ್ಮಾನ್ಯ ಕೃಷಿ ಮಂತ್ರಿಗಳಿಗೆ ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಇರಬಹುದು. ಆದರೆ ಇಡೀ ದೇಶದಲ್ಲಿ ಇಡೀ ರಾಜ್ಯ ಸರ್ಕಾರಗಳು ಕೃಷಿ ಕ್ಷೇತ್ರ ಅರಿವಿದ್ದು ಕೆಲಸ ಮಾಡಿದಾಗ ಮಾತ್ರ ರೈತರ ಸಮಸ್ಯೆ ಬಗೆಹರಿಸಲು ಸಾಧ್ಯ. ಇಲ್ಲದಿದ್ದರೆ ಸಮಸ್ಯೆ ಬಗೆಹರಿಸಲಿಕೆ ಸಾಧ್ಯವಿಲ್ಲ. ನಾವು ಸುಮಾರು ಆರು ತಿಂಗಳಿನಿಂದಲೂ ಭಾಷಣ ಮಾಡಿದ್ದೇವೆ, ಆದರೆ ನಷ್ಟವನ್ನು ಅನುಭವಿಸಿದವನು ರೈತ. ಈಗ ತಾವು ಹೇಳುತ್ತೀರಿ, ಪ್ರಕೃತಿ ವಿಕೋಪದಿಂದ ಸಾಲ ಮನ್ನಾ ಎಂದು. ಇವತ್ತು 50-70 ಲಕ್ಷಟನ್ ಕಬ್ಬು ಇರತಕ್ಕ ರೈತ 300 ರೂ.ಗಳಿಗೆ ಕಬ್ಬು ಮಾರಿದ್ದಾನೆ. 300 ರೂ.ಗಳಿಗೆ ಕಬ್ಬನ್ನು ಮಾರಿದ್ದಾರೆ ಎಂದರೆ ಆತನಿಗೆ ಸುಮಾರು 12 ಸಾವಿರ ರೂ. ಒಂದು ಎಕರೆಗೆ ಆಯಿತು. 12 ಸಾವಿರ ರೂ.ಗಳಲ್ಲಿ ಕಡುಗೂಲಿ 100 ರೂ. ಹೋದರೆ 200 ರೂ. ಉಳಿದುಕೊಳ್ಳುತ್ತದೆ. ಸೊಸೈಟಿ ಸಾಲ ಒಂದು ಎಕರೆ ಕಬ್ಬಿಗೆ 8 ಸಾವಿರ ರೂ.ಗಳು, 8. ಸಾವಿರ ಪ್ಲಸ್ ಬಡ್ಡಿ ಆತನಿಗೆ ಬೀಳುತ್ತದೆ. ಬಿತ್ತನೆ, ದನಗಳ ವೆಚ್ಚ ಬೇರೆಡೆ ಇರಲಿ. ಗೊಬ್ಬರ, ಎತ್ತು-ಗಾಡಿ, ಉಳುಮೆ, ಶ್ರಮ, ನೀರು ಕಟ್ಟಿರುವುದು, ಭೂಮಿ ಸಮತಟ್ಟು ಮಾಡಬೇಕಾಗಿರುವುದು ಇದೆಲ್ಲಾ ಖರ್ಚುಗಳು ಬೇರೆ ಬೇರೆ, ಈ ವರ್ಷ ನಷ್ಟ ಆಗಿರತಕ್ಕ ರೈತನಿಗೆ ಸುಧಾರಿಸಿಕೊಳ್ಳಲು ಇನ್ನೂ 5-10 ವರ್ಷಗಳು ಬೇಕು. ಈಗ ಆತ ಮತ್ತೆ ಸಾಲ ಮಾಡಬೇಕು, ಸಾಲ ಕಟ್ಟುವ ಸ್ಥಿತಿಯಲ್ಲಿ ಯಾರೂ ಇಲ್ಲ. ಬದುಕುವುದಕ್ಕೆ ಕಷ್ಟ ಪರಿಸ್ಥಿತಿ ಇರುವಾಗ ಸಾಲ ಕಟ್ಟುವುದೆಲ್ಲಿ? ಕೃಷಿ ಕ್ಷೇತ್ರ ಬಹಳ ದೊಡ್ಡ ಕ್ಷೇತ್ರ. 1930ರಲ್ಲಿ 1.25 ಲಕ್ಷ ಟನ್ ಉತ್ಪಾದನೆ ಮಾಡುತ್ತಿದ್ದಂತಹ ಈ ದೇಶದಲ್ಲಿ ಇವತ್ತು 160 ಲಕ್ಷ ಟನ್ ಸಕ್ಕರೆ ಉತ್ಪಾದನೆ ಮಾಡಿ ಇಡೀ ಪ್ರಪಂಚದಲ್ಲೇ ಮೊದಲನೆಯ ಸ್ಥಾನದಲ್ಲಿದ್ದೇವೆ. ಆದುದರಿಂದ ಸಹಕಾರ ಸಂಘದಿಂದ ಸಾಲದ ನೀತಿ, ಸಾಲ ಕಟ್ಟಬೇಕು, ಕಟ್ಟಬಾರದು ಎಂದು ನಾನು ಹೇಳುವುದಿಲ್ಲ. ನಾನು ಪವರ್ ಟಿಲ್ಲರ್ ಸಾಲ ಕಟ್ಟಬೇಡಿ ಎಂದು ಹೇಳಲಿಲ್ಲ. ಅಥವಾ

ಟ್ರಾಕ್ಟರ್ ಸಾಲ ಕಟ್ಟಬೇಡಿ ಎಂದು ಹೇಳಲಿಲ್ಲ. ಐಷಾರಾಮ ಜೀವನಕ್ಕೆ ತೆಗೆದುಕೊಂಡಿರತಕ್ಕ ಯಾವುದೇ ಸಾಮಾನುಗಳಿಗೆ ಸಾಲ ಕಟ್ಟಬೇಡಿ ಎಂದು ಹೇಳಿಲ್ಲ. ರೈತ ಎಂದರೆ ಸಾಲ ಮನ್ನಾ ಮಾಡುವುದಲ್ಲ; 300 ರೂ. ಬೆಲೆ ಕೊಟ್ಟು ಎಕರೆ ಕಬ್ಬು ಮಾರುವವರು ಯಾರಾದರೂ ನಾವು ಲಾಭ ಗಳಿಸುತ್ತೇವೆ ಎನ್ನುವವರನ್ನು ಕರೆದು ತನ್ನಿ ನೋಡೋಣ. ಯಾರು ಬೇಕಾದರೂ ಬೆಳೆದು ಮುನ್ನೂರು ರೂಪಾಯಿಯಲ್ಲಿ ಕಬ್ಬು ಮಾರಿ ಲಾಭ ಬಂದರೆ ನಾನು ತಲೆ ಬೋಳಿಸಿ ಕತ್ತೆ ಮೇಲೆ ಮೆರವಣಿಗೆ ಮಾಡಿಸಿಕೊಳ್ಳುತ್ತೇನೆ. ಇದು ಸುಲಭದ ವಿಷಯ ಅಲ್ಲ, ಬಹಳ ಗಂಭೀರವಾದ ವಿಷಯ. ಇವತ್ತು 100 ಟನ್ ಕಬ್ಬು ಹೊಡೆದು ಅವನು ಹೆಂಡತಿ ಮಕ್ಕಳನ್ನು ಸಾಕಿದರೆ ಸರಿಯಾಗಿ ಗೊತ್ತಾಗುತ್ತದೆ. ನಾನು ಏಕೆ ಈ ಮಾತು ಹೇಳುತ್ತಿದ್ದೇನೆ ಎಂದರೆ ನಾನು 20 ವರ್ಷಗಳ ಹಿಂದೆ ಒಂದು ಸಾರಿ ಬೂದುಗುಂಬಳ ಕಾಯಿ ಬೆಳೆದಿದ್ದೆ, ನಮ್ಮ ಅಪ್ಪ ಬಹಳ ಕೋಪಿಷ್ಟ, ಬೂದು ಕುಂಬಳಕಾಯಿ ಬೆಳೆಯಬೇಕಾದರೆ ಕಾರಣ ಏನೆಂದರೆ ನಾನು ನಮ್ಮ ಅಪ್ಪನಿಗೆ ಗೊತ್ತಿಲ್ಲದ ಹಾಗೆ 1,000 ರೂಪಾಯಿ ಸಾಲ ಮಾಡಿ ಬಿಟ್ಟಿದ್ದೆ. ಮೈಸೂರಿನಿಂದ ಕಕ್ಕಸ್ ಗೊಬ್ಬರ ತಂದು ಬಾಣಲಿಯಲ್ಲಿ ಎತ್ತಿ ಕಷ್ಟಪಟ್ಟು ನಾನೇ ಆ ಗೊಬ್ಬರ ಎಲ್ಲಾ ಕೈಯಲ್ಲಿ ಮುಟ್ಟಿ ಬಹಳ ಶ್ರಮ ಪಟ್ಟು ಬೆಳೆದೆ. ನಮ್ಮ ನಾಗೇಗೌಡರ ಸ್ನೇಹಿತರಾದ ನಮ್ಮ ಚಿಕ್ಕಪ್ಪ ಸಿ.ಎಸ್. ಶಿವಣ್ಣ ಎಂದು ಇದ್ದರು ಅವರು ಕಾಂಗ್ರೆಸ್‌ನ ರೈಟ್ ಹ್ಯಾಂಡ್ ಆಗಿದ್ದರು. ಇವರೂ ಕಾಂಗ್ರೆಸ್‌ನಲ್ಲಿ ಇದ್ದಾಗ ಅವರು ಇವರು ಸ್ನೇಹಿತರು. ಆಗ ಅವರ ಕೈಯಲ್ಲಿ ಬೆಂಗಳೂರಿಗೆ ಹೋಗಿ ಮಾರಿ ಬನ್ನಿ ಎಂದು ಕಳುಹಿಸಿಕೊಟ್ಟಿದ್ದೆ. ಬೆಂಗಳೂರಿನಲ್ಲಿ ಮಾರಿಬನ್ನಿ ಎಂದು ಬೂದುಗುಂಬಳ ಕಾಯಿ ಕಳುಹಿಸಿಕೊಟ್ಟು ನಾನು ಬಸ್‌ಸ್ಟ್ಯಾಂಡ್‌ನಲ್ಲಿ ಕಾಯುತ್ತಾ ಕುಳಿತಿದ್ದೆ. ಏನಾದರೂ ಲಾಭ ಬರಬಹುದು ಅಂತ. ಬಂದ ಮೇಲೆ 100 ರೂಪಾಯಿ ಕೊಡು ಬಾಡಿಗೆಗೆ ಸಾಲಲಿಲ್ಲ ಎಂದು ಅಂದರು. ಅದು ಏನೇ ಇರಲಿ ನಾನು ಹೇಳುವುದು ನಮ್ಮ ಮನೆಯಲ್ಲಿ ಅವತ್ತು ನನಗೆ ಊಟ ಮಾಡುವುದಕ್ಕೆ ಅಕ್ಕಿ ಇತ್ತು. ಬೇರೆ ಉದ್ಯೋಗ ಮಾಡುತ್ತಿದ್ದೇವೆ, ನಮ್ಮ ಅಪ್ಪ ರೈಸ್ ಮಿಲ್ ನಡೆಸುತ್ತಿದ್ದ, ಬೇರೆ ಬೇರೆ ಕಬ್ಬು ಹಾಕಿದ್ದೆವು, ತೆಂಗಿನ ತೋಟ ಇತ್ತು, ಊಟಕ್ಕೆ ಅನ್ನ ಇತ್ತು, ಆದರೆ ಕುಂಬಳ ಕಾಯಿ ಬೆಳೆದಿರತಕ್ಕಂತಹ ಸಾವಿರಾರು ಜನ ರೈತರು ಉಪವಾಸ ಇರಬೇಕಾಯಿತು. ಇದು ಪ್ರಶ್ನೆ ಅಲ್ಲ, ನಾನು ಹೇಳುತ್ತಾ ಇರುವುದು ಎರಡು ದಿವಸ ನಾನು ಅದೇ ಯೋಚನೆ ಮಾಡಿದೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ, ಪುಸ್ತಕದಲ್ಲಿ ಓದಿ ಕೃಷಿ ಕ್ಷೇತ್ರದ ಅನುಭವಕ್ಕೂ, ಜೀವನದಲ್ಲಿ ಅನುಭವಿಸಿರತಕ್ಕಂತಹ ಅನುಭವಕ್ಕೂ ಬಹಳ ವ್ಯತ್ಯಾಸ ಇದೆ. ಅವರಲ್ಲಿ ಏನು ಬಹಳ ದೊಡ್ಡ ಸುದ್ದಿ ಎಂದು ನಾನು ಹೇಳುತ್ತಿಲ್ಲ, ಒಂದು ಬೆಳೆ ನೀತಿ ಇಲ್ಲದೇ ಇದ್ದರೆ ರೈತನಿಗೆ ಏನು ಪ್ರಯೋಜನವಾಗುವುದಿಲ್ಲ. ಹಳ್ಳಿ ಜನ ಅನ್ನುವುದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು. ಎರಡನೇ ವಿಷಯದಲ್ಲಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಬಹಳ ಗಂಭೀರವಾಗಿ ತಾವು ಯೋಚನೆ ಮಾಡಿದ್ದೀರಿ, ವಿಕೇಂದ್ರೀಕರಣದ ಕಲ್ಪನೆ ನಮಗೆಲ್ಲರಿಗೂ ಇದೆ. ಆರ್ಥಿಕ ವಿಕೇಂದ್ರೀಕರಣ ಆಗಿದೆಯೇ; ಉದಾಹರಣೆಗೆ ಒಂದು ಪಂಚಾಯಿತಿಗೆ ನಾವು ಈಗ ಅಧಿಕಾರಕ್ಕೆ ಬಂದ ಮೇಲೆ ಒಂದು ಲಕ್ಷ 35.00 ರೂಪಾಯಿ ಕೊಟ್ಟಿದ್ದೀರಿ. ಒಂದು ಲಕ್ಷ 35,000 ರೂಪಾಯಿಯಲ್ಲಿ ಒಂದು ಪಂಚಾಯಿತಿ ಏನು ಮಾಡುತ್ತದೆ, ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡು ಲಕ್ಷ ರೂಪಾಯಿ ರೋಡಿಗೆ ಕೊಟ್ಟಿದ್ದೀರಿ. ಅದಕ್ಕೂ ಜೂನಿಯರ್ ಇಂಜಿನಿಯರ್, ಎರಡು ಲಕ್ಷ ರೂಪಾಯಿಯ ರೋಡ್ ಕಾಮಗಾರಿ

ನೋಡಿಕೊಳ್ಳುವುದಕ್ಕೆ ಒಬ್ಬ ಜೂನಿಯರ್ ಇಂಜಿನಿಯರ್. ಒಂದೊಂದು ಹೋಬಳಿಗೆ ಒಬ್ಬೊಬ್ಬ ಜೂನಿಯರ್ ಇಂಜಿನಿಯರ್. ಪ್ಲಾನಗೆ 35 ರೂಪಾಯಿ, ಆದರೆ ನಾನ್ ಪ್ಲಾನಗೆ 65 ರೂಪಾಯಿ. ವಿಕೇಂದ್ರಿಕರಣ ಎಂದರೆ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟ ಎಲ್ಲಾ ಫೈಲಗಳು ಎಲ್ಲಾ ಮಂಡ್ಯ ಜಿಲ್ಲೆಗೆ ಹೊರಟು ಹೋಗಬೇಕು. ಅಧಿಕಾರ ವಿಕೇಂದ್ರಿಕರಣ ಅಂದರೆ ಹಿಂದುಳಿದ ವರ್ಗದವರಿಗೆ ಛೇರ್ಮನ್ ಮಾಡಿ ಬಿಟ್ಟಿದೆ, ಮುಗಿಯಿತೇ? ಛೇರ್ಮನ್ ಏನು ಮಾಡುತ್ತಾನೆ, ಊರಿನವರ ಕೈಯಲ್ಲಿ ಬೈಸಿಕೊಳ್ಳುತ್ತಾನೆ. ಹೈಯಸ್ಟ ಬೈಗುಳ ಈ ರಾಜ್ಯದ ಈ ರಾಜ್ಯದ ಜನರಿಂದ ಬೈಸಿಕೊಳ್ಳುವವರು ಅಂದರೆ, ಹಳ್ಳಿಜನರು. ನಿಮಗೆ ಕಡಿಮೆ, ನಾವು ಮೂರನೇ ಸ್ಥಾನದಲ್ಲಿದ್ದೇವೆ. ತಾಲ್ಲೂಕು ಪಂಚಾಯಿತಿಯವರು ಎರಡನೇ ಸ್ಥಾನದಲ್ಲಿದ್ದಾರೆ, ನಾವು ಮೂರನೆಯವರು. ಮಂತ್ರಿಗಳು ಅವರ ಕೈಗೆ ಸಿಗುವುದಿಲ್ಲ, ಅದು ಬೇರೆ ಪ್ರಶ್ನೆ. ಆದರೆ ಇನ್ನು ಒಂದು ಸಾಮಾನ್ಯ ಕೃಷಿ ಸಚಿವರು ಏನಾದರೂ ಮಾಡಿ ನಮ್ಮ ಹಳ್ಳಿ ಜನರನ್ನು ಶ್ರೀಮಂತರನ್ನಾಗಿ ಮಾಡಬೇಕೆಂದು ತೀರ್ಮಾನಕ್ಕೆ ಬಂದರು. ಅವರು ಈ ಹೂವು ಸೀಗಡಿ ಇವಲ್ಲಾ ಬೆಳೆಸುವುದರ ಮೂಲಕ ರೈತರನ್ನು ಶ್ರೀಮಂತರನ್ನಾಗಿ ಮಾಡಬೇಕೆಂದು ಹೇಳಿದರು ಅದು ನಿಜ ಇರಬಹುದು.

(ಅಧ್ಯಕ್ಷರು ಶ್ರೀರಮೇಶ್ ಕುಮಾರ್ ಪೀಠವನ್ನು ಅಲಂಕರಿಸಿದರು)

ಆದರೆ ಎಷ್ಟು ಎಕರೆ ಬೆಳೆದರೆ ಮಾತ್ರ ಅಲ್ಲಿ ಆ ಹೂವು ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಷ್ಟು ಎಕರೆ ಸೀಗಡಿ ಹಾಕಿದರೆ ಎಷ್ಟು ಜನರಿಗೆ ಸೀಗಡಿಯಿಂದ ಲಾಭ ಸಿಗುತ್ತದೆ ಎಂಬುದನ್ನು ನೋಡಬೇಕು. ಆದರೆ ಸೇಮ್ ಅದೇ ಮಾರುಕಟ್ಟೆ. 100 ಪುಟ್ಟಿ ಟೊಮೊಟೋ ಹಣ್ಣು ಹೋದರೆ 50-50 ರೂಪಾಯಿ, ಎರಡು ಸಾವಿರ ಬುಟ್ಟಿ ಟೊಮಾಟೊ ಹೋದರೆ 200 ರೂ ಅಷ್ಟೆ. ಆ ಮಾರುಕಟ್ಟೆಯಲ್ಲಿ ಎಷ್ಟು ಕೊಂಡು ಕೊಳ್ಳುವುದಕ್ಕೆ ಸಾಮರ್ಥ್ಯ ಇದೆ? ಅಲ್ಲಿ ಅದರ ಬೆಲೆ ಒಂದು ನಿಗಧಿಯಾಗಿರುತ್ತದೆ. ಸರಿ, ಹೂವಿನಲ್ಲಿ ಎಲ್ಲರಿಗೂ ದುಡ್ಡು ಸಿಕ್ಕಿದೆ ಎಂದು ಎರಡು ಕಾಲು ಕೋಟಿ ಎಕರೆಯಲ್ಲಿ ಒಂದು ಕೋಟಿ ಎಕರೆಗೆ ಹೂವು ಹಾಕಿ ಬಿಟ್ಟರೆ, ಇಲ್ಲಿ 50 ಲಕ್ಷ ಎಕರೆಗೆ ಸೀಗಡಿ ಹಾಕಿ ಬಿಟ್ಟರೆ ಏನು ಆಗಬಹುದು? ಅವರ ಆಹಾರ ಉತ್ಪಾದನೆಗೆ ನಾವು ಭಾಷಣ ಮಾಡುತ್ತಿದ್ದೇವೆ. 86 ಲಕ್ಷ ಟನ್ ಉತ್ಪಾದನೆ ನಾವು ಈ ಸಾರಿ ಮಾಡಬೇಕಾಗಿತ್ತು, ಎರಡು ಸಾವಿರ ಇಸವಿ ಹೊತ್ತಿದೆ ನಾವು ಒಂದೂವರೆ ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡುತ್ತೇವೆ. ಒಂದು ಉದಾಹರಣೆ ಕೊಡುತ್ತೇನೆ, ಒಂದು ಸಾರಿ ಜಾರ್ಜ್‌ಬುಷ್ ಜಪಾನಿನಲ್ಲಿ ಮತಗಟ್ಟೆಗೆ ಬಂದನಂತೆ, ಜಪಾನ್ ರೈತರು ಒಂದು ಮಾತು ಹೇಳಿದರು, ತಂತ್ರಜ್ಞಾನದ ಬಗ್ಗೆ ನಿಮ್ಮ ಜೊತೆ ನಾನು ಮಾತನಾಡುವುದಕ್ಕೆ ತಯಾರು. ಆದರೆ ನಮ್ಮದು ಕೃಷಿ ಕ್ಷೇತ್ರ, ಸ್ವಾಭಿಮಾನ ಕ್ಷೇತ್ರ. ಕೃಷಿ ಕ್ಷೇತ್ರದ ಮೂಲಕ ಇಡೀ ದೇಶ ಬೆಳೆದಿರುವುದು. ಆ ಕೃಷಿ ಕ್ಷೇತ್ರಕ್ಕೆ ನೀವು ಹಸ್ತಕ್ಷೇಪ ಮಾಡಕೂಡದು, ಹಾಗಾದರೆ ಬಾ ಅಂದರಂತೆ. ಬಹಳ ಹೊತ್ತು ಮಾತುಕತೆ ಆದಿ ಕಿತ್ತಳೆ ಹಣ್ಣುಗಳ ಬಗ್ಗೆ ಒಪ್ಪಂದವನ್ನು ಮಾಡಿಕೊಂಡರು. ಜಪಾನ್ ರೈತರು ಕೇಳಿದಂತೆ ಕಿತ್ತಳೆ ಹಣ್ಣುಗಳ ಒಪ್ಪಂದ ಮಾಡಿಕೊಂಡ ಮೇಲೆ ಅಮೇರಿಕಾದ ಕಿತ್ತಳೆ ಹಣ್ಣು ಒಂದನ್ನೂ ಯಾರೂ ಮುಟ್ಟಬಾರದು ಎಂದು ಜಪಾನ್ ದೇಶದಲ್ಲಿ ತೀರ್ಮಾನ ತೆಗೆದುಕೊಂಡರು. ಕಿತ್ತಳೆ ಹಣ್ಣು ಒಬ್ಬರೂ ಮುಟ್ಟಲಿಲ್ಲ, ಅಮೇರಿಕಾದ

ಕಿತ್ತಳೆ ಹಣ್ಣು ಮತ್ತ ವಾಪಸ್ ಅಲ್ಲಿಗೇ ಹೋಯಿತು. ಅಂದರ, ಕೃಷಿ ಕ್ಷೇತ್ರದ ಮೇಲೆ ನಮ್ಮ ಸ್ವಾಭಿಮಾನ ಇರಬೇಕು. ಕೃಷಿ ಕ್ಷೇತ್ರವನ್ನು ನಾವು ಉಳಿಸಿ ಬೆಳೆಸಬೇಕು. ಇಡೀ ದೇಶದ ಜನರಿಗೆ ಅದು ಒಂದು ಸಂಪತ್ತು ಇದ್ದಹಾಗೆ. ಆ ಜನರು ಸಂಪದ್ಭರಿತವಾಗಿ ಇರಬೇಕಾದರೆ ಉತ್ತಮವಾದ ಪೌಷ್ಟಿಕಾಂಶವನ್ನು ನಾವು ಸೃಷ್ಟಿ ಮಾಡಲೇ ಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಕೇವಲ ನಾನು ಹೇಳಿರತಕ್ಕಂತಹ ಒಂದೆರಡು ಅಂಶಗಳನ್ನು ಮಾತ್ರ ಕುರಿತು ಹೇಳುತ್ತಿದ್ದಾರೆ. ನಾವು ಹೂವು ಬೆಳೆಸುವುದಕ್ಕೆ ಯಾರಿಗೆ ಸಾಧ್ಯ ಇದೆ ಅವರು ಹೂವು ಬೆಳೆಸಿ ಎಂದು ಇದರಲ್ಲಿ ಹೇಳಿರುವುದು ನಿಜ. ಸೀಗಡಿ ಬೆಳೆಯುವುದಕ್ಕೆ ಯಾರಿಗೆ ಸಾಧ್ಯ ಇದೆ, ಅದನ್ನು ಬೆಳೆಸಿ ಎಂದು ಹೇಳಿರುವುದು ನಿಜ. ಬರೀ ಇಷ್ಟಕ್ಕೆ ಸೀಮಿತವಾಗಿಲ್ಲ, ಯಾರ್‍ಯಾರಿಗೆ ಯಾವ ಹೈ ವ್ಯಾಲ್ಯೂ ಕ್ರಾಪ್ಸ ಹೆಚ್ಚು ಬೆಲೆ ಬಾಳತಕ್ಕಂತಹ ಬೆಳೆಗಳನ್ನು ಅವರವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳುವುದಕ್ಕೆ ಸಾಧ್ಯ ಇದೆ ಅದನ್ನು ಬೆಳೆಯಿರಿ ಎಂದು ಹೇಳಿದ್ದೇವೆ. ಆದರೆ ಒಟ್ಟಿನ ತಾತ್ಪರ್ಯ ಏನೆಂದರೆ ಹಣ, ದುಡ್ಡನ್ನು ಬೆಳೆಯಿರಿ ಎನ್ನುವ ಮಾತನ್ನು ನಾನೇ ಒಂದು ಕಡೆ ಅಲ್ಲ ಎಲ್ಲಾ ಕಡೆ ಹೇಳಿದ್ದೇನೆ. ಈಗಲೂ ಸಹ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಏಕೆಂದರೆ ಈ ಸಮಾಜದಲ್ಲಿ ರೈತರಿಗೆ, ಸ್ವಾಭಿಮಾನ ಇರಬೇಕು ಅನ್ನತಕ್ಕಂತಹ ವಿಷಯ ಖಂಡಿತವಾಗಿಯೂ ಬಹಳ ಸಂತೋಷ ತರತಕ್ಕಂತಹ ವಿಷಯ. ಅದರ ಬಗ್ಗೆ ನಾನು ಒಪ್ಪುತ್ತೇನೆ. ನಾನು ಅವರ ಪುಟ್ಟಣ್ಣಯ್ಯನವರನ್ನು ಅಭಿನಂದಿಸುತ್ತೇನೆ. ರೈತರನ್ನು ಕಾಲಿನ ಕಸಕ್ಕಿಂತ ಕಡಿಮೆಯಾಗಿ ಇವತ್ತಿನ ದಿವಸ ನೋಡುತ್ತಿದ್ದಾರೆ. ಇದು ಇವತ್ತಿನದು ಅಲ್ಲ ತಲೆ ತಲಾಂತರಗಳಿಂದ ಇದು ಆಗುತ್ತಾ ಬಂದಿದೆ. ಕಾರಣ ಏನೆಂದರೆ ಈ ಕಸುಬು ಲಾಭದಾಯಕ ಅಲ್ಲ. ಲಾಭದಾಯಕ ಅಲ್ಲದೆ ಇರುವ ಕಾರಣದಿಂದ ಯಾರು ಇವತ್ತು ದುಡ್ಡು ಇರುವವನೇ ದೊಡ್ಡಪ್ಪ ಎನ್ನತಕ್ಕಂತಹ ಸಮಾಜ ಇವತ್ತು ಸೃಷ್ಟಿಯಾಗಿದೆ. ಆ ಸಮಾಜ ಸೃಷ್ಟಿ ಯಾಗಿರುವುದರಿಂದ ಯಾರ ಹತ್ತಿರ ಹಣ ಇಲ್ಲ ಅವನನ್ನು ಕಾಲಿನ ಕಸಕ್ಕಿಂತ ಕಡೆಯಾಗಿ ಕಾಣತಕ್ಕಂತಹ ಸಮಾಜವನ್ನು ನಾವು ನೋಡುತ್ತಿದ್ದೇವೆ. ಪುಟ್ಟಣ್ಣಯ್ಯನವರು, ಹಾಗೂ ಯಾರು ಅದರ ಅನುಭವ ಮತ್ತು ಅದರ ನೋವನ್ನು ಉಂಡಿರುತ್ತಾರೆ ಅವರಿಗೆ ಅರ್ಥವಾಗುತ್ತದೆ. ಅವರು ಯಾವ ರೀತಿ ನೋವನ್ನು ಉಂಡಿದ್ದಾರೆ ಅದೇ ರೀತಿ ನಾನೂ ಕೂಡ ಉಂಡಿದ್ದೇನೆ. ಎರಡು ರೂಪಾಯಿಗೆ ಒಂದು ಕೆ.ಜಿ. ದ್ರಾಕ್ಷಿಯಂತೆ ಇದೇ ಬೆಂಗಳೂರಿನ ಫುಟಪಾತಿನಲ್ಲಿ ನಿಂತು ಮಾರಾಟ ಮಾಡಿದ್ದೇನೆ. ಇವತ್ತಿನವರೆಗೂ ಕೂಡ ಗೊತ್ತಿದೆ. ಎರಡು ರೂಪಾಯಿಗೆ ಒಂದು ಕೆ.ಜಿ. ದ್ರಾಕ್ಷಿಯನ್ನು ನಾವೇ ಇವತ್ತು ಫುಟಪಾತ್‌ನಲ್ಲಿ ನಿಂತು ಮಾರಿದ್ದೇನೆ. ಆದರೆ ನಮಗೆ ಇವತ್ತು ಊರಿನಿಂದ ಇಲ್ಲಿಗೆ ಸಾಗಿಸಿದಂತಹ ಕೂಲಿ ಬರಲಿಲ್ಲ. ಕಣ್ಣಲ್ಲಿ ನೀರು ಹಾಕತಕ್ಕಂತಹ ಅನೇಕ ಸಂದರ್ಭಗಳನ್ನು ನನ್ನ ಜೀವನದಲ್ಲಿ ನಾನು ಅನುಭವಿಸಿದ್ದೇನೆ. ಇದು ಇಲ್ಲಿ ಹೇಳುವುದಿಲ್ಲ. ಆದರೆ ರೈತರೂ ಕೂಡ ಬೇರೆಯವರ ತರಹ ಬೇರೆ ವರ್ಗಗಳ ತರಹ, ಸಮಾಜದಲ್ಲಿರತಕ್ಕಂತಹ ಬೇರೆ ಬೇರೆ ವರ್ಗಗಳ ತರಹ ಎಚ್ಚೆತ್ತುಕೊಳ್ಳಬೇಕು. ಎಚ್ಚೆತ್ತುಕೊಂಡು ಯಾವುದರಲ್ಲಿ ಹೆಚ್ಚು ಹಣ ಬರುತ್ತದೆ, ಆ ಹಣ ಬೆಳೆಯುವುದಕ್ಕೆ ರೈತರು ಅಭ್ಯಾಸ ಮಾಡಿ ದಯವಿಟ್ಟು ಆ ದಿಕ್ಕಿನಲ್ಲಿ ಆಲೋಚನೆ ಮಾಡತಕ್ಕಂಥದ್ದು ಒಳ್ಳೆಯದು. ನಾನು ಇವನ್ನು ಹೊರಗಡೆಯೂ ಹೇಳಿದ್ದೇನೆ,

ಈ ಸದನದ ಮೂಲಕ ಸಹ ರಾಜ್ಯದ ರೈತರಿಗೆ ನಾನು ಹಣ ಬೆಳೆಯಿರಿ ಸಮಾಜದಲ್ಲಿರತಕ್ಕಂತಹ ಬೇರೆ ವರ್ಗಗಳ ತರಹ ನೀವು ಎಚ್ಚೆತ್ತುಕೊಳ್ಳಿ ಎಂದು ಮನವಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಬರೀ ಹೂವು ಬೆಳೆಯಿರಿ ಸೀಗಡಿ ಬೆಳೆಯಿರಿ, ಅಥವಾ ಕಬ್ಬು ಬೆಳೆಯಿರಿ, ಭತ್ತ ಬೆಳೆಯಿರಿ ಎಂದು ನಾನು ಹೇಳುತ್ತಿಲ್ಲ. ಎಲ್ಲಿ ಹಣ ಇದೆ ಅಲ್ಲಿ ಹಣ ಬರುತ್ತದೆ ಅಂಥ ಬೆಳೆ ಬೆಳೆಯಿರಿ ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು : ಅವರು ಪುಟ್ಟಣ್ಣಯ್ಯನವರ ಮಾತಿನ ಅರ್ಥ ನನಗೆ ಆದ ಹಾಗೆ, ಸೀಗಡಿ ಮತ್ತು ಫ್ಲೋರಿಕಲ್ಚರ್‌ನಲ್ಲಿ ಏನಾಗುತ್ತದೆ ಅಂದರೆ ಕೃಷಿಯೇತರ ಕ್ಷೇತ್ರದಲ್ಲಿ ಸಂಪಾದನೆ ಮಾಡಿರತಕ್ಕಂತಹ ಹಣ ಯಾವುದಕ್ಕೂ ತೆರಿಗೆ ಪಾವತಿ ಮಾಡದೆ ಅಕ್ರಮವಾಗಿ ಇಟ್ಟುಕೊಂಡಿರುತ್ತಾರೆ. ಅವರು ಬಂದು ಈ ಕ್ಷೇತ್ರದಲ್ಲಿ ಇನವೆಸ್ಟಮೆಂಟ್ ಮಾಡಿ ಅವರು ಹಣ ಗಳಿಸುತ್ತಾರೆಯೇ ಹೊರತು ಸಂಪ್ರದಾಯಬದ್ಧವಾಗಿ ಕೃಷಿಯಲ್ಲಿ ನಿರತರಾದ ರೈತ ಯಾರು ಇದ್ದಾನೆ ಅವನಿಗೆ ಈ ಹೈಟೆಕ್ ಫಾರ್ಮುಲ ಅನುಕೂಲವಾಗುವುದಿಲ್ಲ ಎನ್ನುವುದು ಶ್ರೀರಾಮರೆಡ್ಡಿಯವರಿಗಾಗಲಿ, ಪುಟ್ಟಣ್ಣಯ್ಯನವರಿಗಾಗಲಿ, ಬಹುಶಃ ಅವರ ಮಾತಿನ ಅರ್ಥ ಅದು ಏಕೆಂದರೆ ನಾನು ನಿಮ್ಮ ಎಲ್ಲರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, ಅವರು ಮೊದಲು ಹೂವು ಬೆಳೆಯುವುದಕ್ಕೆ ಪ್ರಾರಂಭ ಮಾಡಿದರೆ ಬಾಕಿಯವರು ಎಲ್ಲಾ ಬೆಳೆಯುತ್ತಾರೆ.

ಅಧ್ಯಕ್ಷರು : ಅವರು ಬೆಳೆದರೆ ನೀವು ಮುಡಿದು ಕೊಳ್ಳುತ್ತೀರಿ, ನೀವಿಬ್ಬರೂ ಸ್ನೇಹಿತರು, ಚೆನ್ನಾಗಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಊರ ತುಂಬ ಭೂಮಿ ಇಟ್ಟುಕೊಂಡು..

ಅಧ್ಯಕ್ಷರು : ಸದಾ ಕಾಲ ನೀವು ಬೆಳೆದು ಅವರು ಮುಡಿದುಕೊಂಡರು, ಸ್ವಲ್ಪ ದಿವಸ ಅವರು ಬೆಳೆಯಲಿ. ನೀವು ಮುಡಿದುಕೊಳ್ಳಿ.

ಶ್ರೀ ಸಿ. ಬೈರೇಗೌಡ : ತಾವು ಹೇಳತಕ್ಕಂಥದ್ದು ಸತ್ಯ. ನನ್ನಂತಹ ರೈತನಿಂದ ಹೂವು ಬೆಳೆಯುವುದಕ್ಕೆ ಆಗುವುದಿಲ್ಲ. ಒಂದು ಎಕರೆ ಅಥವಾ ಎರಡು ಎಕರೆಗೆ ಸುಮಾರು ಮೂರು ಕೋಟಿ ರೂಪಾಯಿ ಬಂಡವಾಳ ತೊಡಗಿಸಬೇಕಾಗುತ್ತದೆ. ಹೂವು ಬೆಳೆಯಬೇಕಾದರೆ ತಮಾಷೆಯಾಗಿ ಬೆಳೆಯುವುದಕ್ಕಾಗುವುದಿಲ್ಲ, ರೈತರ ಕೈಯಲ್ಲಿ ಇದು ಆಗುವುದಿಲ್ಲ. ತಾವು ಹೇಳತಕ್ಕಂಥದ್ದು ನಿಜ. ಈ ಹೈಟೆಕ್ ಅದರಲ್ಲೂ ಮುಖ್ಯವಾಗಿ ಪುಷ್ಪ ಕೃಷಿ ಮತ್ತು ಸೀಗಡಿ ಇದನ್ನು ಬೆಳೆಸಬೇಕಾದರೆ ಅದು ನನ್ನಂತಹ ರೈತನಿಂದ ಸಾಧ್ಯವಿಲ್ಲ. ತಿಮ್ಮಪ್ಪನವರು ಹೇಳಿದ ಹಾಗೆ ಹೂವು ಬೆಳೆಸತಕ್ಕಂಥದ್ದು ನನ್ನಂತಹ ರೈತನಿಂದ ಕೂಡ ಸಾಧ್ಯವಿಲ್ಲ. ಕೋಟಿ ಗಟ್ಟಲೆ ಅದಕ್ಕೆ ಬಂಡವಾಳ ಹಾಕಬೇಕಾಗುತ್ತದೆ. ಎಲ್ಲಿಂದ ತರುವುದಕ್ಕೆ ಸಾಧ್ಯ?

ಶ್ರೀ ಕಾಗೋಡು ತಿಮ್ಮಪ್ಪ : ಪುಟ್ಟಣ್ಣಯ್ಯನವರು ದೊಡ್ಡ ದೊಡ್ಡ ರೈತರ ಬಗ್ಗೆ ಮಾತನಾಡುವುದು ಬೇಡ, ಸಾಮಾನ್ಯ ರೈತನ ಬಗ್ಗೆ ಹೇಳಲಿ.

ಅಧ್ಯಕ್ಷರು : ಕೋಲಾರ ಜಿಲ್ಲೆಯಲ್ಲಿ ನಿಮಗೆ ಗೊತ್ತಿದ್ದ ಹಾಗೆ ನಾವು ಏನು ಹೂವು ಬೆಳೆಯುತ್ತೇವೆ,

ಕನಕಾಂಬರ ಮತ್ತು ಕಾಕಡ ಬೆಳೆಯುತ್ತೇವೆ. ನಿಮಗೆ ಎಕ್ಸ್‌ಪೋರ್ಟ್ ಮಾಡುವ ಹೂವು ಬೆಳೆಯುವುದು ನಮ್ಮಿಂದ ಸಾಧ್ಯವೇ? ಅದು ಸಾಮಾನ್ಯ ರೈತ ಬೆಳೆಯುವಂತಹ ಬೆಳೆ ಅಲ್ಲ. ಅವರು ಹೇಳುವುದು ಅದೇ, ಹೂವು ಬೆಳೆಯುವುದಕ್ಕೆ ಕೂಡ ನಮ್ಮ ಜಮೀನಿಗೆ ಹಿಂದುಜ, ಬಿಂದುಜ ಬರುತ್ತಾರೆಂದರೆ ಅವರು ಹೇಳುವುದು.

ಶ್ರೀ ಸಿ. ಬೈರೇಗೌಡ : ಒಂದು ನಿಮಿಷ ಪುಟ್ಟಣ್ಣಯ್ಯನವರೇ, ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮಕಡೆ ಆಲೂಗಡ್ಡೆಯನ್ನು ಬೆಳೆಯತಕ್ಕಂಥ ವಿಚಾರ ತಮಗೆ ಗೊತ್ತಿರತಕ್ಕಂಥದ್ದು. ಹೋದ ವರ್ಷ ಆಲೂಗಡ್ಡೆ ಬೆಳೆದಂಥದ್ದು, ಮಾರ್ಚ್ ತಿಂಗಳಲ್ಲಿ 50 ಕೆ.ಜಿ.ಯ ಮೂಟೆಯೊಂದಕ್ಕೆ 70-80 ರೂಪಾಯಿಗೆ ಮಾರಾಟವಾಯಿತು. ರೈತನಿಗೆ ಪ್ರಾರಂಭದಲ್ಲಿ ನೀರು ಕಟ್ಟಿದ ಕೂಲಿ ಕೂಡ ಬರಲಿಲ್ಲ. ಸೀಜನ್ ಕೊನೆಯಲ್ಲಿ ಅದೇ ಮೂಟೆ ರೂ. 400 ರಿಂದ 500 ರೂಪಾಯಿಗೆ ಮಾರಾಟವಾಯಿತು. ಏಕೆಂದರೆ ರೈತರು ಬೆಳೆದ ತಕ್ಷಣ ಮಾರ್ಕೆಟ್ಟಿಗೆ ತರುತ್ತಾರೆ ಆದರಿಂದ ಬೆಲೆ ಇಳಿಯುತ್ತದೆ. ಇವೊತ್ತು ಹತ್ತಿಗೆ ಹಾಗೂ ಕಬ್ಬಿಗೆ ಕೂಡಿ ಆಗಿರತಕ್ಕಂಥದ್ದು ಅದೇನೇ. ಇವೊತ್ತು ಏಕೆ ಈ ರೀತಿಯಾಗುತ್ತದೆಂದರೆ ರೈತರು ಭತ್ತ ಭತ್ತ ಎಂದು ಭತ್ತವನ್ನೇ ಬೆಳೆಯುತ್ತಾರೆ, ಕಬ್ಬು ಕಬ್ಬು ಎಂದು ಕಬ್ಬನ್ನೇ ಬೆಳೆಯುತ್ತಾರೆ. ಹತ್ತಿ ಹತ್ತಿ ಎಂದು ಹತ್ತಿಯನ್ನೇ ಬೆಳೆಯುತ್ತಾರೆ. ಯಾವ ಬೆಳೆಯನ್ನು ಯಾವ ವಿಸ್ತೀರ್ಣದಲ್ಲಿ ಬೆಳೆದರೆ ಅದಕ್ಕೆ ಯೋಗ್ಯವಾದಂಥ ಬೆಲೆ ಸಿಗುತ್ತದೆಂದು ರೈತರು ಅರ್ಥ ಮಾಡಿಕೊಳ್ಳಬೇಕು. ಮಾರುಕಟ್ಟೆಯನ್ನು ರೈತ ತನ್ನ ವಶದಲ್ಲಿ ಇಟ್ಟುಕೊಳ್ಳಬೇಕು. ಅದು ಇವೊತ್ತಿನದಿವಸ ಆಗುತ್ತಿಲ್ಲ.

MR. SPEAKER : It concerns me also. ಮಾರ್ಕೆಟ್ ಮೆಕ್ಯಾನಿಸಂ ಯಾವ ರೀತಿ ಇದೆ ಎಂದರೆ ಬೆಳೆ ರೈತನಿಂದ ಹೊರಗೆ ಹೋದ ತಕ್ಷಣ ಅದರ ಬೆಲೆ ಜಾಸ್ತಿಯಾಗುತ್ತದೆ. ಟ್ರೇಡ್ ಕಂಟ್ರೋಲ್ ಮಾಡುವವರು ಅವರು ತಾನೇ ರೈತ ಕಂಟ್ರೋಲ್ ಮಾಡುವುದಿಲ್ಲ ಟ್ರೇಡನ್ನು.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೇ, ಈ ಫ್ಲೋರಿಕಲ್ಚರ್ ಮತ್ತು ಈ ಸೀಗಡಿ ಬೆಳೆಯುವುದಕ್ಕೆ ಆರ್ಥಿಕವಾಗಿ ಲಾಭದಾಯಕವಾದ ಹಿಡುವಳಿ ಇಷ್ಟು ಎಂದು ಅವರು ದಯಮಾಡಿ ಹೇಳಬೇಕು. ಏಕೆಂದೆರ ಬೀಜಧಾರಣೆ ಜಾರಿಗೆ ತಂದು ಇದು ನಿನ್ನ ಕೃಷಿಯಲ್ಲ ಎಂದು ನೀವು ಹೇಳಲಿಕ್ಕೆ ಹೊರಟಿದ್ದೀರಿ.

ಅಧ್ಯಕ್ಷರು : ಸುಧಾರಣೆ ಆಗಿದೆ ಬಿಡಿ. ನಮ್ಮ ಹಳ್ಳಿಗಳಿಗೆಲ್ಲಾ ಡಿಷ್ ಆಂಟನಾ ಬಂದಿದೆ. ನಮ್ಮ ಊರಿಗೆ ನಿಮ್ಮ ಊರಿಗೆ ರಸ್ತೆ ಇಲ್ಲದಿದ್ದರೂ ಪರವಾಗಿಲ್ಲ, ಡಿಷ್ ಅಂಟೆನಾ ಎಸ್‌ಟಿಡಿ ಬಂದಿದೆ ಇನ್ನೇನು ಬೇಕು? ಇನ್ನೇನು ಅಭಿವೃದ್ಧಿಯಾಗಬೇಕು? ಅಭಿವೃದ್ಧಿಯಾಯಿತಲ್ಲಾ.

ಶ್ರೀ ಸಿ.ಹೆಚ್. ವಿಜಯಶಂಕರ್ : ಎರಡನೇಯದಾಗಿ ಮಾನ್ಯ ಅಧ್ಯಕ್ಷರೇ, ಕಬ್ಬು ಬೆಳೆಯುವರು, ಕಬ್ಬು ಬೆಳೆಯುತ್ತಾರೆ, ಹತ್ತಿ ಬೆಳೆಯುವರು ಹತ್ತಿ ಬೆಳೆಯುತ್ತಾರೆ, ಬಾಳೆ ಬೆಳೆಯುವವರೆಲ್ಲಾ ಬಾಳೆಯನ್ನೇ ಬೆಳೆಯುತ್ತಾರ ಎನ್ನತಕ್ಕಂಥ ಮಾತನ್ನು ಮಾನ್ಯ ಬೈರೇಗೌಡರು ಹೇಳಿದರು. ರೈತ ಬೆಳೆದಂಥ ಯಾವ ಬೆಳೆಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆಯಾಗಿದೆ? ರೈತ ಬೆಳೆದಂಥ ಯಾವ ಬೆಳೆಯನ್ನು

ನೆಮ್ಮದಿಯಾಗಿ ಮಾರಾಟ ಮಾಡಿಕೊಂಡು ನೆಮ್ಮದಿಯಾಗಿ ಸಂಪಾದನೆ ಮಾಡಲಿಕ್ಕೆ ಅವಕಾಶ ಇದೆ ಎನ್ನುವಂಥದ್ದು ಯೋಚನೆ ಮಾಡಬೇಕು....

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಕ್ರಾಪಿಂಗ್ ಪ್ಯಾಟರ್ನ್ ಮಾಡಬೇಕು. ಯಾವಾಗಲೂ ಬೇರೆ ಬೇರೆ ಬೆಳೆ ಬೆಳೆಯಬೇಕೆಂದು ಹೇಳುವುದಕ್ಕೆ ಯಾವ ಸರ್ಕಾರಕ್ಕೂ ಆಗಲಿಲ್ಲ. ಯಾವಾಗ ಬರುತ್ತದೆ ಅಂದರೆ ಕನಿಷ್ಠ ಬೆಲೆ ನಿಗದಿ ಬೋರ್ಡ್ ಎಂದು ಯಾವತ್ತು ಮಾಡುತ್ತೀರಿ ಅವಾಗ ನಿಮ್ಮ ಇಷ್ಟ ಬಂದ ಹಾಗೆ ಬೆಳೆಯುತ್ತೀರಿ. ಅವಾಗ 10 ರೂಪಾಯಿ ಕೆ.ಜಿ. ಟೊಮ್ಯಾಟೊಗೆ ಅಂದರೂ ಕೊಂಡುಕೊಳ್ಳುತ್ತಾರೆ. 2.25 ಪೈಸಗಿಂತ ಕಮ್ಮಿ ಮಾರಾಟ ಮಾಡಕೂಡದು ಎಂದು ಕಾನೂನು ಮಾಡಿದರೆ ಏನು ಬಹಳ ದೊಡ್ಡದು ಅದು? ಅವನ ಉದ್ಯಮಕ್ಕೆ ಕನಿಷ್ಟ ಬೆಲೆ ನಿಗದಿ ಮಾಡತಕ್ಕಂಥ ಶಕ್ತಿ ಯಾವಾಗ ಬರುತ್ತದೆ? ಅವಾಗ ಕ್ರಾಪಿಂಗ್ ಪ್ಯಾಟರ್ನ್ ಮಾತನಾಡುವುದಕ್ಕೆ ನಮಗೂ ನಿಮಗೂ ಹಕ್ಕು ಇದೆ. ಇಲ್ಲದಿದ್ದರೆ ಏನು ಹಕ್ಕು ಇದೆ ನಮಗೂ ನಿಮಗೂ? ಅವನು ಬೆಳೆದವನು ಬೆಳೆದೇ ಸಾಯುತ್ತಾನೆ ಅಷ್ಟೆ. ಏನೂ ಮಾತನಾಡುವ ಹಾಗಿಲ್ಲ. ಏನೋ ಅವನ ಹೆಸರಿನಲ್ಲಿ ಜೈ ಜವಾನ್ ಜೈ ಕಿಸಾನ್ ಎಂದು ಬೋರ್ಡ್ ಹಾಕಿಕೊಂಡು ಇರುವುದು ಅಷ್ಟೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಿಮಗೂ ಅನುಭವ ಇದೆ ಎಂದು ಹೇಳುತ್ತಿದ್ದೀರಿ. ನನಗೂ ಅನುಭವ ಇದೆ. ನೀವು ಏನೇ ಪ್ರಯತ್ನ ಮಾಡಿ ಅವನು ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಈಗ ಉದಾಹರಣೆಗೆ ಒಂದು ಶೈತ್ಯಾಗಾರ ಕಟ್ಟಿ ಎಂದು ಡೆಪ್ಯೂಟಿ ಡೈರಕ್ಟರ್‌ಗೆ ದುಡ್ಡು ಕೊಟ್ಟು ಎಂಟು ಲಕ್ಷ ರೂಪಾಯಿಗಳನ್ನು ನುಂಗಿಕೊಂಡು ಹೋದ. ಜಕ್ಕನಹಳ್ಳಿಯಲ್ಲಿ. ಆ ಎಂಟು ಲಕ್ಷ ರೂಪಾಯಿಯನ್ನು ನಂಗಿದಂಥವನ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಿ ಅವನನ್ನು ಇನ್ನೂ ಜೈಲಿಗೆ ಕಳುಹಿಸಲಿಲ್ಲ. ನಾನು ಆ ಇಲಾಖೆಯ ಸಮಿತಿಯಲ್ಲಿ ಇರುವುದರಿಂದ ಇದು ನನಗೆ ಗೊತ್ತಾಯಿತು.

ಅಧ್ಯಕ್ಷರು : ಅವರೇನು ರಿಸೈನ್ ಮಾಡಿ ಅಸೆಂಬ್ಲಿಗೆ ನಿಂತಿಲ್ಲ ತಾನೇ? ಬರುವ ವರ್ಷಕ್ಕೆ ನಿಮ್ಮ ಪಕ್ಕಕ್ಕೆ ಬಂದು ಕುಳಿತುಕೊಂಡರೆ ಬಹಳ ಆಶ್ಚರ್ಯ ಏನೂ ಇಲ್ಲ.

ಶ್ರೀ ಸಿ. ಬೈರೇಗೌಡ : ಇನ್ನೂ ಕೂಡ ಜೈಲಿಗೆ ಕಳುಹಿಸಲಿಲ್ಲ ಎಂದು ಹೇಳುತ್ತಿದ್ದಾರೆ. ತಮಗೂ ಕೂಡ ಗೊತ್ತಿದೆ, ತಿಮ್ಮಪ್ಪನವರಿಗೂ ಕೂಡ ಗೊತ್ತಿದೆ. ಅಧ್ಯಕ್ಷರಿಗೂ ಕೂಡ ಗೊತ್ತಿದೆ. ಕೆಲವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದ್ದು ಆಗಿದೆ. ಈಗಾಗಲೇ ಕ್ರಮವನ್ನು ಕೂಡ ತೆಗೆದುಕೊಂಡಿದ್ದೇವೆ. ಕೆಲವು ಕಡೆ ಆ ಕೆಲಸ ಕೂಡ ಆಗಿದೆ. ಆದರೆ ಆ ಜನ ಇವೊತ್ತು ನಾಚಿಗೆ ಇಲ್ಲದೆ ಬೀದಿಯಲ್ಲಿ ಬಂದು ಹೇಳುತ್ತಾರೆ ನಮ್ಮ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಿದ್ದು ತಪ್ಪು ಎಂದು. ಅವರ ಬಗ್ಗೆ ಚಳುವಳಿ ಹೂಡತಕ್ಕಂಥ ಒಂದು ವಾತಾವರಣ ಕೂಡ ನಿರ್ಮಾಣವಾಗಿದೆ. ಏಷ್ಟೋಜನ ಹಣವನ್ನು ಲೂಟಿ ಮಾಡಿರತಕ್ಕಂಥವರ ವಿಚಾರದಲ್ಲಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಿದ್ದಕ್ಕೆ ಅವರಿಗೆ ಸಾರ್ವಜನಿಕ ಸ್ಥಳದಲ್ಲಿ ಕರೆದುಕೊಂಡು ಅವರಿಗೆ ಹಾರ ಹಾಕಿ ಗೌರವಿಸಬೇಕಂತೆ ನಾವು. ಈಗ ಏನು ಅವರು ಚಳುವಳಿ ಹೂಡುತ್ತಾರೋ ಏನು ಮಾಡುತ್ತಾರೋ ಮಾಡಿಕೊಂಡು ಹೋಗಲಿ, ಆದರೆ ಅಂಥವರನ್ನು ಜೈಲಿಗೆ ಕಳುಹಿಸಬೇಕಾಗಿರತಕ್ಕಂಥದ್ದು ಸರ್ಕಾರದ ಕರ್ತವ್ಯ. ಆ ಕೆಲಸವನ್ನು ಕೆಲವು ಕಡೆ

ಮಾಡಿದ್ದೇವೆ.

ಅಧ್ಯಕ್ಷರು : ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ. ತಾವು ಮಾತನಾಡಿ ಪುಟ್ಟಣ್ಣಯ್ಯನವರೇ,

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಈಗ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತೇನೆ ಎನ್ನತಕ್ಕಂಥ ಮಾತು ಪದೇ ಪದೇ ಹೇಳುತ್ತಿದ್ದೀರಿ. ಆದರೆ ಎಷ್ಟು ಪರ್ಸೆಂಟ್ ಬಡ್ಜೆಟನ್ನು ತಾವು ಪ್ರಾವಿಷನ್ ಮಾಡಿಕೊಂಡಿದ್ದೀರಿ ಎಂಬುದನ್ನು ಯೋಚನೆ ಮಾಡಬೇಕು. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ 6.40 ಇಲ್ಲಿ ಮಾತನಾಡಿರುವವರಲ್ಲಿ ನೂರಕ್ಕೆ 75 ಭಾಗ ಜನ ಹಣ ಗ್ರಾಮಕ್ಕೆ ಖರ್ಚು ಮಾಡಬೇಕು ಎಂದು ಹೇಳಿದ್ದಾರೆ. ಯಾವ ಸರ್ಕಾರಗಳೂ ಕೂಡ ಧರ್ಮಕ್ಕೆನೂ ಖರ್ಚು ಮಾಡುವುದಿಲ್ಲ. ಇಡೀ ಕೃಷಿ ಕ್ಷೇತ್ರ, ಉದ್ಯೋಗದ ಕ್ಷೇತ್ರ, ಕೈಗಾರಿಕಾ ಕ್ಷೇತ್ರ ಎಲ್ಲಾ ವ್ಯಾಪಾರ ಕ್ಷೇತ್ರಗಳೂ ಕೃಷಿಯ ಮೇಲೆ ನಿಂತಿವೆ. ಲಕ್ಷಾಂತರ ಕೋಟಿ ರೂಪಾಯಿ ಉತ್ಪಾದನೆ ಮಾಡುವುದಕ್ಕೆ ಇವರೇ ಕಾರಣ. ಆದರೆ ಇವೊತ್ತು ನಾವು ಎಂ.ಎಲ್.ಎ. ಆದ ಮೇಲೆ ಕುಡಿಯುವ ನೀರಿಗೆ ಒಂದು ಅರ್ಜಿ ಹಾಕಬೇಕಾಗಿದೆ. ಆ ಅರ್ಜಿಯಲ್ಲಿ ಬೈಫರ್ಕೇಶನ್. ಇಷ್ಟು ಸಂಖ್ಯೆ ಇದ್ದರೆ ನಿಮಗೆ ಓವರ್ ಹೆಡ್ ಟ್ಯಾಂಕ್. ಇಷ್ಟು ಜನ ಇದ್ದರೆ ನಿಮಗೆ ಮಿನಿ ವಾಟರ್ ಸಪ್ಲೈ. ಇಷ್ಟು ಜನ ಇದ್ದರೆ ಬೋರವೆಲ್. ದಬಾ ಡಬನ ಕೆಚ್ಚ. ಆದರೆ ಯಾರು ಹುಟ್ಟಿದರೂ ದೊಡ್ಡಣ್ಣನಾಗಿ ಹುಟ್ಟಬೇಕು. ಚಿಕ್ಕಣ್ಣನಾಗಿ ಹುಟ್ಟಬಾರದು. ಚಿಕ್ಕಣ್ಣನಿಗೆ ಹುಟ್ಟಿದರೆ ಡಬಾ ಡಬ್ಬನ ಕೆಚ್ಚಿಗೆ ಹೋಗಿ ನೀರು ಕೈ ಕೆಳಗೆ ಹಾಕಿಕೊಳ್ಳಬೇಕು. ಇದು ಯಾವ ಕಾನೂನು, ಇದು ಯಾವ ನೀತಿ. ಎಲ್ಲರೂ ಅರ್ಜಿ ಹಾಕುವುದು. ಯಾವ ದೇಶದಲ್ಲಿ ನೀರು ಕೊಡಿ ಎಂದು ಎಷ್ಟು ಜಾಸ್ತಿ ಅರ್ಜಿ ಕೊಡುತ್ತಾರೋ ಆ ದೇಶದಲ್ಲಿ ಗುಲಾಮಗಿರಿ ವ್ಯವಸ್ಥೆ ಜಾಸ್ತಿ ಇದೆ ಎಂದು ಅರ್ಥ ಸದಾಶಿವನಗರದಲ್ಲಿ ನೀರು ಬೇಕೆಂದು ಅರ್ಜಿ ಕೊಡುತ್ತಾರೆ, ಮೈಸೂರು ಜಯಲಕ್ಷ್ಮಿಪುರದಲ್ಲಿ ನಮಗೆ ರೋಡ್ ಬೇಕು ಡ್ರೈನೇಜ್ ಮಾಡಿಕೊಡಿ ಎಂದು ಕೇಳುತ್ತಾರೆ. ಒಬ್ಬೊಬ್ಬ ಎಂ.ಎಲ್.ಎ. ಹತ್ತಿರ ಬೇಕಾದಷ್ಟು ಅರ್ಜಿಗಳಿವೆ. ಅದೇನು ಮಾಡಬೇಕೆಂದು ನಮಗೇ ಗೊತ್ತಿಲ್ಲ. ನಾನು ಏನು ಹೇಳುವುದು ಎಂದರೆ ಕನಿಷ್ಟ ಕುಡಿಯುವ ನೀರಾದರೂ ಈ ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಕೊಡಿ. ಹಿಂದಿನ ಸರ್ಕಾರ ಮಾಡಬೇಕಾಗಿತ್ತು. ಇಲ್ಲ. ಎಂದು ನಾನು ಹೇಳುವುದಿಲ್ಲ. ಆದರೆ ರಾಜಕಾರಣದಲ್ಲಿ ನಾವು ಅರ್ಜಿ ತೆಗೆದುಕೊಳ್ಳುವ ಕೆಲಸವನ್ನು ಬಿಟ್ಟು ಬೇರೆ ಏನು ಮಾಡುತ್ತಿದ್ದೇವೆ? ನಾನು ಶಾಸಕನಾಗಿದ್ದೇನೆ ಏನಾದರೂ ಮಾಡಿ ನನಗೆ ಕುಡಿಯುವುದಕ್ಕೆ ನೀರು ಬೇಕು. ಆ ಮಿನಿ ವಾಟರ್ ಸಪ್ಲೈ ಡ್ರೈ ಏರಿಯಾದೊಳಗೆ. ಮಳೆ ಆಧಾರಿತ ಪ್ರದೇಶ, ಅವರು ಜೀವನದಲ್ಲಿ ಬರಗಾಲ ಅನುಭವಿಸಿ, ಅನುಭವಿಸಿ, ಸಾಕಾಗಿರತಕ್ಕಂಥ ಒಂದು ವರ್ಗದ ಜನರಿಗೆ ನಾವಿನ್ನು ಕುಡಿಯುವ ನೀರನ್ನು ಕೊಡಲಿಲ್ಲ ಎಂದರೆ ನಾವು ಇಲ್ಲಿ ಶಾಸನ ಸಭೆಯಲ್ಲಿ ಆರ್ಥಿಕ ವ್ಯವಸ್ಥೆ ಬಗ್ಗೆ, ಅರ್ಥ ವ್ಯವಸ್ಥೆ ಬಗ್ಗೆ ಗ್ರಾಮೀಣ ಅಭಿವೃದ್ಧಿ ಬಗ್ಗೆ ಮಾತನಾಡುತ್ತೇವೆ. ಏತಕ್ಕಾಗಿ ಮಾತನಾಡುತ್ತಿದ್ದೇವೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಏನೋ ಪೇಪರಿನಲ್ಲಿ ಬರಲಿ ಎನ್ನುವುದಕ್ಕಾಗಿ ಮಾತನಾಡುತ್ತಿದ್ದವೋ, ಅಥವಾ ನಿಜವಾಗಲೂ ನಾವು ಅಭಿವೃದ್ಧಿ ಪಥದ ಬಗ್ಗೆ ಗಂಭೀರವಾಗಿ ಯೋಚನೆ ಮಾಡುತ್ತಿದ್ದೇವೋ. ಗಂಭೀರವಾಗಿ ನಾವು ಯೋಚನೆ

ಮಾಡಬೇಕು. ದಯವಿಟ್ಟು ಸರ್ಕಾರದಿಂದ ನಾರ್ಮ್ಸ್ ಹಾಕಿಕೊಳ್ಳಬೇಕು. ನಮ್ಮ ಸರ್ಕಾರ ಬಂದು ಎರಡು ವರ್ಷವಾಯಿತು. ಕುಡಿಯುವ ನೀರನ್ನು ನಾವು ಇಷ್ಟು ಇಸವಿಯೊಳಗೆ ಮುಗಿಸುತ್ತೇವೆ ಎಂದು ಒಂದು ಪಾಯಿಂಟ್ ಪ್ರೋಗ್ರಾಂ ಹಾಕಿಕೊಳ್ಳಬೇಕು. ಇದಕ್ಕಿಂತ ದೊಡ್ಡ ಕೆಲಸ ಇದೆ 33 ಸಾವಿರ ಕೆರೆಯಲ್ಲಿ ಇವೊತ್ತು 23 ಸಾವಿರ ಕೆರೆ ಇಲ್ಲ. ಮುನ್ನೂರು ಅಡಿ ಬೋರ್ ಹಾಕಿದರೂ ಕೂಡ ನಮಗೆ ನೀರು ಬರುತ್ತಿಲ್ಲ. ಯಾವ ವ್ಯವಸ್ಥೆ ಇದು. ಸುಮಾರು ಮೇಲುಗಡೆ ಕೆರೆ ಇದ್ದರೆ ಇಲ್ಲಿ ಇರತಕ್ಕಂಥ ಎಲ್ಲಾ ಬಾವಿಗಳಿಗೆ, ಬೋರವೆಲ ಗಳಿಗೆ ನೀರು ಬರಬೇಕು ಎನ್ನತಕ್ಕಂಥ ವೈಜ್ಞಾನಿಕ ದೃಷ್ಟಿಯಿಂದ ಕೆರೆ ಇದ್ದರೆ ನಾವು ಇವೊತ್ತು ನಾಶ ಮಾಡುತ್ತಿದ್ದೇವೆ. 33 ಸಾವಿರ ಕೆರೆಗೆ ಇನ್ನೂ 17 ಸಾವಿರ ಕೆರೆಯನ್ನು ಆಡ್ ಮಾಡಬೇಕಾಗಿತ್ತು. ಆದರೆ ಇವೊತ್ತು 13 ಸಾವಿರ ಕೆರೆ ಇದೆ. ಇದನ್ನು ಯಾವ ಕಾನೂನಿನ ಅಡಿಯಲ್ಲಿ ಮಾಡುತ್ತೀರೋ ನನಗೆ ಗೊತ್ತಿಲ್ಲ. ಆದರೆ ನನ್ನದಂತೂ ವೈಯಕ್ತಿಕ ಅಭಿಪ್ರಾಯವೇನೆಂದರೆ ಏನೇ ಕೆಲಸ ಇದ್ದರೂ ಅದನ್ನು ಬಿಡಿ. ಆ ಕೆರೆಯ ಕೆಲಸವನ್ನು ತೆಗೆದುಕೊಳ್ಳಬೇಕು. ನಬಾರ್ಡಂತೂ ಬಹಳ ಜವಾಬ್ದಾರಿಯುತವಾಗಿ ಹಣ ಕೊಡುತ್ತದೆ. ಮಾನ್ಯ ಸಭಾಧ್ಯಕ್ಷರೇ, ಕೆರೆ ವಿಷಯದಲ್ಲಿ ನಬಾರ್ಡ್‌ನಂತೂ ಪೂರ್ತಿ ಹಣ ಕೊಡುತ್ತದೆ. ನೀರೇ ಇಲ್ಲದೆ ಇದ್ದ ಮೇಲೆ ನಾವು ಬೋರವೆಲ್ ಕೊರೆದರೇನು ಪ್ರಯೋಜನ? ಎಷ್ಟು ಬೋರವೆಲ್ ಫೆಲ್ಯೂರ್ ಆಗುತ್ತಿವೆ, ಯಾವ ಕಾರಣಕ್ಕಾಗಿ ಫೇಲ್ಯೂರ್ ಆಗುತ್ತಿವೆ? ಅರಣ್ಯ ಬೆಳೆಸುವುದರಲ್ಲಿ ನಾವು ಫೇಲ್ಯೂರ್ ಆಗಿದ್ದೇವೆ. ಇಡೀ ಪ್ರಪಂಚದಲ್ಲಿ ಹೆಚ್ಚಿನ ಮಳೆ ಆಗುವಂಥ ಭೂಮಿ ಇದು. ಈ ಭೂಮಿಯಲ್ಲಿ ಬಂದು ಇಂದು ನೀರು ಹರಿಯುತ್ತದೆ. ಆದರೆ ಆ ನೀರನ್ನು ತಡೆದು ಇಟ್ಟುಕೊಳ್ಳುವ ಸಾಮರ್ಥ್ಯ ನಮಗಿಲ್ಲ. ಕೋಲಾರದಲ್ಲಂತೂ 400 ಅಡಿಗೆ ಹೋಗಿದೆ. ಮಳೆಗಾಲ ಇಲ್ಲದಿರುವುದು ನಮ್ಮ ರಾಜ್ಯದ ಕಾಡು ಇವೊತ್ತು ಶೇಕಡ 33 ಇರಬೇಕಾಗಿದ್ದು, 11.6 ಇದೆ. ಈಗ ಅರಣ್ಯ ಬೆಳೆಸುವುದರಲ್ಲಿ ನಾವು ಫೇಲ್ಯೂರ್ ಆಗಿದ್ದೇವೆ. ಅರಣ್ಯ ಬೆಳೆಸುವುದರ ಜೊತೆ ಅರಣ್ಯ ಕಡಿಯುವ ಕಳ್ಳರನ್ನು ಕೂಡ ಜೊತೆಗ ಸೇರಿಸಿಕೊಂಡಿದ್ದೇವೆ.

6.00 ಪಿ.ಎಂ.

ನಾನು ಹೇಳುವುದೇನೆಂದರೆ ಈ ಅರಣ್ಯವನ್ನು ಬೆಳೆಸುವುದರ ಬಗ್ಗೆಯೂ ಕೂಡ ನಾವೆಲ್ಲಾ ಒಂದು ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಒಂದೈದು 5 ಎಕರೆ ಜಮೀನನ್ನು ರೈತನೊಬ್ಬನಿಗೆ ಕೊಟ್ಟು ನೀನೇ ಬೆಳೆಸಬೇಕು ಎಂದು ಹೇಳಿದರೆ ಅವನು ಬೆಳೆಸಿಕೊಡುತ್ತಾನೆ, ಅವನಿಗೆ ಸಂಬಳ ಫಿಕ್ಸ್ ಮಾಡಿಕೊಡಿ, ಇಲ್ಲದೇ ಇದ್ದರೆ ಅರಣ್ಯ ಹೇಗೆ ಬೆಳೆಯಬೇಕು? ಅರಣ್ಯಗಳು ಕಡಿಮೆಯಾಗಿರುವುದರಿಂದ ಕಾಡುಹಂದಿಗಳು ನಮ್ಮ ಕಬ್ಬಿನಗದ್ದೆಗಳಿಗೆ ಬಂದು ಸೇರಿಕೊಂಡುಬಿಟ್ಟಿವೆ. ಈಗ ಅದರದ್ದು ಬೇರೆ ದೊಡ್ಡ ಕಾಟವಾಗಿದೆ. ಒಂದೊಂದು ಎಕರೆ ಕಬ್ಬಿನ ಗದ್ದೆಯಲ್ಲಿ ಸುಮಾರು 10 ರಿಂದ 15 ಹಂದಿಗಳು ಸೇರಿ ಕೊಂಡುಬಿಟ್ಟು ಕಬ್ಬನ್ನೆಲ್ಲಾ ತಿಂದು ಮುಗಿಸಿ ಬಿಡುತ್ತಿವೆ; ಇದಲ್ಲದೇ ಸುಮಾರು ಐದೈದು ವರ್ಷದ ತೆಂಗಿನ ಸಸಿಗಳನ್ನು ತಿಂದುಬಿಟ್ಟಿವೆ. ಇದರ ಬಗ್ಗೆ ನಾವೇನಾದರೂ ಕಂಪ್ಲೇಂಟ್ ಮಾಡಿದರೆ ವೈಲ್ಡ್ ಲೈಫ್ ಅನಿಮಲ್ ಆಕ್ಟ್ ಪ್ರಕಾರ ಹಂದಿಯನ್ನು ಸಾಯಿಸುವುದಕ್ಕೆ ಬರುವುದಿಲ್ಲವೆನ್ನುತ್ತಾರೆ. ಅರಣ್ಯ ಇಲಾಖೆಯವರು. ಅದಕ್ಕೇ ನಾವು ಒಂದೈವತ್ತು ಹಾವುಗಳನ್ನು ಅರಣ್ಯ ಮಂತ್ರಿಗಳ ಮನೆಗೆ ತಂದು ಬಿಟ್ಟು ಬಿಡಬೇಕೆಂದಿದ್ದೇವೆ. ಏಕೆಂದರೆ ಈ ಅನಿಮಲ್ ಆಕ್ಟ್ ಪ್ರಕಾರ ಅವರು ಯಾರೂ ಅದನ್ನು ಮುಟ್ಟುವ

ಹಾಗಿಲ್ಲ. ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಅರಣ್ಯ ಇಲಾಖೆಯ ಡಿ.ಎಫ್.ಓ.ಗಳಿಗೆ ಈ ಹಂದಿಗಳ ಕಾಟದ ಬಗ್ಗೆ ಹೇಳಿದ್ದೇನೆ. ಆದರೆ ಇದುವರೆಗೂ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ನಾವೇನಾದರೂ ಕೇಳಿದರೆ ಆಕಸ್ಮಾತ್ ನಷ್ಟವಾದರೆ ಅದನ್ನು ಕಟ್ಟಿಕೊಡುತ್ತೇವೆ ಎಂದು ಹೇಳುತ್ತಾರೆ. ಇದನ್ನು ಕಟ್ಟಿಕೊಡುವುದಕ್ಕೆ ಸಾಧ್ಯವೇ? ಇಡೀ ರಾಜ್ಯದಲ್ಲಿ ಬೆಳೆದಿರತಕ್ಕಂಥ ಕಬ್ಬನ್ನೆಲ್ಲಾ ಹಂದಿ ತಿಂದುಕೊಂಡರೆ ಇದರಿಂದಾಗುವ ನಷ್ಟವನ್ನು ಕಟ್ಟಿಕೊಡುವುದಕ್ಕೆ ಆಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ಒಂದು ಹಬ್ಬಾವನ್ನೇ ಹುಡುಕುವುದಕ್ಕೇ ಇನ್ನೂ ಅರಣ್ಯಮಂತ್ರಿಗಳಿಗೆ ಆಗಿಲ್ಲ; ಇನ್ನು ನೀವು 100 ಹಾವುಗಳನ್ನು ಅವರ ಮನೆಗೆ ಬಿಡುವ ಬದಲು ಅಸೆಂಬ್ಲಿಯೊಳಗೆ ಬಿಟ್ಟುಬಿಟ್ಟು, ನಾವೆಲ್ಲಾ ದಿಕ್ಕೆಟ್ಟು ಎಲ್ಲಿಗೆ ಹೋಗಬೇಕು ಎಂದು ನೀವು ಯೋಚನೆ ಮಾಡಿದ್ದೀರಿ, ಈ ರೀತಿ ನೀವು ಯಾರ ಮೇಲೋ ಕೋಪಕ್ಕೆ ನೀವು ಈ ರೀತಿ ಮಾಡವುದೆಲ್ಲಾ ಒಳ್ಳೆಯದಲ್ಲ.ಏಕೆಂದರೆ ಒಂದು ಹೆಬ್ಬಾವನ್ನೇ ಅವರ ಕೈಯಲ್ಲಿ ಹಿಡಿಯುವುದಕ್ಕಾಗಿಲ್ಲ, ಇನ್ನು ಅದು ಸಿಕ್ಕಿಲ್ಲ, ಇನ್ನು ನೀವು 100 ಹಾವುಗಳನ್ನು ತಂದುಬಿಟ್ಟು ನಮಗೆ ಏನುಮಾಡಬೇಕೆಂದು ಯೋಚನೆ ಮಾಡಿದ್ದೀರಿ ಪುಟ್ಟಣ್ಣಯ್ಯನವರೇ? ಇದೇನು ಹುಡುಗಾಟವೇನು?

ಶ್ರೀ ಸಿ. ಬೈರೇಗೌಡ : ಎಂಥಹ ಅಪಾಯಕಾರಿಯಾದ ಪ್ರಾಣಿಯನ್ನು ನನ್ನ ಕೈಯಲ್ಲಿ ಹಿಡಿಯುವುದಕ್ಕೆ ಹೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಇಲ್ಲ, ಅಪಾಯಕಾರಿಯಲ್ಲ ಅದು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಇವೊತ್ತು ಹಂದಿಯನ್ನು ಓಡಿಸಿ ಆದರೆ ಹಾವನ್ನು ಉಳಿಸಿ ಎನ್ನುವ ಕಾರ್ಯಕ್ರಮ ಇರಬೇಕು. ಯಾವುದೇ ಕಾರಣಕ್ಕೂ ಹಾವನ್ನು ಸಾಯಿಸಬಾರದು, ಏಕೆಂದರೆ ನಾವು ಹಾವನ್ನು ಸಾಯಿಸಿಬಿಟ್ಟರೆ ಪೂರ್ಣ ಬೆಳೆಗೆ ಕಷ್ಟವಾಗುತ್ತದೆ. ಇಡೀ ಬೆಳೆಯನ್ನೆಲ್ಲಾ ಅಲ್ಲಿ ಕಬ್ಬು, ಭತ್ತ, ರಾಗಿ ಯಾವುದೇ ಬೆಳೆ ಇರಲಿ ಎಲ್ಲವನ್ನೂ ಇಲಿಗಳು ನಾಶಮಾಡಿಬಿಡುತ್ತವೆ. ಆದಕಾರಣ ಹಾವನ್ನು ನಾವು ಉಳಿಸಬೇಕಾಗಿದೆಯಲ್ಲದೇ ಗುಂಚಕ್ಕಿ, ಮತ್ತು ಉಣ್ಣೆಗೋಲದ ಹಕ್ಕಿ, ಇನ್ನಿತರ ಹುಳು ತಿನ್ನುರ ಹಕ್ಕಿಗಳನ್ನು ಸಾಯಿಸಬಾರದು ಎಂದು ಕಾನೂನು ಮಾಡಬೇಕು. ಒಂದು ಹಕ್ಕಿಯನ್ನು ಸಾಯಿಸಿದರೆ 10 ಜನ ಸತ್ತ ಹಾಗೆ. ಹಂದಿ ಬೆಳೆಯನ್ನು ನಾಶಮಾಡುತ್ತದೆ. ಆದರೆ ಗೊಂಚ್ ಹಕ್ಕಿ, ಉಣ್ಣೆಗೋಲದ ಹಕ್ಕಿ ಏನು ಮಾಡುತ್ತದೆಯೆಂದರೆ ನೀವಿರೋದೇ ಅದರಿಂದ.

ಶ್ರೀ ಜೆ.ಬಿ. ಶಿವಕುಮಾರ್ : ಮಾನ್ಯ ಸಭಾಧ್ಯಕ್ಷರೇ, ಇವೊತ್ತಿನ ದಿವಸ ಹಂದಿ ಮಾಂಸ 100 ರೂಪಾಯಿ ಆಗಿದ್ದು, ಹೀಗಿರುವಾಗ ಸಾಯಿಸಬೇಕು ಎಂದರೆ ಹೇಗೆ, ಯಾವುದನ್ನೂ ಕೂಡ ಸಾಯಿಸಬಾರದು, ಎಲ್ಲವನ್ನೂ ಉಳಿಸಿಕೊಂಡು ಅನುಭವಿಸಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಹೇಗೆ ಉಳಿಸುತ್ತೀರಿ ಗದ್ದೆಯಲ್ಲಿ? ನೀವು ಬೇಕಾದರೆ ಅವುಗಳನ್ನು ಹೊಡೆದುಕೊಂಡು ಹೋಗಿ ಸಾಕಿಕೊಳ್ಳಿ, ಇದಕ್ಕೆ ಯಾರು ಬೇಡ ಅನ್ನುತ್ತಾರೆ.

ಅಧ್ಯಕ್ಷರು : ನೀವು ಹೇಳುವುದು ಕಾಡು ಹಂದಿಯಲ್ಲ; ಅದು ಊರು ಹಂದಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನೀವು ಹಂದಿ ಬಹಳ ತಿನ್ನುತ್ತೀರಿ, ಅದು ನನಗೆ ಗೊತ್ತು.

ಶ್ರೀ ಜಿ.ಬಿ. ಶಿವಕುಮಾರ್ : ಅಧ್ಯಕ್ಷರೇ, ಇಲ್ಲಿ ಕೈ ಎತ್ತುವವರು ಎಷ್ಟು ಜನ ಮತ್ತು ಅರ್ಧಬರ್ಧ ಕೈ ಎತ್ತುವವರು ಎಷ್ಟು ಜನ ಎಂದು ತಮ್ಮ ಮುಂದೆ ಪರೀಕ್ಷೆಯಾಗಬೇಕು.

ಅಧ್ಯಕ್ಷರು : ಯಾವುದಕ್ಕೆ?

ಶ್ರೀ ಜಿ.ಬಿ. ಶಿವಕುಮಾರ್ : ಏನು ತಿನ್ನುತ್ತಾರೆ ಎಂಬುದಕ್ಕೆ, ಕಂಡು ತಿನ್ನುವವರು ಕೆಲವರು ಇದ್ದಾರ, ಇನ್ನೂ ಕೆಲವರು ಕಾಣದೇ ಇರುವ ಹಾಗೆ ತಿನ್ನುವವರು ಇದ್ದಾರೆ. ಅದ್ದರಿಂದ ಇವೊತ್ತು ಮಾಂಸದ ಬೆಲೆ ಇಷ್ಟು ಏರಿರುವುದು. ಮಾಂಸ 100 ರೂ. ಕೋಳಿ ರೂ. 60, ಮೀನು ರೂ. 80 ಆಗಿ ಹೋಯಿತು, ನಮ್ಮ ತಾತಂದಿರೆಲ್ಲಾ ಒಂದೊಂದು ಕೋಳಿ, ಕುರಿಯನ್ನು ಮನೆಯಲ್ಲೇ ತಿಂದು ಕೊಳ್ಳುತ್ತಿದ್ದರಂತೆ, ಆದರ ನಾವು ಈಗ ಪಿತೃಪಕ್ಷ ಒಂದಕ್ಕೆ ಮಾತ್ರ ಒಂದು ಕುರಿಯನ್ನು ಹೊಡೆಯುವುದು.

ಅಧ್ಯಕ್ಷರು : ಓಹೋ, ನೀವೇನು ಗುತ್ತಿಗೆ ಬರೆಸಿಕೊಂಡು ಬಂದಿದ್ದೀರೇನು, ನೀವೊಬ್ಬರೇ ತಿನ್ನಬೇಕೆಂದು?

ಶ್ರೀ ಜಿ.ಬಿ. ಶಿವಕುಮಾರ್ : ಹಾಗಲ್ಲ, ಯಾವುದು ಎಷ್ಟಾದರೂ ಆದರೂ.....

ಅಧ್ಯಕ್ಷರು : ನೂರಾರು ವರ್ಷಗಳಿಂದ ನಮ್ಮ ದೊಡ್ಡವರಿಗೆಲ್ಲಾ ಅದರ ರುಚಿಯನ್ನು ತೋರಿಸದೇ ಅನ್ಯಾಯ ಮಾಡಿದ್ದೀರಿ, ಅದಕ್ಕೇ ನಾವೆಲ್ಲಾ ಸೇರಿ ಆ ಸೇಡನ್ನು ತೀರಿಸಿಕೊಳ್ಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ, ತಾವು ಈಗ ತಿನ್ನುವುದನ್ನು ಕಲಿತಿದ್ದೀರಾ?

ಅಧ್ಯಕ್ಷರು : ಜೊತೆಯಲ್ಲಿ ತಿಂದು ಇಲ್ಲಿ ಹೀಗೆ ಹೇಳಿದರೆ ನಾನೇನ್ಮಾಡಲಿ, ನೀವು, ನಾವು ಶಿವಪ್ಪನವರು ಎಲ್ಲರೂ ಒಟ್ಟಿಗೆ ತಿನ್ನಲಿಲ್ಲವೇ?

(ನಗು)

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ನೀವು ತಿನ್ನುವುದಕ್ಕೆ ಬನ್ನಿ ಎಂದು ನನ್ನನ್ನು ಕರೆದಿರಿ, ಆದರೆ ನಾವಿನ್ನೂ ಬಂದಿಲ್ಲ. ಆದರೆ ಇಲ್ಲಿ ನೀವು ಈ ರೀತಿಯಲ್ಲಿ ಹೇಳಿಬಿಡುವುದೇ?

ಅಧ್ಯಕ್ಷರು : ಪುಟ್ಟಣ್ಣಯ್ಯನವರೇ, ತಾವು ಮುಂದುವರೆಸಿ,

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಗ್ರಾಮೀಣ ಅಭಿವೃದ್ಧಿ ಬಗ್ಗೆ ಮತ್ತು ಅಲ್ಲಿಯ ರಸ್ತೆಯ ಬಗ್ಗೆ, ಶಾಲೆಯ ಕಟ್ಟಡದ ಬಗ್ಗೆ ಈಗಲೂ ಕೂಡ ತಾವು ಎಂಥಹ ತಪ್ಪು ಮಾಡುತ್ತಿದ್ದೀರೆಂದರೆ...

ಅಧ್ಯಕ್ಷರು : ಪುಟ್ಟಣ್ಣಯ್ಯನವರೇ, ತಾವು ಅರಣ್ಯದ ಬಗ್ಗೆ ಮಾತನಾಡುತ್ತಾ ಯಾವ ಸ್ಪೀಷೀಸ್ ಅನ್ನು ಅರಣ್ಯಗಳಲ್ಲಿ ಬೆಳೆಸಿದರೆ ಮುಂದಿನ ಜನಾಂಗಕ್ಕಾದರೂ ಸ್ವಲ್ಪ ಪ್ರಯೋಜನವಾಗಬಹುದೇನೋ, ಏಕೆಂದರ ಈಗ ಇವರು ಕೊಡುತ್ತಿರುವ ಸ್ಪೀಷೀಸ್ ಇದೆಯಲ್ಲಾ, ಇವು ಯಾವುವು ಆರು ವರ್ಷದ

ಮೇಲೆ ಉಳಿಯುವುದಿಲ್ಲ. ಹಿಂದೆ ಮೈಸೂರು ಮಹಾರಾಜರು ಹಾಕಿದ ಗಿಡಗಳೆಲ್ಲಾ ಇವೊತ್ತಿಗೂ ಕೂಡ ನಮಗೆ ಎಷ್ಟೋ ಪ್ರಯೋಜನಕ್ಕೆ ಬರುತ್ತಿವೆ. ಆ ಸ್ಪೀಷೀಸ್ ಬಗ್ಗೆ ತಾವು ಯಾವಾಗಲೂ ಮಾತನಾಡುತ್ತಿದ್ದೀರಿ, ಆದಕ್ಕೋಸ್ಕರ ನಾನು ನಿಮಗೆ ನೆನಪು ಮಾಡಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನು ಮರೆತುಬಿಟ್ಟಿದ್ದೆ. ಪಕ್ಷಿಗಳ ಬಗ್ಗೆ ಬಹಳ ಮುಖ್ಯವಾದ ವಿಷಯವಿದೆ, ದಯವಿಟ್ಟು ಯಾವುದೇ ಕಾರಣಕ್ಕೂ ಒಂದು ಪಕ್ಷಿಯನ್ನು ಕೂಡ ಸಾಯಿಸಬಾರದು. ಉದಾಹರಣೆಗೆ ಹೇಳಬೇಕಂದರೆ ಮೊನ್ನೆ ನಾನು ಧಾರವಾಡಕ್ಕೆ ಹೋಗಿದ್ದ, ಅಲ್ಲಿ ಅವರು ಕಡಲೇಕಾಯಿ ಬಿತ್ತಿದ್ದರು, ಹೀಗೆ ಬಿತ್ತಿರುವಾಗ ಇದರ ಎಲೆ ಬರುವ ಅವಧಿಯಲ್ಲಿ ಹುಳು ಬರುತ್ತದೆಂದು ಔಷಧಿ ಹೊಡೆದಿದ್ದರು, ಆ ಔಷಧಿ ಹೊಡೆದಿರತಕ್ಕಂಥ ಕಡಲೇಕಾಯಿ ಎಲೆಯ ಮೇಲೆ ಯಾವುದೇ ಪಕ್ಷಿಯೂ ಕೂಡ ಆ ಹುಳವನ್ನು ತಿನ್ನುವುದಕ್ಕೆ ಬರಲಿಲ್ಲ. ಮತ್ತು ಆ ಹುಳುವೂ ಯಾವುದೇ ಕಾರಣಕ್ಕೂ ಸಾಯಲಿಲ್ಲ. ಅವು ಈ ಔಷಧಿಗೆ ಅಡಿಕ್ಟ್ ಆಗಿದ್ದವು. ಅದೇ ಇವರ ಪಕ್ಕದಲ್ಲಿಯೇ ಇದ್ದ ಗದ್ದೆಯಲ್ಲಿ ಎಲೆ ಬಂದಾಗ ಸಾವಿರಾರು ಹುಳುಗಳು ಇದ್ದಂಥ ಸಂದರ್ಭದಲ್ಲಿ ಆ ಹುಳುಗಳನ್ನು ಪಕ್ಷಿಗಳು ತಿಂದುಹಾಕಿದ್ದವು. ಆದರೆ ಔಷಧಿ ಹಾಕಿದ್ದ ಗದ್ದೆಯಲ್ಲಿ ಹುಳಗಳು ಸಾಯದೇ ಬೆಳೆ ಹಾಳಾಯಿತು. ಆದರೆ ಔಷಧಿ ಹಾಕದಿದ್ದ ಗದ್ದೆಯಲ್ಲಿ ಈ ಗುಂಪಕ್ಕಿ ಎಲ್ಲಾ ಹುಳುಗಳನ್ನು ತಿಂದು ಬೆಳೆಯನ್ನು ಉಳಿಸಿತು. ಇನ್ನೊಂದು ಉದಾಹರಣೆ ಎಂದರೆ ಒಂದು ಭಾರಿ ನಾನೇ ತಡಗಣಿಕಾಳು ಭಿತ್ತನೆ ಭಿತ್ತಿದ್ದೆ, ಆಗ ಈ ಬೆಲೆಗೆ ಕೋಟ್ಯಾಂತರ ಹುಳುಗಳು ಬಂದಿದ್ದವು, ಆಗ ಸುಮಾರು 500 ಗುಣಪಕ್ಕಿ ಪಕ್ಷಿಗಳು ಕೇವಲ ಮೂರು ದಿವಸಗಳಲ್ಲಿ ಒಂದು ಹುಳೂ ಕೂಡ ಉಳಿಯದಂತೆ ಎಲ್ಲವನ್ನೂ ತಿಂದುಹಾಕಿದವು. ಇದು ಬಹಳ ಜವಾಬ್ದಾರಿಯುತವಾದ ವಿಷಯ. ನಾವು ಕೃಷಿಕ್ಷೇತ್ರದ ಜೊತೆಯಲ್ಲಿ ಹುಡುಗಾಟ ಆಡುತ್ತಿದ್ದೇವೆ. ಈ ರೀತಿ ಆಡಿದರೆ ನಾವೆಲ್ಲಾ ಪೂರ್ಣ ನಾಶವಾಗಿಬಿಡುತ್ತೇವೆ. ಕೃಷಿ ಕ್ಷೇತ್ರದ ಬಗ್ಗೆ ಯಾರೂ ಕೂಡ ಹುಡುಗಾಟ ಆಡಬಾರದು. ಇವೊತ್ತು ಈ ಸರ್ಕಾರ ನಾಳೆ ಇನ್ನೊಂದು ಸರ್ಕಾರ ಬರಬಹುದು, ಈ ವಿಷಯದಲ್ಲಿ ಬಹಳ ಗಂಭೀರವಾದಂಥ ಕಾನೂನನ್ನು ಮಾಡಬೇಕು. ಹಿಂದೆ ನಾವು ಅರಳಿಮರವನ್ನು ಬೆಳೆಸುತ್ತಿದ್ದೆವು, ಇದರ ಬಗ್ಗೆ ಹೇಳಬೇಕೆಂದರೆ 600 ಆಲದಮರಗಳು ಒಂದು ಅರಳಿ ಮರಕ್ಕೆ ಸಮಾನ, 600 ಆಲದ ಮರದಲ್ಲಿ ಎಷ್ಟು ಆಮ್ಲಜನಕ ಉತ್ಪಾದನೆ ಆಗುತ್ತದೆ ಅಷ್ಟು ಆಮ್ಲಜನಕ ಒಂದು ಅರಳಿಮರದಲ್ಲಿ ಉತ್ಪಾದನೆಯಾಗುತ್ತದೆ. ಸಾಮಾನ್ಯವಾಗಿ ಈ ಬೇವಿನಮರ ಮತ್ತು ಅರಳಿ ಮರವನ್ನು ಸೇರಿಕೊಂಡಂತೆ ಬೆಳೆಮು ಅರಳಿಕಟ್ಟೆಯನ್ನು ಹಳ್ಳಿಗಳಲ್ಲಿ ನಿರ್ಮಾಣ ಮಾಡುತ್ತೇವೆ. ಈ ಅರಳಿಕಟ್ಟೆಯ ವಿಚಾರದಡಿಯಲ್ಲಿಯೇ, ಮಳೆ ಬಂದ ಅವಧಿಯಲ್ಲಿಯೇ ಎಲ್ಲಾ ಪಂಚಾಯತಿಗಳಲ್ಲಿ ಸರ್ಕಾರೀ ವಾಹನದಲ್ಲಿ ಆ ಪಂಚಾಯಿತಿ ಅಧ್ಯಕ್ಷರೋ, ಛೇರ್ಮನರೋ ಯಾರು ಇರುತ್ತಾರೋ ಅವರುಗಳ ನೇತೃತ್ವದಲ್ಲಿ ಒಂದೈದು ಸಾವಿರ ಗಿಡಗಳನ್ನು ರೈತರಿಗೆ ಹಂಚುವುದರ ಮೂಲಕ ಸಾಮಾಜಿಕ ಅರಣ್ಯ ವನ್ನು ಹಂಚುವುದರ ಮೂಲಕ ಇದರಲ್ಲಿ ಹೆಚ್ಚಾಗಿ ಹೊಂಗೆ, ಅಲ, ಮತ್ತು ಅತಿ ಹೆಚ್ಚಿನ ಪ್ರಮಾಣದಲ್ಲಿ ಅರಳಿ ಮರಗಳನ್ನು ಬೆಳೆಸಬೇಕು, ಆದರೆ ನೀಲಗಿರಿಯನ್ನು ಮಾತ್ರ ಬೆಳೆಸಬಾರದು. ನೀಲಗಿರಿ ಮರ ಇದ್ದರೆ ಮೊದಲು ಅದನ್ನು ಕಿತ್ತುಹಾಕಬೇಕು. ನೀಲಗಿರಿ ಬೆಳೆಸಿ ಪರಿಸರ ನಾವು ಹಾಳುಮಾಡುತ್ತೇವೆ. ಇವೊತ್ತು ನೀಲಗಿರಿಯನ್ನು ಕೋಲಾರದಲ್ಲಿ ಜಾಸ್ತಿ ಬೆಳೆಸುತ್ತೀರಿ. ಇವೊತ್ತು ನೀಲಗಿರಿಯನ್ನು ಸೌದೆಯಾಗಿ

ಬಳಸಿದರೆ ಕಣ್ಣು, ಮೂಗು ಉರಿಯುತ್ತದೆ, ನೀಲಗಿರಿ ಮರ ಎಲ್ಲಿದೆಯೋ ಅಲ್ಲಿ ಒಂದು ಹಕ್ಕಿ ಪಕ್ಷಿಯೂ ವಾಸ ಮಾಡುವುದಿಲ್ಲ. ನೀಲಗಿರಿ ಮರ ಎಲ್ಲಿ ಇರುತ್ತದೋ ಅದರ ಪಕ್ಕದಲ್ಲಿ ಯಾವುದಾದರೂ ದೊಡ್ಡ ಕೆರೆ ಇದ್ದರೆ ಈ ಮರಗಳು ಆ ನೀರನ್ನು ಪೂರ್ಣವಾಗಿ ಎಳೆಯುವ ಸಾಮರ್ಥ್ಯವನ್ನು ಹೊಂದಿರುತ್ತವೆ. ವೈಜ್ಞಾನಿಕವಾಗಿ ಯೋಚನೆ ಮಾಡಿ ನೋಡಿದಾಗ ಸುಮಾರು 70 ಅಡಿಯಷ್ಟು ಆಳದವರೆಗೂ ನೀರನ್ನು ಎಳೆದುಕೊಳ್ಳುತ್ತವೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ತಾವು ಅರಣ್ಯ ಬೆಳೆಸುವ ವಿಚಾರದಲ್ಲಿ ಯಾವ ಯಾವ ಮರಗಳನ್ನು ಬೆಳೆಸಬೇಕು ಎಂಬುದರ ಬಗ್ಗೆ ಪುಟ್ಟಣ್ಣಯ್ಯನವರಿಗೆ ಮಾಹಿತಿಯನ್ನು ಕೊಡಿ ಎಂದು ಹೇಳಿದಿರಿ, ಈ ವಿಚಾರದಲ್ಲಿ ನಾನೂ ಕೂಡ ಅರಣ್ಯ ವಿಷಯ ಸಮಿತಿಯಲ್ಲಿ ಕೆಲಸವನ್ನು ಮಾಡಿದ್ದೇವೆ. ಈ ವಿಷಯದಲ್ಲಿ ಸ್ಪಷ್ಟವಾಗಿ ಅಧಿಕಾರಿಗಳಿಗೆ ಸಲಹೆಯನ್ನೂ ಕೂಡ ಕೊಟ್ಟಿದ್ದೇವೆ, ಇದನ್ನು ಸರ್ಕಾರ ಕೂಡ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ಮಾತೆತ್ತಿದ್ದರೆ ಸಾಮಾಜಿಕ ಅರಣ್ಯದಡಿಯಲ್ಲಿ ಅಕೇಷಿಯಾ, ಗುಲ್ಮೊಹರ್ ಮತ್ತು ನೀಲಗಿರಿ ಮರಗಳನ್ನು ಬೆಳೆಸುವಂಥ ಸಂಪ್ರದಾಯ ಬೆಳೆಯುತ್ತಿದೆ. ಇದು ಮೂಲಭೂತವಾಗಿ ಇವು ನಮ್ಮ ದೇಶದ ಸಸ್ಯಗಳಲ್ಲ, ಅಥವಾ ಇವು ನಮ್ಮ ಉಪಯೋಗಕ್ಕೆ ಬರುವಂಥ ವಾತಾವರಣವನ್ನು ಶುದ್ಧ ಮಾಡುವಂಥ ಮರ ಅಲ್ಲ. ಆದ್ದರಿಂದ ಇವುಗಳನ್ನು ಸಂಪೂರ್ಣವಾಗಿ ರದ್ದುಮಾಡಿ ಮಾವು, ಬೇವು, ಹೊಂಗೆ, ಹುಣಸೆ, ಅಲ ಮತ್ತು ಅರಳಿ ಈ ರೀತಿಯಲ್ಲಿ ನಮ್ಮ ವಾತಾವರಣವನ್ನು ಕಾಪಾಡಿಕೊಳ್ಳುವಂಥ ನಮ್ಮ ಮಳೆ, ಬೆಳೆ ಗಾಳಿಗೆ ಹೊಂದಿಕೊಳ್ಳುವಂಥ ಮತ್ತೆ ಬೆಳಕಿಗೆ ತರುವಂಥದ್ದು, ಆ ಬೆಳೆಗಳನ್ನು ಮತ್ತು ಸಸಿಗಳನ್ನು ಕಾಪಾಡಿಕೊಳ್ಳತಕ್ಕಂಥದ್ದರ ಅಧಿಕಾರಿಗಳು ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು ಮತ್ತು ಆ ದಿಕ್ಕಿನಲ್ಲಿ ಸರ್ಕಾರ ಕೂಡ ಚಿಂತನೆಯನ್ನು ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಬಯಸುತ್ತೇನೆ.

ಅಧ್ಯಕ್ಷರು : ಅಧಿಕಾರಿಗಳು ಮಾಡಬೇಕಾಗಿಲ್ಲ; ಸರ್ಕಾರದವರು ಅದನ್ನು ಮಾಡಿ ಅಧಿಕಾರಿಗಳಿ ಡೈರಕ್ಷನ್ಸ್ ಕೊಡಬೇಕು, ಇಂತಹ ಮರಗಳನ್ನು ಬೆಳೆಸಿ ಎಂದು ಹೇಳಬೇಕು. ಅವರಿಗೆ ಫಾಸ್ಟ್ ಗ್ರೋಯಿಂಗ್ ಸ್ಪೀಷೀಸ್ ಬೇಕು. ಆದ್ದರಿಂದಲೇ ನಾವು ಆರ್ಡರ್ ಮಾಡಿ ಅವರಿಗೆ ಹೇಳಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರತಕ್ಕಂಥ ವಿಚಾರ ಏನೆಂದರೆ, ನಮ್ಮ ಕೃಷಿ ನೀತಿಯಲ್ಲಿ ಸಾಮಾಜಿಕ ಅರಣ್ಯ ಕಾರ್ಯಕ್ರಮದಲ್ಲಿ ಬೆಳೆಸತಕ್ಕಂಥ ಒಟ್ಟಾರೆ ಮರಗಳೇನಿವೆ ಅದರಲ್ಲಿ ಶೇಕಡ 50 ರಷ್ಟು ಹೊಂಗೆ ಮತ್ತು ಮಾನ್ಯ ಪುಟ್ಟಣ್ಣಯ್ಯನವರು ಹೇಳುತ್ತಿರತಕ್ಕಂಥ ಮರಗಳೇನಿವೆ ಇಂಥದ್ದನ್ನೇ ಬೆಳೆಸಬೇಕು ಎಂದು ನಾವು ಕಡ್ಡಾಯ ಮಾಡಿದ್ದೇವೆ. ಈ ಕೃಷಿ ನೀತಿಗೆ ಸಂಬಂಧಪಟ್ಟಂತೆ ಸಚಿವ ಸಂಪುಟದ ಉಪ ಸಮಿತಿ ಇದೆ. ನಾನು ಅಧ್ಯಕ್ಷನಾಗಿರುವ ಆ ಸಮಿತಿಯಲ್ಲಿ ಈಗಾಗಲೇ ತೀರ್ಮಾನ ಮಾಡಲಾಗಿದೆ. ಶೇಕಡಾ 50 ರಷ್ಟು ಭಾಗ ಹಸಿರು ಎಲೆ ಗೊಬ್ಬರವನ್ನು ಕೊಡತಕ್ಕಂಥ ಮತ್ತು ಮೇವನ್ನು ಕೊಡತಕ್ಕಂಥ ಗಿಡಮರಗಳನ್ನು ಬೆಳೆಸತಕ್ಕದ್ದನ್ನು ಕಡ್ಡಾಯಮಾಡಬೇಕು ಎಂದು ಉಪ ಸಮಿತಿಯಲ್ಲಿ ಈಗಾಗಲೇ ತೀರ್ಮಾನವಾಗಿದೆ. ಅದನ್ನು ಸರ್ಕಾರದ ನೀತಿಯನ್ನಾಗಿ ಒಪ್ಪಿಕೊಂಡಿದ್ದೇವೆ. ಇನ್ನು ಮುಂದೆ ಬರತಕ್ಕಂಥ ಅರಣ್ಯೀಕರಣದಲ್ಲಿ ಈ

ತರಹ ಗಿಡಮರಗಳನ್ನು ಬೆಳೆಸುವುದಕ್ಕೆ ಕಡ್ಡಾಯಗೊಳಿಸಲಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಗಿಡಗಳನ್ನು ಬೆಳೆಸುವ ಬಗ್ಗೆ ತಾವು ಹೇಳಿದಹಾಗೆ ಇವತ್ತು ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಸಹ ಈ ನೀಲಗಿರಿ ಸಸಿಗಳನ್ನು ತೆಗೆದುಕೊಂಡು ಹಾಕುವಂತಹ ಕಾರ್ಯಕ್ರಮವನ್ನು ನಾವು ನೋಡುತ್ತಿದ್ದೇವೆ. ಈಗಲೂ ಹಾಕಿದ್ದಾರೆ, ಹಾಕುತ್ತಿದ್ದಾರೆ. ಇವತ್ತು ನರ್ಸರಿಗಳನ್ನು ಮಾಡಿರುವಂತಾದ್ದು ಇದೇ ರೀತಿಯಲ್ಲಿದೆ? ಜೊತೆಗೆ ಸರ್ಕಾರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆದಾಯ ಬರುವಂತ, ಉತ್ತಮವಾಗಿರುವಂತಹ ಹಳೇ ಮರಗಳನ್ನು ಕಡಿದು ಸಾಗುವಾನಿ ಮರಗಳನ್ನು ಬೆಳೆಸುವಂತಹ ಪ್ರಯತ್ನದಲ್ಲಿ ನಾವು ಇದ್ದೇವೆ. ಇದು ಏತಕ್ಕಾಗಿ ಬರುತ್ತದೆ ಎಂದರೆ ಕೇವಲ ಸರ್ಕಾರಕ್ಕೆ ಆದಾಯ ಬರುವಂತಹ ವಿಚಾರ ಬಿಟ್ಟರೆ ಜನರಿಗೆ ಇದರಿಂದ ಉಪಯೋಗ ಆಗದೇ ಇರುವುದು ಮತ್ತು ಇವರ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದಹಾಗೆ ಒಂದು ಸಾರ್ವಜನಿಕರಿಗೆ ಅನುಕೂಲವಾಗುವ ಹಾಗೆ ಗಿಡಮರಗಳನ್ನು ಬೆಳೆಸುವುದರ ಬಗ್ಗೆ ಒಂದು ನಿರ್ದಿಷ್ಟ ಆದೇಶವನ್ನು ಹೊರಡಿಸಬೇಕಾಗುತ್ತದೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಮಾನ್ಯ ಅಧ್ಯಕ್ಷರೇ, ಮರಗಳನ್ನು ಬೆಳೆಸುವುದರ ಜೊತೆಯಲ್ಲಿ ಗಿಡಗಳನ್ನು ಬೆಳೆಸುವುದರಲ್ಲಿ ಕೂಡ ನಮ್ಮ ಜನರಿಗೆ ತಿಳುವಳಿಕೆ ಕಡಿಮೆ ಇದೆ. ತುಳಸಿ ಗಿಡಗಳನ್ನು ವಿಧಾನ ಸೌಧದ ಸುತ್ತಮುತ್ತ ಬೆಳೆಸಬೇಕು. ಅದು ಮೈಗೆ ಎಷ್ಟು ಒಳ್ಳೆಯದು ಎಂದರೆ ಗಾಳಿ ಸೇವನೆಯಿಂದ ನಮ್ಮ ಆರೋಗ್ಯ ಸುಧಾರಣೆಯಾಗುತ್ತದೆ. ಕೆಮ್ಮು ಬಂದರೆ ಒಂದು ಎಲೆಯಿಂದ ಬಾಯಿಗೆ ಹಾಕಿಕೊಂಡರ ಎಷ್ಟೋ ಗುಣಕೊಡುತ್ತದೆ. ಆದುದರಿಂದ ವಿಧಾನಸೌಧದ ಸುತ್ತಮುತ್ತ ಹಲವಾರು ತುಳಸಿ ಗಿಡಗಳನ್ನು ಹಾಕಬೇಕು ಎಂಬುದು ನನ್ನ ಕೋರಿಕೆ ಮತ್ತು ಶಾಸಕರ ಭವನದ ಹತ್ತಿರ ಸಹ ಹಾಕಬೇಕು ಹಾಗೂ ಬೇವಿನ ಮರ ಒಂದೂ ಇಲ್ಲ. ಅಲ್ಲಿ ಬೇವಿನ ಮರಗಳನ್ನೂ ಕೂಡ ಹಾಕಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ನೀಲಗಿರಿ ಮರ ಬೆಳೆಯುವುದರಿಂದ ಅದು 200 ಅಡಿಯವರೆಗೂ ನೀರು ಎಳೆಯುತ್ತದೆ, ಹತ್ತಿರ ಇದ್ದಂತಹ ಕೆರೆಗಳು ಒಣಗಿಹೋಗುತ್ತವೆ ಎಂದು ಕೃಷಿ ಸಚಿವರಿಗೆ ಹೇಳಿದರು. ಅದೇ ಪ್ರಶ್ನೆಯನ್ನು ನಾನು ಮತ್ತೇ ಕೇಳುತ್ತಿದ್ದೇನೆ ಅದಕ್ಕೆ ಆಧಾರ ಏನು ? ಇದು ನಿಜವೇ ? ನೀಲಗಿರಿ ಬೆಳೆಯುವುದರಿಂದ ಅಪಾಯ ಇದೆಯೇ ? ಅದ ತಮ್ಮ ಕೃಷಿ ಇಲಾಖೆಗೆ ಸಂಬಂಧಪಟ್ಟಿರುವಂತಾದ್ದು. ಅದರ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ? ನಿಜವಾಗಲೂ ನೀಲಗಿರಿ ಬೆಳೆಯುವುದರಿಂದ ಅಪಾಯವಿದೆಯೇ? ಅದನ್ನು ನಾವು ತಿಳಿದುಕೊಳ್ಳುವುದು ಒಳ್ಳೆಯದಲ್ಲವೇ?

ಅಧ್ಯಕ್ಷರು : ಇದರ ಬಗ್ಗೆ ಸರ್ಕಾರ ಉತ್ತರ ಕೊಡುವಾಗ ಹೇಳಿಸೋಣ. ಈಗ ಮಾತನಾಡುವಾಗ ಮಧ್ಯದಲ್ಲಿ ತೊಂದರ ಮಾಡುವುದು ಬೇಡ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅರಣ್ಯದ ಬಗ್ಗೆ ಕಾಳಜಿ ಇಲ್ಲದೆ ಇದ್ದರೆ ನಾವು ರೈತರನ್ನು

ಇನವಾಲ್ವಮೆಂಟ್ ಮಾಡಬೇಕು. ಕೆಲವರಿಗೆ ಅರಣ್ಯದ ಇಲಾಖೆ ಸಂಬಂಧಪಟ್ಟ ಭೂಮಿಗಳನ್ನು ರೈತರಿಗೆ ಕೊಟ್ಟು ಬೆಳೆಸುವುದರ ಮೂಲಕ ನಿಜವಾಗಿಯೂ ನಾವೇನು 33 ಪರ್ಸೆಂಟ್ ಎಂದು ಹೇಳುತ್ತೇವೆ ಇವರಲ್ಲಿ ರೈತರ ಇನ್‌ವಾಲ್ವ್‌ಮೆಂಟ್ ಇಲ್ಲದೇ ಆಗುವುದಿಲ್ಲ. ಉದಾಹರಣೆಗೆ ವರ್ಷಕ್ಕೆ ಒಂದು ಸಲ ತಹಸೀಲ್ದಾರ್‌ಗೆ ಹೇಳಿ ಕಳುಹಿಸುತ್ತಾರೆ. ಸಾಮಾಜಿಕ ಅರಣ್ಯ ಬೆಳೆಸುವುದರ ಬಗ್ಗೆ ಒಂದು ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿ ಕಳುಹಿಸುತ್ತಾರೆ. ತಹಸೀಲ್ದಾರ್ ಏನು ಮಾಡುತ್ತಾರೆಂದರೆ ಟೌನಿನಲ್ಲಿರುವವರನ್ನು ಕರೆದುಕೊಂಡು ಬರುತ್ತಾರೆ. ಅಲ್ಲಿ ಸಭೆ ಮಾಡುತ್ತಾರೆ, ಅರಣ್ಯ ಬೆಳೆಸುವುದರ ಬಗ್ಗೆ ಭಾಷಣ ಮಾಡುತ್ತಾರೆ. ಯಾವುದೇ ಹಳ್ಳಿಗೆ ಹೋಗುವುದಿಲ್ಲ. ನಾನೇ ನೋಡಿದ್ದೇನೆ, ಪಾಂಡವಪುರ ಟೌನಿನಲ್ಲಿ ಒಂದು ಸ್ವಲ್ಪ ಅಗಲ ಕೂಡ ಜಮೀನು ಇಲ್ಲದಾಗ ಎಲ್ಲಿ ಸಸಿ ಬೆಳೆಸುತ್ತಾರೆ, ಅವರನ್ನು ಕರೆದುಕೊಂಡು ಸರ್ಕಾರದ ಪ್ರೋಗ್ರಾಂಗೆ ಅಂಕಿತ ಹಾಕಿ ಕಳುಹಿಸಿಕೊಟ್ಟರು. ಇದು ನಿಜವಾಗಿ ಕಾಳಜಿಯಿಂದ ಆಗಬೇಕು. ಆದುದರಿಂದ ಪ್ರತಿಯೊಂದು ಪಂಚಾಯಿತಿ ಮೂಲಕ, ಶಾಸಕರ ಜನರಿಗೆ ತಿಳುವಳಿಕೆ ಕೊಡುವುದರ ಮೂಲಕ, ಮುಂದಿನ ರಾಜ್ಯದ ಹಾಗೂ ದೇಶದ ಭದ್ರತೆಗೋಸ್ಕರ ಮುಂದಿನ ಮಾನವಕುಲ ಉಳಿಸುವುದಕ್ಕೋಸ್ಕರ ನಾವು ಸಾಮಾಜಿಕ ಅರಣ್ಯವನ್ನು ನಡೆಸುವುದರಲ್ಲಿ ಯುದ್ಧೋಪಾದಿಯಲ್ಲಿ ನಾವೆಲ್ಲಾ ಸೇರಿ ಕೆಲಸ ಮಾಡಿದರೆ ಪ್ರಯೋಜನವಾಗುತ್ತದೆ . ಇಲ್ಲದೆ ಇದ್ದರೆ ಕೇವಲ ಭಾಷಣವಾಗುತ್ತದೆ. ನಾನು ನನ್ನ ಕ್ಷೇತ್ರದಲ್ಲಿ ನಾಲ್ಕು ಪ್ರಯೋಗ ಮಾಡಿದ್ದೇನೆ. ಒಂದು 4-5 ಪಂಚಾಯಿತಿಗೆ 5-6 ಸಾವಿರ ಗಿಡಗಳನ್ನು ತರಿಸಿ ರೈತರಿಗೆ ತಿಳುವಳಿಕೆ ಕೊಟ್ಟು ನಡಿಸತಕ್ಕಂಥ ಕೆಲಸವನ್ನು ಮಾಡಿಸಿದ್ದೇನೆ. ಇನ್ನು ತೋಟಗಾರಿಕೆ. ರೈತರಿಗೆ 25 ಸಾವಿರ ರೂಪಾಯಿ ಕೊಟ್ಟು ಸಬ್ಸಿಡಿ ಕೊಡಿ ತಾಂತ್ರಿಕ ಜ್ಞಾನ, ಲಿಫ್ಟ ಇರಿಗೇಷನ್ ಸ್ಪ್ರಿಂಕ್ಲರ್ ಇವನ್ನು ಉಪಯೋಗಿಸಿಕೊಂಡು ಒಂದು ಕ್ರಾಂತಿ ರೂಪದಲ್ಲಿ ಇಸ್ರೇಲ್ ರೀತಿಯ ಕೆಲಸ ನಡೆಯುತ್ತಿದೆ. ಅದನ್ನು ನೋಡಿ ರೈತರ ಮನಸ್ಸು ಬದಲಾವಣೆಯಾದರ ವಿದ್ಯುಚ್ಛಕ್ತಿ ಉಳಿತಾಯ, ನೀರಿನ ಉಳಿತಾಯ, ಮಣ್ಣಿನ ಪೌಷ್ಟಿಕಾಂಶದ ಉಳಿತಾಯ, ಹೆಚ್ಚು ಫಲವತ್ತಾದ ಭೂಮಿಯಲ್ಲಿ ಬೆಳೆ ಬೆಳೆದು ರಾಜ್ಯದ ಸಂಪನ್ಮೂಲವನ್ನು ಹೆಚ್ಚು ಸೃಷ್ಟಿ ಮಾಡತಕ್ಕಂಥ ಕೆಲಸ ಮಾಡಬಹುದು ಎಂದು ತಾವೇನಾದರೂ ಹೇಳಿದರೆ ನಮ್ಮ ಹತ್ತಿರ ಆಗುವುದಿಲ್ಲ, ಸರ್ಕಾರದ ಹತ್ತಿರ ದುಡ್ಡಿಲ್ಲ ಎಂದು ಹೇಳುತ್ತಾರೆ. ನಮ್ಮ ಹತ್ತಿರ ಈಗ ಬಹಳ ಜನ ರೈತರು ಬಂದಿದ್ದರು. ಆದಕ್ಕಾಗಿ ನಾನು ನಿಮ್ಮ ಹತ್ತಿರ ಹೇಳಿದೆ. ಬಹಳ ಜನ ಕಾಳಜಿ ಇರತಕ್ಕಂಥ ರೈತನಿಗೆ ಕನಿಷ್ಟ 50 ಪರ್ಸೆಂಟ್ ಸಬ್ಸಿಡಿ ಕೊಟ್ಟರೆ ಇಸ್ರೇಲಗೆ ಹೋಗಿ ತಾಂತ್ರಿಕ ಜ್ಞಾನದ ಬಗ್ಗೆ ಏನಾದರೂ ಅನುಭವ ಪಡೆದುಕೊಂಡು ಬರುತ್ತಾರೆ. ತಾವು ಬೆಲೆ ಏನು ನಿಗದಿ ಮಾಡುವುದಕ್ಕೆ ಸಾಧ್ಯವಿದೆ. ಈಗ ಎರಡೂವರೆ ಪರ್ಸೆಂಟ್ ಲಾಭ ಇಟ್ಟುಕೊಂಡು ನಮ್ಮ ಹತ್ತಿರ ಪದಾರ್ಥಗಳನ್ನು ತೆಗೆದುಕೊಳ್ಳುತ್ತೀರಿ. ಮಾರ್ಕೆಟ್ ಬೆಲೆ 5 ರೂಪಾಯಿ ಇದ್ದರೆ ಎರಡೂವರೆ ಪರ್ಸೆಂಟ್ ತೆಗೆದುಕೊಳ್ಳುತ್ತೀರಿ. ನೀವು 10 ರೂಪಾಯಿಗೆ ಹೊರಗಡೆ ಮಾಡುತ್ತೀರಿ. ಮೊನ್ನೆ ಶೈತ್ಯಾಗಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಬಹಳ ಸಣ್ಣ ರಾಜ್ಯವಾದ ಒಂದು ಲಕ್ಷ ಟನ್ ಆಲೂಗಡ್ಡೆ ಉತ್ಪಾದನೆ ಮಾಡತಕ್ಕಂಥ ಹರಿಯಾಣದಲ್ಲಿ 130 ಶೈತ್ಯಾಗಾರವಿದ್ದರೆ, ಏಳು ಲಕ್ಷ ಟನ್ ಆಲೂಗಡ್ಡೆ ಉತ್ಪಾದನೆ ಇರತಕ್ಕಂಥ ಈ ರಾಜ್ಯದಲ್ಲಿ 13 ಶೈತ್ಯಾಗಾರಗಳಿವೆ. ಈರುಳ್ಳಿ ಬೆಳೆಗೂ ಹೇಳಿದರು, ಇಡೀ ಪ್ರಪಂಚದಲ್ಲಿ ಅತ್ಯಂತ ಆರ್ಥಿಕವಾಗಿ ಸಂಪಾದನೆ ಮಾಡುವ ಬೆಳೆ ಎಂದರೆ ಈರುಳ್ಳಿ

ಬೆಳೆ. ಇದು ಹೆಚ್ಚು ಆರ್ಥಿಕವಾಗಿ ರೊಟೇಷನ್ ಮಾಡುತ್ತದೆ ಎಂದು. ಆದರೆ ಅದರ ಬೆಲೆ 800 ರೂಪಾಯಿ ಇದ್ದದ್ದು ಇದಕ್ಕಿದ್ದ ಹಾಗೆ 180-190 ರೂಪಾಯಿ ಆಗುತ್ತದೆ. ಧಾರಣೆ ಕುಸಿಯುತ್ತವೆ. ಕೊಂಡುಕೊಳ್ಳುವವನಿಗೂ ಮಾಡುವವನಿಗೂ ಕೂಡ ಅನಾನುಕೂಲವಾಗಬಾರದು. ಬೆಳೆಯುವವನಿಗೂ ಕೂಡ ಅನಾನುಕೂಲವಾಗಬಾರದು. ಅವನು ಬಳ್ಳಾರಿಯಿಂದ ಬೆಂಗಳೂರಿಗೆ ತೆಗೆದುಕೊಂಡು ಬರುತ್ತಾನೆ. ಅದಕ್ಕೆ 14-15 ಸಾವಿರ ರೂಪಾಯಿಯ ಹಾಗೆ ಬಾಡಿಗೆಯನ್ನು ಕೊಟ್ಟು ತರುತ್ತಾನೆ. ಅವನಿಗೆ ಒಂದು ಕ್ವಿಂಟಾಲ್ ಗೆ ಎಷ್ಟು ಸಿಕ್ಕಿತ್ತು? ಇಲ್ಲಿ ಸಾವಿರಾರು ಟನ್ ಇಟ್ಟುಕೊಳ್ಳುವುದಕ್ಕೆ ಶೈತ್ಯಾಗಾರ ಇದೆಯೇ?

ಶ್ರೀ ಸಿ. ಬೈರೇಗೌಡ : ಈರುಳ್ಳಿಯನ್ನು ಗೋಡೌನ್‌ನಲ್ಲಿ ಇಡಬೇಕೇ ವಿನಹ ಅವನ್ನು ಕೋಲ್ಡ್ ಸ್ಟೋರೇಜನಲ್ಲಿ ಇಟ್ಟರೆ ಕೊಳೆತು ಹೋಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇನ್ನೊಂದು ರಾಗಿ ಬಗ್ಗೆ ಹೇಳಿದರು. ಒಂದು ಎಕರೆ ರಾಗಿ ಮಾರಿದರೆ ಒಂದು ಜೊತೆ ಬೂಟ್ ಬರುತ್ತದೆ. ಸರಿಯಾದ ಅಳೀಮಯ್ಯ ಸಿಕ್ಕರೆ, ಒಬ್ಬ ರೈತ ಮಗಳಿಗೆ ಮದುವೆ ಮಾಡಬೇಕು ಎಂದರೆ ಅಳೀಮಯ್ಯನಿಗೆ ಒಂದು ಜೊತೆ ಬೂಟ್ ಬೇಕು ಎಂದರೆ ರಾಗಿ ಮಾರಬೇಕು. ಈ ರಾಗಿ ಬೆಳೆಯುವಂತಹ ಕಷ್ಟ ಯಾವುದೂ ಇಲ್ಲ.

ಅಧ್ಯಕ್ಷರು : ಬೂಟ್ಸ್‌ನ ಬೆಲೆ ಜಾಸ್ತಿಯಾಗಿದೆ. ಆದರೆ ಚಮ್ಮಾರ ಮಾತ್ರ ಹಾಗೆಯೇ ಜೀವನ ಮಾಡುತ್ತಿದ್ದಾನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಆದರೆ ಬೂಟ್ಸ್‌ಗೆ ಚರ್ಮ ಕೊಡುವವನು ಅವನೇ. ಮಹಾನವಮಿ ಹಬ್ಬದಲ್ಲಿ ಹಾಗೂ ಪಿತೃಪಕ್ಷದಲ್ಲಿ ಕುರಿ ತಿನ್ನುತ್ತೇವೆ. ಆ ಕುರಿಯ ಚಕ್ಕಳ ನಮ್ಮದೇ ಆ ಕುರಿಯ ಚಕ್ಕಳದವನಿಗೆ ದುಡ್ಡು ಇಲ್ಲ, ಚರ್ಮ ಹದ ಮಾಡುವವನಿಗೆ ದುಡ್ಡು ಇಲ್ಲ, ಆದರೆ ಬೂಟ್ಸ್ ಕಂಪನಿಗೆ ದುಡ್ಡು. ಒಂದು 5-6 ಚೀಲ ರಾಗಿ ಮಾರಿ ಒಂದು ಜೊತೆ ಬೂಟ್ ತೆಗೆದುಕೊಳ್ಳುವುದಾದರೆ ರೈತರಿಗೆ ಎಷ್ಟು ಹೊಟ್ಟೆ ಉರಿಯಬಹುದು. ಸಕ್ಕರೆ ಖಾಯಿಲೆ ಬಂದರೆ ಜೀವಂತವಾಗಿ ಇರಬೇಕಾದರೆ ನಾವು ರಾಗಿ ತಿನ್ನಬೇಕೇ ಹೊರತು ಆ ಬೂಟ್ಸ್‌ನಿಂದ ಏನೂ ಪ್ರಯೋಜನ ಇಲ್ಲ. ಅಂದರೆ ಬೆಲೆ ನೀತಿ ನೋಡಿದಾಗ ನಮಗೆ ಅದನ್ನು ಟ್ಯಾಲಿ ಮಾಡಿದಾಗ ನನ್ನ ಮನಸ್ಸಿಗೆ ಆಗತಕ್ಕಂಥ ನೋವನ್ನು ನಾನು ಹೇಳುತ್ತಿದ್ದೇನೆ. ನಾನು ಇನ್ನೊಂದು ಮಾತು ಹೇಳಿದೆ, ಸ್ಪ್ರಿಂಕ್ಲರ್, ಡ್ರಿಫ್ ಇರಿಗೇಷನ್‌ಗೆ ನೂರು ಪರ್ಸೆಂಟ್ ಸಬ್ಸಿಡಿ ಕೊಡಬೇಕು ಎಂದು ಮಾನ್ಯ ಪಟೇಲರು ಹೇಳುತ್ತಿದ್ದರು, 40 ಸಾವಿರ ಯೂನಿಟ್ಸ್ ಕರೆಂಟ್ 9 ಲಕ್ಷ ಪಂಪ್‌ಸೆಟ್‌ಗೆ ಹೊರಟು ಹೋಗುತ್ತದೆ ಎಂದು. ಪಂಪ್‌ಸೆಟ್‌ಗೆ ಕರೆಂಟ್ ಏಕೆ ಕೊಡುತ್ತೀರಿ? ಹೇಗೆ ಕೊಡುತ್ತಿದ್ದೀರಿ? ಬಾರದೇ ಇರುವ ಕರೆಂಟ್ ಫ್ರೀ. ಎಷ್ಟೊತ್ತಿಗೆ ಬರುತ್ತದೆ, ಎಷ್ಟೊತ್ತಿಗೆ ಹೋಗುತ್ತದೆ ನನ್ನ ಬೆಳೆ ಏನಾಗಿದೆ ನಿಮಗೆ ಬೆಳೆ ಮಾಡಿದರೂ ಕೂಡ ಪೂರ್ಣ ನಾಶವಾಗಿಹೋಯಿತು. ಬಾರದೇ ಇರುವ ಕರೆಂಟಿಗೆ ನಾವು ಬೆಲೆ ನಿಗದಿ ಮಾಡುತ್ತೇವೆ. ಅದರ ಬೆಲೆ ನಿಗದಿ ಮಾಡಿ ಪೂರ್ಣ ಕರೆಂಟ್ ಕೊಡಬೇಕು. ಕರೆಂಟ್ ಚಾರ್ಜ ನೀವು ಏನು ಹೇಳುತ್ತೀರಿ ಅದನ್ನು ಉತ್ಪಾದನಾ ವೆಚ್ಚಕ್ಕೆ ಸೇರಿಸಿ ವೈಜ್ಞಾನಿಕ ಬೆಲೆ ನಿಗದಿ ಮಾಡಿ. ಯಾರು ಬೇಡ ಎಂದು ಹೇಳುತ್ತಾರೆ?

ಸುಮ್ಮನೆ ಪಂಪಸೆಟ್‌ಗೆ ನಿಗದಿ ಮಾಡುತ್ತೀರಿ. ಬಾರದೇ ಇರುವ ಕರೆಂಟಿಗೆ ದುಡ್ಡು ಕೊಡಬೇಕು ಎಂದರೆ ಎಲ್ಲಿ ತರುವುದು? ಮೈಸೂರಿನಲ್ಲಿ ಒಬ್ಬೊಬ್ಬರು ಮೂರು ಪಂಪಸೆಟ್ ಇಟ್ಟುಕೊಂಡಿದ್ದಾರೆ. ಏಕೆ ಎಂದರೆ ಹೆಣ್ಣು ಕೊಡಲಿ ಎಂದು ಅಷ್ಟೇ. ಅವು ಸುಮ್ಮನೆ ಸೌಂಡ್ ಮಾಡುತ್ತವೆ.

ಅಧ್ಯಕ್ಷರು : ಮೈಸೂರಿನ ಕಡೆ ಹಾಗೆ ಮಾಡುತ್ತಾರೆ. ನಮ್ಮ ಕೋಲಾರದ ಕಡೆ ಮೀಸೆ ಬಿಟ್ಟುಬಿಡುತ್ತಾರೆ. ಜಾಸ್ತಿ ಬಿಟ್ಟರೆ ಬಹಳ ಅನುಕೂಲಸ್ಥ ಇರಬಹುದು ಎಂದು ಹೆಣ್ಣು ಕೊಡುತ್ತಾನೆ ಎಂದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಪಶುಸಂಗೋಪನೆ ಬಗ್ಗೆ ನಾನು ಮಾತನಾಡಿದೆ. ನಿನ್ನೆ ಕೆ.ಎಂ. ಎಫ್ ಬಗ್ಗೆ ಮಾತನಾಡುತ್ತಿದ್ದು 14 ಲಕ್ಷ ಲೀಟರ್ ಹಾಲು ಬರುತ್ತದೆ ಎಂದು ಹೇಳುತ್ತಿದ್ದರು. ಅದರ ಬಗ್ಗೆ ಐ.ಆರ್.ಡಿ.ಪಿ. ಯಲ್ಲೂ ಮಾತನಾಡಿದ್ದೇನೆ. ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ ಸಾಲ ಪಂಚವಾರ್ಷಿಕ ಯೋಜನೆ ಮೂಲಕ ಬಡತನದ ರೇಖೆಯಲ್ಲಿ ಇರತಕ್ಕಂಥ ಎಲ್ಲಾ ವರ್ಗದ ಜನರನ್ನು, ಕೃಷಿ ಕಾರ್ಮಿಕರನ್ನು ಎಲ್ಲರನ್ನೂ ಮೇಲಕ್ಕೆ ಎತ್ತಿ ಅವರ ಬದುಕು ಬಂಗಾರವಾಗಬೇಕು, ಅವರ ಬಾಳು ಬಹಳ ಚೆನ್ನಾಗಿ ಇರಬೇಕು ಎಂದು ಹೇಳುತ್ತೀರಿ. ಅವರು ಎಮ್ಮೆ ಹಾಲು ಕರೆಯುವುದರ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜರವರು ಮಾನ್ಯ ಬೈರೇಗೌಡರಿಗೆ ನಿಮಗೆ ಎಲ್ಲಿ ಮೀಸೆ ಎಂದು ಕೇಳುತ್ತಿದ್ದಾರೆ. ವಾಟಾಳ್ ತಾವು ಎದ್ದು ನಿಂತು ಮೀಸೆ ಎಲ್ಲಿ ಎಂದು ಕೇಳಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಬಹಳ ಜನರಲ್ಲಿ ಹುಡುಕುತ್ತಿದ್ದೇನೆ. ತಾವು ಕೋಲಾರದವರಿಗೆ ಮೀಸೆ ಇವೆ ಎಂದು ಹೇಳಿದಿರಿ. ಆದರೆ ಕೋಲಾರ ಜನರ ಮುಖದ ಮೇಲೆ ಮೀಸೆ ಕಾಣುತ್ತಾ ಇಲ್ಲ.

ಅಧ್ಯಕ್ಷರು : ಈ ಮಾನ್ಯ ಬೈರೇಗೌಡರಿಗೆ ಏನು ಮೀಸೆ? ಮಕ್ಕಳೆಲ್ಲಾ ಆದರು, ಮಕ್ಕಳಿಗೆ ಮದುವೆ ಆಗಬೇಕು. ಇವರಿಗೆ ಏಕೆ ಮೀಸೆ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ತಾವು ಹೇಳಿದ್ದನ್ನು ಯಾರೂ ಸರಿಯಾಗಿ ಗಮನಿಸಲಿಲ್ಲ. ಮದುವೆ ಆಗತಕ್ಕಂಥವರು ಮಾತ್ರ ಮೀಸೆ ಬಿಡುವುದು. ಅವರು ಮದುವೆ ವಿಚಾರ ಮಾತನಾಡುತ್ತಿದ್ದರು. ಏಕೆಂದರೆ ಮೂರು ಪಂಪಸೆಟ್ ಇಟ್ಟುಕೊಂಡಿದ್ದರೆ, ಅದನ್ನು ನೋಡಿ ಹೆಣ್ಣನ್ನು ಕೊಡುತ್ತಾರೆ ಆ ಕಡೆ, ಆದರೆ ನಮ್ಮ ಕಡೆ ಮದುವೆ ಆಗುವವರು ಮೀಸೆ ಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ತಾವು ಮದುವೆ ಆದಮೇಲೆ ಮೀಸೆ ತೆಗೆದುಬಿಟ್ಟಿದ್ದೀರಿ.

ಶ್ರೀ ಸಿ. ಬೈರೇಗೌಡ : ನನಗೆ ಮದುವೆಯಾದಾಗ ಒಳ್ಳೆಯ ಭರ್ಜರಿ ಮೀಸೆಯೇ ಇತ್ತು.

ಶ್ರೀ ವಾಟಾಳ್ ನಾಗರಾಜ್ : ಈಗ ಹೋಯಿತು.

ಅಧ್ಯಕ್ಷರು : ಇವರು ಮದುವೆ ಮಾಡಿಕೊಂಡಿದ್ದು ಮೀಸೆಯನ್ನು ತೋರಿಸಿಯೇ.

ಶ್ರೀ ಕಾಗೋಡು ತಿಮ್ಮಪ್ಪ : ಹಾಗಾದರೆ ಗಂಡಿನ ಅಪ್ಪನ ಮೀಸೆಯನ್ನು ನೋಡಿ ಗಂಡಿಗೆ ಹೆಣ್ಣನ್ನು ಕೊಡುವುದು ನಿಮ್ಮ ಕಡೆ.

ಅಧ್ಯಕ್ಷರು : ನಮ್ಮ ಕಡೆ ಆ ಪದ್ಧತಿ ಇಲ್ಲ. ಗಂಡಿನ ಮೀಸೆಯನ್ನು ನೋಡಿಯೇ ಕೊಡುವುದು ನಿಮ್ಮ ಕಡೆ ಆ ರೀತಿಯೇ? ಮಲೆನಾಡು ಕಡೆ ಈ ಪದ್ಧತಿ ಇರತಕ್ಕಂಥದ್ದರ ಬಗ್ಗೆ ತಿಮ್ಮಪ್ಪನವರು ಯಾವಾಗಲೂ ಹೇಳಲೇ ಇಲ್ಲ....

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಈ ಸಾರಿ ಪಶುಸಂಗೋಪನಾ ಇಲಾಖೆಗೆ ಆಯವ್ಯಯದಲ್ಲಿ ಬಹಳ ಕಡಿಮೆ ದುಡ್ಡನ್ನು ಕೊಟ್ಟಿದ್ದಾರೆ. ಹೋದವರ್ಷಕ್ಕಿಂತ ಎರಡು ಕೋಟಿ ಕಡಿಮೆಯಾಗಿದೆ. ಸನ್ಮಾನ್ಯ ಬಚ್ಚೇಗೌಡರು ನಮ್ಮ ದೇಶದಲ್ಲೇ ಹೈಕ್ಲಾಸ್ ಅಂದರೆ ಬಹಳ ಸುಂದರವಾದಂಥ ತಳಿಯ ಹೋರಿಗಳಿವೆ ಎಂದು ಹೇಳಿದರು. ಅದರ ಮುಖವೂ ಇಲ್ಲ ಬಾಲವೂ ಇಲ್ಲ. ಏಕೆ ವಿದೇಶದಿಂದ ತರಿಸಿದರೋ ಏನೋ ನನಗಂತೂ ಗೊತ್ತಿಲ್ಲ. ನನಗಂತೂ ಆಶ್ಚರ್ಯ ಆ ಹೋರಿಗಳನ್ನು ಏಕೆ ತರಿಸಿದ್ದಾರೆ, ನಿಜವಾಗಿಯೂ ಎಂತಹ ಕುದುರೆ ಇದ್ದಹಾಗೆ ಇವೆ. ಹಳ್ಳಿಕಾರತಳಿ ಅಮೃತ್ ಮಹಲ್ ತಳಿ ಹೇಗಿವೆ ಅವು; ಕುದುರೆ ಇದ್ದಹಾಗೆ ಇವೆ. ಅಂತಹ ಹೋರಿ ಬಿಟ್ಟು ಅದು ಯಾವ ಉದ್ದೇಶಕ್ಕೆ ತರಿಸಿದ್ದೀರಿ? ಎಲ್ಲಾ ಬರೀ ಹೈನುಗಾರಿಕೆ ಬಗ್ಗೆ ಮಾತನಾಡುತ್ತೇವೆ, ಕೃಷಿ ಕ್ಷೇತ್ರದಲ್ಲಿ ನಮ್ಮ ರೈತರು ಯಾರೂ ನೂರಕ್ಕೆ ಎಪ್ಪತ್ತೈದು ಭಾಗ ಟ್ರಾಕ್ಟರ್ ಟಿಲ್ಲರ್ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ಹೆಕ್ಟೇರ್ 1½ ಹೆಕ್ಟೇರ್ ನಮಗೆ ಇರುವುದು ಜಮೀನು. ಅಂತಹದ್ದರಲ್ಲಿ ನಾವು ಕೃಷಿಗೆ ಬೇಕಾದಂಥ ಪಶುಸಂಗೋಪನೆ ನಾವು ಮಾಡಿಕೊಳ್ಳಬೇಕು. ಅದು ಏಕೆ ಅಂತಹದ್ದನ್ನು ತಂದಿದ್ದಾರೋ ಏನು ಕಥೆಯೋ ನನಗೆ ಗೊತ್ತಿಲ್ಲ. ಬರೀ ಹಾಲು ಕುಡಿಯುವುದಲ್ಲ ಕೊನೆಗೆ ಏನಾಗುತ್ತದೆ ಎಲ್ಲಾ ಇಂಜೆಕ್ಷನ್ ಕೊಡಿಸುವುದಕ್ಕೆ ಶುರು ಮಾಡಿಬಿಡುತ್ತೇವೆ. ನಮ್ಮಲ್ಲಿ ಹಳ್ಳಿಕಾರ್ ತಳಿ ಇಲ್ಲ. ಈಗ ನೀವೇ, 2-3 ಫಾರಂ ಮಾಡಿದ್ದೀರಿ. ಅಮೃತ್ ಮಹಲ್ ತಳಿ ನಾಶವಾಗುತ್ತಿದೆ, ಆ ತಳಿಗಳನ್ನು ಉಳಿಸುವುದಕ್ಕೋಸ್ಕರ ಫಾರಂ ಏಕೆ ಮಾಡಬೇಕು? ಇಡೀ ನಮ್ಮ ಸಂಸ್ಕೃತಿಗೆ ಸಂಬಂಧಪಟ್ಟಂಥ, ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟ ತಳಿಗಳು ನಾಶವಾಗುವುದಕ್ಕೆ ಕಾರಣ ಏನು? ವಿದೇಶದಿಂದ ಹೈನುಗಾರಿಕೆಗೋಸ್ಕರ ನೀವು ಪರಿಚಯ ಮಾಡುವುದರ ಮೂಲಕ ಆ ತಳಿಗಳು ನಾಶವಾಗುತ್ತಿವೆ. ಆದರ ಆ ತಳಿಗಳನ್ನು ಜೊತೆಯಲ್ಲೇ ಅಭಿವೃದ್ಧಿ ಮಾಡಬೇಕು. ನಾನು ನಿಮಗೆ ಒಂದು ಪ್ರಶ್ನೆ ಮಾಡುತ್ತೇನೆ, ಇಲಾಖೆಯ ಹಸುವಿಗೆ ಒಂದು ಬಕೀಟು ಹಿಂಡಿ ಇಡುತ್ತೇವೆ, ನಮ್ಮ ನಾಡತಳಿಗೆ ಯಾವತ್ತು ನಾವು ಒಂದು ಬಕೀಟು ತಿಂಡಿ ಇಟ್ಟು ಹಾಲು ಕರೆದಿದ್ದೇವೆ? ನೀವು ರೂ ಮಾಡಿಲ್ಲ, ಅದನ್ನು ಯಾರೂ ಯೋಚನೆಯೇ ಮಾಡಿಲ್ಲ. ಅದಕ್ಕೆ ಒಂದು ಹಿಡಿ ಹುಲ್ಲು ಹಾಕುವುದು, ಹಾಲು ಕರೆಯುವುದು. ಅದು ಹೇಗೆ ಸಾಧ್ಯ. ಅದು 1½ ಲೀಡರ್, 2 ಲೀಟರ್, 2½ ಲೀಟರ್ ಹಾಲು ಕೊಡುತ್ತದೆ, ಇದಕ್ಕೆ ಎರಡು ಬಕೀಟು ಹಿಂಡಿ ಇಡುತ್ತೀರಿ ಅದು ಮೇವು ತಿನ್ನುತ್ತಾ ಇರುತ್ತದೆ. ಅದು 7 ಲೀಟರ್, 8 ಲೀಟರ್, 10 ಲೀಟರ್ 12 ಲೀಟರ್ ಹಾಲು ಕೊಡುತ್ತದೆ. ನಮ್ಮ ನಾಡಹಸುವಿಗೆ ಯಾವೊತ್ತು ನಾವು ಹಿಂಡಿ ಇಟ್ಟಿದ್ದೇವೆ. ಅಧ್ಯಕ್ಷರೆ, ಯಾವೊತ್ತು ಹಿಂಡಿ ಇಟ್ಟಿಲ್ಲ. ಯಾವ ಮಟ್ಟಕ್ಕೆ ಕರಪ್ಷನ್ ಈ ದೇಶದಲ್ಲಿ ಇದೆಯೆಂದರೆ, ಓಡುಹೋಗುತ್ತಿರುವ ಹಸುವನ್ನು ಹೊಡೆದುಕೊಂಡು ಹೋಗಿ ಆ ರೂಮಿನಲ್ಲಿ ಒಂದು

ಒಳ್ಳೆಯ ಹೋರಿ ಇದೆ ಕೊಡಿಸಿಕೊಂಡು ಬಾ ಎಂದು ಕಳುಹಿಸಿದರು. ಅವನೇನು ಮಾಡಿದ್ದಾರೆ, 20 ರೂಪಾಯಿ ದುಡ್ಡಿಗೆ ಮಸಾಲೆ ದೋಸೆ ತಿಂದುಬಿಟ್ಟು ಇಂಜೆಕ್ಷನ್ ಕೊಡಿಸಿಕೊಂಡು ಬಂದ. ಸರಿ ಅದು ಕರುಹಾಕಿತು, ಬಣ್ಣ ಕಪ್ಪು ಇತ್ತು, ಇದೇನಿದು ಇಲಾಖೆಯ ಕರು ಹಾಕಿದಂತಿದೆಲ್ಲಾ ಎಂದೆ. ಇನ್ನೆರಡು ದಿವಸದಲ್ಲಿ ಬೆಳ್ಳಗೆ ಆಗುತ್ತದೆ ತಡಿಯಣ್ಣ ಎಂದು ನನಗೆ ಹೇಳಿದ. ಯಾವ ಮಟ್ಟಕ್ಕೆ ಮಸಾಲೆ ದೋಸೆಯನ್ನು ತಿಂದಿದ್ದಾನೆ, 20 ರೂಪಾಯಿ ಮಸಾಲೆದೋಸೆ ಅವೊತ್ತು ತಿಂದಿದ್ದಾನೆ. ಆದ್ದರಿಂದ ತಾವು ದಯವಿಟ್ಟು ಪಶುಸಂಗೋಪನೆಯಲ್ಲಿ ನಮ್ಮ ನಾಡತಳಿಗೆ ಹೆಚ್ಚು ಒತ್ತಡ ಕೊಡತಕ್ಕಂಥ ಕೆಲಸ ಮಾಡದೇ ಇದ್ದರೆ ಏನು ಉಪಯೋಗವಾಗುವುದಿಲ್ಲ. ಇವೊತ್ತು 50 ಸಾವಿರ, 35 ಸಾವಿರ, 40 ಸಾವಿರ, 25 ಸಾವಿರ ರೂಪಾಯಿ ಎತ್ತುಗಳಾಗಿದೆ. ಇಲ್ಲದಿದ್ದರೆ ಕೃಷಿ ಕ್ಷೇತ್ರ ನಾಶವಾಗುತ್ತದೆ. ಏಕೆಂದರೆ ಇವು ಯಾವ ಇಲಾಖೆಯ ಹೋರಿಗಳೆಂದು ನೀವು ಹೇಳುತ್ತೀರಿ ಅವುಗಳಿಗೆ ಒಂದಕ್ಕೂ ಹೆಗಲೂ ಇಲ್ಲ, ನೊಗಾನೂ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಏನಾದರೂ ಒಂದು ಸಾರಿ ನೀರಿನ ಗದ್ದೆಗೆ ಬಿದ್ದರೆ ಆ ಬಿದ್ದ ಜಾಗಕ್ಕೆ ಮತ್ತೆ 15 ಮಣೆ ಮಣ್ಣು ಹೊಡೆಯಬೇಕು. ಆದ್ದರಿಂದ ದಯವಿಟ್ಟು ನಮ್ಮ ಏನು ತಳಿಗಳ ಬಗ್ಗೆ ಒಂದು ಸಾವಿರ ರೂಪಾಯಿ ಬೋನಸ್ ಕೊಡಿ. ನಾನು ಕೃಷಿ ಸಮಿತಿಯಲ್ಲಿದ್ದಾಗ ಹೇಳಿದ್ದೆ. ಹಳ್ಳಿಕಾರ್ ತಳಿ ಇಂಜೆಕ್ಷನ್ ತೆಗೆದುಕೊಂಡು ಒಂದು ಕರುವನ್ನು ಹಾಕಿದರೆ ನಮ್ಮ ತಳಿ ಬೆಳೆಸುವುದಕ್ಕೆ ಒಂದು ಸಾವಿರ ರೂಪಾಯಿಯ ಬೋನಸ್ ಕೊಡಿ ಎಂದು ಹೇಳಿದ್ದೆ. ಅದಕ್ಕಾಗಿ ಸರ್ಕಾರ ಪಶುಸಂಗೋಪನೆಗೆ ಹೆಚ್ಚು ಹಣವನ್ನು ಕೊಡಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ನೀರಾವರಿ ವಿಷಯದಲ್ಲಿ ಬಹಳ ಜವಾಬ್ದಾರಿಯುತವಾಗಿ ಮಾತನಾಡಿದ್ದಾರೆ. ಏನಿದ್ದರೂ ನಾವು ಈ ವರ್ಷ ತಮ್ಮ ಸರ್ಕಾರ ಇರಬಹುದು, ಇನ್ನೊಂದು ಸರ್ಕಾರ ಬಂದಿರಬಹುದು. ನಾವು ಈ ವರ್ಷ ಬಹಳ ಬರಗಾಲವನ್ನು ಅನುಭವಿಸಿದ್ದೇವೆ. ಆರ್ಥಿಕವಾಗಿ ರಾಜ್ಯ ಹಿಂದುಳಿದೆ. ಬಚಾವತ್ ಆಯೋಗದಲ್ಲಿ ಎರಡು ಸಾವಿರದ ಇಸವಿಗೆ ಕೃಷ್ಣಾ ಯೋಜನೆಯನ್ನು ಪೂರ್ಣ ಮಾಡಬೇಕು. ಏನಾದರೂ ಸರ್ಕಾರ, ನಾವು ನೋಡೋಣ ಇನ್ನು 3-4 ವರ್ಷಕ್ಕೆ ಏನಾಗಬಹುದು ಎಂದು ಹೇಳಿ. ನಾವು 10 ಸಾವಿರ ಕೋಟಿ ಹಣವನ್ನು ಕ್ರೋಢಿಕರಿಸುತ್ತೇವೆ ಎಂದು ಹೇಳಿದರೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಬಚಾವತ್ ಆಯೋಗದ ವಿರುದ್ಧ ನಾವು ಹೋರಾಟಕ್ಕೆ ಸಿದ್ಧರಾಗಬೇಕು. ಬಚಾವತ್ ಆಯೋಗವನ್ನು ಸಾರಾಸಗಟಾಗಿ ತಿರಸ್ಕರಿಸಬೇಕು. ಏಕೆಂದರೆ, ಆ ಹತ್ತು ಸಾವಿರ ಕೋಟಿಯಲ್ಲಿ ಎಷ್ಟೆಷ್ಟು ದೊರಕುತ್ತದೆ ಅದರ ಪ್ರಕಾರ ಆಯಾಯ ವರ್ಷದಲ್ಲಿ ನಾವು ಕೆಲಸ ಮಾಡಿಕೊಂಡು ಹೋಗಬೇಕು. 2000 ಇಸವಿಯ ಹೊತ್ತಿಗೆ ಮಾಡುತ್ತೇವೆ ಎನ್ನುವುದು ಬಹಳ ದೊಡ್ಡ ಸುಳ್ಳು ಮಾತು. ಆಮೇಲೆ ಇರುವವರು ಬಹಳ ಮಾತನಾಡಿದರು. ಆದರೆ ನಾವು ಕೋ-ಜನರೇಷನ್ ಬಗ್ಗೆ ಮಾತನಾಡುತ್ತೇವೆ. ಇವೊತ್ತು ಈ ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳು ಇವೆ 30 ಕಾರ್ಖಾನೆಗಳಿಂದ ಸುಮಾರು 800-850 ಮೆ.ವಾ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬಹುದು. ಸುಮಾರು 1200 ಕೋಟಿ ರೂಪಾಯಿ ಹಣ ಆಗುತ್ತದೆ. ಕೇಂದ್ರ ಸರ್ಕಾರ ಸುಮಾರು 30-35 ಪರ್ಸೆಂಟ್ ಸಬ್ಸಿಡಿ ರೂಪದಲ್ಲಿ ಕೊಡುತ್ತದೆ. ಆದರೆ ಕೋ-ಜನರೇಷನ್ ಬಗ್ಗೆ ನಾವು ಯಾರೂ ಮಾತನಾಡುವುದಿಲ್ಲ. ಅದು ಏಕೆ ಎನ್ನುವುದೇ ಗೊತ್ತಿಲ್ಲ. ಕರ್ನಾಟಕ ಪವರ್ ಕಾರ್ಪೊರೇಷನನವರು

ಮುನ್ನೂರು ಪ್ರಾಜೆಕ್ಟ್ ಐಡೆಂಟಿಫೈ ಮಾಡಿದ್ದಾರೆ. ಒಂದು ಮೆ.ವ್ಯಾ. ನಿಂದ ಹಿಡಿದು ಇನ್ನೂರು ಮೆ.ವ್ಯಾ.ವರೆಗೆ ಈಗ ನಾವು ಕಾವೇರಿ ಡಿಸ್ಪ್ಯೂಟ್ ಬಗ್ಗೆ ಮಾತನಾಡುತ್ತಿದ್ದೆವು. ಕಾವೇರಿ ಡಿಸ್ಪ್ಯೂಟ್ ಇರತಕ್ಕಂಥ ಜಾಗಕ್ಕೆ ನಾನೊಬ್ಬನೇ ಹೋಗಿ ನೋಡಿಕೊಂಡು ಬಂದೆ. ಅಲ್ಲಿ ಸುಮಾರು 700-750 ಮೆ.ವ್ಯಾ. ವಿದ್ಯುತ್ ಉತ್ಪಾದನ ಮಾಡಬಹುದು. ಇವೊತ್ತು ತಮಿಳುನಾಡು ಕರ್ನಾಟಕ್ಕೂ ಡಿಸ್ಪ್ಯೂಟ್ ಇರಬಹುದು. ಆದರೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿದರ ನೀರೇನೂ ನಷ್ಟ ಆಗುವುದಿಲ್ಲ. ಆದರೆ ಆ ಒಂದೇ ಕಾರಣಕೋಸ್ಕರ ಸುಮಾರು 750 ಶಿವನಸಮುದ್ರ 2ನೇ ಹಂತ, 3ನೇಹಂತ, 4ನೇ ಹಂತ, ಹೊಗೆನಿಕಲ್ ಹಾಗೂ ಮೇಕೆದಾಟು ಎರಡೂ ಸೇರಿಸಿ ಸುಮಾರು 700-750 ಮೆ.ವ್ಯಾ.ವಿದ್ಯುತ್ ಉತ್ಪಾದನೆ ಮಾಡಬಹುದು. ಅಲ್ಲಿ ಒಂದು ಯೂನಿಟ್ ಉತ್ಪಾದನೆ ಮಾಡುವುದಕ್ಕೆ 60 ಪೈಸೆಯಾಗುತ್ತದೆ. ಏಕೆ ಸರ್ಕಾರ ಅದರ ಬಗ್ಗೆ ಯೋಚನೆ ಮಾಡದೆಯೇ ಬಹಳ ದೊಡ್ಡ ದೊಡ್ಡ ಕೊಜೆಂಟ್ರಿಕ್ಸ್, ಇತ್ಯಾದಿಗಳ ಬಗ್ಗೆ ಆಲೋಚಿಸುತ್ತಿದೆ? ಇವಲ್ಲ ಪ್ರಯತ್ನಗಳನ್ನು ಏಕೆ ಮಾಡುತ್ತಿಲ್ಲ ಎಂಬುದು ಗೊತ್ತಾಗುತ್ತಿಲ್ಲ. ಆಮೇಲೆ ಖಾಸಗೀಕರಣದ ಬಗ್ಗೆ ಮಾತನಾಡುತ್ತಿದ್ದೀರಿ. ಖಾಸಗೀಕರಣವನ್ನು ನಾವು ಮಾಡಿದರೆ ಎಲ್ಲರಿಗೂ ಉದ್ಯೋಗ ಸಿಗುತ್ತದೆ, ಆರ್ಥಿಕವಾಗಿ ಬಹಳ ಮೇಲೆ ಬರುತ್ತೇವೆ, ಖಾಸಗೀಕರಣದ ಮೂಲಕ ಬಹಳ ದೊಡ್ಡ ಬದಲಾವಣೆ ಆಗುತ್ತದೆ ಎಂದು ಹೇಳುತ್ತೀರಿ. ಕೋ-ಜನರೇಷನ್ ಬಗ್ಗೆ ತಾವು ಖಂಡಿತ ಯೋಚನೆ ಮಾಡಬೇಕು. ಅದರ ಬಗ್ಗೆ ಪೂರ್ತಿ ಮಾಹಿತಿಯನ್ನು ಕೊಡಬೇಕು. ಜೊತೆಗೆ ಸದನದಲ್ಲಿ ಒಂದು ದಿವಸ ಚರ್ಚೆಯಾಗಬೇಕು. ತಮಗೆ ಇನ್ನೊಂದು ಹೇಳುತ್ತೇನೆ. ಏನಾದರೂ ಜಾಗರಿಗೆ ಮಾತ್ರನ ಟೆಕ್ನಾಲಜಿ ಕಂಡುಹಿಡಿದರೆ, ಏನಾದರೂ ಆ ರಾ ಮೆಟೀರಿಯಲ್ನ ಉಳಿಸತಕ್ಕಂಥ ವ್ಯವಸ್ಥೆ ಮಾಡಿದರೆ ಸಿ.ಎಫ್.ಟಿ.ಆರ್. ಜೊತೆಯಲ್ಲಿ ನೀವು ಮಾತನಾಡಿ.

ಶ್ರೀ ಹೆಚ್. ಶಿವಪ್ಪ : ಕೋ-ಜನರೇಷನ್ ಅಷ್ಟು ಸುಲಭವಲ್ಲ. ಏಕೆಂದರೆ, ಸಕ್ಕರೆ ಕಾರ್ಖಾನೆಗಳು ಸೀಸನಲ್ ಇಂಡಸ್ಟ್ರೀಸ್, ಅವಕ್ಕೆ ಬಗಾಸ್ ಬೇಕಾಗುತ್ತದೆ, ಅದು 12 ತಿಂಗಳು ಸಿಗುವುದಿಲ್ಲ. ಆಮೇಲೆ ಡ್ರೌಟ್ ಬಂದಾಗ ಬಗಾಸ್ ಸಿಕ್ಕುವುದಿಲ್ಲ. ಈ ವರ್ಷ ಎಕ್ಸೆಸ ಆಗಿದೆ ಸರಿ. ಆದ್ದರಿಂದ it is not going to be a successful One.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಈಗ ಕಬ್ಬನ್ನು ಬೆಳೆಯುತ್ತಿರುವಂಥ ಜಾಗವೆಲ್ಲಾ ಡ್ರೌಟ್ ಜಾಗವಲ್ಲ, ನೀರಾವರಿ ಜಾಗದಲ್ಲಿ ನಾವು ಕಬ್ಬನ್ನು 90 ಭಾಗ ಬೆಳೆಯುತ್ತಿದ್ದೇವೆ. ಜೂನ್‌ನಿಂದ ಪ್ಲಾಂಟೇಷನ್ ಮಾಡಿ ಮೂರು ತಿಂಗಳಿಗೆ ಒಂದು ಬೆಲೆ ಆಮೇಲೆ ಒಂದು ಬೆಲೆ ಕೊಟ್ಟರೆ ರೈತರು ಸಂಪೂರ್ಣವಾಗಿ ಕಬ್ಬನ್ನು ಬೆಳೆಯುತ್ತಾರೆ. ನಮಗೆ ಕಬ್ಬನ್ನು ಬೆಳೆಯುವ ವಿಷಯದಲ್ಲಿ ಪ್ಲಾನ್ಡ್ ಪ್ಲಾಂಟೇಷನ್ ಇಲ್ಲ. ಕೋ-ಜನರೇಷನ್ ಬಗ್ಗೆ ನಮಗೆ ಯೋಚನೆ ಇಲ್ಲ. ಮಂಡ್ಯಜಿಲ್ಲೆ, ಮೈಸೂರು ಜಿಲ್ಲೆಯಲ್ಲಿ ಸರ್ವೆಸಾಮಾನ್ಯ ಜೂನ್ ತಿಂಗಳಿನಲ್ಲಿ ಫ್ಯಾಕ್ಟರಿ ಸ್ಟಾರ್ಟ್ ಆಗುತ್ತದೆ. ಬೇರೆ ಎಲ್ಲಾ ಕಡೆ ನವೆಂಬರ್ ಡಿಸೆಂಬರ್‌ನಲ್ಲಿ ಸ್ಟಾರ್ಟ್ ಮಾಡುತ್ತಾರೆ. ರಾಯಚೂರು, ಬೆಳಗಾಂ, ಬೀದರ್ ಕಡೆಗಳಲ್ಲಿ ಯಾವಾಗ ಸ್ಟಾರ್ಟ ಮಾಡುತ್ತಾರೆ?

ಶ್ರೀ ಹೆಚ್. ಶಿವಪ್ಪ : ನಾವು ಆಗಸ್ಟ-ಸೆಪ್ಟೆಂಬರ್‌ನಲ್ಲಿ ಸ್ಟಾರ್ಟ ಮಾಡುತ್ತೇವೆ. ಜುಲೈನಲ್ಲಿ ನಾವು ಮಾಡಿದರೆ ಇಳುವರಿ ಬರುವುದಿಲ್ಲ. ಕೆಲವು ಕಡೆ ನಾರ್ತನ್ ಫ್ಯಾಕ್ಟರೀಸ್ ಬೇರೆ, ಸದರನ್ ಜೋನ್

ಬೇರೆ. ಅಲ್ಲಿ ಮೇನಿಂದ ಶುರು ಮಾಡುತ್ತಾರೆ. ಇಲ್ಲಿ ಪಾಂಡವಪುರದಲ್ಲಿ ಮಾತ್ರ ಜೂನಜುಲೈನಲ್ಲಿ ಸ್ಟಾರ್ಟ್ ಮಾಡುತ್ತಾರೆ. ಆದ್ದರಿಂದ ಬಗಾಸ್ ಏನು ಇದೆ, ರಾ ಮೆಟೀರಿಯಲ್, that is not going to be available.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಮ್ಮ ಕಡೆ ಆ ಇಳುವರಿ -ಬರುವುದಿಲ್ಲ, ತಳಿಯನ್ನು ಇಂಟ್ರೊಡ್ಯೂಸ್ ಮಾಡುವುದರಲ್ಲಿ ನಾವು ಫೈಲ್ಯೂರ್ ಆಗಿದ್ದೇವಲ್ಲಾ.

ಶ್ರೀ ಜೆ.ಪಿ. ಶಿವಕುಮಾರ್ : ಮಾನ್ಯ ಪುಟ್ಟಣ್ಣಯ್ಯನವರು ಹೇಳುವುದ ಬಹಳ ಸರಿಯಾಗಿದೆ. ಕೋ-ಜನರೇಷನ್ ಮಾಡಿದರೆ ಚೀಪಾಗಿ ಕರೆಂಟ್ ವರ್ಕೌಟ್ ಆಗುತ್ತದೆ. ಕಬ್ಬಿನ ಸಿಪ್ಪೆ ಅದು ರಾ ಮೆಟೀರಿಯಲ್ ಇರುವುದರಿಂದ ಈ ಸಕ್ಕರೆ ಫ್ಯಾಕ್ಟರಿ ಅಧ್ಯಕ್ಷರಾದವರಿಗೆ ಗಿಟ್ಟುವುದಿಲ್ಲ ಎಂದು ನೀವು ಹೇಳಿದರೆ ಬಹಳ ಆಶ್ಚರ್ಯವಾಗುತ್ತದೆ. ಏಕೆಂದರೆ 510ಕೆಪ್ಯಾಸಿಟಿಯಿಂದ 5000ಕೆಪಾಸಿಟಿ ಇರುವವರೆಗೂ ನಾವು ಕೋ-ಜನರೇಷನ್ ಹಾಕಿದರೆ 15 ರಿಂದ 20 ಮೆ.ವ್ಯಾ. ಅನ್ನು ಒಂದು ಷುಗರ್ ಫ್ಯಾಕ್ಟರಿಯಲ್ಲಿ ತಯಾರು ಮಾಡಬಹುದು. ಬರೀ ಸಕ್ಕರೆ ಕಂಪನಿಯಲ್ಲಿ ಲಾಭ ಬರುವುದಿಲ್ಲ. ಬರೀ ಬಡ್ಡಿಗಿಡ್ಡಿ ಕೊಡಲಿಕ್ಕೆ ಹೋಗುತ್ತದೆ. ನಾವೇನಾದರೂ ಕೋ-ಜನರೇಷನ್ ಮಾಡಿದರೆ ಮಾತ್ರ ಸಕ್ಕರೆ ಕಂಪನಿಗೆ ಲಾಭ ವಾಗುತ್ತದೆ. ಸುಮಾರು 10-15 ಕೋಟಿ ರೂಪಾಯಿ ಲಾಭ ಬರುತ್ತದೆ. ಅದರಿಂದ ನಾವು ಸಾಲವನ್ನು ತೀರಿಸಿಕೊಳ್ಳಬಹುದು. ಮಾನ್ಯ ಪುಟ್ಟಣ್ಣಯ್ಯನವರು ಹೇಳುವುದು ಬಹಳ ಸರಿಯಾಗಿದೆ. ಸರ್ಕಾರ ಅದಕ್ಕೆ ಗಮನ ಕೊಡಬೇಕು.

6.30 ಪಿ.ಎಂ.

ನಾನು ವಿಷಯ ಸಮಿತಿಯ ಅಧ್ಯಕ್ಷನಾಗಿ ಸ್ಪಷ್ಟೀಕರಣ ಕೊಡಲಿಕ್ಕೆ ಇಷ್ಟಪಡುತ್ತೇನೆ. ಯಾವ ಸಕ್ಕರೆ ಕಾರ್ಖಾನೆ ಪ್ರತಿ ದಿವಸ 2500ಕ್ರಷಿಂಗ್ ಕೆಪ್ಯಾಸಿಟಿ ಇದೆ, ಅದರ ವಿಸ್ತರಣಾ ಕಾರ್ಯವಾಗಬೇಕು. ಅಲ್ಲಿ ಆ ಕಾರ್ಖಾನೆಗಳಿಗೆ ಬಗಾಸ್ ಏನು ಬರತ್ತದೆ, that is used as fuel. ಆ ವಿಸ್ತರಣಾ ಕಾರ್ಯವಾದ ಮೇಲೆ ಅದಕ್ಕೆ ಅನುಮತಿಯನ್ನು ಪಡೆದುಕೊಳ್ಳುವಂಥಾದ್ದು ಒಂದು ವಿಷಯವಾಗಿದೆ, the generation cost is very low and cheap. ಮೊದಲು ಮೈಸೂರು ಸಕ್ಕರೆ ಕಾರ್ಖಾನೆ ನಮ್ಮ ಮಂಡ್ಯಾದ್ದಕ್ಕೆ ಪ್ರಾಯೋಗಿಕವಾಗಿ ಈ ಎಲ್ಲಾ ಪ್ರಾಜೆಕ್ಟ ಮಾಡಿದ್ದಾರೆ. ಅದರ ಬಗ್ಗೆ ಕೆ.ಪಿ. ಸಿ. ಯವರೂ ಸಹ ಸಾಕಷ್ಟು ಮಾಹಿತಿಯನ್ನು ಕೊಟ್ಟಿದ್ದಾರೆ. ಅದು ಅವರ ಒಳ್ಳೆಯದಾಗುತ್ತದೆ. ಅಲ್ಲಿ 25000 ಕೆಪ್ಯಾಸಿಟಿ ಇದ್ದರೆ ಆಗುವುದಿಲ್ಲ. It should be more than 3500 tonnes. ಆ ರೀತಿ ವಿಸ್ತರಣೆ ಮಾಡಿಕೊಂಡು ಮಾಡತಕ್ಕಂಥದ್ದು ಇದು ಬಹಳ ಕಡಿಮೆ ದರದಲ್ಲಿ ಆಗತಕ್ಕಂಥದ್ದು. ಇದರಲ್ಲಿ ಫೆಲ್ಯೂಷನ್ ಕೂಡ ಇರುವುದಿಲ್ಲ. It is a very cheap energy. ಜೊತೆಗೆ ಬಾಯ್ಲರ್ಗಳಲ್ಲಿ ಇಷ್ಟು ಪ್ರೆಷರ್ ಸ್ಟೀಮ್ ಅನ್ನು ಸಸಟೈನ್ ಮಾಡಿಕೊಳ್ಳುವಂಥ ಪ್ರೆಷರ್ ಟ್ಯೂಬ್ ಇರಬೇಕು. The tube should powerful to sustain the pressure ಅದಕ್ಕೆಲ್ಲಾ ಅನುಮತಿಯನ್ನು ಪಡೆದುಕೊಂಡು ಮಾಡಿದರೆ it is a viable ಪ್ರಾಜೆಕ್ಟ್ ಆಗುತ್ತದ. It needs some modification. It is a very viable project.

ಶ್ರೀ ಶ್ಯಾಮನೂರು ಶಿವಶಂಕರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ಸರ್ಕಾರದವರು ಒಂದು ಮಗಾವಾಟಗ 25 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ನಮಗೆ ಒಂದು ಮೆಗಾವ್ಯಾಟ್ ತಯಾರು ಮಾಡಬೇಕಾದರೆ ಎರಡು ಕೋಟಿ ರೂಪಾಯಿಗಳ ಖರ್ಚು ಬರುತ್ತದೆ. ಅದರಲ್ಲಿ 75 ಲಕ್ಷ ರೂಪಾಯಿಗಳು ಹೋಗುತ್ತದೆ. ಆದ್ದರಿಂದ ಅದು ಬಹಳ ವಯಾಬಲ್ ಆಗುತ್ತದೆ. ಇದರ ಬಗ್ಗೆ ತೀವ್ರವಾಗಿ ಆಲೋಚನೆಯನ್ನು ಮಾಡಬೇಕು.

ಶ್ರೀ ಹೆಚ್.ಶಿವಪ್ಪ : ಮಾನ್ಯ ಸದಸ್ಯರು ಹೊಸದಾಗಿ ಇಂಡಸ್ಟ್ರಿ ಮಾಡುವುದಕ್ಕೆ ಹೊರಟ್ಟಿದ್ದಾರೆ. ಇವರು ಇಮಜಿನರಿ ಆಚೀವಮೆಂಟ್ ಹೇಳುತ್ತಾ ಇರುವುದು. He is telling about the imaginary achievement. But, we are already in the industry.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಪಟೇಲ್‌ರವರು ಮಾಡಿ ನೋಡಬೇಕು, ಸುಮ್ಮನೆ ಮಾತನಾಡುವುದು ಏನೂ ಪ್ರಯೋಜನವಿಲ್ಲವೆಂದು ಹೇಳಿದರು. ಮಾನ್ಯ ವೀರಪ್ಪಮೊಯಿಲಿಯವರು ವಿದ್ಯುಚ್ಛಕ್ತಿಯ ಬಗ್ಗೆ ಕೇಳಿದಾಗ ಮಾಡಿನೋಡಬೇಕೆಂದರು, ಆಮೇಲೆ ಮಾತನಾಡಬೇಕಂತೆ, ಅದಕ್ಕೆ ಮಾಡಿ ನೋಡುವುದಕ್ಕೆ ಪ್ರಯತ್ನ ಪಡಿ. ಈಗ ಮಂಡ್ಯಾದಲ್ಲಿ ಹಾಕಬೇಕೆಂದು ಆಗಿದೆ. ನೋಡೋಣ ಮಂಡ್ಯಾದಲ್ಲಿ ಯಶಸ್ವಿಯಾದರೆ ಎಲ್ಲಾ ಕಡೆ ಮಾಡಬಹುದು. ಇನ್ನು ಖಾಸಗಿ ಕಾರ್ಖಾನೆ ಬಗ್ಗೆ, ನಾನು ತಮ್ಮಲ್ಲಿ ಒಂದು ಗಂಭೀರವಾದ ಪ್ರಶ್ನೆಯನ್ನು ಕೇಳುತ್ತೇನೆ. ತಾವು ಏನು ಈ ಬೋರ್ಡೇಸ್ ಕಾರ್ಖಾನೆಗೆ ಕಬ್ಬನ್ನು ಕೊಡತಕ್ಕಂಥ ರೈತರಿಗೆ ಬೆಲೆ ಫಿಕ್ಸ ಮಾಡಿ ಪೇಮೆಂಟ್ ಕೊಡಿ ಎಂದು ಹೇಳಿದ್ದೀರಿ. ಖಾಸಗಿ ಕಾರ್ಖಾನೆಯವರು ಕಟ್ಟಿಂಗ್ ಅಡ್ವಾನ್ಸ ಕೊಡುತ್ತಾರೆ. ಆಮೇಲೆ ಒಪ್ಪಿಗೆ ಕಬ್ಬನ್ನು ತೆಗೆದುಕೊಳ್ಳುತ್ತಾನೆ. ಇಂತಹ ಉದ್ಧಟತನ, ನಮ್ಮ ರಾಜ್ಯದಲ್ಲಿ ಇಂತಹ ಅವಿವೇಕಿತನ ಎಲ್ಲೂ ನೋಡಿಲ್ಲ. ರೈತರಿಗೆ ಅಡ್ವಾನ್ಸ್ ಕೊಡುತ್ತಾ ಇಲ್ಲ. ನೀವು ಮಾತನಾಡುತ್ತೀರಿ. ಮಂಡ್ಯಜಿಲ್ಲೆಯಲ್ಲಿ ನೀವು ಎಲ್ಲವನ್ನೂ ಬಂದ್ ಮಾಡಿಸುತ್ತೇವೆ ಎಂದು ಹೇಳಿದ್ದಕ್ಕೆ ದೇವರು ಇದ್ದಾನೆ ಎಂದು ಹೇಳಿದರು. ದೇವರಿದ್ದಾನೆ ಎಂದರೆ ಅರ್ಥವೇನೆಂದರೆ, ಏನೂ ಮಾಡುವುದಕ್ಕಾಗುವುದಿಲ್ಲ ನೀವು ಎಂದು, ನಾನು ಒಂದು ಮಾತನ್ನು ಹೇಳುತ್ತೇನೆ. ಒಪ್ಪಿಗೆ ಕಬ್ಬಿಗೆ ಅದು ನೂರು ರೂಪಾಯಿಗಳನ್ನು ಕೊಡುತ್ತಿದ್ದರು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಕೊಳ್ಳೆಗಾಲದಲ್ಲಿರತಕ್ಕಂಥ ಮಹದೇಶ್ವರ ಸಕ್ಕರೆ ಕಾರ್ಖಾನೆ ಅವರನ್ನು ನಾನು ಕರೆದು ಮಾತನಾಡಿ ರೈತರಿಗೆ ಒಂದು ಟನ್ ಕಬ್ಬಿಗೆ ಏಳು ನೂರು ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೆವು. ನಾವು ರೈತರಿಗೆ ಕರೆದು ಏಳು ನೂರು ಕಡಿಮೆ ತೆಗೆದುಕೊಳ್ಳಬಾರದೆಂದು ಹೇಳಿದ್ದೆವು. ಈ ರೈತರೇ ಹೋಗಿ ಬರೆದು ಕೊಟ್ಟು ಆರು ನೂರು ರೂಪಾಯಿಗೆ ಕೊಟ್ಟರೆ, ಏನು ಮಾಡುವುದು? ನಾನು ರೈತರದ್ದು ತಪ್ಪು ಎಂದು ಹೇಳುತ್ತಿಲ್ಲ. ಕಬ್ಬು ತೆಗೆದುಕೊಳ್ಳುತ್ತಿಲ್ಲ. ಅವರು ಕಬ್ಬನ್ನು ಬೆಳೆದುಬಿಟ್ಟಿದ್ದಾರೆ. ಅದು ಒಂದೂವರೆ, ಎರಡು ವರ್ಷಗಳಾಗಿ ಹೋಗಿದೆ. ಎಷ್ಟೆಕ್ಕೋ ತೆಗೆದುಕೊಂಡರೆ ಸಾಕು ಎಂದು ಅವರಿಗೆ ಅನ್ನಿಸಿದೆ. ಅಲ್ಲಿ ಅವರು ಇದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಆರು ನೂರು ರೂಪಾಯಿಗಳಿಗೆ ಬರೆಸಿಕೊಂಡು ಇವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈಗ ಅವರ ಸ್ಥಿತಿ ಏನಾಗಿದೆ ಎಂದರೆ ಶಿವಮೊಗ್ಗದಲ್ಲಿರುವ ಸ್ಥಿತಿಯನ್ನು ನೋಡಿದರೆ ಕಣ್ಣೀರು ಬರುವಂತಹ ಸ್ಥಿತಿ ಇದೆ. ಕೆಲವು ರೈತರು ಕಬ್ಬನ್ನು ನೋಡಲಾಗದೆ ಬೆಂಕಿ ಹಾಕಿ ಸುಟ್ಟಿದ್ದಾರೆ. ಈಗ ಇದಕ್ಕೆ ಒಂದು ವಿಶೇಷವಾದ ಶಾಸನವನ್ನು ತಂದು ಕಂಟ್ರೋಲ್ ಸಿಸ್ಟಂ ತರಬೇಕಾದಂತಹ ಅಗತ್ಯವಿದೆ.

ಅಧ್ಯಕ್ಷರು : ಎಲ್ಲಾ ಅಧಿಕಾರಿಗಳು ನಿಮ್ಮ ಕೈಯಲ್ಲಿದ್ದಾಗ ಸುಮ್ಮನೆ ಇದ್ದು ಈಗ ಆದೇಶವನ್ನು ಕೊಡುತ್ತಿರಲ್ಲಾ?

ಶ್ರೀ ಕಾಗೋಡು ತಿಮ್ಮಪ್ಪ : ಆಗ ಇಂತಹ ಪರಿಸ್ಥಿತಿ ಉಂಟಾಗಿರಲಿಲ್ಲ. ಆಗ ಕಬ್ಬು ಸಾಕಾಗುತ್ತಿರಲಿಲ್ಲ. ಕಬ್ಬನ್ನು ಹೊರಗಡೆಯಿಂದ ತರಿಸುವಂತಹ ಪರಿಸ್ಥಿತಿ ಇತ್ತು. ಕೊಳ್ಳೆಗಾಲದ ಷುಗರ್ ಫ್ಯಾಕ್ಟರಿಯಲ್ಲಿ ಕಬ್ಬು ಕಡಿಮೆಯಾಗಿ ಅರೆಯಲು ಆಗಿಲ್ಲ, ಬಹ್ಮಾವರ ಷುಗರ್ ಫ್ಯಾಕ್ಟರಿಯಲ್ಲಿ ಕಬ್ಬು ಕಡಿಮೆಯಾಗಿ ಬೇರೆ ಬೇರೆ ಕಡೆಯಿಂದ ಕಬ್ಬನ್ನು ತರಿಸಿದರು. ವರ್ಷದಲ್ಲಿ ಎರಡು ತಿಂಗಳು ನಡೆಯಲಿಲ್ಲ. ಆದರೆ ಈ ವರ್ಷ ಎಲ್ಲಾ ಕಡೆ ಕಬ್ಬು ಜಾಸ್ತಿಯಾಗಿ ಆ ಕೆಪ್ಯಾಸಿಟಿಗಿಂತ ಜಾಸ್ತಿ ಕಬ್ಬನ್ನು ಅರೆಯುವುದಕ್ಕೆ ಸಾಧ್ಯವಾಗಿಲ್ಲ. ಅವರ ಪರಿಸ್ಥಿತಿ ಈಗ ಹಾಗೆ ಆಗಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಮ್ಮವರು ಒಂದಿಬ್ಬರು ಮಾತನಾಡುವವರು ಇದ್ದಾರೆ.

ಅಧ್ಯಕ್ಷರು : ಇದ್ದಾರೆ, ಆದರೆ ನಾನು ಏನು ಮಾಡಲಿ? ಮಾನ್ಯ ಪುಟ್ಟಣ್ಣಯ್ಯನವರೇ, ತಮಗೆ ಇನ್ನು ಐದು ನಿಮಿಷ ಮಾತನಾಡಲು ಸಾಕಾಗುತ್ತದೆಯೋ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇಲ್ಲ, ಇನ್ನು ಒಂದೂವರೆ ಗಂಟೆಗಳ ಕಾಲ ಬೇಕಾಗುತ್ತದೆ. ನಾನು ಎಲ್ಲಾ ವಿಷಯಗಳನ್ನು ಕವರ್ ಮಾಡಬೇಕಾಗಿತ್ತು. ಇನ್ನು ಕೃಷಿ ಕ್ಷೇತ್ರದ ಬಗ್ಗೆಯೇ ಮುಗಿದಿಲ್ಲ. ಕಬ್ಬು ಎಂದಾಕ್ಷಣ ಎಲ್ಲರೂ ಎದ್ದು ನಿಂತುಕೊಳ್ಳುತ್ತಾರೆ.

ಅಧ್ಯಕ್ಷರು : ಒಂದೂವರೆ ಗಂಟೆಗಳ ಕಾಲ ಅದು ಇವತ್ತಿಗೆ ಅಲ್ಲ, ಇನ್ನೂ ನಾಲ್ಕು ವರ್ಷಗಳಲ್ಲಿ ನಾಲ್ಕು ಸಲ ಮಾತನಾಡಬೇಕಲ್ಲಾ, ಅದಕ್ಕೆ ಪ್ರತಿ ವರ್ಷ ನಿಮಗೆ ಈ ವಿಚಾರಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿಲ್ಲ, ನೀವೇ ಕಾಲಾವಕಾಶ ಕಡಿಮೆ ಇದೆ, ಬಜೆಟ್ ಮೇಲೆ ಮಾತನಾಡಿ ಎಂದು ಹೇಳಿದ್ದೀರಿ.

ಅಧ್ಯಕ್ಷರು : ಏನಿಲ್ಲ, ತುಂಬಾ ಜನರು ಹೊಸಬರು ಮಾತನಾಡುವವರು ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾತನಾಡುವುದಕ್ಕೆ ನಮ್ಮ ಅಬ್ಜೆಕ್ಷನ್ ಏನೂ ಇಲ್ಲ. ಆದರೆ ಯಾರು ಯಾವ ವಿಷಯದ ಮೇಲೂ ಮಾತನಾಡಿಲ್ಲ. ಅಂತಹ ಸದಸ್ಯರಿಗೆ ಅವಕಾಶವನ್ನು ಕೊಡಬೇಕಾಗುತ್ತದೆ. ಈಗಾಗಲೇ ನಾವು ಮೂರು ತಾಸು ಮಾತನಾಡಿದ್ದೇವೆ. ಅವರೆಲ್ಲರೂ ಮಾತನಾಡುವುದಕ್ಕೆ ಮೂರು ತಾಸು ಆಗುತ್ತದೆ. ಆದುದರಿಂದ ಪ್ರತಿಯೊಬ್ಬರಿಗೂ 10-15 ನಿಮಿಷಗಳ ಕಾಲಾವಕಾಶವನ್ನು ಕೊಟ್ಟರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು : ಆಯಿತು ಕೊಡುತ್ತೇನೆ.

ಶ್ರೀ ಎಸ್. ರಾಜಣ್ಣ : ಬೆಂಗಳೂರಿನವರಿಗೆ ಅವಕಾಶವನ್ನು ಕೊಡಬೇಕು. ಮೊನ್ನೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಉಪಾಧ್ಯಕ್ಷರು ಕುಳಿತುಕೊಳ್ಳಿ ಎಂದು ಹೇಳಿದ್ದರಿಂದ ಕುಳಿತುಕೊಂಡೆ, ನೆಕಸ್ಟ್ ಟೈಮ್ ಮಾತನಾಡಲು ಹೇಳಿದರು. ಇಲ್ಲಿ ಬಹಳ ಸಮಸ್ಯೆಗಳು ಇವೆ. ನಮಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾವು ಶಾಲೆಗಳನ್ನು ಕಟ್ಟುವಂತಹ ವಿನ್ಯಾಸವನ್ನು ಬದಲಾಯಿಸಿಕೊಳ್ಳಬೇಕು. ಮೂರು ಕೊಠಡಿಗಳನ್ನು ಕಟ್ಟುವ ಕಡೆ ಒಂದು ಅಥವಾ ಎರಡು ಕೊಠಡಿ ಮಾಡಿ, ಇದಕ್ಕೆ ಅರವತ್ತೈದು ಸಾವಿರ ರೂಪಾಯಿಗಳೆಂದು ನಿಗದಿಪಡಿಸಿ ಆರ್.ಸಿ.ಸಿ.ಯನ್ನು ಹಾಕಬೇಕು. ಈವತ್ತು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಕಟ್ಟಿರುವಂತಹ ಹೆಂಚಿನ ಮನೆಗಳಿಗೆ ಐವತ್ತು ಸಾವಿರ, ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ರಿಪೇರಿ ಮಾಡುತ್ತಿದ್ದಾರೆ. ಇನ್ನು ಮುಂದೆ ಜಾಗದ ಅಭಾವ, ಶಾಲೆ ನಡೆಸುವುದಕ್ಕೆ ಜಾಗ ಸಿಕ್ಕುವುದಿಲ್ಲ.

ನೀವೇನಾದರೂ ಎರಡು ಸ್ಟೇರ್, ಮೂರು ಸ್ಟೇರ್‌ಗೋಸ್ಕರ ಆರ್‌ಸಿಸಿ ಹಾಕಿಕೊಂಡು ಶಾಲೆ ಕಟ್ಟಡಗಳನ್ನು ಕಟ್ಟಿಕೊಂಡರೆ, ಜಾಗದ ಅಭಾವದಿಂದ ಜಾಗವನ್ನು ಕೊಂಡುಕೊಳ್ಳುವಂತಹ ಕೆಲಸ ಕಡಿಮೆಯಾಗುತ್ತದೆ ಜೊತೆಗೆ ಜಾಗವೂ ಉಳಿದುಕೊಳ್ಳುತ್ತದೆ, ದಯವಿಟ್ಟು ಇದರ ಬಗ್ಗೆ ತಾವು ಚಿಂತನೆ ಮಾಡಬೇಕು. ಐಟಿಐ ನವರು ಧರಣಿ ಕುಳಿತುಕೊಂಡು ಈಗಾಗಲೇ ಇಪ್ಪತ್ತೈದು ದಿವಸವಾಯಿತು. ಮಾನ್ಯ ಕಾರ್ಮಿಕ ಮಂತ್ರಿಗಳು ಪತ್ರಿಕೆಯ ಮೂಲಕ ಅವರಿಗೇನಾದರೂ ನ್ಯಾಯವನ್ನು ದೊರಕಿಸಿಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಕೇವಲ ಎರಡು ಕೋಟಿ ರೂಪಾಯಿಗಳು, ಈ ವೃತ್ತಿಪರ ಶಿಕ್ಷಣದ ಮೂಲಕ ಏನೂ ಬದಲಾವಣೆಯಿಲ್ಲ. ಮಾನ್ಯ ಸಭಾಧ್ಯಕ್ಷರೆ, ಸುಮಾರು ಇಪ್ಪತ್ತೈದು ಮೂವತ್ತು ದಿವಸಗಳಿಂದ ನಿರಂತರವಾಗಿ ಅವರು ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದರು; ಈಗಾಗಲೇ ನಾನು ತರಹದ ಆಶ್ವಾಸನೆಗಳನ್ನು ಕೊಟ್ಟಿದ್ದರು. ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತೇವೆಂದು ತಾವು ಆಯವ್ಯಯದಲ್ಲಿ ಹೇಳಿದ್ದೀರಿ. ತಾವು ಆಯವ್ಯಯ ಭಾಷಣದಲ್ಲಿ ಹೇಳಿರುವುದರಿಂದ, ಐಟಿಐರವರಿಂದ ವೃತ್ತಿಪರ

ಶಿಕ್ಷಣ ಅತ್ಯಂತ ಜವಾಬ್ದಾರಿಯುತವಾಗಿ ನಡೆಯುತ್ತಿದೆ. ಆ ಐಟಿಐನವರು ಇಡೀ ಗ್ರಾಮೀಣ ಪ್ರದೇಶದಲ್ಲಿ ಎಪ್ಪತ್ತು-ಎಂಬತ್ತು ಜನತೆಗೆ ಉದ್ಯೋಗವನ್ನು ಸೃಷ್ಟಿ ಮಾಡುತ್ತಾರೆ. ಸರ್ಕಾರ ಉದ್ಯೋಗವನ್ನು ಕೊಡಬೇಕಾದದ್ದು ಏನೂ ಇಲ್ಲ ಅವರೇ ಸ್ವತಃ ಉದ್ಯೋಗವನ್ನು ಸೃಷ್ಟಿ ಮಾಡಿಕೊಳ್ಳುತ್ತಾರೆ, ಇಡೀ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಜನತೆಗೆ ಉದ್ಯೋಗ ಸಿಗುವಂತಹ ಕೆಲಸವಾಗುತ್ತದೆ. ದಯವಿಟ್ಟು, ಅದಕ್ಕೆ ಎರಡು ಕೋಟಿ ಚಿಲ್ಲರೆ ರೂಪಾಯಿಗಳಾಗಬಹುದು, ಅದರ ಬಗ್ಗೆ ಅವರನ್ನು ಪೂರ್ಣ ಪ್ರಮಾಣದಲ್ಲಿ ಕರೆಯಿಸಿ ಮಾತುಕತೆಯಾಡುವುದರ ಮೂಲಕ ಚಳುವಳಿಯನ್ನು ನಿಲ್ಲಿಸಬೇಕಾಗುತ್ತದೆ. ಕಾರ್ಮಿಕ ಮಂತ್ರಿಗಳು ಏತಕೆ ಹೆದರಿಕೊಳ್ಳುತ್ತಾರೋ ನನಗಂತೂ ಅರ್ಥವಾಗುವುದಿಲ್ಲ, ಏತಕ್ಕೆ ಹೆದರಿ ಕೊಳ್ಳುತ್ತೀರಿ ಅವರು ಮುಖ್ಯಮಂತ್ರಿಗಳಿಗೆ ಹೆದರಿಕೊಳ್ಳುತ್ತಾರೆ; ಅವರು ಅವರ ಹತ್ತಿರ ಹೋಗಿ ಸರಿಯಾಗಿ ಹೇಳೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಹೆದರಿಕೊಳ್ಳುವವರು ಅವರೊಬ್ಬರೇ ಅಲ್ಲ ಎಲ್ಲರೂ ಹೆದರಿಕೊಳ್ಳುತ್ತಾರೆ, ನೀವು ಅವರೊಬ್ಬರ ಮೇಲೆ ಏಕೆ ಚಾರ್ಜ್ ಮಾಡುತ್ತಿದ್ದೀರಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಕಾರ್ಮಿಕ ಮಂತ್ರಿಗಳು ಬಹಳ ಜಾಸ್ತಿ ಹೆದರಿಕೊಳ್ಳುತ್ತಾರೆ. ಸರಿ ಅವರಿಗೆ ಗೌರವ ಕೊಡಬೇಕು. ಅದರ ಈಗ ಐಟಿಐ ವಿಷಯವೇನಿದೆ, ಅದರ ಬಗ್ಗೆ ಹೆದರಿಕೊಳ್ಳುವುದೇನಿದೆ?

ಶ್ರೀವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳೊಡನೆ ಮಾತನಾಡುವ ಮಾತಿರಲಿ, ಅವರ ಮುಂದೆ ನಿಂತುಕೊಳ್ಳುವುದಕ್ಕೇ ಹೆದರಿಕೊಳ್ಳುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ದಯವಿಟ್ಟು ಕಾರ್ಮಿಕ ಮಂತ್ರಿಗಳು ಬಹಳ ಮುಖ್ಯವಾದ ವಿಷಯವನ್ನು ಹೇಳಬೇಕು. ಈ ರಾಜ್ಯದಲ್ಲಿ ಐದು ಸಾವಿರ ಪಂಚಾಯತ್‌ರಾಜ್ ಸಂಸ್ಥೆಗಳಿವೆ, ಇವರಲ್ಲಿ ಕಸಗುಡಿಸುವವರ ಜನರ ಸಂಖ್ಯೆ ಒಟ್ಟು ಐವತ್ತು ಸಾವಿರ ಇರಬಹುದು. ಹಿಂದುಳಿದ ಜನರಿಗೆ ನಾವೇನೋ ಮಾಡುತ್ತೇವೆನ್ನುವುದು ಬೇಡ, ಕನಿಷ್ಟ ಜೀವನ ಸಾಗಿಸುವಂತಹ ಅವರಿಗೆ ಅವರ ಶ್ರಮಕ್ಕೆ ತಕ್ಕ ಸಂಬಳವನ್ನು ಕೊಟ್ಟರೆ ಸಾಕು. ಇನ್ನೂರು ಐವತ್ತರಿಂದ ಮೂನ್ನೂರು ರೂಪಾಯಿಗಳ ಸಂಬಳಕ್ಕೆ ಕಸವನ್ನು ಗುಡಿಸುತ್ತಿದ್ದಾರೆ. ಇನ್ನೂರ ಐವತ್ತು ರೂಪಾಯಿಗಳಿಂದ ಮೂನ್ನೂರು ರೂಪಾಯಿಗಳ ಸಂಬಳಕ್ಕೆ ಗ್ರಾಮಪಂಚಾಯಿತಿಯಲ್ಲಿ ಕಸಗುಡಿಸುವಂತಹ ಒಂದು ವ್ಯವಸ್ಥೆ ಇದೆ, ಆ ಐವತ್ತು ಸಾವಿರ ಜನರ ಜೀವನ ಎಷ್ಟರ ಮಟ್ಟಿಗೆ ಅಸ್ತವ್ಯಸ್ತವಾಗಿದೆ, ಅವರ ಮೈ ಕೈಗಳಲ್ಲಿ ಗಾಯವಾಗಿ ಅವರು ಎಷ್ಟೊಂದು ಕಾಯಿಲೆಯಿಂದ ನರಳುತ್ತಿದ್ದಾರೆ ಅವರ ಜೀವನಕ್ಕೆ ಏನಾದರೂ ಭದ್ರತೆ ಇದೆಯಾ? ಕಾರ್ಮಿಕ ಇಲಾಖೆ ಎಂದು ಒಂದು ಇದೆ, ಅದಕ್ಕೆ ತಾವೇ ಮಂತ್ರಿಗಳು ಏನು ಮಾಡುತ್ತಿದ್ದೀರಿ? ಇದು ಎರಡನೇ ವರ್ಷ ನಾನು ಅವರ ಬಗ್ಗೆ ಮಾತನಾಡುತ್ತಿರುವುದು. ಅವರು(ಕಸಗುಡಿಸುವವರು) ಇನ್ನೂ ಹಾಗೆಯೇ ಇರಲೇ ಅಥವಾ ತಾವು ಏನಾದರೂ ಮಾಡುತ್ತೀರಾ? ಸನ್ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಅವರ ಮೂಲಕ ಏನಾದರೂ ಮಾತನಾಡಿಸಬೇಕು. ಅವರು (ಕಾರ್ಮಿಕ ಮಂತ್ರಿಗಳು) ಏನಾದರೂ ಮಾತನಾಡಲಿ.

ಸ್ವಾಮಿ ಇದು ಬಹಳ ಗಂಭೀರವಾದ ವಿಷಯ, ಏಕೆಂದರೆ ನಾನು ನಮ್ಮ ಊರಿನಲ್ಲಿ ನೋಡಿದ್ದೇನೆ..

ಅಧ್ಯಕ್ಷರು : ಮಾತು ಬೆಳ್ಳಿ ಮೌನ ಬಂಗಾರ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸರಿ ಸಾರ್ ಬಂಗಾರವನ್ನು ಮೌನವಲ್ಲಾವರೂ ಕೊಟ್ಟರೆ ಸ್ವೀಕರಿಸಬಹುದು, ಸುಮ್ಮನೆ ಮೌನವಾಗಿಯೇ ಐದು ವರ್ಷ ಇದ್ದರೆ ನಾವು ಏನು ಮಾಡುವುದು ಸಾರ್? ಅವರು ಆ ಪರಿಸ್ಥಿತಿಯಲ್ಲೇ ಇದ್ದು ಇವರು ಹೀಗೆಯೇ ಮೌನವಾಗಿದ್ದರೆ ಇನ್ನೂರ ಐವತ್ತು- ಮೂನ್ನೂರು ರೂಪಾಯಿಗಳ ಸಂಬಳವನ್ನು ತೆಗೆದುಕೊಂಡು ಮೈ ಕೈ ಎಲ್ಲಾ ಕಜ್ಜಿ ಆಗಿ ಹತ್ತಿಸಿಕೊಂಡು ಅವರ ಅನಾರೋಗ್ಯದ ಪರಿಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ.

ಶ್ರೀ ಎಂ. ನಾರಾಯಣ ಸ್ವಾಮಿ : ಈಗ ತಾವು ಆ ನೌಕರರು ಇನ್ನೂರ ಐವತ್ತು-ಮೂನ್ನೂರ ರೂಪಾಯಿಗಳ ಸಂಬಳವನ್ನು ಪಡೆಯುತ್ತಿದ್ದಾರೆಂದು ಹೇಳಿದಿರಿ, ಅನೇಕ ಹಳ್ಳಿಯಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಹೊತ್ತಿಗೆ ಊಟವಿಲ್ಲದೇ ಇರತಕ್ಕಂತಹ ಜನ, ಗಂಜಿಯನ್ನು ಕುಡಿಯುವಂತಹ ಜನ, ಬರೀ ರೊಟ್ಟಿಯನ್ನು, ಜೋಳದ ರೊಟ್ಟಿಯನ್ನು ತಿನ್ನುತ್ತಿರತಕ್ಕಂಥ ಜನ ಸಹ ಎಷ್ಟೋ ಇದ್ದಾರೆ, ಅದಕ್ಕೆ ನಾವು ಆ ಕಡೆಗೆ ಒತ್ತುಕೊಡೋಣ. ಅಷ್ಟೋಇಷ್ಟೋ ಜೀವನ ನಡೆಯುತ್ತಿದೆ. ಅದರ ಬಗ್ಗೆ ಒತ್ತು ಕೊಡಿ ಎಂದು ನೀವು ಹೇಳುತ್ತಿದ್ದೀರಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಹೇಸಿಗೆಯನ್ನು ಎತ್ತುವವರ ಬಗ್ಗೆ ನೀವು ಈ ರೀತಿ ಹಗುರವಾಗಿ ಏತಕ್ಕೆ ಮಾತನಾಡುತ್ತೀರಿ? ನೀವು ಅಲ್ಲಿಗೆ ಹೋಗಿ ನೋಡಿ ನೀವು ಅವನ ಮೈ ಮೇಲಿರುವ ಬಟ್ಟೆಯನ್ನು ಬಿಚ್ಚಿಸಿ, ಅವನ ಅನಾರೋಗ್ಯದ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎನ್ನುವುದನ್ನು ನೋಡಿ.

ಶ್ರೀ ಎಂ. ನಾರಾಯಣ ಸ್ವಾಮಿ : ನಾನು ಸರಿಯಾಗಿಯೇ ಮಾತನಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾತನಾಡದವರನ್ನು ಮಾತನಾಡಿ ಎನ್ನುತ್ತಾರೆ. ಮಾತನಾಡುವವರನ್ನು ಬೈಯುವುದಕ್ಕೆ ಶುರು ಮಾಡುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅವರು ಅದಕ್ಕೆ ಒತ್ತು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮುತ್ತು ಒಡೆದರೆ ಹೋಯಿತು ಮಾತು ಆಡಿದರೆ ಹೋಯಿತು ಎಂದು ಒಂದು ಗಾದೆ ಇದೆ, ಆ ಪರಿಸ್ಥಿತಿಯಲ್ಲಿ ನಮ್ಮ ಕಾರ್ಮಿಕ ಸಚಿವರು ಬಹಳ ಗಂಭೀರವಾಗಿ, ಗಜಗಂಭೀರವಾಗಿ ಕುಳಿತಿದ್ದಾರೆ, ನಾವು ಅವರ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳಬೇಕಾಗಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಹಿಳೆಯರ ಬಗ್ಗೆ ಒಂದೆರೆಡು ಮಾತುಗಳನ್ನು

ಹೇಳಬೇಕಾಗಿದೆ. ಅದನ್ನು ಏತಕ್ಕೆ ಹೇಳುತ್ತೇನೆಂದರೆ, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಆಯೋಗವನ್ನು ಮಾಡಿದ ಮೇಲೆ......

ಶ್ರೀಮತಿ ಬಿ.ಟಿ ಲಲಿತಾನಾಯಕ್ : ಮಹಿಳೆಯರಿಗೆ ಮಾತನಾಡುವುದಕ್ಕೆ ಅವಕಾಶವಂತೂ ಕೊಡುವುದಿಲ್ಲ, ಕೊನೆಯಪಕ್ಷ ಮಹಿಳೆಯ ಬಗ್ಗೆ ಮಾತನಾಡುತ್ತಿದ್ದಾರಲ್ಲಾ ಎಂದು ಸಂತೋಷ ಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮೇಲೆ ಮಹಿಳೆಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಆರೋಪಣೆಯನ್ನು ಮಾಡುವುದನ್ನು ನಾನು ಸಹಿಸುವುದಕ್ಕೆ ಸಾಧ್ಯವಿಲ್ಲ. ತಾವು ಹೀಗೆ ಹೇಳಿವರೆ ನಾನು ಸಭಾತ್ಯಾಗ ಮಾಡುತ್ತೇನೆ, ಇದು ನಿಜವಾಗಿಯೂ ಸರಿಯಲ್ಲ. ಮಹಿಳೆಯರ ಬಗ್ಗೆ ನೀವು ಬಹಳ ಪ್ರೀತಿಯನ್ನಿಟ್ಟುಕೊಂಡು, ವಿಶ್ವಾಸವಿಟ್ಟುಕೊಂಡು ನಮ್ಮನ್ನೆಲ್ಲಾ ಕಡೆಗಾಣಿಸಿ ನೀವು ಅವರ ಕಥೆಗೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಿದ್ದೀರಿ, ಆದರೂ ಈ ರೀತಿಯಾಗಿ ನಿಮ್ಮ ಮೇಲೆ ಆರೋಪಣೆ ಮಾಡುವುದು ನ್ಯಾಯವಲ್ಲ.

ಅಧ್ಯಕ್ಷರು : ಅವರು ಆರೋಪಣೆ ಮಾಡಿದ್ದೇ ನಿಮ್ಮ ಮೇಲೆ. ಇರುವ ಗಂಡಸರೆಲ್ಲಾ ಸಮಯವನ್ನು ತೆಗೆದುಕೊಂಡು ಬಿಡುತ್ತೀರಿ, ನಮ್ಮ ಹೆಣ್ಣು ಮಕ್ಕಳಿಗೆ ಮಾತನಾಡುವುದಕ್ಕೆ ಸಮಯ ಕೊಡುತ್ತಿಲ್ಲ, ಅಧ್ಯಕ್ಷರಿಗೆ ಕಾಟ ಕೊಡುತ್ತೀರೆಂದು ಅವರು ಹೇಳಿದ್ದುದು.

ಶ್ರೀವಾಟಾಳ್ ನಾಗರಾಜ್ : ತಾವು ನನ್ನ ಮೇಲೆ ಆರೋಪಣೆಯನ್ನು ಮಾಡುತ್ತಿದ್ದೀರೋ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನೀವು ಹೇಳಿದ ಮೇಲೂ (ವಾಟಾಳ್ ನಾಗರಾಜ್) ಅವರು ಸಭಾತ್ಯಾಗ ಮಾಡಿಲ್ಲ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ನನಗೆ (ವಾಟಾಳ್ ನಾಗರಾಜ್) ಅವರ ಬಗ್ಗೆ ಬಹಳ ಗೌರವವಿದೆ, ಅವರ ಬಗ್ಗೆ ಎಂದೂ ಬೇಸರವಿಲ್ಲ, ಅವರು ನಮ್ಮ ಬಗ್ಗೆ ಚೆನ್ನಾಗಿ ಮಾತನಾಡುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಸಭಾಧ್ಯಕ್ಷರೆ, ಮಹಿಳಾ ಆಯೋಗವೆಂದು ಮಾಡಿದರು. ಮಹಿಳೆಯರಿಗೆ ಉದ್ಯೋಗ, ಮಹಿಳೆಯರಿಗಿರತಕ್ಕಂಥ ಕಷ್ಟದ ಬಗ್ಗೆ ಯಾವತ್ತಾದರೂ ಆ ಮಹಿಳಾ ಆಯೋಗದ ಮೂಲಕ ಏನಾದರೂ ಗುರುತಿಸಿದ್ದೀರಾ? ಉದಾಹರಣೆಗೆ ನಾನು ಹೇಳುತ್ತೇನೆ, ಜೆಮ್ ಕಟಿಂಗ್ಸ್ ಎಂದು ಹೊರರಾಜ್ಯದವರು ಬಂದಿದ್ದರು. ಇಡೀ ರಾಜ್ಯದಲ್ಲಿ ಕೆಎಸ್ಎಫ್‌ಸಿ ಎಂದು ಹಣಕಾಸಿನ ಸಂಸ್ಥೆಯ ಮೂಲಕ ಪಾಲಿಶಿಂಗ್ ಮೆಶಿನ್ ತೆಗೆದುಕೊಳ್ಳುವುದಕ್ಕೆ ಇವರು ಸಾಲವನ್ನು ಕೊಟ್ಟುಬಿಟ್ಟರು. ಪಾಲಿಷಿಂಗ್ ಮಷಿನ್ ತೆಗೆದುಕೊಂಡರು, ಮೂರು ಸ್ಲಿಪ್‌ನಲ್ಲಿ ಡೂಪ್ಲಿಕೇಟ್ ಡೈಮಂಡ್ಸ್ ಎಲ್ಲಾ ಮಾಡಿಕೊಟ್ಟರು. ಕಚ್ಚಾ ಮಾಲು ಒಂದು ಮೂರ್‍ನಾಲ್ಕು ತಿಂಗಳು ಚೆನ್ನಾಗಿ ಸರಬರಾಜು ಆಯಿತು. ಈಗ ಕಚ್ಚಾ ಮಾಲೂ ಇಲ್ಲ, ಅವರಿಗೆ ಸಂಬಳವೂ ಇಲ್ಲದೆ ಪಾಂಡವಪುರದಲ್ಲಿ ಸುಮಾರು ಮೂನ್ನೂರು - ಮೂನ್ನೂರ ಐವತ್ತು ಜನ

ಹೆಣ್ಣು ಮಕ್ಕಳು ಉಪವಾಸ ಮಲಗಿದ್ದಾರೆ. ಆ ಉದ್ಯೋಗದ ಮಾಲೀಕನ ಹೆಸರನ್ನು ಕೈಗಾರಿಕೆ ಹಾಗೂ ವಾಣಿಜ್ಯ ಇಲಾಖೆಯ ಕಾರ್ಯದರ್ಶಿಗಳನ್ನು ಕೇಳಿದರೆ ಗೊತ್ತಾಗುತ್ತದೆ. ಜೆಮ್ ಕಟಿಂಗ್ಸ್‌ನವನು, ಅವನು ಜೆಮ್ ಆಗಿ ಇದ್ದಾನೆ, ಇಲ್ಲಲ್ಲಾ ಇವರ ಜೀವನ ಪರಿಸ್ಥಿತಿ ಇಷ್ಟರಮಟ್ಟಿಗೆ ಆಗಿದೆ. ಅಲ್ಲಿ ನೀವು ಯಾವುದಾದರೂ ಒಂದು ಐಡೆಂಟಿಫೈ ಮಾಡಿ. ಕೆಎಸ್‌ಎಫ್‌ಸಿಯವರು ಅವರಿಗೆ ಸಾಲವನ್ನು ಕಟ್ಟಿ ಎಂದು ಹೇಳುತ್ತಿದ್ದಾರೆ, ಕೆಎಸ್‌ಎಫ್‌ಸಿಗೆ ಹೇಗೆ ಸಾಲ ಕಟ್ಟಲು ಸಾಧ್ಯ? ಉದ್ಯೋಗ ಮಾಡಿ ಸಂಪಾದನೆ ಮಾಡಿ ಅದರಿಂದ ಬಂದಂತಹ ಲಾಭದಲ್ಲಿ ಕೆಎಸ್‌ಎಫ್‌ಸಿಗೆ ಕಟ್ಟಬೇಕು. ಆದರೆ ಈಗ ಕೆ.ಎಸ್.ಎಫ್.ಸಿಯವರು ಬಂದು ಸಾಲವನ್ನು ಕಟ್ಟಬೇಕೆಂದು ಬಲವಂತ ಮಾಡುತ್ತಿದ್ದಾರೆ, ಅದರ ಬಗ್ಗೆ ಸರ್ಕಾರ ಅತ್ಯಂತ ಗಂಭೀರವಾಗಿ ಯೋಚನೆ ಮಾಡಿ, ಅವರಿಗೆ ನ್ಯಾಯ ದೊರಕಿಸುವ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಡೂಪ್ಲಿಕೇಟ್ ಡೈಮಂಡ್‌ಗಳು ಇಡೀ ಭಾರತದಲ್ಲೇ ಅಲ್ಲ ಇಡೀ ಪ್ರಪಂಚದಲ್ಲೇ ಅವಕ್ಕೆ ಬೇಡಿಕೆ ಜಾಸ್ತಿಯಾಗಿದೆ. ಎಲ್ಲಾ ಕಡೆಯೂ ಇದೊಂದು ಚೆನ್ನಾಗಿರುವ ಲಾಭದಾಯಕ ಉದ್ಯೋಗವಾಗಿದೆ; ಆ ಲಾಭದಾಯಕ ಉದ್ಯೋಗ ಕೆಲವೇ ಜನರ ಕೈಸೇರಿಕೊಳ್ಳುತ್ತಿದೆ, ಹೆಣ್ಣು ಮಕ್ಕಳ ಜೀವನ ಅಸ್ತವ್ಯಸ್ತವಾಗಿದೆ. ನಾಳೆ ಸುಮಾರು ಐವತ್ತು-ನೂರು ಜನ ಹೆಣ್ಣು ಮಕ್ಕಳು ಬರಬಹುದು, ಸಂಬಂಧಪಟ್ಟ ಮಂತ್ರಿಗಳು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಕಾರ್ಯದರ್ಶಿಗಳ ಜೊತೆ ಮಾತನಾಡಿ, ದಯವಿಟ್ಟು ಅದರ ಬಗ್ಗೆ ಬಹಳ ಜವಾಬ್ದಾರಿಯಿಂದ ನಿರ್ವಹಣೆ ಮಾಡಬೇಕು. ಇಲ್ಲದಿದ್ದರೆ ಸುಮ್ಮನೆ ಮಹಿಳಾ ಆಯೋಗಗಳು ಮಹಿಳೆಯರ ಬಗ್ಗೆ ಭಾಷಣ ಮಾಡುವುದಾಗುತ್ತದೆ. ಈಗ ನಾನು ಉದಾಹರಣೆಗೆ ಹೇಳುತ್ತೇನೆ, ಅಣಬೆ ಬೇಸಾಯದ ಬಗ್ಗೆ ನಾವೆಲ್ಲಾ ಬಹಳ ಮಾತನಾಡುತ್ತೇವೆ. ಐವತ್ತು ಲಕ್ಷ ರೂಪಾಯಿಗಳನ್ನು ಇವಕ್ಕೆ ಆಯವ್ಯಯದಲ್ಲಿ ಪ್ರಾವಿಷನ ಮಾಡಿಕೊಡಿ; ಅಣಬೆ ಬೇಸಾಯದ ಬಗ್ಗೆ ಲಕ್ಷ ಮಹಿಳೆಯರಿಗೆ ಉದ್ಯೋಗವನ್ನು ಸೃಷ್ಟಿ ಮಾಡಬಹುದು; ಒಂದು ಲಕ್ಷ ಮಹಿಳೆಯರಿಗೆ ಉದ್ಯೋಗವನ್ನು ಸೃಷ್ಟಿ ಮಾಡಬಹುದು. ಒಂದು ಕೆ.ಜಿ. ಅಣಬೆಯು ಮೂವತ್ತು ರೂಪಾಯಿಯಿಂದ ಅರವತ್ತು ರೂಪಾಯಿಗೆ ಮಾರಾಟವಾಗುತ್ತದೆ. ಏನು ಕೋಳಿಯನ್ನು ಉಪಯೋಗಿಸುತ್ತೇವೆ. ಆ ಕೋಳಿಗೂ, ಅಣಬೆಗೂ ಏನು ವ್ಯತ್ಯಾಸವಿಲ್ಲ; ಅಣಬೆ ಬಹಳ ಚೆನ್ನಾಗಿರುತ್ತದೆ. ಅಣಬೆ ಜಾಸ್ತಿ ಇದೆ, ಆದರೆ ಆ ಮಹಿಳೆಯರನ್ನು ಆ ಉದ್ಯೋಗದಲ್ಲಿ ತೊಡಗಿಸಬಹುದು. ಒಂದು ಲಕ್ಷ ಮಹಿಳೆಯರಿಗೆ ಉದ್ಯೋಗವನ್ನು ಸೃಷ್ಟಿ ಮಾಡಬಹುದು. ಆ ದಿಕ್ಕಿನಲ್ಲಿ ನೀವು ಕೆಲಸ ಮಾಡಿ. ಸುಮ್ಮನೆ ಮಹಿಳಾ ಆಯೋಗ ಮಾಡಿಬಿಟ್ಟರು. ಈಗ ಅಂಗನವಾಡಿ ಕಾರ್ಯಕರ್ತೆಯವರು ನಮಗೆ ದುಡ್ಡು ಸಾಕಾಗುವುದಿಲ್ಲ. ನಾವು ಈ ಕೆಲಸ ಮಾಡುವುದರಿಂದ ನಮಗೆ ಬಹಳ ಕಡಿಮೆ ಸಂಬಳ ಎಂದು ಹೇಳುತ್ತಾರೆ. ಅವರಿಗೆ ಕುಟುಂಬ ಕಲ್ಯಾಣ ಯೋಜನೆಯನ್ನು ಏತಕ್ಕೆ ಪರಿಚಯಿಸಬಾರದು? ಒಂದು ಪ್ರಕರಣವನ್ನು ಹಿಡಿದು ಅವರ ಜೊತೆ ಮಾತುಕತೆಯಾಡುವುದರ ಮೂಲಕ ಒಂದು ಮಗುವಿಗೆ ಅಪರೇಷನ್ ಮಾಡಿಸಿಕೊಳ್ಳಲು ಪ್ರೇರೇಪಿಸಲು ತಾವೇನು ಪ್ರೋಗ್ರಾಮ್ ಅನ್ನು ಹಾಕಿದ್ದೀರಿ? ಆ ಯೋಜನೆಯನ್ನು ಈ ಅಂಗನವಾಡಿ ಕಾರ್ಯಕರ್ತೆಯರ

ಮೂಲಕವೇ ಇಂಟ್ರಡ್ಯೂಸ್ ಮಾಡಿಸಿ. ಒಂದೇ ಮಗುವಿಗೆ ಒಪ್ಪಿ, ಆಪರೇಷನ್ ಮಾಡಿಸಿಕೊಳ್ಳುವಂತಹ, ಮನವನ್ನು ಒಲಿಸತಕ್ಕಂಥ ಕೆಲಸವನ್ನು ಮಾಡಿದರೆ, ಒಂದು ಪ್ರಕರಣಕ್ಕೆ ಇನ್ನೂರ ಐವತ್ತು ರೂಪಾಯಿಯೋ, ಮೂನ್ನೂರು ರೂಪಾಯಿಯೋ ಎಂದು ನಿಗದಿಮಾಡಿ ಅವರಿಗ ಕೊಟ್ಟರೆ ಒಂದು ತಿಂಗಳಿಗೆ ಹೀಗೆ ಎರಡು ಪ್ರಕರಣಗಳು ಸಿಕ್ಕರೆ ಅವರಿಗೆ ಆರು ನೂರು ರೂಪಾಯಿ ಸಂಬಳ ಬರುತ್ತದೆ, ಅವರ ಜೀವನಕ್ಕೆ ಭದ್ರತೆಯೂ ಆಗುತ್ತದೆ, ಜನಸಂಖ್ಯೆ ನಿಯಂತ್ರಣವೂ ಆಗುತ್ತದೆ.

ಅಧ್ಯಕ್ಷರು : ಪುಟ್ಟಣ್ಣಯ್ಯನವರೇ, ಬೇಗ ಮುಗಿಸಿಬಿಡೋಣ, ಪಾಪ ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಲ್ಲಾ. ನಿಮ್ಮ ಮಾತನ್ನು ನಿಲ್ಲಿಸುವುದಕ್ಕೆ ನನಗೆ ಇಷ್ಟವಿಲ್ಲ, ಆದರೆ ವಿಧಿ ಇಲ್ಲ ಏನು ಮಾಡುವುದು, ಎಲ್ಲರಿಗೂ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಏನು ಮಾಡುವುದು ಸಾರ್, ನಾನು ಜಾಸ್ತಿ ಮಾತನಾಡಬೇಕೆಂದು ಬರೆದುಕೊಂಡು ಬಂದುಬಿಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇವರಿಗೆ ಎಷ್ಟು ಮಕ್ಕಳಿದ್ದಾರೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನನಗೆ ಎರಡು ಹೆಣ್ಣು ಒಂದು ಗಂಡು ಮಗು.

ಶ್ರೀವಾಟಾಳ್ ನಾಗರಾಜ್ : ನೋಡಿ, ದೇಶಕ್ಕೆಲ್ಲಾ ವೇದಾಂತ ಹೇಳುತ್ತಾರೆ, ಸಂತಾನಹರಣ ಶಸ್ತ್ರಚಿಕಿತ್ಸೆ ಇದರ ಬಗ್ಗೆ ಎಲ್ಲಾ ಮಾತನಾಡುತ್ತಾರೆ, ನಿಮಗೆ ಎಷ್ಟು ಮಕ್ಕಳು ಎಂದರೆ, ನನಗೆ ಮೂರು ಮಕ್ಕಳಿದ್ದಾರೆಂದು ಹೇಳುತ್ತಾರೆ. ಇವರು ಮಿತಿಯನ್ನು ಧಾಟಿ ಹೊರಟುಹೋಗಿಬಿಟ್ಟಿದ್ದಾರೆ. ಇವರಿಗೆ ಇದರ ಬಗ್ಗೆ ಮಾತನಾಡುವುದಕ್ಕೆ ಇಲ್ಲಿ ಹಕ್ಕೇ ಇಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನು ಹದಿನೆಂಟು ವರ್ಷಗಳ ಹಿಂದಿನ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಹರಿಕಥೆ ದಾಸರು ಬದನೆಕಾಯಿ ವಿಚಾರ ಹೇಳಿದಂತಾಯಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಿಮಗೆ ಎಷ್ಟು ಜನ ಮಕ್ಕಳಿದ್ದಾರೆ?

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ನನಗೆ ಎಷ್ಟುಜನ ಮಕ್ಕಳಿದ್ದಾರೆಂದು ಕೇಳುತ್ತಿದ್ದಾರೆ.

ಅಧ್ಯಕ್ಷರು: ನಿಮಗ ಮನೆಯಲ್ಲಿ ಎರಡೇ ಬಿಡಿ.

(ನಗು)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ನೀವು ನಾನು ನಮ್ಮ ಮನೆಗೆ ಸೇರಬೇಕೆಂದು ಮಾಡಿದ್ದೀರೋ, ಏನು ಮಾಡಬೇಕೆಂದು ಹೊರಟ್ಟಿದ್ದೀರಿ? ಮಾನ್ಯ ಅಧ್ಯಕ್ಷರ, ನೋಡಿ ಈಗ

ನಾಗೇಗೌಡರನ್ನು ಬೀದಿಗೆ ಹಾಕಿಸಿದ್ದೀರಿ, ಈಗ ನನ್ನ ಹಣೆಬರಹವನ್ನು ಏನು ಮಾಡಬೇಕೆಂದು ಇಚ್ಛಿಸಿದ್ದೀರಿ, ಹೇಳಿ ನೀವು. ಅಧ್ಯಕ್ಷರು, ಕೆ.ಎಸ್. ನಾಗೇಗೌಡರ ಅವರ ರಕ್ತ ಸರಿಯಿಲ್ಲವೆಂದು ಹೇಳಿಬಿಟ್ಟರು, ಮನೆಯಲ್ಲಿ ಒಂದು ವಾರದಿಂದ ಜಗಳವಾಗಿ ಬೀದಿಗೆ ಹೋಗಿದ್ದಾರೆ, ನನಗೆ ಇದು ಬೇಡ, ಏಕೆಂದರೆ ನೀವು ನನ್ನನ್ನು ತೀವ್ರ ಅಪಾಯಕ್ಕೆ ಸಿಗಿಸುತ್ತಿದ್ದೀರಿ. ಯಡಿಯೂರಪ್ಪನವರೇ ಇಂತಹ ವಿಚಾರಗಳಿಗೆ ನಮಗೆ ನೀವು ಬೆಂಬಲ ಮಾಡುವುದಿಲ್ಲ, ಸುಮ್ಮನೆ ನೀವು ಮಾತನಾಡುತ್ತಿರುತ್ತೀರಿ, ಏಕೆಂದರೆ ನಿಮಗೂ ಮೂರರೂ-ನಾಲ್ಕು ಮಕ್ಕಳೆಂದು ಕಾಣುತ್ತದೆ.

ಅಧ್ಯಕ್ಷರು : ಇನ್ನು ಐದು ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಹಿಳೆಯರ ಬಗ್ಗೆ ಬರೀ ಆಯೋಗ ಮಾಡುವುದರಿಂದ ಏನೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ನಿಜವಾಗಿಯೂ ಅವರಿಗೆ ಉದ್ಯೋಗ ಸೃಷ್ಟಿಮಾಡಬೇಕು, ನಿಜವಾಗಲೂ ಅವರ ಬದುಕಿಗೆ ಒಂದು ಬದಲಾವಣೆ ಆಗಬೇಕು. ಏಕೆಂದರೆ ನಮ್ಮ ಗ್ರಾಮೀಣ ಸಂಸ್ಕೃತಿಯಲ್ಲಿ ಮಹಿಳೆಯರು ಕಷ್ಟಪಡುವಂಥ ಕೆಲಸ ನಿಜವಾಗಲೂ ಆಗಬಾರದು. ಅದರಲ್ಲೂ ಕೃಷಿ ಕಾರ್ಮಿಕ ಮಹಿಳೆಯರಂತೂ ಬಹಳ ಶ್ರಮ ಪಡುತ್ತಾರೆ. 16 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. 16 ಗಂಟೆಗಳ ಕಾಲ ಆಕೆ ದುಡಿಯುತ್ತಾಳೆ.

ಸಾರಿಗೆ ವ್ಯವಸ್ಥೆಯ ಬಗ್ಗೆ ಹೇಳಬೇಕೆಂದರೆ ಮಾನ್ಯ ಮಂತ್ರಿಗಳಲ್ಲಿ ದಯವಿಟ್ಟು ಸಾರಿಗೆ ಮತ್ತು ಹಣಕಾಸಿನ ಮಂತ್ರಿಗಳು ಗಂಭೀರವಾಗಿ ಯೋಚನೆ ಮಾಡಬೇಕು. ತಾವು ಅಧಿಕಾರಕ್ಕೆ ಬಂದು ಇದುವರೆಗೆ 14 ತಿಂಗಳು ಆಯಿತು. ಕನಿಷ್ಠ ಒಂದು ಸೌಜನ್ಯಕ್ಕೆ, ಜಿಲ್ಲಾಧಿಕಾರಿಗಳು, ಆರ್.ಟಿ.ಓ.ಗಳು ಆ ಜಿಲ್ಲೆಯ ಶಾಸಕರನ್ನು ಕರೆದು ಖಾಸಗಿ ಬಸ್ಸು ಎಷ್ಟಿವೆ, ಸರ್ಕಾರಿ ಬಸ್ಸು ಎಷ್ಟು ಓಡಾಡುತ್ತಿವೆ, ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಜನರಿಗೆ ಬಸ್ಸುಗಳ ಸಮಸ್ಯೆಯನ್ನು ಯಾವ ರೀತಿ ಕಡಿಮೆ ಮಾಡಬಹುದು ಅನ್ನುವಂಥ ಒಂದು ರಿಪೋರ್ಟ್ ತರಿಸಿಕೊಳ್ಳುವಂಥ ಒಂದು ಸೌಜನ್ಯವನ್ನು ಮಾಡಿದ್ದರೆ, ಏನೋ ಹಳ್ಳಿಗಳ ಬಗ್ಗೆ ಸಾರಿಗೆ ವ್ಯವಸ್ಥೆಯ ಬಗ್ಗೆ ಯೋಚನೆ ಮಾಡತಕ್ಕಂಥ ಶಕ್ತಿ ಇದೆ ಎಂದು ತಿಳಿಯಬಹುದಿತ್ತು. ಈಗಲಾದರೂ ಅದರ ಬಗ್ಗೆ ಆಲೋಚನೆ ಮಾಡಿ. ಕನಿಷ್ಠ ಒಂದೊಂದು ಕ್ಷೇತ್ರಕ್ಕೆ ನಾಲ್ಕರಿಂದ ಐದು ಬಸ್ಸನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದರೆ, ರಿಂಗ್ ರೋಡ್ ಟೈಪ್, ಅದು ಯಾವುದೇ ಒಬ್ಬ ವ್ಯಕ್ತಿಗೆ ಹಳ್ಳಿಯಲ್ಲಿರತಕ್ಕಂಥವನಿಗೆ ನಾನು ಬೆಳೆದಂಥ ಪದಾರ್ಥಗಳನ್ನು ತಾಲ್ಲೂಕು ಹೆಡ್ ಕ್ವಾರ್ಟರ್‌ಗೆ ಬರತಕ್ಕಂಥ ವ್ಯವಸ್ಥೆಯಾದರೆ ಸಾಕು. ಮೈಸೂರಿಗೆ, ಬೆಂಗಳೂರಿಗೆ, ಮಂಡ್ಯಕ್ಕೆ ಹೋಗುವುದಕ್ಕೆ ಯಾವುದೇ ತೊಂದರೆ ಇಲ್ಲ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಹಿಳೆಯರಿಗೆ ಬಸ್ಸಿನಲ್ಲಿ ಸೀಟು ಸಿಗುತ್ತಿಲ್ಲ; ಮೀಸಲು ಸ್ಥಾನ ಕೊಟ್ಟಿರುವುದರ ಬಗ್ಗೆ ಬಹಳ ತಕರಾರು ಇದೆ. ಅದರ ಬಗ್ಗೆಯೂ ಸ್ವಲ್ಪ ಹೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಮಿಳುನಾಡಿನಲ್ಲಿ ಹಾಗೆಯೇ ಇರುವುದು. ಮಹಿಳೆಯರಿಗೆ ಗೌರವ ಕೊಡತಕ್ಕಂಥಾದ್ದು, ಯಾವುದೇ ಕಾರಣಕ್ಕೂ ಮಹಿಳಾ ಸ್ಥಳಗಳನ್ನು ಆಕ್ರಮಿಸಿಕೊಂಡಿರುವುದಿಲ್ಲ ಆಕಸ್ಮಾತ್ ಆಕ್ರಮಿಸಿಕೊಂಡಿದ್ದರೆ, ಮಹಿಳೆಯರು ಬಂದ ತಕ್ಷಣ ಪುರುಷರು ಎದ್ದು ಬಿಡತಕ್ಕಂಥ ಒಂದು ವ್ಯವಸ್ಥೆ ಇದೆ. ಇನ್ನೊಂದು ಬಹಳ ಮುಖ್ಯವಾದುದು, ಸಹಕಾರ ಇಲಾಖೆಯದ್ದು, ಇದನ್ನು ತಾವು ಗಮನಿಸಬೇಕು. ಸಹಕಾರಿ ಕ್ಷೇತ್ರ ಎಂದರೆ ಒಂದು ಮಾರವಾಡಿ ಕ್ಷೇತ್ರ. ಬ್ಯಾಂಕುಗಳಿಂದ ಸಾಲ ತರುವುದು, ಬೆಳೆಯುವುದಕ್ಕೆ ಕೊಡುವುದು, ಬೆಳೆ ಬೆಳೆಯುವುದು, ಮತ್ತೆ ಕಟ್ಟುವುದು, ಮತ್ತೆ ತೆಗೆದುಕೊಂಡು ಹೋಗಿ ಕೊಡುವುದು. ರಿಸರ್ವ್ ಬ್ಯಾಂಕಿನಲ್ಲಿ ಒಂದು ಬಡ್ಡಿ, ಅಪೆಕ್ಸ್ ಬ್ಯಾಂಕಿನಲ್ಲಿ ಒಂದು ಬಡ್ಡಿ, ಆಮೇಲೆ ಡಿ.ಸಿ.ಸಿ. ಬ್ಯಾಂಕ್‌ಗೆ ಬಂದ ಮೇಲೆ ಒಂದು ಬಡ್ಡಿ, ನಮಗೆ ಅಲ್ಲಿಂದ ಎಷ್ಟು ಪರ್ಸೆಂಟೆಗೆ ಬಂತು, 3 ಪರ್ಸೆಂಟ್‌ಗೆ, ಅದು ಅಲ್ಲಿಂದ ಹೊರಟಿತು, ನಮಗೆ ತಲುಪುವ ಹೊತ್ತಿಗೆ 11 ಪರ್ಸೆಂಟ್ ಆಯಿತು. ಆದರೆ ಸಹಕಾರಿ ಕ್ಷೇತ್ರಗಳು ಕೇವಲ ಸಾಲ ಕೊಡತಕ್ಕಂಥ ಸಂಸ್ಥೆಗಳಿಲ್ಲ. ಅಭಿವೃದ್ಧಿ ಕ್ಷೇತ್ರಗಳಾಗಬೇಕು, ಉತ್ಪಾದನಾ ಕ್ಷೇತ್ರಗಳಾಗಬೇಕು. ಉದಾಹರಣೆಗೆ ನಾನು ಹೇಳುತ್ತೇನೆ, ನಮ್ಮ ಪಂಚಾಯಿತಿಯಲ್ಲಿ, ನಮ್ಮ ಸೊಸೈಟಿಯಲ್ಲಿ ಒಂದು ಕೋಟಿ ರೂಪಾಯಿ ಟರ್ನಓವರ್ ಆಯಿತು. ನೀವು ನಮ್ಮ ಪಂಚಾಯಿತಿಗೆ ಕೊಡುವುದು 2 ಲಕ್ಷದ 35 ಸಾವಿರ. ಉಳಿದ 20 ಲಕ್ಷ ರೂಪಾಯಿ ಧನವನ್ನು ನೀವು ಕೊಟ್ಟರೆ, ಸೊಸೈಟಿ ಬಂಡವಾಳವನ್ನು ಅವರೇ ಮಾಡುತ್ತೇವೆ ಎಂದು ಹೇಳಿದ್ದಾರೆ; ನೀವು 50 ಲಕ್ಷ ಮಾಡಿಕೊಳ್ಳಿ, ನಾವು 20 ಲಕ್ಷ ಕೊಡುತ್ತೇವೆ ಎಂದು ಹೇಳಿದ್ದಾರೆ; ನೀವು 50 ಲಕ್ಷ ಮಾಡಿಕೊಳ್ಳಿ, ನಾವು 20 ಲಕ್ಷ ಕೊಡುತ್ತೇವೆ ಎಂದರೆ 70 ಲಕ್ಷದಲ್ಲಿ ಬರತಕ್ಕಂಥ ಬಡ್ಡಿ, ಆ ಬಡ್ಡಿ ಪೂರ್ತಿ ಆ ಪಂಚಾಯಿತಿಗೆ ಹೋದರೆ ನೀವು ಇನ್ನೂ ನೂರು ವರ್ಷ, ಸರ್ಕಾರ ಇರುವ ತನಕ, ನಮ್ಮ ಇಡೀ ಪಂಚಾಯಿತಿಗೆ ಅಭಿವೃದ್ಧಿ ಹಣ ಕೊಡಬೇಕಾದ ಅವಶ್ಯಕತೆ ಇರುವುದಿಲ್ಲ. ಸಹಕಾರಿ ಕ್ಷೇತ್ರ ಅಭಿವೃದ್ಧಿ ಕ್ಷೇತ್ರ ಆಗಬೇಕು, ಸಹಕಾರಿ ಕ್ಷೇತ್ರ ಉತ್ಪಾದನಾ ಕ್ಷೇತ್ರ ಆಗಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಆ ವ್ಯವಸ್ಥೆಯನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಬಿ.ಡಿ.ಪಿ. ತೆಗೆದುಕೊಂಡು ನಿಮ್ಮ ನಿಮ್ಮ ಸೊಸೈಟಿ ಸ್ವಂತ ಬಂಡವಾಳದ ಮೇಲೆ ನಡೆಯಬೇಕು ಎನ್ನುವಂಥ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆಮೇಲೆ ಇನ್ನೊಂದು, ಸಹಕಾರಿ ಕ್ಷೇತ್ರಗಳು ಸಾಲ ಕಟ್ಟದೇ ಅಲ್ಲ ಮುಳುಗಿ ಹೋಗಿರುವುದು. ಸಾಲ ಗುಳುಂ ಮಾಡಿದ್ದಾರೆ. ಆ ಸಾಲವನ್ನು ಚೆನ್ನಾಗಿ ತಿಂದುಬಿಟ್ಟು ಸಾಲ ಕಟ್ಟಲಿಲ್ಲ ಎಂದು ರೈತರ ಮೇಲೆ ಹಾಕುತ್ತಾರೆ. 100ಕ್ಕೆ 60 ಪರ್ಸೆಂಟ್ ಸೊಸೈಟಿಗಳು ನಷ್ಟವಾಗಿರುವುದು ಸಾಲ ಕಟ್ಟದೇ ಇರುವುದರಿಂದ ಅಲ್ಲ. ಭ್ರಷ್ಟಾಚಾರದ ಮೂಲಕ ನಷ್ಟವಾಗಿದೆ. ಇನ್ನೂ ಬಹಳ ವಿಷಯಗಳಿದ್ದವು. ಆದರೆ ಅಧ್ಯಕ್ಷರು ನನ್ನನ್ನೇ ನೋಡುತ್ತಿರುವುದರಿಂದ ಹಾಗೂ ಬೇರೆಯವರಿಗೆ ಅವಕಾಶ ಮಾಡಿಕೊಡಿ ಎಂದು ಹೇಳಿರುವುದರಿಂದ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ಈ ಆಯವ್ಯಯವನ್ನು ತಾವು ಜವಾಬ್ದಾರಿಯುತವಾಗಿ ಮಂಡಿಸಿದ್ದೀರಿ, ಇದು ಚುನಾವಣಾ ಬಜೆಟ್. ಚುನಾವಣೆ

ಮುಗಿದ ಮೇಲೆ ತೆರಿಗೆಗಳ ರಾಶಿಯನ್ನು ಹಾಕಿಯೇ ಹಾಕುತ್ತೀರಿ. ಅದರಿಂದ ಅರ್ಥವ್ಯವಸ್ಥೆ ಅರ್ಥವಿಲ್ಲದ ಹಾಗಿದೆ ಇದು. ಅರ್ಥ ವ್ಯವಸ್ಥೆ ನಿಜವಾಗಲೂ ಸಂಪನ್ಮೂಲಗಳನ್ನು ಸ್ಥಳೀಯವಾಗಿ ಕ್ರೋಢೀಕರಿಸುವುದರಲ್ಲಿ ಬಹಳ ಜವಾಬ್ದಾರಿಯಿಂದ ನಿರ್ವಹಣೆ ಮಾಡಬೇಕು. ಇದರಲ್ಲಿ ತಾವು ಹಿಂದುಳಿದ್ದೀರಿ. ಇನ್ನೂ ಜವಾಬ್ದಾರಿಯಾಗಿ ನಿರ್ವಹಣೆ ಮಾಡಬೇಕು ಎಂದು ತಮಗೆ ಹೇಳುತ್ತಾ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ನಮಸ್ಕಾರ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಕಮರುಲ್ ಇಸ್ಲಾಂ. ಅವರೆಲ್ಲ ಒಬ್ಬರೊಬ್ಬರೇ ಇರುವ ಪಾರ್ಟಿ. ಅವರಿಗೆಲ್ಲಾ ಹತ್ತುತ್ತು ನಿಮಿಷ ಅಷ್ಟೇ. ಇವರು ಹತ್ತು ನಿಮಿಷ ಕೂಡ ಮಾತನಾಡುವುದಿಲ್ಲ. ಅವರು ಪಾರ್ಲಿಮೆಂಟಿಗೆ ಹೋಗುವ ಅರ್ಜೆಂಟಿನಲ್ಲಿದ್ದಾರೆ. ಬೇಗ ಮುಗಿಸಿಬಿಡುತ್ತಾರೆ.

+ SRI QUMARUL ISLAM (Gulbarga) : Mr. Speaker Sir, on 4th March,1996, the Budget for the year 1996-97 was presented to this Houseby the Hon. Minister for Finance. I found that lot of concesssions have been given and taxes have been reduced on many items. I am happy that the life-saving drugs have been exempted from the payment of any tax. I have gone through the entire Budget allocation to different sectors. When I saw this Budget, one thing agitated in my mind was that only Rs.6o crores have been allocated to Hyderbad-karnataka Area Development Board. I am representing that area since 1978 in this House. The people of that area were very much happy when they wre merged into the State of Karnataka during reorganisation of States in 1956. The people are agitating for the last 20 years for the development of Hyderbad-Karnataka area on par with other regions. Our area stands at 19-20 the place in terms of development. That area has remined backward in almost all the fields, such as, road conditions, school buildings, hostel conditions etc. For the first time in the year 1989 the Hyderabad-Karnataka Area Development Board was formed when Sri Veerendra patil was the Chief Minister consequent to the incessant agitation by the people of that area. Eversince its formation in 1989, the allocation to the said Board has never crossed beyond Rs.60 crores. I have gone through Dharam Singh Report and other

Reports. Why this Hyderabad-Karnataka Area Development Board was formed?. What was the purpose? The purpose was to bring the said area on par with other areas of our State. Even after a lapse of 6 years, during the 7th year, you have allotted just Rs.60 crores. In terms of development, Bellary stands at 17, Bidar at 20 and Gulbarga at 19 and Raichur at 18. Anyway Gulbarga, Raichur, Bidar and Bellary are in the bottom of the list in terms of development. What is the purpose of giving this money? What is the use if we have to remain at the same poeple as far as the overall development of the State is concerned. This is not a gesture you are giving. This is a commitment of the Government that there should be equal development of all the regions and equal justice to the people of that area on par with other regions. Take it for granted that for another 1o years also that area will remain the same as it is to-day. As far as Krishna Basin is concerned, we have to complete the project by 2000 AD to utilise our complete share of water. It requires more than Rs. 4000 crores for the completion of this project. You have raised bonds of Rs.180 crores under Krishna Jal Bhagya Nigam.

7.00 ಪಿ.ಎಂ

Very good. If you really have any interest that backward areas should also come up on part with the other regions, you should have a scheme for Hyderbad-Karnataka Development area. You are saying that you are spending thousands of crores to this area to bring this area on par with the other regions of the karnataka State. You should take it as a challenge and develop this area. If you do that, the people of that area will not forget you and your Goverment. There should be a concrete scheme for the upliftment and development of the area. Otherwise, if you go on giving Rs.60 crores or Rs. 70 crores every year, It will not serve any purpose. So, atleast in the next coming years, the Government should come out with concrete proposals. If the

Hyderbad-Karnataka area is compared with the other regions, you will find lot of difference. We just want to come on par with our elder brothers. We should not remain backward for ever. Atleast we want to come to 6th, 7th or 8th place, from double digit to single degit. This is a very important point which I wanted to highlight as far as Hyderabad-Karnataka backward area is concerned.

Sir, the second point which I wanted to bring to your notice is, in the Budget you have provided some money for the drinking water. Bangalore is becoming a megha city. This city should develop. We are very happy because it is the state capital. Two third MLA's are coming from rural areas and at the same time one-third MLAs of this House have come from urban areas. But there is no specific fund for that. You have already implemented the 74th Constitutional Amendment, by conducting Corporation elections, by conducting Municipal elections, and by conducting Town Municipal elections, and all that. What was the purpose of that 74th Amendment? Power had to be decentralised, after the elections of Mayors and Deputy Mayors. I was a member of the HUD Committee. This matter we have raised. We said that the Government is not interested to actually decentralise the power even after the elections. As per the 74th Amendment, in the Corporation there are 55 or 65 wards. It should have 4 or 5 larger wards and then the power should be given to the Chairman of that area and all that. The ward committees have come into existence but it seems that there is no interest on the part of the Government to form larger wards. If the wards are not going to be formed, then what is the purpose of decentralisation. The very life of the decentralisation will go. So, I want a categorical assurance that the 74th constitutional amendment will be implemented in full spirit and that there will be decentralisation of power and immediate direction will be issued to the Deputy Commissioners and Commissioners of Corporations to form bigger wards consisting of mini wards so as to

ensure decentralisation of power.

I am a member of the HUD Committee. I have come to know that Rs.80 crores has been provided. Sir, this Rs. 80 crores is not at all sufficient. It is learnt that Rs. 50 crores will be spent on the schemes of the rural areas and Rs. 30 crores will be spent on the scheme of the urban areas. In the HUD committee report, there is a separate recommendation. I come from Gulbarga Constituency. Sir, water to Gulbarga is coming from Krishna river. That has become the talk of India. Sir, your Government after coming to power last year, has spent some money. For the first phase, you have spent Rs. 26 Crores and it has been assured that there will be a remodelling of the pipes because water is coming from Bhima river to Gulbarga. But there is no distribution system. From the old system, the water is not reaching to the houses because the pipes are of smaller diameter and for that purpose over-head tanks are necessary. We have already recommended that there should be a Rs.30 crores scheme. Sir, I am happy that you have adopted the Maharashtra pattern. I have come to know that you are not going to charge for smaller town municipalities. This scheme, according to the Maharashtra pattern, which I have come to know, will cost Rs. 30 crores and out of that Rs. 30 crores, Rs. twenty crores will be from the institution and seven crores of rupees will be the contribution from the Government by wayof grant and Rs. three crores will be the share of the Corporation and Gulbarga Development Authority. Sir, this matter is pending before the Cabinet. Sir, I want an assurance that this scheme will be cleared in the Cabinet. If that is done, Sir, I assure that Rs. 1.5 crores from the Corporation and Rs. 1.5 crores from the Gulbarga Development Authority will be deposited. We will definitely give 1/3 share of that, that means Rs. 50 lakhswe will deposit that amount. I hope that Government will also provide Rs. 3 crores in this Buget. Now the matter is before the Cabinet and I hope that tht Government will announce here that it will be taken up. You

have taken up the scheme but there is no separate mention of it. I wanted that there should be a separate mention of it. The Government has to spend a minimum of Rs 2 or 2 ½crores. You have already spend Rs. 1.5 crores for the scarcity works but you are not spending that amount to the second phase. That amount will be spent on the pipelines and borewells. So, I wanted an assurance from the Government that this money will be spent on the second phase of the project. What I want is that there should not be duplicaiton and money should not be spent twice. I hope that the Cabinet sholl take a decision soon. This is a very sensitive issue as far as drinking water problem of Gulbarga is concerned, as far as the Corporation is concerned and as far as that constituency is concerned.

Sir, I want to speak on the Wakf Board also. My friend Sri. Roshan Baig is here. He is an young, dynamic Minister recently he has kind enough to increase the amount. But one thing I want to ask the Government in this House. The Wakf(Amendment) Act has come. All the previous Boards were nominated by the Government i.e., the members are nominated and among the Members, President was to be elected. This was discussed in the Parliment and throughout the country for the last 4-5 years. The Muslims of the country wanted that these Boards should not be of Muthavalli-oriented and the should be filled by the real representatives of the people. There should be some sort of elections. There shall be some sort of electoral college. With that purpose, in the last parliament this Bill was passed. It has become an Act and the President has already assented to it and it has now become an Act. But I am surprised why our dynamic Minister has not implemented it so far still those jumbo bodies are functioning in the districts like Gulbarga. I don't think in any community there are such big bodies with 60-65 people. It was done during the period of Congress-I, when Sri. Sagir Ahmed was the Minister. I gave him a suggestion but he was refuctant to aceept it. He was interested in the

jumbo bodies. I had suggested that good people be nomiated to these of their bodies political affiliations, or irrespective of their sects to which they belonged.

Mr.SPEAKER : What is the meaning of wakif?

SRI QAMARUL ISLAM : It means a land which has already been given in the name of the almighty Allah. That is called a wakf property. Aukaf is a Department. Wakif means a giver.

MR. SPEAKER : What do you call the Members?

SRI QAMARUL ISLAM : Rukun. Now the concept of this new Act.

ಶ್ರೀ ರೋಷನ್ ಬೇಗ್ : ಮಾನ್ಯ ಸದಸ್ಯರಾದ ಶ್ರೀ ಖಮರುಲ್ ಇಸ್ಲಾಂರವರು ಹೊಸ ವಕ್ಫ್ ಆಕ್ಟ್ ಬಗ್ಗೆ ಹೇಳಿದರು : Wakf Act of 1995 is applicable from 1st January 1996. We have received the details from the Government of India. We have appointed a 5 member committee and that 5 member committee has submitted a report. Now this subject will go before theCabinet and very soon it will be implemented.

SRI QAMARUL ISLAM : I thank the Hon'ble Minister for taking it very seriously.

ಅಧ್ಯಕ್ಷರು : ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ದೊಡ್ಡ ದೊಡ್ಡ ಊರುಗಳಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ನಿಮ್ಮ ವಕ್ಫ್ ಬೋರ್ಡ್ ಆಸ್ತಿ ಮತ್ತು ಮುಜರಾಯಿ ಆಸ್ತಿ ಎಲ್ಲವನ್ನೂ ಕೂಡ ದೇವರಲ್ಲಿ ನಂಬಿಕೆಯೇ ಇಲ್ಲದಂತಹವರು, ದೇವರ ಹೆಸರಿನಲ್ಲಿ ಧರ್ಮದರ್ಶಿಗಳಾಗಿ, ವಕ್ಫ್‌ಬೋರ್ಡ್ ರುಕುನ್‌ಗಳಾಗಿ ಎಲ್ಲಾ ಸ್ವಾಹಾ ಮಾಡಿಬಿಟ್ಟಿದ್ದಾರೆ.

SRI QUMARUL ISLAM : Yes. Sir. That is why now a very good handsome amount was given by the Hon'ble Minister.....

ಶ್ರೀ ಸಗೀರ್ ಅಹಮ್ಮದ್ : ಸನ್ಮಾನ್ಯ ಅಧ್ಯಕ್ಷರೆ, ಈ ಸಮಿತಿಗಳನ್ನು ರಚನೆ ಮಾಡುವಂಥ ಸಂದರ್ಭದಲ್ಲಿ ತಾವು ಹೇಳಿದಂಥ ವಿಚಾರಗಳ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಒಬ್ಬ ಮಂತ್ರಿಗಳಾಗಲಿ, ಸರ್ಕಾರವಾಗಲೀ ಗಮನ ಕೊಡಬೇಕಾಗುತ್ತದೆ. ಗಮನಕೊಟ್ಟರೂ ಸಹ ಕಾನೂನು ಅಡಚಣೆಯಿಂದಾಗಿ ಅನೇಕ ವಿಚಾರಗಳಲ್ಲಿ ನಾನು ಮಂತ್ರಿಯಾಗಿದ್ದಾಗಲೂ ಸಹ

ಆಗಿರುವಂಥ ಕೆಲವು ಪ್ರಕರಣಗಳು ಇವೊತ್ತು ನ್ಯಾಯಾಲಯಗಳಲ್ಲಿ ದಾಖಲು ಆಗಿರುವಂಥ ವಿಚಾರ ಇವೊತ್ತಿಗೂ ಯಶಸ್ವಿಯಾಗಲಿಕ್ಕೆ ಸಾಧ್ಯವಾಗಿಲ್ಲ.

ಅಧ್ಯಕ್ಷರು : ಅದು ಕಾನೂನು ಅಲ್ಲ, ರಾಜಕೀಯ ಮುಲಾಜು, ನಿರ್ಬಂಧಗಳು. ಅಲ್ಲಿ ಕಾನೂನು ಏನು ಅಡ್ಡಿ ಬರುತ್ತದೆ, ಒಳ್ಳೆಯವರನ್ನು ಧರ್ಮದರ್ಶಿಗಳನ್ನಾಗಿ ಮಾಡಿದರೆ.....

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ತಾವು ಹೇಳಿದ ಹಾಗೆ ಕೆಲವರು ಖಾತೆಗಳನ್ನು ಬದಲಾವಣೆ ಮಾಡಿಕೊಂಡು ಮಾಡಿರುವಂಥ ನಿದರ್ಶನಗಳು ಇದ್ದಾವೆ, ಇಲ್ಲ ಎಂದು ನಾನು ಹೇಳುವುದಿಲ್ಲ. ತಾವು ಹೇಳಿರುವಂಥದ್ದು ನೂರಕ್ಕೆ ನೂರು ಸತ್ಯವಾದಂಥ ವಿಚಾರ. ಮಾನ್ಯ ಸದಸ್ಯರು ಜಂಬೂ ಜೆಟ್ ರೀತಿಯಲ್ಲಿ ಇವೊತ್ತು ಸಮಿತಿಗಳನ್ನು ರಚನೆ ಮಾಡಿದ್ದಾರೆ. ಇವರಿಂದ ಏನು ಉಪಯೋಗ ಆಗುತ್ತದೆ, ಏನು ಉಪಯೋಗ ಆಗುವುದಿಲ್ಲ ಎಂದು ಹೇಳಿದರು. ವಕ್ಫ್ ಮಂಡಳಿಯಲ್ಲಿ ರಾಜಕೀಯವನ್ನು ಬಳಸಕೂಡದು ಎಂಬ ದೃಷ್ಟಿಯಿಂದ ಈ ಮುಸ್ಲಿಂ ಸಮುದಾಯದ ಅನೇಕ ಸದಸ್ಯರನ್ನು ಹೆಚ್ಚಿನ ಪ್ರಮಾಣದಲ್ಲಿ ಆ ಸಮಿತಿಗಳಿಗೆ ಹಾಕಿ ನಾವು ರಚನೆ ಮಾಡಿರುವಂತದ್ದು. ಆದರೆ ಈ ಹೊಸ ಕಾಯಿದೆಯಿಂದ ಜಾರಿಗೆ ಬಂದನಂತರ ಮಾನ್ಯ ಮಂತ್ರಿಗಳು ಈ ಕಾಯಿದೆಯು 1.1.96 ರಿಂದ ಜಾರಿಗೆ ಬಂದಿದೆ ಎಂದು ಹೇಳುತ್ತಾರೆ. ಅಲ್ಲಿಯವರಗೆ ತಾವು ಈ ಒಂದು ಅಧಿವೇಶನದಲ್ಲಿ ಆ ಸಮಿತಿಗಳನ್ನು ಬದಲಾವಣೆ ಮಾಡುವುದರ ಬಗ್ಗೆ ಏನಾದರೂ ಚಿಂತನೆ ಮಾಡಿದ್ದೀರೋ. ನಾನು ಏಕೆ ಈ ವಿಚಾರವನ್ನು ಹೇಳುತ್ತೇನೆ ಎಂದರೆ, ಆಗಲೇ ಸರ್ಕಾರದವರು ನಮ್ಮ ಉಚ್ಚನ್ಯಾಯಾಲಯದಲ್ಲಿ ಕೇವಿಯೆಟ್ ಅನ್ನು ಹಾಕಿದ್ದಾರೆ. ನಮ್ಮ ವಕ್ಫ್ ಮಂಡಲಿ ಏನಾಗುತ್ತದೋ ಎಂದು. ಆ ದೃಷ್ಟಿಯಿಂದ ಮಾನ್ಯ ವಕ್ಫ್ ಮಂತ್ರಿಗಳಲ್ಲಿ ನನ್ನ ಮನವಿಯೆನೆಂದರೆ, ಇವರ ಬಗ್ಗೆ ಏನಾದರೂ ಆಲೋಚನೆ ಮಾಡಿದ್ದೀರೋ ಅಥವಾ ಈ ಹೊಸ ಕಾನೂನು ಬರುವವರೆಗೂ ತಾವು ಹಾಗೆಯೇ ಸುಮ್ಮನೆ ಇರುತ್ತೀರೋ ಎಂಬ ಬಗ್ಗೆ ತಮ್ಮಿಂದ ಉತ್ತರ ಬೇಕು ಎಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

SRI QAMARUL ISLAM : Here, the hanchmen of the previous Government, had been dumped on these committees. This was going on whether it was your Government or earlier Governmment. Now the Parliament has amended the act. They say out of 13(instead of 11), two members will come from the MLAs & MLCs and there should be elections and there will be an electoral college irrespective of political affiliation. There will be a provision for two MPs. so, from the muslim MLAs and MPs, they will be four persons. From the BarCouncil among the muslim member, there will be one. Then there

will be two persons from leading educational societies. From religions societies there will be two theologists- One Sunni and Shia. Among them, there will be an election and these people will elect their President. This new system will work very well if the Hon'ble Minister takes pain in regard. Therefore, the existing body should be immediately superseded and a new administrator has to be appointed to conduct elections.

I want to congratulate the Hon'ble Minister and the Hon'ble Chief Minister also. There was a demand from the people and the Hajees. People are going for pilgrimage. Certain things which had happened, should be taken note of. We should not allow good things of the Government to go un noticed. Whether this Government or someother Government, whatever good things they have done, I have appreciated and I have criticised bad things. Being a real representative of the people, I would like to highlight the problem being faced by our people. Our people will have to go to Bombay to reach the place of pilgrimage. The people wanted that the embarkation should be at Bangalore. Andhra pradesh has also agreed to send their Haj pilgrims to Bangalore. So about 5000 Haj pilgrims will go during this year. No doubt the Hon'ble Central Minister Sri Gulam Nabi Azad was kind enough to help them but we have also put-forth our efforts in this regard. There was a function in this connection which I had an occasion to attend. In that meeting, the Hon'ble Chief Minister announced that he would agree to construct a Haj House in Mecca if the Government of Saudi Arabia gives permission. I remember, Sir, when Sri Gunduraoji was the Chief Minister, his ambition was also there. I think Sri Ibrahim was the Minister at that time. The then Chief Minister Mr.Gundurao also wanted to construct the Haj House in Mecca but the Government of Saudi has not permitted. Infact they don't permit anybody whether it is Pakistan, India or Bangalore. In Karnataka there was one Sadat House where in about Rs. 70 lakhs has

already been spent but there are litigations about this complex. The purpose was to have a Haj House in Bangalore. Because of the litigation, there is a problem. Now Haj piligrims will start going from this year. This year, temporary arrangemetns have already been made in schools and all that. The Hon'ble Finance Minister is here. Your ambition will be fulfilled. The Muslims of Karnataka were very happy when the Hon'ble Chief Minister Devegowdaji announced in the meeting held at Banquet Hall where Sri Gulam Nabi Azad Sab was also present, that he wanted to construct the Haj House in Mecca. Sir, we will assure you in this House, that myself, Mr. Sagir Sab and other Muslim leaders either on this side and that side, will give you 50% of the expenditure and the remaining 50% may be given by the Government. We will also give a wakf land. We request you to construct a Haj House in Bangalore which is free from any litigation and the construction work may be completed within 2 years. If this is done, your purpose will be served. This is one of the suggestions which I wanted to make, in this House, because we are very much eager to see that the ambition of our Hon'able Chief Minister will be fulfilled. Our Hon'ble Minister for Finance and the Hon'ble Minister for Wakfs were also present, at the function held in Banquet Hall. Our Hon'ble Speaker was also there. This is one of the suggestions which I am giving and I hope the Hon'ble Minister for Finance will take a decision in this regard. If this decision is taken, we will have a time-bound programme to construct it on a Wakf land. Plenty of wakf properties are available. Any property which is free from litigation, if it is given, it will be a very easy to take up the construction work.

Sir, I was speaking at length about the discrimination being shown between the urban poor and the rural poor. I am happy that this year the Government has not discriminated. They have said that the green cards will also be given to the Urban poor. We are happy. But this order has come about 4 months back. We have given many

telegrams. Two months are already over but the green cards have not been printed still. They have not been given. More than 10000 applications have already been collected. What I want is the speed with which your Government is announcing the schemes, with the same speed or double speed kindly implement it. Otherwise, the purpose will not be served. Whatever decision you are taking, you must be firm on the decision and see that it is implemented. You are kind enough to give some more amount as compared to the last year to the Minorities Development Corporation. The Secretary has under taken the tour. I am telling you in this House how the bad name will come. Up to 31st January 1996, the progress in the Development Corporation is only 10%. Only 10% of the beneficiaries who were targetted have been benefitted in the Minorities Development Corporation. Now you have given more money. I don't know the position after 31st January 1996. Sir, you have given money. What I want is that there should be a separate Director for it. Otherwise it will be very difficult. They are always clubbing the schemes. It it is separated, all the schemes can be implemented. I will be very happy if this decision is taken by the Govt. The SCs/STs are given cows to make them self employed. Sir, we are coming from Bidar and Gulbarga. Gulbarga is getting milk from Tumkur and Mysore. Here there is a scheme which has been very nicely implemented. I attended the fucntion of the SC/ST Development Corporation. They have given about 6000 cows to the beneficiaries and two cows are given initially and after some time they will be given another cow, so that they give milk to the milk dairy. I want to suggest that this scheme should be implemented through the Minorities Development Corporation also. This is a very good scheme. With these few words, I thank the Hon'ble Speaker for giving me this opportunity to speak and conclude.

MR. SPEAKER : Sri. Now Appacchu Ranjan to deliver his maiden speech.

7.30 ಪಿ.ಎಂ.

+ ಶ್ರೀ ಎಂ. ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಅಧ್ಯಕ್ಷರೆ, ಈ ಸಾರಿ ಈ ಆಯವ್ಯಯ ಪಟ್ಟಿಯನ್ನು ಏನು ಸರ್ಕಾರದವರು ಮಂಡಿಸಿದ್ದಾರೆ ಇವನ್ನು ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಈ ಆಯವ್ಯಯಪಟ್ಟಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಹೆಚ್ಚಿನ ರೀತಿಯಲ್ಲಿ ಮಾಡುವಂಥ ರೀತಿಯಲ್ಲಿ ಏನೂ ತಯಾರು ಮಾಡಿ ಮಂಡನೆ ಮಾಡಿಲ್ಲವೆಂದು ಹೇಳಬಯಸುತ್ತೇನೆ. ಕಳೆದಸಾರಿ ಆಯವ್ಯಯವನ್ನು ಮಂಡನೆ ಮಾಡಿದಾಗ ನಮ್ಮ ರಾಜ್ಯಸರ್ಕಾರದವರು 4 ಲಕ್ಷ ಅಂಗವಿಕಲರು ಸ್ವಯಂ ಉದ್ಯೋಗಕ್ಕೆ ಆಧಾರವಾದ ಯೋಜನೆಯನ್ನು ಜಾರಿಗೆತರಲು ಉದ್ದೇಶಿಸಿದ್ದಾರೆಂದು ಹೇಳಿದ್ದರು. ಅದರಲ್ಲಿ ಒಂದು ಸಾವಿರ ಸಣ್ಣ ಅಂಗಡಿಯನ್ನು ತೆರೆಯಲು ಸರ್ಕಾರ ಪ್ರತಿಯೊಬ್ಬರಿಗೂ 10 ಸಾವಿರ ರೂ.ನಂತೆ ನೀಡಲು ಉದ್ದೇಶಿಸಿದ್ದು ಅದಕ್ಕಾಗಿ ಒಂದು ಕೋಟಿ ರೂ.ಗಳನ್ನು ಮುಡುಪಾಗಿಟ್ಟಿದೆ ಎಂದು ಹೇಳಿದ್ದರು. ನನಗೆ ತಿಳಿದಂತೆ ನನ್ನ ಮತಕ್ಷೇತ್ರದಲ್ಲಿ ಯಾರಿಗೂ ಕೂಡ ಸಣ್ಣ ಅಂಗಡಿಗಳನ್ನು ಇಡುವ ಕೆಲಸ ಆಗಿಲ್ಲ.

(ಮಾನ್ಯ ಉಪಾಧ್ಯಕ್ಷರು ಶ್ರೀ ಎಂ.ಎಸ್. ಪಾಟೀಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಸಾರಿ ಕೂಡ ಅಂಗವಿಕಲರ ಕಲ್ಯಾಣಕ್ಕೋಸ್ಕರ ಸುಮಾರು ಒಂದು ಕೋಟಿ ರೂ. ಹಣವನ್ನು ಮೀಸಲಿಟ್ಟಿದ್ದೇವೆ ಮತ್ತು ಅಂಗವಿಕಲರಿಗೆ 5 ಸಾವಿರ ಟ್ರೈಸಿಕಲಗಳನ್ನು ತೆಗೆದುಕೊಂಡು ಸರ್ಕಾರ ಉದ್ದೇಶಿಸಿದೆ ಎಂದು ಮಾನ್ಯ ಅರ್ಥಮಂತ್ರಿಗಳು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ನನ್ನ ಈ ಪ್ರಶ್ನೆಗೆ ಉತ್ತರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಪ್ರಶ್ನೆ ಎಂದರೆ ಕಳೆದವರ್ಷ ಅಂಗವಿಕಲರಿಗೆ ಎಷ್ಟು ಸಣ್ಣ ಅಂಗಡಿಗಳನ್ನು ಕೊಟ್ಟಿದ್ದೀರಿ? ಈ ಬಾಬಿಗೆ ಎಷ್ಟು ಸಾವಿರ ರೂ.ಗಳನ್ನು ಖರ್ಚು ಮಾಡಿದ್ದೀರೆಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇದೇ ರೀತಿ ಆಶ್ರಯ ಯೋಜನೆ ಅಡಿಯಲ್ಲಿ ಡಾ|| ಅಂಬೇಡ್ಕರ ಯೋಜನೆ ಮತ್ತು ಇಂದಿರಾ ಅವಾಜ್ ಯೋಜನೆಗಳ ಅಡಿಯಲ್ಲಿ ಒಂದು ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದಿರಿ. ಈ ವರ್ಷ ಕೂಡ ನಾವು 3 ಯೋಜನೆಗಳನ್ನು ತೆಗೆದುಕೊಂಡು 1,26,244 ಮನೆಗಳನ್ನು ಕಟ್ಟಲು ಯೋಚಿಸಿದೆ ಎಂದು ಹೇಳಿದ್ದೀರಿ.

ಈ ಆಶ್ರಯ ಯೋಜನೆಯಲ್ಲಿ ಡಾ|| ಅಂಬೇಡ್ಕರ್ ಯೋಜನೆಯಲ್ಲಿ ನನ್ನ ಕ್ಷೇತ್ರದಲ್ಲಿ ಈ ಸರ್ಕಾರ ಬಂದ ಮೇಲೆ ಒಂದೇ ಒಂದು ಮನೆಯನ್ನು ಕಟ್ಟಿದ್ದು ಕೂಡ ಇಲ್ಲ. ಅದು ಇದ್ದರೆ ತಾವು ಅದನ್ನು ತಿಳಿಸಬೇಕು. ಅದೇ ರೀತಿ ಈ ಬಜೆಟನಲ್ಲಿ ಹೊಸ ಯೋಜನೆಯನ್ನು ಅಳವಡಿಸಿಕೊಂಡಿದ್ದಾರೆ. ಇದು ಬಹಳ ಒಳ್ಳೆಯ ಯೋಜನೆ ಎಂದು ಹೇಳಬಹುದು.

ಅದೇನೆಂದರೆ, ಸರ್ಕಾರ ಆಟೋರಿಕ್ಷಾ ಚಾಲಕರಿಗೆ ಅಪಘಾತ ಅದಾಗ ಪರಿಹಾರ ಕೊಡತಕ್ಕದ್ದು; 50 ಸಾವಿರ ರೂಪಾಯಿಗಳವರೆಗೆ ಕೊಡುತ್ತೇವೆಂದು ಬಜೆಟ್‌ನಲ್ಲಿ ತಿಳಿಸಿದ್ದಾರೆ. ಆದರೆ ಈ 50 ಸಾವಿರ ಯಾವುದಕ್ಕೂ ಸಾಕಾಗುವುದಿಲ್ಲ. ಇದನ್ನು ಒಂದು ಲಕ್ಷದವರೆಗೆ ಏರಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಅದರ ಜೊತೆಗೆ ನಮ್ಮ ದೇಶದಲ್ಲಿ ಏನು 70 ಪರ್ಸೆಂಟ್ ರೈತಾಪಿ ಜನರಿದ್ದಾರೆ ಅವರು ಇವತ್ತು ನಮ್ಮ ದೇಶದ ಅನ್ನದಾತರು ಎಂದರೆ ತಪ್ಪಾಗಲಾರದು. ಈ ರೈತರು ಆಕಸ್ಮಿಕವಾಗಿ ಅಪಘಾತಕ್ಕೆ ಒಳಪಟ್ಟು, ಹಾವು ಕಚ್ಚಿ ಸತ್ತಾಗ ಅವರಿಗೆ ಸರ್ಕಾರದಿಂದ ಯಾವುದೇ ಪರಿಹಾರ ಕೊಡುವ ಘೋಷಣೆಯನ್ನು ಸರ್ಕಾರ ಮಾಡಲಿಲ್ಲ. ನಾವು ನಮ್ಮ ಮುಖ್ಯಮಂತ್ರಿಗಳು ಮಣ್ಣಿನ ಮಗ, ರೈತರ ಪರವಾಗಿದ್ದಾರೆಂದು ಹೇಳಿಕೊಂಡು ಬಂದಿದ್ದೇವೆ. ಅದರ ಜೊತೆಗೆ ಅವರೂ ಕೂಡ ರೈತರಾಗಿದ್ದರೂ ಸಹ ರೈತರಿಗೆ ಯಾವುದೇ ಕೊಡುವ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲಿಲ್ಲ. ರೈತರಿಗೆ ಆಕಸ್ಮಿಕವಾಗಿ ಅಪಘಾತವಾದಾಗ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಅರಣ್ಯ ವಿಚಾರ. ಅರಣ್ಯ ವಿಚಾರಕ್ಕೆ ಬಂದಾಗ ತಾವು ಅರಣ್ಯದಲ್ಲಿ ಕಳ್ಳಕಾಕರನ್ನು ಮತ್ತು ದರೋಡೆಕೋರರನ್ನು ತಡೆಗಟ್ಟಲಿಕ್ಕೆ ಲಕ್ಷ ರೂಪಾಯಿ ಮೀಸಲಾತಿ ಇಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಇವತ್ತು ಅರಣ್ಯದಿಂದ ಬಂದಂಥ ಕಾಡುಪ್ರಾಣಿ ಏನಿದೆ ಆನೆ ಇರಬಹುದು, ಚಿರತೆ ಇರಬಹುದು, ಹುಲಿ ಇರಬಹುದು; ಅದರಿಂದ ರೈತರ ಆಸ್ತಿಪಾಸ್ತಿ ನಷ್ಟವಾದಾಗ ಅವರಿಗೆ ಪರಿಹಾರ ಕೊಡುವುದನ್ನು ಯಾವುದೇ ರೀತಿಯಿಂದ ಸರ್ಕಾರ ಅಳವಡಿಸಿಲ್ಲ ಮತ್ತು ಈ ಅರಣ್ಯವನ್ನು ಬೆಳಸುವಂತ ಸಂದರ್ಭದಲ್ಲಿ ಅರಣ್ಯದಲ್ಲಿ ಕಾಡುಪ್ರಾಣಿಗಳು ಏತಕ್ಕೆ ಊರಿಗೆ ಬರುತ್ತವೆ, ಕಾರಣ ಏನು ಇದನ್ನು ತಿಳಿದುಕೊಂಡು ಅರಣ್ಯವನ್ನು ಬೆಳೆಸಿದ್ದರೆ ಬಹಳ ಉತ್ತಮವಾಗುತ್ತದೆ. ಏಕೆಂದರೆ ಇವತ್ತು ಅರಣ್ಯದಲ್ಲಿ ನಮ್ಮ ಕೊಡಗಿಗೆ ಸಂಬಂಧಪಟ್ಟಂತೆ ತೆಗೆದುಕೊಂಡರೆ ಆನೆಗಳು ಊರಿಗೆ ಬಂದು ಮನೆಯೊಳಗೆ ನುಗ್ಗುವಂಥ ಪರಿಸ್ಥಿತಿಯಾಗಿದೆ. ಅರಣ್ಯದಲ್ಲಿ ತೇಗ, ಹೊನ್ನೆಯಂಥ ಮರಗಳನ್ನು ಬೆಳಸಿದ್ದರಿಂದ ಸಂದರ್ಭದಲ್ಲಿ ಹಲಸಿನ ಕಾಯಿ ಮಾವಿನ ಹಣ್ಣು ಈ ರೀತಿ ಏನು ಪ್ರಾಣಿಗಳಿಗೆ ಆಹಾರ ಸಿಗುತ್ತದೆ ಅಂಥಹ ಮರಗಳನ್ನು ಅರಣ್ಯದಲ್ಲಿ ಬೆಳಸಿ ಮಧ್ಯದಲ್ಲಿ ಕೆರೆ ಅಥವಾ ಹೊಂಡ ತೋಡಿ ಇಟ್ಟರೆ ಕಾಡುಪ್ರಾಣಿಗಳು ಊರಿಗೆ ಬರುವುದು ತಪ್ಪುತ್ತದೆ. ಅದರ ಜೊತೆಗೆ ರೈತರ ಬೆಳೆ ನಾಶವಾಗುವುದು ತಪ್ಪುತ್ತದೆ.

ಅದನ್ನು ತಾವು ಅಳವಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಕೊಡಗಿಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳು, ಏಕೆಂದರೆ ಬಜೆಟ್ ಮೇಲೆ ಎಲ್ಲರೂ ಮಾತನಾಡಿದ್ದನ್ನೇ ನಾನು ಹೇಳುವುದಕ್ಕೆ ತಯಾರಿಲ್ಲ. ಬಜೆಟನಲ್ಲಿ ಇನ್ನೊಂದು ವಿಚಾರ ಕೊಟ್ಟಿದ್ದಾರೆ. ಕೃಷಿ ಇಲಾಖೆಯಿಂದ ಗ್ರಾಮ ಪಂಚಾಯಿತಿಗೆ ಒಬ್ಬ ಕೃಷಿ ಸಹಾಯಕರನ್ನು ನೇಮಕ ಮಾಡುತ್ತೇವೆಂದು ಸರ್ಕಾರ ಹೇಳಿದೆ. ಅದು ಬಹಳ ಉತ್ತಮವಾದ ಕೆಲಸ. ಆದರೆ ಅದನ್ನು ಮಾಡುತ್ತಾರೆಂಬ ಭರವಸೆ ನನಗೆ ಕಾಣುತ್ತಿಲ್ಲ. ಕಾರಣವೇನೆಂದರೆ ಕಳೆದ ಸಾರಿ ತಾವು ಒಂದು ಗ್ರಾಮ

ಪಂಚಾಯಿತಿಗೆ ಒಬ್ಬರು ಕಾರ್ಯದರ್ಶಿ ಕೊಡಲು ಸರ್ಕಾರದಿಂದ ಸಾಧ್ಯವಾಗಲಿಲ್ಲ. ನನ್ನ ತಾಲ್ಲೂಕಿನಲ್ಲಿ 40 ಗ್ರಾಮ ಪಂಚಾಯಿತಿಗಳು ಇದ್ದರೆ ಕೇವಲ 30 ಜನ ಪಂಚಾಯಿತಿ ಕಾರ್ಯದರ್ಶಿಗಳು ಇದ್ದಾರೆ. ಆ ದೃಷ್ಟಿಯಿಂದ ತಾವು ಪಂಚಾಯಿತಿಗೆ ನೇಮಕ ಮಾಡಿ ರೈತರ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದರ ಜೊತಗೆ ಕಳೆದ ಸಾರಿ ಎಪಿಎಂಸಿಯಿಂದ 30 ಲಕ್ಷ ರೂಪಾಯಿ ಒಂದು ಕ್ಷೇತ್ರಕ್ಕೆ ರಸ್ತೆ ಮಾಡುವ ಸಲುವಾಗಿ ಕೊಡುತ್ತೇವೆಂದು ಸರ್ಕಾರ ಹೇಳಿತ್ತು. ಆದರೆ ನನ್ನ ಕ್ಷೇತ್ರ ಪ್ರತಿಯೊಬ್ಬ ಶಾಸಕರನ್ನು ಪತ್ರ ಮುಖೇನ ಕೇಳಿ ತಾವು ಯಾರ ರಸ್ತೆ ಮಾಡಬೇಕೆಂದು ಕಳುಹಿಸಿಕೊಡಿ ಎಂದು ತಿಲಿಸಿದರೂ ಕೂಡ ನನ್ನ ಕ್ಷೇತ್ರಕ್ಕೆ ಯಾವುದೇ ವಿಚಾರವನ್ನು ತಿಳಿಸಲಿಲ್ಲ. ನನ್ನ ಕೈಯಿಂದ ಯಾವುದೇ ರೀತಿಯ ಪ್ರೊಪೋಸಲ್ ಕೂಡ ತೆಗೆದುಕೊಂಡಿಲ್ಲ. ನನ್ನ ಎದುರಿಗೆ ಸೋತಂಥ ಅಭ್ಯರ್ಥಿ ಯಾರಿದ್ದಾರೆ ಅವರಿಂದ ಪತ್ರ ತೆಗೆದುಕೊಂಡು ಅವರಿಂದ ರೆಕಮಂಡೇಷನ್ ತೆಗೆದುಕೊಂಡು ಇವತ್ತು ಮಾಡುವ ಪರಿಸ್ಥಿತಿಗೆ ಸರ್ಕಾರದವರು ತಲುಪಿಸಿದ್ದಾರೆ. ಇದು ಆಗಬಾರದು. ಈ ರೀತಿ ಶಾಸಕರನ್ನು ಕಡಗಣಿಸಬಾರದೆಂದು ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇನೆ. ಇದರ ಜೊತೆಗೆ ಕಾಫಿ ವಿಚಾರ. ಕಳೆದ ಸಾರಿ ಕಾಫಿ ವಿಚಾರ ಬಂದಾಗ ಇವತ್ತು ಕಾಫಿಗೆ ಬಹಳ ರೇಟ್ ಇದೆ, ಆದುದರಿಂದ ಕಾಫಿಗೆ ಟ್ಯಾಕ್ಸ್ ಹಾಕುತ್ತೇವೆಂದು ಮಾನ್ಯ ಸಿದ್ದರಾಮಯ್ಯನವರು ಮತ್ತು ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಇವತ್ತು ಕಾಫಿಗೆ ಕೂಡ ರೇಟು ಕಡಿಮೆಯಾಗಿದೆ. ಹಾಗಿದ್ದಾಗ ಆ ಟ್ಯಾಕ್ಸ್‌ನ್ನು ಕಡಿಮೆ ಮಾಡುವುದು ಯಾವುದೂ ಸರ್ಕಾರದ ಮುಂದಿಲ್ಲ. ಕಾಫಿಗೆ ಬೆಲೆ ಕಡಿಮೆಯಾಗಿರುವುದರಿಂದ ತಾವು ತೆರಿಗೆಯನ್ನು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕಾವೇರಿ ನೀರಿನ ವಿಚಾರ. ಕಾವೇರಿ ನೀರಿನ ವಿಚಾರದಲ್ಲಿ ಇಡೀ ರಾಜ್ಯದಲ್ಲಿ ಅಲ್ಲ ಇಡೀ ದೇಶದಲ್ಲಿ ಒಂದು ಗೊಂದಲಮಯ ವಾತಾವರಣ ನಿರ್ಮಾಣವಾಯಿತು. ಇವತ್ತು ಕಾವೇರಿ ಏನು ಹುಟ್ಟಿ ಹರಿಯುತ್ತಿದೆ ಆ ಸ್ಥಳದಲ್ಲಿರತಕ್ಕ ದೇವಸ್ಥಾನಕ್ಕೆ ಸರ್ಕಾರ ಯಾವುದೇ ರೀತಿಯ ಹಣ ಹಾಕದೆ ಅದರ ಅಭಿವೃದ್ಧಿ ಕಾರ್ಯವನ್ನು ಮಾಡಲಿಲ್ಲ. ಆ ದೃಷ್ಟಿಯಿಂದ ಇದನ್ನು ಮನಸ್ಸಿನಲ್ಲಿಟ್ಟು ಕೊಂಡು ಮುಂದಿನ ಕಾವೇರಿ ದೇವಸ್ಥಾನದ ಹತ್ತಿರ ಒಂದು ಚೌಲ್ಟ್ರಿ ಕಟ್ಟುವುದು, ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಒಂದು ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇವತ್ತು ಹೇಳುವುದಾದರೆ ಸರ್ಕಾರಕ್ಕಿಂತ ಜಾಸ್ತಿ ತಮಿಳ್ನಾಡಿನ ಭಕ್ತರು ದಾನಗಳು ಯಾರಿದ್ದಾರೆ ಅವರು ಅಲ್ಲಿ ಹಣ ನಿಯೋಗಿಸಿದ್ದಾರೆ. ಸಾಧಾರಣ 20 ಲಕ್ಷ ರೂಪಾಯಿ ಖರ್ಚು ಮಾಡಿ ಚೌಲ್ಟ್ರಿ ಕಟ್ಟಿಸಿದ್ದಾರೆ. ಆದರೆ ನಮ್ಮ ಸರ್ಕಾರ ಯಾವುದೇ ಹಣವನ್ನು ಅಲ್ಲಿ ಕೊಡಲಿಲ್ಲ. ಸರ್ಕಾರ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹಾರಂಗಿ ಯೋಜನೆ. ಹಾರಂಗಿಯಲ್ಲಿ ಅಣೆಕಟ್ಟು ಕಟ್ಟಿ ನೀರು ಸರಬರಾಜಾಗುತ್ತಿದೆ. ಆದರೆ ಏನಾಗಿದೆ? ಅಣೆಕಟ್ಟು ಕಟ್ಟಿದ್ದರೂ ಕೂಡ ಕೊಡಗು ಮುಳುಗಡೆಯಾದರೂ ಕೂಡ ಕೊಡಗಿನ ಜನರಿಗೆ ನೀರು ಇಲ್ಲದಂತಾಗಿದೆ. ಕೊಡಗಿನ ಆಲೂರು ಸಿದ್ದಾಪುರ ಎಂಬ ಗ್ರಾಮದಲ್ಲಿ 15 ಸಾವಿರ ಎಕರೆಗೆ ನೀರಿಲ್ಲದ

ಬರಗಾಲದ ಪರಿಸ್ಥಿತಿಯಲ್ಲಿದ್ದಾರೆ. ಯಾವ ವರ್ಷ ಕೂಡ ಆ ಜಾಗ ಏನಿದೆ ಅಲ್ಲಿ ನೀರು ಬರುವುದಿಲ್ಲ. ಹಾರಂಗಿ ಅಣೆಕಟ್ಟಿನಿಂದ ಕೊಡಗಿನ ಫಲವತ್ತಾದ ಜಮೀನು ಮುಳುಗಡೆಯಾದರೂ ಕೊಡಗಿಗೆ ನೀರು ದೊರೆತಿಲ್ಲವೆಂಬುದು ಅಲ್ಲಿನ ಜನರ ಬೇಡಿಕೆ ಇದೆ. ಆದುದರಿಂದ ಮುಂದಿನ ದಿನಗಳಲ್ಲಿ ಏತ ನೀರಾವರಿ ಮಾಡಿ ಆಲೂರು ಸಿದ್ದಾಪುರ ಸುತ್ತಮುತ್ತ ಇರತಕ್ಕ ಗ್ರಾಮಗಳಿಗೆ ನೀರು ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾರಂಗಿ ಯೋಜನೆಯಿಂದ ಕೊಡಗಿಗೆ ಸಂಬಂಧಪಟ್ಟಂತೆ ನೀರು ಬರುವುದು ಕೇವಲ 2792 ಹೆಕ್ಟೇರಿಗೆ ಮಾತ್ರ. ಅರಕಲಗೂಡಿಗೆ 8935 ಹೆಕ್ಟೇರ್, ಕೆ.ಆರ್. ನಗರಕ್ಕೆ 12309 ಹೆಕ್ಟೇರ್, ಪಿರಿಯಾಪಟ್ಟಣಕ್ಕೆ 15423 ಹೆಕ್ಟೇರ್, ಹುಣಸೂರಿಗೆ 14079 ಹೆಕ್ಟೇರ್. ಇವತ್ತು ಕೊಡಗನ್ನು ಯಾವುದೇ ಸರ್ಕಾರ ಬಂದರೂ ಕೂಡ ಒಂದು ರೀತಿಯಲ್ಲಿ ಕಡೆಗಣಿಸಿದ್ದಾರೆಂದರೆ ತಪ್ಪಾಗಲಾರದು. ಕಾರಣವೇನೆಂದರೆ, ಕೊಡಗಿನಲ್ಲಿ ಸರಿಯಾದ ಕಾಲೇಜು ಇಲ್ಲ, ಇಂಜಿನಿಯರಿಂಗ್ ಕಾಲೇಜು ಇಲ್ಲ, ಮೆಡಿಕಲ್ ಕಾಲೇಜು ಇಲ್ಲ. ಕೊಡಗಿನಿಂದ ಸರ್ಕಾರಕ್ಕೆ ತುಂಬುವಂಥ ವರಮಾನ ಎಷ್ಟೆಂದರೆ ಸಾಧಾರಣ 260 ರಿಂದ 280 ಕೋಟಿ ರೂಪಾಯಿಗಳವರೆಗೆ ನಾವು ಕೊಡುತ್ತಿದ್ದೇವೆ. ಆದರೆ ನಮ್ಮ ಕೊಡಗಿಗೆ ನಾನ್ ಪ್ಲಾನ್ ಮತ್ತು ಪ್ಲಾನ್‌ನಿಂದ ಸೇರಿ ಬರುವಂಥ ಹಣ 43 ಕೋಟಿ ರೂಪಾಯಿಗಳು ಮಾತ್ರ. ಇವತ್ತು ರಸ್ತೆ ಅವಸ್ಥೆ ಏನಿದೆ ಎಂದರೆ, ಕೊಡಗಿನಲ್ಲಿ ಹೆಚ್ಚು ಮಳೆ ಬೀಳುತ್ತದೆ, ಹೆಚ್ಚು ಮಳೆ ಬೀಳುವುದರಿಂದ ಇತ್ತೀಚೆಗೆ ಮಾಡಿದಂಥ ರಸ್ತೆಗೆ ಒಂದು ಕಿಲೋಮೀಟರ್‌ಗೆ ಒಂದು ಲಕ್ಷದ 20 ಸಾವಿರ ರೂಪಾಯಿಗಳನ್ನು ಇಟ್ಟರೆ, ಆ ಹಣವನ್ನು ಅಲ್ಲಿ ಕೊಟ್ಟರೆ ರಸ್ತೆ ಕೆಲಸ ಸರಿಯಾಗಿ ಆಗುವುದಿಲ್ಲ. ಏಕೆಂದರೆ ಬಹಳ ಹೆಚ್ಚು ಮಳೆ ಬೀಳುತ್ತದೆ. ಇವತ್ತು 20 ಕಿಲೋಮೀಟರ್ ಕಾರಿನಲ್ಲಿ ಹೋಗಬೇಕಾದರೆ ಕನಿಷ್ಠ ಪಕ್ಷ ಅರ್ಧ ಗಂಟೆ ಬೇಕು. ಈ ಸ್ಥಿತಿಯಲ್ಲಿ ಕೊಡಗಿದೆ. ಇದನ್ನು ತಾವು ಮನಸ್ಸಿನಲ್ಲಿಟ್ಟುಕೊಂಡು ಕೊಡಗಿನ ವಿಚಾರ ಬಂದಾಗ ತಾವು ಹೆಚ್ಚು ಹಣ ಬಿಡುಗಡೆ ಮಾಡಿ ಇವತ್ತು ಏನು ಕೊಡಗಿನಲ್ಲಿ ಒಂದು ಕೂಗು ಕೇಳಿಬರುತ್ತಿದೆ ಸರ್ಕಾರಕ್ಕೆ ಕೂಡ ಈ ಕೂಗು ತಲುಪಿರಬಹುದು. ಕೊಡಗು ಬೇರೆ ರಾಜ್ಯ ಬೇಕು ಎಂದು. ಕಾರಣ ಏನೆಂದರೆ ಯಾವುದೇ ಸರ್ಕಾರ ಬಂದರೂ ಕೂಡ ಕೊಡಗನ್ನು ಕಡೆಗಾಣಿಸಿದ್ದಾರೆ. ಕೊಡಿಗಿಗೆ ಏನು ನಾವು ಕೇಳಿದ್ದೇವೆ? ರಸ್ತೆ, ಕಾಲೇಜು. ಇವನ್ನು ಯಾವುದೇ ಸರ್ಕಾರ ಇಷ್ಟರವರೆಗೆ ಮಾಡಿರುವುದಿಲ್ಲ. ಇದರಿಂದ ಈ ಕೂಗು ಕೇಳಿಬರುತ್ತಿದೆ. ನಾನೂ ಕೂಡ ಅದಕ್ಕೆ ಸಹಕಾರ ಕೊಡುವ ರೀತಿಯಲ್ಲಿ ತಾವು ಮಾಡಬೇಡಿ. ದಯವಿಟ್ಟು ತಾವು ಕೊಡಗಿನ ಮೇಲೆ ಕಾಳಜಿ ವಹಿಸಿ ಕೊಡಗಿನ ಜನತೆಯ ಕಷ್ಟವನ್ನು ಪರಿಹಾರ ಮಾಡಲಿಕ್ಕೆ ಸ್ಪಂದಿಸಬೇಕು ಈ ಸರ್ಕಾರ ಅಂತ ಹೇಳಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಕಳೆದ ಸಾರಿ ಅಕ್ರಮ ಸಾಗುವಳಿ ಮಾಡಿದ್ದನ್ನು ಸಕ್ರಮ ಮಾಡುತ್ತೇವೆ ಕಾಫಿ ತೋಟವನ್ನು ಎಂದು ಹೇಳಿದರು. ಆದರೆ ಇವತ್ತಿನವರೆಗೆ ಒಂದು ವರ್ಷವಾದರೂ ಕೂಡ ಯಾವುದೇ ಕಾಫಿ ತೋಟವನ್ನು ಸಕ್ರಮ ಮಾಡಲಿಲ್ಲ. ಫಾರಂ 50 ಕೊಟ್ಟಿದ್ದನ್ನು ಸಕ್ರಮ ಮಾಡುವಂಥದ್ದನ್ನು ಇವತ್ತೂ ಕೂಡ ಮಿಷ್ಟಿ ಎಂದು ಏನು ಕೊಟ್ಟಿದ್ದಾರೆ ಅದು ಕೊಡಗಿನಲ್ಲಿ ಯಾವುದೇ

ಪ್ರಯೋಜನಕ್ಕೆ ಬರುವುದಿಲ್ಲ. ಕಾರಣವೇನೆಂದರ ಕೊಡಗಿನಲ್ಲಿ ಹೆಚ್ಚಿಗೆ ಕಾಫಿ ಏಲಕ್ಕಿ ಬೆಳೆಸುವಂಥ ಜನರಿದ್ದಾರೆ. ಇವತ್ತು ಕೊಡಗಿನಲ್ಲಿ 16 ಸಾವಿರ ಅಪ್ಲಿಕೇಷನ್ಸ್ ಹಾಗೆ ಪೆಂಡಿಂಗ್ ಬಿದ್ದಿದೆ. ಇವತ್ತು ಅಕ್ರಮ ಸಕ್ರಮದಲ್ಲಿ ನಾವು ಕೂತು ಗ್ರಾಂಟ್ ಮಾಡಲಿಕ್ಕೆ ಹೋದರೂ ಕೂಡ ಕೇವಲ ಎರಡು ಸಾವಿರ ಅಪ್ಲಿಕೇಷನ್ ಮಾತ್ರ ಗ್ರಾಂಟ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಬಾಕಿಯುದನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಇವತ್ತು ಎಲ್ಲಿ ನೋಡಿದರೂ ಕೂಡ ಕಾಫಿ, ಏಲಕ್ಕಿಯನ್ನು ಹಾಕಿದ್ದಾರೆ. ಹೀಗಿದ್ದಾಗ ನಾವು ಅದನ್ನು ಗ್ರಾಂಟ್ ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದರೂ ಕೂಡ ಅದು ಆಗುವುದಿಲ್ಲ. ಕೈ ಬಿಸಿ ಮಾಡಿದರೆ ಮಾಡುವಂಥ ಪರಿಸ್ಥಿತಿ ಇದೆ. ಈ ತರಹ ಇದನ್ನು ತಾವು ಮಾಡಬೇಡಿ. ದಯವಿಟ್ಟು ಯಾವುದೇ ಜಾಗ ಇರಲಿ ಬಡವರಿಗೆ 5 ಎಕರೆವರೆಗೆ ಮುಫತ್ತಾಗಿ ಗ್ರಾಂಟ್ ಮಾಡುವುದಕ್ಕೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆ. ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಎಷ್ಟು ಬೆಲೆ ಬಾಳುವ ಮರಗಳಿರಬಹುದು ಎನ್ನುವ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ 5 ಕೋಟಿ ರೂಪಾಯಿ ಬೆಲೆ ಬಾಳುವ ಮರಗಳಿವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ತಾವು ದಯವಿಟ್ಟು ಕೊಡಗಿನಲ್ಲಿ ಏನು ಜಮ್ಮ, ಉಂಬಳಿ, ಪಟ್ಟೇಮನಿ ಜಾಗೀರು ಜಾಗಗಳು ಇವೆ ಅವರಲ್ಲಿ ಕೂಡ ನಮ್ಮ ರೈತರು ಬೆಳೆಸಿದಂಥ ಮರ ಏನಿದೆ ಅದನ್ನು ಕಡಿಯುವುದಕ್ಕೆ ಸರ್ಕಾರ ಅನುಮತಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಇವತ್ತು ಸರ್ಕಾರದಲ್ಲಿ ಜಮ್ಮ ಎಂದರೆ ಸರ್ಕಾರದ್ದು ಎಂಬ ನಿಲುವನ್ನು ಕಳೆದಸಾರಿ ತಾಳಿದ್ದರು. ಅದು ಬಹಳ ಶೋಚನೀಯವಾದ ಸಂಗತಿ. ಏಕೆಂದರೆ ಕಳೆದ ವರ್ಷದಲ್ಲಿ ಜಮ್ಮಾ ಅಂದರೆ ಅವರಿಗೆ ಒಂದು ಪ್ರೆಸ್ಟೀಜ್. ನಮಗೆ ಜಮ್ಮ ಇದೆ, ಕೊಡಗಿನವರು ನಾವು ಜಮ್ಮದವರು ಎಂದು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ಜನ ಬ್ರಿಟಿಷರ ಕಾಲದಲ್ಲಿ ಕೂಡ ತಮ್ಮ ರಿಡೀಮ್ ಜಾಗವನ್ನು ಕೂಡ ಜಮ್ಮವಾಗಿ ಪರಿವರ್ತನೆ ಮಾಡಿದ್ದಾರೆ. ಈಗ ಏನು ಮಾಡಿದೆ ಸರ್ಕಾರ, ಜಮ್ಮ ಅಂತ ಹೇಳುವುದೆಲ್ಲಾ ಸರ್ಕಾರದ್ದು ಎಂಬ ಮಾತನ್ನು ಕಳೆದ ಸಾರಿ ಹೇಳಿದ್ದಾರೆ. ತಾವು ಜಮ್ಮ, ಜಾಗೀರು, ಉಂಬಳಿ ಎಲ್ಲಾ ಒಂದೇ ರೀತಿಯಿಂದ ತಂದು ನಮಗೆ ಮರವನ್ನು ಕಡಿಯುವುದಕ್ಕೆ ತಾವು ಕಾಫಿ ತೋಟದಲ್ಲಾಗಲೀ ಬೇರೆ ಯಾವುದೇ ಜಾಗದಲ್ಲಾಗಲಿ, ಮರವನ್ನು ಕಡಿಯುವುದಕ್ಕೆ ರೈತರಿಗೆ ಅವಕಾಶ ಕೊಡಬೇಕೆಂದು ಹೇಳಿ.....

ಉಪಾಧ್ಯಕ್ಷರು : ಮುಗಿಸುತ್ತೀರಾ? ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಸ್ವಾಮಿ, ಒಂದು ವರ್ಷದಲ್ಲಿ ಒಂದೇ ಸಾರಿ ನಾನು ನಿಂತಿದ್ದೇನೆ. ತಾವು ಹೀಗೆ ಹೇಳಿದರೆ ನಾನೇನು ಮಾಡಲಿ? ನಾನು ನಮ್ಮ ಬಿ.ಜೆ.ಪಿ ಯವರನ್ನು ಕೇಳಿಕೊಂಡಿದ್ದೇನೆ; ನಮ್ಮ ವಿರೋಧಪಕ್ಷದ ನಾಯಕರನ್ನು ಕೇಳಿಕೊಂಡಿದ್ದೇನೆ; ಸಮಯ ಕೊಡಿ ಎಂದು ಅವಕ್ಕೆ ಅವರು ಒಪ್ಪಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಆದಷ್ಟು ಬೇಗ ಮುಗಿಸಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಈ ರೀತಿ ಮರವನ್ನೂ ಕೂಡ ಡಿಪ್ಪೋದಲ್ಲಿ ಆಕ್ಷನ್ ಮಾಡುವಂಥ ಪರಿಸ್ಥಿತಿ ಇಲ್ಲ. ಕಳೆದ ಸಾರಿ ಧರಣಿ ಮುಷ್ಕರ ಮಾಡಿ ಮರ ಡಿಪ್ಪೋದಿಂದ ಹರಾಜು ಆಗಲಿಲ್ಲ. ಈಗ ಉತ್ತರದಲ್ಲಿ ಕೊಟ್ಟಿದ್ದಾರೆ 14-3-95ರಲ್ಲಿ ನಾವು ಹರಾಜು ಮಾಡುತ್ತೇವೆ ಎಂದು. ತಾವು ದಯವಿಟ್ಟು ಅದಕ್ಕಿಂತ ಮುಂಚೆ ನಮಗೆ ಮರ ಕಡಿಯುವುದಕ್ಕೆ ಈ ಕಾಫಿ ತೋಟದಲ್ಲಿ ನೆರಳು ಹೆಚ್ಚಾದಾಗ, ಏಲಕ್ಕಿ ತೋಟ ಪೂರ್ತಿಯಾಗಿ ನಾಶವಾಗಿಬಿಟ್ಟಿದೆ. ಅದರಿಂದ ಇವತ್ತು ಕಾಫಿ ಗಿಡ ಹಾಕಬೇಕಾದರೆ ಮರ ಕಡಿದೇ ನಾವು ಕಾಫಿ ತೋಟ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಇದಕ್ಕೆ ಸ್ಪಂದಿಸಿ ಇದಕ್ಕೆ ತಾವು ಪರ್ಮಿಷನ್ ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಅರಣ್ಯ ಇಲಾಖೆಯವರು ಶ್ರೀಗಂಧ ಮರವನ್ನು ಕಳ್ಳಸಾಗಾಣಿಕೆ ಮಾಡಿದ್ದಂಥ ಮತ್ತೆ ಬೀಟೆ ಮರ ಕಳ್ಳಸಾಗಾಣಿಕೆ ಮಾಡಿದ್ದಂಥ ವಾಹನಗಳನ್ನು ಸರ್ಕಾರ ಎಷ್ಟು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಪ್ರಶ್ನೆ ಕೇಳಿದ್ದೆ. 1993-94ರಲ್ಲಿ 68 ವಾಹನಗಳನ್ನು 1994-95ರಲ್ಲಿ 69 ವಾಹನಗಳನ್ನು 1995-96ರಲ್ಲಿ 75 ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಬಂದಂಥ ಆದಾಯ ಎಷ್ಟು ಎಂದು ಕೇಳಿದಾಗ 1993-94ರಲ್ಲಿ 10,84,967 ರೂಪಾಯಿ ಎಂದು ಕೊಟ್ಟಿದ್ದಾರೆ. 1995-96ರಲ್ಲಿ 15,59,219 ರೂಪಾಯಿ ಎಂದು ಕೊಟ್ಟಿದ್ದಾರೆ. ನಿಜವಾಗಿಯೂ ಸ್ಮಗಲ್ ಮಾಡುವಂತ ವಾಹನಗಳು ಏನಿವೆ ಅರಣ್ಯದಲ್ಲಿ ಅದು ಯಾವುದೇ ಡಿಪಾರ್ಟ್‌ಮೆಂಟಿನ ವಾಹನಗಳಿಗಿಂತ ಚೆನ್ನಾಗಿರುತ್ತದೆ. ಡಿಪಾರ್ಟ್‌ಮೆಂಟಿಗಿಂತ ಚೆನ್ನಾಗಿರುವ ವೆಹಿಕಲ್‌ನಲ್ಲಿ ಅವರು ಸ್ಮಗ್ಲಿಂಗ್ ಮಾಡುತ್ತಾರೆ. ಆದರೆ ಅದನ್ನು ಸೀಜ್ ಮಾಡಿದ ಕೂಡಲೇ ಯಾವತ್ತು ಅದು ಫಾರೆಸ್ಟ್ ಇಲಾಖೆಯ ಕಸ್ಟಡಿಗೆ ಬರುತ್ತದೆ ಅಲ್ಲಿ ಅದು ಬಂದಕೂಡಲೇ ಮಾರನೆದಿವಸ ನೋಡಿದರೆ ಅದರಲ್ಲಿ ಟೈರ್ ಇರುವುದಿಲ್ಲ; ಬ್ಯಾಟರಿ ಇರುವುದಿಲ್ಲ. ಎಂಜಿನ್ ಇರುವುದಿಲ್ಲ. ಎಲ್ಲಾ ಕಳಚಿ ಮಾರುವಂಥ ಪರಿಸ್ಥಿತಿ. ಅದರ ಜೊತೆಗೆ ಯಾವುದಾದರೂ ಒಳ್ಳೆಒಳ್ಳೆಯ ಹೊಸ ಕಾರು ಬಂದರೆ ಅದನ್ನು ಯಾರಿಗೂ ತಿಳಿಯದೆ ಅಲ್ಲಿ ಆಕ್ಷನ್ ಮಾಡಿ ಮತ್ತೆ ಆಕ್ಷನನಲ್ಲಿಟ್ಟಿದ್ದೇವೆ ಎಂದು ತೋರಿಸುವಂಥ ಪದ್ಧತಿ ತಲುಪಿದೆ. ಇದರ ಬಗ್ಗೆ ಸರ್ಕಾರ ಬಹಳ ನಿಟ್ಟಿನಿಂದ ಕ್ರಮ ತೆಗೆದುಕೊಂಡರೆ ಇವತ್ತು ಕೋಟ್ಯಾಂತರ ರೂಪಾಯಿ ನಷ್ಟವಾಗುವಂಥ ಹಣವನ್ನು ತಡೆಗಟ್ಟಬಹುದು. ಇದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ನಾನು ಈ ಮೂಲಕ ಒತ್ತಾಯಿಸುತ್ತೇನೆ. ಮತ್ತೆ ಕೊಡಗಿನಲ್ಲಿ ಕಳೆದಸಾರಿ ಮಳೆಯ ಅಭಾವದಿಂದ ಅದರಲ್ಲೂ ಸೋಮವಾರಪೇಟೆ ತಾಲ್ಲೂಕಿನಲ್ಲಿ ಮಳೆ ಕಡಿಮೆಯಾಗಿರುವುದರಿಂದ ಕುಡಿಯುವ ನೀರಿನ ಹಾಹಾಕಾರ ಬಹಳಷ್ಟು ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಎಂದು ನಾನು ಕೇಳಿದ್ದೇನೆ. ಇದಕ್ಕೆ ಬಂದಿಲ್ಲ ಎಂದು ಉತ್ತರ ಬಂದಿದೆ. ತಾವು ದಯವಿಟ್ಟು ಇನ್ನು ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಹಣವನ್ನು ಬಿಡುಗಡೆ ಮಾಡುವಾಗ ಹೆಚ್ಚಿಗೆ ಇವತ್ತು ಏನು ಸೋಮವಾರಪೇಟೆ, ಶುಂಠಿಕೊಪ್ಪ, ಕುಶಾಲನಗರಕ್ಕೆ ನೀಡಬೇಕು. ಕೊಡ್ಲಿಪೇಟೆ ಗ್ರಾಮದಲ್ಲಿ ಗ್ರಾಮಪಂಚಾಯಿತಿಯ ಅಧ್ಯಕ್ಷ

ಸರ್ಕಾರದಲ್ಲಿ ಹಣ ಇಲ್ಲದ್ದಕ್ಕೆ 75 ಸಾವಿರ ರೂಪಾಯಿಗಳನ್ನು ಕೈಯಿಂದ ಹಾಕಿ ಇವತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ಈ ಸ್ಥಿತಿ ತಲುಪಿದೆ. ತಾವು ದಯವಿಟ್ಟು ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಕೊಡಗಿನ ಕುಡಿಯುವ ನೀರಿಗೆ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಕಳೆದ ಸಾರಿ ಸಹಕಾರ ಸಂಘದಲ್ಲಿ ಸಾಲ ತೆಗೆದುಕೊಂಡಿದ್ದಕ್ಕೆ ಸಾಲ ಕಟ್ಟಲಿಲ್ಲ ಎಂದು ಹೇಳಿ ಮನೆಯನ್ನು ಜಪ್ತಿ ಮಾಡಿದ್ದಾರೆ. ತಂದೆ ತೆಗೆದುಕೊಂಡ ಸಾಲಕ್ಕೆ ಮಗನ ಮನೆಯನ್ನು ಜಪ್ತಿ ಮಾಡಿದ್ದಾರೆ. ಸಹಕಾರ ಸಚಿವರು ಸ್ವಲ್ಪ ಈ ಕಡೆ ಕಿವಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಾಂತಳ್ಳಿಯಲ್ಲಿ ಕೆ.ಪಿ. ಗಣೇಶ ಎಂಬುವವರ ಮನೆಗೆ ಅವರ ತಂದೆ ಕೆ.ಎಸ್.ಪೂವಯ್ಯ ಎನ್ನುವವರು ಸಾಲ ಮಾಡಿದ್ದರಿಂದ ತಂದೆಯ ಸಾಲಕ್ಕೆ ಮಗ ಇಲ್ಲದಂಥ ಸಂದರ್ಭದಲ್ಲಿ ಮಗನ ಮನೆಗೆ ನುಗ್ಗಿ ಬೀಗ ಒಡೆದು ಅಲ್ಲಿದ್ದ ಪೆಟ್ಟಿಗೆಯನ್ನು ಒಡೆದು ಅಲ್ಲಿದ್ದಂಥ ಸಾಮಗ್ರಿಗಳನ್ನು ತರುವಂಥ ಪರಿಸ್ಥಿತಿಯಾಗಿದೆ. ಇದು ಒಂದು ರೀತಿಯಲ್ಲಿ ಸರ್ಕಾರ ಹಗಲು ದರೋಡೆ ಮಾಡುವಂಥ ಪರಿಸ್ಥಿತಿಯಾಗಿದೆ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ತಾವು ಇದನ್ನು ವಿಚಾರಣೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮತ್ತ ಈ ಸರ್ಕಾರ ಏನಾಗಿದೆಯೆಂದರೆ ಇವತ್ತು ಲಾ ಅಂಡ್ ಆರ್ಡರ್ ಬಗ್ಗೆ, ಕಳ್ಳರನ್ನು ಹಿಡಿಯುವುದು ಬಿಟ್ಟು ದರೋಡೆಕೋರರನ್ನು ಹಿಡಿಯುವುದು ಬಿಟ್ಟು ಇವತ್ತು ಶಾಸಕರ ಮೇಲೆ ಮೊಕದ್ದಮೆ ದಾಖಲು ಮಾಡುವುದರಲ್ಲಿ ಪ್ರಥಮ ಸ್ಥಾನದಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆಗೆ ನನ್ನ ಮೇಲೆ ನಾಲ್ಕು ಕೇಸು ದಾಖಲೆ ಮಾಡಿದ್ದಾರೆ. ಈ ಮನೆಯ ಸದಸ್ಯರಾದ ಮಾನ್ಯ ಸಭಾಪತಿಯವರ ಮೇಲೆ ಕೇಸ್ ದಾಖಲೆ ಮಾಡಿದ್ದಾರೆ. ಮಾನ್ಯ ಜಯರಾಮ್ ಶೆಟ್ಟಿಯವರ ಮೇಲೆ ಕೇಸ್ ದಾಖಲೆ ಮಾಡಿದ್ದಾರೆ. ಮಾನ್ಯ ಕುಂಬ್ಳೆ ಸುಂದರರಾವ್ ಅವರ ಮೇಲೆ ಕೇಸ್ ದಾಖಲೆ ಮಾಡಿದ್ದಾರೆ. ಒಂದು ರೀತಿ ಸರ್ಕಾರ ಶಾಸಕರು ಏನಿದ್ದಾರೆ ಅವರನ್ನು ಮಟ್ಟ ಹಾಕುವಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಇದು ಬಹಳ ದುರಾದೃಷ್ಟ. ಇದು ಆಗಬಾರದು. ಇನ್ನು ಮುಂದಾದರೂ ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಎಚ್ಚರ ವಹಿಸಬೇಕು ಎಂದು ಹೇಳಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನಗೆ ಇವತ್ತು ಇಷ್ಟು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಧನ್ಯವಾದಗಳು.

+ ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೇ, 1996-97ನೇ ಸಾಲಿನ ಆಯುವ್ಯಯಪತ್ರವನ್ನು ಮಂಡನೆ ಮಾಡಿರತಕ್ಕ ಸಂದರ್ಭದಲ್ಲಿ ಇದಕ್ಕೆ ನನ್ನ ಖೇದವನನು ವ್ಯಕ್ತಪಡಿಸುತ್ತಾ ತಮ್ಮ ಮುಖಾಂತರ ಕೆಲವು ಸಲಹೆ ಹಾಗೂ ಅನಿಸಿಕೆಗಳನ್ನು ಸರ್ಕಾರಕ್ಕೆ ಕೊಡಬೇಕೆಂದು ನಾನು ಭಾವಿಸಿದ್ದೇನೆ. ನಮ್ಮ ರಾಜ್ಯದಲ್ಲಿ ಸಂವಿಧಾನದ 74ನೇ ತಿದ್ದುಪಡಿ ಜಾರಿಯಲ್ಲಿ ಬಂದನಂತರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತಹ ಸಂದರ್ಭದಲ್ಲಿ ಕಾನೂನಿನ ಪ್ರಕಾರ ಚುನಾವಣೆ ನಡೆದ ನಂತರ ಪ್ರಥಮ ಬಾರಿಗೆ ಕರ್ನಾಟಕ

ರಾಜ್ಯಸರ್ಕಾರದ ಬಜೆಟನಲ್ಲಿ 60 ಕೋಟಿ ರೂಪಾಯಿ ಒದಗಿಸಕೊಡುವಂತಹ ಆಲೋಚನೆಯನ್ನು ಸರ್ಕಾರ ಮಾಡಿದೆ. ಇವತ್ತು ಅಧಿಕಾರ ವಿಕೇಂದ್ರಿಕರಣದ ವ್ಯವಸ್ಥೆಯಲ್ಲಿ ಇವತ್ತು ಚುನಾವಣೆ ನಡೆದಿರುವಂತಹ ಈ ಸಂದರ್ಭದಲ್ಲಿ ನಗರಸಭೆ ಮತ್ತು ಪುರಸಭೆಗಳಲ್ಲಿ ಆರ್ಥಿಕವಾಗಿ ಮುಗ್ಗಟ್ಟು ಇದ್ದಂತಹ ವಿಚಾರ ಸರ್ಕಾರಕ್ಕೆ ತಿಳಿದಿರತಕ್ಕದ್ದು. ಈ ಹಿಂದೆ ಚುನಾವಣೆ ನಡೆಯುವುದಕ್ಕಿಂತ ಮುಂಚೆ ಆಕ್ಟ್ರಾಯಿ ನಿಧಿಯಿಂದ ಸರ್ಕಾರ ವಿಶೇಷ ಅನುದಾನವೆಂದು ಅನೇಕ ಪುರಸಬೆ ಮತ್ತು ನಗರಸಭೆಗಳಿಗೆ ಹಣವನ್ನು ಬಿಡುಗಡೆ ಮಾಡಿರುವುದರಲ್ಲಿ ವಿಶೇಷ ಅನುದಾನವೆಂದು ದಿನಪತ್ರಿಕೆಗಳಲ್ಲಿ ಪ್ರಕಟವಾಯಿತು. ಆದರೆ ಆಕ್ಟ್ರಾಯಿ ಅನುದಾನದಲ್ಲಿ ಆ ಹಣವನ್ನು ಹಿಡಿದು ಕೊಂಡಿರುವ ವಿಚಾರವನ್ನು ಮಾನ್ಯ ಹಣಕಾಸಿನ ಸಚಿವರು ಈಗಾಗಲೇ ಒಪ್ಪಿಕೊಂಡಿದ್ದಾರೆ. 14 ಕೋಟಿ ರೂಪಾಯಿಯಷ್ಟು ಆಕ್ಟ್ರಾಯಿ ಅನುದಾನದಲ್ಲಿ ನಾವು ಬಿಡುಗಡೆ ಮಾಡಿದ್ದೇವೆ. 16 ಕೋಟಿ ರೂಪಾಯಿಯನ್ನು ವಿಶೇಷ ಅನುದಾನ ರೂಪದಲ್ಲಿ ನಗರಸಭೆ ಮತ್ತು ಪುರಸಭೆಗಳಿಗೆ ನಾನು ನೀಡಿದ್ದೇನೆಂದು ಆ ವಿಚಾರವನ್ನು ಆಗಲೇ ಒಪ್ಪಿಕೊಂಡಿದ್ದೀರಿ. ಇವತ್ತು ನಮ್ಮ ರಾಜ್ಯದಲ್ಲಿ 200 ಪುರಸಭೆ ಮತ್ತು ನಗರಸಭೆಗಳಿದ್ದು ಇವತ್ತು ಕರ್ನಾಟಕ ರಾಜ್ಯಸರ್ಕಾರ ಕೇವಲ ಹೊಸ ಕಾನೂನು ಜಾರಿಯಲ್ಲಿರುವಂತಹ ಸಂದರ್ಭದಲ್ಲಿ 60 ಕೋಟಿ ರೂಪಾಯಿಯನ್ನು ನಾವುವಿಶೇಷ ಅನುದಾನು ರೂಪದಲ್ಲಿ ಒದಗಿಸುತ್ತೇವೆಂದು ಇವತ್ತಿನ ಬಜೆಟನಲ್ಲಿ ಹೇಳುತ್ತಿದ್ದಾರೆ. ಮುಖ್ಯವಾದ ಬೇಡಿಕೆಗಳು ಮತ್ತು ಸಮಸ್ಯೆಗಳು ನಗರಸಭೆ ಮತ್ತು ಪುರಸಭೆಗಳಲ್ಲಿ ಏನಿವೆ ಅಂದರೆ, ಮೊದಲನೆಯದಾಗಿ 200 ನಗರಸಭೆ ಮತ್ತು ಪುರಸಭೆಗಳಲ್ಲಿಯೂ ಸಹ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗ ಇವತ್ತು ಸರ್ಕಾರ ಚಿಂತನೆ ಮಾಡಬೇಕಾಗಿದೆ. ಅದರ ಜೊತೆಗ ಇವತ್ತು ಒಳಚರಂಡಿ ವ್ಯವಸ್ಥೆಯ ಬಗ್ಗ ನಾವು ಅನೇಕ ಸುಧಾರಣೆಗಳನ್ನು ತರುವಂತಹವರ ಬಗ್ಗೆ ನಾವು ಬಹಳ ದೀರ್ಘವಾಗಿ ಆಲೋಚನೆ ಮಾಡಿದರೂ ಸಹ ಇವತ್ತು ಒಳಚರಂಡಿ ವ್ಯವಸ್ಥೆ ಯಾವ್ಯಾವ ಪಟ್ಟಣಗಳಲ್ಲಿ ಆಗಬೇಕೆನ್ನುವುದರ ಬಗ್ಗೆ ಸಮಗ್ರವಾದ ಒಂದು ಯೋಜನೆಯನ್ನು ನಾವು ತಯಾರು ಮಾಡಬೇಕಾಗುತ್ತದೆ. ಇವಕ್ಕೆ ವೆಚ್ಚವಾಗುವಂತಹ ಹಣವನ್ನೂ ಸಹ ನಾವು ಸಂಗ್ರಹಿಸಬೇಕಾಗುತ್ತದೆ. ಆದರೆ ಇದರ ಜೊತೆಗೆ ಈ ವ್ಯಾಪ್ತಿಯನ್ನು ಸರಹದ್ದನ್ನು ನಿಗದಿಪಡಿಸುವಂತಹ ಸಂದರ್ಭದಲ್ಲಿ ಅನೇಕ ಗ್ರಾಮಗಳನ್ನು ಸೇರಿಸಿ ಸರಹದ್ದನ್ನು ನಿಗದಿಪಡಿಸಿದ್ದಾರೆ. ಇದರಿಂದ ಪುರಸಭೆ ಮತ್ತು ನಗರಸಭೆಯ ವ್ಯಾಪ್ತಿಯೂ ಬಹಳ ವಿಸ್ತಾರವಾಗಿ ಆಗಿರುವುದರಿಂದ ಅನೇಕ ಕಡೆ ರಸ್ತೆ ಅಭಿವೃದ್ಧಿ ಮಾಡುವಂತಹದ್ದು, ಕುಡಿಯುವ ನೀರನ್ನು ಒದಗಿಸಿ ಕೊಡುವಂತಹದ್ದು ಬೀದಿ ದೀಪಗಳನ್ನು ಅಳವಡಿಸಿಕೊಡುವುದಕ್ಕಾಗಿ 1996-97ನೇ ಸಾಲಿನಲ್ಲಿ 60 ಕೋಟಿ ರೂಪಾಯಿಗಳನ್ನು ಒದಗಿಸಿರುವಂತಹ ಈ ಸಂದರ್ಭದಲ್ಲಿ ನನ್ನ ಲೆಕ್ಕಾಚಾರದಂತೆ ಪ್ರತಿ ನಗರಸಭೆ ಮತ್ತು ಪುರಸಭೆಗೆ 33 ಲಕ್ಷ ರೂಪಾಯಿಗಿಂತ ಜಾಸ್ತಿ ಹಣವನ್ನು ಇವರು ಕೊಡುವುದಕ್ಕೆ ಬರುವುದಿಲ್ಲ. ಇದು ಯಾವ ಮೂಲೆಗೆ ಸಾಲುತ್ತದೆನ್ನುವುದರ ಬಗ್ಗೆ ಇವತ್ತು ಚಿಂತನೆ ಮಾಡಬೇಕಾಗಿದೆ. ಇದರ ಜೊತೆಗೆ ನೈರ್ಮಲ್ಯವನ್ನು ಕಾಪಾಡಿಕೊಂಡು ಹೋಗುವುದರ ಬಗ್ಗ, ಇವತ್ತು ಪೌರ ಕಾರ್ಮಿಕರ ಸಂಖ್ಯೆ, ಬೆಂಗಳೂರಿನಂತಹ ಮಹಾನಗರ

ಪಾಲಿಕೆಯಿರಬಹುದು ಅಥವಾ ಬೇರೆ ಬೇರೆ ನಗರಸಭೆ ಮತ್ತು ಪುರಸಭೆಗಳಿರಬಹುದು. ಅನೇಕ ವರ್ಷಗಳಿಂದ ಪೌರ ಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಯಾವ ಸರ್ಕಾರಗಳೂ ಗಮನಕೊಟ್ಟಿಲ್ಲ. ಕಾರಣ ಏನೆಂದು ನನಗೂ ತಿಳಿದಿರುವಂತಹ ವಿಚಾರ. ಅನೇಕ ಪುರಸಭೆ ಮತ್ತು ನಗರಸಭೆಗಳಲ್ಲಿ ಇವತ್ತು ಆರ್ಥಿಕವಾಗಿ ಬಹಳ ಮುಗ್ಗಟ್ಟು ಇರುವುದರಿಂದ ಇದನ್ನು ನಾವು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಆದರೆ ಪುರಸಭೆ ಮತ್ತು ನಗರಸಭೆಗಳ ಸರಹದ್ದುಗಳು ಹೆಚ್ಚಾಗಿರುವುದರಿಂದ ಈವೊಂದು ನಗರಸಭಾ ಪುರಸಭಾ ವ್ಯಾಪ್ತಿಯಲ್ಲಿ ನೈರ್ಮಲ್ಯವನ್ನು ಕಾಪಾಡಿಕೊಂಡು ಹೋಗುವುದಕ್ಕಾಗಿ ಸರ್ಕಾರ ನಿರ್ದಿಷ್ಟವಾದಂತಹ ಮಾರ್ಗದರ್ಶನವನ್ನು ಈ ಪುರಸಭಾ ಮತ್ತು ನಗರಸಭಾಗಳಿಗೆ ನೀಡುವುದರ ಬಗ್ಗೆ ನಾನು ಸರ್ಕಾರದಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ನಾವು ಹೇಳುವಂತಹ ವಿಚಾರಗಳಲ್ಲಿ ಇಲ್ಲಿ ಅನೇಕ ಮಂತ್ರಿಗಳು ಇದ್ದಾರೆ. ನಾನು ಮಾತನಾಡುವಂತಹ ಇಲಾಖೆಯ ಮಂತ್ರಿಗಳು ಇಲ್ಲದಿದ್ದಾಗ, ಕೆಲವು ಗಂಭೀರವಾದಂತಹ ವಿಚಾರಗಳು ಬಂದಾಗ ಹಣಕಾಸಿನ ಮಂತ್ರಿಗಳು ಉತ್ತರ ಕೊಡುವ ಬಗ್ಗೆ ಅವರು ಬೆಳಿಗ್ಗೆಯಿಂದ ಕುಳಿತುಕೊಂಡು ತಯಾರಿ ನಡೆಸುತ್ತಿದ್ದಾರೆ. ಅವರಿಗೆ ನಾವೆಲ್ಲರೂ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಆದರೆ ಇತರ ಮಂತ್ರಿಗಳು ವಿಧಾನಪರಿಷತ್ತಿನ ಸಭೆ ಮುಗಿದ ನಂತರವೂ ಈ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಮಂತ್ರಿಗಳು ಈ ಮನೆಯಲ್ಲಿ ಹಾಜರಿ ಇರುವುದಿಲ್ಲವೆಂದು ಹೇಳಿದರೆ ನಾವು ನಮ್ಮ ಭಾಷಣವನ್ನು ತಮಗೆ ಹೇಳಬೇಕಾ ಅಥವಾ ಸಂಬಂಧಪಟ್ಟಂತಹ ಇಲಾಖೆಯ ಮಂತ್ರಿಗಳಿಗೆ ಹೇಳಬೇಕೋ ಎನ್ನುವ ಬಗ್ಗೆ ತಾವು ನನಗೆ ಒಂದು ಮಾರ್ಗದರ್ಶನ ನೀಡಬೇಕು.

ಶ್ರೀ ಸಿದ್ದರಾಮಯ್ಯ (ಆರ್ಥಿಕ, ಯೋಜನಾ ಸಚಿವರು) : ಅವರವರ ಇಲಾಖೆಗಳು ಬಂದಾಗ ಅವರು ಉತ್ತರ ಕೊಡುತ್ತಾರೆ. ಇದು ಬಜೆಟ್ ಮೇಲಿನ ಸಮಾನ ಚರ್ಚೆ ಇದಕ್ಕೆ ನಾನೇ ಉತ್ತರ ಕೊಡುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಾನು ಹೇಳತಕ್ಕ ಮಾಹಿತಿಗಳನ್ನು ಸಂಗ್ರಹಿಸಿ ಕೊಳ್ಳುವುದನ್ನು ಯಾರು ಮಾಡುತ್ತಾರೆ? ಮಾನ್ಯ ಅರ್ಥಮಂತ್ರಿಗಳು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆಂದರೆ ನಮಗೆ ಸಂತೋಷ. ಮುಖ್ಯವಾದ ವಿಚಾರವೆಂದರೆ ಇವತ್ತು ಅನೇಕ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಅನೇಕ ಗ್ರಾಮಪಂಚಾಯಿತಿಗಳು ರಚನೆಯಾಗಿವೆ. ಅವರಿಗೆ ಅಧಿಕಾರವನ್ನು ವಹಿಸಿಕೊಟ್ಟಿರುವ ಈ ಸಂದರ್ಭದಲ್ಲಿ ಪುರಸಭಾ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಆಯ್ಕೆಯಾಗಿ ಬಂದಿರುವಂತಹ ಗ್ರಾಮಪಂಚಾಯಿತಿ ಸದಸ್ಯರು, ಗ್ರಾಮಪಂಚಾಯಿತಿ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿಯ ಅಸ್ತಿತ್ವದ ಪ್ರಶ್ನೆ ಇಲ್ಲಿ ಬರುತ್ತದೆ. ಅನೇಕ ಗ್ರಾಮಗಳನ್ನು ತಾವು ಸೇರಿಸಿಕೊಂಡಿರುವುದರಿಂದ ಅವರು ಗ್ರಾಮಪಂಚಾಯಿತಿ ಸದಸ್ಯರಾಗಿ ಉಳಿಯುತ್ತಾರೋ- ಅಥವಾ ಅವರು ಆ ನಗರಸಭೆಗೆ ಹೋಗಿ ಆ ನಗರಸಭೆ ನಡೆಯುವಂತಹ ಸಭೆ

ಸಮಾರಂಭಗಳಲ್ಲಿ ಅವರು ಭಾಗವಹಿಸಬೇಕು ಎಂಬುದರ ಬಗ್ಗೆ ನಿರ್ದಿಷ್ಟವಾದ ಇವತ್ತಿನವರೆಗೂ ಸಹ ಸರ್ಕಾರದಿಂದ ಮಾಹಿತಿಯನ್ನು ಇದುವರೆಗೆ ಒದಗಿಸಿಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರದಿಂದ ನಿರ್ದಿಷ್ಟವಾದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಮುನಿಸಿಪಾಲಿಟಿ ಬಜೆಟ್ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಬಜೆಟ್ ಬಿಟ್ಟು ಮಾತನಾಡುತ್ತಿಲ್ಲ. ನನ್ನ ವಿಚಾರ ಏನೆಂದರೆ ಈ ಗ್ರಾಮಗಳಿಗೆ ಅಭಿವೃದ್ಧಿಗಾಗಿ ತಾವು ಕೊಟ್ಟಿರುವಂತಹ ಹಣ ಈ ಗ್ರಾಮಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಾಗುತ್ತದೆಯೋ ಎನ್ನುವಂತಹ ವಿಚಾರ. ಆಮೇಲೆ ಇನ್ನೊಂದು ಮುಖ್ಯವಾದ ವಿಚಾರ ಅಂದರೆ ಈ ಮನೆಯಲ್ಲಿ ಹಿಂದೆ ನಡೆದಿರುವಂತಹ ಅಧಿವೇಶನದಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದುದು. ಚಿಕ್ಕಮಗಳೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಗಾಗಿ 9 ಕೋಟಿ 75 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಯಗಚಿ ಜಲಾಶಯದಿಂದ ಕುಡಿಯುವ ನೀರನ್ನು ಒದಗಿಸಿ ಕೊಡುವ ಬಗ್ಗೆ ಸರ್ಕಾರ ನಿರ್ಣಯ ಮಾಡಿ ಸರ್ಕಾರ ಆದೇಶಗಳನ್ನು ಹೊರಡಿಸಿದ್ದರೂ ಸಹ ಚಿಕ್ಕಮಗಳೂರು ಮತ್ತು ಬೇಲೂರು ಪಟ್ಟಣಕ್ಕೆ ಜಾಕವೆಲ್ ಮತ್ತು ಇಂಟೇಕ್‌ವೆಲ್ ಅಂತ ಪ್ರಾರಂಭ ಮಾಡಬೇಕಾದ ಕೆಲಸ ಒಂದೂವರೆ ವರ್ಷಗಳಾದರೂ ಸಹ ಹಣ ಇದ್ದರೂ ಸಹ ಈ ಕೆಲಸ ಪ್ರಾರಂಭವಾಗದಿರುವುದಕ್ಕೆ ಕಾರಣವೇನು? ಈ ವಿಚಾರವನ್ನು ನಾನು ಹಿಂದಿನ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಹಿಂದಿನ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಹೋಮ್ ಮಿನಿಸ್ಟರ್ ಇಬ್ಬರೂ ಹೇಳಿದರೆ ಈ ಯೋಜನೆಯ ಕಾರ್ಯಪ್ರಾರಂಭ ಮಾಡುವುದಕ್ಕೆ ನಾವು ಬಹಳ ಆಸಕ್ತರಾಗಿದ್ದೇವೆ, ಸದ್ಯದಲ್ಲಿಯೇ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಸಹ ಕೊಟ್ಟರು. ಈ ವಿಚಾರವನ್ನು ನಮ್ಮಲ್ಲಿ ಆಶ್ವಾಸನೆ ಸಮಿತಿ ಇದೆಯಲ್ಲಾ ಅಲ್ಲೇನಾದರೂ ವಿಚಾರ ಮಾಡಬೇಕೋ ಅಥವಾ ಈ ಉಸ್ತುವಾರಿಯನ್ನು ನೋಡಿಕೊಳ್ಳುವಂತಹ ನಗರಾಭಿವೃದ್ಧಿ ಇಲಾಖೆಯ ಮಂತ್ರಿಗಳೂ ಇದಕ್ಕೆ ಸಮಂಜಸವಾದ ಉತ್ತರವನ್ನು ಕೊಡುತ್ತಾರೆಯೋ ಎಂದು ನಾನು ತಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳುತ್ತೇನೆ.

ಇನ್ನು ಮುಖ್ಯವಾಗಿ ಇವತ್ತು ನಗರಪ್ರದೇಶಗಳಲ್ಲಿ ಐಡಿಎಸ್ ಎಂಟಿ ಎಂದು ಹೇಳಿ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯೆಂದು ಹೇಳಿ ಕೇಂದ್ರ ಸರ್ಕಾರದಿಂದ ಶೇಕಡ 40 ರಷ್ಟು ಸಹಾಯಧನವನ್ನು ಒದಗಿಸಿಕೊಡುವಂತಹ ಸಂದರ್ಭದಲ್ಲಿ, ರಾಜ್ಯಸರ್ಕಾರದವರು ಶೇಕಡ 60 ರಷ್ಟು ಸಹಾಯಧನವನ್ನು ಒದಗಿಸಿಕೊಟ್ಟು ಆ ನಗರಸಭಾ ಮತ್ತು ಪುರಸಭೆಗಳ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ಸಾರಾಸಗಟಾಗಿ 685 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಇಟ್ಟಿದ್ದೇವೆಂದು ಹೇಳಿ ಮಾನ್ಯ ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇದರಿಂದ ಪುರಸಭೆ ಮತ್ತು ನಗರಸಭೆ ಆರ್ಥಿಕ ಸ್ಥಿತಿ ಉತ್ತಮವಾಗಿ ಆಗುವುದರಿಂದ ಈ ಯೋಜನೆಗೆ ಸರ್ಕಾರ ಪ್ರೋತ್ಸಾಹ ಕೊಡಬೇಕಾಗಿದೆಯೆಂದು ನಾನು ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು

ಮುಖ್ಯವಾದುದೆಂದರೆ, ನೆಹರೂ ರೋಜಗಾರ್ ಯೋಜನೆಯಡಿಯಲ್ಲಿ ಅನೇಕ ಬಡವರಿಗೆ ಆರ್ಥಿಕವಾಗಿ ಸಹಾಯ ನೀಡುವಂತೆ ಒಂದು ಕಾರ್ಯಕ್ರಮವನ್ನು ಕೇಂದ್ರಸರ್ಕಾರ ಹಾಗೂ ನಮ್ಮ ರಾಜ್ಯಸರ್ಕಾರ ರೂಪಿಸಿವೆ. ಇದರಿಂದ ಅನೇಕ ಜನ ಸಣ್ಣ ವ್ಯಾಪಾರಸ್ಥರಿಗೆ ಸಣ್ಣ ಸಣ್ಣ ಉದ್ಯೋಗ ಮಾಡುವವರಿಗೆ ಬಹಳಷ್ಟು ಅನುಕೂಲವಾಗುತ್ತದೆನ್ನುವ ರೀತಿಯಲ್ಲಿ ನಮ್ಮ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಇವತ್ತು ಯಶಸ್ವಿಯಾಗಿ ನಡೆಯುತ್ತಿಲ್ಲ.

8.00 ಪಿ.ಎಂ.

ಕಾರಣ ಏನೆಂದು ಹೇಳಿದರೆ ಇವತ್ತು ಸರ್ಕಾರದವರು ರಾಷ್ಟ್ರೀಕೃತ ಬ್ಯಾಂಕುಗಳ ಜೊತೆಗೆ ಸಮಾಲೋಚನೆ ನಡೆಸಿ ಈ ಹಣ ಆ ಬಡವರಿಗೆ, ಫಲಾನುಭವಿಗಳಿಗೆ ಒದಗಿಸಿಕೊಂಡುವಂತೆ ಕೆಲವು ಆದೇಶಗಳನ್ನು ಹೊರಡಿಸಬೇಕಾಗುತ್ತದೆ. ನೂರಕ್ಕೆ ನೂರು ರಾಜ್ಯದ ಎಲ್ಲಾ ನಗರಸಭೆಗಳಲ್ಲಿ, ಪುರಸಭೆಗಳಲ್ಲಿ ಯಶಸ್ವಿಯಾಗಿ ಈ ಕಾರ್ಯಕ್ರಮ ನಡೆಯುತ್ತಿಲ್ಲ. ಹಣಕಾಸು ಮಂತ್ರಿಗಳು ಇವತ್ತು ಈ ಬಜೆಟನ್ನು ಮಂಡನೆ ಮಾಡಿರುವಂಥ ಸಂದರ್ಭದಲ್ಲಿ ಇದಕ್ಕೂ ಸಹ ತಾವು ಪ್ರೋತ್ಸಾಹ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ.

ಇನ್ನು ಮುಖ್ಯವಾಗಿ ನಮ್ಮ ಜಿಲ್ಲಾ ಪಂಚಾಯತನಲ್ಲಿ ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮಪಂಚಾಯತಿಗಳಿಗೆ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಸಂಪೂರ್ಣ ಅಧಿಕಾರವನ್ನು ಚಲಾಯಿಸುವಂತೆ ಅವರಿಗೆ ನಿರ್ವಹಣೆ ಮಾಡುವಂಥ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ನನ್ನ ಮಿತ್ರರು ಮಾತನಾಡಿದ್ದಾರೆ. ಅನೇಕ ವಿಚಾರಗಳಿವೆ. ಕುಡಿಯುವ ನೀರಿನ ಅಭಾವ, ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ, ಕೊಳವೆಬಾವಿಗಳ ಸಮಸ್ಯೆ, ಇದಕ್ಕೆ ಬೇಕಾದಂಥ ಸಾಮಗ್ರಿಗಳ ಬಗ್ಗೆ ಸಹ ಬಹಳಷ್ಟು ಸಮಸ್ಯೆಗಳು ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿದೆ. ತಮ್ಮ ಗಮನಕ್ಕೆ ತರಬೇಕಾದ ಒಂದು ವಿಚಾರ ಎಂದರೆ, ಈ ನೀರಿನ ಒಂದು ಕೊರತೆಯನ್ನು ನಿವಾರಿಸುವುದಕ್ಕಾಗಿ ನಮ್ಮ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯವರು ಅನೇಕ ಕಿರುನೀರು ಸರಬರಾಜು ಹಾಗೂ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗಳನ್ನು ಹಮ್ಮಿಕೊಂಡಿರತಕ್ಕಂಥ ಸಂದರ್ಭದಲ್ಲಿ ನಾವು 168 ಲಕ್ಷ ರೂಪಾಯಿಗಳಷ್ಟು ಹಣವನ್ನು ಹೆಚ್ಚಾಗಿ ಖರ್ಚು ಮಾಡಿದ್ದೇವೆ. ಸರ್ಕಾರಕ್ಕೆ ನಮ್ಮ ಜಿಲ್ಲಾ ಪಂಚಾಯತ್ ವತಿಯಿಂದ ಈ ಹಣವನ್ನು ಒದಗಿಸಿಕೊಡುವಂತೆ ಬೇಡಿಕೆಯನ್ನು ಇಟ್ಟಿದ್ದೇವೆ. ಇದು ಸಾರ್ವಜನಿಕ ಹಿತದೃಷ್ಟಿಯಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಗ್ರಾಮಸ್ಥರು ಹಿತದೃಷ್ಟಿಯಿಂದ ಸರ್ಕಾರ ಈ ಹಣವನ್ನು ತುರ್ತಾಗಿ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುವುದರ ಜೊತೆಗೆ, ಮುಂದಿನ ದಿವಸಗಳಲ್ಲಿ ಬೇಸಿಗೆ ಕಾಲ ಪ್ರಾರಂಭವಾಗಿರತಕ್ಕಂಥ ಸಂದರ್ಭದಲ್ಲಿ ಏಕೆಂದರೆ ಇವತ್ತು ಈ ಮನೆಯಲ್ಲಿ ಕುಳಿತಿರುವಂಥ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೆ ಒಂದು ಅನುಮಾನ ಏನಿದೆ ಎಂದರೆ, ಪ್ರಕೃತಿ ನಮ್ಮ ಜೊತೆಗೆ ಸಹಕಾರ ಕೊಡುತ್ತದೆಯೋ ಇಲ್ಲವೋ ಎನ್ನುವಂಥ ಅನುಮಾನ ಈಗಾಗಲೇ

ಪ್ರಾರಂಭವಾಗಿದೆ. ಇದು ಅನುಮಾನ ಇದೆ. ವಿರೋಧ ಪಕ್ಷದಲ್ಲಿರುವಂಥ ನಮ್ಮಂಥ ಸದಸ್ಯರಿಗೂ ಸಹ ಈ ಅನುಮಾನ ಉಂಟಾಗಿರುವುದರಿಂದ, ಇವರ ಜೊತೆಗೆ ನಮ್ಮ ರಾಜ್ಯದ ರೈತರಿಗೂ ಕೂಡ ಅನುಮಾನ ಉಂಟಾಗಿರುವುದರಿಂದ ಈ ಕುಡಿಯುವ ನೀರಿನ ವ್ಯವಸ್ಥೆ ಇದು ಕೇವಲ ಚಿಕ್ಕಮಗಳೂರು ಜಿಲ್ಲೆಯ ವಿಚಾರ ಅಲ್ಲ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುವ ಸಂಭವ ಇರುವುದರಿಂದ ಮಾನ್ಯ ಹಣಕಾಸಿನ ಸಚಿವರು ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಎಂದರ, ಐ.ಆರ್.ಡಿ.ಪಿ. ಸಾಲ ಇದು ಕೇವಲ ಒಂದು ಜಿಲ್ಲೆಗೆ ಸಂಬಂಧಪಟ್ಟಂಥ ವಿಚಾರ ಅಲ್ಲ. ಅನೇಕ ಜಿಲ್ಲಾ ಪಂಚಾಯತಗಳಲ್ಲಿ ಈ ವಿಚಾರ ಪ್ರಸ್ತಾಪವಾಗಿ ಅನೇಕ ಕಡೆ ಚಿಂತನೆಯನ್ನು ಮಾಡುತ್ತಿದ್ದೇವೆ. ಐ.ಆರ್.ಡಿ.ಪಿ. ಸಾಲಗಳನ್ನು ಪಡೆಯುವಂಥ ಸಂದರ್ಭದಲ್ಲಿ ಸರ್ಕಾರದಿಂದ ಜಿಲ್ಲಾ ಪಂಚಾಯತಗೆ ಹಣ ಬಂದಿದ್ದರೂ ಸಹ ರಾಷ್ಟ್ರೀಕೃತ ಬ್ಯಾಂಕು ಗಮನಕ್ಕೆ ಬಂದಿದೆ. ನನಗೆ ತಿಳಿದ ಹಾಗೆ 4600 ಜನ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗಿರತಕ್ಕಂಥ ಸಂದರ್ಭದಲ್ಲಿ, ನಾವು ಈಗ ಮಾರ್ಚ್ ತಿಂಗಳಲ್ಲಿ ಇರುವಂಥ ಕಾಲದಲ್ಲಿ ನಮ್ಮಲ್ಲಿ 2800 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದೇವೆ. ಇನ್ನು ಉಳಿದಂಥ ಫಲಾನುಭವಿಗಳನ್ನು 31 ಮಾರ್ಚ 1996ರ ಒಳಗಡೆ ಆಯ್ಕೆ ಮಾಡುವುದಕ್ಕೆ ಸಾಧ್ಯವೆ? ಅವರಿಗೆ ಒದಗಿಸಿಕೊಡಬೇಕಾದಂಥ ಸಾಮಗ್ರಿಗಳಾಗಲೀ, ಅವರಿಗೆ ನೀಡಬೇಕಾದಂಥ ಹಣವಾಗಲೀ, ನೀಡುವುದಕ್ಕೆ ಮಾನ್ಯ ಮಂತ್ರಿಗಳು ಉತ್ಸಾಹದಿಂದ ಬಡವರಿಗೆ ಉಪಯೋಗವಾಗುವ ಒಂದು ಕಾರ್ಯಕ್ರಮದ ಯಶಸ್ವಿಗೆ ಸ್ವಲ್ಪ ಗಮನ ಕೊಡಬೇಕೆಂದು ಮಾನ್ಯ ಹಣಕಾಸಿನ ಸಚಿವರಲ್ಲಿ ವಿನಂತಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರ ಎಂದರೆ, ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಇವತ್ತು ಘೋಷಣೆ ಮಾಡಿದೆ. ನಮ್ಮ ಗೌರವಾನ್ವಿತ ಸದಸ್ಯರೊಬ್ಬರು ಪ್ರಸ್ತಾಪ ಮಾಡಿದಂತೆ, ಆರಾಧನಾ ಕಾರ್ಯಕ್ರಮ ಬಹಳ ಉತ್ತಮವಾಗಿ ಅನೇಕ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಈ ದೇವಾಲಯಗಳನ್ನು ಅಥವಾ ಸಮುದಾಯ ಭವನಗಳನ್ನು ನಿರ್ಮಿಸಿಕೊಡುವುದಕ್ಕೆ ಬಹಳ ಯೋಗ್ಯವಾದ ಕಾರ್ಯಕ್ರಮವಾಗಿ ನಡೆದಿತ್ತು. ಆದರೆ ಇಲ್ಲಿಯವರೆಗೆ ಈ ಸರ್ಕಾರದಿಂದ 1995-96ನೇ ಸಾಲಿನಲ್ಲಾದರೂ ಸಹ ಹಣ ಬಿಡುಗಡೆಯಾಗಿಲ್ಲ. ಈ ವಿಚಾರದಲ್ಲಿ ಮಾನ್ಯ ರವಿನ್ಯೂ ಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಿ ಇವಕ್ಕಾಗಿ ಹಣ ಬಿಡುಗಡೆಯಾಗಿಲ್ಲ, ಸಧ್ಯದಲ್ಲೇ ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ಕಾರ್ಯಕ್ರಮವನ್ನು ಮುಂದುವರೆಸುವುದಕ್ಕಾಗಿ ನಾನು ಮಾನ್ಯ ಹಣಕಾಸಿನ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಅನೇಕ ಧಾರ್ಮಿಕ ಸಂಸ್ಥೆಗಳಿಗೆ ಇದರಿಂದ ಬಹಳ ಅನುಕೂಲವಾಗಿರುವುದರಿಂದ ದಯಮಾಡಿ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಅವರನ್ನು ವಿನಂತಿಸಿಕೊಳ್ಳುವುದಕ್ಕೆ ಇಚ್ಛಿಸುತ್ತೇನ. ಇದರ ಜೊತೆಗ ಮಾನ್ಯ ಅಧ್ಯಕ್ಷರೇ,

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಬಗ್ಗೆ ಈಗ ಎಲ್ಲರಿಗೂ ತಿಳಿದಿರುವ ವಿಚಾರ. ಇದರಲ್ಲಿ ಮುಖ್ಯವಾಗಿ ಇರುವ ವಿಚಾರವೆಂದರೆ ಇರುವ ವಿದ್ಯುತ್ತನ್ನು ಕೊಡುವುದರಲ್ಲಿ ನಮ್ಮ ಸರ್ಕಾರ ಇರಲಿ, ಅವರ ಸರ್ಕಾರ ಇರಲಿ, ಅದರಲ್ಲೇ ಹಂಚಿಕೆ ಮಾಡಬೇಕಾದ ಸಂದರ್ಭ ಇದೆ. ಆದರೆ ಇವತ್ತು ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಾಮಗ್ರಿಗಳು ಇಲ್ಲ. ಅದರಲ್ಲಿ ಕಂಬ ಇರಬಹುದು, ವೈರ್ ಇರಬಹುದು, ಅದಕ್ಕೆ ನಮ್ಮ ಚಿಕ್ಕಮಗಳೂರು ಪಟ್ಟಣಕ್ಕೆ ಅಳವಡಿಸಿರುವಂಥ 60 ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ ವಿಚಾರದಲ್ಲಿ 40-45 ವರ್ಷಗಳು ಆಗಿಹೋಗಿದೆ. ಅನಂತರ ಸರ್ಕಾರದಲ್ಲಿ ಹೆಚ್ಚಿನ ಒಂದು 110 ಮೆಗಾವ್ಯಾಟ್ ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸುವುದಕ್ಕಾಗಿ 2 ಕೋಟಿ 35 ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಅಂದಾಜುಪಟ್ಟಿ ತಯಾರಾಗಿ ಇದನ್ನು ಅಳವಡಿಸುವುದರ ಬಗ್ಗೆ ಸರ್ಕಾರ ಇನ್ನೂ ನಿರ್ದಿಷ್ಟವಾಗಿ ನಿರ್ಣಯ ಮಾಡಿಲ್ಲ. ಇವತ್ತು ವಿದ್ಯುತ್ ಕಡಿತ ಇದ್ದರೂ ಸಹ ಅನೇಕ ಹಳ್ಳಿಗಳಲ್ಲಿ ವಿದ್ಯುತ್ ಇಲ್ಲದಂತಾಗಿದೆ. ಕಾರಣ ತಮಗೂ ಗೊತ್ತಿದೆ, ನನಗೂ ಗೊತ್ತಿದೆ. ಈ ದೃಷ್ಟಿಯಿಂದ ಚಿಕ್ಕಮಗಳೂರು ಪಟ್ಟಣ ಇನ್ನೂ ಬೆಳೆಯುತ್ತಿರುವುದರಿಂದ, ನಗರಸಭೆವ್ಯಾಪ್ತಿ ಬೆಳೆಯುತ್ತಿರುವುದರಿಂದ ಅಲ್ಲಿ ಒಂದು ಹೊಸ ಟ್ರಾನ್ಸಫಾರ್ಮರ್‌ನ್ನು ಅಳವಡಿಸುವುದರ ಬಗ್ಗೆ ತುರ್ತಿನ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಅನೇಕ ಜನಪರ ಕಾರ್ಯಕ್ರಮಗಳಲ್ಲಿ ಭಾಗ್ಯಜ್ಯೋತಿ ಇರಬಹುದು, ಜೊತೆಗೆ ಹರಿಜನ ಬಸದಿ ಇರಬಹುದು, ಅನೇಕ ವಿದ್ಯುದ್ದೀಕರಣವಾಗುವಂಥ ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದ ಅನೇಕ ಕಾಲೋನಿಗಳಲ್ಲಿ ಈ ವ್ಯವಸ್ಥೆಯಾಗಬೇಕಾಗಿದ್ದು ಬಹಳ ವಿಳಂಬವಾಗುತ್ತಿದೆ. ಇದಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ಆದ್ದರಿಂದ ಇವಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣ ಒದಗಿಸಿಕೊಡಲು ಮಾನ್ಯ ಹಣಕಾಸಿನ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಇನ್ನು ಮುಖ್ಯವಾದ ವಿಚಾರ ಎಂದರೆ, ಈಗ ಕರ್ನಾಟಕ ರಾಜ್ಯಸರ್ಕಾರದವರು 1996-97ನೇ ಸಾಲಿನಲ್ಲಿ ವಿದ್ಯಾ ಇಲಾಖೆಯ ವತಿಯಿಂದ 10 ಸಾವಿರ ಶಾಲಾ ಕೊಠಡಿಗಳನ್ನು ನಿರ್ಮಿಸುವುದಕ್ಕೆ ಅದರ ಅಂದಾಜುವೆಚ್ಚ ಹೆಚ್ಚಿಗೆ ಮಾಡಿ ಇವತ್ತು ನಿರ್ಮಿಸುವಂಥ ಕಾರ್ಯದಲ್ಲಿ ತೊಡಗಿದ್ದೇವೆ ಎಂದು ಹೇಳುತ್ತಾರೆ. ಆದರೆ ನಾನು ಇವತ್ತು ಮಾನ್ಯ ಹಣಕಾಸು ಸಚಿವರಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ತಾವು ಅಂದಾಜು ವೆಚ್ಚದಲ್ಲಿ ಈ ರಾಜ್ಯದಲ್ಲಿ ನಿರ್ಮಿಸುವಂಥ 10 ಸಾವಿರ ಕೊಠಡಿಗಳಿಗೆ ಜನರ ದುಡ್ಡನ್ನು ಹಾಕುವಂಥ ಯೋಜನೆಯನ್ನು ಹಾಕಿದ್ದೀರಿ. ಏಕೆಂದರೆ ಒಂದು ಅಂದಾಜುಪಟ್ಟಿ ತಯಾರಾದ ಸಂದರ್ಭದಲ್ಲಿ ಇದಕ್ಕೆ ರೂಫಿಂಗ್, ವಗೈರೆ ಹಾಕುವಂಥ ವುಡ್ ಮೆಟೀರಿಯಲ್ಸ್ ಏನಿದೆ, ಅದು ಜಂಗಲ್‌ವುಡ್ ಹಾಕುವುದಾಗಿ ತಾವು ಹೇಳುತ್ತಿದ್ದೀರಿ. ಇದನ್ನು ಮಾಡಿದ ಕೇವಲ ಆರು ತಿಂಗಳಲ್ಲಿ ಶಾಲೆಯ ಛಾವಣಿ ಬಿದ್ದುಹೋಗಿರುವಂಥ ಸಂದರ್ಭದಲ್ಲಿ ಅನೇಕ ಮಾನ್ಯ ಶಾಸಕರು ನೋಡಿದ್ದಾರೆ. ಆದ್ದರಿಂದ ಉನ್ನತಮಟ್ಟದ ಅಥವಾ ಒಳ್ಳೆಯ ಮರವನ್ನು ಹಾಕಿ ಶಾಲಾ ಕೊಠಡಿಗಳನ್ನು ನಿರ್ಮಿಸುವುದರ

ಬಗ್ಗೆ ತಾವು ಹೆಚ್ಚಿಗೆ ಹಣವನ್ನು ಇದಕ್ಕೆ ಕೊಡುವಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಏಕೆಂದರೆ, 45 ಸಾವಿರ ರೂಪಾಯಿಗಳನ್ನು ಪ್ರತಿ ಕೊಠಡಿಗೆ ಕೊಡುತ್ತೇವೆ ಎಂದು ಬಜೆಟ್ ಭಾಷಣದಲ್ಲಿ ಹಾಗೂ ಪುಸ್ತಕದಲ್ಲಿ ಹೇಳಿದ್ದೀರಿ. ಇದು ಒಳ್ಳೆ ಮರಮುಟ್ಟು ಉಪಯೋಗ ಮಾಡಬೇಕಾದ ಸಂದರ್ಭದಲ್ಲಿ ಇನ್ನೂ ಇದರ ವೆಚ್ಚ ಜಾಸ್ತಿಯಾಗುತ್ತದೆ. ಇದರ ಬಗ್ಗೆ ಚರ್ಚೆನಡೆಸಿ ತಾವು ಹೆಚ್ಚಿನ ಹಣವನ್ನು ಬಿಡುಗಡೆಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಮುಖ್ಯವಾಗಿ ನಮ್ಮ ಹರಿಜನ-ಗಿರಿಜನ ವಿದ್ಯಾರ್ಥಿನಿಲಯಗಳು. ಅನೇಕ ವರ್ಷಗಳಿಂದ ಇವರ ವಿದ್ಯಾಭ್ಯಾಸಕ್ಕಾಗಿ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ನಾವು ಇವತ್ತು ಹಮ್ಮಿಕೊಂಡಿದ್ದೇವೆ.

ವಿಶೇಷ ಹೇಳಿದರೆ, ಬೇರೆ ಬೇರೆ ಇಲಾಖೆಗಳಿಂದ, ಸಮವಸ್ತ್ರಗಳಾಗಲೀ, ಪೀಠೋಪಕರಣಗಳಾಗಲೀ, ಒದಗಿಸುವಂಥಾದ್ದರಲ್ಲಿ ಬಹಳ ಮುಂದೆ ಇರುತ್ತಾರೆ. ಆದರೆ, ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ, ಸಮವಸ್ತ್ರ ಕೊಡುವುದರಲ್ಲಿ ವಿಳಂಬವಾಗಿದೆ. ಇವತ್ತು ಚಿಕ್ಕಮಗಳೂರು ವಿಚಾರದಲ್ಲಿ ಮಾತ್ರ, ನಾನು ಮಾತನಾಡುವುದಾದರೆ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ಮಕ್ಕಳಿಗೆ ಇವತ್ತಿನವರೆಗೂ ನಾವು ಸಮವಸ್ತ್ರಗಳನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ. ನಾನು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಹಾಗೂ ಇಲ್ಲಿಯ ಅಧಿಕಾರಿಗಳನ್ನು ಕೇಳಿದಂಥ ಸಂದರ್ಭದಲ್ಲಿ ಸರ್ಕಾರದವರು ಇದರ ಬಗ್ಗೆ ನಿರ್ದಿಷ್ಟವಾಗಿ ನಿರ್ಣಯ ಮಾಡದೇ ಇರುವುದರಿಂದ, ಇದು ಇನ್ನೂ ವಿಳಂಬವಾಗುವ ಸಾಧ್ಯತೆಗಳು ಇದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ತುರ್ತಾಗಿ ಗಮನ ಕೊಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಇನ್ನು ಮುಖ್ಯವಾದಂಥ ವಿಚಾರ, ನಾವು ಅನೇಕ ಸಂದರ್ಭಗಳಲ್ಲಿ ಮಾತನಾಡುವಾಗ, ನಾವು ಬಹಳ ವಿಚಾರಗಳನ್ನು ಮಾತನಾಡುತ್ತೇವೆ. ರಾಜ್ಯದಲ್ಲಿ, ಅದು ಅಲ್ಪಸಂಖ್ಯಾತರರಿರಬಹುದು, ಹರಿಜನ ಗಿರಿಜನರು ಇರಬಹುದು, ಹಿಂದುಳಿದಂಥ ವರ್ಗದವರು ಇರಬಹುದು. ಬಹಳಷ್ಟು ಮಾತನಾಡುತ್ತೇವೆ. ನಾವು, ಅವರೂ ಎಲ್ಲರೂ ಸೇರಿ ಮಾತನಾಡುತ್ತೇವೆ. ಈ ರಾಜ್ಯದಲ್ಲಿ 2,965 ಉರ್ದು ಶಾಲೆಗಳು ಇವೆ. ಇವತ್ತು ಇವುಗಳ ಸ್ಥಿತಿಗತಿಗಳ ಬಗ್ಗೆ ನಾವು ಮಾತನಾಡುವುದಾದರೆ, ಅನೇಕ ಕಡೆ ಶಿಕ್ಷಕರಿಲ್ಲದಿರುವಂಥ ಶಾಲೆಗಳು ಇವೆ. ಇವತ್ತು ವಿದ್ಯಾಭ್ಯಾಸಕ್ಕೆ ಬರುವಂಥ ಮಕ್ಕಳ ಸಂಖ್ಯೆ, ಡ್ರಾಫ್ ಔಟ್ಸ್, ಪ್ರಾರಂಭದಲ್ಲಿ ಒಂದು ನೂರು ಜನ ಪ್ರಾಥಮಿಕ ಶಾಲೆಗೆ ಪ್ರವೇಶ ಮಾಡಿರುವಂಥ ಸಂದರ್ಭದಲ್ಲಿ, ಮಾಹೆ ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ನೋಡಿದಾಗ, 25 ರಿಂದ 30 ವಿದ್ಯಾರ್ಥಿಗಳು ಉಳಿಯುವಂಥ ಕಾಲ ನಾವು ನೋಡಿದ್ದೇವೆ. ಇದರ ಜೊತೆಗೆ, ಕನ್ನಡ ಶಿಕ್ಷಕರನ್ನು ಚುನಾಯಿತ ಪ್ರತಿನಿಧಿಗಳು ಎಂದು ನಾವು ಹೇಳುತ್ತೇವೆ. ಇವತ್ತು ಸರ್ಕಾರದಲ್ಲಿ ಉರ್ದು ಶಾಲೆಯ ಮಕ್ಕಳಿಗೆ, ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡುವಂತೆ ಒಬ್ಬ ಕನ್ನಡ ಶಿಕ್ಷಕರನ್ನು ನೇಮಿಸಿಕೊಡಿ ಎಂದು ಬೇಡಿಕೊಳ್ಳುತ್ತಿದ್ದರೂ ಸಹ, ಇವತ್ತು ಅಲ್ಪಸಂಖ್ಯಾತರ ಬಗ್ಗೆ ಹೊಗಳುವಂಥ ಸರ್ಕಾರಗಳು, ಅಲ್ಪಸಂಖ್ಯಾತರ ಬಗ್ಗೆ ಬಹಳ ಗೌರವ ಕೊಟ್ಟು

ಮಾತನಾಡುವ ಪ್ರತಿನಿಧಿಗಳು ನಮ್ಮ ಬೇಡಿಕೆಯನ್ನು ಇಲ್ಲಿಯವರೆಗೂ ಯಾವ ಸರ್ಕಾರದಲ್ಲೂ ಈಡೇರಿಸುವುದಕ್ಕೆ ಸಾಧ್ಯವಾಗಿಲ್ಲ. ಈ ವಿಚಾರ ಏಕೆ ಹೇಳುತ್ತಿದ್ದೇನೆಂದರೆ, ಚುನಾವಣೆ ನಡೆಯುವಂಥ ಸಂದರ್ಭದಲ್ಲಿ ಬಹಳ ಚೆನ್ನಾಗಿ ಹೇಳುತ್ತಾರೆ. ಏಕೆಂದರೆ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಅನೇಕ ಸಭೆ ಸಮಾರಂಭಗಳಲ್ಲಿ ಹೇಳಿದ್ದಾರೆ. ಅನೇಕ ವಿಚಾರಗಳು ಇವೆ, ತಾವು ನಮಗೆ ಕೊನೆಯಲ್ಲಿ ಸಮಯ ಕೊಡುವುದರಿಂದ, ನಾವು ಒಂದೊಂದು ಸಾರಿ ಬರೀ ಕುರ್ಚಿಗಳಿಗೆ ಮಾತನಾಡಬೇಕಾಗುತ್ತದೆ. ಅವರು ಏನು ಹೇಳುತ್ತಾರೆಂದರೆ, ನಾವು ಅಲ್ಪಸಂಖ್ಯಾತರಿಂದ ನಾವು ಈ ರಾಜ್ಯವನ್ನು, ಈ ಸರ್ಕಾರವನ್ನು ಕಟ್ಟಿದ್ದೇವೆ. ಈ ರೀತಿ ಅನೇಕ ಸಭೆ ಸಮಾರಂಭಗಳಲ್ಲಿ ಹೇಳುತ್ತಾರೆ. ಇವತ್ತು ನಮ್ಮ ಅನೇಕ ಮಿತ್ರರು ಹೇಳಿದ್ದಾರೆ. ನಮ್ಮ ಖಮರುಲ್ ಇಸ್ಲಾಂರವರು ಹೇಳುತ್ತಿದ್ದರು. ನಮಗೆ ಹಜ್ ಹೌಸ್ ಆಗಬೇಕು ಎಂಬುದಾಗಿ. ಇದು ರಾಜಕಾರಣಿಗಳಿಗೆ ಹೇಗಾಗುತ್ತೆಂದರೆ, ಜನಸಮುದಾಯ ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೋ, ಅವಾಗ ಏನು ಬೇಕಾಗದರೂ ಬಹಳ ಜೋರಾಗಿ ಹೇಳಿಬಿಡುತ್ತಾರೆ. ಮುಖ್ಯಮಂತ್ರಿಗಳು ಶಿವಾಜಿ ಮೈದಾನ ಎಂದೇನಿದೆ, ಸಣ್ಣ ಮೈದಾನದಲ್ಲಿ ಅವರಿಗೆ ಅಭಿನಂದನೆ ಸಲ್ಲಿಸಬೇಕಾದ ಸಂದರ್ಭದಲ್ಲಿ ಹೇಳಿದರು. ಈ ರಾಜ್ಯಕ್ಕೆ ಬೇಕಾದಂಥ ಒಂದು ಉರ್ದು ಹಾಲನ್ನು ನಾನು ನಿರ್ಮಿಸಿಕೊಡುತ್ತೇನೆಂದು ಬಹಿರಂಗವಾಗಿ ಹೇಳಿಕೆಮಾಡಿ ಬಂದುಬಿಟ್ಟರು. ಆದರೆ, ಇಲ್ಲಿಯವರೆಗೆ ಉರ್ದುನೂ ಇಲ್ಲ, ಕನ್ನಡಾನೂ ಇಲ್ಲ. ಈ ಸ್ಥಿತಿಯಲ್ಲಿ ಅಲ್ಪಸಂಖ್ಯಾತರ ಬಗ್ಗೆ ಎಷ್ಟು ಕಳಕಳಿ ಇದೆ ಎನ್ನುವುದರ ಬಗ್ಗೆ ಅಭಿಮಾನವುಳ್ಳಂಥ, ಕನ್ನಡದ ಬಗ್ಗೆ ಚಿಂತನೆ ಮಾಡುವಂಥ, ನಮ್ಮ ನಾಯಕರು ಹೇಳಿದ್ದಾರೆ. ಏಕೆಂದರೆ, ನಾಯಕರು ಒಪ್ಪಿಕೊಂಡಾಗಲೇ ಈ ಅವಕಾಶಗಳು ಸಿಗುವುದು. ಅವರು ಏನು ಹೇಳಿದ್ದಾರೆಂದರೆ, ನಮಗೆ ಗೌರವ ಬರಬೇಕು, ನಮ್ಮ ಪಕ್ಷಕ್ಕೆ ಗೌರವ ಬರಬೇಕು. ನೀನು ಮಾತನಾಡತಕ್ಕಂಥ ಸಂದರ್ಭದಲ್ಲಿ ನಿನಗೂ ಗೌರವ ಬರಬೇಕು. ಆ ರೀತಿಯಲ್ಲಿ ಮಾತನಾಡಬೇಕೆಂದು ನಿರ್ದೇಶನ ಕೊಟ್ಟಿರುವುದರಿಂದ, ನನಗೆ ಹೆಮ್ಮೆ ಇದೆ, ಅವರು ಕೇಳುವಂಥ ವಿಚಾರದಲ್ಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಿಮ್ಮ ಪಾರ್ಟಿಯಲ್ಲಿ ಚೀಫ್ ಮಿನಿಸ್ಟರನ್ನು ಮಾಡುವಾಗ, ಅವರಿಗೇ ಸಪೋರ್ಟ್ ಮಾಡಿ ಆದರೆ, ಇಲ್ಲಿ ಡಿಬೇಟ್ ಮಾಡುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮಲ್ಲಿ ಚೀಫ್ ಮಿನಿಸ್ಟರಾದಾಗ, ಸಿಂಧ್ಯಾರವರು ಈ ಕಡೆ ಬರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನೀವು ಚೀಫ್ ಮಿನಿಸ್ಟರ್ ಆಗುವ ಸಂದರ್ಭದಲ್ಲಿ ನಾನು ಖಂಡಿತವಾಗಿಯೂ ಸಪೋರ್ಟ್ ಮಾಡುತ್ತೇನೆ, ಅದರಲ್ಲೇನೂ ಡೌಟ್ ಇಟ್ಟುಕೊಳ್ಳಬೇಡಿ.

ಒಬ್ಬ ಮಾನ್ಯ ಸದಸ್ಯರು : ಜೋಪಾನವಾಗಿ ಹೇಳಿ, ನೋಟೀಸ್ ಗೀಟೀಸ್ ಕೊಟ್ಟಾರು ನಿಮಗೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ, ಸರ್ಕಾರದಲ್ಲಿ ನನ್ನ ಒಂದು ವಿನಂತಿ. ಏಕೆಂದರೆ, ಇವತ್ತು ಉರ್ದು ಶಾಲೆಗಳಲ್ಲಿ ಪ್ರವೇಶ ಮಾಡುವಂಥ ಮುಸ್ಲಿಂ ಸಮುದಾಯ ಮಕ್ಕಳು ಕನ್ನಡವನ್ನು ಕಲಿಯಬೇಕು, ನಮ್ಮದೇ ಆದಂಥ ರಾಜ್ಯದ ಭಾಷೆಯನ್ನು ಕಲಿಯಬೇಕು, ನಮ್ಮದೇ ಆದಂಥ ಮಾತೃಭಾಷೆಯನ್ನು ಕಲಿಯಬೇಕು. ಕನ್ನಡವನ್ನು ಬೆಳೆಸಬೇಕೆಂಬ ದೃಷ್ಟಿಯಿಂದ ಅನೇಕ ಮುಸ್ಲಿಂ ಸಮುದಾಯದ ಮಕ್ಕಳು ಇವತ್ತು ಕನ್ನಡ ಶಾಲೆಯನ್ನು ಸೇರುವಂಥ ಸಂದರ್ಭ ಇದೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಅನೇಕ ಕಡೆ ಉರ್ದು ಶಾಲೆಗಳು ಮುಚ್ಚಿಹೋಗುವ ಸಂಭವ ಇರುವುದರಿಂದ, ಸರ್ಕಾರ ಬಹಳ ಗಂಭೀರವಾಗಿ ಉರ್ದು ಶಾಲೆಗಳಲ್ಲಿ ತುರ್ತಾಗಿ ಕನ್ನಡ ಶಿಕ್ಷಕರನ್ನು ನೇಮಿಸಬೇಕು. ಇದು ತಾವು ಹೇಳಿರುವಂಥ ವಿಚಾರ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಮಾನ್ಯ ವೀರಪ್ಪಮೊಯಿಲಿಯವರ ಸರ್ಕಾರದಲ್ಲಿ ಸರ್ಕಾರಿ ಆದೇಶವಾಗಿರುತ್ತದೆ. ಉರ್ದು ಶಾಲೆಗಳಿಗೆ, ಅಡಿಷನಲ್ ಆಗಿ, ಕನ್ನಡ ಶಿಕ್ಷಕರನ್ನು ಕೊಡಬೇಕೆಂದು ಆಗಿದೆ. ಆದರೆ, ಅದು ಇಂಪ್ಲಿಮೆಂಟ್ ಆಗಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಮ್ಮ ಹಣಕಾಸಿನ ಮಂತ್ರಿಗಳು ಈಗ ಹೇಳಿದರು. ಏಕೆಂದರೆ ಎಲ್ಲಾ ಉತ್ತರ ಆ ಮಂತ್ರಿಗಳು ಕೊಡುತ್ತಾರೆ, ನನಗೂ ಸ್ವಲ್ಪ ಅರಿವಿದೆ, ತಾವು ಕುಳಿತಿರುವಂಥ ಜಾಗದಲ್ಲಿ ನಾವೂ ಕುಳಿತಿದ್ದೇವೆ. ನಾವು ಏನೇನು ಮಾಡಿದ್ದೇವೆ ಎಂಬುದೂ ನನಗೆ ಗೊತ್ತಿದೆ, ನೀವು ಏನೇನು ಮಾಡುತ್ತೀದ್ದೀರಿ ಎಂಬುದರ ಬಗ್ಗೆಯೂ ನನಗೆ ತಿಳುವಳಿಕೆ ಇದೆ. ಆದರೆ, ಇಂತಹ ಸಂದರ್ಭ, ಅವಕಾಶಗಳು ಸಿಕ್ಕಿದಾಗ ಹೇಳಿಕೊಳ್ಳುತ್ತೇವೆ, ಅಷ್ಟೆ. ಏನು ಮಾಡಿದ್ದೀರಿ, ಸರ್ಕಾರಿ ಆದೇಶ ಎಂದರೆ, ಈಗ ಗಂಟೆ ನಿಗದಿಪಡಿಸಿದ್ದೇವೆ. 12 ಗಂಟೆ ವಿದ್ಯಾಭ್ಯಾಸ ಮಾಡುವಂಥ ಒಂದು ಉರ್ದು ಶಾಲೆಯಲ್ಲಿ, 1ನೇ ತರಗತಿಯಿಂದ 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡುವಂಥ ವಿದ್ಯಾರ್ಥಿಗಳಿಗೆ, ಪ್ರತಿ ದಿನ ಒಂದು ಗಂಟೆ ಒಬ್ಬ ಕನ್ನಡ ಶಿಕ್ಷಕರು ಹೋಗಿ ಪಾಠ ಹೇಳತಕ್ಕಂತಾದ್ದು ಎಂದು ಮಾಡಿದ್ದೇವೆ. ನಾವು ಹೇಳುತ್ತೇವೆ, ಇವತ್ತು ಕನ್ನಡ ಶಾಲೆಗಳಲ್ಲಿಯೇ ಶಿಕ್ಷಕರು ಇಲ್ಲ. ಹೋದವರ್ಷ ತಾವೇನು ಹೇಳಿದ್ದೀರಿ. ಬಜೆಟ್ ಅನುಮೋದನೆ ಪಡೆಯಬೇಕಾದ ಸಂದರ್ಭದಲ್ಲಿ. ನಾವು 18 ಸಾವಿರ ಶಿಕ್ಷಕರನ್ನು ನೇಮಿಸುತ್ತೇವೆಂದು ಹೇಳಿದಿರಿ. ಒಂದು ವರ್ಷವಾದ ಮೇಲೆ ನೀವು ನೇಮಿಸಿರುವುದು ಎಷ್ಟು ಎಂದರೆ, 9,630 ನೇಮಿಸಿದ್ದೀರಿ. ಇನ್ನು ಉಳಿದುದನ್ನು ಈ ವರ್ಷ ನೇಮಿಸುತ್ತೇವೆಂದು ಹೇಳಿದಿರಿ. ನೀವು ಪೂರ್ತಿ ನೇಮಿಸುವವರೆಗೆ ಮತ್ತೆ 18 ಸಾವಿರ ಅಂಕಿಸಂಖ್ಯೆಗಳಾಗಿವೆ. 1996-97ನೇ ಸಾಲಿನಲ್ಲಿ ಮತ್ತೆ 18 ಸಾವಿರ ಹುದ್ದೆಗಳಾಗಿವೆ. ಆದುದರಿಂದ, ನಾನೇನು ಹೇಳುತ್ತೇನೆಂದರೆ, ಉರ್ದು ಶಾಲೆಗಳಿಗೆ, ಕನ್ನಡ ಶಿಕ್ಷಕರನ್ನು ನೇಮಿಸುವ ಕೆಲಸವನ್ನು ತಾವು ದಯಮಾಡಿ ಮಾಡಬೇಕು.....

ಶ್ರೀ ಎಂ. ವರದೇಗೌಡ : ನಿಮ್ಮ ಕಾಲದಲ್ಲಿ ಎಷ್ಟು ಜನ ಶಿಕ್ಷಕರನ್ನು ನೇಮಿಸಿದಿರಿ....

ಶ್ರೀ ಸಿ.ಆರ್. ಸಗೀರ್ ಅಹಮದ್ : ನಾನು ಹೇಳಿದೆನಲ್ಲಾ ಪ್ರತಿದಿನ ಒಂದು ಗಂಟೆ ಒಬ್ಬ ಕನ್ನಡ ಶಿಕ್ಷಕರನ್ನ ಫಿಕ್ಸ್ ಮಾಡಿದ್ದೇವೆ. ಅದಕ್ಕೆ ನಾನು ಒಪ್ಪಿಕೊಂಡೆ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ 36 ಸಾವಿರ ಜನ ಶಿಕ್ಷಕರನ್ನು ನೇಮಕ ಮಾಡಿದ್ದೇವೆ. ಯಾವುಯಾವುದಕ್ಕೆ ಎಂದು ಕೇಳಿ, ಹೇಳುತ್ತೇವೆ. ಟೋಟಲ್ ನಿಮಗೆ ಬೇಕೆಂದರೆ, ಯಾವಾಗ, ಯಾವಾಗ ಎಷ್ಟು ಜನ ನೇಮಿಸಲಾಗಿದೆ ಎಂಬುದನ್ನು ಹೇಳುತ್ತೇವೆ. ಮುಖ್ಯವಾದಂಥ ವಿಚಾರ ಎಂದು ಹೇಳಿದರೆ, ನಮಗೆ ಇಲ್ಲಿ ಬಹಳ ಆಲೋಚನೆ ಮಾಡುವಂಥ ಸಂಗತಿಯಾಗಿದೆ. ಅದೇನೆಂದರೆ, ಅಲ್ಪಸಂಖ್ಯಾತರ ಬಗ್ಗೆ ನಾವು ಬಹಳ ಮಾತನಾಡುತ್ತೇವೆ. ರಾಜಕೀಯ ಪಕ್ಷದವರು ಬಹಳ ಮಾತುಗಳನ್ನಾಡುತ್ತೇವೆ. ಈ ಅಲ್ಪಸಂಖ್ಯಾತರಿಗೆ ಯಾರಾದರೂ ದತ್ತು ತೆಗೆದುಕೊಂಡಿದ್ದಾರೆಯೇ ಎಂಬ ಪ್ರಶ್ನೆ. ಒಂದು ಕಡೆ ಸರ್ಕಾರ ಹೇಳುತ್ತದೆ, ಮುಸಲ್ಮಾನರಿಗಾಗಿ 5 ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು 1995-96ನೇ ಸಾಲಿನ ಬಜೆಟನಲ್ಲಿ ಹೇಳುತ್ತಾರೆ. ಪ್ರತ್ಯೇಕವಾಗಿ ಮುಸ್ಲಿಂ ಸಮುದಾಯಕ್ಕಾಗಿ 5 ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಅವು ನವೋದಯ ಮಾದರಿ. ತಾವು, ಎಷ್ಟು ಶಾಲೆ ಪ್ರಾರಂಭ ಮಾಡಿದ್ದೀರಿ, ಯಾವ ಮಾರ್ಗದರ್ಶನದಲ್ಲಿ ತಾವು ಈ ಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದೀರಿ. ಅಥವಾ ನಿಮ್ಮ ಸರ್ಕಾರದಲ್ಲಿರುವಂಥ ಪ್ರತಿನಿಧಿಗಳ ಮಾರ್ಗಸೂಚಿಗಳ ಮೇಲೆ ಏನಾದರೂ ತಾವು ಈ ಶಾಲೆಗಳನ್ನು ಪ್ರಾರಂಭ ಮಾಡುತ್ತೀರೋ ಅಥವಾ ಉತ್ತಮವಾಗಿರುವಂಥ ಸಂಘಸಂಸ್ಥೆ ಎಂದು, ಯಾರಾದರೂ ಮುಸ್ಲಿಂ ಸಮುದಾಯದವರು ಈ ಸರ್ಕಾರದ ಗಮನಕ್ಕೆ ತಂದಿದ್ದಾರೋ ಅಥವಾ ನಿಮ್ಮಲ್ಲಿರುವಂಥ ನಾಯಕರು, ಇಂತಹ ಸಂಸ್ಥೆಗೆ ಒಂದು ಶಾಲೆ ಕೊಡಿ, ಎಂದು ಹೇಳುವುದಾದರೆ, ಈ ಶಾಲೆ ಎಷ್ಟರಮಟ್ಟಿಗೆ ಯಶಸ್ವಿಯಾಗಿ ನಡೆಯುತ್ತದೆ? ಏಕೆ ಹೇಳುತ್ತಿದ್ದೇನೆಂದರೆ, ನೀವು ಅಲ್ಪಸಂಖ್ಯಾತರಿಗೆ ಸಂತೋಷಪಡಿಸುವುದಕ್ಕಾಗಿ, ಸಮಾಧಾನ ಪಡಿಸುವುದಕ್ಕಾಗಿ, ನನ್ನ ಹಿಂದೆಯೇ ಎಲ್ಲಾ ಅಲ್ಪಸಂಖ್ಯಾತರು ಇದ್ದಾರೆಂದು ನಾನೇನೂ ಚಾಲೆಂಜ್ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೊಬ್ಬರು ನಾಯಕರು ಯಾರಾದರೂ ಈ ಸಭೆಯಲ್ಲಿದ್ದರೆ, ಅವರೂ ನನ್ನ ಹಿಂದೆಯೇ ಇದ್ದಾರೆಂದು ಮಾತನಾಡುವುದಾದರೆ, ನಾನು ಅಂತಹವನಲ್ಲ, ಹೇಳುವುದಕ್ಕೆ ಸಿದ್ಧನಿಲ್ಲ. ಸಗೀರ್ ಅಹಮದ್ ಸಾಹೇಬರ ಮಾತಿಗೂ ಮಣಿಯುವುದು ಬೇಡ, ಜನತಾ ದಳದ ಅಧ್ಯಕ್ಷರಾದ ಇಬ್ರಾಹಿಂ ಸಾಹೇಬರು ಇದ್ದಾರಲ್ಲಾ, ಅವರ ಮಾತಿಗೂ ಸಹ ಮಣಿಯುವುದು ಬೇಡ. ಮುಸ್ಲಿಮರ ಸಮುದಾಯದೊಂದಿಗೆ, ತಾವು ಅವರೆಲ್ಲರನ್ನೂ, ಜೊತೆಗೆ ಕರೆದು ಕೂಡಿಸಿ ನಿರ್ಧಾರಕ್ಕೆಗೊಳ್ಳಿ, ಇವತ್ತು ರಾಜಕಾರಣ ವಿಚಿತ್ರವಾದಂಥ ವಿಚಾರ ತಮಗೆ ಗೊತ್ತಿದೆ.

8.30 ಪಿ.ಎಂ.

ಅಧ್ಯಕ್ಷರು : ಇನ್ನು ರಾಜೇಂದ್ರನ್ ಮಾತನಾಡಬೇಕು ಹಾಗೂ ಹಶ್ಮಿಯವರು ಮಾತನಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ತಮ್ಮ ಒಂದು ಆಶೀರ್ವಾದದಿಂದ ಬಹಳ ಅಪರೂಪಕ್ಕೆ ಒಂದು ಅವಕಾಶ ಸಿಕ್ಕಿದೆ. ನನ್ನ ಮೇಲೆ ಮತ್ತು ಗೌರವ ಸಲ್ಲಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ವಸತಿ ಶಾಲೆ ಬಗ್ಗೆ ಸರ್ಕಾರದ ಗಮನವನ್ನು ನಾನು ಸೆಳೆಯುತ್ತಿದ್ದೆ. ಕೇವಲ ಒಬ್ಬ ವ್ಯಕ್ತಿಯ ಅಭಿಪ್ರಾಯದ ಮೇಲೆ...

ಅಧ್ಯಕ್ಷರು : ನಿಮ್ಮ ಭಾಷೆಯಲ್ಲಿ ಅದು ಏನೋ ಒಂದು ಗಾದೆ ಇದೆಯಲ್ಲಾ ಜಾತಕೋ ಜಾತ್ ಮಶ್ಮನ್ ಅದು ನಮಗೆ ಬರುವುದಿಲ್ಲ ಪೂರ್ಣ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಜಾತಿಗೆ ಜಾತಿ ವೈರಿ ಈಗ ಹಾಗೆ ಎಂದು ನನಗ ಹೇಳುತ್ತಿದ್ದೀರಾ? ನೀವು ನನಗೆ ಆ ತರಹ ಹೇಳುತ್ತಿದ್ದೀರೋ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ತಾವು ಜನತಾದಳದ ಅಧ್ಯಕ್ಷರ ಬಗ್ಗೆ ಹೇಳುತ್ತಿದ್ದೀರಿ ಎಂದು ಅವರು ಹಾಗೆ ತಮಗೆ ಹೇಳಿದುದ್ದು.

ಅಧ್ಯಕ್ಷರು : ಸುಮ್ಮನೇ ನೆನಪು ಆಯಿತು, ಅದಕ್ಕೆ ಹೇಳಿದೆ ಅಷ್ಟೇ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಇವರ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಐದು ವಸತಿ ಶಾಲೆಗಳನ್ನು ಪ್ರಾರಂಭಮಾಡುವಂತಾದ್ದರ ಬಗ್ಗೆ ಕರ್ನಾಟಕದ ಮುಸ್ಲಿಂ ಬಾಂಧವರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಒಂದು ವರ್ಷದ ನಾಲ್ಕು ತಿಂಗಳು ಕಳೆದರೂ ಸಹ ಆ ಎರಡು ಶಾಲೆಗಳನ್ನು ಮಾತ್ರ ತಾವು ಪ್ರಾರಂಭ ಮಾಡಿದ್ದೀರಿ. ಇನ್ನು ಉಳಿದಂತಹ ಮೂರು ಶಾಲೆಗಳನ್ನು ತಾವು ಯಾವಾಗ ಪ್ರಾರಂಭ ಮಾಡುತ್ತೀರಿ? ಚುನಾವಣೆ ಹತ್ತಿರದಲ್ಲಿ ಇದೆ. ಚುನಾವಣೆ ದಿನಾಂಕ ಏನಾದರೂ ಘೋಷಣೆ ಆಗಿ ಮುಸಲ್ಮಾನರ ಮನ ಹೊಲಿಸುವುದಕ್ಕೆ ಮತ್ತೇ ನಾವು 3 ಶಾಲೆಗಳನ್ನು ಏಪ್ರಿಲ್ ತಿಂಗಳಲ್ಲಿ ಅಥವಾ ಮಾರ್ಚಿ ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದರೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆ ಎಂದು ಹೇಳಿದರೆ ಅದಕ್ಕೆ ಬೇರೆ ಪ್ರಚಾರಗಳು ನಡೆಯುತ್ತವೆ. ನನ್ನದು ಬಹಳ ಮುಖ್ಯವಾದ ವಿಚಾರ ಏನೆಂದರೆ ಇನ್ನು ಒಂದೂವರೆ ತಿಂಗಳು ಹೋದರೆ ಗೊತ್ತಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಾನು ಹೇಳುವಂಥಾದ್ದು ಏನೆಂದರೆ ಮುಸ್ಲಿಂ ಸಮುದಾಯದ ಈ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಶಿಕ್ಷಣವನ್ನು ಕೊಡುವಂತೆ ಅವರು ಅಯೋಚನೆ ಮಾಡಿರುವಂಥಾದ್ದರ ಬಗ್ಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದರಲ್ಲಿ ತಾವು ರಾಜಕೀಯ ಬಳಸದೇ ಉನ್ನತ ಮಟ್ಟದ ಈ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗೆ, ಉನ್ನತ ಮಟ್ಟದ ವಿದ್ಯಾದಾನ ಮಾಡಬೇಕು ಎನ್ನುವಂಥಹ ವಿಚಾರ ತಮ್ಮಲ್ಲಿ ಇದ್ದರೆ ಪ್ರತ್ಯೇಕವಾಗಿ ಒಬ್ಬರ ಅಭಿಪ್ರಾಯಕ್ಕೆ ಮಣಿದು ಅಲ್ಲೇ ಆಗಬೇಕು ಇಲ್ಲೇ ಆಗಬೇಕು ಎನ್ನುವಂತಹ ಒಂದು ಭಾವನೆಯನ್ನು ತಾವು ಬಿಟ್ಟು ಮುಸ್ಲಿಂ ಸಮುದಾಯದ ಜನಸಂಖ್ಯೆ ಎಲ್ಲಿ ಜಾಸ್ತಿ ಇದೆಯೋ ಅಂತಹ ಜಾಗಗಳಲ್ಲಿ ತಾವು ಈ ವಸತಿ ಶಾಲೆಗಳನ್ನು ತುರ್ತಾಗಿ ಮಾಡಬೇಕು ಎಂದು ಹೇಳಿ

ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇನ್ನು ಎರಡು ವಿಚಾರಗಳನ್ನು ನಾನು ನಮ್ಮ ವಕ್ಫ್ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಸನ್ಮಾನ್ಯ ಹಣಕಾಸಿನ ಮಂತ್ರಿಗಳಲ್ಲಿ ತಮ್ಮ ಮೂಲಕ ನನ್ನ ವಿನಂತಿ ಏನು ಎಂದು ಹೇಳಿದರೆ ರಾಜ್ಯದ ಖರ್ಚು ವೆಚ್ಚ ಬಜೆಟ್‌ನ್ನು ತಯಾರು ಮಾಡಿರುವಂತಹ ಈ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳ ಒಂದು ಗ್ರ್ಯಾಂಟ್‌ನ್ನು ಜಾಸ್ತಿ ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ಸುಮಾರು 23 ಸಾವಿರಕ್ಕೂ ಹೆಚ್ಚು ವಕ್ಫ್‌ಗೆ ಸಂಬಂಧಪಟ್ಟಿರತಕ್ಕಂಥ ಸಂಸ್ಥೆಗಳು ಇವೆ. ಇದರಲ್ಲಿ ಸುಮಾರು 5 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಇವತ್ತು ನ್ಯಾಯಾಲಯದಲ್ಲಿ ಇವೆ. ವಕ್ಫ ಮಂಡಳಿಯ ಖರ್ಚಿನಲ್ಲಿಯೇ ನಾವು ನ್ಯಾಯಾಲಯಗಳಿಗೆ ಹೋಗಬೇಕಾಗುತ್ತದೆ. ಸುಮಾರು 30 ಸಾವಿರ ವಕ್ಫ್ ಸಂಸ್ಥೆಗಳು ಏನು ಇವೆ ಇವುಗಳ ದುರಸ್ಥಿ ಕಾರ್ಯ ಇರಬಹುದು ಇದಕ್ಕೆ ಬೇಕಾಗುವಂತಹ ಖರ್ಚು ವೆಚ್ಚಗಳನ್ನು ಸಹ ತಾವು ಒದಗಿಸಿಕೊಡುವ ಹಣದಿಂದಲೇ ದುರಸ್ಥಿಪಡಿಸಬೇಕಾಗುತ್ತದೆ. ಶೇಕಡ 6ರಷ್ಟು ಕಾಂಟ್ರಿಬ್ಯೂಷನ್ ಅನ್ನು ಸಹ ನಾವು ಈ ಸಂಸ್ಥೆಯಿಂದ ಕಲೆಕ್ಟ ಮಾಡುತ್ತೇವೆ. ಆದರೆ ಇದಕ್ಕಿಂತ ಹಿಂದೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಇದರ ಗ್ರ್ಯಾಂಟ್ ಇದ್ದದ್ದು ಕೇವಲ ಎರಡು ಕೋಟಿ ಸನ್ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಸುಮಾರು ಇದನ್ನು ನಾಲ್ಕುವರೆ ಕೋಟಿಗೆ ಹೆಚ್ಚು ಮಾಡಿದ್ದೇವೆ.

ಇವತ್ತಿನ ಖರ್ಚು ವೆಚ್ಚಗಳ ಅಂದಾಜನ್ನು ನಾವು ಹಾಕಿಕೊಂಡಾಗ ಹೋದ ವರ್ಷದಲ್ಲಿ ಒಂದು ಸಿಮೆಂಟು ಚೀಲ 100 ರೂಪಾಯಿ 75 ರೂಪಾಯಿ ಇದ್ದದ್ದು ಇವತ್ತು 150 ರೂಪಾಯಿಗಳು ಆಗಿದೆ. ಕಬ್ಬಿಣ ಮತ್ತು ಮೆಟ್ರಿಕ್ ಟನ್‌ಗೆ 11,600 ರೂಪಾಯಿ ಇದ್ದದ್ದು ಇವತ್ತು 17-18 ಸಾವಿರ ರೂಪಾಯಿಗಳಾಗಿವೆ. ಸುಮಾರು 23 ಸಾವಿರ ವಕ್ಫ್ ಸಂಸ್ಥೆಗಳು ಇದರ ಒಂದು ವ್ಯಾಪ್ತಿಯಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳಿಂದ ಸುಮಾರು ಏಳು-ಏಳೂವರೆ ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಬೇಕಾಗುತ್ತದೆ ಎಂದು ಹೇಳಿ ನಾನು ತಮ್ಮ ಮೂಲಕ ಮಾನ್ಯ ಹಣಕಾಸಿನ ಸಚಿವರಿಗೆ ಒತ್ತಾಯ ಮಾಡುತ್ತೇನೆ. ನಿಮ್ಮ ಸರ್ಕಾರ ದಯಮಾಡಿ ಇದಕ್ಕೆ ಒತ್ತುಕೊಟ್ಟು ಇಷ್ಟು ಹಣವನ್ನು ತಾವು ಬಿಡುಗಡೆ ಮಾಡಿಸಿಕೊಡಬೇಕು ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇದರ ಜೊತೆಗೆ ಮಾನ್ಯ ಅಧ್ಯಕ್ಷರೇ, ನಮ್ಮ ಖಮರುಲ್‌ಇಸ್ಲಾಂ ಅವರು ಮಾತನಾಡುತ್ತಾ ಹೇಳಿದರು, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಬಗ್ಗೆ. ಇದು ಒಂದು ವಿಚಿತ್ರವಾದಂತಹ ನಿಗಮ ಆಗಿದೆ. ಇದಕ್ಕೆ ಏನು ಮಾಡಬೇಕು ಎಂದು ನಾನು ಮಂತ್ರಿಯಾಗಿದ್ದಾಗಲೂ ಸಹ ಅರ್ಥವಾಗಲಿಲ್ಲ. ಆದರೂ ಬಹಳ ಪ್ರಯತ್ನ ನಾವು ಮಾಡಿದ್ದೇವೆ. ನಮ್ಮ ಪ್ರಯತ್ನದಲ್ಲಿ ನಾವು ಯಶಸ್ವಿಯಾಗುವುದಕ್ಕೆ ಸಾಧ್ಯವಾಗಲಿಲ್ಲ.

ಅವರ ಹಿಂದಿನ ಸಾಲಿನಿಂದ ಕೇಂದ್ರ ಸರ್ಕಾರದಿಂದ ಈ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಹಣ ಬಂದಿದೆ. ರಾಜ್ಯ ಸರ್ಕಾರ ಒಂದು ಹೇಳಿಕೆ ಮಾಡಿತ್ತು. ಮಾನ್ಯ ರೋಷನಬೇಗ್ ಸಾಹೇಬರೂ ಸಹ ಆ ಒಂದು ಹೇಳಿಕೆ ಮಾಡುವಂತಹ ಸಂದರ್ಭದಲ್ಲಿ ಇದ್ದರು ಎಂದು

ಕಾಣುತ್ತದೆ. ಸುಮಾರು 32 ಕೋಟಿ ರೂಪಾಯಿಗಳಷ್ಟು ಹಣ ನಾವು ಈ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸುಮಾರು 12,800 ಫಲಾನುಭವಿಗಳನ್ನು ಗುರುತಿಸಿ ಅವರಿಗೆ ನಾವು ಈ ಹಣದ ಸಹಾಯ ಒದಗಿಸಿ ಕೊಡುತ್ತೇವೆ ಎಂದು ಹೇಳಿದರು. ಸರ್ಕಾರ ಇವತ್ತು ಬಿಡುಗಡೆ ಮಾಡಿಕೊಟ್ಟಿರುವಂತಹ ಹಣ ಎಷ್ಟು ಎಂದು ಹೇಳಿದರೆ ಕೇವಲ ಮೂರೂವರೆ ಕೋಟಿ ರೂಪಾಯಿಗಳು ಮಾತ್ರ. ಇನ್ನು ಉಳಿದಂತಹ ಹಣ ಇವತ್ತಿನವರೆಗೂ ಬಿಡುಗಡೆಯಾಗಿಲ್ಲ. ಜೊತೆಗೆ ಕೇಂದ್ರ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮದಿಂದ ಮೂರೂವರೆ ಕೋಟಿ ರೂಪಾಯಿಗಳ ಹಣವನ್ನು ಈಗಾಗಲೇ ಬಿಡುಗಡೆ ಮಾಡಿಕೊಟ್ಟಿದೆ. ಅವರ ನಿಯಮಗಳು ಏನು ಎಂದು ಹೇಳಿ ಈ ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರಿಗೆ ಇದುವರೆಗೂ ತಿಳುವಳಿಕೆಯನ್ನು ಈಗ ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಾನು ಈ ನಿಗಮದಿಂದ ಅನೇಕ ದಾಖಲಾತಿಗಳನ್ನು ತರಿಸಿ ನೋಡುವಂತಹ ಸಂದರ್ಭದಲ್ಲಿ ಇದರಿಂದ ಈ ರಾಜ್ಯದ ಅಲ್ಪಸಂಖ್ಯಾತರಿಗೆ ಆಗಿರುವ ಅನುಕೂಲ ಎಷ್ಟು ಎಂದು ನೋಡಿದರೆ ಶೇಕಡ 10 ಮಾತ್ರ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 32 ಕೋಟಿ ರೂಪಾಯಿಗಳ ಹಣವನ್ನು ತಾವು ವಿತರಣೆ ಮಾಡುವಂತಹ ಯೋಜನೆಯನ್ನು ಹಮ್ಮಿಕೊಂಡು ಕೇವಲ ನನ್ನ ಒಂದು ಅಂದಾಜಿನ ಪ್ರಕಾರ ಎರಡೂ ಎರಡೂವರೆ ಸಾವಿರ ಫಲಾನುಭವಿಗಳಿಗೆ ಈ ಅವಕಾಶವನ್ನು ಒದಗಿಸಿ ಕೊಟ್ಟಿದ್ದೀರಿ ಎಂದು ಹಳಿದರೆ ಇದು ಬಹಳ ಆಲೋಚನೆ ಮಾಡುವಂತಹ ಸಂಗತಿ, ಸರ್ಕಾರ ಸ್ವಲ್ಪ ಚುರುಕಾಗಿ ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮುಖ್ಯವಾಗಿ ಇದರಲ್ಲಿ ತಮ್ಮ ಗಮನಕ್ಕೆ ತರುವಂತಹ ವಿಚಾರ ಮಾನ್ಯ ಅಧ್ಯಕ್ಷರೇ ಈ ಅಲ್ಪಸಂಖ್ಯಾತರ ಆಯೋಗದಲ್ಲಿ ಸ್ವಲ್ಪ ಹಣ ಇದೆ. ನಮ್ಮ ಸಮಾಜಕಲ್ಯಾಣ ಇಲಾಖೆಯವರು ಈ ಹಣವನ್ನು ನಾವು ಉಪಯೋಗಿಸುತ್ತೇವೆ ಎನ್ನುವಂತಹ ಒಂದು ಬೇಡಿಕೆಯನ್ನು ಆಗಲೇ ನಿಗಮಕ್ಕೆ ಕೊಟ್ಟಿದ್ದಾರೆ. ನೀವು.ಈ ಹಣ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ತಾವು ಈ ಹಣವನ್ನು ನಮಗೆ ಕೊಡಿ ಎಂದು ಕೇಳಿದ್ದಾರೆ ಹೊಸದಾಗಿ ಒಂದು ನೀರಾವರಿ ಯೋಜನೆ ಮಾಡಿದ್ದಾರಲ್ಲಾ, ಗಂಗಾಕಲ್ಯಾಣ ಯೋಜನೆ ಅಡಿಯಲ್ಲಿ ನಾವು ಈ ಹಣವನ್ನು ಉಪಯೋಗಿಸುತ್ತೇವೆ ಎಂದು ಹೇಳಿದ್ದಾರೆ. ಇದು ಯಾವ ನ್ಯಾಯ? ಪ್ರತ್ಯೇಕವಾಗಿ ಒಂದು ನಿಗಮವನ್ನು ರಚನೆ ಮಾಡಿ, ಈ ನಿಗಮದಿಂದ ಪ್ರತ್ಯೇಕವಾಗಿ ಅಲ್ಪಸಂಖ್ಯಾತರಿಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡಿರುವಂತಹ ಈ ಸಂದರ್ಭದಲ್ಲಿ ಅದರ ಉಪಯೋಗ ಆ ಒಂದು ಫಲಾನುಭವಿಗಳಿಗೆ ಆಗಬೇಕು, ಇದರ ಬಗ್ಗೆ ನನಗಂತೂ ನನ್ನ ತಿಳುವಳಿಕೆಗೆ ಬರುತ್ತಿಲ್ಲ. ಸರ್ಕಾರ ನಿರ್ದಿಷ್ಟವಾಗಿ ಈ ಅಲ್ಪಸಂಖ್ಯಾತರ ಆಯೋಗಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಂದಿರುವಂತಹ ಹಣ ಕೇಂದ್ರ ಸರ್ಕಾರದಿಂದ ಬಂದಿರುವಂತಾದ್ದು ಮೂರೂವರೆ ಕೋಟಿ ರಾಜ್ಯ ಸರ್ಕಾರದಿಂದ ತಾವು ಕೊಟ್ಟಿರುವಂತಾದ್ದು ಮೂರೂವರೆ ಕೋಟಿ. ಇನ್ನು ಉಳಿದಿರುವಂತಹ ಹಣವನ್ನು ತಾವು ಕೊಡಬೇಕಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳು ಇದಕ್ಕೆ ಸಹಕಾರ ನೀಡುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮುಖ್ಯವಾದಂತಹ

ಒಂದು ವಿಚಾರ ಏನೆಂದರೆ ನಾನು ದಾಖಲಾತಿ ಕೇಳುವಾಗಲೇ ನನ್ನ ಗಮನಕ್ಕೆ ಬಂತು. ಎಲ್ಲಾ ವಾರ್ಷಿಕ ವರಮಾನ 10 ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರುವಂತಹ ಫಲಾನುಭವಿಗಳಿಗೆ ಸರ್ಕಾರದ ಎಲ್ಲಾ ಸೌಲತ್ತುಗಳನ್ನು ಒದಗಿಸಿಕೊಡುವಂತೆ ಸರ್ಕಾರ ಆದೇಶಗಳನ್ನು ಹೊರಡಿಸಿದೆ. ಆದರೆ ಈ ಅಲ್ಪಸಂಖ್ಯಾತರ ಆಯೋಗದಲ್ಲಿ ಇನ್ನೂ ವಾರ್ಷಿಕ ಆದಾಯ 6 ಸಾವಿರ ರೂಪಾಯಿಗಳೇ ಇದೆ. ಮಾನ್ಯ ಹಣಕಾಸಿನ ಸಚಿವರು ಇದರ ಬಗ್ಗೆ ಗಮನ ಕೊಡಬೇಕು. ವಾರ್ಷಿಕ ಆದಾಯ ಎಲ್ಲಾ ಇಲಾಖೆಗಳಲ್ಲಿ ಯಾವುದೇ ಫಲಾನುಭವಿಗಳು ಸಾಲ ಪಡೆಯುವಂತಹ ಸಂದರ್ಭದಲ್ಲಿ 10,600 ರೂಪಾಯಿಗಳು ವಾರ್ಷಿಕ ಆದಾಯ ಇರುವವರಿಗೆ ಈ ಸೌಲತ್ತುಗಳನ್ನು ಒದಗಿಸಿಕೊಡುತ್ತೇವೆ ಎಂದು ಸರ್ಕಾರ ಆದೇಶ ಹೊರಡಿಸಿದೆ. ಅಲ್ಪಸಂಖ್ಯಾತರ ನಿಗಮದ ಒಂದು ಅಡಿಯಲ್ಲಿ ಸಾಲ ತೆಗೆದುಕೊಳ್ಳುವಂತಹ ಫಲಾನುಭವಿಗಳ ಆದಾಯ 6 ಸಾವಿರಕ್ಕೆ ಇದೆ. ಇದು ಪ್ರತ್ಯೇಕವಾಗಿ ಹಿಂದಿನ ಆದೇಶದಂತೆ 10.600 ರೂಪಾಯಿಗಳಿಗಿಂತ ಕಡಿಮೆ ಇರುವಂತಹ ಫಲಾನುಭವಿಗಳಿಗೆ ಈ ಸವಲತ್ತುಗಳನ್ನು ಒದಗಿಸಿಕೊಡುವಂತೆ ತಾವು ತುರ್ತಾಗಿ ಒಂದು ಆದೇಶವನ್ನು ತಾವು ಈ ನಿಗಮಕ್ಕೆ ಕೊಡಬೇಕು ಎಂದು ಹೇಳಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಒಂದು ಮುಖ್ಯವಾದ ವಿಚಾರ ಏನೆಂದು ಹೇಳಿದರೆ ಈ ನಿಗಮದಿಂದ ಒಂದು ಯೋಜನೆಯನ್ನು ಹಮ್ಮಿಕೊಂಡಿರುವಂತಹ ಸಂದರ್ಭದಲ್ಲಿ ಕೇವಲ 50 ಸಾವಿರ ರೂಪಾಯಿಗಳಷ್ಟು ಸಂದಾಯ ಮಾಡುವಂತೆ ಅಥವಾ ಸಹಾಯ ರೂಪದಲ್ಲಿ ಸಾಲ ಸವಲತ್ತುಗಳನ್ನು ಒದಗಿಸಿಕೊಡುವಂತೆ ಹಿಂದಿನ ಆದೇಶ ಇದ್ದುದ್ದನ್ನು ಒಂದು ಲಕ್ಷಕ್ಕೆ ಹೆಚ್ಚು ಮಾಡಬೇಕೆಂದು ಹೇಳಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದರ ಜೊತೆಗೆ 5-6 ಜನ ವಿದ್ಯಾವಂತ ಯುವಕರು ಹೆಚ್ಚಿನ ಪ್ರಮಾಣದಲ್ಲಿ ಒಂದು ಕೈಗಾರಿಕೆ ಆಗಲಿ ಬೇರೆ ಯಾವುದಾದರೂ— ಒಂದು ಉದ್ದಿಮೆಯನ್ನು ಪ್ರಾರಂಭ ಮಾಡುವಂತಹ ಸಂದರ್ಭದಲ್ಲಿ ಸಾಲ ಪಡೆಯುವಂತಹ ಅರ್ಹತೆ 5 ಲಕ್ಷ ರೂಪಾಯಿಗಳವರೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಿರುವಂತಹ ಹಣದಲ್ಲಿ ಇರುವುದರಿಂದ ಅದಕ್ಕೂ ಸಹ ತಾವು ಸರ್ಕಾರದಿಂದ ಒಂದು ಆದೇಶವನನು ಹೊರಡಿಸಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಒಂದೇ ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತಂದು ನನ್ನ ಭಾಷಣವನ್ನು ಮುಗಿಸುತ್ತೇನೆ. ನಾವು ಅರಣ್ಯದ ಬಗ್ಗೆ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾದಂತಹ ಪರಿಸ್ಥಿತಿ ಇದೆ. ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಕಡೂರು ತಾಲ್ಲೂಕಿನಲ್ಲಿ ಸುಮಾರು 10 ಜನ ಚಿರತೆಯ ಹಾವಳಿಯಿಂದ ಸತ್ತಿದ್ದಾರೆ. ಈ ವಿಚಾರ ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ. ಈ ವಿಚಾರವನ್ನು ನಾವು ಮಾನ್ಯಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇವೆ. ಒಂದು ವಿಚಾರ ಹೇಳುತ್ತೇನೆ ಮಾನ್ಯ ಅಧ್ಯಕ್ಷರೇ, ಸರ್ಕಾರದಲ್ಲಿ ಕಡತಗಳು ಎಷ್ಟು ದಿನ ಉಳಿಯುತ್ತವೆ ಎನ್ನುವುದಕ್ಕೆ....

ಅಧ್ಯಕ್ಷರು : ಚಿರತೆ ಅದು ಹೆಣ್ಣು ಚಿರತೆನೋ ಅಥವಾ ಗಂಡು ಚಿರತೆಯೋ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಹೆಣ್ಣು ಗಂಡು ಎರಡೂ ಇವೆ.

ಅಧ್ಯಕ್ಷರು : ಕಾಟ ಕೊಟ್ಟಿರುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅರಣ್ಯ ಇಲಾಖೆಯವರು ಹೇಳಲಿಲ್ಲ ನಮಗೆ ಅದು ಗಂಡೋ ಹೆಣ್ಣೋ ಎಂದು ಹೇಳಲಿಲ್ಲ. ಹೊಡೆದಿದ್ದು ಯಾವುದು ಎಂದು ಕೇಳಿದ್ದಕ್ಕೆ ಚಿರತೆಯನ್ನು ಹೊಡೆದಿದ್ದೇವೆ ಎಂದು ಮಾತ್ರ ಹೇಳಿದರು. ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ಇರುವಂತಹ ವಿಚಾರ ಏನೆಂದರೆ ಚಿಕ್ಕಮಗಳೂರು ಎರಡು ಭಾಗಗಳಲ್ಲಿ ಇದೆ. ಒಂದು ಮಲೆನಾಡು ಭಾಗ ಇನ್ನೊಂದು ಬಯಲುಸೀಮೆ ಭಾಗ. ಮಲೆನಾಡು ಭಾಗದಲ್ಲಿ ಭದ್ರಾಅಭಯಾರಣ್ಯ ಒಂದು ಯೋಜನೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಮ್ಮಿಕೊಂಡು ಇಲ್ಲಿ ಹೆಚ್ಚು ಕಡಿಮೆ 735 ಕುಟುಂಬಗಳು 17 ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಒಂದು ಯೋಜನೆ ಅಡಿಯಲ್ಲಿ ಈ ಗ್ರಾಮಗಳನ್ನು ಸ್ಥಳಾಂತರ ಮಾಡುವ ಬಗ್ಗೆ ಸರ್ಕಾರಕ್ಕೆ ಸುಮಾರು ಹನ್ನೆರಡೂವರೆ ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಇಲಾಖೆಯವರು ಹಾಗೂ ಜಿಲ್ಲಾ ಪರಿಷತ್ತಿನ ಅಧಿಕಾರಿಗಳು ಸೇರಿ ಜನರೂ ಸಹ ಅವರ ಒಪ್ಪಿಗೆಯನ್ನು ಕೊಟ್ಟು ನಾವು ಈ ಸ್ಥಳದಿಂದ ಸ್ಥಳಾಂತರ ಮಾಡುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳಿದ ಮೇಲೆ ಹನ್ನೆರಡೂವರೆ ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿ ಈಗ ಆ ಜನ ಇರುವಂತಹ ಜಾಗದಲ್ಲಿ ಕೇಂದ್ರ ಸರ್ಕಾರ ಒಂದು ಆದೇಶ ಹೊರಡಿಸಿದೆ. ಈ ಭದ್ರಾ ಅಭಯಾರಣ್ಯದಲ್ಲಿ ನಾವು ಲೈಯನ್ ಸಫಾರಿ ಮಾಡುತ್ತೇವೆಂದು ಹೇಳಿದ್ದಾರೆ. ಆ ಅರಣ್ಯದಲ್ಲಿ ವಾಸ ಮಾಡುತ್ತಿರುವ ಗ್ರಾಮಸ್ಥರ ಹತ್ತಿರ ಕತ್ತಿ ಇದೆ. ಪಿಸ್ತೂಲ್ ಇದೆ. ಆದ್ದರಿಂದ ಈ ಚಿರತೆ ಹುಲಿಗಳು ಆ ಕಾಡಿನಲ್ಲಿ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ, ಕಾರಣ ಏನೆಂದರೆ ಯಾವುದೇ ರೀತಿಯಾದ ನಾಗರೀಕ ಸೌಲಭ್ಯಗಳನ್ನು ಈ ಭಾಗದ ಜನರಿಗೆ ಒದಗಿಸಿಕೊಡುವುದಕ್ಕೆ ಆಗಲಿಲ್ಲ. ಈ ಸ್ಥಳಾಂತರ ಮಾಡುವಂತಹ ಯೋಜನೆಗೆ ಒಪ್ಪಿಗೆ ಕೊಟ್ಟಾಗ ಇದು ಯಶಸ್ವಿ ಆಗುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ಇರುವ ಚಿರತೆಗಳೆಲ್ಲಾ ಬಯಲುಸೀಮೆ ಭಾಗಕ್ಕೆ ಹೋಗುವಂತಹ ಸಂದರ್ಭದಲ್ಲಿ ಅಲ್ಲಿ ಯಾವುದೇ ರೀತಿಯ ಭಯ ಇಲ್ಲ ಅವರಿಗೆ. ಕತ್ತಿಗಳು ಇರಬಹುದು ಆದರೆ ಕೋವಿಗಳ ಭಯ ಇಲ್ಲ. ಆದ್ದರಿಂದ ಕಡೂರಿನ ಒಂದು ತಾಲ್ಲೂಕಿನ ಒಂದು ಹಳ್ಳಿ ಇಲ್ಲಿ ಹೆಚ್ಚು ಕಡಿಮೆ 9 ಜನರಿಗೆ ಅದರಲ್ಲೂ 5-6 ಜನ ಸತ್ತು ಹೋಗಿದ್ದು ಮೂರು ಜನ ಇವತ್ತು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ. ಇದರ ಮಧ್ಯೆ ಅರಣ್ಯ ಇಲಾಖೆಯವರು 10 ಚಿರತೆಗಳನ್ನು ಸಾಯಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಈ ಹಿಂದೆ ನಾಗರಹೊಳೆ ಅರಣ್ಯದಲ್ಲಿ ಕಾಲಲರ್ ಹಾಕುವ ಬಗ್ಗೆ ವೈಜ್ಞಾನಿಕವಾಗಿ ಈ ಚಿರತೆ ಎಲ್ಲಿ ಹೋಗುತ್ತದೆ ಎಂದು ತಿಳಿದುಕೊಳ್ಳುವುದಕ್ಕೆ ಸಂಬಂಧಪಟ್ಟ ಹಾಗೆ ಸುಮಾರು ನಾಲ್ಕು ದಿವಸಗಳ ಈ ಸಭೆಯಲ್ಲಿ ಚರ್ಚೆ ಆಯಿತು. ಮಾನ್ಯ ಬಸವಲಿಂಗಪ್ಪನವರು ಆಗ ಮಂತ್ರಿಗಳಾಗಿದ್ದರು. ಬಹಳ ಗಂಭೀರವಾಗಿ ಈ ಸದನದಲ್ಲಿ ಎಲ್ಲಾ ಮಾನ್ಯ ಸದಸ್ಯರು ವನ್ಯ ಜೀವಿಗಳ ಬಗ್ಗೆ ಬಹಳ ಚಿಂತನೆ ಮಾಡಿ ನಾಲ್ಕು ದಿವಸಗಳ ಕಾಲ ಚರ್ಚೆ ನಡೆಸಿದರು. ಆದರೆ ದುರಾದೃಷ್ಟ ಇವತ್ತು ನನ್ನ ಜಿಲ್ಲೆಯಲ್ಲಿ ಕಡೂರು ಎನ್ನುವಂತಹ

ಒಂದು ಸಣ್ಣ ತಾಲ್ಲೂಕಿನಲ್ಲಿ 10 ಚಿರತೆಗಳನ್ನು ಅರಣ್ಯ ಇಲಾಖೆಯ ಸಿಬ್ಬಂದಿಯವರು ಕೊಲ್ಲುತ್ತಾರೆ ಎಂದು ಹೇಳಿದರೆ ಇದಕ್ಕೆ ಏನು ಹೇಳಬೇಕು? ಪರಿಸರದ ಬಗ್ಗೆ ನಾವು ಇವತ್ತು ವನ್ಯ ಜೀವಿಗಳ ಶಾಸಕರಾಗಿ ಮಾತನಾಡುತ್ತೇವೆ. ವನ್ಯ ಜೀವಿಗಳ ಬಗ್ಗೆ ಶಾಸನ ರಚನೆ ಮಾಡುವಂತಹ ಜನಗಳು ನಾವು ಈವತ್ತು ಮಾತನಾಡುತ್ತೇವೆ. ಆದರೆ ಇಲಾಖೆಯಲ್ಲಿ ಬೇಕಾಗುವಷ್ಟು ಸಿಬ್ಬಂದಿ ಕೊರತೆ ಇದೆಯೇ ಎಂಬುದನ್ನು ಯೋಚನೆ ಮಾಡುತ್ತಿಲ್ಲ. ಇವತ್ತು ಇಲಾಖೆಯಲ್ಲಿ ವನ್ಯ ಜೀವಿಗಳ ಸಂರಕ್ಷಣೆ ಮಾಡುವಂತಾದ್ದಕ್ಕೆ ಬೇಕಾದಷ್ಟು ಇಲ್ಲವೇ ಎನ್ನುವಂತಹ ಒಂದು ಪ್ರಶ್ನೆ ಸಹ ಹುಟ್ಟುತ್ತದೆ. ಸಿಬ್ಬಂದಿವರ್ಗದ ಕೊರತೆ ಇಲ್ಲ. ಇವತ್ತು ಅನೇಕ ಕಡೆ ವನ್ಯ ಜೀವಿಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗಿ ನದಿ ಪ್ರದೇಶ ಎಲ್ಲಿದೆ ಆ ಭಾಗಗಳಿಗೆ ಬರುವಂತಹ ಅವಕಾಶಗಳು ಕಂಡು ಬರುತ್ತಿವೆ. ಉದಾಹರಣೆಗೆ ನಾನು ಹೇಳುವುದಾದರೆ ಇವತ್ತು ಎನ್.ಆರ್. ಪುರದ ಬಳಿ ಭದ್ರಾ ನದಿ ಏನು ಹರಿದು ಹೋಗುತ್ತದೆ ಈ ಭಾಗಗಳಲ್ಲಿ ಆನೆಯ ಹಾವಳಿಯಿಂದ ಹತ್ತಾರು ಸಾವಿರ ಜನ ನನಗೆ ಘೇರಾವು ಮಾಡಿ ಆನೆಗಳನ್ನು ಹಿಡಿಯುತ್ತೀರೋ ಇಲ್ಲಾ ನಿಮ್ಮನ್ನೇ ಹೊಡೆಯುತ್ತೇವೆ ಎಂದು ಕೇಳಿದರು. ಇವತ್ತು ಸ್ವತಃ ಸರ್ಕಾರ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ ಎಂದು ಹೇಳಿ ವನ್ಯ ಜೀವಿಗಳನ್ನು ಕೊಲ್ಲುವಂತಹ ಆದೇಶ ಆಗಲಿ ಅಥವಾ ಅದನ್ನು ರಕ್ಷಣೆ ಮಾಡಿ ಬೇರೆ ಕಡೆ ವರ್ಗಾವಣೆ ಮಾಡುವ ಬಗ್ಗೆ ಚಿಂತನೆ ಮಾಡದೇ ಹೋದರೆ ಮುಂದಿನ ದಿನಗಳಲ್ಲಿ ಆನೆಗಳನ್ನು ಸಾರ್ವಜನಿಕರು ಹೊಡೆಯುವಂತಹ ಪ್ರಯತ್ನ ಮಾಡುತ್ತಾರೆ. ಅರಣ್ಯ ಇಲಾಖೆಯು ತಮ್ಮ ಆದೇಶಕ್ಕಾಗಿ, ಅಥವಾ ತಮ್ಮ ಇಲಾಖೆಯ ಸಿಬ್ಬಂದಿಯ ದಾಕ್ಷಿಣ್ಯಕ್ಕಾಗಿ ಅಥವಾ ಅವರ ಸಹಾಯವನ್ನು ಕೇಳುವಂತಹ ಸೌಜನ್ಯಇಲ್ಲದೇ ಜನರೇ ನೇರವಾಗಿ ಆನೆಗಳನ್ನು ಕೊಲ್ಲುವಂತಹ ಸಂದರ್ಭಗಳು ಬರುತ್ತವೆ. ಆದ್ದರಿಂದ, ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಅರಣ್ಯ ಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ, ಅದಕ್ಕೆ ಬೇಕಾಗುವಂತಹ ವೈಜ್ಞಾನಿಕವಾದ ಔಷಧಿಗಳು ಇವತ್ತು ಇವೆ. ಆನೆಗಳನ್ನು ಆಗಲಿ ಚಿರತೆಯನ್ನು ಆಗಲಿ ಹುಲಿಗಳನ್ನು ಆಗಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವಂತಹ ವ್ಯವಸ್ಥೆಗಳು ಇದ್ದಾಗ ಅಲ್ಲಿ ಒಂದು ಕಡೆ ರೈತರಿಗೆ ಬಡವರಿಗೆ ಎಷ್ಟು ಕಷ್ಟವಾಗುತ್ತಿದೆ ಈ ವನ್ಯ ಜೀವಿಗಳಿಂದ ಎಂಬುದನ್ನು ಭಾವಿಸಿ ನಾವು ಅವುಗಳನ್ನು ಹೊಡೆಯುವುದರ ಬದಲಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವಂತಹ ಆಲೋಚನೆಯನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಮಾನ್ಯಗೃಹ ಮಂತ್ರಿಗಳಿಗೆ ಇದು ತಿಳಿದಿರುವಂತಹ ವಿಚಾರ. ಸೌಹಾರ್ದಯುತವಾಗಿ ಬಾಳುವಂತಹವರು ನಾವು ಕನ್ನಡಿಗರು. ಅದರಲ್ಲಿ ಅನೇಕರು ಹೇಳಬಹುದು ನಾವು ಮುಸಲ್ಮಾನರು ನಾವು ಹಿಂದುಗಳು ನಾವು ಕ್ರೈಸ್ತರು ಎಂದು ಹೇಳಿ. ಅನೇಕ ಸಂದರ್ಭಗಳಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಬರುವಂತಹ ಸಂದರ್ಭಗಳು ಇರಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಮನೆಗಳಲ್ಲಿ ನಡೆದಂತೆ ಜಗಳಗಳು ಆಗಬಹುದು ಮತ್ತೆ ಅವರು ಅದನ್ನೆಲ್ಲಾ ಮರೆತು ಸೌಹಾರ್ದಯುತವಾಗಿ ಸ್ನೇಹಮಯವಾಗಿ ನಾವು ಬಾಳಿಕೊಂಡು

ಬಂದಿರುವಂತಹ ಇತಿಹಾಸ ಇದೆ. ಇದು ನಮ್ಮ ಭಾರತದ ಇತಿಹಾಸ. ಇದೇನೂ ಹೊಸ ಇತಿಹಾಸ. ಇತಿಹಾಸದ ಪುಟಗಳನ್ನು ನೋಡಿರುವಂತಹ ಸಂದರ್ಭದಲ್ಲಿ ತಂದೆ ಮಗನಿಗೆ ಯುದ್ಧಗಳು ಆಗಿರುವಂತಹ ಸಂದರ್ಭಗಳಲ್ಲಿ ಮತ್ತೆ ತಪ್ಪಾಗಿದೆ ಎಂದು ಒಪ್ಪಿಕೊಳ್ಳುವಂತಹ ಈ ಸ್ಥಿತಿಗತಿಗಳ ಬಗ್ಗೆ ನಾವು ಇತಿಹಾಸದ ಪುಸ್ತಕಗಳನ್ನು ಓದಿರುವಂತಹ ಸಂದರ್ಭದಲ್ಲಿ ನಮ್ಮರಾಜ್ಯದಲ್ಲಿ ಇಲ್ಲಿ ಏನಾಗಿದೆ ಎಂಬುದನ್ನು ನೋಡಬೇಕು. ಅದು 1989 ಇರಬಹುದು 1988 ರಬಹುದು 90-91 ಇರಬಹುದ ಅಥವಾ 92-93ನೇ ವರ್ಷದಲ್ಲಿ ರಾಜ್ಯದ್ಲಲಿ ಅನೇಕ ಕಡೆಗಳಲ್ಲಿ ಕೋಮುಗಲಭೆಗಳು ಆಗಿರುವಂತಾದ್ದು ನಮಗೆ ಮತ್ತು ನಿಮಗೆಲ್ಲಾ ತಿಳಿದಿರುವಂತಹ ವಿಚಾರ. ಇದರಲ್ಲಿ ಅನೇಕ ಜನರ ಮೇಲೆ ನಿರಾಪರಾಧಿಗಳ ಮತ್ತೆ ಮೊಕದ್ದಮೆಗಳನ್ನು ಹಾಕಿ 4-5 ವರ್ಷಗಳಿಂದ ನ್ಯಾಯಾಲಯುಗಳಲ್ಲಿ ತಿರುಗಾಡುವಂತಹ ಒಂದು ಕೆಟ್ಟಸ್ಥಿತಿ ಇದೆ. ಇದು ಕೇವಲ ಮುಸಲ್ಮಾನರು ಹಿಂದುಗಳು ಕೈಸ್ತರು, ಇವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಅವರೆಲ್ಲಾ ನಿರಫರಾಧಿಗಳು ಆ ವಿಚಾರ ತಮಗೆ ಗೊತ್ತಿದೆ, ಆದುದರಿಂದ ಅವರು ನಾಲ್ಕು ವರ್ಷಗಳಿಂದ ಶಿಕ್ಷೆಯನ್ನು ಅನುಭವಿಸಿದ್ದಾರೆ. ಒಂದಲ್ಲ ಒಂದು ನ್ಯಾಯಾಲಯಕ್ಕೆ ಅವರು ಹೋಗಬೇಕು ಹಾಜರಿ ಆಗಬೇಕು, ಅದು ಗುಂಪು ಗುಂಪಾಗಿ ಹೋಗಬೇಕು, 20 ಜನ ಇದ್ದರೆ 20 ಜನ 200 ಜನ ಇದ್ದರೆ 200 ಜನ. ಒಬ್ಬ ಹೋಗದೇ ಇದ್ದರೂ ಅವನಿಗೆ ವಾರೆಂಟ್ ಇಷ್ಯೂ ಆಗುವಂತಹ ಸಂದರ್ಭಗಳಲ್ಲಿ ಅದರಲ್ಲೂ ನಮ್ಮಂತಹವರಿಗೆ ಯಾರೂ ಹಿಡಿಯುವುದಿಲ್ಲ ಬಿಡಿ, ತಮಗೂ ಗೊತ್ತಿದೆ. ಏಕೆಂದರೆ ಬಡವರು ಕಡಲೆಕಾಯಿ ಮಾರಾಟ ಮಾಡುವವನು ಸೈಕಲ್ ಹೊಡೆದುಕೊಂಡು ಹೋಗುವವನು ಮೋಟಾರು ಸೈಕಲ್ ಮೇಲೆ ಹೋಗುವವನು ಅಥವಾ ಟೊಮ್ಯಾಟೋ ಮಾರಾಟ ಮಾಡುವವನು ಅಥವಾ ಅಂಗಡಿಯಲ್ಲಿ ಒಳ್ಳೆಯವನು ಯಾರಾದರೂ ಹಾಲು ಅಥವಾ ಬಿಸ್ಕತ್ತು ತೆಗೆದುಕೊಳ್ಳುವುದಕ್ಕೆ ಬಂದಿದ್ದರೆ ಅವನಿಗೆ ಹಿಡಿದುಕೊಂಡು ಹೋಗಿ ಪೋಲೀಸ್ ನವರು ಮೊಕದ್ದಮೆ ಹಾಕುತ್ತಾರೆ. ನೀನೂ ಗಲಭೆಯಲ್ಲಿ ಇದ್ದೆ ಎಂದು ಸೇರಿಸುತ್ತಾರೆ. ಆದ್ದರಿಂದ ಹಿಂದೆ ನಡೆದಿರುವಂತಹ ಗಲಭೆಗಳಲ್ಲಿ ಬಹಳಷ್ಟು ಜನ ಬಡವರು ಇದ್ದು ಆ ಬಗ್ಗೆ ಇನ್ನೂ ನ್ಯಾಯಾಲಯದಿಂದ ತೀರ್ಪು ಬಾರದೇ ಇರುವುದರಿಂದ ನಮ್ಮ ಸರ್ಕಾರ ಆ ಮೊಕದ್ದಮೆಗಳನ್ನು ಹಿಂದೆ ಪಡೆಯಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸರ್ಕಾರಕ್ಕೂ ಹಾಗೂ ಮಾನ್ಯ ಗೃಹ ಸಚಿವರಲ್ಲಿ ನಾನು ವಿನಂತಿ ಮಾಡಿಕೊಂಡು ತಾವು ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ SRI S. RAJENDRAN (K.G.F) : Mr. Speaker Sir, I have to felicitate our Hon. Minister for Finance for having presented the Bugdet for 1996-97. It is a very good Budget. I am happy to know that it is a budget for the poor. ಇದು ಬಡವರಿಗಾಗಿ ಮಾಡಿದ ಬಜೆಟ್. Sir, it has been proposed to provide school bag and note-books for SC/ST

girl students. What is the sin that the SC/ST boys have committed to derive this benefit? Do you mean to say that the SC/ST boys should not come up? ಇವರ ಬಜೆಟ್ ಹೇಗೆ ಇದೆ ಎಂಬುದಕ್ಕೆ ನಾನೊಂದು ಎಕ್ಸಾಂಪಲ್ ಕೊಡಬಯಸುತ್ತೇನೆ. ಒಬ್ಬ ಹುಡುಗಿ ಉದ್ದಕೂದಲಿನ ಸುಂದರಿಯನ್ನು ನೋಡಿ ಒಬ್ಬ ಅವಳನ್ನು ಮದುವೆಯಾಗಬೇಕೆಂದುಕೊಂಡು ಮದುವೆಯಾಗುತ್ತಾನೆ. ಮದುವೆಯಾದ ನಂತರ ಹೆಂಡತಿ ಕುಳಿತು ರೂಮಿಗೆ ಹೋಗಿ ನೋಡುತ್ತಾನೆ, ಅವಳ ಉದ್ದನೆಯ ಕೂದಲು ಕಾಣಿಸುವುದಿಲ್ಲ. ಚಕಿತನಾದ ಆತನು ಹೆಂಡತಿಗೆ ಕೂದಲೆಲ್ಲಿ ಎಂದು ಕೇಳಿದಾಗ ಅದನ್ನು ಸ್ಟ್ಯಾಂಡ್‌ನಲ್ಲಿ ಇಟ್ಟಿದ್ದೇನೆ ಎಂದು ಹೇಳುತ್ತಾಳೆ. ಏಕೆ ಸ್ಟ್ಯಾಂಡ್‌ನಲ್ಲಿ ನಿನ್ನ ಕೂದಲು ಎಂದು ಪುನಃ ಕೇಳಿದಾಗ, ಅದು ರೆಡಿಮೇಡ್ ಕೂದಲು. ಸ್ಟ್ಯಾಂಡ್‌ನಲ್ಲಿ ಇಡದೆ ಇನ್ನೇನು ಮಾಡಲಾಗುತ್ತದೆ ಎಂದು ಉತ್ತರಿಸಿದಳಂತೆ. ಇದನ್ನು ಕೇಳಿದ ಗಂಡನಿಗೆ ತುಂಬಾ ನೋವು ಆಗುತ್ತದೆ. ಉದ್ದ ಕೂದಲನ್ನು ನೋಡಿ ನಾನು ಮದುವೆಯಾಗಿ ಮೋಸಹೋದೆ. ಈಗ ಏನೂ ಮಾಡಲು ಬರುವುದಿಲ್ಲ ಡೈವೋರ್ಸ್ ಮಾಡುವ ಹಾಗೂ ಇಲ್ಲ, ಸಂತೋಷದಿಂದ ಇರುವ ಹಾಗೂ ಇಲ್ಲ ಎಂದು ಆ ರೀತಿಯಾಗಿದೆ.ದುಃಖಿಸುತ್ತಾನೆ ಇದು ಆರೀತಿಯಾಗಿದೆ. Sir, on Kerosene They have increased the tax from 6% to 8%. I would like to know whether I.A.S. officers are using kerosene? Whether Class-I officer are using if? Sir, we all know that there is acute power shortage everywhere in ouf State. The entire poor people are depending upon Kerosene only. At the time of examination, the poor students have to with the help of study candle and kerosene lamps. When I was studying was using kerosene lamp only. I do not understand the logic of the Finance Minister behind raising this tax on kerosene. Surprisingly the Government has reduced the tax on Liquor from 25% to 20%. ಕುಡಿಯುವವರು ಅಂದರೆ ಬಡವರು ಕುಡಿದು ಸಾಯಲಿ ಎಂದು ಲಿಕ್ಕರ್ ರೇಟನ್ನು ಕಡಿಮೆ ಮಾಡಿದ್ದೀರಿ? Infact, they should have imposed higher taxes on liquor. The higher the tax you impose on liquor, the less number of people will consume the liquor. The Government is promising to bring prohibition. When such is the case, what was the necessary to reduce the taxes on liquor? ನಮಗೆ ಮಾನ್ಯ ದೇವೇಗೌಡರು ಯಾವಾಗಲೂ ದೇವರ ತರಹ, ಇವೊತ್ತಿಗೂ ಹಾಗೆಯೇ ಇದ್ದಾರೆ. ನಾನು ಮಣ್ಣಿನ ಮಗ, ನಾನು ರೈತರ ಮಗ, ನಾನು ಬಡವರ ಪರವಾಗಿ ಇರುವವನು ಎಂದೆಲ್ಲಾ ಹೇಳುತ್ತಾರೆ. ಈಗ ಟ್ರಾಕ್ಟರ್ ಮುಂತಾದವುಗಳಿಗೆ 4 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಅದನ್ನು 2 ಪರ್ಸೆಂಟಿಗೆ ಇಳಿಸಲು ಆಗುತ್ತಿಲ್ಲವೇ? ಇದನ್ನು

ಉಪಯೋಗಿಸುವ ರೈತರಿಗಾಗಿ ಕಡಿಮೆ ಮಾಡಬಹುದಾಗಿತ್ತಲ್ಲಾ? ಇದರಿಂದ ರೈತರು ಕೃಷಿ ಉತ್ಪನ್ನಗಳ ಅಭಿವೃದ್ಧಿಯನ್ನು ಮಾಡಿಕೊಳ್ಳಲು ಅನುಕೂಲವಾಗುತ್ತಿರಲಿಲ್ಲವೇ? ಮಾರ್ಬಲ್ಸ್‌ಗೆ 15 ರಿಂದ 12 ಪರಸೆಂಟ್‌ಗೆ ಇಳಿಸಿದ್ದಾರೆ. ಮಾರ್ಬಲ್‌ನ್ನು ಯಾರು ಉಪಯೋಗಮಾಡುತ್ತಾರೆ? ಶ್ರೀಮಂತರು ಮಾತ್ರವಲ್ಲವೇ? ಮಾರ್ಬಲ್‌ನ್ನು ಅಂಬೇಡ್ಕರ್ ಮನೆಗಳಿಗೆ ಹಾಕುತ್ತಾರೋ? ಖಂಡಿತಾ ಇಲ್ಲ. ಇದರ ಮೂಲಕ ಶ್ರೀಮಂತ ಜನರಿಗೆ ಉಪಯೋಗ ಮಾಡಿಕೊಟ್ಟಿದ್ದಾರೆ, ಅವರಿಗೆ ಈ ರೀತಿಯ ಕನಸಿಷನ್ಸ್ ನಮ್ಮ ಸರಕಾರದವರು ಹೀಗೆಲ್ಲಾ ಬಜೆಟ್ ಮಾಡಿದ್ದಾರೆ, ಮಾರ್ಬಲಿಗೆ ರೇಟ್ ಕಡಿಮೆ ಮಾಡಿದ್ದಾರೆ ಅಂದರೆ ನಮ್ಮ ಕ್ಷೇತ್ರದವರು ನಮಗೂ ಹತ್ತು ಮಾರ್ಬಲ್ ತಂದುಕೊಡಿ ಎಂದರೆ ನಾನು ತಂದುಕೊಡಿ ಎಂದರೆ ನಾನು ತಂದುಕೊಡಲು ಸಾಧ್ಯವೇ? ಇಂಥಹ ವಿರೋಧಾಭ್ಯಾಗಳು ಈ ಬಜೆಟನಲ್ಲಿ ಎಂದಿವೆ. We must see that the budget should satisfy the poor people. Now-a-days everybody including a PUC boy knows what is happening in the Government. For Mercury, you have reduced the tax from 10% to 8% which is beneficial for goldsmiths and diamond merchants. The poor people cannot see the gold and some of them cannot even touch the gold.

ಶ್ರೀ ಎನ್. ರಾಜಣ್ಣ : ಮಾನ್ಯ ರಾಜೇಂದ್ರನ್‌ರವರು ಸ್ವಾಕಷ್ಟು ಬಂಗಾರವನ್ನು ಹಾಕಿಕೊಂಡು ಈ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು : ರಾಜೇಂದ್ರನ್‌ರವರು ಹಾಕಿಕೊಂಡಿರುವುದೆಲ್ಲಾ ರಿಯಲ್ ಗೋಲ್ಡ್ ಎಂದು ಅವರುಗಳು ತಿಳಿದುಕೊಂಡು ಬಿಟ್ಟಿದ್ದಾರೆ.

ಶ್ರೀ ಎನ್. ರಾಜಣ್ಣ : ಅದು ಚಿನ್ನವಲ್ಲದಿದ್ದರೆ ಉಮಾ ಗೋಲ್ಡ್ ಇರಬಹುದೇ?

ಶ್ರೀ ರಾಜೇಂದ್ರನ್ : ಅದು ಉಮಾಗೋಲ್ಡ್ ಅಥವಾ ರಮಾಗೋಲ್ಡ್ ಅಲ್ಲ. ನಾನು ಹೇಳುವುದೇನೆಂದರೆ ನಾವು ನಮ್ಮ ವಿಚಾರಗಳನ್ನು ಫೈನಾನ್ಸ್ ಮಿನಿಸ್ಟರ್ ಹತ್ತಿರ ಹೇಳಬೇಕಾಗುತ್ತದೆ. ರಿಸರ್ವ್‌ಬ್ಯಾಂಕ್ ನಮಗೆ ಹತ್ತಿರ ಇದೆ ಎಂದು ನಾವು ಹತ್ತಿರ ಹೇಳುವ ಹಾಗಿಲ್ಲವಲ್ಲಾ? We are giving prominence and concessions to upper caste people and commercial people. ನಿಮ್ಮ ಕನಸೆಷನ್‌ಗಳು ಅಪ್ಪರಮೆಂಟ್ ಜನರಿಗೆ ಮಾತ್ರ ತಲುಪುತ್ತದೆ. ಬಡವರಿಗೆ ತಲುಪುತ್ತಿಲ್ಲ. ಈಗ ಇಂಡಸ್ಟ್ರೀಗಳ ಬಗ್ಗೆ ತಾವು ಮಾತನಾಡಿದ್ದೀರಿ. ಅದರ ಬಗ್ಗೆ ನೀವು ಕೊಟ್ಟ ವಿವರಗಳನ್ನು ನೋಡಿ ಬಹಳ ಸಂತೋಷವಾಗಿದೆ. ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಆಗಬೇಕು. ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಕೋಲಾರ ಜಿಲ್ಲೆ ಇಂಡಸ್ಟ್ರೀಯಲ್ಲಿ ಬಹಳ ಹಿಂದೆ ಬಿದ್ದಿದೆ. ಅದರಲ್ಲೂ ಕೆಜಿಎಫ್‌ನ ಪರಿಸ್ಥಿತಿಯು ಏನು ಎಂಬುದು ನಿಮಗೆ ಚೆನ್ನಾಗಿ ಗೊತ್ತಿದೆ. ನಮ್ಮಲ್ಲಿ ಸಾರಿಗೆ ವ್ಯವಸ್ಥೆಯು ಹೇಗಿದೆ ಎಂಬುದೂ ಕೂಡ ನಿಮಗೆ

ಗೊತ್ತು. ಈ ಕಡೆಗೆ 50 ಫೀಟ್, ಆ ಕಡೆಗೆ 100 ಫೀಟ್. ಒಂದು ಬಸ್ ಎಷ್ಟು ಲೇನ್ಸ್ ಇದೆ ಎಂಬುದು ತಮಗೆ ಗೊತ್ತು. ಇದು ನಮ್ಮ ರಸ್ತೆಯ ಪರಿಸ್ಥಿತಿ ನಮ್ಮಲ್ಲಿನ ಇತರ ಪರಿಸ್ಥಿತಿಗಳು ತಮಗೆಲ್ಲಾ ಗೊತ್ತಿರಬೇಕು. You have not tried to improve the KGF. What for it it happening? There is politics of caste, colour and creed. That is the reason that you are not giving enough funds to KGF. Mr. Speaker knows it very well. You are from our District. We are the poorest in the state. We are having highest SC population in the State. There are highest Tamil speaking people. We are citizens of Karnataka. My father, grand father born here. Unfortunately, due to the negligence and mistake on the part of the Govt. We have not been able to study Kannada. It is not our mistake. We are proud that we are the citizens of this State. However, you have neglected us so far. You know that in B.G.M.L. there were 36000 people and now only 6000 people are there. Where will they go tomorrow? You know that Kolar is industrially backward. Why cannot the Govt.come forward to develop Kolar industrially? You are saying that there is no money we are not able to do it. What for then you want Industries Department here? Why you want Minister to hold that portfolio? Is it not your duty to rectify your mistakes? Is it not your duty to look after the welfare of those citizens? My KGF citizens are reeling under this pain. ಉದಾಹರಣೆಗೆ ಅನ್ನವನ್ನು ಮಾಡಿಬಿಟ್ಟು ಅದನ್ನು ಬೆಂದಿದೆಯೋ ಇಲ್ಲವೋ ಎಂದು ನೋಡಲು ಒಂದೇ ಅಗುಳನ್ನು ನೋಡುತ್ತಾರೆ. ಆಗ ಅದು ಬೆಂದಿದೆಯೋ ಇಲ್ಲವೋ ಎಂಬುದು ಗೊತ್ತಾಗುತ್ತದೆ.

I, therefore, request the Hon. Finance Minister to seriously concentrate on the development of KGF and give enough funds for its alround development. The Government has just given Rs. 10 lakhs for civic amenities. It is not a shameful thing? Even I feel ashamed of telling this on the floor of this House. There is planty of scope to develop Kolar. You have neglected our SC people who are residing there since age long. You are telling in this statement that you have given sufficient money for the development of the Scheduled Caste and Scheduled tribes. Kindly see the statistics relating to the population

of SCs/STs in K.G.F. You are denying all facilities to the huge population in KGF, where will they go? They cannot go anywhere. It is neither rural area nor a city area. You have mentioned its name as City Municipality. That City Municipality has got only Rs. 10 lakhs. How can we develop? I request the Hon'ble Finance Minister to kindly provide enough funds.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅಧ್ಯಕ್ಷರೇ, ಅದು ಸ್ಪೆಶಲ್ ಗ್ರಾಂಟೆಂಬುದು ಮಾನ್ಯ ಸದಸ್ಯರಿಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ರಾಜೇಂದ್ರನ್ : ಸ್ವಾಮಿ, ನಾನು ಯಾವ ಮಂತ್ರಿ ಹತ್ತಿರ ಹೋದ ತಕ್ಷಣ ಅದು ರೂರಲ್ ಏರಿಯಾ ಅಲ್ಲ, ಅಲ್ಲಿ ಐಆರ್‌ಡಿಪಿ ಇಲ್ಲ, ಎಪಿಎಂಸಿ ಇಲ್ಲ, ಎನ್ನುತ್ತಾರೆ. ಅದಕ್ಕೇ ಅದು ಸಿಟಿ ಮುನಿಸಿಪಾಲಿಟಿ. ಸಿಟಿ ಮುನಿಸಿಪಾಲಿಟಿ ಒಂದು ಕಮ್ಯುನಿಟಿ ಹಾಲ್ ಇಲ್ಲ, ಒಳ್ಳೆಯ ಬಸ್‌ಸ್ಟ್ಯಾಂಡ್ ಇಲ್ಲ.

Nothing is there in KGF. Can you tell whether there is any Government Office of Karnataka Government in KGF? If it is not true. I will accept it and I will withdraw whatever I have said in this regard. ಅಲ್ಲಿ ಸರ್ಕಾರದ ಆಫೀಸು ಒಂದೂ ಇಲ್ಲ. ಅದು ಸಿಟಿ ಮುನಿಸಿಪಾಲಿಟೀಯೋ? ಆ ಹೆಸರು ಬೇಕೆ? I reguest you kindly to take interest and provide enough funds. Please encourage for the setting up of morethan 16.00 graduates are wandering here and there. Tomorrow the entire educated people may turn out to be naxalities. Tomorrow they may do robberies. Please don't allow to become naxalities or robberers. I therefore, request the Government through the Hon'ble Speaker, to take initiative and provide industries electricity, water and all other infrastructural facilities because there are no agriculturists in KGF. I have asked about the number of revenue sites available in KGF? But I have not so far received any reply for that. Why? Because of negligence. Therefore, I request the Hon'ble Speaker kindly to instruct the Government to allot more funds to develop KGF and for establishing more small scale industries. I thank the Hon'ble Speaker for giving me this opportunity to speak and conclude.

+ ಶ್ರೀ ಜುಲ್ಫೀಕರ್ ಅಲಿ ಹಶ್ಮಿ (ಬೀದರ್) : ಅಧ್ಯಕ್ಷರೇ ನನಗೆ ಹಿಂದಿಯಲ್ಲಿ ಮಾತನಾಡಲು ಅವಕಾಶ ಕೊಡಿ. ಇಲ್ಲಿ ಹಿಂದಿ ರಿಪೋರ್ಟರ್ ಇದ್ದಾರೆ. ಅವರನ್ನು ಕರೆಯಿಸಿ. ನಾವೂ ಕನ್ನಡಿಗರೇ, ಆದರೆ ಸರ್ಕಾರದಿಂದ ಕನ್ನಡ ನಾವು ಕಲಿಯಲು ಪ್ರೋತ್ಸಾಹ ಇಲ್ಲ, ಈಗ ತಾನೇ ಸಗೀರ್ ಅಹಮದ್ ಸಾಹೇಬರು ಹೇಳಿದಂತೆ ಎಷ್ಟು ಸಲ ಉರ್ದು ಸ್ಕೂಲುಗಳಿಗೆ ಕನ್ನಡ ಟೀಚರಗಳನ್ನು ಕೊಡಿ ಎಂದು ಕೇಳಿದರೂ ಕೊಟ್ಟಿಲ್ಲ. ಮತ್ತೆ ಕನ್ನಡ ಹೇಗೆ ನಾವು ಮಾತನಾಡಬೇಕು? ಇದು ನಮ್ಮ ಮಿಸ್ಟೇಕ್ ಇಲ್ಲ. ಕನ್ನಡದ ಬಗ್ಗೆ ಮಾಸ್ ಪ್ರೋಗ್ರಾಂ ಹಾಕಿ, ನಾವು ಏನಾದರೂ ಸಮರ್ಥನೆ ಮಾಡುತ್ತೇವೆ.

ಅಧ್ಯಕ್ಷರು : ಇಷ್ಟು ಮಾತನಾಡಿದರೆ ಸಾಕು, ಮಾತನಾಡಿ.

ಶ್ರೀ ಜುಲ್ಫೀಕರ್ ಅಲಿ ಹಶ್ಮಿ : ಈಗ ನಾನು ಭಾಷಣ ಮಾಡಲು ಹೋಗುವುದಿಲ್ಲ. ಏಕೆಂದರೆ ಬೇರೆಯವರೆಲ್ಲಾ ಸರ್ಕಾರಕ್ಕೆ ಒಳ್ಳೆಯ ಸಜೆಷನ್ ಕೊಟ್ಟಿದ್ದಾರೆ. ಈ ಸರ್ಕಾರದಲ್ಲಿ ನನ್ನದು ಒಂದೇ ವಿನಂತಿ. ಏಕೆಂದರೆ ಈ ಜನತಾದಳ ಸರ್ಕಾರ ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ಮತ್ತು ದಲಿತರ ಮತದ ಮೇಲೆ ಬಂದದ್ದು. ಅಲ್ಪಸಂಖ್ಯಾತರ ಸಮಸ್ಯೆಗಳ ಬಗ್ಗೆ ತಿಳಿಯಲು ಒಂದು ಮೀಟಿಂಗ್ ಕರೆಯಿರಿ. ನಮ್ಮಲ್ಲೂ ಇಂಟೆಲೆಕ್ಚುಯಲ್ಸ್ ಇದ್ದಾರೆ. ಅವರನ್ನೆಲ್ಲಾ ಕರೆಸಿ. ನಮಗೆ ಮಾನ್ಯ ದೇವೇಗಾಡರ ಮೇಲೆ ಬಹಳ ವಿಶ್ವಾಸ ಇದೆ. ಸಿದ್ಧರಾಮಯ್ಯ ಸಾಹೇಬರು ನಮ್ಮ ನಾಯಕರು. 5-10 ವರ್ಷ ಅವರ ಜೊತೆ ನಾನು ಕೆಲಸ ಮಾಡಿದ್ದೇನೆ. ಅವರ ಮೇಲೆ ನನಗೆ ಬಹಳ ವಿಶ್ವಾಸ ಇದೆ. ತಾವು ಕ್ಯಾಬಿನೆಟನಲ್ಲಿ ಹೇಳಬೇಕು. ನಮಗೆ ನಜೀರ್ ಸಾಹೇಬರ ಮೇಲಿದ್ದಷ್ಟು ವಿಶ್ವಾಸ ಇವರ ಮೇಲೂ ನಮಗಿದೆ. ಯಾವುದೇ ಸರಕಾರ ಬರಲಿ ಒಳ್ಳೆಯ ಸ್ಕೀಂ ಮಾಡುತ್ತಾರೆ. ಆದರೆ ಇಂಪ್ಲಿಮೆಂಟಾಗುವುದಿಲ್ಲ. ಈಗ ಅಲ್ಪಸಂಖ್ಯಾತರ ಅಭಿವೃದ್ಧಿ ಸಂಸ್ಥೆ, ಎಸ್‌ಸಿಎಸ್‌ಟಿ ಅಭಿವೃದ್ಧಿ ಸಂಸ್ಥೆ ಮತ್ತು ಹಿಂದುಳಿದ ಅಭಿವೃದ್ಧಿ ಸಂಸ್ಥೆಗಳೆಲ್ಲಾ ಇವೆ. ಅವುಗಳಲ್ಲಿ ಸ್ಕೀಂ ಇವೆ. ಆದರೆ 10 ಪರ್ಸೆಂಟ್ ಸಹ ಇಂಪ್ಲಿಮೆಂಟಾಗುವುದಿಲ್ಲ. ಏಕೆಂದರೆ ಬ್ಯಾಂಕಿನವರೆಲ್ಲಾ ಪಕ್ಷಪಾತ ಬುದ್ಧಿಯ ಅಧಿಕಾರಿಗಳು. ನಾನು ಇದನ್ನು ಸೀರಿಯಸ್ಸಾಗಿ ಹೇಳುತ್ತಿದ್ದೇನೆ. ಸರ್ಕಾರದ ಸ್ಕೀಂಗಳು ಏನಿವೆ ಅವುಗಳನ್ನು ಮಾಡಿರಿ ಎಂದರೂ ಬ್ಯಾಂಕನವರು ನಮಗೆ ದುಡ್ಡು ಕೊಡುವುದಿಲ್ಲ. ಆದರೆ ಕೋಟ್ಯಾಧಿಪತಿಗಳಿಗೆ ಅವರು ಲೋನ್ ಕೊಡುತ್ತಾರೆ. ನಮ್ಮ ಸರ್ಕಾರ ಬೀದರ್ ಹಿಂದುಳಿದ ಜಿಲ್ಲೆಯವರು ಕೋಟ್ಯಾಂತರ ರೂ.ಗಳನ್ನು ಕೆಎಸ್‌ಎಫ್‌ಸಿ ಮೂಲಕ ದುಡ್ಡು ಕೊಟ್ಟಿದೆ. 25 ಪರ್ಸೆಂಟ್ ಸಬ್ಸಿಡಿ ಸಿಕ್ಕಿದೆ. ಕೋಟ್ಯಾಂತರ ರೂ.ಗಳಷ್ಟು ಸಬ್ಸಿಡಿ ತೆಗೆದುಕೊಂಡು ಹೋಗಿಬಿಟ್ಟಿದ್ದಾರೆ. ಆದರೆ ನಮಗ 5 ಸಾವಿರ ಲೋನ್ ಕೊಡುವುದಿಲ್ಲ. ಕೊಡಬೇಕಾದರೂ ಅವರ ಹಿಂದೆ ಒಂದು ವರ್ಷ ನಾವು ತಿರುಗಬೇಕು. ನಮ್ಮ ಸರ್ಕಾರದ ಯಾವುದೇ ಸ್ಕೀಂ ಇರಲಿ, ಆಡಳಿತದ ಮೇಲೆ ತಮಗೆ ಕಂಟ್ರೋಲ್ ಇರಬೇಕು. ಮೈನಾರಿಟೀಸ್ ಸಂಸ್ಥೆ, ಎಸ್‌ಸಿಎಸ್‌ಟಿ ಸಂಸ್ಥೆಗಳಲ್ಲಿ ಬೇಕಂತಲೇ ಅವರು ಹೀಗೆಲ್ಲಾ ಮಾಡುತ್ತಿದ್ದಾರೆ. ಮತ್ತೊಂದು ಮಾನ್ಯ ದೇವರಾಜ ಅರಸರ ಕಾಲದಲ್ಲಿ

ನಮಗೆ ಅರಬಿಕ್ ಸ್ಕೂಲ್ ಸಿಕ್ಕಿತ್ತು. ಆದರೆ ಕಾಂಗ್ರೆ ಮತ್ತು ಜನತಾದಳ ಸರ್ಕಾರಗಳು ಅದನ್ನು ಬ್ಯಾನ್ ಮಾಡಿವೆ. ತಾವು ಅದಕ್ಕೆ ಪರ್ಮಿಷನ್ ಕೊಡಬೇಕು.

SRI QAMARUL ISLAM : Arabic, Sanskrit and Persian are the oriental languages and this was started at the time of late Deveraj Urs.

ಶ್ರೀ ಜುಲ್ಫೀಕರ್ ಅಲಿ ಹಶ್ಮಿ : ಸರ್ಕಾರದಲ್ಲಿ ಮತ್ತೊಂದು ವಿನಂತಿ ಇದೆ. ಕೇಂದ್ರಸರ್ಕಾರದ ಕಾರ್ಯಕ್ರಮ ಒಂದು ಇದೆ. ಆ ಕಾರ್ಯಕ್ರಮದಡಿಯಲ್ಲಿ ಬೀದರ್ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳು ಬರುತ್ತವೆ. ಕೋಟ್ಯಾಂತರ ರೂ. ಹಣ ಲ್ಯಾಪ್ಸ್ ಆಗುತ್ತಿದೆ. ನಮ್ಮ ಅಧಿಕಾರಿಗಳು ಇಂಪ್ಲಿಮೆಂಟ್ ಮಾಡುತ್ತಿಲ್ಲ. ಒಂದಲ್ಲ ಹತ್ತು ಸಲ ನಾನು ಶಿಕ್ಷಣ ಸಚಿವರಿಗೆ ಹೇಳಿದ್ದೇನೆ. ನೋಡಿ ಈ ಸ್ಕೀಂ ಲ್ಯಾಪ್ಸ್ ಆಗುತ್ತಿದೆ. ಅಲ್ಪಸಂಖ್ಯಾತರ ಸ್ಕೀಂ ಇದು ಎಂದರೂ ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂದು, ಆದ್ದರಿಂದ ತಮ್ಮಲ್ಲಿ ವಿನಂತಿ, ಆ ಏನು ಕೇಂದ್ರ ಸರ್ಕಾರದಲ್ಲಿ ಕಾರ್ಯಕ್ರಮದಲ್ಲಿ ಈ ಮಾರ್ಚಿತಿಂಗಳೊಳಗೆ ಎಲ್ಲಾ ಹಣ ಲ್ಯಾಪ್ಸ್ ಆಗದಂತೆ ನಾವು ನೋಡಿಕೊಳ್ಳಬೇಕು. ಅನಂತರ ಅಲ್ಪಸಂಖ್ಯಾತರ ಅಭಿವೃದ್ಧಿ ಸಂಸ್ಥೆ, ಹಿಂದುಳಿದವರ ಅಭಿವೃದ್ಧಿ ಸಂಸ್ಥೆ ಮತ್ತು ಎಸ್‌ಸಿಎಸ್‌ಟಿ ಅಭಿವೃದ್ಧಿಸಂಸ್ಥೆಗಳೇನೋ ಇವೆ, ತಮ್ಮಲ್ಲಿ ವಿನಂತಿ, ತಾವು ಸಪರೇಟಾಗಿ ಮೈನಾರಿಟೀಸ್ ಆರ್ಥಿಕ ಅಭಿವೃದ್ಧಿ ನಿಗಮ ಮಾಡಿದರೆ ಚೆನ್ನಾಗಿರುತ್ತದೆ. ಕೆಎಸಎಫಸಿಯಿಂದ ಹೇಗೆ ಡೈರೆಕ್ಟಾಗಿ ಲೋನ್ ಕೊಡುತ್ತೀರೋ ಅದೇ ರೀತಿಯಲ್ಲಿ ಈ ನಿಗಮದಿಂದ ಡೈರೆಕ್ಟಾಗಿ ಲೋನ್ ಕೊಡಬೇಕು. ತಾವು ಇದನ್ನು ಬ್ಯಾಂಕಗೆ ಅಟ್ಯಾಚ್ ಮಾಡಿದರೆ ಅವರು ಇಂಪ್ಲಿಮೆಂಟ್ ಮಾಡುವುದಿಲ್ಲ. ಅವರು ನಮ್ಮ ಮಾತು ಕೇಳುವುದಿಲ್ಲ. ನಿಮ್ಮ ಮಾತೂ ಕೇಳುವುದಿಲ್ಲ. ಮತ್ತು ಮೈನಾರಿಟೀಸ್ ಅಭಿವೃದ್ಧಿ ಸಂಸ್ಥೆ ಮತ್ತು ಹಿಂದುಳಿದವರ್ಗಗಳ ಅಭಿವೃದ್ಧಿ ಸಂಸ್ಥೆಗಳೆರಡಕ್ಕೂ ಒಬ್ಬರೇ ಅಭಿವೃದ್ಧಿ ಅಧಿಕಾರಿ ಇದೀ ಡಿಸ್ಟ್ರಿಕ್ಟ್‌ಗೆ, ಆದರಿಂದ ಈ ಎರಡೂ ಸಂಸ್ಥೆಗಳಿಗೆ ಸಪರೇಟಾಗಿ ಒಬ್ಬೊಬ್ಬ ಅಭಿವೃದ್ಧಿ ಅಧಿಕಾರಿಯನ್ನು ನೇಮಿಸಬೇಕು. ಮತ್ತು ಬಜೆಟನಲ್ಲಿ ಬ್ಯಾಕ್ ವರ್ಡ ಮತ್ತು ಮೈನಾರಿಟೀಸಗೆ ಹಾಸ್ಟೆಲ್, ಬ್ಯಾಕ್‌ವಾರ್ಡ್ ಮಾನಾರಿಟೀಸ್ ಶಾಲೆಗಳ ಬಗ್ಗೆ ಹೇಳಿದ್ದಾರೆ.

9.00 ಪಿ.ಎಂ.

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ : ನಮ್ಮ ಸರ್ಕಾರದಲ್ಲಿ ನನ್ನದು ವಿನಂತಿ ಇದೆ. ಸಪರೇಟ್ ಆಗಿ ಮೈನಾರಿಟಿ ಸಲುವಾಗಿ ಹಾಸ್ಟೆಲ್ಸ್ ಕೊಡಿ. ತಾವು ಈಗ ವಸತಿ ಶಾಲೆಗಳನ್ನು ಏನು ಕೊಟ್ಟಿದ್ದೀರಿ ಅದಕ್ಕಿಂತ ಹೆಚ್ಚಾಗಿ ನಮಗೆ ಹಾಸ್ಟೆಲ್‌ಗಳನ್ನು ಕೊಡಿ. ಪ್ರೈಮರಿ ಲೆವೆಲ್‌ನಿಂದ ಜೂನಿಯರ್ ಕಾಲೇಜುವರೆಗೂ ತಾವು ಹಾಸ್ಟೆಲ್ ಕೊಡಿ. ಏಕೆಂದರೆ ನಮ್ಮ ದೇಶಕ್ಕೆ ಸ್ವಾತಂತ್ರ ಬರುವುದಕ್ಕೆ ಮುಂಚೆ ಮೈನಾರಿಟೀಸ್ ಪರ್ಸೆಂಟೇಜ್ ನಮ್ಮ ರಾಷ್ಟ್ರದಲ್ಲಿ ಎಜುಕೇಷನ್ ಮತ್ತು ಎಂಪ್ಲಾಯ್‌ಮೆಂಟ್‌ನಲ್ಲಿ 35-36 ಪರ್ಸೆಂಟ್ ಇತ್ತು. ಸ್ವಾತಂತ್ರ ಬಂದ ಮೇಲೆ ಕಾಂಗ್ರೆಸ್ ಸರ್ಕಾರ ಬಂತು ಜನತಾದಳ ಸರ್ಕಾರದ ಬಂತು. ಎಲ್ಲರೂ ಮಾತನಾಡಿದರು. ಈಗ ನಮ್ಮ

ಪರ್ಸೆಂಟೇಜ್ ಏನು ಇದೆ ಎಂಬುದರ ಬಗ್ಗೆ ತಾವು ಸೆಂಟ್ರಲ್ ಗೌರ್‍ನಮೆಂಟಿನ ಸರ್ವೆ ನೋಡಿ. ಮಂಡಲ್ ಕಮೀಷನ್ ರಿಪೋರ್ಟ್ ಅನ್ನು ತಾವು ನೋಡಿ. ಈಗ 1.5 ಪರ್ಸೆಂಟ್ ಮುಸ್ಲಿಂರದ್ದು ಇದೆ. ಈಗ ನಾವು ಇಷ್ಟು ಕೆಳಗಡೆ ಹೋಗಿದ್ದೇವೆ. ಎಜುಕೇಷನಲಿ ಮತ್ತು ಎಕನಾಮಿಕಲಿ ಮತ್ತು ಎಂಪ್ಲಾಯಿಮೆಂಟಿನಲ್ಲಿ ನಮ್ಮ ಸರ್ಕಾರ ಎಸ್‌ಟಿ.ಎಸ್.ಸಿ ಸಲುವಾಗಿ ಒಳ್ಳೆಯ ಸ್ಕೀಮುಗಳನ್ನು ಮಾಡುತ್ತಿದ್ದಾರೆ. ನಾನು ಬಹಳ ದುಃಖದಿಂದ ಒಂದು ಮಾತನ್ನು ಹೇಳುತ್ತಿದ್ದೇನೆ. ೬ ತಿಂಗಳಿಗೆ ಒಂದು ಸಾರಿ ಪರಿಶಿಷ್ಟಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಒಂದು ಸ್ಕಾಲರ್ ಶಿಫ್ ಸಿಗುತ್ತಿದೆ. ಆದ್ದರಿಂದ ಸರ್ಕಾರ ಪ್ರತಿ ತಿಂಗಳಿಗೊಮ್ಮೆ ಸ್ಕಾಲರ್ ಶಿಫ್ ಸಿಗುವ ವ್ಯವಸ್ಥೆ ಮಾಡಿಕೊಡಬೇಕು. ಮಾನ್ಯ ಅಧ್ಯಕ್ಷರೇ, ನಮ್ಮ ಬೀದರ್‌ನಲ್ಲಿ 93-94 ನಿಂದ ಕಾಲೇಜು ವಿದ್ಯಾರ್ಥಿಗಳಿಗೆ ಎರಡು ವರ್ಷಗಳಿಂದ ಸ್ಕಾಲರ್ ಶಿಫ್ ಇಲ್ಲ. ಸುಮಾರು 40 ಲಕ್ಷ ರೂಪಾಯಿ ಕೊಡಬೇಕು ಇನ್ನೂ ಬಿಡುಗಡೆ ಆಗಿಲ್ಲ. ಮಾನ್ಯ ಹಣಕಾಸಿನ ಸಚಿವರಲ್ಲಿ ನಮ್ಮ ವಿನಂತಿ ಏನೆಂದರೆ ತಾವು ಬೇಗ ಹಣವನ್ನು ಬಿಡುಗಡೆ ಮಾಡಿಕೊಡಬೇಕು. ನಾನು ಈಗ ನಮ್ಮ ರಾಜ್ಯ ಭಾಷೆಯಲ್ಲಿ ಮಾತನಾಡಿದೆ. ಅದರಲ್ಲಿ ಏನಾದರೂ ತಪ್ಪು ಇದ್ದರೆ ಕ್ಷಮಿಸಬೇಕು.

ಅಧ್ಯಕ್ಷರು : ಏನೂ ಇಲ್ಲ. ಚೆನ್ನಾಗಿ ಮಾತನಾಡಿದಿರಿ.

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ : ಕಡೆಯದಾಗಿ ಒಂದು ಮಾತು, ಗೌರ್‍ನಮೆಂಟ್ ಆಫ್ ಇಂಡಿಯಾದ್ದು ಒಂದು ಜಿ.ಓ ಇದೆ. ಅದರ ಮಾನ್ಯ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಲಿಂಗವಿಸ್ಟಿಕ್ ಮೈನಾರಿಟೀಸ್ ಎಲ್ಲಿ 15 ಪರ್ಸೆಂಟ್ ಇದ್ದಾರೆ ಅವರು ಅಲ್ಲಿ ಅದೇ ಭಾಷೆಯಲ್ಲಿ ಇಂಪ್ಲಿಮೆಂಟ್ ಮಾಡಬೇಕು. ನಾವು ಯಾರೂ ಇಲ್ಲಿ ಕನ್ನಡ ವಿರೋಧಿಗಳು ಅಲ್ಲ. ಕನ್ನಡ ಕಲಿಯಬೇಕೆನ್ನುವ ಆಸೆ ಇದೆ ನಮಗೆ. ಅಲ್ಲಿ ಒಂದು ಜಿ.ಓ ಇದೆ ಅದು ನಮ್ಮ ಮಾತೃಭಾಷೆಗೆ ಸಂಬಂಧಪಟ್ಟಿದ್ದು. ಅದು ಮರಾಠಿಗೆ ಇದೆ. ತಮಿಳುಗೆ ಇದೆ ಉರ್ದುವಿಗೆ ಇದೆ, ಮಹಾರಾಷ್ಟ್ರಕ್ಕೆ ಹೋದರೆ ಕನ್ನಡಕ್ಕೆ ಇದೆ.

SHRI QAMARUL ISLAM : In Bihar out of 54 districts, 36 districts have been declared, where more than 15% us urdu population. Recently in Andhra Pradesh, 12 districts have been declared, one month back. His contention is in the districts wherever there are more than 15% urdu speaking population, the Government orders etc. should be issued in Urdu also This is his main contention. That rule has to be implemented in good spirit.

ಶ್ರೀ ಜುಲ್ಫೀಕರ್ ಅಲಿ ಹಶ್ಮಿ : ಅದಕ್ಕೆ ನನ್ನ ಸಲಹೆ ಏನೆಂದರೆ ತಾವು ಆ ಜಿ ಓ ಅನ್ನು ಇಂಪ್ಲಿಮೆಂಟ್ ಮಾಡಬೇಕು. ಆಮೇಲೆ ನಮ್ಮ ರಾಜ್ಯ ಪಾರ್ಟಿಷನ್ ಆದಮೇಲೆ ಕೇಂದ್ರ

ಸರ್ಕಾರದ ಒಂದು ಆದೇಶ ಇದೆ. ಲಿಂಗ್‌ವಿಸ್ಟೀಕ್ ಮೈನಾರಿಟೀಸ್ ಸಲುವಾಗಿ ಒಬ್ಬ ಸ್ಪೆಷಲ್ ಆಫೀಸರ್ ಮತ್ತು ಸಪರೇಟ್ ಡೈರೆಕ್ಟರೇಟ್ ಮಾಡಬೇಕು ಎಂದು ಇದೆ. ಯಾವ ಸರ್ಕಾರವೂ ಇದನ್ನು ಮಾಡಿಲ್ಲ. ನಮ್ಮ ಸರಕಾರದ ಮೇಲೆ ನಮಗೆ ಬಹಳ ವಿಶ್ವಾಸ ಇದೆ. ಬಹಳ ಗೌರವ ಇಟ್ಟು ನಮ್ಮ ಜನ ಹೇಳುತ್ತಾರೆ, ನಮ್ಮ ಸರ್ಕಾರ ಇದೆ ಎಂದು ಮಾನ್ಯ ಸಿದ್ಧರಾಮಯ್ಯನವರು ಮಾನ್ಯ ರೋಷನಬೇಗ್ ಸಾಹೇಬರು ಹಾಗೂ ಮಾನ್ಯ ದೇವೇಗೌಡ ಸಾಹೇಬರು ನಮ್ಮ ಸಾಹೇಬರು ಎಂದು ಜನ ಹೇಳುತ್ತಾರೆ. ಜನಗಳಿಗೆ ನಿಮ್ಮ ಮೇಲೆ ವಿಶ್ವಾಸ ಇದೆ, ಸರ್ಕಾರದಲ್ಲಿ ನನ್ನ ಒಂದು ಡಿಮ್ಯಾಂಡ್ ಇದೆ. ಹಿಂದೆ ವೀರಪ್ಪಮೊಯ್ಲಿ ಸರ್ಕಾರದಲ್ಲಿ ಒಂದು ಸರ್ವೆ ಆಗಿದೆ. ಮೈನಾರಿಟೀಸ್ ಸಲುವಾಗಿ ಏನು ಮಾಡಬೇಕು ಎನ್ನುವುದನ್ನು ಚಂದ್ರಬಾಬು ನಾಯ್ಡು ಸರ್ಕಾರದಲ್ಲಿ ಕ್ಯಾಬಿನೆಟ್ ಮಿನಿಸ್ಟರ್ ಲೆವಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಿದ್ದಾರೆ ಮೈನಾರಿಟೀಸ್ ಪ್ರಾಬ್ಲಂಗಳನ್ನು ನಿವಾರಣೆ ಮಾಡುವ ಸಲುವಾಗಿ ಅದೇ ರೀತಿಯಲ್ಲಿ ನಮ್ಮ ಸರ್ಕಾರದಲ್ಲಿಯೂಸಹ ಒಂದು ಕಮಿಟಿ ಮಾಡಬೇಕು. ಮೈನಾರಿಟೀಸ್ ಸಲುವಾಗಿ ಏನು ಮಾಡಬೇಕು ಎನ್ನುವುದನ್ನು ಯೋಚನೆ ಮಾಡಿ. ತಾವು ಮಾಡುತ್ತೀರಿ ಎನ್ನುವ ವಿಶ್ವಾಸ ಇದೆ. ಹಾಗೆಯೇ ಆಂಧ್ರಪ್ರದೇಶದಲ್ಲಿ ಚಂದ್ರಬಾಬುನಾಯ್ಡು ಸರ್ಕಾರದಲ್ಲಿ ಕ್ಯಾಬಿನೆಟ್ ಮಿನಿಸ್ಟರ್ ಲೆವಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಿದ್ದಾರೆ ಮೈನಾರಿಟೀಸ್ ಪ್ರಾಬ್ಲಂಗಳನ್ನು ನಿವಾರಣೆ ಮಾಡುವ ಸಲುವಾಗಿ ಅದೇ ರೀತಿಯಲ್ಲಿ ನಮ್ಮ ಸರ್ಕಾರದಲ್ಲಿಯೂ ಸಹ ಒಂದು ಕಮಿಟಿ ಮಾಡಬೇಕು. ಮೈನಾರಿಟೀಸ್ ಪ್ರಾಬ್ಲಂ ಏನು ಇದೆ ಅದನ್ನು ನಿವಾರಣೆ ಮಾಡಬೇಕು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು : ನಾಳೆ ಉತ್ತರ. ದಯಮಾಡಿ ಸಹಕರಿಸಿ. ವಿಶೇಷವಾಗಿ ವಿರೋಧಪಕ್ಷದ ನಾಯಕರಾದಿಯಾಗಿ ಇಲ್ಲಿ ಇರತಕ್ಕಂಥ ಹಿರಿಯ ಮುಖಂಡರನ್ನು ನಾನು ಅಭಿನಂದಿಸಬೇಕು. ಬಹು ಸಂಖ್ಯೆಯಲ್ಲಿ ಬಂದಿರತಕ್ಕಂಥ ವಿರೋಧಪಕ್ಷದ ಸದಸ್ಯರು ಅದೂ ಮೊದಲನೇ ಭಾರಿಗೆ ಬಂದಿರತಕ್ಕಂಥವರಿಗೆ ಅವಕಾಶ ಕೊಡದೇ ಹೋದರೆ ಅವರಲ್ಲಿರತಕ್ಕಂಥ ಪ್ರತಿಭೆಗೆ ಅವಕಾಶವೇ ಇರುವುದಿಲ್ಲ. ಆದ್ದರಿಂದ ದಯಮಾಡಿ ಸಹಕರಿಸಿ. ಆಡಳಿತಪಕ್ಷದವರೂ ಸಹ 9 ಗಂಟೆ 10 ಗಂಟೆ ಎಂದು ಹೇಳುವಂತಹ ಪ್ರಶ್ನೆಯೇ ಇಲ್ಲ. ಅಧಿಕಾರ ಇಟ್ಟುಕೊಂಡಿರತಕ್ಕಂಥವರು. ಇಷ್ಟು ಮಾತ್ರ ತಾಳ್ಮೆ ಇರಬೇಕಾಗುತ್ತದೆ.

+ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಅಧ್ಯಕ್ಷರೇ, 1996-97ನೇ ಸಾಲಿನ ಆಯುವ್ಯಯ ಏನು ಇವತ್ತು ಮಂಡನೆ ಆಗಿದೆ ಆ ಮಂಡನೆಯ ಮೇಲೆ ಅನೇಕ ಹಿರಿಯ ಮುಖಂಡರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈ ಸಂದರ್ಭದಲ್ಲಿ ನಾನಾದರೂ ಕೂಡ ಬಹಳ ಮುಖ್ಯವಾದ ವಿಚಾರಗಳನ್ನು ಸಭೆಯ ಗಮನಕ್ಕೆ ತಂದು ನನಗೆ ಕೊಟ್ಟಂತಹ

ಅವಕಾಶವನ್ನು ಸದುಪಯೋಗ ಮಾಡಿಕೊಂಡು ನನ್ನ ಮಾತನ್ನು ಮುಗಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ನಾನು ನನ್ನ ಮಾತನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲು ತಮ್ಮ ಸಮ್ಮುಖ ಸ್ಪಷ್ಟಮಾಡಲಿಕ್ಕೆ ಇಚ್ಛೆಮಾಡುತ್ತೇನೆ. ಏನು ಸಹನ ಸೇರುವಂತಹ ವಿಚಾರ ಇದೆ ಸಹನ ಸೇರುವುದು ಸರ್ಕಾರದ ಬಹಳ ಮುಖ್ಯವಾದ ಮಸೂದೆಗಳನ್ನು ಪಾಸು ಮಾಡಿಕೊಳ್ಳುವುದಕ್ಕೆ ಅಥವಾ ಈ ರೀತಿ ಆಯವ್ಯಯವನ್ನು ಮಂಡನೆ ಮಾಡಲಿಕ್ಕೆ ಅನಿವಾರ್ಯವಾದ ಸಂದರ್ಭ ಏನು ಇದೆ ಆ ಕಾರಣಕೋಸ್ಕರಕ್ಕೆ ಸಹ ಸೇರುವಂತಹ ವ್ಯವಸ್ಥೆಗಳು ಆಗಬಾರದು. ಅದರ ಬದಲಾಗಿ ಈ ಸದನದ ಪ್ರತಿಯೊಬ್ಬ ಗೌರವಾನ್ವಿತ ಸದಸ್ಯರು ಏನು ಇದ್ದಾರೆ ಅವರ ಮನಸ್ಸಿನಲ್ಲಿರುವಂತಹ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಅವರ ಜಿಲ್ಲೆಗೆ ಸಂಬಂಧಪಟ್ಟಂತಹ ಅವರ ಸಮಸ್ಯೆಗಳಿಗೆ ಸಂಬಂಧಪಟ್ಟಂತಹ ಎಲ್ಲಾ ವಿಷಯಗಳನ್ನು ಸರ್ಕಾರದ ಜೊತೆಯಲ್ಲಿ ಮುಕ್ತವಾಗಿ ಹಂಚಿಕೊಳ್ಳುವುದಕ್ಕೆ ಸದನ ಸೇರುವಂತಹ ವ್ಯವಸ್ಥೆ ಆಗಬೇಕು. ಕಾರಣ ಏನು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ಇಲ್ಲಿ ಕೋರಂ ಇಲ್ಲ ಎಂದು ಹೇಳಿ ವಿಪ್ ಇರುವುದರಿಂದ ಸರ್ಕಾರದ ಪರವಾಗಿ ಕೆಲವು ಸದಸ್ಯರು ಕಡ್ಡಾಯವಾಗಿ ಕುಳಿತುಕೊಂಡಿರುವುದನ್ನು ಬಿಟ್ಟರೆ ಬಹುಶಃ ಬಹುತೇಕ ಕುರ್ಚಿಗಳು ಖಾಲಿ ಇರುವುದನ್ನು ನಾನು ಇಲ್ಲಿ ಕಾಣುತ್ತಿದ್ದೇನೆ. ಈ ವ್ಯವಸ್ಥೆ ಬದಲಾವಣೆ ಆಗಬೇಕು. ಸರ್ಕಾರದ ಧೋರಣೆ ಸಹ ಬದಲಾವಣೆ ಆಗಬೇಕು. ಸದನ ಸೇರುವುದು ಕೇವಲ ಮಸೂದೆಗಳನ್ನು ಪಾಸು ಮಾಡಿಕೊಳ್ಳುವುದಕ್ಕೆ ಅನಿವಾರ್ಯ ಸಂದರ್ಭವನ್ನು ಸೃಷ್ಟಿಮಾಡಿಕೊಂಡು ಇಲ್ಲಿ ಸೇರುವಂತಹ ವ್ಯವಸ್ಥೆ ಬದಲಾವಣೆ ಆಗಬೇಕು. ಈ ಸದನದಲ್ಲಿರತಕ್ಕಂಥ ಪ್ರತಿಯೊಬ್ಬ ಸದಸ್ಯ ತನ್ನ ಮನಸ್ಸಿನಲ್ಲಿರತಕ್ಕಂಥ, ತನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರಗಳನ್ನು ತನ್ನ ಜಿಲ್ಲೆಗೆ ಸಂಬಂಧಪಟ್ಟ ವಿಚಾರಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದಕ್ಕೆ ಕಷ್ಟಸುಖಗಳನ್ನು ಹಂಚಿಕೊಂಡು ಈ ರಾಜ್ಯದ ಕಲ್ಯಾಣ ಆಗುವುದಕ್ಕೆ ಸದನ ಸೇರುವಂತಹ ವ್ಯವಸ್ಥೆ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇದರ ಜೊತೆಗೆ ಎರಡು ಮೂರು ಮುಖ್ಯವಾದ ವಿಚಾರಗಳನ್ನು ತಮ್ಮ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಭಾಗ ಭಾಗಶಃ ಮಲೆನಾಡಿನ ಭಾಗ. ಮಲೆನಾಡು ಅಭಿವೃದ್ಧಿ ಮಂಡಳಿಯೆಂದು ನಮ್ಮ ಭಾಗದಲ್ಲಿದೆ. ಸುಮಾರು 73 ತಾಲ್ಲೂಕುಗಳು ಈ ಮಂಡಳಿಗೆ ಒಳಪಡುತ್ತದೆ. ಈ ಮಂಡಳಿಯು ಬಹುದಿವಸಗಳಿಂದ ಕೆಲಸ ಮಾಡುತ್ತಿದೆ. ನಾನು ಶಾಸಕನಾಗಿ ಕಳೆದ ಹದಿನಾಲ್ಕು ತಿಂಗಳುಗಳಿಂದ ಇದರ ಸದಸ್ಯನಾಗಿದ್ದೇನೆ. ಕಾರ್ಯಕ್ರಮವನ್ನು ಸೂಚನೆ ಬಂತು. ಈಗಾಗಲೇ ಕಾರ್ಯಕ್ರಮವನ್ನು ರೂಪಿಸಿ ಕಳುಹಿಸಿದ್ದೇವೆ. ಆ ಕಾರ್ಯಕ್ರಮಗಳು ಅಪ್ರೂವಲ್ ಆಯಿತು. ಆದರೆ ಇಲ್ಲಿಯವರೆಗೂ ಸರ್ಕಾರದಿಂದ ಹಣವು ವ್ಯವಸ್ಥಿತವಾಗಿ ಬಿಡುಗಡೆಯಾಗಲಿಲ್ಲ, ಕಾರ್ಯಕ್ರಮ ಪ್ರಾರಂಭವಾಗಲಿಲ್ಲ. ನಾನು ಶಾಸಕನಾಗಿ ಹದಿನಾಲ್ಕು ತಿಂಗಳುಗಳಾಗಿದ್ದರೂ ಸಹ ಒಂದೇ ಒಂದು ಕಾರ್ಯಕ್ರಮ ಮಲೆನಾಡು ಅಭಿವೃದ್ಧಿ ಮಂಡಳಿಗೆ ಉದ್ಘಾಟನೆಯಾಗಿರುವುದನ್ನು ನೋಡಿಲ್ಲ. 1995-96ನೇ ಸಾಲಿಗೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಸುಮಾರು ಇಪ್ಪತ್ತೈದು ಕೋಟಿ ರೂಪಾಯಿಗಳು ನಿಗದಿಯಾಗಿದೆ.

ಅದರಲ್ಲಿ ಒಂದು ಪೈಸೆ ಹಣ ನನ್ನ ಕ್ಷೇತ್ರಕ್ಕೆ ಉಪಯೋಗವಾಗಿಲ್ಲ. ಇನ್ನೂ ಇಪ್ಪತ್ತು ಕೋಟಿ ರೂಪಾಯಿ ಹಣ ಬಿಡುಗಡೆಯಾಗಬೇಕಾಗಿದೆ. ನಾವು ಈಗಾಗಲೇ 96 ರಿಂದ 1997ನೇ ಇಸ್ವಿಗೆ ಹೋಗುತ್ತಿದ್ದೇವೆ. ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಯ ಸದುದ್ದೇಶ ಏನಿದೆ ಅದು ಈಡೇರಬೇಕು. ಇದಕ್ಕೆ ನಿಗದಿಯಾಗಿರುವ ಹಣವು ಸಂಪೂರ್ಣವಾಗಿ ಬಿಡುಗಡೆಯಾಗುವ ವ್ಯವಸ್ಥೆಯಾಗಬೇಕು. ತನ್ಮೂಲಕ ಮಲೆನಾಡು ಭಾಗದ ಜನರ ಅಭಿವೃದ್ಧಿಗೆ ಏನು ಕಾರ್ಯಕ್ರಮವನ್ನಿಟ್ಟಿದ್ದೀರಿ ಅದು ಕಾರ್ಯರೂಪಕ್ಕೆ ಬರತಕ್ಕ ವ್ಯವಸ್ಥೆಯಾಗಬೇಕು. ಹಿರಿಯರಾದ ತಾವೇನು ಹಣಕಾಸು ಸಚಿವರಾಗಿದ್ದೀರಿ ತಮ್ಮ ಅವಧಿಯಲ್ಲಿ ಈ ಕೆಲಸವಾಗಬೇಕು ಎಂದು ಸರ್ಕಾರದ ಮೂಲಕ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಎರಡನೆಯದಾಗಿ, ನಮ್ಮ ಜಿಲ್ಲೆ ಮತ್ತು ರಾಜ್ಯದ ಬಹುತೇಕ ಭಾಗಗಳಲ್ಲಿ ಕಾಡು ಪ್ರಾಣಿಗಳ ಕಾಟ ಹೆಚ್ಚಾಗಿದೆ. ಮಾನ್ಯ ಅನೇಕ ಸದಸ್ಯರುಗಳು ಮಾತನಾಡುತ್ತಾ ಕಾಡು ಪ್ರಾಣಿಗಳ ಕಾಟದ ಬಗ್ಗೆ ದೀರ್ಘವಾಗಿ ಮಾತನಾಡಿದರು. ಅದರಲ್ಲೂ ಕಾಡಾನೆಗಳ ಹಾವಳಿಯ ಬಗ್ಗೆ ವಿಶೇಷವಾಗಿ ಹೇಳಿದ್ದಾರೆ. ನಮ್ಮ ಮೈಸೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ, ನಂಜನಗೂಡು, ಕೊಳ್ಳೇಗಾಲ, ಹೆಗ್ಗಡದೇವನಕೋಟೆ, ನನ್ನ ಕ್ಷೇತ್ರವಾದ ಹುಣಸೂರಿನ ಭಾಗವಾಗಬಹುದು, ಈ ಭಾಗಗಳಲ್ಲಿ ದಿನನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ, ಕಾಡಾನೆಗಳ ಹಾವಳಿಯಿಂದ ರೈತರು ಜೀವನ ಮಾಡಲು ಸಾಧ್ಯವಾಗದಂಥ ಪರಿಸ್ಥಿತಿ ಇದೆ, ರೈತರು ಬೆಳೆದಂಥ ಬೆಳೆಗಳನ್ನು ವಾಪಸ್ ಪಡೆಯಲು ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರತಿನಿತ್ಯ ನೋಡುತ್ತಿದ್ದೇವೆ. ಕಾಡು ಪ್ರಾಣಿಗಳ ಧಾಳಿಯಿಂದ ರೈತರು ಗ್ರಾಮಗಳಲ್ಲಿ ನೆಮ್ಮದಿಯಿಂದ ಬಾಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಾನು ವಿಶೇಷವಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಿನನಿತ್ಯ ಕಾಡು ಪ್ರಾಣಿಗಳ ಧಾಳಿಗೆ ತುತ್ತಾಗಿ ರೈತರ ಬೆಳೆಗಳೇನು, ಆಸ್ತಿಗಳೇನು ನಾಶವಾಗುತ್ತಿದೆ ಇದನ್ನು ತಪ್ಪಿಸಬೇಕು, ರೈತರು ಬೆಳೆದಂಥ ಬೆಳೆಯು ಅವರ ಮನೆ ಸೇರುವಂಥ ವ್ಯವಸ್ಥೆಯಾಗಬೇಕು. ರೈತರು ಜಮೀನಿಗೆ ಕೆಲಸ ಮಾಡಲು ಬಂದಮೇಲೆ ಅವರು ಯಾವುದೇ ಭಯವಿಲ್ಲದೆ ಕೆಲಸ ಮಾಡಿ ಮನೆಗೆ ಹೋಗುವಂಥ ವ್ಯವಸ್ಥೆಯಾಗಬೇಕು. ಪ್ರಾಣದ ಹಂಗಿನಲ್ಲಿ ಸಂಜೆ 4-5 ಗಂಟೆಗಳವರೆಗೆ ರೈತರು ಜಮೀನಿನಲ್ಲಿದ್ದು ಹೋಗಬೇಕಾದ ಪರಿಸ್ಥಿತಿ ಇದೆ. ಯಾವ ಸಮಯದಲ್ಲಿ ಯಾವ ಕಾಡುಪ್ರಾಣಿ ಬಂದು ತೊಂದರೆಯನ್ನು ಕೊಡುತ್ತದೆಯೋ ಎಂಬ ಚಿಂತೆಯಲ್ಲಿ ರೈತರು ಕೆಲಸ ಮಾಡಬೇಕಾದ ಪ್ರಸಂಗ ಬಂದಿದೆ. ಅನೇಕ ಕಡೆಗಳಲ್ಲಿ ಕಾಡಾನೆಯು ಊರಿಗೆ ಬಂದು ಜನರನ್ನು ತುಳಿದು ಸಾಯಿಸಿದ ತಕ್ಕದನ್ನು ನಾವು ನೋಡಿದ್ದೇವೆ. ಈ ಸಾರಿಯೂ ಆ ರೀತಿಯಾಗಿದೆ. ಆದ್ದರಿಂದ ನಾನು ಬಹಳ ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ಕಂದಕದ ಕೆಲಸವೇನು ಆಗಬೇಕಾಗಿದೆ, ಸೋಲಾರ್ ಬೇಲಿಯನ್ನು ಅಳವಡಿಸಬೇಕಾದ ಕೆಲಸ ಆಗಬೇಕಾಗಿದೆ ಅದರ ಬಗ್ಗೆ ವಿಶೇಷವಾದ ವರದಿಯನ್ನು ತರಿಸಿಕೊಂಡು ಹಣದ ವ್ಯವಸ್ಥೆ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆ ರೀತಿ ಕ್ರಮ ತಗೆದುಕೊಳ್ಳುವ ಮೂಲಕ ನಮ್ಮ ಭಾಗದಲ್ಲಾಗುತ್ತಿರುವ ಅನಾಹುತವನ್ನು

ತಪ್ಪಿಸಬೇಕು. ಮಾನ್ಯ ಪುಟ್ಟಣ್ಣಯ್ಯನವರು ರೈತರ ಬಗ್ಗೆ ಮಾತನಾಡುತ್ತಾ ಒಂದು ಎಕರೆ ಹುರುಳಿಯನ್ನು, ಹುಚ್ಚೆಳ್ಳನ್ನು, ರಾಗಿಯನ್ನು ಮಾರಾಟ ಮಾಡಿದರೆ ಒಂದು ಜೊತೆ ಬಟ್ಟೆಯನ್ನು ಹೊಲಿಸಲು ಆಗುವುದಿಲ್ಲ, ಒಂದು ಜೊತೆ ಚಪ್ಪಲಿಯನ್ನು ತೆಗೆದುಕೊಳ್ಳಲು ಆಗುವುದಿಲ್ಲವೆಂದು ಹೇಳಿದರು. ಆ ರೀತಿ ಬೆಳೆದಂಥ ಬೆಳೆಗಳೇನಿದೆ ಅದು ನಮ್ಮ ಭಾಗದ ರೈತರ ಮನೆಗೆ ಜಾಗ್ರತೆಯಾಗಿ ಸೇರುತ್ತದೆ ಎಂಬ ಬಗ್ಗೆ ನಂಬಿಕೆ ಅನೇಕ ಗ್ರಾಮಗಳಲ್ಲಿ ಇಲ್ಲದಂತಾಗಿದೆ. ಏಕೆಂದರೆ ನಮ್ಮ ಭಾಗದಲ್ಲಿ ಮೂವತ್ತು ಕಾಡಾನೆಗಳವರೆಗೆ ಒಟ್ಟಿಗೆ ಧಾಳಿ ಮಾಡಿ ಬೆಳೆಗಳನ್ನು ನಾಶ ಮಾಡತಕ್ಕ ಪರಿಸ್ಥಿತಿ ಇದೆ. ನಮ್ಮ ತಾಲ್ಲೂಕು ಒಂದರಲ್ಲಿಯೇ ಹತ್ತರಿಂದ ಹದಿನಾಲ್ಕು ಲಕ್ಷ ರೂಪಾಯಿಗಳವರೆಗೆ ಬೆಳೆ ಪರಿಹಾರವನ್ನು ಕೊಡಬೇಕಾಗಿದೆ. ಒಂದು ಸಾವಿರ ರೂಪಾಯಿ ನಷ್ಟವಾದರೆ ಕೇವಲ 250 ರೂ. ಪರಿಹಾರವಾಗಿ ದೊರೆಯುತ್ತದೆ. ನಮ್ಮ ಭಾಗದಲ್ಲಿ ಅಷ್ಟೊಂದು ಮೊತ್ತದ ಪರಿಹಾರವನ್ನು ಕೊಡಲು ಬಾಕಿ ಇರಬೇಕಾಗಿದ್ದರೆ ನಮ್ಮ ಭಾಗದ ರೈತರ ಮನಸ್ಸಿನ ಸ್ಥಿತಿಯೇನಾಗಿದೆ ಎಂಬ ಬಗ್ಗೆ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ತಾವು ಕಾಡು ಪ್ರಾಣಿಗಳ ಧಾಳಿಯನ್ನು ತಪ್ಪಿಸಲು ಅಗತ್ಯವಾಗಿ ಬೇಕಾಗಿರುವ ಕಂದಕ ಮತ್ತು ಸೋಲಾರ್ ಬೇಲಿಯನ್ನು ಮಾಡುವುದಕ್ಕೋಸ್ಕರ ಅಗತ್ಯವಾದ ಹಣವನ್ನು ಈ ಬಜೆಟನಲ್ಲಿ ಇಟ್ಟು ಅವಕಾಶ ಮಾಡಿಕೊಡಬೇಕು ಆ ಮೂಲಕ ನಮ್ಮ ಭಾಗದ ಬಹಳ ದೊಡ್ಡ ಸಮಸ್ಯೆಯನ್ನು ನಿವಾರಣೆ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸುತ್ತಿದ್ದೇನೆ. ಮೂರನೆಯದಾಗಿ, ಬಹಳ ವಿಚಿತ್ರವಾದ ವಿಷಯ ಅದೇನೆಂದರೆ, ಒಣಬೇಸಾಯಕ್ಕೆ ಬೇಸತ್ತು ರೈತರು ತಮ್ಮದೇ ಆದ ಬಾವಿಯನ್ನು ತೋಡಿ ವಿಶೇಷವಾದ ಬೆಳೆಕನ್ನು ಜೀವನದಲ್ಲಿ ಕಾಣಬೇಕೆಂಬ ಆಸಕ್ತಿಯಿಂದ ಬಾವಿಯನ್ನು ತೋಡಿಸುತ್ತಾನೆ. ದುರಾದೃಷ್ಟವಶಾತ್ ಬಾವಿಯಲ್ಲಿ ನೀರು ಬರುವುದಿಲ್ಲ. ಅದು ಪಾಳು ಬಾವಿಯಾಗುತ್ತದೆ. ಬಾವಿಯನ್ನು ತೋಡುವಾಗ ಮುಟ್ಟುಗೋಲು ಹಾಕಿಕೊಳ್ಳಬಾರದು ಎನ್ನುವ ಉದ್ದೇಶದಿಂದ ಸರ್ಕಾರ ವಿಶೇಷವಾದ ಯೋಜನೆಯನ್ನು ಮಾಡಿದೆ. ಅದೇನೆಂದರೆ, ಪಾಳು ಬಾವಿ ಇರತಕ್ಕವರಿಗೆ ಪರಿಹಾರವನ್ನು ಕೊಡುವುದು ಅಥವಾ ಸಾಲವನ್ನು ಮನ್ನಾಮಾಡತಕ್ಕದ್ದು. ಕಳೆದ ಐದು ವರ್ಷಗಳಲ್ಲಿ ಸರ್ಕಾರವೇನು ಪಾಳುಬಾವಿಯೆಂದು ಘೋಷಣೆ ಮಾಡಿದೆ ಅದರ ವರದಿಯನ್ನು ತರಿಸಿಕೊಳ್ಳಲಿ, ಆ ರೀತಿ ಪಾಳು ಬಾವಿಯಿದ್ದ ಒಬ್ಬರಿಗೆ ಸರ್ಕಾರದಿಂದ ಪರಿಹಾರಧನ ಸಿಕ್ಕಿದೆಯೆಂದು ಸರ್ಕಾರ ಹೇಳುವುದಾಗಿದ್ದರೆ ನಾನು ಹೇಳಿರುವ ಮಾತನ್ನು ವಾಪಸ್ ಪಡೆದುಕೊಳ್ಳುತ್ತೇನೆ. ಒಬ್ಬರಿಗೂ ಸಹ ಪರಿಹಾರಧನವನ್ನು ಕೊಟ್ಟಿಲ್ಲ. ಇದಕ್ಕೆ ಕಾರಣವೇನು ಎಂಬುದು ಗೊತ್ತಾಗಿಲ್ಲ. ನನ್ನ ಭಾಗದ ಒಬ್ಬ ರೈತ ಕಳೆದ ಕೆಲವು ದಿವಸಗಳ ಹಿಂದೆ ಬಂದು ಹೇಳಿದ. ಆತ ಐಳು ವರ್ಷಗಳ ಹಿಂದೆ ಸಾಲವನ್ನು ತೆಗೆದುಕೊಂಡಿದ್ದಾನೆ. ತಹಶೀಲ್ದಾರರು, ಜಿಯಾಜಲಿಸ್ಟ ಮತ್ತು ಬ್ಯಾಂಕಿನ ಅಧಿಕಾರಿಗಳೆಲ್ಲರೂ ಸೇರಿ ಸಭೆಯನ್ನು ಮಾಡುತ್ತಾರೆ. ಈ ರೀತಿ ಸಭೆಗಳನ್ನು ಮಾಡುವುದೂ ಬಹಳ ವಿಶೇಷ. ಒಬ್ಬರು ಇದ್ದರೆ ಮತ್ತೊಬ್ಬರು ಇರುವುದಿಲ್ಲ. ಆದ್ದರಿಂದ ಇದರ ಬಗ್ಗೆ ವರದಿಯನ್ನು ತರಿಸಲು ತಹಶೀಲ್ದಾರರಿಗೆ ಎರಡು

ಮೂರು ವರ್ಷಗಳು ಬೇಕಾಗುತ್ತವೆ. ಅಲ್ಲಿ ಸಲ್ಲಿಸಿದಂಥ ವರದಿಯು ಬೆಂಗಳೂರಿಗೆ ಬಂದು ಪರಿಹಾರವನ್ನು ಪಡೆದುಕೊಂಡು ವಾಪಸ್ ಹೋಗಬೇಕಾದರೆ ಯಾವುದೇ ಕಾರಣಕ್ಕೂ ಸಾಧ್ಯವಾಗುವುದಿಲ್ಲ. ಸರ್ಕಾರದ ಈ ರೀತಿಯಾದ ಕ್ರಮದಿಂದ ಪಾಳು ಬಾವಿಗೆ ಬೀಳತಕ್ಕ ಪರಿಸ್ಥಿತಿ ರೈತರಿಗೆ ನಿರ್ಮಾಣವಾಗುತ್ತದೆ. ರೈತರೇನು ಪಾಳು ಬಾವಿಗೆ ಬೀಳತಕ್ಕ ಪರಿಸ್ಥಿತಿ ರೈತರಿಗೆ ನಿರ್ಮಾಣವಾಗುತ್ತವೆ. ರೈತರೇನು ಬಾವಿಯನ್ನು ತೋಡಿ ಜೀವನದಲ್ಲಿ ಬೆಳಕನ್ನು ಕಾಣಬೇಕೆಂದು ಆಶಾಗೋಪುರವನ್ನಿಟ್ಟುಕೊಂಡು ದೊಡ್ಡ ಹೊರೆಯನ್ನೇನು ತಲೆಯಮೇಲೆ ತಂದುಕೊಳ್ಳುವ ವ್ಯವಸ್ಥೆಯೇನಿದೆ ಅದಕ್ಕೆ ಸೂಕ್ತವಾದಂಥ ಯೋಜನೆ ಸರ್ಕಾರದಲ್ಲೇನಿದೆ, ಪಾಳು ಬಾವಿಯೆಂದು ಘೋಷಣೆಯಾದ ಒಂದು ತಿಂಗಳಿನಲ್ಲಿ ಅವನಿಗೆ ಪರಿಹಾರ ಸಿಗುವಂಥ ವ್ಯವಸ್ಥೆಯನ್ನು ಸರ್ಕಾರ ಕಡ್ಡಾಯವಾಗಿ ಮಾಡಬೇಕೆಂದು ಈ ಸಮಯದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಅಧ್ಯಕ್ಷರೇ ಅವರು ಹೇಳತಕ್ಕದ್ದು ನಿಜವಾಗಿದೆ. ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಸಾಲವನ್ನು ಪಡೆದುಕೊಂಡು ಬಾವಿಯನ್ನು ತೋಡಿರುತ್ತಾರೆ. ಮೊದಲ ಒಂದು ವರ್ಷ ನೀರು ಬಂದಿರುತ್ತದೆ. ನಂತರ ಬಾವಿ ಒಣಗಿಹೋಗುತ್ತದೆ. ಸಾಲವನ್ನು ತೆಗೆದುಕೊಳ್ಳುವಾಗ ಯಾರು ಸಣ್ಣ ಹಿಡುವಳಿದಾರರೆಂದು ಸರ್ಟಿಫಿಕೇಟ್‌ನ್ನು ಕೊಟ್ಟಿರುತ್ತಾರೆ ಅಂಥವರಿಗೆ ಮಾತ್ರ ಪರಿಹಾರವನ್ನು ಕೊಡುವ ವ್ಯವಸ್ಥೆ ಮಾಡುತ್ತಿದ್ದಾರೆ. ಮೂರು ನಾಲ್ಕು ಎಕರೆ ಜಮೀನಿದ್ದರೆ ಅಂಥವರು ತೋಡಿದ್ದ ಬಾವಿಯಲ್ಲಿ ನೀರು ಬರದಿದ್ದರೆ ಬಾವಿಗಳು ವಿಫಲವಾಗಿದ್ದರೆ ಅವರುಗಳು ಪಡೆದ ಸಾಲವನ್ನು ಮನ್ನಾ ಮಾಡುತ್ತಿಲ್ಲ. ದಯಮಾಡಿ ಯಾವುದೇ ರೈತರುಗಳಿರಲಿ, ವಿಫಲವಾಗಿರತಕ್ಕ ಬಾವಿಗಳಿಗೆ ಸಾಲವನ್ನು ಮನ್ನಾ ಮಾಡಬೇಕು. ತೋಡುಬಾವಿಯಾಗಿರಬಹುದು, ಬೋರವೆಲ್ ಬಾವಿಯಾಗಿರಬಹುದು, ಮೊದಲ ವರ್ಷ ನೀರು ಬರುತ್ತದೆ ಅನಂತರ ನೀರೇ ಇರುವುದಿಲ್ಲ ರೈತರು ಹಾಕಿರತಕ್ಕ ಫಸಲೇ ನಾಶವಾಗಿ ಹೋಗುತ್ತಿದೆ. ಆದ್ದರಿಂದ ರೈತರುಗಳು ಯಾರೇ ಇರಲಿ ವಿಫಲವಾಗಿರುವ ಬಾವಿಗಳಿಗೆ ಯಾವುದೇ ಸರ್ಟಿಫಿಕೇಟನ್ನು ಕಡ್ಡಾಯ ಮಾಡಿದೆ. ಸಾಲವನ್ನು ಮನ್ನಾ ಮಾಡುವ ಬಗ್ಗೆ ಪರಿಹಾರ ಕೊಡುವ ಬಗ್ಗೆ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತಿನ ದಿವಸ ನೀರಿನ ಮಟ್ಟ ಬಹಳ ಕೆಳಕ್ಕೆ ಹೋಗಿದೆ. ಸಣ್ಣ ರೈತರಿಗೆ ಬಡ್ಡಿ ಮತ್ತು ಸಾಲ ಎರಡೂ ಮನ್ನಾ ಆಗುತ್ತಿದೆ. ಇದು ಎಲ್ಲಾ ರೈತರಿಗೂ ಅನ್ವಯ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಬಾವಿಯಲ್ಲಿ ನೀರು ಬಾರದಿದ್ದರೆ ಆ ಬಾವಿಯ ಮೇಲೆ ಪಡೆದ ಸಾಲವನ್ನು ಪೂರ್ಣವಾಗಿ ಮನ್ನಾ ಮಾಡಬೇಕೆಂದು ಕಾನೂನು ಇದೆ. ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆದು ಆ ಕೆಲಸವನ್ನು ಪಿ.ಎಲ್.ಡಿ. ಬ್ಯಾಂಕುಗಳು ಮಾಡಿವರೆ ಸರಿಯಾಗುತ್ತದೆ. ಇದರ ಬಗ್ಗೆ ಕಾನೂನೇ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಆ ರೀತಿ ಕಾನೂನು ಇದ್ದರೂ, ಶಿಕಾರಿಪುರ ತಾಲ್ಲೂಕಿನಲ್ಲಿ ಜಿಯಾಲಿಜಸ್ಟ್ ವರದಿಯ ಆಧಾರದ ಮೇಲೆ ಅಲ್ಲಿರತಕ್ಕ ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಬಾವಿ ವಿಫಲವಾಗಿದೆಯೆಂದು ವರದಿಯನ್ನು ಕಳುಹಿಸಿದ್ದರೂ ಈಗ ಸಾಲ ವಸೂಲಿಗೆ ಕಳುಹಿಸಿಕೊಟ್ಟಿದ್ದಾರೆ. ಐದು ವರ್ಷ ಸುಮ್ಮನಿದ್ದು ಈಗ ಕಳುಹಿಸಿಕೊಟ್ಟಿದ್ದಾರೆ. ಇಂಥಹ ಅನೇಕ ಪ್ರಕರಣಗಳಿವೆ. ಅದರ ಬಗ್ಗೆ ಮಾಹಿತಿಯನ್ನು ತರಿಸಿ ಆವ ಸಂಬಂಧಪಟ್ಟವರಿಗೆ ಪರಿಹಾರವನ್ನು ಕೊಡುವ ಪ್ರಯತ್ನವನ್ನು ಮಾಡಬೇಕು.

ಶ್ರೀ ಕಾಗೋಡುತಿಮ್ಮಪ್ಪ : ಅಧ್ಯಕ್ಷರೇ, ತಹಶೀಲ್ದಾರರು, ಜಿಯಾಲಿಜಸ್ಟಮತ್ತು ಬಿ.ಡಿ.ಓ ರವರುಗಳು ಒಟ್ಟಾಗಿ ಹೋಗಿ ಸ್ಥಳ ಪರಿಶೀಲನೆ ಮಾಡುತ್ತಾರೆ. ಮಾನ್ಯ ಸದಸ್ಯರು ಹೇಳಿದಂತೆ ಈ ಮೂರೂ ಜನರು ಒಟ್ಟಿಗೆ ಸೇರಲು ಆಗದೆ ಹಲವಾರು ಪ್ರಕರಣಗಳು ವರ್ಷಾನುಗಟ್ಟಲೆ ಹೋಗಿದೆ. ಈ ರೀತಿ ವಿಳಂಬಕ್ಕೆ ಅದೇ ಮುಖ್ಯವಾದ ಕಾರಣವಾಗಿದೆ. ಇದಕ್ಕೆ ಏನಾದರೂ ಬೇರೆ ಪರಿಹಾರವನ್ನು ಮಾಡಿ ಜಂಟಿ ಪರಿಶೀಲನೆ, ಮಾಡುವುದಕ್ಕಿಂತ ಜಿಯಾಜಲಿಸ್ಟ ಸಂಬಂಧಪಟ್ಟ ಪಿ.ಎಲ್.ಡಿ. ಬ್ಯಾಂಕ್‌ನ ಕಾರ್ಯದರ್ಶಿಯವರೋ ಬಿ.ಡಿ.ಓ.ನವರೋ ಬೇಗ ಹೋಗಿ ಸ್ಥಳ ಪರಿಶೀಲನೆ ಮಾಡಿ ವರದಿ ಕೊಡುವಂತೆ ಮಾಡಬೇಕು. ಈಗ ಇರತಕ್ಕ ಪದ್ಧತಿಯನ್ನು ಬದಲಾವಣೆ ಮಾಡಿದರೆ ಒಳ್ಳೆಯದು. ಆಗ ತ್ವರಿತಗತಿಯಿಂದ ವರದಿಯನ್ನು ಕೊಡಲು ಆಗ ಸಾಧ್ಯವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಂಟು ಹತ್ತು ವರ್ಷಗಳಿಂದ ಬಡ್ಡಿಯೇ ಹಲವಾರು ಲಕ್ಷ ರೂಪಾಯಿಗಳಾಗಿದೆ. ಈಗ ವಸೂಲಿಗೆ ನೋಟೀಸಗಳನ್ನು ಕಳುಹಿಸಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸಾಲವನ್ನು ಪಡೆದುಕೊಂಡು ಬೋರವೆಲನ್ನು ತೋಡಿಕೊಂಡಿರುತ್ತಾರೆ. ಆದರೆ ವಿದ್ಯುತ್ ಅಭಾವದಿಂದ ಎರಡು ವರ್ಷಗಳಾದರೂ ವಿದ್ಯುತ್ ಸಂಪರ್ಕವನ್ನು ಕೊಟ್ಟಿರುವುದಿಲ್ಲ. ಇದರಿಂದ ಉತ್ಪಾದನೆಯಿಲ್ಲದೆ ಕೇವಲ ಬೋರವೆಲನ್ನು ಕೊರೆದು ಸಾಲದ ಮೇಲೆ ಬಡ್ಡಿಯನ್ನು ಕಟ್ಟಬೇಕಾದ ಸ್ಥಿತಿ ಇದೆ. ಇದು ಯಾವ ನ್ಯಾಯ? ಇದು ಯಾವ ನಿಯಮ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ದಯವಿಟ್ಟು ಇದರಲ್ಲಿ ಬದಲಾವಣೆ ಮಾಡಬೇಕು. ತಾವು ವಿದ್ಯುತ್ ಸಂಪರ್ಕವನ್ನು ಕೊಟ್ಟಮೇಲೆಯೇ ಬಡ್ಡಿಯನ್ನು ವಸೂಲು ಮಾಡುವ ವ್ಯವಸ್ಥೆಯಾಗಬೇಕು. ಆ ರೀತಿ ನಿಯಮವನ್ನು ಬದಲಾವಣೆ ಮಾಡಬೇಕು.

ಶ್ರೀ ಸಿ. ಹೆಚ್. ವಿಜಯಶಂಕರ್: ಸನ್ಮಾನ್ಯ ಅಧ್ಯಕ್ಷರೆ, ದೇವೇಗೌಡರು ಮುಖ್ಯಮಂತ್ರಿಗಳಾದ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಒಂದು ಆಸೆ ಇತ್ತು. ಬಹುಶಃ ಮಣ್ಣಿನ ಮಕ್ಕಳಿಗೆ ರೈತರ ಮಕ್ಕಳಿಗೆ ವಿಶೇಷವಾದಂತಹ ಗೌರವಾಗುವಂತಹ ವಾತಾವರಣ ನಿರ್ಮಾಣ ಆಗುತ್ತದೆ ಎಂದು. ಈಗಲೂ ಕೂಡ ನಮಗೆ ಆ ಭರವಸೆ ಇದೆ. ಆದರೆ ಈ ಬಜೆಟ್‌ನಲ್ಲಿ, ಇನ್ನೂ ಭರವಸೆ ಇದೆ ಸಾರ್ ನಮಗೆ. ಆದರೆ ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ರಸಗೊಬ್ಬರದ ಮೇಲಿನ ಮಾರಾಟ ತೆರಿಗೆಯನ್ನು ತಾವು ತೆಗೆದು ಹಾಕಿದಿರಿ, ನಾನು ಅದಕ್ಕೆ ಅಭಿನಂದಿಸುತ್ತೇನೆ

ಆದರೆ ರಸಗೊಬ್ಬರದ ನಿಮ್ಮ ಕೈಯಲ್ಲಿ ಆಗುವಷ್ಟು ಒಂದು ಮೂಟೆಗೆ ರೈತನಿಗೆ ಪರಿಹಾರ ಕೊಡುವಂತಹದು. ಅಥವಾ ಸಬ್ಸಿಡಿ ಕೊಡುವಂತಹದು. ಒಂದು ಮೂಟೆಗೆ ಇಷ್ಟು ಕೊಡುತ್ತೇವಪ್ಪ, ನಮಗೆ ಇದರ ಮೇಲೆ ಆಗುವುದಿಲ್ಲ, ಒಂದು ಮೂಟೆಗೆ ಐದು ರೂಪಾಯಿ ತೆಗೆದುಕೋ, ಹತ್ತು ರೂಪಾಯಿ ತೆಗೆದುಕೋ, 50 ರೂಪಾಯಿ ತೆಗೆದುಕೋ ಇದರ ಮೇಲೆ ನಮಗೆ ಆಗುವುದಿಲ್ಲ, ಕೇಳಬೇಡಿ ಎಂದು ರೈತರಿಗೆ ಕನಿಷ್ಟ ಒಂದು ರಸಗೊಬ್ಬರದ ಮೇಲೆ ಬಹುಶಃ ವಿನಾಯಿತಿಯನ್ನು ಕೊಟ್ಟಿದ್ದರೆ ಸಬ್ಸಿಡಿಯನ್ನು ಕೊಟ್ಟಿದ್ದರೆ ರೈತನಿಗೆ ತುಂಬಾ ಸಂತೋಷವಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಇದರ ಜೊತೆಯಲ್ಲಿ ಕೊನೆಯ ಒಂದು ಮಾತನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುವವನಿದ್ದೇನೆ. ಆಕಸ್ಮಿಕ ಬೆಂಕಿ ವಿಚಾರ. ರೈತನ ಹುಲ್ಲು ಮೆದೆಗೆ ಅಥವಾ ರೈತರ ಮನೆಗೆ ಯಾವುದಾದರೂ ಒಂದು ಸಂದರ್ಭದಲ್ಲಿ ಬೆಂಕಿ ಬೀಳಬಹುದು. ನಾನು ಅನೇಕ ಸಲ ತಹಶೀಲ್ದಾರ್ ಹತ್ತಿರ ಮಾತನಾಡಿದೆ. ನಮಗೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ, ಕಾನೂನು ಚೌಕಟ್ಟಿನಲ್ಲಿ ಇದಕ್ಕೆ ಅವಕಾಶ ಇಲ್ಲ ಧಾನ್ಯ ಸಮಸ್ತ ಬೆಂದು ಹೋದರೆ ಅವಕ್ಕೆ ಅವಕಾಶ ಇದೆ, ಬರೀ ಭತ್ತದ ಹುಲ್ಲು ಬೆಂದು ಹೋದರೆ, ರಾಗಿ ಹುಲ್ಲು ಬೆಂದು ಹೋದರೆ, ಜೋಳ ಬೆಂದು ಹೋದರೆ ಅದಕ್ಕೆ ಪರಿಹಾರ ಕೊಡಲು ಆಗುವುದಿಲ್ಲ, ಅಥವಾ ಮನೆ ಬೆಂದು ಹೋದರೆ ಪರಿಹಾರ ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರು. ನಾನು ತಮ್ಮ ಮೂಲಕ ಮಾನ್ಯ ಹಣಕಾಸು ಸಚಿವರನ್ನು ಬಹಳ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ದಯವಿಟ್ಟು ತಾವು ಮನಸ್ಸುಮಾಡಿ ಈ ಒಂದು ಬಜೆಟನಲ್ಲಿ ರೈತನ ಮನೆ ಬಿದ್ದು ಹೋದಂತಹ ಸಂದರ್ಭದಲ್ಲಿ, ರೈತನ ಮೆದೆ ಬೆಂದು ಹೋದಂತಹ ಸಮಯದಲ್ಲಿ, ರೈತ ನಿರುಪಾಯ ಆದಂತಹ ಸಂದರ್ಭದಲ್ಲಿ, ಅವನಿಗೆ ಖಂಡಿತವಾಗಿಯೂ ಕೂಡ ಅಧಿಕಾರಿಗಳು ಏನು ಸೂಚನೆಯನ್ನು ಕೊಡುತ್ತಾರೆ, ಆ ಸೂಚನೆಗೆ ಅನುಗುಣವಾಗಿ ಪರಿಹಾರವನ್ನು ಪಡೆಯುವುದಕ್ಕೆ ಅವಕಾಶ ಇದೆ ಎನ್ನುವಂತಹ ಒಂದು ವಿಶೇಷವಾದಂತಹ ವ್ಯವಸ್ಥೆಯನ್ನು ಈ ಬಜೆಟನಲ್ಲಿ ತಾವು ಮಾಡಬೇಕು. ಇದು ತುಂಬಾ ಅಗತ್ಯ ಇದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಹಣಕಾಸು ಸಚಿವರಿಗೆ ತಿಳಿಸಲು ಇಚ್ಛೆಪಡುತ್ತೇನೆ. ನಮ್ಮಲ್ಲಿ ಹೇರಿಗೆ ಎಂದು ಹೇಳಿ ಒಂದು ಕೆರೆ ಇದೆ. ಬಹು ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ನಾವು ಮಾತನಾಡುತ್ತೇವೆ. ಆಗಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಅನೇಕ ಒತ್ತಡಗಳನ್ನು ಈ ಸರ್ಕಾರಕ್ಕೆ ನಾವು ತರುತ್ತೇವೆ. ಆದರೆ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಅನೇಕ ಸಣ್ಣ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುತ್ತೇವೆ ಎನ್ನುವ ಮಾತನ್ನು ಹೇಳಿದರೆ ಈ ಸಂದರ್ಭದಲ್ಲಿ ನಾವು ಸ್ವಾಗತಿಸುತ್ತೇವೆ. ಆದರೆ ಬಹುಶಃ ನಾನು ಒಂದು ಕೆರೆಯ ವಿಚಾರವನ್ನು ಕೊಡುತ್ತೇನೆ. ಹೇರಿಗೆ ಕೆರೆ ಎಂದು ಹೇಳಿ ನಮ್ಮಲ್ಲಿ ಕೆರೆಗೆ ಇದೆ. ಮೊದಲು ಒಂದು ಅಚ್ಚುಕಟ್ಟಿಗೆ ಮೂರೂವರೆ ಸಾವಿರ ಇದ್ದರೆ, ಈಗ ಆ ಅಚ್ಚುಕಟ್ಟು ಕೇವಲ ನಾಲ್ಕು ನೂರು ಎಕರೆ. ಅದರ ಬಗ್ಗೆ ಮೊನ್ನೆ ಸೂಪರಿಂಟೆಂಡಿಂಗ್ ಇಂಜನಿಯರ್ ಅವರು ಸ್ಥಳ ಪರಿಶೀಲನೆ ಮಾಡುವಂತಹ ಒಂದು ದೊಡ್ಡ ಪ್ರಸಂಗ ಬಂತು. ಕಾರಣ ಏನು? ಅದಕ್ಕೆ ರೈತರು ಹೇಳುತ್ತಾರೆ. ಕೇವಲ 350

ಅಥವಾ 400 ಎಕರೆಗೆ ನೀರನ್ನು ಕೊಡಬೇಕು. ನೀವು 32 ಕಿಲೋಮೀಟರ್‌ಗೆ ನೀರು ಕೊಡುತ್ತೀರಿ, ಕೆಲವು ಕಡೆ ನಾಲ್ಕು ಮೀಟರಗೆ ನೀರನ್ನು ಕೊಡುತ್ತೀರಿ. ನಾವು ಬಾಕಿಯುವರು ರೈತರು ಅಲ್ಲವೇ, ನಮಗೆ ಪೂರ್ಣ ನೀರನ್ನು ಕೊಡುವುದಾದರೆ ಕೊಡಿ. ಇಲ್ಲ ಎಂದರೆ ಕೆರೆ ಪೂರ್ಣ ತುಂಬಿದೆ, ನಮಗೆ ಗೊತ್ತಿದೆ. ಆದರೆ ನೀರನ್ನು ಬಿಡಲು ನಾವು ಅವಕಾಶ ಕೊಡುವುದಿಲ್ಲ, ಕಾರಣ ಏನು? ಕಾರಣ ಏನು ಎಂದು ರೈತರು ಬಿಡುವುದಿಲ್ಲ ಎಂದಾಗ ಅಧಿಕಾರಿಗಳು ಹೇಳುತ್ತಾರೆ, ಇಲ್ಲ ಸಾರ್ ಇದರ ಏರಿ ದುರಸ್ತಿ ಆಗಬೇಕು. ಸಿಲ್ಟ ತೆಗೆಯಬೇಕು. ಬಚ್ಚಲು ಕೆಲಸ ಆಗಬೇಕು, ಕೋಡಿ ಪಾಸ್ ಆಗಬೇಕು. ಇದು ಆಗದೇ ನಾವು 32 ಕಿಲೋ ಮೀಟರ್‌ಗೆ ನೀರನ್ನು ಬಿಡುವುದಕ್ಕೆ ಆಗುವುದಿಲ್ಲ ಎಂದು ಈಗಾಗಲೇ ನಾವು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದೇವೆ. ಹಣ ಬರದೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಸಹ ಹೇಳುತ್ತಾರೆ. ಈ ರೀತಿ ನಮ್ಮ ತಾಲ್ಲೂಕು ಒಂದರಲ್ಲಿಯೇ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ 35 ಸಾವಿರ ಎಕರೆಗೆ ನೀರಾವರಿ ಆಗುತ್ತದೆ. ರೈತರಿಗೆ ನಿಜವಾಗಿಯೂ ಜೀವದಾನ ಸಿಗುವುದು ಇಲ್ಲಿಯೇ. ನಿಜಕ್ಕೂ ಅವನಿಗೆ ನೆಮ್ಮದಿ ಸಿಗುವುದು ಇಲ್ಲಿಯೇ. ಈ ರೀತಿ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಏನು ರೈತರಿಗೆ ಬದುಕಿನ ಆಸರೆ ಇದೆ, ಬದುಕಿನ ಶಕ್ತಿ ಇದೆ. ಆ ಒಂದು ಬದುಕನ್ನು ರೂಪಿಸಿಕೊಡುವಂತಹ ಸಣ್ಣ ನೀರಾವರಿ ಯೋಜನೆ ಬಗ್ಗೆ ವಿಶೇಷವಾದ ಕಾಳಜಿ, ಕಳಕಳಿ ಸರ್ಕಾರಕ್ಕೆ ಬೇಕಾಗುತ್ತದೆ. ಇಲ್ಲ ಎಂದು ಹೇಳಿದರೆ ಖಂಡಿತವಾಗಿಯೂ ರೈತನನ್ನು ಉದಾಸೀನ ಮಾಡಿದ ಹಾಗೆ ಆಗುತ್ತದೆ. ಆ ಕಾರಣಕ್ಕೋಸ್ಕರ ತಮ್ಮ ಮೂಲಕ ಮಾನ್ಯ ಹಣಕಾಸು ಸಚಿವರನ್ನು ಹಾಗೂ ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಕೆರೆಗಳ ಹೂಳನ್ನು ಸಣ್ಣ ನೀರಾವರಿಯೋಜನೆಯಲ್ಲಿ ಎತ್ತಿಸುವಂತಹದು, ಕೋಡಿ ಕೆಲಸ ಮಾಡಿಸುವಂತಹದು ಲೈನ್ ಕೆಲಸಮಾಡಿಸುವಂತಹದು, ನಾಲಾ ದುರಸ್ತಿ ಕೆಲಸ ಮಾಡಿಸುವಂತಹದು. ಇದಕ್ಕೆ ವಿಶೇಷವಾದಂತಹ ಅನುದಾನವನ್ನು ದೊಡ್ಡ ನೀರಾವರಿ ಯೋಜನೆಗಳಿಗೆ ಎಷ್ಟು ಒತ್ತನ್ನು ಕೊಡುತ್ತಿದ್ದೀರಿ, ಅಷ್ಟೇ ಒತ್ತನ್ನು ಈ ವಿಚಾರದಲ್ಲಿ ಕೂಡ ಕೊಟ್ಟಾಗ ಖಂಡಿತವಾಗಿಯೂ ಕೂಡ ಗ್ರಾಮೀಣ ಮಟ್ಟದಲ್ಲಿವಂತವರ ಬದುಕಿಗೆ ವಿಶೇಖವಾದಂತಹ ಆಸರೆಯನ್ನು ತಾವು ಕೊಟ್ಟಂತೆ ಆಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಇನ್ನು ಎರಡು ಮೂರು ವಿಚಾರಗಳನ್ನು ಹೇಳಬೇಕಾಗಿತ್ತು. ನಾನು ತಮ್ಮ ಸಹನೆಯನ್ನು ಈ ಸಂದರ್ಭದಲ್ಲಿ ಪರೀಕ್ಷೆ ಮಾಡಲು ಇಚ್ಛೆಪಡುವುದಿಲ್ಲ. ಈ ಕೆಲವೊಂದು ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮಾನ್ಯ ಹಣಕಾಸು ಸಚಿವರು ನಮ್ಮ ಜಿಲ್ಲೆಯುವರಾಗಿದ್ದಾರೆ, ಹಿರಿಯರಾಗಿದ್ದಾರೆ. ನಾನು ಈ ಸಂದರ್ಭದಲ್ಲಿ ನಾನೇನು ಗಮನಕ್ಕೆ ತಂದಿದ್ದೇನೆ, ಅವುಗಳನ್ನು ಬಜೆಟನಲ್ಲಿ ಅಳವಡಿಸಿಕೊಂಡು ಕೊನೆಯ ಪಕ್ಷ, ಈ ಕಾಡು ಪ್ರಾಣಿಗಳ ಕಾಟ, ಸಣ್ಣ ನೀರಾವರಿ ವ್ಯವಸ್ಥೆ. ಈ ಬೆಂಕಿ ಬಿದ್ದಂತಹ ಸಮಯದಲ್ಲಿ ಅವರಿಗೆ ಪರಿಹಾರವನ್ನು ಕೊಡುವಂತಹ ವಿಚಾರಕ್ಕೆ ತಾವು ಒತ್ತನ್ನು ಈ ಸಂದರ್ಭದಲ್ಲಿ ಕೊಡಬೇಕು ತಮ್ಮ ಬಜೆಟನಲ್ಲಿ ಎಂದು ಹೇಳುತ್ತಾ ತಮಗೆ ಧನ್ಯವಾದವನ್ನು

ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡ) : ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ನಾನು ತಾವು ನನಗೆ ಈ ಒಂದು ಸವವಕಾಶವನ್ನ ಕಲ್ಪಿಸಿಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಯಾವುದೇ ಸರ್ಕಾರ, ಯಾವುದೇ ಹಣಕಾಸಿನ ಮಂತ್ರಿಗಳು ಆಯುವ್ಯಯವನ್ನು ಮಂಡಿಸುತ್ತಾರೆ, ಅಥವಾ ಸಲ್ಲಿಸುತ್ತಾರೆ. ಅವರಿಗೂ ಕೂಡ ಆಸೆ ಇರುತ್ತದೆ. ಒಳ್ಳೆಯ ಆಯವ್ಯಯ ಪತ್ರವನ್ನು ಮಂಡಿಸಬೇಕು, ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎಂದು ನಮಗೂ ಕೂಡ ನಮ್ಮ ಸರ್ಕಾರಕ್ಕೆ, ಪಕ್ಷಕ್ಕೆ ಒಳ್ಳೆಯ ಉತ್ತಮವಾದಂತಹ ಹೆಸರನ್ನು ತಂದು ಕೊಡಬೇಕು ಎಂಬ ಆಸೆ ಇರುತ್ತದೆ. ಆದರೆ ನನ್ನ ಸಂಕ್ಷಿಪ್ತ ವಿಚಾರ ಇಷ್ಟೇ. ಇವರು ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ, ಅಧಿಕಾರಕ್ಕೆ ಬಂದ ತಕ್ಷಣ ಹೇಳಿದ್ದೇನು ಈಗ ಯಾವ ರೀತಿ ನಡೆದುಕೊಂಡು ಹೋಗುತ್ತಿದ್ದಾರೆ ಎನ್ನುವ ಬಗ್ಗೆ ನಾನು ಹೇಳಲು ಇಚ್ಛಿಸುತ್ತೇನೆ. ಕೃಷ್ಣಾ ಕಾವೇರಿ ಮೇಲೆ ಆಣೆ ಮಾಡಿ ಅಧಿಕಾರಕ್ಕೆ ಬಂದರು. ನೀರಾವರಿ ಯೋಜನೆಗಳನ್ನು ಒಂದು ಕಾಲಮಿತಿಯೊಳಗೆ ಪೂರೈಸುತ್ತೇವೆಂದು ಹೇಳಿ, ಜನನಿಷ ಜವಾಬ್ದಾರಿ ಸರ್ಕಾರವನ್ನು ಕೊಡುತ್ತೇವೆಂದು ಹೇಳಿದರು. ಸ್ವಾಭಿಮಾನಿ, ಸಮೃದ್ಧ ಕರ್ನಾಟಕ ನಿರ್ಮಾಣವನ್ನು ಮಾಡುತ್ತೇವೆಂದು ಎನ್ನತಕ್ಕ ಮಾತನ್ನು ಕೂಡ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿತ್ತು. ಈ ರಾಷ್ಟ್ರದಲ್ಲಿ ಆರ್ಥಿಕ ಉದಾರೀಕರಣ ಇತ್ತು. ಅದರ ಬಗ್ಗೆ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದರು. ಈ ಆರ್ಥಿಕ ನೀತಿ, ಈ ದೇಶವನ್ನು ಗುಲಾಮಗಿರಿಗೆ ತಳ್ಳುವಂತಹದು ಆಗಿದೆ ಎಂದು ಹೇಳಿದ್ದರು. ವರ್ಗಾವಣೆ ಬಗ್ಗೆ ಹೇಳಿದ್ದಿರಿ. ಅಧಿಕಾರಿಗಳ ಮತ್ತು ಸರ್ಕಾರೀ ನೌಕರರ ವರ್ಗಾವರ್ಗಿ ಸಕಲ ಭ್ರಷ್ಟಾಚಾರಕ್ಕೆ ಮೂಲ ನೆಲೆ ಆಗಿದೆ. ಇದನ್ನು ನಿಲ್ಲಿಸಲಿಕ್ಕೆ ಒಂದನೇ ಹಾಗೂ ಎರಡನೆಯ ದರ್ಜೆಯ ನೌಕರರನ್ನು ಮಾತ್ರ ಈ ವಿಧಾನ ಸೌಧದಿಂದ ವರ್ಗಾವಣೆ ಮಾಡುವಂತಹ ಅಧಿಕಾರವನ್ನು ಇಟ್ಟುಕೊಂಡು ಉಳಿದ ನೌಕರರ ವರ್ಗಾವಣೆಯನ್ನು ಆಯಾಯ ಜಿಲ್ಲಾ ಮಟ್ಟದಲ್ಲಿ ಆಯಾಯ ಇಲಾಖಾ ಮುಖ್ಯಸ್ಥರು ಮಾಡುವಂತೆ ಕಟ್ಟಾಜ್ಞೆ ಹೊರಡಿಸುತ್ತೇವೆ ಎನ್ನತಕ್ಕ ವಚನವನ್ನು ಕೊಟ್ಟಿದ್ದಿರಿ. ಭ್ರಷ್ಟಾಚಾರ ನಿರ್ಮೂಲನ ಮಾಡಲಿಕ್ಕೆ ಏನು ಈಗ ಲೋಕಾಯುಕ್ತ ಇದೆ, ಅದಕ್ಕೆ ಇನ್ನೂ ಕೂಡ ಉಗುರನ್ನು, ಹಲ್ಲನ್ನು ಚೂಪು ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಿರಿ. ತಮ್ಮ ಬಜೆಟ್ ಭಾಷಣದಲ್ಲಿ ಮೊದಲನೆಯ ಪುಟದಲ್ಲಿ ಒಂದು ವಾಕ್ಯವನ್ನು ಹೇಳಿದ್ದಿರಿ. "ಜನತೆಯು ಇರಿಸಿದ ವಿಶ್ವಾಸವನ್ನು ಉಳಿಸಿಕೊಂಡಿದ್ದೇವೆ" ಎನ್ನತಕ್ಕ ಮಾತನ್ನು ಹೇಳಿದಿರಿ. ಕಳೆದ ಬಜೆಟನಲ್ಲಿ ತಾವು ಹೇಳಿದ್ದಿರಿ. ಭರವಸೆ ಮತ್ತು ಸಾಧನೆ ಏನು ಇದೆ, ಆ ನಡುವಿನ ಅಂತರವನ್ನು ನಾವು ಕಡಿಮೆ ಮಾಡುತ್ತೇವೆ. ವಾಸ್ತವವಾಗಿ ಕಾರ್ಯರೂಪಕ್ಕೆ ತರತಕ್ಕಂಥ ಗುರಿಯನ್ನು ನಿಮ್ಮ ಸರ್ಕಾರ ಹಾಕಿಕೊಳ್ಳುತ್ತದೆ ಎನ್ನುರ ಮಾತನ್ನು ಕೂಡ ತಾವು ಹೇಳಿದ್ದಿರಿ. ಹೊಸ ಆರ್ಥಿಕ ನೀತಿಯಿಂದ ಬಡತನದ ಪ್ರಮಾಣ ಜಾಸ್ತಿ ಆಗುತ್ತದೆ. ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಹೋಗುತ್ತದೆ. ಹಣದುಬ್ಬರ ಉಂಟಾಗುತ್ತದೆ, ಉಳಿತಾಯ ಪ್ರಮಾಣದಲ್ಲಿ ಇಳಿತ ಆಗುತ್ತದೆ. ನಿರುದ್ಯೋಗ ಸಮಸ್ಯೆಗಳು

ಹೆಚ್ಚುತ್ತವೆ ಎನ್ನತಕ್ಕ ಮಾತನ್ನು ಕೂಡ ತಾವು ಹೇಳಿದ್ದಿರಿ. ಮೊದಲನೇ ತಮ್ಮ ಬಜೆಟ್ ಭಾಷಣದಲ್ಲಿ ಗುಡಿ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆಂದು ಹೇಳಿದ್ದೀರಿ. ವಿಧವೆಯರಿಗೆ ಮತ್ತು ಅಶಕ್ತರಿಗೆ, ಸ್ವಶಕ್ತಿ, ಅಂಗವಿಕಲರಿಗೆ ಆಧಾರ. ಮಹಿಳೆಯರ ಅಭಿವೃದ್ಧಿಗಾಗಿ ಒಂದು ಮನೆ ಬೆಳಕು ಕಾರ್ಯಕ್ರಮವನ್ನು ತಾವು ಕಳೆದ ಬಜೆಟ ಭಾಷಣದಲ್ಲಿ ಘೋಷಣೆ ಮಾಡಿದ್ದೀರಿ. ತಾವು ಉತ್ತರ ಕೊಡುವಾಗ ಹೇಳಬೇಕು. ಈ ಮನೆ ಬೆಳಕು ಕಾರ್ಯಕ್ರಮದಲ್ಲಿ, ಆಧಾರ ಕಾರ್ಯಕ್ರಮದಲ್ಲಿ, ಸ್ವಶಕ್ತಿ ಕಾರ್ಯಕ್ರಮದಲ್ಲಿ ಎಷ್ಟು ಜನ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ? ಬಡತನ ರೇಖೆಗಿಂತ ಮೇಲೆ ಬಂದಿದ್ದಾರೆ? ಎಷ್ಟು ಹಣವನ್ನು ಸರ್ಕಾರದಿಂದ ತಾವು ಬಿಡುಗಡೆ ಮಾಡಿದ್ದಿರಿ ಎನ್ನತಕ್ಕ ಮಾತನ್ನು ತಾವು ತಿಳಿಸಬೇಕು.

9.30 ಪಿ.ಎಂ.

1995-96ರಲ್ಲಿ 12 ಸಾವಿರ ಶಾಲಾ ಕೊಠಡಿಗಳನ್ನು ನಿರ್ಮಿಸುವುದಾಗಿ ಹೇಳಿದ್ದಿರಿ. ಅವರಲ್ಲಿ ಎಷ್ಟು ನಿರ್ಮಾಣ ಮಾಡಿದ್ದೀರಿ? 1995-96ರಲ್ಲಿ ಸುಮಾರು ಎರಡೂವರೆ ಲಕ್ಷ ನಿವೇಶನಗಳನ್ನು ಹಂಚುತ್ತೇವೆ ಸುಮಾರು ಒಂದು ಲಕ್ಷದ ಇಪ್ಪತ್ತಾರು ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದಿರಿ. ತಾವು ಎಷ್ಟು ನಿವೇಶನವನ್ನು ಎಷ್ಟು ಮನೆಗಳನ್ನು ಕೊಟ್ಟಿದ್ದೀರಿ ಎಂಬ ಬಗ್ಗೆ ಅಂಕಿಅಂಶವನ್ನು ಕೊಡುತ್ತಿರೋ? ತಾವು ಇದರಲ್ಲಿ ಏನು ಸಾಧನೆ ಮಾಡಿದ್ದೀರಿ ಎಂಬ ಬಗ್ಗೆ ಹೇಳುತ್ತೀರೋ? ಮುಂದಿನ ವರ್ಷ ಮಾಡುವುದು ಬೇರೆ ವಿಚಾರ. ತಾವೇನು ಮಾರ್ಚ ಒಳಗಾಗಿ ಎರಡೂವರೆ ಲಕ್ಷ ನಿವೇಶನಗಳನ್ನು ಕೊಡುತ್ತೇವೆಂದು ಹೇಳಿದ್ದೀರಲ್ಲಾ ಅದರಲ್ಲಿ ಎಷ್ಟು ಸಾಧನೆ ಮಾಡಿದ್ದೀರಿ ಎಂಬ ಬಗ್ಗೆ ತಿಳಿಸಬೇಕೆಂದು ಒತ್ತಾಯ ಮಾಡುತ್ತೇನೆ ಈ ಸರ್ಕಾರ ನೀರಾವರಿಗೆ ಆದ್ಯತೆಯನ್ನು ಕೊಡುತ್ತದೆಂದು ನಮಗೆ ಮೊದಲು ಅನ್ನಿಸಿತು. ಕೃಷಿಗೆ ಒತ್ತು ನೀಡುತ್ತದೆಂದು ನಮ್ಮ ಮತ್ತು ಈ ನಾಡಿನ ಎಲ್ಲಾ ಜನರ ಅಭಿಪ್ರಾಯವಾಗಿತ್ತು. ಮಣ್ಣಿನ ಮಗನ ಆಧ್ಯತೆಯೇನು ಎಂಬುದು ಇವತ್ತು ನಮಗೆ ಗೊತ್ತಾಗಿದೆ. ನಮ್ಮ ರಾಜ್ಯದಲ್ಲೇನು 53 ಲಕ್ಷ ಎಕರೆ ಜಮೀನು ನೀರಾವರಿಗೆ ಒಳಪಡತಕ್ಕ ಸೌಲಭ್ಯವಿದೆ. ಅದನ್ನು ಈ ರಾಷ್ಟ್ರದಲ್ಲಿ ಪ್ರಪ್ರಥಮವಾಗಿ ಗುರಿಯನ್ನು ಮುಟ್ಟುತ್ತೇನೆ ಎನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ. ನೀರಿನ ಮಕ್ಕಳ ಸರ್ಕಾರ, ಮಣ್ಣಿನ ಮಕ್ಕಳ ಸರ್ಕಾರ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿಯನ್ನು ತಂದು ವಿಕೃತಗೊಳಿಸಿತು. ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯವನ್ನು ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನಕ್ಕೆ ತೆಗೆದುಕೊಂಡು ಹೋಗುತ್ತೇವೆಂದು ಹೇಳುತ್ತಾರೆ. ಕೃಷಿ, ನೀರಾವರಿಗಳನ್ನು ಬಿಟ್ಟುಬಿಟ್ಟು ಕೈಗಾರಿಕೆಗಳ ಕಡೆಗೆ ಹೊರಟುಬಿಟ್ಟರು. ಯಾವ ಹೊಸ ಆರ್ಥಿಕ ನೀತಿಯನ್ನು ಗುಲಾಮಗಿರಿಗೆ ತಳ್ಳತಕ್ಕ ನೀತಿಯೆಂದು ಹೇಳುತ್ತಿದ್ದರೋ ಆ ನೀತಿಯನ್ನು ಅನುಸರಿಸಲು ಹೊರಟಿದ್ದೀರಲ್ಲಾ ಇದು ಸರಿಯೇ? ಇದೆಯೇ ತಾವು ನುಡಿದಂತೆ ನಡೆಯುತ್ತಿರತಕ್ಕದ್ದು? ಈ ರೀತಿಯಾದ ಪದಗಳನ್ನು ಪ್ರಯೋಗ ಮಾಡಿರತಕ್ಕದ್ದು ಇವರೇ, ನಾನು ಹೇಳಿರತಕ್ಕದಲ್ಲ. ತಾವು

ಜನರಿಂದ ವಿಶ್ವಾಸನೆಯನ್ನು ಉಳಿಸಿಕೊಂಡಿಲ್ಲವೆನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಕಾವೇರಿ ಮತ್ತು ಕೃಷ್ಣಾ ನೀರಾವರಿ ಯೋಜನೆಯ ಬಗ್ಗೆ ಹೇಳುವುದಾದರೆ ಕೃಷ್ಣಾ ನೀರಾವರಿ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮಾರ್ಚ್ ತಿಂಗಳಿನೊಳಗೆ ಸಾಲ ಮಾಡಿ, ಬೇಡಿ, ಕದ್ದು ತಂದಾದರೂ ಸಹ ಖರ್ಚು ಮಾಡಿಯೇ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದಾಗ ಆಡಳಿತ ಪಕ್ಷದವರೆಲ್ಲರೂ ಮೇಜುತಟ್ಟಿ ಸ್ವಾಗತಿಸಿದರು. ಆದರೆ ಆ ರೀತಿ ತಾವು ಖರ್ಚು ಮಾಡಿದಿರಾ? ಅಧಿಕಾರಕ್ಕೆ ಬರುವ ಮೊದಲು ಕಾವೇರಿ ನ್ಯಾಯಮಂಡಳಿಯ ಬಗ್ಗೆ ಬಹಳ ಕಠಿಣವಾಗಿ ಟೀಕೆ ಮಾಡಿದುದ್ದು ಬೇರೆ ವಿಚಾರ. ಅನಂತರ ಕದ್ದುಮಾಡಿ ಐದು ಟಿ.ಎಂ.ಸಿ ನೀರನ್ನೂ ತಮಿಳುನಾಡಿಗೆ ಬಿಟ್ಟರು. ಅನಂತರ ಮತ್ತೆ ಸದನ ಸೇರಿತು, ಇಲ್ಲಿ ಸರ್ವಾನುಮತದಿಂದ ನಿರ್ಣಯವೂ ಆಯಿತು, ಕಾವೇರಿ ಜಲ ವಿವಾಧದ ಟ್ರಿಬ್ಯುನಲ್ ಮಾಡಿದ ತೀರ್ಪು, ರಾಜ್ಯದ ಹಿತಕ್ಕೆ ಭಾದಕವಾಗಿದ್ದು, ಅನುಷ್ಠಾನಗೊಳಿಸಲಾಗದೇ ಇರುವ ತೀರ್ಪಾಗಿರುವುದರಿಂದ ಈ ಸದನವು ಆ ತೀರ್ಪನ್ನು ತಿರಸ್ಕರಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಆನಂತರವೂ ತಾವು ಆರು ಟಿ.ಎಂ.ಸಿ. ನೀರನ್ನು ಬಿಟ್ಟರಿ. ಎಲ್ಲಾ ವಿರೋಧ ಪಕ್ಷದ ಮುಖಂಡರನ್ನು ಕರೆದು, ಎಲ್ಲಾ ಪಕ್ಷದ ಪ್ರಮುಖರನ್ನು ಕರೆದು ಸರ್ವಾನುಮತದಿಂದ ನಿರ್ಣಯವನ್ನು ತೆಗೆದುಕೊಂಡು ನೀರನ್ನು ಬಿಟ್ಟೆವು ಎನ್ನತಕ್ಕ ಮಾತನ್ನು ಹೇಳಬಹುದು. ಈ ಸದನದ ನಿರ್ಣಯ ಪರಮೋಚ್ಚವೋ ಅಥವಾ ಈ ಸಭೆಯಿಂದ ಕೆಲವು ಮುಖಂಡರುಗಳನ್ನು ಕರೆದು ತೆಗೆದುಕೊಳ್ಳತಕ್ಕ ತೀರ್ಮಾನ ಪರಮೋಚ್ಚವೋ ಎಂಬ ಬಗ್ಗೆ ಮಾನ್ಯ ಅಧ್ಯಕ್ಷರು ದಯಮಾಡಿ ತೀರ್ಮಾನವನ್ನು ಕೊಡಬೇಕು. ಹಾಗಾದರೆ ಈ ಸದನದ ನಿರ್ಣಯವೇನಾಯಿತು? ಈ ಸದನದ ಘನತೆ ಗೌರವಗಳೇನಾಯಿತು? ಪಕ್ಷಕ್ಕಿಂತ ರಾಜ್ಯ, ದೇಶ ದೊಡ್ಡದು ಎಂದು ನಾನು ನಮ್ಮ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರಿಗೆ ಹೇಳಿದೆ. ರಾಜ್ಯದ ಹಿತ ಮತ್ತು ದೇಶದ ಹಿತವು ದೊಡ್ಡದೆಂದು ನಾವಿಬ್ಬರೂ ಒಂದು ಸಮಾರಂಭದಲ್ಲಿ ಭೇಟಿಯಾಗಿದ್ದಾಗ ಅವರಿಗೆ ಹೇಳಿದ್ದೆ. ಆದ್ದರಿಂದ ಯಾವ ನಿರ್ಣಯ ಪರಮೋಚ್ಚವೆಂದು ಹೇಳಿ? ಈ ಸದನ ಕಾವೇರಿ ನ್ಯಾಯಮಂಡಳಿಯ ತೀರ್ಪನ್ನು ಅನುಷ್ಠಾನಗೊಳಿಸಬಾರದೆಂದು ನಿರ್ಣಯವನ್ನು ತೆಗೆದುಕೊಂಡಿತ್ತು. ತಾವು ಮತ್ತೆ ಈ ಸದನದ ವಿಶ್ವಾಸವನ್ನು ತೆಗೆದುಕೊಂಡು ತಮಿಳುನಾಡಿಗೆ 6 ಟಿ.ಎಂ.ಸಿ. ನೀರನ್ನು ಬಿಟ್ಟಿರಾ? ತಮಗೆ ಪ್ರಜಾಪ್ರಭುತ್ವದ ಬಗ್ಗೆ, ಜನತಂತ್ರ ವ್ಯವಸ್ಥೆಯ ಬಗ್ಗೆ ವಿಶ್ವಾಸವನ್ನು ಉಳಿಸಿ ಕೊಂಡಿದ್ದೀರಾ? ನಿಮ್ಮ ವಿಶ್ವಾಸವೇನಾಯಿತು? ಅಧಿಕಾರ ಹೋದರೂ ಒಂದು ತೊಟ್ಟು ನೀರನ್ನೂ ಬಿಡುವುದಿಲ್ಲವೆಂದು ಹೇಳಿದ್ದಿರಿ. ಆದರೆ ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ, ಅಧಿಕಾರಕ್ಕೆ ಗುಲಾಮರಾಗಿರುವ ಸಲುವಾಗಿ ನೀರನ್ನು ಬಿಡಬೇಕಾದ ಅನಿವಾರ್ಯ ಪರಿಸ್ಥಿತಿ ತಮಗೆ ಬಂದಿತ್ತೇ? ತಾವೇನು ಅಧಿಕಾರ ಹೋದರೂ ನೀರನ್ನು ಬಿಡುವುದಿಲ್ಲವೆಂದು ಹೇಳಿದ್ದಿರಿ. ಅದರಂತೆ ತಾವು ನಡೆದುಕೊಂಡಿದ್ದರೆ ನಾವು ನಿಮ್ಮನ್ನು ಮೆಚ್ಚುತ್ತಿದ್ದೇವೆ; ಜನರು ನಿಮ್ಮ ಜೊತೆಗೆ ಇರುತ್ತಿದ್ದರು. ಟೀಚಿಂಗ್ ಬಹಳ ಸುಲಭ ಆದರೆ ಪ್ರಾಕ್ಟೀಸ್ ಬಹಳ ಕಷ್ಟ. ಭ್ರಷ್ಟಾಚಾರವನ್ನು

ನಿರ್ಮೂಲನೆ ಮಾಡಿಬಿಡುತ್ತೇವೆಂದು ಹೇಳುವುದು ಸುಲಭ. ನೀವು ಆ ದಿಕ್ಕಿನಲ್ಲಿ ಪ್ರಯತ್ನ ಮಾಡಿದ್ದೀರಾ? ಮಣ್ಣಿನ ಮಕ್ಕಳ, ನೀರಿನ ಮಕ್ಕಳ ಸರ್ಕಾರದಲ್ಲಿ ಇಂದು ರೈತರ ಶೋಷಣೆಯಾಗುವುದು ತಪ್ಪಿದೆಯೇ? ರೈತರುಗಳು ಕೂಲಿಕಾರರು ಸರ್ಕಾರಿ ಕಚೇರಿಗಳಿಗೆ ಹೋಗುತ್ತಾರೆ ಆದರೆ ಕಚೇರಿಗಳಲ್ಲಿನ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ತಮ್ಮಿಂದ ಆಗಲಿಲ್ಲ. ಹೋಗಲಿ ಇದನ್ನು ಕಡಿಮೆ ಮಾಡುವ ಬಗ್ಗೆ ಆತ್ಮವಿಶ್ವಾಸದಿಂದ ಹೇಳಿ. ತೆರಿಗೆಯನ್ನು ಈ ಸಾಲಿನಲ್ಲಿ ಹೆಚ್ಚು ವಸೂಲಿ ಮಾಡಿದ್ದೀರಿ. ಈ ನಿಟ್ಟಿನಲ್ಲಿ ತಾವು ಶ್ಲಾಘನೆಗೆ ಅರ್ಹರು. ಆದರೆ ಜನಸಾಮಾನ್ಯರ ಶೋಷಣೆಯೇನಿತ್ತು ಅದನ್ನು ನಿಲ್ಲಿಸಲು ತಮ್ಮ ಸರ್ಕಾರದಿಂದ ಸಾಧ್ಯವಾಗಿದೆಯೇ ಎಂಬ ಬಗ್ಗೆ ತಾವು ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಿಳಿಬಯಸುವೆ. ನಮ್ಮ ಸರ್ಕಾರದಲ್ಲಿ ಎಲ್ಲರೂ ಸತ್ಯಹರಿಶ್ಚಂದ್ರರಾಗಿದ್ದರೆಂದು ನಾನು ಹೇಳುವುದಿಲ್ಲ. ಆದರೆ ತಮ್ಮಲ್ಲಿರುವಂಥ ರಾಕ್ಷಸರುಗಳಿರಲಿಲ್ಲ. ಅವತ್ತು ಕದ್ದು, ಮುಚ್ಚು ಮರೆಯಲ್ಲಿ ಪ್ರಜಾಪ್ರಭುತ್ವದ ಹೋಮವಾಗುತ್ತಿತ್ತು. ಆದರೆ ಇಂದು ಹಾಡು ಹಗಲಲ್ಲೇ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ. ವಿರೋಧಿಗಳೇನಿದ್ದಾರೆ ಅವರ ಬಗ್ಗೆ ದಮನ ನೀತಿಯನ್ನು ಅನುಸರಿಸಲು ದುರಾಡಳಿತ ಈ ರಾಜ್ಯದಲ್ಲಿ ಪ್ರಾರಂಭವಾಗಿದೆ. ಉದಾಹರಣೆಗೆ ಹಾಸನ ಜಿಲ್ಲೆಯಲ್ಲಿ ಚೆನ್ನರಾಯಪಟ್ಟಣದ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಚುನಾವಣೆಯಾಯಿತು. ಚುನಾವಣೆ ದಿವಸ ನಾನೂ ಒಬ್ಬ ಮತದಾರನಾಗಿದ್ದರಿಂದ ಅಲ್ಲಿಗೆ ಹೋಗಿದ್ದೆ. ಆ ಚುನಾವಣೆಯ ದಿವಸ ಯಾರೂ ಮತದಾರರು ಬಂದು ಮತವನ್ನು ಹಾಕಲೇ ಇಲ್ಲ. ಚುನಾವಣೆಯ ಸಮಯದಲ್ಲಿ ಹಲವಾರು ಬಾರಿ ಲಾಠಿ ಚಾರ್ಜು ಆಯಿತು. ಇಪ್ಪತ್ತು ವರ್ಷಗಳ ಹಿಂದೆ ಯಾರು ಗೌರವಸ್ಥರು ಸಾವಿರ ರೂಪಾಯಿಗಳನ್ನು ಕೊಟ್ಟು ಶೇರ್‌ನ್ನು ತೆಗೆದುಕೊಂಡಿದ್ದರು ಅವರುಗಳು ಮತವನ್ನು ಹಾಕಲು ಬರಲೇ ಇಲ್ಲ. ಅಂಥ ಭೀತಿಯ ವಾತಾವರಣ ಅಲ್ಲಿ ನಿರ್ಮಾಣವಾಗಿತ್ತು. ಒಂದು ಕ್ಷೇತ್ರದ ಮತದಾನ ಮುಂದಕ್ಕೆ ಹೋಯಿತು. ಅನಂತರ ಸಕಲೇಶಪುರದ ಸಹಕಾರಿ ಸಕ್ಕರೆ ಕಾರ್ಖಾನೆಯ ಚುನಾವಣೆ ಮೊನ್ನೆ ಮೊನ್ನೆ ಆಯಿತು. ಸಕಲೇಶಪುರದ ಶಾಸಕರಾದ ಮಾನ್ಯ ಶಿವಪ್ಪನವರು ಇಲ್ಲೇ ಇದ್ದಾರೆ. ಚುನಾವಣೆಗೆ ನಿಲ್ಲುವ ಬಗ್ಗೆ ನಮ್ಮ ಪಕ್ಷದವರೇನು ನಾಮಪತ್ರವನ್ನು ಸಲ್ಲಿಸಿದ್ದರೋ ಆ ನಾಮಪತ್ರವನ್ನು ಅಪಹರಿಸಿಕೊಂಡು ತಮ್ಮ ಪಕ್ಷದವರು ಹಾಡುಹಗಲಲ್ಲೇ ಹೋದರು. ಬೆಂಗಳೂರಿನಲ್ಲಿ ಯಾರೋ ಬ್ರಿಟಿಷನವರು ಬಂದು ಕೊಲೆಯಾದರು, ಅವರು ಯಾರು ಎಲ್ಲಿಯವರೆಂದು ತಮಗೆ ಗೊತ್ತಿರಲಿಲ್ಲ. ಆ ರೀತಿ ಕೊಲೆ ಮಾಡಿದವರನ್ನು ಹಿಡಿಯಲು ತಮಗೆ ಸರ್ಕಾರಕ್ಕೆ ಶಕ್ತಿ ಇತ್ತು. ಆದರೆ ಸಕಲೇಶಪುರದಲ್ಲೇನು ಜನರ ಮುಂದೆ, ಪೋಲೀಸರನವರ ಮುಂದೆ, ಹಾಡುಹಗಲಲ್ಲೇ ನಾಮಪತ್ರವನ್ನು ತೆಗೆದುಕೊಂಡು ಹೋಗಿ ಚುನಾವಣೆಯನ್ನು ಮುಂದಕ್ಕೆ ಹಾಕಲು ವ್ಯವಸ್ಥಿತವಾದಂಥ ಕಾರ್ಯಕ್ರಮವನ್ನು ಹಾಕಿಕೊಂಡು ಮಾಡಿದರು. ಆ ತಪ್ಪಿತಸ್ಥರ ಮೇಲೆ ಇವತ್ತಿನವರೆಗೂ ಕ್ರಮತೆಗೆದುಕೊಂಡಿಲ್ಲ. ಅಪರಾಧಿಗಳನ್ನು ಗುರುತು ಮಾಡತಕ್ಕಂಥ ಮನಸ್ಸನ್ನೇ ಈ ಸರ್ಕಾರ ಮಾಡಿಲ್ಲ. ಸುಮಾರು ಒಂದು ತಿಂಗಳ ಹಿಂದೆ ಪಶು ಆಹಾರ ಘಟಕಕ್ಕೆ

ಶಂಕು ಸ್ಥಾಪನೆ ಮಾಡುವ ಕಾರ್ಯಕ್ರಮ ಹಾಸನದಲ್ಲಾಯಿತು. ಆರ್.ಟಿ.ಓ. ಬ್ರೇಕ್ ಇನ್ಸಪೆಕ್ಟರುಗಳು ಹೋಗಿ ಲಾರಿ ಮತ್ತು ಮೆಟಡೋರಗಳ ಆರ್.ಸಿ. ಪುಸ್ತಕವನ್ನು ಕಿತ್ತುಕೊಂಡು ನೀವು ಹೋಗಿ ಸಮಾರಂಭಕ್ಕೆ ಜನರನ್ನು ಕರೆದುಕೊಂಡು ಬನ್ನಿ ಅನಂತರ ಅವರನ್ನು ವಾಪಸ್ ಬಿಟ್ಟು ತಮ್ಮ ಆರ್.ಸಿ. ಪುಸ್ತಕವನ್ನು ಪಡೆದುಕೊಂಡು ಹೋಗಿ ಎಂದು ಎಲ್ಲಾ ಕಡೆ ಮಾಡಿದ್ದಾರೆ. ಬೇಕಾದರೆ ಇದರ ಬಗ್ಗೆ ತನಿಖೆಯನ್ನು ಮಾಡಿಸಿ. ಇಂಥಹ ದುರಾಡಳಿತ ನಮ್ಮಲ್ಲಿ ಆಗಿರಲಿಲ್ಲ. ನಮ್ಮಲ್ಲಿ ದುರಾಡಳಿತವಾಗಿರಲಿಲ್ಲವೆಂದು ನಾನು ಹೇಳುವುದಿಲ್ಲ, ನಮ್ಮ ಕಾಲದಲ್ಲೂ ಸ್ವಲ್ಪ ಮಟ್ಟಿಗೆ ದುರಾಡಳಿತವಾಗಿದೆ. ಆದ್ದರಿಂದಲೇ ನಾವು ವಿರೋಧಪಕ್ಷಕ್ಕೆ ಬಂದು ಕುಳಿತಿದ್ದೇವೆ. ಇಷ್ಟರಮಟ್ಟಿಗೆ ದುರಾಡಳಿತವನ್ನು ನಾನೆಂದೂ ನೋಡಿರಲಿಲ್ಲ. ಈ ಸರ್ಕಾರದಿಂದ ಇಂಥಹ ಆಡಳಿತವನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ನನ್ನ ತಾಲ್ಲೂಕಿನಲ್ಲಿ ಜಿಲ್ಲಾ ಚರ್ಚೆಯಾಯಿತು. ತಾವೂ ಸಹ ಸ್ಥಳೀಯ ಶಾಸಕರನ್ನು ಕಾರ್ಯಕ್ರಮಗಳಿಗೆ ಕರೆಯಬೇಕೆಂದು ಆದೇಶ ಕೊಟ್ಟಿರಿ. ಅನಂತರ ಒಂದುವಾರ ಕಳೆದಮೇಲೆ ಮುಖ್ಯಮಂತ್ರಿಗಳು ಜನಸಂಪರ್ಕ ಸಭೆಯನ್ನು ಮಾಡುವುದಕ್ಕೆ ಹೋದರು. ಕಾರಣ ಸ್ವಲ್ಪ ದಿವಸಗಳ ಹಿಂದೆ ನಮ್ಮ ಪಕ್ಷದ ವತಿಯಿಂದ ಒಂದು ಸಭೆಯನ್ನು ಮಾಡಿದ್ದೆವು. ನಾವು ಮಾಡಿದ ಸಭೆಯ ಹಿನ್ನಲೆಯಲ್ಲಿ ಮುಖ್ಯಮಂತ್ರಿಗಳು ಜನಸಂಪರ್ಕ ಸಭೆ ಮಾಡಲು ಬಂದಿದ್ದರು. ಜನಸಂಪರ್ಕ ಸಭೆಯನ್ನು ಮಾಡುವುದಕ್ಕೂ ಮೊದಲು ಸಮುದಾಯ ಭವನವೊಂದರ ಉದ್ಘಾಟನೆಯನ್ನು ಮಾಡಿದರು. ಇದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಬೇಕಾದರೆ ಕೊಡುತ್ತೇನೆ. ಅವರು ಜನಸಂಪರ್ಕ ಸಭೆಗೆ ಹೋಗಿ ನಾನು ಇಲ್ಲೇ ದಾರಿಯಲ್ಲಿ ಬರುತ್ತಿದೆ. ಹೆಣ್ಣುಮಕ್ಕಳು ಮಂಗಳಾರತಿಯನ್ನಿಟ್ಟು ಕೊಂಡಿದ್ದರು, ಅದನ್ನು ನೋಡಿ ನಾನು ಇಳಿದೆ ಎಂದ ಹೇಳಿದ್ದಾರೆ.

ಶಿಲಾನ್ಯಾಸ ಮಾಡುವುದಕ್ಕೆ, ಇದನ್ನು ಓಪನಿಂಗ್ ಮಾಡುವುದಕ್ಕೆ ಕಲ್ಲು ಮಾಡಿಸಿದ್ದಾರೆ, ಐದಾರು ದಿವಸಗಳ ಮುಂಚಿತವಾಗಿ ಫಾಂಪ್ಲೆಂಟ್‌ಗಳನ್ನು ಮುದ್ರಿಸಿದ್ದಾರೆ. ಈ ಶಾಸಕರುಗಳನ್ನು ನಾನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನಾವು ನಮ್ಮದೇ ಆದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋಗುತ್ತೇವೆ ಎನ್ನುವಂಥ ಮಾತನ್ನು ಹೇಳಿದರು. ನಾನು ಬೇಡ ಎನ್ನುವುದಿಲ್ಲ. ಆದರೆ, ಇಂತಹ ಹಸಿ ಸುಳ್ಳನ್ನು ಏಕೆ ಹೇಳಬೇಕು? ಇದಾದ ನಂತರ ಜನ ಸಂಪರ್ಕ ಸಭೆಗೆ ಹೋಗಿ ಅಲ್ಲಿಯೂ ಹೇಳಿದರು. 'ನಾನು ರಂಜಾನ್ ಹಬ್ಬಕ್ಕೆ ಊರಿಗೆ ಬಂದಿದ್ದಾಗ ಇಲ್ಲಿ ಜನರನ್ನು ನೋಡಿದರೆ ಇಲ್ಲಿ ಈ ರೀತಿ ಅವರು ವ್ಯವಸ್ಥೆ ಮಾಡಿಕೊಂಡಿದ್ದಾರೆಂದು ಅಲ್ಲಿಯೂ ಭಾಷಣ ಹೊಡೆದರು. ಅಲ್ಲಿ ಅವರು ಒಂದು ಮಾತನ್ನು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಾನು ನಾಲ್ಕೈದು ಪತ್ರಿಕೆಗಳನ್ನು ತಂದಿದ್ದೇನೆ, ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ, ತಾವು ನೋಡಿ. ಏನೆಂದರೆ, 'ಈ ಶಾಸಕನನ್ನು ನಾನು ಷಂಡನೋ, ಭಂಡನೋ ಏನು ಎನ್ನುವುದನ್ನು ತೋರಿಸಿಕೊಡುತ್ತೇನೆ' ಎಂದು ಮತ್ತು ಅಲ್ಲಿಯ ಕಾರ್ಯಕರ್ತರನ್ನು ಕುರಿತು 'ನೀವು ಎಲ್ಲಾ ಕಛೇರಿಗಳಿಗೂ ಹೋಗಿ ಯಾರು ನಿಮ್ಮ ಮಾತನ್ನು ಕೇಳುವುದಿಲ್ಲವೋ ಅವರ ಹೆಸರನ್ನು ನನಗೆ ಕೊಡಿ ನಾನು ನೋಡಿಕೊಳ್ಳುತ್ತೇನೆ' ಎನ್ನುವ ಮಾತನ್ನು ಹೇಳಿದರು. ಇದು ರಾಜಕೀಯ

ಮಾಡುತ್ತಿರತಕ್ಕಂಥಾದ್ದು ತಾನೇ? ಶಾಸಕರ ಆಡಳಿತದಲ್ಲಿ ಹಸ್ತಕ್ಷೇಪವಸಗವಂತ ನೋಡಿಕೊಳ್ಳುತ್ತೇನೆಂದು ಹೇಳುವ ಒಬ್ಬ ಮುಖ್ಯಮಂತ್ರಿಗಳು, ಕಾರ್ಯಕರ್ತರನ್ನು ಉದ್ದೇಶಿಸಿ' ನೀವು ಕಛೇರಿಗಳಿಗೆ ಹೋಗಿ ಯಾರು ನಿಮ್ಮ ಮಾತನ್ನು ಕೇಳುವುದಿಲ್ಲವೋ ನಾನು ಅವರನ್ನು ನೋಡಿಕೊಳ್ಳುತ್ತೇನೆ, ಈ ಶಾಸಕನನ್ನೂ ಕೂಡ ನೋಡಿಕೊಳ್ಳುತ್ತೇನೆ, ನಾನು ಷಂಡನೋ, ಭಂಡನೋ ಏನು ಎನ್ನುವುದನ್ನು ತೋರಿಸುತ್ತೇನೆ ಎಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಈ ಶರೀರದಲ್ಲಿರುವುದು ಕೆಟ್ಟ ರಕ್ತವಲ್ಲ, ಬಹಳ ಒಳ್ಳೆಯ ರಕ್ತ, ಪಾಪದ ಹಣಕ್ಕೆ ಕೈ ಒಡ್ಡಿಲ್ಲ, ನಾನೂ ಕೂಡ ಆ ಸವಾಲನ್ನು ಸ್ವೀಕರಿಸುವುದಕ್ಕೆ ಜನತೆಯ ಹಿತದೃಷ್ಟಿಯಿಂದ ತಯಾರಾಗಿದ್ದೇನೆ ಎನ್ನುವ ಮಾತನ್ನು ನಾನು ತಮ್ಮ ಮೂಲಕ ಬಹಳ ನೋವಿನಿಂದ ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಕಾರಣ, ಅವರಿಗೆ ಬೇಕಾಗಿರುವುದು ಇಷ್ಟೆ. ನ್ಯಾಯ ನಿಷ್ಠೆ ಬೇಕಿಲ್ಲ, ನಾಯಿ ನಿಷ್ಠೆ ಬೇಕು. ಎಲ್ಲಿ ನಾಯಿ ನಿಷ್ಠೆ ಇದೆಯೋ ಅಲ್ಲಿ ಅವರಿಗೆ ಗೌರವವಿದೆ, ಎಲ್ಲಿ ನ್ಯಾಯದ ನಿಷ್ಠೆ ಇದೆ, ಅಲ್ಲಿ ಅವರಿಗೆ ಗೌರವವಿಲ್ಲ! ಐದು ವರ್ಷಗಳ ಕಾಲ ಆಡಳಿತ ನಡೆಸುವುದಕ್ಕಾಗಿ ಜನರು ತಮಗೆ ಅವಕಾಶ ಕೊಟ್ಟಿರುವುದರಿಂದ, ತಾವು ಐದು ವರ್ಷಗಳ ಕಾಲ ಚೆನ್ನಾಗಿ ಆಡಳಿತ ನಡೆಸಬೇಕು ಮತ್ತು ಜನರ ಆಸೆ, ನಿರೀಕ್ಷೆಗಳಿಗೆ ತಕ್ಕಂತ ಎರಬೇಕು. ಅಧಿಕಾರವೆನ್ನುವುದು ಪ್ರಜಾಪ್ರಭುತ್ವದಲ್ಲಿ ಚಕ್ರವಿದ್ದಂತೆ. ಅಧಿಕಾರ ಬರುತ್ತದೆ, ಹೋಗುತ್ತದೆ. ನಾವು ಹಿಂದೆ ಅತ್ತ ಕಡೆ ಕುಳಿತಿದ್ದು, ಈಗ ಇತ್ತ ಕಡೆ ಬಂದಿದ್ದೇವೆ. ಈಗ ಇಲ್ಲಿ ಕುಳಿತರೆ ನಾಳೆ ಅತ್ತ ಕಡೆ ಹೋಗಬಹುದು. ಇದು ಮುಖ್ಯವಲ್ಲ. ಜನರ ಆಸೆ-ಆಕಾಂಕ್ಷೆಗಳೇನಿರೆ, ಏನು ವಚನವನ್ನು ಕೊಟ್ಟಿದ್ದೇವೆ, ನಾಲಿಗೆಯಲ್ಲಿ ಏನೆಂದು ನುಡಿದ್ದೇವೆಯೋ ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡದೇ ಇದ್ದರೆ ಅವೊತ್ತು ಮಾನ್ಯ ಅಧ್ಯಕ್ಷರು ಹೇಳಿದಂತೆ ಎಲ್ಲಾ ರಾಜಕಾರಣಿಗಳ ಮೇಲೆ, ಎಲ್ಲಾ ಪಕ್ಷಗಳ ಮೇಲೆ ಅಥವಾ ಈ ವ್ಯವಸ್ಥೆ ಮೇಲೆಯೇ ಜನರು ತಿರುಗಿ ಬೀಳುವಂಥ ಒಂದು ಅವಕಾಶವಿದೆ ಎನ್ನುವ ಮಾತನ್ನು ನಾನೂ ಸಹ ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ. ನಾನು ಅನೇಕ ವಿಷಯಗಳ ಬಗ್ಗೆ ಮಾತನಾಡಬೇಕೆಂದಿದ್ದೆ, ಆದರೆ ಕಾಲಾವಕಾಶ ಇಲ್ಲದಿರುವುದರಿಂದ ನಾನು ಹೆಚ್ಚು ಮಾತನಾಡಲು ಹೋಗದೆ ನಿಮ್ಮ ಸರ್ಕಾರದ ಆದ್ಯತೆ ರೈತರ ದೃಷ್ಟಿಯಿಂದ, ಬಡವರ ದೃಷ್ಟಿಯಿಂದ, ಅಲ್ಪಸಂಖ್ಯಾತರ ದೃಷ್ಟಿಯಿಂದ, ಹರಿಜನ-ಗಿರಿಜನರ ದೃಷ್ಟಿಯಿಂದ ಇರಬೇಕೇ ಹೊರತು ನಿಮ್ಮ ಆದ್ಯತೆ ಭಂಗಿ, ಅಫೀಮು, ಗಾಂಜಾದ ಧಾರಣೆ ನಡೆಸತಕ್ಕಂಥಾದ್ದರಲ್ಲಿ ಅಲ್ಲ. ಇವೊತ್ತು ಇವುಗಳ ಮೇಲಿನ ತೆರಿಗೆಯನ್ನು 150 ರೂಪಾಯಿಗಳಿಂದ 20 ರೂಪಾಯಿಗಳಿಗೆ ಇಳಿಸಿದ್ದಾರೆ. ಅದರ ವ್ಯಾಪಾರ ಇಲ್ಲವೆಂದಲ್ಲ. ಅದನ್ನು ಮತ್ತೆ ಏರಿಸಬೇಕಾಗಿತ್ತು. 150 ರೂಪಾಯಿಗಳಿಂದ 20 ರೂಪಾಯಿಗಳಿಗೆ ಇಳಿಸಿರುವುದು ಇದಕ್ಕೆ ನಿಮ್ಮ ಆದ್ಯತೆಯೇ? ಆ ದಿಕ್ಕಿನಲ್ಲಿ ಒಳ್ಳೆಯ ಕೆಲಸ ಮಾಡಿಕೊಂಡು ಹೋಗಿ ಮತ್ತು ಜನರ ನಿರೀಕ್ಷೆಗೆ ತಕ್ಕಂತೆ ನಡೆದುಕೊಳ್ಳಿ. ಐದು ವರ್ಷಗಳ ಕಾಲ ಸಂಪೂರ್ಣವಾಗಿ ತಾವು ಒಳ್ಳೆಯ ಆಡಳಿತವನ್ನು ನಮ್ಮ ರಾಜ್ಯದ ಜನರಿಗೆ ಪ್ರಾಮಾಣಿಕವಾಗಿ ಕೊಡಿ ಎನ್ನುವ ಮಾತನ್ನು ಹೇಳಿ ಇದೇ ಧಾಟಿಯಲ್ಲಿ ತಾವು ಮುಂದುವರೆದರೆ ಇವೊತ್ತಲ್ಲ ನಾಳೆ ಅದರ ಪಾಪದ ಪ್ರಾಯಶ್ಚಿತ್ತವನ್ನು

ಅನುಭವಿಸಬೇಕಾದೀತೆನ್ನುವ ಎಚ್ಚರಿಕೆ ಕೊಟ್ಟು ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು 1996-97ನೇ ಸಾಲಿನ ಆಯ-ವ್ಯಯ ಪತ್ರದ ಬಗ್ಗೆ ಚರ್ಚಿಸುವಾಗ ಇಷ್ಟು ಸಮಯವಾಗಿದ್ದರೂ ತಾವು ನನಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇವೊತ್ತು ಈ ಸದನದಲ್ಲಿ ಅನೇಕ ಹಿರಿಯ ಸಚಿವರು ಹಾಗೂ ಶಾಸಕ ಬಂಧುಗಳು ಕೂಡ ಬಹಳಷ್ಟು ತಾಳ್ಮೆಯಿಂದ ನಮ್ಮ ಭಾಷಣವನ್ನು ಕೇಳುತ್ತಿರುವುದಕ್ಕೆ ಅವರಿಗೂ ಕೂಡ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ ಕೇವಲ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತಿದ್ದೇನೆ. ಮೊದಲನೆಯದಾಗಿ, 1995-96ನೇ ಸಾಲಿನ ಆಯ-ವ್ಯಯ ಪತ್ರವನ್ನು ಹಣಕಾಸು ಸಚಿವರಾದ ಶ್ರೀಮಾನ್ ಸಿದ್ಧರಾಮಯ್ಯನವರು ಮಂಡಿಸಿದ್ದು, ಸದರಿ ಆಯ-ವ್ಯಯವು ಸುಮಾರು 132.21 ಕೋಟಿ ರೂಪಾಯಿಗಳ ಕೊರತೆ ಹೊಂದಿದ್ದು ಇದನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಚೆಪಡುತ್ತಿದ್ದೇನೆ. ಈ ಆಯವ್ಯಯ ಶ್ರೀಮಂತರ ಪರವಾಗಿದ್ದು, ಬಡವರ ಪರವಾಗಿರತಕ್ಕ ಆಯವ್ಯಯ ಇದಲ್ಲ ಎಂಬ ಮಾತನ್ನು ನಾವು ಒಬ್ಬರೇ ಹೇಳಬೇಕಾದಂಥ ಒಂದು ಪರಿಸ್ಥಿತಿ ಬಂದಿದೆಯೆಂಬುದನ್ನು ಹೇಳಲು ಇಚ್ಛಿಸುತ್ತಿದ್ದೇನೆ. ಇವೊತ್ತು ರಾಜ್ಯದಲ್ಲಿ ಇಷ್ಟೊಂದು ಹಣವನ್ನು ಜನತೆಗೋಸ್ಕರ ಖರ್ಚು ಮಾಡತಕ್ಕಂಥ ಒಂದು ಸಂದರ್ಭದಲ್ಲಿ ಸಂಪೂರ್ಣವಾಗಿ ತಮ್ಮ ಆಡಳಿತದ ಮೇಲೆ ನಿಗಾವಿಟ್ಟು ಕಟ್ಟುನಿಟ್ಟಾಗಿ ಪಾಲಿಸಿದರೆ ರಾಜ್ಯದ ಜನತೆಗೆ ಅನುಕೂಲವಾಗುತ್ತದೆಂಬ ಮಾತನ್ನು ತಮಗೆ ಹೇಳಬೇಕಾಗಿದೆ. ಆದರೆ, ಇವೊತ್ತು ಆಡಳಿತದ ವ್ಯವಸ್ಥೆ ನೋಡಿದಾಗ ಹಳ್ಳಿಯಿಂದಿಡಿದು ದಿಲ್ಲಿಯವರೆಗೆ ಸಂಪೂರ್ಣವಾಗಿ ಭ್ರಷ್ಟಾಚಾರದ ಆಡಳಿತ ನಡೆದರೂ ಕೂಡ ಈ ಹಣ ಎಷ್ಟು ಪಾಲು ಜನತತಗೆ ಮುಟ್ಟುತ್ತಿದೆ ಎನ್ನುವುದರ ಬಗ್ಗೆ ಸಂಶಯ ನಮ್ಮಲ್ಲಿ ಮೂಡಿದೆಯೆನ್ನುವುದು ಇವೊತ್ತು ಜಗಜ್ಜಾಹೀರಾಗಿ ಜನರು ಮಾತನಾಡತಕ್ಕಂಥ ಸಂದರ್ಭ ಬಂದಿದೆಯೆಂದು ನಾವು ಹೇಳಬೇಕಾಗಿದೆ. ಆ ಕಾರಣಕ್ಕಾಗಿ ಇವೊತ್ತು ತಮ್ಮ ಆಡಳಿತ ಕಟ್ಟುನಿಟ್ಟಾಗಿ ನಡೆಯುವುದರ ಜೊತೆಗೆ ಶಾಸಕರ ಸ್ಥಾನ-ಮಾನದ ಬಗ್ಗೆ ಹಿರಿಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜರವರು ಈ ಸದನಕ್ಕೆ ತಿಳಿಸಿದ್ದಾರೆ. ಅದಕ್ಕೆ ನಾವೂ ಕೂಡ ಅನುಮೋದನೆ ಕೊಡಬೇಕಾಗಿದೆ. ನಾನು ಹೆಚ್ಚಾಗಿ ಆ ವಿಷಯದ ಬಗ್ಗೆ ಮಾತನಾಡುವುದಿಲ್ಲ. ಇವೊತ್ತು ರಾಜ್ಯದಲ್ಲಿ ಶಾಸಕರ ಸ್ಥಾನ-ಮಾನ ಎಷ್ಟು ಉಳಿದಿದೆ ಎನ್ನುವುದರ ಬಗ್ಗೆ ಆ ಭಾಗದ ಶಾಸಕರಿಗೆ ಮಾತ್ರ ಈ ಕುರಿತು ಆಗಿರುವ ನೋವು ಗೊತ್ತಿದೆಯೆಂಬುದನ್ನು ತಮ್ಮ ಗಮನಕ್ಕೆ ತರುತ್ತಾ, ತಾವು ಆಡಳಿತ ನಡೆಸತಕ್ಕಂಥವರು ಮುಂದಿನ ವರ್ಷಗಳಲ್ಲಿ ಈ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆಯೆಂದು ಹೇಳುತ್ತೇನೆ. ಇನ್ನು ತೆರಿಗೆಗಳ ಕುರಿತು ಹೇಳುವುದಾದರೆ ತಾವು ಅನೇಕ ರೀತಿಯ ತೆರಿಗೆಗಳನ್ನು ವಿಧಿಸಿದ್ದೀರಿ. ಬೀಡಿ, ಎಲೆಗಳಿಗೆ ಶೇಕಡ 8 ರಷ್ಟಿದ್ದನ್ನು 4ಕ್ಕೆ ಇಳಿಸಿದ್ದು, ಅದೇ ರೀತಿ ಸಿಗರೇಟ್ ಫಿಲ್ಟರಗಳಿಗೆ 15 ರಿಂದ 12ಕ್ಕೆ, ಮದ್ಯ ಮತ್ತು ವೈನ್

ಶೇಕಡ 25 ರಿಂದ 20ಕ್ಕೆ, ಅಫೀಮು, ಗಾಂಜಾ ಮತ್ತು ಪಾನ್ ಅನ್ನು 150 ರೂಪಾಯಿಗಳಿಂದ 20 ರೂಪಾಯಿಗಳಿಗೆ ಇಳಿಸಿದ್ದು, ಇವೆಲ್ಲಾ ಐಷಾರಾಮಿ ವಸ್ತುಗಳಾಗಿದ್ದು, ಇವುಗಳಿಗೆ ತೆರಿಗೆ ವಿಧಿಸತಕ್ಕಂಥ ಅವಶ್ಯಕತೆ ಇರಲಿಲ್ಲವೆನ್ನುವುದು ನನ್ನ ಭಾವನೆ. ಜೊತೆಗೆ ಕೆಲವೊಂದು ವಸ್ತುಗಳಿಗೆ ಹೆಚ್ಚು ದರಗಳನ್ನು ವಿಧಿಸಿದ್ದೀರಿ. ಅವು ಯಾವುವೆಂದರೆ, ಗೃಹೋಪಯೋಗಿ ವಿದ್ಯುತ್ ಮಿಕ್ಸರ್ ಮತ್ತು ಗ್ರೈಂಡರ್‌ಗಳ ಮೇಲಿನ ತೆರಿಗೆಯನ್ನು ಶೇಕಡ 10 ರಿಂದ 12ಕ್ಕೆ, ಛಾಯಾಚಿತ್ರ ಕ್ಯಾಮೆರಾಗಳು ಶೇಕಡ 4 ರಿಂದ 8ಕ್ಕೆ, ಕಟ್ಟಡಗಳಲ್ಲಿ ಬಳಸಲಾಗುವ ವಿದ್ಯುತ್ ಅರ್ಥ ಸರ್ಕ್ಯೂಟ್ ಪರಿಕರಗಳು ಶೇಕಡ 4 ರಿಂದ 12ಕ್ಕೆ, ಎಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳ ಬಿಡಿ ಭಾಗಗಳು ಶೇಕಡ 4 ರಿಂದ 8ಕ್ಕೆ ಮತ್ತು ಹತ್ತು ರೂಪಾಯಿಗಳಿಗಿಂತ ಕಡಿಮೆ ಮೌಲ್ಯದ ಫೌಂಟನ್‌ಪೆನ್ ಮತ್ತು ಬಾಲ್‌ಪೆನ್‌ಗೆ ಇದ್ದ ವಿನಾಯಿತಿಯನ್ನು ಶೇಕಡ 2ಕ್ಕೆ ಏರಿಸಿದ್ದು ಅಲ್ಲದೆ, 150 ರೂಪಾಯಿಗಳಿಗಿಂತಲೂ ಹೆಚ್ಚು ಮೌಲ್ಯವಿರದ ಕನ್ನಡಕಗಳಿಗೆ ವಿನಾಯಿತಿ ಇದ್ದುದನ್ನು ಶೇಕಡ 4ಕ್ಕೆ ಏರಿಸಿದ್ದೀರಿ. ಇವೆಲ್ಲವೂ ಬಡವರಿಗೆ ಉಪಯೋಗವಾಗುವಂಥ ಸಾಮಾನುಗಳಾಗಿವೆ. ನಿನ್ನೆ ನನ್ನ ಒಬ್ಬರು ಮಿತ್ರರು ಹೇಳುತ್ತಿದ್ದರು. ಯಾವ ಒಬ್ಬ ಬಡ ಬೋರೇಗೌಡ 35 ರೂಪಾಯಿಗಳಿಗೆ ವಾಚನ್ನು ಖರೀದಿಸಬೇಕೆಂದಿರುತ್ತಾನೋ, ಅದಕ್ಕೂ ಸರ್ಕಾರ ತೆರಿಗೆ ವಿಧಿಸಿದ, ಹಾಗೆಯೇ ನಾನು ಒಬ್ಬ ಕಲಾವಿದನಾಗಿದ್ದು, ಇವೊತ್ತು ಚಲನಚಿತ್ರರಂಗದಲ್ಲಿರುವವರಿಗೆ ಆ ತೆರಿಗೆಯನ್ನು ಏರಿಸಿ, ಮನರಂಜನಾ ತೆರಿಗೆಯನ್ನು ಸಂಪೂರ್ಣವಾಗಿ ವಿನಾಯಿತಿಗೊಳಿಸಿದ್ದೀರಿ. ಆದರೆ, ಹುಲ್ಲಿನ ಛಾವಣಿಯಡಿ ಮಲಗತಕ್ಕಂಥ ಬಡ ಕಲಾವಿದರ ಬಗ್ಗೆ ಸರ್ಕಾರ ಆಸಕ್ತಿ ವಹಿಸಿಲ್ಲವೆಂದರು. ಅದರ ಬಗ್ಗೆಯೂ ಕೂಡ ತಾವು ಗಮನಹರಿಸಬೇಕೆಂದು ಹೇಳುತ್ತಾ, ಈ ಸಂದರ್ಭದಲ್ಲಿ ನನಗೆ ಅನ್ನಿಸಿರುವಂತೆ ಧಾರವಾಡ, ಬಿಜಾಪುರ, ಬೆಳಗಾಂ ಮತ್ತು ಉತ್ತರ ಕನ್ನಡ, ಈ ನಾಲ್ಕು ಜಿಲ್ಲೆಗಳ ಬಗ್ಗೆ ಬಹುಶಃ ಈ ಕಡೆ ಮತ್ತು ಆ ಕಡೆಯ ಯಾವುದೇ ಸದಸ್ಯರುಗಳು ಮಾತನಾಡಿದಂತಿಲ್ಲ.

10.00 ಪಿ.ಎಂ.

ವಿಚಾರದಲ್ಲಿ ಇವತ್ತು ನಮ್ಮ ಮುಂಬೈ-ಕರ್ನಾಟಕಕ್ಕೆ ಅತ್ಯಾವಶ್ಯಕವಾಗಿ ಆಗಬೇಕಾದಂತಹ ಕೆಲವು ಕೆಲಸಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠವೊಂದನ್ನು ಸ್ಥಾಪಿಸಬೇಕು. ಹುಬ್ಬಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣದ ಕೆಲಸವು ಈಗ ಮುಕ್ತಾಯದ ಹಂತದಲ್ಲಿದ್ದು, ಹಣದ ಕೊರತೆಯಿಂದಾಗಿ ಕುಂಠಿತಗೊಂಡಿದೆ. ಸರ್ಕಾರವು ಕೂಡಲೇ ಅದು ಪೂರ್ಣವಾಗಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ತುಂಗಾ ಮೇಲ್ದಂಡೆ ಯೋಜನೆ ಜಾರಿಗೆ ತರಬೇಕು. ಆ ಯೋಜನೆಗಾಗಿ ಇದುವರವಿಗೂ 7 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಎರಡು ಸಾವಿರ ಇಸವಿಯೊಳಗಾಗಿ ಕೃಷ್ಣಾ ಬೇಸಿಸನಲ್ಲಿ ಇರತಕ್ಕ ಕೆಲಸಗಳನ್ನು ನಾವು ಮುಗಿಸಬೇಕಾಗಿದೆ. ಆದಕಾರಣ ಅದಕ್ಕೂ ಸರ್ಕಾರ ಹೆಚ್ಚು ಹಣವನ್ನು ಬಿಡುಗಡೆ ಮಾಡಿ, ಆ ಭಾಗದ ರೈತರಿಗೆ ಅನುಕೂಲವಾಗುವಂತೆ ಈ ಯೋಜನೆಯನ್ನು

ತ್ವರಿತವಾಗಿ ಮಾಡಿಕೊಡಬೇಕು. ಇವತ್ತು ಗ್ರಾಮಾಂತರ ಪ್ರದೇಶವಾದ ಶಿಗ್ಗಾಂವಿಗೆ ಕೆ.ಎಸ್.ಆರ್.ಪಿ. 10ನೇ ಬೆಟಾಲಿಯನ್ ಮಂಜೂರಾತಿ ಆಗಿದೆ. ನಾನು ಈ ಬಗ್ಗೆ ಇತ್ತೀಚೆಗೆ ಮಾನ್ಯ ಗೃಹ ಸಚಿವರಿಗೆ ಪ್ರಶ್ನೆಯೊಂದನ್ನು ಕೇಳಿದ್ದೆ. ಆಗ ಮಾನ್ಯ ಗೃಹ ಮಂತ್ರಿಗಳು ಅನುದಾನ ಇಲ್ಲದ್ದರಿಂದ ಶಿಗ್ಗಾಂವಿಯಲ್ಲಿ ಕೆ.ಎಸ್.ಆರ್.ಪಿ. ಇನ್ನೂ ಪ್ರಾರಂಭ ಮಾಡಿಲ್ಲವೆಂದು ಉತ್ತರ ನೀಡಿದ್ದರು. ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಮುಂಬೈ-ಕರ್ನಾಟಕ ಭಾಗದಲ್ಲಿ ಅತ್ಯಂತ ಅವಶ್ಯಕವಾಗಿ ಈ ಬೆಟಾಲಿಯನ್ ಅಗತ್ಯವಿರುವುದರಿಂದ ಕೂಡಲೇ ಸರ್ಕಾರವು ಕೆ.ಎಸ್.ಆರ್.ಪಿ.ಗೆ ಅಗತ್ಯವಾಗಿರತಕ್ಕ ಅನುದಾನವನ್ನು ಮಂಜೂರು ಮಾಡಿಕೊಡಬೇಕು. ವಿದ್ಯುತ್ ಯೋಜನೆಗಳಡಿಯಲ್ಲಿ ನಮ್ಮ ಹಾವೇರಿಗೆ 220 ಕೆ.ವಿ. ಸಾಮರ್ಥ್ಯದ ಪವರ್ ಸ್ಟೇಷನ್ನೊಂದನ್ನು ಆರಂಭಿಸಬೇಕು. ಸವಣೂರಿನಲ್ಲಿ 110 ಕೆ.ವಿ. ಸಾಮರ್ಥ್ಯದ ಪವರ್ ಸ್ಟೇಷನ್ನಿನ ಕೆಲಸ ಆರಂಭವಾಗಿದ್ದು, ಅದನ್ನು ಆದ್ಯತೆಯ ಮೇಲೆ ಮುಗಿಸಬೇಕು. ಜಿಲ್ಲಾ ವಿಂಗಡಣೆ ಮಾಡತಕ್ಕ ಪ್ರಸಂಗ ಬಂದಾಗ ದಯವಿಟ್ಟು ನಮ್ಮ ಹಾವೇರಿಗೆ ಜಿಲ್ಲೆಯ ಸ್ಥಾನಮಾನ ಕೊಡುವಂತೆ ವಿನಂತಿಸಿಕೊಳ್ಳುತ್ತೇನೆ. ಜಿಲ್ಲೆಯ ಸ್ಥಾನಮಾನ ಪಡೆಯಲು ಅಗತ್ಯವಾದಂತಹ ಎಲ್ಲಾ ಅನುಕೂಲತೆಗಳೂ ಅಲ್ಲಿರುವುದರಿಂದ ದಯವಿಟ್ಟು ಅದನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನಾನು ಇವತ್ತು ಅನೇಕ ಇಲಾಖೆಗಳ ಬಗ್ಗೆ ಮಾತನಾಡಬೇಕಾಗಿತ್ತು; ಶಿಕ್ಷಣ ಇಲಾಖೆಯಲ್ಲಿ ಇವತ್ತು ನಾವು ಇಲಾಖೆಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡತಕ್ಕದ್ದಾಗಲೀ, ಶಾಲಾ ಕೊಠಡಿಗಳನ್ನು ಕಟ್ಟತಕ್ಕಾಂಥದ್ದಾಗಲೀ, ಶಿಕ್ಷಕರನ್ನು ನೇಮಕಾತಿ ಮಾಡತಕ್ಕಂಥದ್ದಾಗಲೀ ಅಂತಹ ಮಹತ್ವದ ಕೆಲಸವಲ್ಲ. ಆದರೆ ಇವತ್ತು ಶಿಕ್ಷಣದ ಗುಣಮಟ್ಟವನ್ನು ಕಾಪಾಡತಕ್ಕ ಕೆಲಸ ಆಗಬೇಕಾಗಿದೆ. ಶಿಕ್ಷಣ ಇಲಾಖೆಯಲ್ಲಿ ಇವತ್ತು ಕಟ್ಟುನಿಟ್ಟಾದ ಆಡಳಿತ ವ್ಯವಸ್ಥೆ ಇಲ್ಲದೇ ಹೋದರೆ, ಇನ್ನು ಕೆಲವೇ ದಿವಸಗಳಲ್ಲಿ ಶಿಕ್ಷಣವು ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಮಟ್ಟಕ್ಕೆ ಹೋಗುತ್ತದೆ ಎಂಬುದರ ಬಗ್ಗೆ ಬಹಳ ಚಿಂತನೆಯನ್ನು ನಾವು ಇವತ್ತು ಮಾಡಬೇಕಾಗಿದೆ. ಪ್ರಾಥಮಿಕ ಶಾಲೆಗಳಿಂದ ಉತ್ತೀರ್ಣರಾಗಿ ಹೈಸ್ಕೂಲಿಗೆ ಕಾಲಿಡುವಂತಹ ಮಕ್ಕಳಿಗೆ ನಾವು ಮಗ್ಗಿಗಳನ್ನು, ವರ್ಣಮಾಲೆ ಅಕ್ಷರಗಳನ್ನು ಕಲಿಸಬೇಕಾದಂತಹ ಪರಿಸ್ಥಿತಿ ಇದೆ. ಅವರುಗಳಿಗೆ ಸರಿಯಾಗಿ ಒತ್ತಕ್ಷರಗಳ ಪರಿಚಯವೇ ಇರುವುದಿಲ್ಲ. ಇಂತಹ ಪರಿಸ್ಥಿತಿ ಇವತ್ತು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿದೆ. ಖಾಸಗಿ ಶಾಲೆಯಲ್ಲಿ ಇವತ್ತು ನಮ್ಮ ಮಕ್ಕಳಿಗೆ ಪ್ರವೇಶಾವಕಾಶ ಸಿಗುತ್ತಿಲ್ಲ. ಲಕ್ಷಾಂತರ ರೂಪಾಯಿಗಳನ್ನು ಕೊಡಲು ಸಿದ್ಧರಾಗಿದ್ದರೂ ಇವತ್ತು ಎಷ್ಟೋ ಜನರಿಗೆ ಸೀಟುಗಳು ಸಿಗುತ್ತಿಲ್ಲ ಎನ್ನತಕ್ಕಂಥ ಮಾತನ್ನು ನಾನು ಕೇಳಿದ್ದೇನೆ. ಕಾಲೇಜುಗಳಲ್ಲಿ, ಶಾಲೆಗಳಲ್ಲಿ ಮತ್ತು ನರ್ಸರಿ ಶಾಲೆಗಳಲ್ಲಿ ಪ್ರವೇಶವನ್ನು ನೀಡುವ ಬಗ್ಗೆ ಖಾಸಗಿ ಶಾಲಾ ಕಾಲೇಜುಗಳ ಮೇಲೆ ಸರ್ಕಾರದ ಯಾವುದೇ ಹಿಡಿತ ಇರುವುದಿಲ್ಲ. ಇವುಗಳ ಮೇಲೆ ಸರ್ಕಾರದ ಹಿಡಿತ ಇರುವಂತೆ ಮಾಡುವುದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಇವತ್ತು ಪ್ರವಾಸೋದ್ಯಮ ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಪ್ರವಾಸೋದ್ಯಮ ಇಲಾಖೆಯಿಂದ ಯಾವ ಹೋಟೆಲ್‌ಗಳಿಗೆ

ಮಂಜೂರಾತಿಯನ್ನು ನೀಡಲಾಗಿದೆಯೋ ಅಂತಹ ಕಡೆಗಳಲ್ಲಿ ಬಾರ್ ತೆಗೆಯಲು ಲೈಸೆನ್ಸ್ ನೀಡಬೇಕೆಂದು ಒಟ್ಟಾರೆಯಾಗಿ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಲಾಗಿದೆ. ಹೋಟೆಲ್‌ಗಳು ಬಸ್‌ಸ್ಟಾಂಡ್ ಬಳಿ ಇರಲಿ ಅಥವಾ ಇನ್ನಿತರ ಯಾವುದೇ ಸ್ಥಳಗಳಲ್ಲಿರಲಿ ಬಾರ್‌ಗಳಿಗೆ ಲೈಸೆನ್ಸ್ ಕೊಡಲಾಗುತ್ತಿದೆ. ಶಿಗ್ಗಾಂವ್‌ನಲ್ಲಿ ನಮ್ಮ ಮನೆಯಿಂದ ಸುಮಾರು 50 ಅಡಿ ದೂರದಲ್ಲಿ, ಬಸ್‌ಸ್ಟಾಂಡ್‌ನಿಂದ 200 ಅಡಿಗಳ ದೂರದಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಹೋಟೆಲ್‌ವೊಂದನ್ನು ಕಟ್ಟುತ್ತಿದ್ದಾರೆ. ಅಂತಹ ಜಾಗದಲ್ಲೂ ಕೂಡ ಬಾರ್ ತೆರೆಯಲು ಲೈಸೆನ್ಸ್ ಕೊಡತಕ್ಕದ್ದಾದರೆ ಇವತ್ತು ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಆದುದರಿಂದ ಹೋಟೆಲಗಳ ಬಳಿ ಲೈಸೆನ್ಸ್ ಕೊಡತಕ್ಕ ಯಾವ ಒಂದು ನಿರ್ಣಯವನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಂಗೀಕರಿಸಿದ್ದಾರೆಯೋ ಅದನ್ನು ಹಿಂತೆಗೆದುಕೊಳ್ಳ ಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಕೊನೆಯದಾಗಿ ನಾನು ಈ ಒಂದು ಸಂದರ್ಭದಲ್ಲಿ ಮಾತನಾಡಲಿಕ್ಕೆ ನನಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ಮತ್ತೊಮ್ಮೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಕೊನೆಯದಾಗಿ ಮಾನ್ಯ ಸದಸ್ಯರಾದ ರಾಜಣ್ಣನವರು ಭಾಷಣ ಮಾಡಬೇಕು. ಮಾನ್ಯ ವಾಟಾಳ್ ನಾಗರಾಜರವರೇ, ಮಾನ್ಯ ರಾಜಣ್ಣನವರ ಭಾಷಣ ಕೇಳಬೇಕೆಂಬ ನಿಮ್ಮ ಬಯಕೆಯನ್ನು ಇದೀಗ ಈಡೇರಿಸುತ್ತಿದ್ದೇನೆ.

+ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಅಧ್ಯಕ್ಷರೇ, ವಾಚ್ ನೋಡುತ್ತಿದ್ದೇನೆ, ಆಗಲೇ ಹತ್ತು ಗಂಟೆ ಆಯಿತು. ಒಂದು ಸಣ್ಣ ಗಾದೆಯನ್ನು ಇಲ್ಲಿ ಹೇಳಬಯಸುತ್ತೇನೆ. 'ಹಸಿದು ಉಣದಿರಬೇಡ, ಹಸಿಯದೇ ಉಣಬೇಡ, ತಂಗಳಲ್ಲಿ ಬಿಸಿಯ ಬೆರೆಸಿ ತಿನ್ನಬೇಡ', 'Watch' ಎಂದರೆ ಏನು ಎಂಬುದನ್ನು ಈಗ ಹೇಳುತ್ತೇನೆ. W - means work - work means worship; a - means accuracy; t-means time; c - means character and h - means honesty. This work was expressed by Britishers 2000 years ago. We are strictly following the watch.

ಅಧ್ಯಕ್ಷರು : ಕ್ಯಾ ಜನಾಬ್ ಅಸೆಂಬ್ಲಿಕೋ ಮುಷೇರಾ ಬನಾನ, ಚಾಹತೇಹೇ?

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಈ ಆಯವ್ಯಯ ಪತ್ರ ನಮ್ಮ ಮುಂದೆ ಇದೆಯಲ್ಲಾ, ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಇದನ್ನು ಓದಬೇಕಾದರೆ ಒಂದು ಗಂಟೆ ಇಪ್ಪತ್ತೈದು ನಿಮಿಷ ತೆಗೆದುಕೊಂಡರು. ನನಗೆ ತಿಳಿದಂತೆ ಈ ಬಜೆಟ್ ಭಾಷಣದಲ್ಲಿ ಒಟ್ಟು 174 ಪ್ಯಾರಾಗಳಿವೆ. ಇದುವರೆಗೂ ನಾನು ಪ್ಯಾರಾಪೈಸೆ ಮಾತನಾಡಬೇಕೆಂದು ಚಿಂತನೆ ಮಾಡುತ್ತಿದ್ದೆ. ಆದರೆ ಇಲ್ಲಿ ಸಮಯದ ಅಭಾವದಿಂದ ನಾನು ನನ್ನ ಭಾಷಣವನ್ನು ಆದಷ್ಟು ಮೊಟಕುಗೊಳಿಸಬೇಕಾಗಿದೆ. ಈ ಬಜೆಟ್ ಭಾಷಣವನ್ನು ಮಾನ್ಯ ಆರ್ಥಿಕ ಸಚಿವರಾದ ಶ್ರೀಮಾನ್ ಸಿದ್ಧರಾಮಯ್ಯನವರು ಬಹಳ ಚಿಂತನೆ ಮಾಡಿ, ಶ್ರಮ ಪಟ್ಟು, ಬಡ ಜನತೆಗೆ,

ರೈತರಿಗೆ ಕಾರ್ಮಿಕರಿಗೆ ಅನುಕೂಲ ಆಗುವಂತಹ ಬಜೆಟ್ ಅನ್ನು ನಮ್ಮ ಮುಂದೆ ಇಟ್ಟಿದ್ದಾರೆ. This proves there is a political stability; there is an administrative stability and hence there is a financial stability. ರಾಜ್ಯದ ಪರಿಸ್ಥಿತಿ ಸುಧಾರಿಸಿದೆ, ರಾಜಕೀಯದ ಪರಿಸ್ಥಿತಿ ಸುಧಾರಿಸಿದೆ, ಆಡಳಿತದ ಪರಿಸ್ಥಿತಿ ಸುಧಾರಿಸಿದೆ, ಆದಕಾರಣ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಜನತೆಗೆ ಉಪಯೋಗವಾಗುವ ತರಹ ಇದೆ ಈ ಬಜೆಟ್.

ಅಧ್ಯಕ್ಷರು : ಮಾತಾಡಿದ್ದೇ ಮಾತಾಡಿದ್ದು ವಾಟಾಳರು ಗಂಟೆಗಟ್ಟಲೆ

ಶ್ರೀ ಎನ್. ರಾಜಣ್ಣ : ಮಾನ್ಯ ವಾಟಾಳ್‌ನಾಗರಾಜರವರು ನನ್ನ ಆತ್ಮೀಯ ಸ್ನೇಹಿತರು. ನೀವು ಸದನದಲ್ಲಿ ಇವತ್ತು ಭಾಷಣ ಮಾಡಬೇಕೆಂದು ಅವರು ನನಗೆ ಇವತ್ತು ಮಧ್ಯಾಹ್ನದಿಂದ ಹೇಳುತ್ತಿದ್ದರು. ಆದರೆ ಕೆಲವು ಹೇಳಿ ಏನಾಗುತ್ತದೆ ಎಂದರೆ, ಬ್ರಿಟಿಷರು ಇದ್ದಂತಹ ಜಾಗದಲ್ಲೇ ನಮ್ಮ ತಂದೆ, ತಾಯಿ, ತಾತ ಎಲ್ಲಾ ಇದ್ದಿದ್ದು. ನಮ್ಮ ಸುತ್ತಲೂ ಇದ್ದವರು ಬ್ರಿಟಿಷನವರಾಗಿದ್ದರು. ಅಲ್ಲದೇ ಕೆಲವರು ತಮಿಳಿಯನ್ಸ್, ತೆಲುಗು ಜನ ಹಾಗೂ ಮುಸಲ್ಮಾನರೂ ಇದ್ದರು. ಆದ್ದರಿಂದ ನಾನು ಬೆಳೆಯುತ್ತಲೇ 4¥5 ಭಾಷೆಗಳು ಸ್ವಲ್ಪ ಸ್ವಲ್ಪವಾಗಿ ನನಗೆ ಬರುತ್ತಿದ್ದವು. ಆದರೆ ಕನ್ನಡ ಸ್ವಲ್ಪ ಕಡಿಮೆ ಬರುತ್ತಿತ್ತು. ಈ ಹಿಂದೆಯೇ ಒಮ್ಮೆ ನಾನು ಸದನದಲ್ಲಿ ಹೇಳಿದಹಾಗೆ, ನೀವೆಲ್ಲಾ ಪಾಠಶಾಲೆಗೆ ಹೋಗುವಾಗ ನಾನು ದನ ಹೊಡೆದುಕೊಂಡು ಮೈದಾನಕ್ಕೆ ಹೋಗುತ್ತಿದ್ದೆ.

ಅಧ್ಯಕ್ಷರು : ಆ ವಿಚಾರವನ್ನು ನೀವು ಹಿಂದೆಯೇ ಹೇಳಿದ್ದೀರಿ.

ಶ್ರೀ ಎನ್. ರಾಜಣ್ಣ : ಈ ವಿಚಾರ ಇನ್ನೂ ಕೆಲವು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಆದ್ದರಿಂದಲೇ ನಾನು ಇನ್ನೊಮ್ಮೆ ರಿಪೀಟ್ ಮಾಡಬೇಕಾಯಿತು.

ಅಧ್ಯಕ್ಷರು : ದನಗಳನ್ನು ಹೊಡೆದುಕೊಂಡು ಹೋಗುತ್ತಿದ್ದ ವಿಚಾರ ಮೊನ್ನೆ ಹೇಳಿದ್ದಿರಿ. ಇವತ್ತು ಬೇರೆ ಯಾವುದಾದರೂ ವಿಚಾರ ಹೇಳಿ.

ಶ್ರೀ ಎನ್. ರಾಜಣ್ಣ : ಆಯಿತು. ಕೆಲವರು ಸಿನಿಮಾ ನೋಡುತ್ತಿರುವಾಗ ನಾನು ಹಾಲು ಎತ್ತಿಕೊಂಡು ಮನೆಗೆ ಹೋಗಿ ಕೊಡುತ್ತಿದ್ದೆ. ಬೆಳಿಗ್ಗೆ 4.00 ಗಂಟೆಗೇ ಎದ್ದು ದನದ ಕೊಠಡಿಯಲ್ಲಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ನೀವುಗಳೆಲ್ಲರೂ ಓದುತ್ತಿದ್ದಿರಿ. ಯಾರೋ ನಿಮ್ಮಂಥವರು ಹಿರಿಯರು ಹೇಗೋ ಮಾಡಿ ಯಾವುದೋ ಮಿಡಲ್ ಸ್ಕೂಲನಲ್ಲಿ ಸೇರಿಸಿದರು. ಎಸ್.ಎಸ್.ಎಲ್.ಸಿ. ಯನ್ನು ಫಸ್ಟ ಕ್ಲಾಸನಲ್ಲಿ ಪಾಸು ಮಾಡಿಕೊಂಡೆ. ಈಗ ನಾನು ವಿಷಯಕ್ಕೆ ಬರುತ್ತೇನೆ. ನಿನ್ನೆ ಅಥವಾ ಮೊನ್ನೆ ನಾನು ಒಬ್ಬ ವಿದೇಶಿಯನನ್ನು ಭೇಟಿ ಮಾಡಿದೆ. Your government has got a very good and reasonable budget ಎಂದು ಆತ ಹೇಳಿದ. ಬೇಕಾದರೆ ನಾನು ಅವರ ಅಡ್ರೆಸ್ ಕೊಡುತ್ತೇನೆ, ನೀವು ಲೆಟರ್ ಬರೆದು ನಿಮ್ಮ ಅನುಮಾನ ಪರಿಹರಿಸಿಕೊಳ್ಳಿ. ಬೆಂಗಳೂರಿನಲ್ಲಿ ನಾನು ಕೆಲವು ಜನರನ್ನು ವಿಚಾರಿಸಿದಾಗ, ಆ ಜನ ಏನು ಹೇಳುತ್ತಾರೆ ಎಂದರೆ.....

ಅಧ್ಯಕ್ಷರು : ಮಾನ್ಯ ಸದಸ್ಯರು ಭಾಷಣ ಮಾಡುವಾಗ ಮಾನ್ಯ ಆರ್ಥಿಕ ಸಚಿವರು ತಮ್ಮ ಕಡತಗಳನ್ನೆಲ್ಲವನ್ನೂ ಕಟ್ಟಿಟ್ಟು ಕುಳಿತಿರುವುದು ಸರಿಯಲ್ಲ. ದಯಮಾಡಿ ತಾವು ಮಾನ್ಯ ಸದಸ್ಯರು ಮಾಡುವ ಭಾಷಣದ ಅಂಶಗಳನ್ನು ಗುರುತು ಹಾಕಿಕೊಳ್ಳಬೇಕು.

ಶ್ರೀ ಎನ್. ರಾಜಣ್ಣ : ಈ ಬಜೆಟ್ ಜನತೆಗೆ ಅನುಕೂಲವಾಗಿರತಕ್ಕ ಬಜೆಟ್ ಎಂಬುದಾಗಿ ಜನ ಹೇಳುತ್ತಾರೆ. ರೈತನಿಗೆ ಚರಿತ್ರೆಯಲ್ಲೇ 1/3rd amount is preserved for farmers. ನಾವು ಇಷ್ಟೆಲ್ಲಾ ಇಲ್ಲಿ ಮಾತನಾಡುತ್ತೇವೆ. ನೀವೆಲ್ಲಾ ಸಕ್ಕರೆ ಬಗ್ಗೆ ಮಾತನಾಡುತ್ತೀರಿ. ನೀರಿನ ಬಗ್ಗೆ ಮಾತನಾಡುತ್ತೀರಿ, ರೈತರ ಕಷ್ಟವನ್ನು ಹೇಳುತ್ತೀರಿ, ಆದರೆ ನಾನು ಹೇಳುವುದೇನೆಂದರೆ, ನಾನಿಲ್ಲಿ ಪ್ರತಿದಿನ ಸದನಕ್ಕೆ ಹಾಜರಾಗಲು ತೆಗೆದುಕೊಳ್ಳುವ 250 ರೂಪಾಯಿಗಳ ಭಾರ ಸಹ ರೈತನ ತಲೆ ಮೇಲೆ ಇದೆ ಎಂದು ನಾನು ಹೇಳುತ್ತೇನೆ. ನಾವು ಸುಮ್ಮನೆ ಭಾಷಣ ಮಾಡುತ್ತೇವೆ, ರೈತ ನಮ್ಮ ಬೆನ್ನೆಲುಬು, ಬಡವ ಮುಂತಾಗಿ ಹೇಳುತ್ತೇವೆ. ನಾನು ತೆಗೆದುಕೊಳ್ಳುವಂತಹ 250 ರೂ. ಗಳೂ ಕೂಡ ರೈತನ ತಲೆ ಮೇಲೆ ಬಿದ್ದಂತಹ ಭಾರವೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ಆ ಭಾರ ಎಲ್ಲರದೂ ಒಂದೇ ರೀತಿ ಅಲ್ಲ. ಈಗ ಮಾನ್ಯ ಜಯರಾಮ್‌ರವರ ಭಾರ ಬೇರೆ, ನನ್ನ ಭಾರ ಬೇರೆ, ನಿಮ್ಮ ಭಾರ ಬೇರೆ.ಎಲ್ಲರದೂ 250 ರೂ.ಗಳ ಭಾರವೇ ಆಗುವುದಿಲ್ಲ. ಮಾನ್ಯ ಸದಸ್ಯರಾದ ಸಾಲೋಣಿಯವರು ಈಗ ಸದನದಲ್ಲಿಲ್ಲ. ಅವರು ಕೇವಲ 30 ಕೆ.ಜಿ. ಭಾರ ಮಾತ್ರ.

ಶ್ರೀ ಎನ್. ರಾಜಣ್ಣ : ಬಜೆಟ್ ಭಾಷಣದ ಪುಟ 74ರಲ್ಲಿ ಈ ಬಗ್ಗೆ ಡೀಟೈಲ್ ಆಗಿ ಕೊಟ್ಟಿದೆ. ಅದನ್ನು ಇಲ್ಲಿ ಹೇಳಲು ಹೊರಟರೆ ಅದಕ್ಕೆ ತುಂಬಾ ಸಮಯ ತಗಲುತ್ತದೆ. ಆದ್ದರಿಂದ ಅದನ್ನು ನಾನಿಲ್ಲಿ ಹೇಳುವುದಿಲ್ಲ.

ಅಧ್ಯಕ್ಷರು : ಆ ಬಗ್ಗೆ ನೀವು ಪರ್ಸನಲ್ಲಾಗಿ ಮಾನ್ಯ ಹಣಕಾಸಿನ ಸಚಿವರ ಹತ್ತಿರ ಚರ್ಚಿಸಿ, ಅವರಿಗೆ ಈ ದಿಸೆಯಲ್ಲಿ ಸೂಕ್ತ ಸಲಹೆ ಕೊಡಿ.

ಶ್ರೀ ಎನ್. ರಾಜಣ್ಣ : ಆಯಿತು, ಹಾಗೆಯೇ ಮಾಡುತ್ತೇನೆ. In the Indian Express the news appeared this; ``Tax cut on 156 items. The number of tax rates in the State has been reduced from 13% to 4% making it the lowest number in the country''. ಈ ದೇಶದಲ್ಲಿ ಇದು ಬೆಸ್ಟ್ ಬಜೆಟ್ ಎಂದು ಪತ್ರಿಕೆಗಳವರು ಹೊಗಳಿದ್ದಾರೆ. ಹೀಗಿರುವಾಗ ನಿನ್ನೆಯಿಂದ ನಾನಿಲ್ಲಿ ಬಜೆಟ್ ಮೇಲಿನ ಭಾಷಣಗಳನ್ನು ಕೇಳುತ್ತಿದ್ದೇನೆ, ಮಾನ್ಯ ಯಡಿಯೂರಪ್ಪನವರ ಭಾಷಣ ಇರಬಹುದು, ಶ್ರೀಮಾನ್ ಖರ್ಗೆಯವರು ಭಾಷಣ ಇರಬಹುದು ಅಥವಾ ಮತ್ತೊಬ್ಬರ ಭಾಷಣ ಇರಬಹುದು. ಬರೀ ಟೀಕೆ ಮಾಡುತ್ತಿದ್ದಾರೆ. You are doing your duty as Opposition Leaders.

ನಿಮ್ಮ ಪಾತ್ರವನ್ನು ನೀವು ಚೆನ್ನಾಗಿಯೇ ವಹಿಸುತ್ತಿದ್ದೀರಿ. ಆದರೆ ಕೆಲವು ಸಮಯ ನೀವು ಏನು ಮಾಡುತ್ತೀರಿ ಎಂದರೆ, ಮಾನ್ಯ ಯಡಿಯೂರಪ್ಪನವರು ಸ್ವಲ್ಪ ಜಾಸ್ತಿ ತಲೆ ಬಿಸಿ ಮಾಡಿಕೊಂಡು ಸ್ವಲ್ಪ ಹೆಚ್ಚಾಗಿ ಮಾತನಾಡುತ್ತಾರೆ. ಅದನ್ನು ಸ್ವಲ್ಪ ಸರಿಪಡಿಸಿಕೊಂಡರೆ ಚೆನ್ನಾಗಿರುತ್ತದೆ.

(ನಗು)

ಅಧ್ಯಕ್ಷರು : ಅವರು ಅವರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ ಅಲ್ಲವೇ?

ಶ್ರೀ ಎನ್. ರಾಜಣ್ಣ : ಹೌದು ಸಾರ್, ಅವರ ಪಾತ್ರ ಅವರು ಮಾಡುತ್ತಾರೆ. ಅವರ ಪಾತ್ರವನ್ನು ಅವರು ಚೆನ್ನಾಗಿಯೇ ನಿರ್ವಹಿಸುತ್ತಿದ್ದಾರೆ. ನಾವೂ ಕೂಡ ವಿರೋಧ ಪಕ್ಷದಲ್ಲಿದ್ದರೆ ಅದನ್ನೇ ಮಾಡುತ್ತಿದ್ದೆವು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಜಣ್ಣನವರ ಭಾಷಣಕ್ಕೆ ದಯವಿಟ್ಟು ಯಾರೂ ತೊಂದರೆ ಕೊಡಬಾರದು. ನೀವೆಲ್ಲಾ ಸುಮ್ಮನೆ ತೊಂದರೆ ಕೊಡುತ್ತಿದ್ದೀರಿ?

ಒಬ್ಬ ಮಾನ್ಯ ಸದಸ್ಯರು : ಅವರ ಭಾಷಣವನ್ನು ನಾವೆಲ್ಲರೂ ಬಹಳ ಆಸಕ್ತಿಯಿಂದಲೇ ಕೇಳುತ್ತಿದ್ದೇವೆ.

ಶ್ರೀ ಎನ್. ರಾಜಣ್ಣ : ಕಂಡಿಕೆ 34ರಲ್ಲಿ 'ನಿರ್ಮಲ ಕರ್ನಾಟಕ' ಬಗ್ಗೆ ಹೇಳಲಾಗಿದೆ. 'ಪ್ರಸಕ್ತ ವರ್ಷದಲ್ಲಿ ಗ್ರಾಮೀಣ ನೈರ್ಮಲ್ಯಕ್ಕೆ ಸಂಬಂಧಿಸಿದ' 'ನಿರ್ಮಲ ಕರ್ನಾಟಕ' ಎಂಬ ಬೃಹತ್ ಕಾರ್ಯಕ್ರಮವೊಂದನ್ನು 1995ರ ಅಕ್ಟೋಬರ್ 2ನೇ ದಿನಾಂಕದಂದು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದ ಅಡಿಯಲ್ಲಿ ಪ್ರಸಕ್ತ ವರ್ಷದ ಕೊನೆಯ ವೇಳೆಗೆ ಕೊನೇಪಕ್ಷ 1.5 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗುವುದು ಎಂದು ಕಂಡಿಕೆ 34ರಲ್ಲಿ ತಿಳಿಸಲಾಗಿದೆ. ಇದು ನಿಜಕ್ಕೂ ಸ್ವಾಗತಾರ್ಹವಾದ ಕಾರ್ಯಕ್ರಮವಾಗಿದೆ. ಈ ಯೋಜನೆಯಿಂದಾಗಿ ಮಾನ್ಯ ಮಹಾತ್ಮಗಾಂಧೀಜಿಯವರ ಕನಸು ನನಸಾಯಿತು ಎಂದು ಹೇಳಬಹುದು. ಅವರಿಗಿದ್ದ ಸಾವಿರಾರು ಕನಸುಗಳಲ್ಲಿ ಇದೂ ಒಂದಾಗಿತ್ತು. ಒಂದೊಂದು ಅವರ ಮಹತ್ತರವಾದ ಕನಸಾಗಿತ್ತು. ಇದನ್ನು ಇಂಗ್ಲೀಷಿನಲ್ಲಿ 'ಗಾಂಧಿಯನ್ ಎಕಾನಮಿ' ಎಂದು ಹೇಳುತ್ತಾರೆ. ನೀವೆಲ್ಲಾ ನನಗಿಂತ ಬುದ್ಧಿವಂತರು. ನಾನು ಹೇಳಿದ್ದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. 'ಗಾಂಧಿಯನ್ ಎಕಾನಮಿ' ಯನ್ನು ನಾವು ಇವತ್ತೇನಾದರೂ ಈ ದೇಶದಲ್ಲಿ ಕಾರ್ಯರೂಪಕ್ಕೆ ತಂದಿದ್ದರೆ ಎಷ್ಟು ಚೆನ್ನಾಗಿ ಇರುತ್ತಿತ್ತು. ಇವತ್ತು ನಾವು ಗೊಬ್ಬರಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇವತ್ತು ಒಂದು ಕೆ.ಜಿ. 17:17 ಅಥವಾ ಟಿ.ಎ.ಪಿ. ರಸಗೊಬ್ಬರದ ಬೆಲೆ 9-10 ರೂ.ಗಳಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮೊರಾರ್ಜಿಯವರು ಹೇಳಿದ್ದನ್ನೂ ಜಾರಿಗೆ ತಂದು ಬಿಟ್ಟರೆ, ಮೆಡಿಸನಗೆ ದುಡ್ಡು ಖರ್ಚು ಮಾಡುವುದೂ ಉಳಿದು ಬಿಡುತ್ತದೆ.

ಅಧ್ಯಕ್ಷರು : ಅದೂ ಕೂಡ ಒಳ್ಳೆಯದೇ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಇದೊಂದು ಒಳ್ಳೆಯ ಯೋಜನೆ. ನಿಜವಾ ಗಾಂಧಿ ಹೇಳಿದ ತತ್ವ ಏನೆಂದರೆ, ಎಕಾನಮಿ ಎಲ್ಲಿದೆ ಎಂದರೆ, 'ವೇಸ್ಟ್' ಸಾಯಿಲ್‌ಗೆ ಡೈರೆಕ್ಟಾ ಹೋಗಬೇಕೆಂದು ಅವರು ಹೇಳಿದ್ದರು. ಅದಕ್ಕೋಸ್ಕರ ಕುಮಾರಪ್ಪನ ಕಥೆಯಲ್ಲಿ ಇದ ಎಕ್ಸ್‌ಪ್ಲೈನ್ ಮಾಡಿದರು. ಅದನ್ನು ಇಲ್ಲಿ ಹೇಳುವುದಕ್ಕೆ ಹೋದರೆ ಬಹಳ ಟೈಮ್ ಆಗುತ್ತ

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ಕೆಲವನ್ನು ನೀವು ನಿಮ್ಮ ಪಾರ್ಟಿಯ ಹಿತದೃಷ್ಟಿಯಿಂ ಮಾನ್ಯ ಆರ್ಥಿಕ ಮಂತ್ರಿಗಳನ್ನು ಖುದ್ದಾಗಿ ಭೇಟಿ ಮಾಡಿ ಅವರಿಗೆ ಎಕ್ಸ್‌ಪ್ಲೈನ್ ಮಾಡಬೇ ಕೆಲವು ಸಾರ್ವಜನಿಕ ಹಿತದೃಷ್ಟಿಯಿಂದ ಇಲ್ಲೇ ಹೇಳಬೇಕು. ಎಲ್ಲಾ ಟಿಪ್ಸ ಇಲ್ಲೇ ಕೊಡಬಾರದ ಪಾರ್ಟಿ ಮೀಟಿಂಗ್‌ನಲ್ಲಿ ಅಥವಾ ಪ್ರೈವೇಟ್ ಆಗಿ ಅವರನ್ನು ಮೀಟ್ ಮಾಡಿ ಅವರಿಗೆ ನೀ ಗೈಡ್ ಮಾಡಬೇಕು.

ಶ್ರೀ ಎನ್. ರಾಜಣ್ಣ : ಹಾಗೇ ಆಗಲಿ ಸಾರ್. 'ಗಾಂಧಿಯನ್ ಎಕಾನಮಿ' ಎಂದ ಇವತ್ತು ಫರ್ಟಿಲೈಸರ್ ನಾವೇನು ಖರ್ಚು ಮಾಡುತ್ತಿದ್ದೇವೆ, ಅದಕ್ಕೆ ಬದಲಾಗಿ ಈ ವೇ ರೈತನಿಗೆ ಅಲ್ಲೇ ಅನುಕೂಲ ಆದರೆ, ಅವನು ಆ ವೇಸ್ಟನ್ನು ಡೈರೆಕ್ಟಾಗಿ ಅವನ ತೋಟ ಹೊಲಕ್ಕೆ ಉಪಯೋಗವಾಗುವ ತರಹ ಮಾಡಬೇಕು. ಊರುಗಳ ಹಳ್ಳಿ ಹಳ್ಳಿಗಳ ಮನೆಗಳಿರಬಹುದು. ಹಳ್ಳಿ ಮನೆಗೂ ನಾವು ಈ ಫೆಸಿಲಿಟೀಸ್ ಮಾಡಿ ಕೊಡುತ್ತೇವೆ, ಮ ಕೊಟ್ಟ ಮೇಲೆ, ನಾಲ್ಕೂ ಕಡೆ ಈ ಪೇಸ್ಟ್ ನಿಂತು, ಅದರಲ್ಲಿ ಆ ಪೇಸ್ಟಿಗೆ, ಇಫ್ ಪಾಸಿ ಹೇಗೂ ದನ ಕಟ್ಟಿರುತ್ತಾನೆ, ಸ್ವಲ್ಪ ಗಂಜಲ ಮತ್ತು ಸಗಣಿಯನ್ನೂ ಎರಡನ್ನೂ ಕಲಸಿ ಬಿ ಅದೇ ರೀತಿ ಹಳ್ಳಿಯ ನಾಲ್ಕೂ ಕಡೆ ಮಾಡಿದರೆ, ಹಳ್ಳಿಗಾಗುವಷ್ಟು, 'ಗೋಬರ್ ಗಾ ಸಿಗುತ್ತದೆ. ಇದರಿಂದಾಗಿ ಕನಿಷ್ಠ ಪಕ್ಷ ಶೇಕಡ 50ರಷ್ಟು ವಿದ್ಯುತ್ ಅನ್ನಾದರೂ ಉಳಿಸಬಹುದು.

ಅಧ್ಯಕ್ಷರು : ಹಾಗಾದರೆ ಹಳ್ಳಿಯ ಎಲ್ಲೆಡೆಗಳಲ್ಲೂ ವೇಸ್ಟ್ ಇರಬೇಕು ಅಂತೀ

ಶ್ರೀ ಎನ್. ರಾಜಣ್ಣ : ವೇಸ್ಟ್ ಪೈಪ್‌ನಲ್ಲಿ ಹೋಗಿ ನಾಲ್ಕೂ ಕಡೆ ಬೀಳಬೇಕು. ನಾ ಕಡೆ ಹೋಗಿ ಬಿದ್ದರೆ....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ನಗುವುದು ಒ ಕಡೆ ಇರಲಿ. ಮಾನ್ಯ ಸದಸ್ಯರು ಕೆಲವು ಪ್ರಾಮಾಣಿಕವಾದಂತಹ ವಿಚಾರವನ್ನು ಇಲ್ಲಿ ಪ್ರ ಮಾಡುತ್ತಿದ್ದಾರೆ. ಇದರಿಂದ ನನಗೆ ಬಹಳ ಸಂತೋಷವಾಗುತ್ತಿದೆ. 'ಗೋಬರ್ ಬಗೆಗಿನ ವಿಚಾರ ಬಹಳ ಮುಖ್ಯವಾದುದು. ಮಾನ್ಯ ಸದಸ್ಯರುಗಳು ಆಗಾಗ್ಗೆ ನಗುತ್ತಿರು ಬಗ್ಗೆ ಮಾನ್ಯ ರಾಜಣ್ಣನವರೇ ತಲೆ ಕೆಡಿಸಿಕೊಳ್ಳಬೇಡಿ.

ಶ್ರೀ ಎನ್. ರಾಜಣ್ಣ : ಅಯ್ಯೋ, ಜೀವನದಲ್ಲಿ ನಾನು ಎಲ್ಲಾ ನೋಡಿ ಬಿ

ಈಗ ಫೈನಲ್ಲಾಗಿ ರೆಸ್ಟಿಂಗ್ ಪ್ಲೇಸಗೆ ಹೋಗಬೇಕು ಅಷ್ಟೆ. ನನಗೆ 56 ವರ್ಷವಾಯಿತು. ಫೈನಲ್ ರೆಸ್ಟಿಂಗ್ ಪ್ಲೇಸ್ ಯಾವುದು ಎಂದರೆ ಕೊನೆಯದು.

ಅಧ್ಯಕ್ಷರು : ಅಲ್ರೀ ನೀವು 56 ವರ್ಷಕ್ಕೆ ರೆಸ್ಟಿಂಗ್ ಪ್ಲೇಸ್ ಅಂದರೆ, ನಿಮಗಿಂತ ಹೆಚ್ಚು ವಯಸ್ಸಾದವರು ಇಲ್ಲಿದ್ದಾರೆ, ಅವರ ಗತಿ ಏನು? ನಾಳೆಯಿಂದ ಅವರು ಇಲ್ಲಿಗೆ ಬರುವಂತೆಯೇ ಇಲ್ಲ ಎನ್ನಿ.

SRI N. RAJANNA : Bangalore is not a suitable place today. ಇಲ್ಲಿ ಕಂಡೀಷನ್ ಆ ರೀತಿ ಇದೆ. ನಿರ್ಮಲ ಕರ್ನಾಟಕ ಮಾಡುವಾಗ ಅಂಡರ್ ಗ್ರೌಂಡ್ ಡ್ರೈನೇಜ್ ಸಿಸ್ಟಮ್ ಅನ್ನು ಸ್ವಲ್ಪ ಎಚ್ಚರಿಕೆ ತೆಗೆದುಕೊಂಡು ಮಾಡಿದರೆ ಪ್ರತಿ ಹಳ್ಳಿಗೆ ಕನಿಷ್ಟ ಪಕ್ಷ ಶೇಕಡ 50ರಷ್ಟಾದರೂ ಅಡಿಗೆ ಮಾಡುವುದಕ್ಕೂ, ದೀಪಕ್ಕೆ ಬಳಸಲು ವಿದ್ಯುತ್ ದೊರೆಯುತ್ತದೆ. ಇದು ಒಂದು ಸಲಹೆ ಅಷ್ಟೆ. I will leave it to the members to think over it whether it is possible to do or not. ಇದನ್ನು ಉಪಯೋಗಿಸಿಲಿಕ್ಕೆ ಅವರಿಗೆ ಅನುಕೂಲವಾಗುತ್ತದೆಯೋ ಎಂಬುದನ್ನು ನಾನು ನಾಯಕರುಗಳಿಗೇ ಬಿಡುತ್ತೇನೆ.

ಅಧ್ಯಕ್ಷರು : ದಯವಿಟ್ಟು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿ. ಆಗಲೇ 10 ಗಂಟೆ 10 ನಿಮಿಷ ಆಗಿದೆ. ಇನ್ನೆರಡು ನಿಮಿಷಗಳಲ್ಲಿ ಮುಕ್ತಾಯಗೊಳಿಸಿ. ಮತ್ತೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎನ್. ರಾಜಣ್ಣ : ನಾನಿನ್ನೂ ಮಾತನಾಡುವುದು ಬೇಕಾದಷ್ಟಿದೆ. ಕಂಡಿಕೆ
ಬಿಡಿ ಹೂವು ಹರಾಜು ಕೇಂದ್ರ ಸ್ಥಾಪನೆ ಬಗ್ಗೆ ತಿಳಿಸಲಾಗಿದೆ. ಇದೊಂದು ನಿಜಕ್ಕೂ
ಘಟನೆ. We are really going to see the world map. ಇಲ್ಲಿಂದ ಹ
ನಾಳೆ ಆ ಹೂವು ವಾಷಿಂಗಟನ್‌ನಲ್ಲಿ ಅಮೆರಿಕಾದ ಪ್ರೆಸಿಡೆಂಟ್‌ಗೆ ಕೊಡ
ಸನ್ನಿವೇಶ ಉಂಟಾದರೆ ಅದರಿಂದ ನಮಗೆ ಬಹಳ ಕೀರ್ತಿ ಸಿಗುತ್ತದೆ. Th
job done by our Hon. Minister. ನಿಮ್ಮ ಸಹಕಾರದಿಂದ ಈ

ಅಧ್ಯಕ್ಷರು : ಆ ಬಗ್ಗೆ ಮಾನ್ಯ ಸಚಿವರು ಗುರುತು ಠ
ಪ್ಯಾರಾಕ್ಕೆ ಹೋಗಿ.

SRI N. RAJANNA : You are reachir
ಹೂವು ರಫ್ತು ಮಾಡುವುದರಿಂದ ನಮಗೆ ಎಷ್ಟು ವಿ
ರೈತರಿಗೆ ಎಷ್ಟು ಅನುಕೂಲವಾಗುತ್ತದೆ ಎಂಬುದ
ನಾನೀಗ ಹೇಳುತ್ತಿದ್ದೇನೆ. ಇನ್ನು ಬಿತ್ತನೆ ಬೀಜಗ
ಹಾಕಬೇಕಾದರೆ, ಅವನು ಬಡವ ಆದರೆ,
ಹೊಲಕ್ಕೆ ಹೋಗುತ್ತಾನೆ. ಕಾಗೆ 'ಕಾಕಾ'

ಹೋಗಿ ಸಂಜೆ ಕಾಗೆ ಗೂಡಿಗೆ ಹೋಗುವವರಗೂ ಉಳುತ್ತಾನ. ಆ ಕಾಗೆ ಗೂಡಿಗೆ ಹೋಗುವವರೆಗೂ ಉಳುತ್ತಿರುತ್ತಾನೆ. ಈಗೆಲ್ಲಾ ಸ್ವಲ್ಪ ಮಿಡ್ಲ್ ಕ್ಲಾಸ್‌ನವರು ಇರುತ್ತಾರೆ. ಬಡವನಾಗಿರುವವನು ಮಧ್ಯಾಹ್ನ ಒಂದಿಷ್ಟು ಹಿಟ್ಟು ತಿಂದು, ಒಂದು ಎಕರೆಯನ್ನು ರೆಡಿ ಮಾಡುತ್ತಾನೆ, ಒಂದು ತಿಂದು, ಒಂದು ಎಕರೆಯನ್ನು ರೆಡಿ ಮಾಡುತ್ತಾನೆ, ಒಂದು ದಿನವೋ, ಎರಡು ದಿನವೋ, ಒಂದು ವಾರವೋ ಅದಕ್ಕೆ ಅತ ತೆಗೆದುಕೊಳ್ಳುತ್ತಾನೆ. ಆ ಒಂದು ವಾರ ತೆಗೆದುಕೊಂಡು ಕಷ್ಟಪಟ್ಟು ಉತ್ತಿದ್ದಾಗ, ಆತ ಬಿತ್ತನೆ ಮಾಡುವ ಬೀಜ ಸರಿಯಿಲ್ಲ ಎಂದರೆ, ಅವನು ಹಾಕಿದ್ದು, ಮಾಡಿದ್ದು, ಫರ್ಟಿಲೈಸರ್, ಗೊಬ್ಬರ ಎಲ್ಲಾ ಹಾಳಾಗಿ ಎಷ್ಟು ಲಾಸ್ ಆಗುತ್ತದೆ? ನಕಲಿ ಬಿತ್ತನೆ ಬೀಜಗಳನ್ನು ಮಾರುವವರ ಬಗ್ಗೆ ಇನ್ನು ಮುಂದಾದರೂ ಮಾನ್ಯ ಕೃಷಿ ಸಚಿವರಾದ ಬೈರೇಗೌಡರು ಎಚ್ಚರಿಕೆ ವಹಿಸಿ, ನಕಲಿ ಬಿತ್ತನೆ ಬೀಜ ಮಾರುವವರನ್ನು ಕ್ರಿಮಿನಲ್ ಆಕ್ಟ ಅಡಿಯಲ್ಲಿ ಕೇಸ್ ಹಾಕಬೇಕು ಎಂದು ಕೋರುತ್ತೇನೆ.

ಅಧ್ಯಕ್ಷರು : ಬಿತ್ತನೆ ಬೀಜಗಳ ಬಗ್ಗೆ ಮಾನ್ಯ ಸಚಿವರು ಎಚ್ಚರ ವಹಿಸುತ್ತಾರೆ ಬಿಡಿ.

ಶ್ರೀ ಎನ್. ರಾಜಣ್ಣ : ಕಂಡಿಕೆ 44 ರಲ್ಲಿ, ಪಶು ಸಂಗೋಪನೆ ಇಲಾಖೆಯ ಬಗ್ಗೆ ಹೇಳಿದ್ದೀರಿ. ನೀವು ಈಗ ಹೇಳುತ್ತೀರಿ, 60 ಸಾವಿರ ಹಸುಗಳನ್ನು ಕೊಂಡುಕೊಂಡು ಬರಬೇಕೆಂದು ಹೇಳಿ, ಟೋಟಲ್ 66 ಕೋಟಿ ರೂ.ಗಳಲ್ಲಿ ಬಡ ಜನತೆಗೂ, ಎಸ್./ಎಸ್.ಟಿ. ಯವರಿಗೂ, ಮೈನಾರಿಟೀಸನವರಿಗೂ ಇವರಿಗೆಲ್ಲಾ ಅನುಕೂಲ ಆಗಬೇಕೆಂದು ಹೇಳಿದ್ದೀರಿ.

ಈ 60 ಸಾವಿರ ಹಸುಗಳನ್ನು ಯಾವ ಕ್ಯಾಟಲ್ ಶೆಡ್‌ನಿಂದ ನೀವು ಕೊಂಡುಕೊಂಡುಬರುತ್ತೀರಿ? ಒಂದು ವೇಳೆ ನೀವು ಚಿಂತಾಮಣಿಯಲ್ಲಿ ಹಾಲು ಕರೆಯುವ ಹಸುವನ್ನು ಕೊಂಡು ಕೊಂಡು ಬಂದು ಅದನ್ನು ಮೈಸೂರಿಗೆ ಬಿಟ್ಟರೆ ಅಲ್ಲಿ ಹಾಲು ಕಡಿಮೆಯಾಗುತ್ತದೆ. ಸಪೋಸ್ ಚೆನ್ನಾಗಿರುವುದನ್ನು ತೆಗೆದುಕೊಂಡು ಬಂದರೆ ಅವನೇನೋ ಸ್ವಲ್ಪ ಕಾಸನ್ನು ಮಾಡಿಕೊಳ್ಳಬಹುದು, ಇದರಿಂದ ಬಡವನಿಗೆ ಒಂದು ಹತ್ತು ಸಾವಿರ ರೂಪಾಯಿ ಸಿಗಬಹುದೇನೋ, ಅವನು ಕಸುಬು ಮಾಡುತ್ತಿರುವುದು ಜಾಸ್ತಿ ಇದ್ದರೇನೂ ಪರವಾಗಿಲ್ಲ, ಆದರೆ ಕಡಿಮೆ ಇದ್ದರೆ ಶೆಡ್ ಬದಲಾವಣೆ ಆಗುತ್ತದೆಯೇ ಹೊರತು ಹಾಲು ಜಾಸ್ತಿಯಾಗುವುದಿಲ್ಲ, ಆದಕಾರಣ ನೀವು ಎಲ್ಲಿಂದ 60 ಸಾವಿರ ಹಸುಗಳನ್ನು ಪರ್ಚೇಸ್ ಮಾಡುತ್ತೀರಿ ಎಂಬುದು ಬಹಳ ಮುಖ್ಯವಾಗಿರುವ ವಿಚಾರ. ಇದರ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ, 60 ಸಾವಿರ ಹಸುಗಳು ಎಂದರೆ ಒಂದು ಹಸು 10 ಲೀಟರ್ ಹಾಲು ಕರೆದರೂ ಒಟ್ಟು 6 ಲಕ್ಷ ಲೀಟರ್ ಹಾಳಾಗುತ್ತದೆ, ಇಲ್ಲಿ ಮುಖ್ಯವಾಗಿರುವ ವಿಚಾರ. ಇದರ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ, 60 ಸಾವಿರ ಹಸುಗಳು ಎಂದರೆ ಒಂದು ಹಸು 10 ಲೀಟರ್ ಹಾಲು ಕರೆದರೂ ಒಟ್ಟು 6 ಲಕ್ಷ ಲೀಟರ್ ಹಾಳಾಗುತ್ತದೆ, ಇಲ್ಲಿ ಮುಖ್ಯವಾದುದೆಂದರೆ ಈ ಹಾಲು ಕೋಲಾರದಲ್ಲಿ ಸಂಗ್ರಹಿಸುವುದು ಮೈಸೂರಿಗೆ ಹೋಗುತ್ತದೆ, ಮೈಸೂರಿನಲ್ಲಿ ಸಂಗ್ರಹವಾಗುವುದು ಗುಲ್ಬರ್ಗಾ ಜಿಲ್ಲೆಗೆ ಹೋಗುತ್ತದೆ, ಈ ರೀತಿ ಬದಲಾವಣೆಯಾಗುತ್ತದೆಯೇ ಹೊರತು ಇನ್ನೇನು ಆಗುವುದಿಲ್ಲವಾದ ಕಾರಣ ನೀವು ಯಾವ ಕ್ಯಾಟಲ್ ಶೆಡ್‌ನಿಂದ ಈ ಹಸುಗಳನ್ನು

ಕೊಂಡುಕೊಂಡು ಬರುತ್ತೀರಿ ಎಂಬುದು ಗೊತ್ತಾಗಬೇಕು.

ಅಧ್ಯಕ್ಷರು : ಈಗ ಸಾಕು. ಇನ್ನೂ ಉಳಿದುದನ್ನು ಮುಂದೆ ನೀವು ಮಾತನಾಡಿ.

ಶ್ರೀ ರಾಜಣ್ಣ : ಹೌದು, ಅಧ್ಯಕ್ಷರೇ ನಾನು ಈ ವಾಚ್ ಬಗ್ಗೆ ಹೇಳಿದ. You are a golden man born in KGF.

ಅಧ್ಯಕ್ಷರು : ನಮ್ಮದು ಶ್ರೀನಿವಾಸಪುರ, ಕೆ.ಜಿ.ಎಫ್. ಫ್ರೆಂಡ್ ನಿಮ್ಮ ರಾಜೇಂದ್ರ.

ಶ್ರೀ ಎನ್. ರಾಜಣ್ಣ : ಇಲ್ಲ ಸಾರ್, ಈಗ ನಮ್ಮ ಬ್ಲೆಡ್ ಮತ್ತು ನಿಮ್ಮ ಬ್ಲೆಡ್ ಟೆಸ್ಟ ಮಾಡಿದರೆ ಅದರಲ್ಲಿ ಸ್ವಲ್ಪ 000.1 ಪರ್ಸೆಂಟ್ ಆ ಗೋಲ್ಡ ಏನಿದೆ ಅದು ನಿಮ್ಮಲ್ಲಿರುತ್ತದೆ.

ಅಧ್ಯಕ್ಷರು : ನನಗ ಗೊತ್ತೇ ಇರಲಿಲ್ಲವಲ್ಲಪ್ಪಾ ಈ ಸತ್ಯ

ಶ್ರೀ ಎನ್. ರಾಜಣ್ಣ : ಮನುಷ್ಯ ಬರುವುದು ಭೂಮಿಯಿಂದಲೇ, ಅದರ ಬಗ್ಗೆ ಹೇಳುತ್ತಾ ಹೋದರೆ ಜಾಸ್ತಿಯಾಗುತ್ತದೆ.

ಅಧ್ಯಕ್ಷರು : ಈಗ ರಾಜಣ್ಣನವರೇ ನೋಡಿ, ಅಶ್ವಥನಾರಾಯಣ ರೆಡ್ಡಿಯವರಿಗೆ ಹಸಿವೆಯಾಗು ತ್ತಿದೆಯಂತೆ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಇನ್ನೊಂದು ಬಹಳ ಮುಖ್ಯವಾದ ಯೋಜನೆ 'ನಮ್ಮ ಮಗಳು ನಮ್ಮ ಶಕ್ತಿ' ಈ ಯೋಜನೆಯ ಉದ್ದೇಶ ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಇರುವ ತಾರತಮ್ಯ ಮನೋಭಾವವನ್ನು ನಿವಾರಿಸುವಲ್ಲಿ ಸರ್ಕಾರವು ನೆರವಾಗುವುದು. ನಾನು ಏಕೆ ಇದನ್ನು ಬಹಳ ಮುಖ್ಯವಾಗಿ ಹೇಳುತ್ತಿದ್ದೇನೆಂದರೆ ಕೆಲವರು ವಿರೋಧ ಪಕ್ಷದವರು, ಅವರಿಗೆ ಇಷ್ಟು ಮೊತ್ತ ಇದೆಯೇ, ಏನು ಲೆಕ್ಕ, ಯಾರಿಗೆ ಕೊಡುತ್ತಾರೆ, ಯಾರಿಗೆ ಬಿಡುತ್ತಾರೆ ಎಂದು ಮಾತನಾಡಿದರು. ಸ್ವಾಮಿ, 48 ವರ್ಷವಾಗಿದೆ, ನೀವೆಲ್ಲಾ ಹಳ್ಳಿಗಳ ಕಡೆಯಿಂದ ಬರುತ್ತೀರಿ, ನಾನೂ ಕೂಡ ಹಳ್ಳಿ ಮತ್ತು ಪೇಟೆ ಎರಡನ್ನೂ ನೋಡುತ್ತಿದ್ದೇನೆ, ಈ 48 ವರ್ಷದಲ್ಲಿ ಇವೊತ್ತಿಗೂ 30 ಪರ್ಸೆಂಟ್ ಇರತಕ್ಕಂಥ ಮಹಿಳೆಯರು ಆ ಅಕ್ಕತಂಗಿಯರು 48 ಪ್ಯಾಚ್ ಅನ್ನು ಜಾಯಿಂಟ್ ಮಾಡಿ ಹೊಲಿದುಕೊಂಡಿರುವುದನ್ನು ತೋರಿಸುತ್ತೇನೆ ಬನ್ನಿ, 48 ಪ್ಯಾಚ್ ಈ 48 ವರ್ಷದಲ್ಲಿ ಅಂದರೆ ಬಡವರು ಕಷ್ಟದಿಂದ ಆ ಸೀರೆಯನ್ನುಪ್ಯಾಚ್ ಹಾಕಿಕೊಂಡು, ಏನೋ ಬಡತನದಲ್ಲಿ ಮದುವೆಯಾಗುತ್ತಾರೆ, ಆ ಬಡ ಜನ್ಮ ಕೊಡುವ ತಾಯಿಗೆ ಎಷ್ಟು ನೋವಾಗುತ್ತದೆ, ಆ ಜನ್ಮ ಕೊಡುವ ತಾಯಿಗೆ ಗರ್ಭ ಧರಿಸಿದ 60 ದಿನದ ನಂತರ ನೋವು ಶುರುವಾಗುತ್ತದೆ.

ಅಧ್ಯಕ್ಷರು : ಅವರಿಗೆ ಡೆಲಿವರಿಯಾಗಿದೆ, ಆದ್ದರಿಂದ ಅವರಿಗೆ ನೋವಿನ ಬಗ್ಗೆ ಗೊತ್ತಿದೆ, ನಿಮಗೇನು ಗೊತ್ತಿದೆ

(ನಗು)

ಮಾನ್ಯ ಸದಸ್ಯರು : ಮಗು ಆಗಬೇಕಾದರೆ 260 ದಿನಗಳು.

ಶ್ರೀ ಎನ್. ರಾಜಣ್ಣ : ಮಗು ಜನ್ಮವಾಗಬೇಕಾದರೆ 280 ದಿನಗಳು ಆಗಬೇಕು. ಆದರೆ 60 ದಿನಗಳಾದ ಮೇಲೆಯೇ ಬಾಧೆ ಶುರುವಾಗುತ್ತದೆ. ಅದು ಏನು ಬಾಧೆಯೆಂದರೆ, ಹೆಣ್ಣು ಮಗು ಎಲ್ಲಿ ಹುಟ್ಟಿಬಿಡುತ್ತದೆಯೋ ಎಂಬ ಚಿಂತೆ ಮತ್ತು ನೋವು ಎರಡೂ ಶುರುವಾಗುತ್ತದೆ. ಜನ್ಮ ಕೊಡುವ ತಾಯಿಗೆ 280 ದಿನಗಳಾದ ಮೇಲೆ ಹುಟ್ಟುವ ಮಗುವಿನ ಬಗ್ಗೆ 60 ದಿನಗಳಲ್ಲಿಯೇ ಚಿಂತನೆ ಶುರುವಾಗುತ್ತದೆ, ನನಗೆ ಗಂಡು ಮಗುವಾಗುತ್ತದೆಯೋ, ಹೆಣ್ಣು ಮಗುವಾಗುತ್ತದೆಯೋ ಎಂಬ ಚಿಂತೆ ಆಗಲೇ ಶುರುವಾಗುತ್ತದೆ. ಮೇಡಮನವರೇ,

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಬಹಳ ಸಂತೋಷ, ಹೆಣ್ಣು ಮಕ್ಕಳ ಹೆರಿಗೆ ನೋವು ನಿಮಗೆ ಚೆನ್ನಾಗಿ ತಿಳಿದಿದೆ.

ಅಧ್ಯಕ್ಷರು : ಅಲ್ಲ ಅವರಿಗೆ ಸ್ವತಃ ಡೆಲಿವರಿಯಾಗಿದೆ, ಎಲ್ಲಿದ್ದೀರೀ ನೀವು.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳತಕ್ಕಂಥದ್ದರಲ್ಲಿ ಅರ್ಥವಿದೆ. ಈಗ ಅದು ಎಷ್ಟೋ ಜನಕ್ಕೆ ಅದು ಆಗುತ್ತಿಲ್ಲ. ಆದ್ದರಿಂದ ರಾಜಣ್ಣನವರನ್ನು ಎಲ್ಲರೂ ಕೂಡ ಹಾಸ್ಯವಾಗಿ ತೆಗೆದುಕೊಳ್ಳುವುದು ಬೇಡ.

ಅಧ್ಯಕ್ಷರು : ಇಲ್ಲ, ಇಲ್ಲ, ಇದು ಗಂಭೀರವಾದ ವಿಚಾರ. ಆ ಕನಸರ್ನ್ ಇದೆಯಲ್ಲಾ ಅದನ್ನು we admire. That concern which he has for the poor people, we admire. ರಾಜಣ್ಣನವರೇ, ಈಗ ಬಹಳ ಕಡಿಮೆ ಜನ ಸದಸ್ಯರು ಇದ್ದಾರೆ, ಆದರೆ ನೀವು ಬಹಳ ಮುಖ್ಯವಾದ ವಿಚಾರ ಪ್ರಸ್ತಾಪ ಮಾಡುತ್ತಿದ್ದೀರಿ, ಆದ್ದರಿಂದ ಎಲ್ಲಾ ಸದಸ್ಯರು ಇದ್ದಾಗ ಇದನ್ನು ಹೇಳಿದರೆ ಅವರಿಗೂ ಈ ವಿಚಾರವನ್ನು ತಿಳಿಸಿದ ರೀತಿಯಲ್ಲಿರುತ್ತದೆ. ಇಲ್ಲದಿದ್ದರೆ ಅವರು ನಾಳೆ ಬಂದು ನನ್ನ ಮೇಲೆ ಗಲಾಟೆ ಮಾಡುತ್ತಾರೆ, ನೋಡಿ ನೀವು ನಾವೆಲ್ಲಾ ಇಲ್ಲದಿದ್ದಾಗ ರಾಜಣ್ಣನವರಿಗೆ ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಎನ್ನುತ್ತಾರೆ, ಆದ್ದರಿಂದ ನೀವು ದಯಮಾಡಿ ಅವರೆಲ್ಲಾ ಇದ್ದಾಗ ನೀವು ಮಾತನಾಡಿ.

ಶ್ರೀ ಎನ್. ರಾಜಣ್ಣ : ಸಾರ್, ಎಂಥಹ ಒಳ್ಳೆಯ ಕೆಲಸವನ್ನು ಸರ್ಕಾರ ಮಾಡಿದೆ ನೋಡಿ. ಇವೊತ್ತು 5 ಸಾವಿರ ರೂ.ಗಳನ್ನು ಡೆಫಾಸಿಟ್ ಇಟ್ಟರೆ ಆ ಹೆಣ್ಣು ಮಗುವಿಗೆ 21 ವರ್ಷವಾದಾಗ 20 ಸಾವಿರ ರೂ.ಗಳೂ ಆಗುತ್ತದೆ. ಆ 20 ಸಾವಿರ ರೂ.ಗಳನ್ನು ಆ ಬಡ ತಾಯಿ ಉಪಯೋಗಿಸಿ ಆ ಹೆಣ್ಣು ಮಗುವಿಗೆ ಸಂತೋಷದಿಂದ ಮದುವೆ ಮಾಡಬಹುದು. ಆ ಕಟ್ಟಿಕೊಂಡಂಥ ಬಡಪಾಯಿಗೂ ಅನುಕೂಲವಾಗುತ್ತದೆ. ಇದು ಒಳ್ಳೆಯ ಕಾರ್ಯಕ್ರಮವಲ್ಲವೇ?

ಅಧ್ಯಕ್ಷರು : ರಾಜಣ್ಣನವರೇ, ಇನ್ನೊಂದು ದಿವಸ ಮುಖ್ಯಮಂತ್ರಿಗಳಾದಿಯಾಗಿ, ಎಲ್ಲರೂ ಸಭೆಯಲ್ಲಿ ಪೂರ್ಣ ತುಂಬಿದ್ದಾಗ ನಿಮಗೆ ಅವಕಾಶವನ್ನು ಕೊಡುತ್ತೇನೆ. ಬಹಳ ವಿಚಾರಗಳು ನೀವು ಹೇಳುವುದು ಇವೆ, ಆ ದಿವಸ ಮಾತನಾಡಿ. ಇವೊತ್ತು ಇಲ್ಲಿಗೇ ಮುಗಿಸಿ.

ಶ್ರೀ ಎನ್. ರಾಜಣ್ಣ : ಓ.ಕೆ. ಸಾರ್. ಬೆಂಗಳೂರು ಬಗ್ಗೆ ಮಾತನಾಡುವುದಕ್ಕೆ ನೀವು ನನಗೆ ಅವಕಾಶ ಕೊಡಲೇಬೇಕು. ಏಕೆಂದರೆ ಇದನ್ನು ನಾಲ್ಕು ತಿಂಗಳಿಂದ ನಾನು ಸ್ಟಡೀ ಮಾಡಿ, ಮಾತನಾಡಬೇಕೆಂದು ಹಲವಾರು ವಿಷಯಗಳನ್ನು ಗುರುತು ಹಾಕಿ ಕೊಂಡಿದ್ದೇನೆ.

ಅಧ್ಯಕ್ಷರು : ಅಲ್ಲ, ಈಗ ನೀವು ಸಿಟಿಗೆ ಬಂದಿದ್ದೀರಿ, ಸಿಟಿಯಿಂದ ವಿಧಾನಸೌಧಕ್ಕೆ ಬಂದುಬಿಡಿ.

ಶ್ರೀ ಎನ್. ರಾಜಣ್ಣ : ಸಾರ್, ಇಡೀ ನಗರ ವಿಧಾನಸೌಧದ ಸುತ್ತಮುತ್ತ ಹೇಗೆ ವಾತಾವರಣ ಇದೆ ಅದೇ ರೀತಿಯಲ್ಲಿ ಇದ್ದುಬಿಟ್ಟಿದ್ದರೆ ನಮಗೇನೂ ತೊಂದರೆಯಾಗುತ್ತಿರಲಿಲ್ಲ. ವಿಧಾನ ಸೌಧದಿಂದ ಮೂರು ಕಿ.ಮೀ. ಬಿಟ್ಟು ಆಚೆ ಹೋದರೆ, it is not a city; it is not a garden city; it is not a pensioners' paradise. ಆದರೆ ಇವೊತ್ತು ಏನಾಗಿದೆಯೆಂದರೆ 'ಬೆಂಗಳೂರು ನಗರ ದಿಕ್ಕು ತಪ್ಪಿಬೆಳೆದು ನಿಂತಿರುವ ಹುಚ್ಚು ಬೆಳವಣಿಗೆಯ ನಗರವಾಗಿದೆ. Except a few pockets, the city has become a toilet city. The Britishers ruled the city for three hundred years. 1972-73 ವರೆಗೂ ಶುದ್ಧವಾಗಿತ್ತು, ಆಮೇಲೇನಾಯಿತು, ನೀವು ಬನ್ನಿ ಜಾಗ ಕೊಡುತ್ತೇವೆ, ನೀವೂ ಬನ್ನಿ ನೀರು ಕೊಡುತ್ತೇವೆ, ನೀವು ಬನ್ನಿ ಪವರ್ ಕೊಡುತ್ತೇವೆ ಎಂದು ಕೊಟ್ಟೂ ಕೊಟ್ಟೂ 1974ರಲ್ಲಿ 16.64 ಜನಸಂಖ್ಯೆ ಇದ್ದುದ್ದು ಇವೊತ್ತು ನೋಟಿಫೈಡ್ ಏರಿಯಾಗಳದ್ದನ್ನು ಸೇರಿಸಿದರೆ 80 ಲಕ್ಷದಿಂದ 1 ಕೋಟಿ ಬರುತ್ತಿದೆ. Are we in a position to maintain this city? ಯಾವ ಸರ್ಕಾರ ಬಂದರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದಕಾರಣ ಅದರ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕಾಗಿದೆ, ಏಕೆಂದರೆ ಇದೊಂದು ಹುಚ್ಚು ಬೆಳವಣಿಗೆಯ ನಗರವಾಗಿಬಿಟ್ಟಿದೆ. ಇದು ದಿಕ್ಕು ತಪ್ಪಿ ಬೆಳೆದು ನಿಂತುಬಿಟ್ಟಿದೆ. ಇದನ್ನು ಸರಿಪಡಿಸಬೇಕಾದರೆ ನಮ್ಮ ನಿಮ್ಮೆಲ್ಲರ ಸಹಕಾರ ಇದ್ದರೆ ಮಾತ್ರ ಸಾಧ್ಯವಾಗುತ್ತದೆಯೇ ಹೊರತು ಇದು ರಾಜಣ್ಣನೊಬ್ಬರಿಂದಲೋ ಅಥವಾ ಸಿದ್ಧರಾಮಯ್ಯ ನವರೊಬ್ಬರಿಂದಲೋ ಅಥವಾ ಮುಖ್ಯಮಂತ್ರಿಯವರೊಬ್ಬರಿಂದಲೋ ಇದನ್ನು ಪರಿಹರಿಸುವುದಕ್ಕೆ ಆಗುವುದೇ ಇಲ್ಲ. ನಾನು ನಿಮ್ಮನ್ನು ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಇಂಟೀರಿಯರ್ ಸಿಟಿಗೆ ಬಂದು ನೋಡಿ, ಅಲ್ಲೇನಾಗಿದೆಯೆಂದು ತಿಳಿಯುತ್ತದೆ. ಸ್ವಾಮಿ, ಬೆಳಿಗ್ಗೆ ನಾನು ಎದ್ದರೆ ನನಗೆ ಬರುವ ದೂರೇನು ಗೊತ್ತೇ?

ಅಧ್ಯಕ್ಷರು : ಈಗ ಇಂಟೀರಿಯರ್ ಸಿಟಿಗೆ ಹೋಗೋಣ.

ಶ್ರೀ ಎನ್. ರಾಜಣ್ಣ : ಇಲ್ಲಿ ಸಿಟಿಯಲ್ಲೇನಾಗಿದೆಯೆಂದರೆ 'ರೋಟಿ ಹೈ, ಕಪಡಾ ಹೈ, ಖಾನ್ ಹೈ, ಗರ್ ನಯ್, ಮಖಾನ್ ನಯ್,' ಹೋದವಾರ ರಾತ್ರಿ 11 ಗಂಟೆಯಲ್ಲಿ ಸುಮಾರು ಎಂಟು ಹತ್ತು ಜನ ಮಹಿಳೆಯರು ನನ್ನ ಮನೆಗೆ ಬಂದಿದ್ದರು. ಇಲ್ಲಿ ಪ್ರಾಬ್ಲಮ್ ಏನಾಗಿದೆಯೆಂದರೆ ಇಡೀ ನಗರದಲ್ಲಿ ಫ್ಲಾಟುಗಳ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಈ

ಅಂಡರ್ ಗ್ರೌಂಡ್ ಡ್ರೈನೇಜ್ ಸಿಸ್ಟಂ..

ಅಧ್ಯಕ್ಷರು : ಈಗ ಕ್ಲೋಸ್ ಮಾಡೋಣ, ಇನ್ನೊಂದು ದಿವಸ ಮಾತನಾಡುವಿರಂತೆ. ಇನ್ನೊಂದು ದಿವಸ ಪೂರ್ಣ ಸಭೆಯಲ್ಲಿ ಮಾತನಾಡುವಿರಂತೆ.

ಶ್ರೀ ಎನ್. ರಾಜಣ್ಣ : ಓಕೆ ಸಾರ್. ಏನೇ ಆಗಲೀ ಈ ಸಿಟಿಯನ್ನು ಉಳಿಸಬೇಕಾಗಿರುವುದು ನಿಮ್ಮ ನಮ್ಮೆಲ್ಲರ ಕರ್ತವ್ಯ. ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಈ ನಗರ ಬಹಳ ಕುಲಗೆಟ್ಟಿದೆ. ನಗರವನ್ನು ತಮ್ಮೆಲ್ಲರ ಸಹಕಾರದಿಂದ ಮಾತ್ರ ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿರುವ ಮಧ್ಯಮ ವರ್ಗದವರು ಮತ್ತು ಬಡವರು ಬಹಳ ನೋವಿನಿಂದ ನರಳುತ್ತಿದ್ದಾರೆ. ಸಮಸ್ಯೆಗಳು ದಿನೇದಿನೇ ಹೆಚ್ಚುತ್ತಿವೆ. ಆದ್ದರಿಂದ ನಾನು ಈ ಸಭೆಯಲ್ಲಿರುವ ಮಾನ್ಯ ರೋಷನ್ ಬೇಗರವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. I request him stop multistoreyed buildings and flats. These owners who are coming from outside to make money are spoiling the city. ಈ ಬಿಲ್ಡರ್ಸ್ ಯಾರು ಇದ್ದಾರೆ ಇವರು ಇಡೀ ನಗರದಾದ್ಯಂತ ಒಂದು ಮನೆಯಲ್ಲಿ, ಒಂದು ಸಂಸಾರ ಇದ್ದಂಥ ಜಾಗದಲ್ಲಿ 20 ಸಂಸಾರ, ಒಂದು ಸಂಸಾರ ಇದ್ದಾಗ ಸುಮಾರು 30 ರಿಂದ 40 ಮರಗಳು ಬೇರೆ ಜಾಗಗಳಲ್ಲಿ ಇರುತ್ತಿತ್ತು. ಸುಮಾರು ಈಗ 10 ವರ್ಷದಿಂದ ಈ ಬಿಲ್ಡರ್ಸ್ 50 ರಿಂದ 60 ಸಾವಿರ ಮರಗಳನ್ನು ಕಡಿದಿದ್ದಾರೆ. ಇವೊತ್ತು ಮನೆಗಳು ಜಾಸ್ತಿಯಾಗಿ ಬಹಳ ಇಕ್ಕಟ್ಟಿನ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನಗರವನ್ನು ಉಳಿಸಬೇಕಾಗಿರುವುದು ನಿಮ್ಮ ನಮ್ಮೆಲ್ಲರ ಕರ್ತವ್ಯ. ಆದುದರಿಂದ ಎಲ್ಲರ ಸಹಕಾರದಿಂದ ಈ ಬಿಲ್ಡರ್ಸ್‌ನ್ನು ಆಚೆ ಕಳುಹಿಸಬೇಕಾಗಿದೆ. ನಾನು ಇನ್ನೂ ಬಹಳ ಮಾತನಾಡುವುದಿತ್ತು. I am thankful to you Sir, and all the members who have suggested my name to speak.

ಪ್ರಕಟಣೆ

ಅಧ್ಯಕ್ಷರು : ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 120 ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 7ನೇ ಮಾರ್ಚ 1996 ರಂದು ಪುನರ್ ಪರಿಶೀಲನೆಗೆ ತೆಗೆದುಕೊಂಡು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ 1996ನ್ನು ಯಾವುದೇ ತಿದ್ದುಪಡಿ ಇಲ್ಲದೇ ಅನುಮೋದಿಸಿತೆಂದು ಈ ಮೂಲಕ ತಿಳಿಯ ಪಡಿಸುತ್ತಿದ್ದೇನೆ.

ಈ ದಿವಸ ನನ್ನ ಕಳೆದ 14 ತಿಂಗಳ ಅವಧಿಯಲ್ಲಿ ಬಹಳ ಸುದಿನ. ಸದನ ಕಲಾಪದ ಸಮಿತಿ ನಿರ್ಣಯಿಸಿದ್ದು ಬಜೆಟ್ ಮೇಲಿನ ಸಾಮಾನ್ಯ ಚರ್ಚೆಗೆ 840 ನಿಮಿಷಗಳ ಕಾಲಾವಧಿ. ನಾವು ಸುಮಾರು 920 ನಿಮಿಷಗಳ ಕಾಲ ಚರ್ಚೆ ಮಾಡಿದ್ದೇವೆ. ಇದರಲ್ಲಿ 22 ಜನ